ದೀಪಾವಳಿ

★

ಅಕ್ಟೋಬರ್ ೧೯೪೯ ೧ ರೂಪಾಯಿ

ಭಿಕುಸಾ ಫಿಸ್ಟ್ ಸಿನ್ನರ ಬೀಡಿ

ಮೃ ಬೀಡಿ ಮಧುರ ಪ್ಪ

ರಜಿಸ್ಟರ್.

ರುಚಿಕರವಾಗಿರುತ್ತ

ನಂ. ೨೪.

ಸಕಲೀ ಬೀಡಿಗೆ ಮೋಸಹೋಗಬೇಡಿರಿ

ಭಿಕುಸಾ ಯಮಸಾ ಕ್ಷತ್ರಿಯ

ಪೋಸ್ಟ: ಸಿನ್ನರ ಟಿಲ್ಲಾ. ನಾಸಿಕ.

ಉಂಡ ಅನ್ನ ಹೊಟ್ಟಿಗೆ ಹತ್ತಬೇಕಿದ್ದರೆ

ಸಿನ್ನರ ಬೀಡಿಯನ್ನೇ ಸೇದಿರಿ

ಶುದ್ಧ 'ಅಕೋಳಿ' ತಂಬಾಕಿನಿಂದ ತಯಾರಿಸಲಾದ ಸಿನ್ನರ ಬೀಡಿಯು
ಆನಂದದ ಜೊತೆಗೆ ನಿಮ್ಮ ಆರೋಗ್ಯವನ್ನೂ ಕಾಯುವದು.

ಒಮ್ಮೆ ಸೇದಿದರೆ ನೀವು ಎಂದಿಗೂ ಬಿಡುವದಿಲ್ಲ.

ಈ ಸಲದ ದೀಪಾವಳಿಯು ನಮ್ಮ ಗ್ರಾಹಕರಿಗೆ

ಲಾಭ ಶುಭದಾಯಕವಾಗಲಿ ಎಂ.

ಧಾರವಾಡದ ಎಜೆಂಟರು— ಜಿ. ಆರ್. ಪುರಕಡ್ಲಿ ಅ್ಯಂಡ್ ಕಂ. ಮಾರ್ಕೆಟ್.

ಬ್ಯಾಂಚ್ ಡೆಪೊ—ಮಾರುತಿಗಲ್ಲಿ, ಬೆಳಗಾಂವಿ.

ಅವರು ನಮ್ಮನ್ನೇ ನೋಡುತ್ತಿರ-ಬಹುದಲ್ಲವೆ?

ನೋಡಿರಿ, ಕರ್ತವ್ಯಬದ್ಧರೂ, ಚತುರರೂ, ಗುಣವಂತರೂ, ಕೀರ್ತಿ-ಮಾನ ಪಡೆದವರೂ ಆದ ನಮ್ಮ ಹಿರಿಯ ಮುಂದಾಳುಗಳು ಇವರು. ಸ್ವಾತಂತ್ರ್ಯ ಸಿಕ್ಕನಂತರ ನಾವು ನಮ್ಮ ರಾಷ್ಟ್ರದ ವ್ಯವಹಾರವನ್ನು ಹೇಗೆ ನಡೆಸುವೆವು, ಅನ್ನ-ಧಾನ್ಯದ ಪ್ರಶ್ನೆಯನ್ನು ಹೇಗೆ ಬಿಡಿಸುವೆವು ಎಂಬುದರ ಮೇಲೆ ಬಹುಶಃ ಕಣ್ಣಿಡಬಹುದು.

ನಾವೇ ನಮಗೆ ಬೇಕಾದಷ್ಟು ಕಾಳುಕಡಿಗಳನ್ನು ಬೆಳೆಸಿಕೊಂಡರೆ, ನಾವು ದುಡಿದು ಗಳಿಸಿದ ಹಣವನ್ನು ಪರದೇಶದವರ ಕೈಯಲ್ಲಿ ಹಾಕದೆ ಅದರಿಂದ ನಮ್ಮ ಸುಖಸಂಪತ್ತನ್ನು ಹೆಚ್ಚಿಸಿಕೊಳ್ಳುವೆವು. ಹೀಗೆ ಹೆಚ್ಚಿಸುವದಕ್ಕಾಗಿ ನಮ್ಮ ಮುಂದಾಳುಗಳು ವಿಶ್ವಪ್ರಯತ್ನ ಮಾಡಹತ್ತಿದ್ದಾರೆ. ಈ ಮಹತ್ವದ ಸಾಹಸದಲ್ಲಿ ನಾವೂ ನಮ್ಮ ಪಾಲನ್ನು ವಹಿಸಿಕೊಳ್ಳಬೇಕು. ಇತರರನ್ನೂ ತಮ್ಮ ಪಾಲನ್ನು ವಹಿಸಿಕೊಳ್ಳಲು ಒಲಿಸಬೇಕು. ಆಂದರೆಯೇ ನಮ್ಮ ಮಕ್ಕಳು-ಮರಿಯ ಕಲ್ಯಾಣವಾಗುವದು. ನಮ್ಮ ಹಿರಿಯರಿಗೆ ಕೊಡಬೇಕಾದ ಋಣದಿಂದ ಮುಕ್ತರಾಗುವ ಶ್ರೇಯವು ನಮಗೆ ಸಿಗುವದು.

ಆದರೂ ಬೆಳೆ ಬರುವತನಕ ನಮಗೆ ಸಿಗುತ್ತಿರುವ ಅನ್ನ ಆಹಾರವು ನಮಗೆ ಎಷ್ಟು ಹೆಚ್ಚಾಗಿ ಕಸುವು ಕೊಟ್ಟೀತು ಎಂಬುದರ ವಿಚಾರಮಾಡಿ ಅದರ ಉಪಯೋಗಮಾಡಿಕೊಳ್ಳುವದು ನಮ್ಮ ಧರ್ಮ.

ಕರ್ತವ್ಯಬುದ್ಧಿಯಿಂದ ಶಾಸ್ತ್ರಶುದ್ಧ ಆಹಾರದ ಉಪಯೋಗವು ಜನರಿಗೆ ತಿಳಿಯಬೇಕೆಂದು **ಬಿ. ತಾಂಬೆ ಲಿಮಿಟೆಡ್**ದ ಚಾಲಕರು, ಹೋದ ೩೩ ವರ್ಷ ಪ್ರಚಾರ ನಡೆಸಿದ್ದಾರೆ. ಅವರ ಮುಂಬಯಿಯಲ್ಲಿಯ ಪ್ರಖ್ಯಾತ ಲೊಟೋರಜಾರಿನ ಮನೆಗಳು, ಎರಡು ವರ್ಷದ ಹಿಂದೆ ಹೊರಡಿಸಿದ "**ಆಹಾರ**" ಮಾಸಿಕ, ಜನರಿಗೆ ಕಲಿಸುವದಕ್ಕಾಗಿ ಹೋಗ ವರ್ಷ ಸ್ಥಾಪಿಸಿದ "**ಭಾರತೀಯ ಪಾಕಶಾಸ್ತ್ರ ವಿದ್ಯಾಲಯ**" ಇವೆಲ್ಲ ತಾಂಬೆಯವರ ಕರ್ತವ್ಯ ಬುದ್ಧಿಯ ಮುಖ್ಯ ಧ್ಯೇಯ-ವಾದೀ ವ್ಯವಹಾರದ ಪ್ರತ್ಯಕ್ಷ ಲಕ್ಷಣಗಳು.

ಬಿ. ತಾಂಬೆ ಲಿಮಿಟೆಡ್, ಹೆಡ್ ಆಫೀಸ್—೧೭೧, ಗಿರಗಾವ ರೋಡ್, ಮುಂಬಯಿ.
ಫೋನ್ ನಂ. ೫೦೬೮೭.

ಶಾಖೆಗಳು:—**ಹನುಮಾನ್ ಸ್ಟ್ರೀಟ್, ಫೋರ್ಟ್ ೨, ಠಾಕುರ ದ್ವಾರ್ ೩,**
ಸಾಂಜಗಿರಿ ಸದನ—ಕೋನಾ ರೆಸ್ಟೊರಾಂ.

(೨೬ನೆಯ ಪುಟದಿಂದ)

೬೮. **ತುಂಡು ಹೊಲಗಳ ಸಂಯೋಜನೆ** (ಪರಿಚಯಾತ್ಮಕ). ಇದನ್ನು ಬರೆದವರು ಶ್ರೀ. ಕೆ. ಎಫ್. ಪಾಟೀಲ ಅವರು. ಬ್ಯಾಡಗಿ ಸೇವಾ ಕುಸುಮಮಾಲೆಯ ೭ನೆಯ ಗ್ರಂಥ. ಕ್ರೌ. ಅ. ೯೬ ಪುಟಗಳು. ಬೆಲೆ ೧–೦–೦.

೬೯. **ನಮ್ಮ ಒಕ್ಕಲಿಗ** (ಸಚಿತ್ರ ಪರಿಚಯಾತ್ಮಕ ಗ್ರಂಥ). ಮೂಲ ಇಂಗ್ಲಿಷ್ ಲೇಖಕರು ಶ್ರೀ. ಬಿ. ಎಸ್. ಜಯಪ್ಪನವರ್ ಅನುವಾದಕರು ಶ್ರೀ. ಕೆ. ಎಫ್. ಪಾಟೀಲರೀ. ಬ್ಯಾಡಗಿ ಸೇವಾ ಕುಸುಮಮಾಲೆಯ ೮ನೆಯ ಗ್ರಂಥ. ಕ್ರೌ. ಅ. ೧೭೬ ಪುಟಗಳು. ಬೆಲೆ ೧–೪–೦.

೭೦. **ಚೆಂದುಟಿಯ ಮುತ್ತು** (ಕತೆಗಳ ಸಂಕಲನ) ಲೇಖಕರು ಶ್ರೀ. ವಿ. ಚ. ಹಿತ್ತಲಮನಿ ಬಿ. ಎಸ್. ಸಿ. (ಆಗ್ರಿ) ಅನರ್ಸ್. ಶಿರಸಿಯ ಶರಾವತೀ ಪ್ರಕಟನ ಮಂದಿರದ ೧೦ನೆಯ ಕುಸುಮ. ಕ್ರೌ. ಅ. ೧೧೨ ಪುಟಗಳು. ಬೆಲೆ ೨–೦–೦.

೭೧. **ಹರಿದ ಸೆರಗು** (ಕತೆಗಳ ಸಂಕಲನ) ಲೇಖಕರು ಶ್ರೀ. ವಿ. ತಿ. ಶೀಗೆಹಳ್ಳಿ, ಶಿರಸಿ. ಮೇಲಿನ ಶರಾವತೀ ಗ್ರಂಥಪ್ರಕಟನ ಮಂದಿರದ ೨ನೆಯ ಕುಸುಮ. ಕ್ರೌ. ಅ. ೯೫ ಪುಟಗಳು. ಬೆಲೆ ೧–೮–೦.

೭೨. **ನನ್ನ ಸ್ವಾಮಿ** (ಕಥೆಗಳ ಸಂಕಲನ) ಶ್ರೀ. ವಿ. ಚ. ಹಿತ್ತಲಮನಿಯವರು ಲೇಖಕರು. ಇದು ಶರಾವತಿ ಗ್ರಂಥಪ್ರಕಟನ ಮಂದಿರದ ೩ನೆಯ ಕುಸುಮ. ಕ್ರೌ. ಅ. ೧೨೨ ಪುಟಗಳು. ಬೆಲೆ ೧–೧೨–೦.

೭೩. **ಭಾಸ್ಕರ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಮಿರ್ಜ ಅಣ್ಣಾರಾಯರು, ಸೇಡಬಾಳ ಮೈಸೂರಿನ ಉಷಾ ಸಾಹಿತ್ಯಮಾಲೆಯ ೧೮ನೆಯ ಕುಸುಮ. ಕ್ರೌ. ಅ. ೧೪೨ ಪುಟಗಳು. ಬೆಲೆ ೧–೮–೦.

೭೪. **ಜನಮತ** (ಹೊಸ ಮಾಸಪತ್ರಿಕೆಯ ೧ನೆಯ ಸಂಚಿಕೆ). ಸಂಪಾದಕರು 'ಹಾಸ್ಯಗಾರ'. ಪ್ರಕಾಶಕರು ಶ್ರೀ. ಎಚ್. ಬಿ. ನವಲೂರ, ಹಿಂದೂ ಮಾತಾ ಪ್ರಿಂಟಿಂಗ್ ಪ್ರೆಸ್ ಧಾರವಾಡ. ಡೆ. ಅ. ಸುಮಾರು ೬೪ ಪುಟಗಳು. ವಾ. ಚಂ. ೧–೪–೦. ಬಿಡಿಸಂಚಿಕೆಗೆ ೦–೩–೦.

೭೫. **ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ** ಒಂಬತ್ತನೆಯ ವರ್ಷದ ವರದಿ.

ಕಾರ್ಯದರ್ಶಿಗಳು ಶ್ರೀ. ವರದರಾಜ ಅಯ್ಯರವರು. ನವಸಾರಿ ಬಿಲ್ಡಿಂಗ್, ಹಾರ್ನ್‌ಬಿ ರೋಡು, ಮುಂಬಯಿ. ಡೆ. ೫೧ ಪುಟಗಳು.

Vicanwo Touch gives Quality and Purity

ಕೆಲವು ಶುದ್ಧ ಮತ್ತು ಸುಪ್ರಸಿದ್ಧ "ವಿಕೆನ್ವೊ" ತಯಾರಿಕೆಗಳು.

— ನರಗಳ ದುರ್ಬಲತೆ ಮತ್ತು ಅಶಕ್ತತೆಗಳಿಗಾಗಿ —

- **ಫ್ರುಟೋ ವಿಸುಕಾಲ್**—೨೮ ವಿವಿಧ ತಾಜಾ ಹಣ್ಣುಗಳಿಂದಲೂ ಮತ್ತು ಐದುತರದ ವಿಟಾಮಿನುಗಳಿಂದಲೂ ಕೂಡಿದ ಅತ್ಯುತ್ತಮ ಟಾನಿಕು. ಇದು ವಿಷಮಜ್ವರ ಬೆಳಿಜಡಾದಿಗಳಿಗೆ ಬಹು ಗುಣಕಾರಿ.
- **ಕಫ್‌ಸಾಯರಫ್**—ಧಂಡಿ, ಕಫ, ಕೆಮ್ಮುದಮ್ಮುಗಳನ್ನು ಶಮಿಸುವದು.
- **ವರ್ಮಸಾಯರಫ್** (ವಿಟಾಕ್ರಿವೂ)— ಸೆಂಟೋನಾಯನ್ ಹರಳೆಣ್ಣೆಗಳಿಲ್ಲದೇಯಿದ್ದ ಸ್ವಾದಿಷ್ಟ ಜಂತು ನಾಶಕ ತಯಾರಿಕೆ. ಇದರ ಸೇವನೆಯಿಂದ ಬಾಧಕವಿಲ್ಲದೆ ಹೊಟ್ಟೆಯೊಳಗಿನ ಜಂತುಗಳೆಲ್ಲ ನಿರ್ಮೂಲವಾಗುವವು.
- **ಅನಾನಸ ಕ್ರುಶ್**—ತಂಪಾದ ಕ್ರಿಮಿ–ಛೇದಕ ಪೇಯ.
- **ಮೇಧಪ್ರಭಾ**—ವಿದ್ಯಾರ್ಥಿಗಳ ಮೇಧಾಶಕ್ತಿ ಬೆಳೆಯಿಸುವ ದಿವ್ಯ ತಂಪುತೈಲ.

ವಿಜಯಾ ಕ್ಯಾನಿಂಗ ವರ್ಕ್ಸ ಆ್ಯಂಡ್ ಇಂಡಸ್ಟ್ರೀಜ, ಹುಬ್ಬಳ್ಳಿ

ದೀಪಾವಳಿಯ ಸಂಚಿಕೆಯ ವಿಷಯ

ಎರಡು ಕವನಗಳು
'ಅಂಬಿಕಾತನಯ ದತ್ತ' ೧೬೭

ದೀಪಾವಳಿಯ ಒಳಬೆಳಕು (ಸಂಪಾದಕೀಯ)
ಸಂಪಾದಕರು ೧೬೮

ಮೇಲು ಮೆಟ್ಟಲು (ಒಂದು ಕಥೆ)
ಶ್ರೀ. ಕೆ. ಎ. ಎನ್. ರಾವ್, ಬನಾರಸ ೧೭೧

ಸೇವಾಧರ್ಮ (ವಿಡಂಬನಾ ಪ್ರಬಂಧ)
ಶ್ರೀ. ಕೋ. ಶಿವರಾಮು ಕಾರಂತರು, ಪುತ್ತೂರು ೧೯೧

ಸಾಲಂಕೃತವಧು (ಕವನ)
ಶ್ರೀ. ಕೀರ್ತಿನಾಥ, ಕಾವ್ಯಾನುಭವ ಮಂಟಪ, ಧಾರವಾಡ ೧೯೫

ಗೋರಿಗಳ ಆಕ್ರೋಶ (ಅನುವಾದಿತ ಕಥೆ)
'ಯಾದವ' ೧೯೭

ಆಧುನಿಕ ಮತ್ತು ಪಂಪನ ಕಾಲದ ಆಭರಣಗಳು
ಪ್ರೊ. ಕೆ. ಜಿ. ಕುಂದಣಗಾರ ಎಂ. ಎ., ಬೆಳಗಾಂವಿ ೨೦೪

ಕೃಷ್ಣಾದೇವಿ (ಕವನ)
'ವಿನಾಯಕ' ೨೦೯

ಮಿಲನ (ಕವನ)
ಶ್ರೀ. ಚಿನ್ನವೀರ ಕಣವಿ, ಕಾವ್ಯಾನುಭವ ಮಂಟಪ ೨೦೯

ಜೀವನ ನಾಟಕ (ಕವನ)
ಶ್ರೀ. ಜೆ ಎಚ್. ಉಪಾಧ್ಯಾಯ ಎಂ. ಎ. ಹೈದರಾಬಾದ್ ೨೧೦

ತೂತಿನ ಚೀಲ (ವ್ಯಕ್ತಿಶ್ವ ವಿವರಣೆ)
ಶ್ರೀ. ನಾ. ಕಸ್ತೂರಿ ಎಂ. ಎ. ಬೆಂಗಳೂರು ೨೧೧

ಸ್ವಿಝುರ್ಲಂಡಿನ ಕೂದಲು (ವಿನೋದ ಕಥನ)
ಶ್ರೀ. ಬಿ. ಜಿ. ಕುಲಕರ್ಣಿ ಬಿ. ಎ. (ಆನರ್ಸ್) ಮುಂಬೈ ೨೧೩

ಸಂಕಲ್ಪದ ಸಂಕಟ (ಅನುಭವ ಚಿತ್ರ)
ಶ್ರೀ ರಂ ರಾ. ನೆಗಳೂರು ಎಂ. ಎ., ಬಿ. ಟಿ. ಮುಂಬೈ ೨೧೭

ಔದ್ಯೋಗಿಕ ಶಿಕ್ಷಣಕ್ರಮ (ಪ್ರಾಯೋಗಿಕ ಪ್ರಬಂಧ)
ಶ್ರೀ. ಹಳಸೇಟಿ ಚಿಂತಾಮಣಿರಾಯರು ಟಿ.ಸಿ.ಡಿ. ಧಾರವಾಡ ೨೨೧

BANKING SERVICE

The Agricultural & Industrial Bank Ltd.

ESTABLISHED: 1934

The very existence of Modern Society is based on confidence and confidence can exist only where Governments, Institutions, Corporations and Individuals keep their promises and commitments.

An Account with the Bank will save you a good deal of labour and correspondence. We should like the privilege of serving you frequently and we assure you that a cordial and friendly welcome always awaits you at any of our offices.

Branches throughout Karnataka.

A. MADHAVA PAI, B.A, B.L.,
General Manager.

ಪುನ್ಮಿನತೀ **ಪರಿಣಯ** (ಜನಪದ ಸಾಹಿತ್ಯ)
ಶ್ರೀ. ಶಾಂತವೀರ ನಿಡಸೋಸಿ ೨೨೪

ನಂದಾದೀಪ (ರೇಡಿಯೋ ರೂಪಕ)
ಶ್ರೀ. ಎನ್. ಕೆ. ಕುಲಕರ್ಣಿ ಎಂ .ಎ., ಬಿ. ಟಿ. ಮುಂಬೈ ೨೨೬

ರಸಿಕ (ಸಣ್ಣಕತೆ)
ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ. ಗೋಕಾಕ ೨೩೦

ಓಂ ಅಶಾಂತಿಃ ! (ಕವನ)
ಪ್ರೊ. ರಂ ಶ್ರೀ. ಮುಗುಳಿ ಎಂ. ಎ., ಬಿ. ಟಿ. ಸಾಂಗ್ಲಿ ೨೩೫

ಕನ್ನಡ ಭಾರತದ ಕರ್ಣ (ಸ್ಥಾಲೀಪುಲಾಕ)
ಶ್ರೀ. ಎಂ. ಗೋವಿಂದ ಪೈ, ಮಂಜೇಶ್ವರ ೨೩೭

ಚಾರಪಾಯು (ದೇಶಾಚಾರ ಪರಿಚಯ)
ಶ್ರೀ ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. ದಿಲ್ಲಿ ೨೪೨

ನ್ಯಾಯಾಧೀಶನ ಪಲಾಯನ (ಸಣ್ಣಕತೆ)
ಶ್ರೀ. ದ. ಲ. ಕೆರೂರ ಬಿ. ಎ. ಹುಬ್ಬಳ್ಳಿ ೨೪೫

ಮನೆ (ಒಂದು ವಿಚಾರಲಹರಿ)
ಪ್ರಿ ವಿ. ಕೃ. ಗೋಕಾಕ ಬಿ. ಎ (ಆಕ್ಸ್ಫನ್) ಕೊಲ್ಹಾಪುರ ೨೪೯

ನಿಜವಾದ ಲಕ್ಷ್ಮೀಪೂಜನ (ಆರ್ಥಿಕ ವಿಚಾರ)
ಶ್ರೀ. ಎಂ. ಎ. ಜಾಲಿಹಾಳ ಬಿ. ಕಾಮ್.,
ಜಿ ಡಿ. ಸಿ. & ಎ. ೨೫೧

ಚಂಪಿ (ಸಣ್ಣಕತೆ)
ಶ್ರೀ. ವರಗಿರಿ ಮಾರ್ತಾಂಡರಾಯರು. ಎಂ ಎ , ಬಿ. ಟಿ. ೨೫೩

ವಾಶಿಂಗ್ ಕಂಪನಿ (ವ್ಯಂಗ್ಯ ಪ್ರಬಂಧ)
ಶ್ರೀ ಎನ್. ಎನ್. ಗದಗಕರ ಬಿ. ಎ. ಧಾರವಾಡ ೨೬೦

ಮರಳಿ ಮನೆಗೆ (ಸಣ್ಣಕತೆ)
ಶ್ರೀ. ದೇವಳಿ ಕೃಷ್ಣರಾಯರು ಬಿ. ಎ. ವಿಜಾಪುರ ೨೬೩

ಕನ್ನಡ ಹಳ್ಳಿಗರ ಹಬ್ಬಯ ಹಬ್ಬ (ಪರಂಪರೆಯ ಪರಿಚಯ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೨೬೯

ಸತ್ತಿ (ಜಾನಪದ ಕಥೆ)
ಶ್ರೀ. ವಿ. ಚ. ಹಿತ್ತಲಮನಿ ಬಿ. ಎಸ್ಸಿ (ಆಗ್ರಿ) ಧಾರವಾಡ ೨೭೧

ಸಾದರ ಸ್ವೀಕಾರ ೨೭೬

ಎಣೆಯ ಅರಿಗೆ ಸವಿಯೆನಿಸಲಿ, ಸತ್ತ್ವ ನೀಚಲಿ !

ಜಯಂತಿ

JAYANTI

ಅಕ್ಟೋಬರ್ ೧೯೪೪

ವಾರ್ಷಿಕ ವರ್ಗಣಿ . . ೪—೮—೦
ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್. ಜಿ. ಬೇಂದ್ರೆ
ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
೧/೨	,,	,,	೨೫	,,
೧/೪	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to
Advt: *Manager*, Jayanti; Dharwar

ಜಯಂತಿಗೆ—
ಎಲ್ಲ ಕಡೆಗೂ ಏಜಂಟರು ಬೇಕು.



ಮೌನ

★

'ಅಂಬಿಕಾತನಯ ದತ್ತ'

ಸದ್ದಿಲ್ಲ ಸುಳಿವಿಲ್ಲ, ರವಿರಾಜ ಮೂಡುವನು,
ಬೆಳಗುವನು ಅಡಗುವನು. ಬೇಸರಿಲ್ಲವ ದೂಡಿ
ಮೌನ ಮೊರೆಯಿಡುವಂತೆ ಕಡಲು ತೆರೆತೆರೆದಾಡಿ
ಮರ್ಯಾದೆ ಮೀರದಿದೆ. ಅದೊ ಅಲ್ಲಿ ಮೋಡವನು
ಎಲ್ಲೊ ಸುಮ್ಮನೆ ಸುರಿದು ಇಹುದು ಬಿಲ್ಲನು ಕೂಡಿ.

ನಿಶೆಯ ಕೌಮುದಿ, ಬಾನಬಯಲುಗಡಲಿನ ನೌಕೆ
ಆರು ಕಾಲಕು ತೇಲಿ; ಮಲೆಯ ಜಡೆಯಲಿ ಮೂಡಿ
ಸೂಸಿ ಸೌಸವ; ಇರವೆ ? ಮಾತು ಬೇಕೇ ಏಕೆ ?

ಹುಸಿನಗೆಯು, ಕುಡಿನೋಟ, ಹಿಗ್ಗುಹಿಗ್ಗಿನ ಕೇಕೆ
ಮರುಳಾಟ, ಅಳುವು ಹಸಿವಿನ ಕೂಗು, ಪನಿಮೋಡಿ
ಒಂದೆ ಬಸಿರಿನ ಬದುಕು ಒಂದೆ ಹೃದಯವ ನೀಡಿ
ತಣಿಯುವೇ ? ಶ್ರುತಿಯಾಗು—ನಾದಮಾತೃಕೆ ಆಕೆ.

ಕೂಸುಮಾತಿಗೆ ಮೌನ ತಾಯಿ ಮಡಿಲು ಸದೈವ;
ಮಾತು ಮೌನದ ಪ್ರತಿಮೆ, ಮೌನ ಮಾತಿನ ದೈವ!

ನಂಬುಗೆ

★

'ಅಂಬಿಕಾತನಯ ದತ್ತ'

೧

ಬಮಕು ಮಾಯೆಯ ಮಾಟ, ಮಾತು ನೊರೆ-ತೆರೆಯಾಟ
ಜೀವಮೌನವ ತುಂಬ ಗುಂಭ ಮುನ್ನೀರು!
ಕರುಣೋನಯವ ಕೂಡ ಆರುಣೋದಯವು ಇರಲು
ಎದೆಯ ತುಂಬುತ್ತಲಿಪೆ ಹೊಚ್ಚ ಹೊನ್ನೀರು!

೨

ನಿಜದಲ್ಲೆ ಒಲವಿರಲಿ, ಜೆಲುವಿನಲೆ ನಲಿನಿರಲಿ,
ಒಳತಿನಲೆ ಬಲವಿರಲಿ, ಜೀವಕಳೆಯೂ!
ದೇವಜೀವನ ಕೇಂದ್ರ, ಒಬ್ಬೊಬ್ಬನೂ ಇಂದ್ರ,
ಏನಿದ್ದರೂ ಎಲ್ಲ ಇಲ್ಲೆ ತಿಳಿಯಾ!

೩

ಆತನಾಕೆಯೆ ನಮ್ಮ ಜೀವನೌಕೆಯ—ತಮ್ಮ
ಧ್ರುವ ಮರೆಯದಂತೆ ನಡೆಸುತ್ತಲಿರಲಿ!
ಈ ನಾನು ಆ ನೀನು ಒಂದೆ ತಾನಿನ ತಾನು
ತಾಳ-ಲಯ-ರಾಗಗಳು ಸಹಜವಿರಲಿ!

ದೀಪಾವಳಿಯ ಒಳಬೆಳಕು

ನಮ್ಮ ಸಾರ್ವಜನಿಕ ಹಬ್ಬಗಳೆಲ್ಲ, ನಮ್ಮ ಸ್ವಾತಂತ್ರ್ಯದ ಮತ್ತು ಸುಖಜೀವನದ ಗುರುತುಗಳು. 'ಆಸ್ತಿಕವೃತ್ತಿಯೇ ಜೀವ-ಜೀವಾಳ-ವಾಗಿರುವ ಭಾರತೀಯ ಪರಂಪರೆ, ಎಲ್ಲ ಬಗೆಯ ಸುಖ-ಭೋಗ-ಗಳನ್ನೂ ದೈವೀಪ್ರಸಾದವನ್ನಾಗಿ ಭಾವಿಸುವಂತಹದಾಗಿದೆ. ದೈವ-ವಿಷಯಕವಾದ ಅವರ ಉತ್ಕಟವಾದ ಶ್ರದ್ಧೆಯು ಭಾರತೀಯರಲ್ಲಿ ಮಾನವತೆಯನ್ನು ಆರಳಿಸಿ, ಕಾಲಕಾಲಕ್ಕೆ ಅವರಿಗೆ ಬೇಕಾದ ಬೆಳಕನ್ನು ಕೊಡುತ್ತ ಬಂದಿದೆ ಈ ಬೆಳಕು ವ್ಯಕ್ತಿ-ವ್ಯಕ್ತಿಗಳಿಗೆ ನೀತಿಯ ನಡೆಯ ದಾರಿಯನ್ನು ತೋರಿಸಿತು. ಎಲ್ಲರೂ ತಮ್ಮ ತಮ್ಮ ದಾರಿಯಲ್ಲಿ ನಡೆಯಲು ತೊಡಗಿದುದರಿಂದ, ಪರಸ್ಪರರ ಮಾರ್ಗಗಳಲ್ಲಿ ಪರಸ್ಪರರಿಂದ ತಡೆಯುಂಟಾಗದೆ ಸಮಾಜವು ಸುಖ-ಶಾಂತಿಗಳನ್ನು ಉಂಡು ತೇಗುತ್ತಿದ್ದಿತು. ಶ್ರದ್ಧಾಯುಕ್ತವಾದ ಜೀವನ, ವ್ಯಕ್ತಿಗೂ ಸಮಾಜಕ್ಕೂ ನಿಚ್ಚ ದೀವಳಿಗೆಯನ್ನು ತರಬಲ್ಲದು.

* * *

ಹಿಂದಣ ನಮ್ಮ ಹಿರಿಯರ ಘನತೆಯ ಉತ್ಸಾಹಕಾರಕ ಸಂಸ್ಮರಣ, ಇಂದಿನ ನಮ್ಮ ಜನರೊಂದಿಗಿನ ಆತ್ಮೀಯಭಾವದ ಸ್ನೇಹದ ಆಚರಣ, ಮುಂದಿನ ಲೋಕಕಲ್ಯಾಣದ ಆದರ್ಶಸಾಧನದ ಚಿಂತನ—ಇವು, ನಮ್ಮ ದೀವಳಿಗೆಯಂತಹ ಹಬ್ಬಗಳ ಮುಖ್ಯ ಗುರಿ. ಇದುವರೆಗಿನ ಪರದಾಸ್ಯದಲ್ಲಿಯ ನಮ್ಮ ಕತ್ತಲೆಯ ಬಾಳು, ನಮ್ಮಿಂದ ಬರೀ ದೀವಳಿಗೆಯ ಹಬ್ಬದ ಹುಡುಗಾಟ-ಹುಚ್ಚಾಟಗಳ-ನ್ನಾಡಿಸುತ್ತ ಬಂದಿದೆ. ಅಜ್ಞಾನ-ದಾರಿದ್ರ್ಯ-ಅಶಕ್ತತೆ-ಅಪಜಯ-ಗಳಿಗೆ ಆರತಿ, ನಿದ್ರೆಮಾಡುತ್ತ ಬಿದ್ದುಕೊಳ್ಳಲು ಹಚ್ಚುವ ತಾಮಸ ಸಂಚಭಕ್ಷ್ಯಪರಮಾನ್ನ. ಇದ್ದ ಜಗಳದುರಿಯನ್ನು ಇನ್ನಿಷ್ಟು ಹೆಚ್ಚಿಸುವ ಸ್ಪರ್ಧೆಯ ಪಗಡೆಯಾಟ, ನಮ್ಮ ಕೊಳಕು ಹೃದಯ ಮನಗಳಿಗೆ ಪ್ರತಿನಿಧಿಗಳೆನಿಸುವಂತಹ ಕೊಳಕು ಸೆಗಣಿಯ ಕಾಂಡವರ ಪೂಜೆ. ಕೋಟ್ಯವಧಿ ಮುಂದಿಯ ಕೂಳನ್ನು ಕಸಿದು-ಕೊಂಡು, ಒಬ್ಬನೇ ಒಬ್ಬ ಸಂಗ್ರಹಿಸಿ, ಬಡವರ ಸಂಕಟದೊಂದಿಗೆ ವೈಭವದಿಂದ ಮಾಡುವ ಸಿರಿವಂತನ ಲಕ್ಷ್ಮೀಪೂಜೆ— ಇವೆಲ್ಲ ಇದುವರೆಗಿನ ನಮ್ಮ ದೀವಳಿಗೆಯ ಮುಖ್ಯ ಕಾರ್ಯಕ್ರಮಗಳಾಗಿ-ದ್ದುವು. ಆದುದರಿಂದಲೆ ಆ ಕಾಲದ ಒಂದು ದೀವಳಿಗೆಯೂ ನಮಗೆ ಒಳಬೆಳಕನ್ನು ಒದಗಿಸಲಿಲ್ಲ. ಕರ್ತವ್ಯದ ಅರಿವನ್ನು ಹುಟ್ಟಿಸಲಿಲ್ಲ. ಮಾನವತೆಯ ಗುರಿಯನ್ನು ಮುಟ್ಟಿಸಲಿಲ್ಲ. ಆದುದರಿಂದಲೆ ರಾಜಕೀಯ ದೃಷ್ಟಿಯಿಂದ ನಾವೀಗ ಸ್ವತಂತ್ರರೆಂದು ಲೋಕದಲ್ಲಿ ಮೆರೆಯಿಸಿಕೊಳ್ಳುತ್ತಿದ್ದರೂ, ಮಾನವ ಜೀವನದ ದೃಷ್ಟಿಯಿಂದ ನಾವಿನ್ನೂ ಪರಾಧೀನತೆಯ ಕೊಳಚೆಯಲ್ಲಿಯೆ ಬಿದ್ದುಕೊಂಡಿದ್ದೇವೆ. ನಮ್ಮ ಸಮಾಜದ ಪ್ರತಿಯೊಂದು ಘಟಕದ ಹೃದಯದಲ್ಲಿ ಇದರ ಅರಿವು ಮೂಡದೆ ಹೋದಲ್ಲಿ, ನಮಗೆ ಲೋಕದಲ್ಲಿ ವಿಜಯವಿಲ್ಲ. ವಿಜಯವಿಲ್ಲದೆ ಸಂಪತ್ತಿಲ್ಲ; ಸಂಪತ್ತಿಲ್ಲದೆ ಸುಖ-ಸಮಾಧಾನಗಳಿಲ್ಲ. ಸುಖ-ಸಮಾಧಾನ-ಗಳಿಲ್ಲದ ದಿನ 'ದೀವಳಿಗೆಯ ಹೆಬ್ಬ' ಎನಿಸಿಕೊಳ್ಳದು.

* * *

ಲೋಕಕಂಟಕವಾದ ಆಸುರೀಜೀವಿಗಳನ್ನೂ ಆಸುರೀಶಕ್ತಿ-ಗಳನ್ನೂ ಅಡಗಿಸಿದ ಸಂತೋಷಪ್ರದರ್ಶನಾರ್ಥವಾಗಿ ದೀಪಾವಳಿ ಹಬ್ಬದ ಆಚರಣೆ ಆರಂಭವಾಗಿದೆಯೆಂಬುದು. ದೀಪಾವಳಿಯ ವಿಷಯಕವಾದ ಪೌರಾಣಿಕ ಕಥೆಗಳಿಂದ ವ್ಯಕ್ತವಾಗುವುದು. ದೀಪಾವಳಿಯನ್ನಾಚರಿಸಲು ಸಿದ್ಧರಾಗಿನಿಂತ ನಾವಿಂದು, ಆ ಲೋಕ-ಕಂಟಕ ಆಸುರೀಜೀವಿಗಳನ್ನೂ ಶಕ್ತಿಗಳನ್ನೂ ಅಡಗಿಸಲು ಸಮರ್ಥ-ರಾಗಿದ್ದೇವೆಯೆ? ಸಮಾಜದ ಜೀವನದ್ದೇ ಹಿಂಡಿಹಿಳಿಯುತ್ತಿರುವ ಕತ್ತಲೆಸೇಟೆಯ ವರ್ತಕರಕ್ಕಸರು, ತಮ್ಮ ಕೈಚಳಕವನ್ನು ನಡೆ-ಯಿಸಿಯೆ ಬಿಟ್ಟಿದ್ದಾರೆ. ಆಡಳಿತದಲ್ಲಿಯ ಅಧಿಕಾರ ಸಾಧಿಸಬೇಕೆಂಬ ಮೋಹದ ಅಸುರಕುಲ, ಅಶಾಂತಿಕಾರಕ ಚಟುವಟಿಕೆಗಳನ್ನು ಅಖಂಡವಾಗಿ ಸಾಗಿಸಿಬಿಟ್ಟಿದೆ. ಪಾಶವಬಲದ ನರಕಾಸುರ, ಮನುಷ್ಯಕುಲವನ್ನು ಮೆಟ್ಟುವುದನ್ನು ಕಣ್ಣಾರೆ ಕಾಣುತ್ತಲಿದ್ದೇವೆ. ಈ ಎಲ್ಲ ಲೋಕಕಂಟಕ ಶಕ್ತಿಗಳನ್ನು ಅಡಗಿಸಿದಾಗಲೆ ಅಲ್ಲವೇ ನಾವು ವಿಜಯಶಾಲಿಗಳು? ನಿಜಯದ ಸಮಾರಂಭವೇ ಅಲ್ಲವೇ ದೀಪಾವಳಿಯೆಂಬುದು?

* * *

ಇದುವರೆಗೆ ಆದುದಾಗಿದೆ. ಈ ವರುಷದ ಸ್ವಾತಂತ್ರ್ಯದ ದೀವಳಿಗೆಯಲ್ಲಿ ನಾವು ಒಳಬೆಳಕನ್ನು ಪಡೆಯೋಣ. ಮಾನವ ಬಂಧುತ್ವದ ಬೆಲೆಯನ್ನು ಅರಿಯೋಣ. ಒಳಗಿನ ಹೊರಗಿನ ಆಸುರೀಶಕ್ತಿಗಳನ್ನು ತರಿಯೋಣ! ಭಾರತೀಯರ ಆತ್ಮಬಲವೇ ಜಗತ್ತಿಗೆ ದೀವಳಿಗೆಯ ಹಬ್ಬವನ್ನು ಒದಗಿಸಬಲ್ಲದೆಂಬ ಆತ್ಮ-ವಿಶ್ವಾಸದಿಂದ ಬೆರೆಯೋಣ! ಭಾರತದ ಕೀರ್ತಿಧ್ವಜವನ್ನು ಲೋಕ-ಲೋಕಗಳಲ್ಲಿಯೂ ಮೆರೆಸೋಣ!

ಈ ಸಂಚಿಕೆ

ಎಂದಿಗಿಂತ ಈ ಸಲದ ದೀವಾವಳಿಯ ಸಂಚಿಕೆ ಹೆಚ್ಚು ಪುಟ-ಗಳನ್ನು ಒಳಗೊಂಡು ಪುಷ್ಟವಾಗಿ ಹೊರಟಿದೆಯಾದರೂ, ಹೊರಗಿನ ಅಲಂಕಾರಗಳಿಂದ ಸಿಂಗರಿಸಲು ನಮಗೆ ಸಾಧ್ಯವಾಗಲಿಲ್ಲವೆಂಬು-ದನ್ನು ಒಪ್ಪಿಕೊಳ್ಳಲೇಬೇಕಾಗಿದೆ. ನಿರೀಕ್ಷಿಸಿದ ಮುಖಚಿತ್ರವೇ ಸಮಯಕ್ಕೆ ಸರಿಯಾಗಿ ಕೈಗೆ ದೊರೆಯಲಿಲ್ಲ. ಒಳಗೆ ಅಲ್ಲಲ್ಲಿ

ಚಿತ್ರಗಳನ್ನು ಹಾಕಬಹುದಾಗಿದ್ದಿತಾದರೂ ಯಾವುದಾದರೂ ಚಿತ್ರಗಳನ್ನು ಸೇರಿಸಲು ಮನಸ್ಸು ಒಪ್ಪಲಿಲ್ಲ. ಚಲಚ್ಚಿತ್ರದಲ್ಲಿಯ ಚಿತ್ರಗಳನ್ನು ಹಾಕಬೇಕಾಗಿದ್ದಿತೆಂದೂ ಕೆಲವರು ಕೇಳಬಹುದು. ಅಂತಹ ಬಾಡಿಗೆಯ ಅಸಡ್ಡಾಳ ಅಲಂಕಾರಗಳಿಂದ ಮೆರೆಯಲು ಜಯಂತಿ ಎಂದೂ ಮನಸ್ಸು ಮಾಡಿಲ್ಲ. ಜಯಂತಿಯ ಪೋಷಕ ವರ್ಗ ಹೆಚ್ಚಿ ಆರ್ಥಿಕ ಅನುಕೂಲತೆಯುಂಟಾದಲ್ಲಿ, ಕನ್ನಡ ಕಲಾವಿದರಿಂದಲೇ ಜಯಂತಿಗೆಂದೇ ಬರೆಯಿಸಿದ ಸುಂದರ ಚಿತ್ರಗಳನ್ನು ಪತ್ರಿಕೆಯ ತುಂಬ ತುಂಬಲಿಕ್ಕಾದೀತು. ಅಂತಹ ಸುಯೋಗವನ್ನು ನಾವೆಲ್ಲರೂ ಹಾರಯಿಸೋಣ.

ಬಹಿರಂಗ ಸೌಂದರ್ಯವಿಲ್ಲದೆ ಜಯಂತಿ ಬಡ ಮುತ್ತೈದೆಯಂತೆ ಹೊರಗಣ್ಣಿಗೆ ಕಾಣುತ್ತಲಿದ್ದರೂ, ಅದು ತುಂಬಿಕೊಂಡು ಬಂದಿರುವ ಸತ್ತ್ವ ತುಂಬ ಸಿರಿವಂತಿಕೆಯದೇ ಆಗಿದೆಯೆಂಬುದನ್ನು ಸಹೃದಯ ಕನ್ನಡಿಗರು ಒಪ್ಪದಿರರು ಎಂಬ ವಿಶ್ವಾಸ ನಮಗಿದೆ. ಕನ್ನಡನಾಡಿನ ಸುಪ್ರಸಿದ್ಧ ಲೇಖಕವರ್ಗ ತಮ್ಮ ಅಭ್ಯಾಸ-ರಸಹೃದಯಗಳ ಫಲವನ್ನು ಒದವಿಸಿಕೊಟ್ಟು, ಈ ಸಂಚಿಕೆಯ ಬೆಲೆಯನ್ನು ಹೆಚ್ಚಿಸಿದ್ದಾರೆ. ಈ ಶಾರದೋಪಾಸಕರ ನಿರಪೇಕ್ಷ ಸಹಕಾರವಿಲ್ಲದೆ ಹೋಗಿದ್ದರೆ, ಇಂತಹ ಸಂಚಿಕೆಯನ್ನು ಕೊಡಲಿಕ್ಕೆ ನಮಗೆ ಸಾಧ್ಯವಾಗುತ್ತಿರಲಿಲ್ಲ. ಎಂತಲೆ ಅವರಿಗೆಲ್ಲರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ಕೂಡಬೇಕೆಂದಿದ್ದ ಪುಟಗಳಿಗಿಂತ ಹೆಚ್ಚಾಗಿ ಕೊಟ್ಟಿದ್ದರೂ, ಕೆಲವೊಂದು ಲೇಖಕರ ಲೇಖನಗಳಿಗೆ ಈ ಸಂಚಿಕೆಯಲ್ಲಿ ಅವಕಾಶ ದೊರೆಯದೆ ಹೋಯಿತು. ಅದಕ್ಕಾಗಿ ಆ ಲೇಖಕರಲ್ಲಿ ಕ್ಷಮೆಯನ್ನು ಯಾಚಿಸುವೆವು. ಅವೆಲ್ಲ ಲೇಖನಗಳು ಮುಂದಿನ ಸಂಚಿಕೆಗಳಲ್ಲಿ ಪ್ರಕಟವಾಗುವುವು.

'ವಿಮರ್ಶೆಯ ಶಿಕ್ಷಣರಂಗ'ದ ಪರಿಣಾಮಕ್ಕೆ ಕೂಡ ಈ ಸಂಚಿಕೆಯಲ್ಲಿ ಎಡೆ ದೊರೆಯದೆ ಹೋಯಿತು. ಮುಂದಿನ ಸಂಚಿಕೆಯಲ್ಲದು ಖಂಡಿತವಾಗಿ ಪ್ರಕಟವಾಗುವುದು.

ಜಾಹೀರಾತುಗಾರರಿಗೆ ಧನ್ಯವಾದ

ಇಂತಹದೊಂದು ಸಂಚಿಕೆಯನ್ನು ಪ್ರಕಟಿಸಬೇಕೆಂದರೆ ಸಾವಿರಾರು ರೂಪಾಯಿ ವೆಚ್ಚವಾಗಬೇಕಾಗುವುದು. ಜಯಂತಿಯ ಚಂದಾದಾರರಿಂದ ದೊರೆವ ಆರ್ಥಿಕ ಅನುಕೂಲತೆಯ ಲೆಕ್ಕಾಚಾರದಿಂದ ನೋಡಿದರೆ, ನಮಗೆ ಇಂತಹ ಸಂಚಿಕೆ ಹೊರಡಿಸಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಸಿರಿವಂತರಾದ ವ್ಯವಹಾರೋದ್ಯಮಿಗಳು ತಂತಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಒಪ್ಪಿ, ನಮ್ಮ ಆರ್ಥಿಕಭಾರವನ್ನು ಹಗುರುಗೊಳಿಸಿರುವರು. ಈ ಸಹಕಾರಕ್ಕಾಗಿ ಎಲ್ಲ ಜಾಹೀರಾತುಗಾರರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುವೆವು.

ದೀಪಾವಳಿಯಿಂದ ಪ್ರಾರಂಭವಾಗುವ ಹೊಸವರ್ಷ ಎಲ್ಲರಿಗೂ ಸುಖ-ಸಮಾಧಾನಗಳನ್ನು ಹೊತ್ತು ತರಲಿ!

ಭವ್ಯಂ! ಶುಭಂ! ಮಂಗಲಂ!

ಕನ್ನಡ ಕಲಾವಿದರಿಗೆ ನಿಜವಾದ ದೀಪಾವಳಿ

ಧಾರವಾಡದಲ್ಲಿ ಒಂದು ಬಾನುಲಿಕೇಂದ್ರವು ಬೇಗನೆ ಪ್ರಾರಂಭವಾಗಲಿದೆಯೆಂಬುದು ಎಲ್ಲರಿಗೂ ಈಗ ತಿಳಿದ ಮಾತು. ಬರಲಿರುವ ಡಿಸೆಂಬರ್ ೧೯ನೆಯ ತಾರೀಖಿಗೆ ಕಾರ್ಯಕ್ರಮ ಖಂಡಿತವಾಗಿ ಮೊದಲಾಗುವುದು. ವಿವಿಧ ಕಲಾನಿಪುಣರಿಗೆ ಇದೊಂದು ಒಳ್ಳೆ ಅನುಕೂಲವಾದ ಅವಕಾಶ ಒದಗಿಸಿದಂತಾಗಿದೆ. ಬಾನುಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಯಸುವ ಕನ್ನಡ ನಾಡಿನ ಸ್ತ್ರೀ-ಪುರುಷ ಕಲಾವಿದರು, ಕೂಡಲೆ ರೇಡಿಯೋ ಅಧಿಕಾರಿಗಳನ್ನು ಕಂಡು, ತಮ್ಮ ನೈಪುಣ್ಯ ಪ್ರದರ್ಶನಕ್ಕೆ ಸಂಧಿಯನ್ನು ದೊರೆಕಿಸಿಕೊಳ್ಳಬೇಕು.

ಧಾರವಾಡದ ಬಾನುಲಿಕಟ್ಟೆಯಲ್ಲಿ ಹಾಡುಗಾರರ ಧ್ವನಿ-ಪರೀಕ್ಷಣದ ಕೆಲಸವು ಈಗಾಗಲೇ ಪ್ರಾರಂಭವಾಗಿದೆ. ತಮ್ಮ ಹಾಡುಗಾರಿಕೆಯ ಕಾರ್ಯಕ್ರಮ ಬಾನುಲಿಯಲ್ಲಿ ನಡೆಯಬೇಕೆಂಬುವವರಿಗೆ ಅಗತ್ಯವಾದ ಎಲ್ಲ ಸಹಾಯವನ್ನೂ ಕೊಡಲು ಅಧಿಕಾರಿಗಳು ಭರವಸೆಯನ್ನಿತ್ತಿದ್ದಾರೆ.

ಕಲಾವಿದರು (ಸಂಗೀತಗಾರರು–ಸಾಹಿತ್ಯಕರು) ಬೇಗನೆ ತಮ್ಮ ಹೆಸರು, ನಿವಾಸ ಹಾಗು ತಾವು ಯಾವ ಯಾವ ಅಂಗದಲ್ಲಿ ಬಲ್ಲವರೆಂಬುದನ್ನು ಬಾನುಲಿ ಅಧಿಕಾರಿಗಳಿಗೆ ತಿಳುಹಿಸಿದರೆ, ಕಲಾವಿದರನ್ನು ಹುಡುಕುವ ಅವರ ಕಾರ್ಯವನ್ನು ಹಗುರು ಮಾಡಿಕೊಟ್ಟಂತಾದೀತು.

ಎಲ್ಲ ಕಲಾವಿದರು, ಬರೆಹಗಾರರು, ಹಾಡುಗಾರರು ತಡಮಾಡದೆ ಧಾರವಾಡದ ಬಾನುಲಿ ಅಧಿಕಾರಿಗಳೊಡನೆ ಪರಿಚಯ ಬೆಳೆಯಿಸಿಕೊಳ್ಳುವರೆಂದು ನಾವು ಬಯಸುತ್ತೇವೆ.

ದೀಪಾವಳಿಗೆ:

ಬರಿಯೆ ಒಂದೆ ಇರುಳು ಬಂದೆ,
ಮುಗಿಯಿತೇನು ಕಾರ್ಯ?
ವರುಷದಿ ನೂರಾರು ತಮಸಿ-
ನಿರುಳಿವೆ ಅನಿವಾರ್ಯ!
ಅಂದಂದಿನ ಕಳ್ತಲಿಂದೆ
ಮುಂದಿಯ ಮನನಿಡಿದು ನುಂದೆ
ಕರೆದೊಯ್ಯುವರಾರು ತಂದೆ,
ಮರೆದು ಸರಿಯೆ ನೀನು?
ಮಿರುಗಿ ಮಾಯವಾಗುತಿರುವ
ಮಿಂಚಿಗೆ ಬೆಲೆಯೇನು?

—ಅನಾಮಕಾವ್ಯ.

ನಗೆಗೆ ನೇವಿದ್ಯ

(೧)

ಶಿಕ್ಷಕ—'ಸ್ವಜನ,' 'ಗುರುಜನ,' 'ಸಾಧುಜನ' ಇವುಗಳಲ್ಲಿಯು 'ಜನ' ಎಂಬ ಶಬ್ದದ ಅರ್ಥ 'ಮನುಷ್ಯ' ಎಂದಾಗುವದು. ಇದೇ ತರದ ಕೆಲವು ಶಬ್ದ ಹೇಳೋ ಕಲ್ಲಾ?

ಕಲ್ಲ—ಇಂಜನ, ದಂತಮಂಜನ, ಅಂಜನ.

(೨)

"ಏನು ರಾಯರ, ಹೋದಸಾರೆ ನಿಮ್ಮ ಆಳಿಯ ದೀಪಾವಳಿ ಹಬ್ಬಕ್ಕ ಬಂದಾಗ, ನನ್ನ ಸಂಗತಿ ಎಷ್ಟು ಸವಿಸವಿ ಮಾತಾಡಿದ್ದರು—ಆದರೆ ಈ ಸಾರಿ ಬಂದಾಗ ಬಿಕ್ಕ್ಯೊಂಡs ಇದ್ದಾರ"

'ಹೌದು, ಹೋದವರ್ಷ ಅವರು ಸಕ್ಕರಿ ಕಾರಖಾನಿಯೊಳಗ ಇದ್ದರು. ಈಗ ಮಿಲಿಟರಿ ಖಾತೆಗೆ ಸೇರ್ಯಾರ.'

(೩)

ರಾಮರಾಯ—(ಗೋಪಾಳರಾಯರು ಹೆಂಡತಿಯ ಕಾಲದಸಿ ಕೂತಿದ್ದನ್ನು ನೋಡಿ) 'ಏನ್ ರಾಯರ, ಲಕ್ಷ್ಮೀಪೂಜನ ನಡದs ದೇನು?'

ಗೋ—ಇಲ್ಲರಿ, ಈಗ ಪ್ರಾರ್ಥನಾ ಸುರುಮಾಡೀನಿ.

(೪)

ಆಕೆ—ಏನs ಆದರೂ ನಮ್ಮ ರಂಗೀನ್ನ ಇದ್ದೂರಾಗ ನೋಡಿ ಕೊಟ್ಟರಾತು.

ಆತ—ಅಲ್ಲಾ, ಇದ್ದೂರಾಗೆs ಅಂದರ ಯಾವನಾರೆ ಹುಂಬ, ಮುಗ್ಗಲಗೇಡಿಯ ಕೊಳ್ಳಾಗ ಕಟ್ಟಬೇಕು ಅಂತೀಯೇನು?

ಆಕೆ—ಅದ್ಯಾಕ? ನಮ್ಮ ಅಪ್ಪ ನನ್ನ ಇದ್ದೂರಾಗs ಕೊಡಲಿಲ್ಲೇನು?

(೫)

ಅಣ್ಣ—ಅಲ್ಲಾ, ಈ ಫರಾಳದಾಗ ಸಕ್ರಿ ಬದಲಾಗಿ ಬೆಲ್ಲಾ, ಸಜ್ಜಿಗಿ ಬದಲಾಗಿ ಜೋಳದ ನುಚ್ಚು, ತುಪ್ಪದ ಬದಲಾಗಿ ಡಾಲ್ಡಾ ಹಾಕಿ, ಅರತ್ಯಾಗ ಮಾತ್ರ ರೂಪಾಯಿ ಹಾಕು ಅಂತ ಕೇಳ್ತೀದಿ?

ತಂಗಿ—ರೂಪಾಯಿ ಬ್ಯಾಡಾ, ನೋಟು ಹಾಕು.

(೬)

'ಅವ್ವಾ, ನಿನಕಿಂತ ನನ್ನಮ್ಯಾಲs ಅಪ್ಪ ಹೆಚ್ಚು ಪ್ರೀತಿ ಮಾಡ್ತಾನ'

'ಅಧ್ಯಾಂಗ?'

'ಮುತ್ತು ಕೊಡೋದಲ್ಲದs ಮ್ಯಾಲ ಚಾಕೊಲೇಟೂ ಕೊಡ್ತಾನ'

(೭)

ಹೊಸತಾಗಿ ಬ್ಯಾಂಕಿನಲ್ಲಿ ಸೇರಿದ ಗುಮಾಸ್ತನಿಗೆ ಕ್ಯಾಶಿಯರ್ ನೋಟಿನ ಪುಡಿಕೆಯನ್ನು ಎಣಿಸಲು ಹೇಳಿದ—ಗುಮಾಸ್ತ ಸುಮಾರು ಅರ್ಧದವರೆಗೆ ಎಣಿಸಿ, ಅದನ್ನು ಡ್ರಾಅರ್‌ನಲ್ಲಿ ಇಟ್ಟು ಬಿಟ್ಟ. ಕ್ಯಾಶಿಅರ್ ಕೇಳಿದ—'ಪೂರಾ ಎಣಿಸದೆ ಅರ್ಧಕ್ಕೆ ಇಟ್ಟುಬಿಟ್ಟಿಯಲ್ಲ?'

ಗು—ಖರ ವರೆಗೆ ಸರಿಯಾಗಿದ್ದೂ ಮುಂದಿದ್ದೇ ಇರ್ತಾವಲ್ಲ ಎಲ್ಲಾನೂ ಎಣಿಸೋ ಕಾರಣೇನು?

(೮)

ಒಬ್ಬ ಪ್ರೊಫೆಸರರ ಮನೆಯ ಗೋಡೆಗೆ ಹೋಳಿಹುಣ್ಣಿವೆಯಲ್ಲಿ ಭಂಡಮಾತುಗಳನ್ನು ಬರೆಯಲಾಗಿತ್ತು. ಪ್ರೊಫೆಸರರು ಪೋಲೀಸ್ ಇನ್ಸ್‌ಪೆಕ್ಟರರನ್ನು ಕರೆತಂದು ಹೇಳಿದರು—ಇದು ನೋಡಿರಿ, ಗೋಡೆಯ ತುಂಬೆಲ್ಲ ಈ ಅಶ್ಲೀಲ ಮಾತು! ಇವರಿಗೆ ಶುದ್ಧವಾಗಿ ಕೂಡ ಬರೆಯುವದಕ್ಕೆ ಬರಬಾರದೆ?

(೯)

ಒಬ್ಬ—ಸೆರೆ ಕುಡಿಯೋದು ಪಾಪ. ಅದನ್ನು ಬಿಟ್ಟರ ಅನಾಯಾಸವಾಗಿ ಸ್ವರ್ಗಕ್ಕ ಹೋಗಬಹುದು.

ಇನ್ನೊಬ್ಬ—ಹೌದು. ಆದರ ಅಲ್ಲಿ ಹೋದಮ್ಯಾಲ ಸುರಾಪಾನ ಮಾಡಬೇಕಾಗ್ತದಂತ. ನಮಗ ಆ ರೂಢಿ ಇಲ್ಲದಿದ್ದರ ಹೊರಗ ಹಾಕಬಹುದೇನೋ ಅಂತ ಹೆದರಿಕಿ!

(೧೦)

'ಕರ್ನಾಟಕ ಏಕೀಕರಣ ಎಂದರೇನು?' ಎಂದು ವ್ಯಾಖ್ಯಾತರು ನೆರೆದ ಜನರಿಗೆ ಪ್ರಶ್ನೆ ಹಾಕಿದರು. ಯಾರೂ ಉತ್ತರವನ್ನು ಕೊಡಲಿಲ್ಲ.

'ಕೊನೆಗೆ ನಿಮಗೆ ಈ ಎರಡು ಶಬ್ದಗಳ ಅರ್ಥವಾದರೂ ಗೊತ್ತಿದೆಯೇನು?' ವ್ಯಾಖ್ಯಾತರು ಹಂಗಿಸಿ ಕೇಳಿದರು.

ಒಬ್ಬನು ಎದ್ದು ನಿಂತು—'ನನಗೆ ಗೊತ್ತಿದೆ ಕರ್ನಾಟಕ+ಏಕೆ+ಈ+ಕರಣ; ಎಂದರೆ 'ಕರ್ನಾಟಕ್ಕ ಹೀಗೇಕೆ ಮಾಡುತ್ತಿರುವೆ?' ಎಂದರ್ಥ ಎಂದನು.

ಮೇಲು ಮೆಟ್ಟಿಲು

(ಒಂದು ಕಥೆ)

ಶ್ರೀ. ಕೆ. ಎ. ಎನ್. ರಾವ್, ಬನಾರಸ

★

ವಿಶ್ವನಾಥನು ಸಂನ್ಯಾಸಿಯಾಗಿ ವಿಶ್ವಾನಂದನಾದ, ಮತ್ತೆ ವಿಶ್ವಾನಂದ ಗೃಹಸ್ಥನಾಗಿ ವಿಶ್ವನಾಥನಾದ. ಸಂನ್ಯಾಸ ದೀಕ್ಷೆಕೊಟ್ಟಿದ್ದ ಗುರುಗಳು ಅವನ ಈ ಕೃತಿಯನ್ನು ಹೊಗಳಿದರು; ಮಾನವತೆಯ ಹೊಣೆಗಾರಿಕೆಯನ್ನರಿಯದ ಮಿಕ್ಕವರು ತೆಗಳಿದರು.

★

ಆ ಸಂಜೆ ಬನಾರಸಿನ ಹಿಂದೂ ವಿಶ್ವವಿದ್ಯಾಲಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜಯಂತಿ ಸಮಾರಂಭ. ಸೆಂಟ್ರಲ್ ಹಿಂದೂ ಕಾಲೇಜಿನ ಸಭಾಭವನದಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. ವಿದ್ಯಾರ್ಥಿಗಳು ನೆಲದ ಜಮಖಾನೆಯ ಮೇಲೂ, ಸುತ್ತಲಿನ 'ಬಾಲ್ಕನಿ'ಯಲ್ಲೂ ತುಂಬಿಕೊಂಡಿದ್ದುದಲ್ಲದೆ, ಕಿಟಕಿ ಬಾಗಿಲುಗಳನ್ನೂ ಮುಚ್ಚಿ ಹೊರಸೂಸಿದ್ದರು. ರಂಗಸ್ಥಳದ ಜಗುಲಿಯ ಎಡಭಾಗದಲ್ಲಿ ಪ್ರಾಧ್ಯಾಪಕರೂ, ಬಲಭಾಗದಲ್ಲಿ ಮಹಿಳೆಯರೂ ವಿದ್ಯಾರ್ಥಿನಿಯರೂ ಕುಳಿತಿದ್ದರು. ಮಧ್ಯಭಾಗದಲ್ಲಿ ಮುಂದೆ ತಳಿರು, ತೋರಣ, ಹೂಮಾಲೆ, ದೀಪಗಳಿಂದ ಅಂದವಾಗಿ ಅಲಂಕರಿಸಲ್ಪಟ್ಟ ಮಂಟಪದಲ್ಲಿ! ಪರಮಹಂಸರ ಚಿತ್ರವು ಕಾಣಿಸುತ್ತಿತ್ತು. ಮಂಟಪದ ಎಡಭಾಗದಲ್ಲಿ ಪ್ರಿನ್ಸಿಪಾಲರೂ ಅವರ ಪಕ್ಕದಲ್ಲಿ ಅಂದಿನ ಮುಖ್ಯ ಅತಿಥಿಯಾಗಿ ಬಂದಿದ್ದ ರಾಮಕೃಷ್ಣ ಮಠಾಧಿಪತಿ ಸ್ವಾಮಿಜಿಯವರೂ ಮೆತ್ತೆಗಳ ಮೇಲೆ ಕುಳಿತು, ದಿಂಬುಗಳನ್ನು ಒರಗಿಕೊಂಡಿದ್ದರು. ರಂಗದ ಮೇಲುಗಡೆ ಹಲವು ಬಣ್ಣದ ದೀಪಾಲಂಕಾರವೂ, ತೂಗುತ್ತಿದ್ದ ಹಾರಗಳೂ, ಶೋಭಿಸುತ್ತಿದ್ದುವು. ಊದುಬತ್ತಿಯ ಕಂಪು ಸಭಾಭವನದಲ್ಲೆಲ್ಲ ಹರಡಿಕೊಂಡಿದ್ದಿತು.

ಕಾರ್ಯಕ್ರಮವು ಮೊದಲಾಗಿ ಪ್ರಾರ್ಥನೆಯು ಮುಗಿದ ಮೇಲೆ, ಹೆಂಗುಸರ ಕಾಲೇಜಿನ ನಾಲ್ಕು ಹುಡುಗಿಯರು ರವೀಂದ್ರನಾಥ ಠಾಕೂರರ ಹಾಜೊಂದನ್ನು ಒಟ್ಟಿಗೆ ಹೇಳಿದರು. ಚಪ್ಪಾಳೆಯು ಮಳೆ ಸುರಿಯಿತು. 'ಇನ್ನೊಂದು ಸಾರಿ! ಇನ್ನೊಂದು ಸಾರಿ!' ಎಂಬ ಕೂಗುಗಳು ಕೇಳಿಬಂದವು. ಆದರೆ ಹಾಡುಗಾತಿಯರು ದಯೆಮಾಡಲಿಲ್ಲ. ಕೂಗುಗಳು ಇನ್ನೂ ಕೊಂಚಕಾಲವಿದ್ದು, ಗಾನ ವಿಶಾರದ ಘೋರಪಡೆಯವರ ಸಂಗೀತವು ಮೊದಲಾದೊಡನೆ ನಿಂತಿತು. ಘೋರಪಡೆಯವರು ದೀರ್ಘವಾಗಿ ಆಲಾಪನೆ ಮಾಡಿದರು. ಆಗಲೇ ಸಭೆಯಲ್ಲಿ ಗುಜುಗುಜು ಪ್ರಾರಂಭವಾಗಿದ್ದಿತು. ಹಾಡು ಮುಂಬರಿದ ಮೇಲಂತೂ ಗದ್ದಲವೇ ಆಯಿತು. ಪ್ರಿನ್ಸಿಪಾಲರು ಸ್ವಾಮಿಜಿಯವರ ಕಡೆಗೆ ತಿರುಗಿ "ನೋಡಿ, ಇವರಿಗೆ ಸಿನಿಮಾ ಹಾಡುಗಳು ಬೇಕು; ಶಾಸ್ತ್ರೀಯ ಸಂಗೀತಕ್ಕೆ ತಾಳ್ಮೆಯಿಲ್ಲ!" ಎಂದರು. ಸ್ವಾಮಿಯವರು ಸುಮ್ಮನೆ ತಲೆಯಾಡಿಸಿದರು. ಗಾನವಿಶಾರದರ ಸಂಗೀತವು ಬೇಗನೇ ಕೊನೆಗೊಂಡಿತು. ಭಾಷಣಗಳು ಮೊದಲಾದುವು. ಒಬ್ಬ ವಿದ್ಯಾರ್ಥಿಯು ನುಂದೆ ಬಂದು ನಾಲ್ಕಾರು ವಾಕ್ಯಗಳನ್ನು ಒಪ್ಪಿಸಿದ ಕೂಡಲೆ ಸಭಿಕರಿಂದ "ಬಾಯಿಪಾಠ! ಬಾಯಿಪಾಠ!" ಎಂಬ ಕೂಗು ಬಂದಿತು. ಅನಂತರ ಅವನ ಭಾಷಣಕ್ಕೆ ಗಮನವೇ ಸಿಕ್ಕಲಿಲ್ಲ. ಎರಡನೆಯ ವಿದ್ಯಾರ್ಥಿಯು ಬಾಯಿ ಬಿಡುವಾಗ ಕೊಂಚವೇ ತೊದಲಿದ. ಆಯಿತು "ಸಾಕು! ಹೋಗು!" ಎಂಬ ಕೂಗಾಟ. ಅವನು ಮುಂದುವರಿಸಿದ ನಿಲ್ಲದ ಚಪ್ಪಾಳೆಗಳು. ವಿದ್ಯಾರ್ಥಿಯು ಬೆವರಿ ಕೆಂಪಾಗಿ, ಕಡೆಗೆ ಹಿಂದೆ ಸರಿದ. ಸ್ವಾಮಿಯವರು ಪ್ರಿನ್ಸಿಪಾಲರ ಕಡೆಗೆ ನೋಡಿ "ಇವರನ್ನು ತೃಪ್ತಿಪಡಿಸುವುದು ಸಾಮಾನ್ಯವಲ್ಲ ಅಂತ ಕಾಣುತ್ತದೆ" ಎಂದರು. ಪ್ರಿನ್ಸಿಪಾಲರು "ಹುಂ; ತಾಳ್ಮೆ-ಸೌಜನ್ಯಗಳು ಕಡಿಮೆ. ಸಾವಿರಾರು ಹುಡುಗರು ವರ್ಷವರ್ಷವೂ ಹೊಸದಾಗಿ ಸೇರುತ್ತಾರೆ. ಅದರಲ್ಲಿ ಎಲ್ಲ ವಿಧದವರೂ ಉಂಟು. ಈ ಕಚ್ಚಾ ಸಾಮಾನುಸನ್ನು ಹದಗೊಳಿಸುವುದೇ ನನ್ನ ಕೆಲಸವಷ್ಟೆ!" ಎಂದು ಸಮಾಧಾನ ಹೇಳಿದರು.

ಇಷ್ಟರಲ್ಲಿ ಚಪ್ಪಾಳೆಯ ಸುರಿಮಳೆಯೂ ಯಿತು. ಸ್ವಾಮಿಯವರು ಈ ನೆಚ್ಚಿಗೆಯ ಕಾರಣಕ್ಕಾಗಿ ನೋಡಿದರು. ಇನ್ನೊಬ್ಬ ಯುವಕನು ಭಾಷಣಕ್ಕಾಗಿ ನಿಂತಿದ್ದನು. ಆಜಾನುಬಾಹು. ಎಣ್ಣೆಗೆಂಪಿನ ಬಣ್ಣ. ಆಕರ್ಷಕವಾದ ಮೊಗ, ನಿಲುವು. ಸುಮಾರಾಗಿ ತಿದ್ದಿದ ಕ್ರಾಪು. ಶುಭ್ರವಾದ ಬಿಳಿಯ ಪೈಜಾಮ ಮತ್ತು ಪಂಜಾಬಿ ಬನಿಯನ್ ಧರಿಸಿದ್ದನು. ಸ್ವಾಮಿಯವರು "ಈತ ಯಾರು? ಬಹಳ ಆದರ ಸಿಕ್ಕುವ ಹಾಗಿದೆಯಲ್ಲ?" ಎಂದು ಪ್ರಶ್ನಿಸಿದರು. ಪ್ರಿನ್ಸಿಪಾಲರು "ಈತ ವಿಶ್ವನಾಥ. ಬಹಳ ಒಳ್ಳೆಯ ಮಾತುಗಾರ. ಕೆಲಸಗಾರನೂ. ವಿಶ್ವವಿದ್ಯಾಲಯಕ್ಕೇ ಅಚ್ಚುಮೆಚ್ಚು. ಇಲ್ಲಿ ವಿದ್ಯಾರ್ಥಿಗಳ ಪಾರ್ಲಿಮೆಂಟು ಒಂದಿದೆ. ಅದಕ್ಕೆ ಈತನೇ ಪ್ರಧಾನ ಮಂತ್ರಿ. ಇನ್ನೂ ಹಲವು ಸಂಘಗಳಿಗೆ ಕಾರ್ಯದರ್ಶಿ. ಎಂ.ಎ. ಗೆ ಓದುತ್ತಿದ್ದಾನೆ. ಐ. ಸಿ. ಎಸ್. ಗೆ ಬೇರೆ ಈ ವರ್ಷ ಕುಳಿತಿದ್ದಾನೆ. ಪ್ರತಿಭಾವಂತ. ನಮಗೆಲ್ಲ ಇವನ ಭವಿಷ್ಯದ ಬಗ್ಗೆ ಬಹಳ ಆಶೆ, ಭರವಸೆ ಇವೆ" ಮುಂತಾಗಿ ಪ್ರಶಂಸೆ ಮಾಡಿದರು. ಈ ವರೆಗೆ ಯುವಕನ ಭಾಷಣವು ಗಂಭೀರವಾಗಿ ನಿರರ್ಗಳವಾಗಿ ಗಂಭೀರ ಪ್ರವಾಹದಂತೆ ಹರಿಯುತ್ತಿದ್ದಿತು. ಸಭೆಯು ತುಟಿ ಪಿಟಿಕ್ ಎನ್ನದೆ ಕೇಳುತ್ತಿತ್ತು. ಸ್ವಾಮಿಯವರ ಗಮನವೂ ಅವನ ಕಡೆಗೇ, ಅವನ ಮಾತಿಗೇ ನೆಲೆಯಲ್ಪಟ್ಟಿತ್ತು. ಪ್ರಿನ್ಸಿಪಾಲರ ಎಲ್ಲ ಮಾತುಗಳೂ

ಅವನನ್ನು ಮುಟ್ಟಲೇ ಇಲ್ಲ. ಯುವಕನ ಭಾಷಣವು ಇಪ್ಪತ್ತು ನಿಮಿಷಗಳ ಕಾಲ ಸಭೆಯ ಮೇಲೆ ಮಾಯೆಯನ್ನು ಜೆಲ್ಲಿದ್ದಿತು. ಮಧ್ಯೆ ಎರಡು ನೂರು ಬಾರಿ ಸಭೆಯು ಒಟ್ಟಿಗೆ ಕೈತಟ್ಟಿ ಪ್ರಶಂಸಿಸಿ ಮೆರುಕ್ಷಣವಲ್ಲೇ ನಿಶ್ಶಬ್ದವಾಯಿತು. ಕಡೆಯಲ್ಲಿ ಹರ್ಷಪ್ರದರ್ಶನವು ದೀರ್ಘವಾಗಿ ನಡೆಯಿತು. ಸ್ವಾಮಿಯವರು "ಸೊಗಸಾದ ಭಾಷಣ" ಎಂದುಕೊಂಡರು.

ಸ್ವಾಮಿಯವರೂ ಅಮೋಘವಾದ ಭಾಷಣವನ್ನು ಮಾಡಿದರು. ರಾಮಕೃಷ್ಣರ ವಚನಾಮೃತದ ಮೇಲಿನ ವ್ಯಾಖ್ಯಾನ, ವಿವೇಕಾನಂದರ ತತ್ತ್ವನೂರ್ಗದ ತಿಳಿವಳಿಕೆ— ಇವು ಸಭಿಕರನ್ನು ಮುಗ್ಧರನ್ನಾಗಿ ಮಾಡಿದುವು. ಕಡೆಯದಾಗಿ ಅವರು ಅಶ್ರಮಗಳ ಜನಸೇವೆಯನ್ನು ವಿಸ್ತರಿಸಿ ಹೇಳಿ, ನಿಸ್ವಾರ್ಥದಿಂದ ಸೇವೆ ಮಾಡಲು ಇಚ್ಛಿಸುವ ಶ್ರದ್ಧಾಳುಗಳಿಗೆ ಅವಕಾಶವು ಬಹಳವಾಗಿದೆಯೆಂದೂ, ಅವರು ಮುಂದೆ ಬಂದು ತಮ್ಮ ಬಾಳನ್ನು ಸಾರ್ಥಕಪಡಿಸಿಕೊಳ್ಳಬೇಕೆಂದೂ ಸೂಚಿಸಿದರು. ವಿಶ್ವನಾಥನು ಬಾಯಿಬಿಟ್ಟುಕೊಂಡು ಕೇಳಿದನು. ಸಭೆಯು ಮುಗಿದ ಮೇಲೆ, ಸ್ವಾಮಿಯವರೂ ಪ್ರಿನ್ಸಿಪಾಲರೂ ಹೊರಗೆ ಬರುವಾಗ, ವಿಶ್ವನಾಥನು ಬಾಗಿಲ ಬಳಿಯಲ್ಲಿಯೇ ನಿಂತಿದ್ದು ನಮಸ್ಕರಿಸಿದನು. ಗುರುಗಳು ಅವನ ಬೆನ್ನನ್ನು ತಟ್ಟುತ್ತ "ನಿನ್ನನ್ನು ಸ್ವಾಮಿಯವರು ಬಹಳವಾಗಿ ಮೆಚ್ಚಿಕೊಂಡರಯ್ಯ" ಎಂದರು. ಸ್ವಾಮಿಯವರು ಕೂಡಲೆ "ಹೌದು, ನಿಮ್ಮಾತು ವಿವೇಕಾನಂದರ ವಾಗ್ಧೋರಣೆಯನ್ನು ನೆನಪಿಗೆ ತರುವಂತಿತ್ತು" ಎಂದರು. ವಿಶ್ವನಾಥನು "ತಮ್ಮ ಅನುಗ್ರಹ ತಮ್ಮ ಉಪನ್ಯಾಸ ನನ್ನನ್ನೇ ಕಲಕಿಬಿಟ್ಟಿದೆ" ಎಂದನು. ಅವರು ಸುಮ್ಮನೆ ನಸುನಗುತ್ತ "ಓ" ಎಂದುಕೊಂಡು "ನಿಮಗೆ ಶುಭವಾಗಲಿ" ಎಂದು ಹರಸಿ ಹೊರಟು ಹೋದರು.

ವಿಶ್ವನಾಥನು "ನನ್ನನ್ನೇ ಕಲಕಿತು" ಎಂದಾಗ ಬರಿಯ ಉಪಚಾರದ ಮಾತನ್ನು ಹೇಳಲಿಲ್ಲ. ಅವರ ಮಾತುಗಳು, ಅಭಿಪ್ರಾಯಗಳು, ಸೂಚನೆಗಳು ಅವನ ಮೇಲೆ ಬಹಳ ಪರಿಣಾಮವನ್ನು ಉಂಟುಮಾಡಿದ್ದುವು. ಮನೆಗೆ ಹೋಗುತ್ತ ದಾರಿಯಲ್ಲಿ ಇವನ್ನೇ ಮತ್ತೆ ಮತ್ತೆ ನೆನೆದು ಚರ್ಚಿಸಿದನು. ಅವನ ಮನಸ್ಸಿನಲ್ಲಿ ಗೊಂದಲ ಉಂಟಾಯಿತು. ಇದರ ಮಧ್ಯದಲ್ಲಿ ತಾನು ಈವರೆಗೆ ಹಾಕಿಕೊಂಡಿದ್ದ ದಾರಿಯ ಅತೃಪ್ತಿಯು ಕಾಣಿಸಿಕೊಂಡಿತು. ಹೊಸದಾರಿಯೊಂದು ಮಸಕಾಗಿ ಕಾಣಿಸಿತು. ಅವಿವಾಗ್ಧೋರಣೆಯ ವಿಷಯದಲ್ಲಿ ಸ್ವಾಮಿಯವರು ಮಾಡಿದ ಪ್ರಶಂಸೆಯೂ ಅವನಿಗೆ ತನ್ನ ಶಕ್ತಿಯಲ್ಲಿದ್ದ ಭರವಸೆಯೂ ಹೊಸ ಹೊಸ ಆಸೆಗಳನ್ನು ಹುಟ್ಟಿಸಿದುವು. ಆದರೆ ಯಾವುದನ್ನೂ ಇನ್ನೂ ನಿರ್ಧರಿಸಲಾರದವನಾಗಿದ್ದರೂ, ತನ್ನಲ್ಲಿ ಒಂದು ಬಗೆಯ ಮಾರ್ಪಾಟು ಆಗುತ್ತಿದ್ದುದು ಮಾತ್ರ ಅವನಿಗೆ ಗೊತ್ತಾಯಿತು.

ವಿಶ್ವನಾಥನು ಯೋಚಿಸುತ್ತ ನಿದಾನವಾಗಿ ನಡೆದು, ಹನುಮಾನ್ ಘಾಟಿನಲ್ಲಿದ್ದ ಮನೆಯನ್ನು ಸೇರಿದಾಗ, ರಾತ್ರಿ ಒಂಬತ್ತು ಗಂಟೆಯ ಸಮಯವಾಗಿತ್ತು. ಕೈಕಾಲುಗಳನ್ನು ತೊಳೆದುಕೊಂಡ ಒಳಗೆ ಬಂದಾಗ, ಊಟದ ಮನೆಯಲ್ಲಿ ಎರಡು ಮಣೆ, ಬಟ್ಟಲು ತಟ್ಟೆಗಳು ಸಿದ್ಧವಾಗಿದ್ದುವು, ಅವನು ಕುಳಿತುಕೊಳ್ಳುತ್ತ,

"ಭಾವನ ಊಟ ಆಗಿಲ್ಲವೆ?" ಎಂದು ಕೇಳಿದನು.

"ಅವರು ಊಟ ಮಾಡೋದಿಲ್ಲ. ಬ್ರಾಹ್ಮಣಾರ್ಥ ಮಾಡಿದಾರೆ" ಎಂದು ಅವನ ಅಕ್ಕನ ಧ್ವನಿಯು ಅಡಿಗೆಯ ಮನೆಯ ಒಳಗಿನಿಂದಲೇ ಉತ್ತರಕೊಟ್ಟಿತು.

"ಮತ್ತೆ ಇನ್ನೊಂದು ತಟ್ಟೆ?"

"ಗಂಗುಗೆ."

"ಅವಳೂ ಊಟ ಮಾಡಿಲ್ಲವೆ?"

"ಹೇಗೆ ಮಾಡುತಾಳಪ್ಪ? ವ್ರತವೊ?"

"ಏನು ವ್ರತ?"

"ಪತಿವ್ರತ" ಎನ್ನುತ್ತ ಅಕ್ಕನವರು ಅನ್ನದ ತಟ್ಟೆಯನ್ನು ಹಿಡಿದುಕೊಂಡು ನಸುನಗುತ್ತ ಹೊರಗೆ ಬಂದರು.

"ಓ, ಬಿಡಕ್ಕ. ಸುಮ್ಮನೆ ಇದೇ ಮಾತಾಡಿ ಅಡಿ, ನಂಗೂ ಅವಳಿಗೂ ಇವ್ವ ಇಷ್ಟು ವರ್ಷಗಳ ಸಲುಗೆಯನ್ನು ಹೋಗಿಸಿಬಿಟ್ಟು ಮಧ್ಯೆ ನಾಚಿಕೆ ತಂದು ಹಾಕಿಬಿಟ್ಟಿ."

"ಸಲಿಗೆಗೇನಪ್ಪ, ಬಂದೇ ಬರುತ್ತೆ—ನಾಳೆ. ಮದುವೆ ಆಗೋತಡ!"

"ಸರಿ, ಸರಿ. ಏನು ಮದುವೆಯೋ, ಯಾವ ಗಂಡ-ಹೆಂಡತಿಯೋ ಯಾರಿಗೆ ಗೊತ್ತು? ಏನೇನಾಗುತ್ತೋ? ಈಗಿನಿಂದ ಯಾಕೆ ಇದೆಲ್ಲ?"

"ಹಾಗೆಂದರೇನು? ಅವಳು ಹುಟ್ಟಿದ ದಿನದಿಂದಲೇ ನಾವು ನಮಸ್ಸು ಮಾಡಿಬಿಟ್ಟಿದೀವಿ—ಅದನ್ನ!"

ಹೌದು. ಗಂಗುವಿನ ಮದುವೆಯ ಪ್ರಸ್ತಾಪವು ಎಂದೀ ಂದಲೋ ನಡೆದಿತ್ತು. ಈ ವರ್ಷ ನೆರವೇರುವುದಿತ್ತು. ಹುಡುಗಿಯು ಸತಿಯ ಹಾಗೇನು ಇರಲಿಲ್ಲ. ಕಾವ್ಯ, ಕಲಾ, ಕಾಲೇಜು ಸುಂದರಿಯರ ಪೈಕಿಯೂ ಅಲ್ಲ. ಸಾಮಾನ್ಯನಾಗಿ ಲಕ್ಷಣವಾದ ಹೆಣ್ಣು. ವೃಥವಾಗಿ ಬೆಳೆದಿದ್ದಳು. ಮುಖ್ಯವಾಗಿ ಗೌರವಸ್ಥರ ಮನೆಯ ಗುಣವಂತೆ. ಓದು ಬರಹಗಳನ್ನೂ ಚೆನ್ನಾಗಿ ಕಲಿತಿದ್ದಳು. ಇವಳಿಗೂ ವಿಶ್ವನಾಥನಿಗೂ ಆರು ವರ್ಷಗಳ ವ್ಯತ್ಯಾಸ. ಅವನು ನಾಲ್ಕು ವರ್ಷ ವಯಸ್ಸಿನಲ್ಲೇ ಅನಾಥನಾಗಿ ಅಕ್ಕನ ಮನೆಯನ್ನು ಸೇರಿದ್ದು, ಇವರಿಬ್ಬರೂ ಮಕ್ಕಳಿಂದ ಒಟ್ಟಿಗೆ ಬೆಳೆದಿದ್ದರು. ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದುಕೊಂಡಿದ್ದರು. ವಿಶ್ವನಾಥನಿಗೆ ಗಂಗುವಿನ ಬಗ್ಗೆ ಹೆಂಡತಿಯಲ್ಲಿನ ಆಕರ್ಷಣೆಯು ಹುಟ್ಟರದಿದ್ದರೂ ಅನಾದರಣೆಯೇನೂ ಇರಲಿಲ್ಲ. ಇನಲ್ಲದೆ ಕೃತಜ್ಞತೆಯ ಭಾರವೂ ತಕ್ಕಡಿಯಲ್ಲಿ ಬಿದ್ದಿದ್ದಿತು. ಹೀಗಿದ್ದು ಅವನಿಗೆ ಈ ಪ್ರಸ್ತಾಪವನ್ನು ವಿರೋಧಿಸುವ ಯೋಚನೆಯೇ ಬಂದಿರಲಿಲ್ಲ. ಅವಳಾದರೋ ನೊಟ್ಟನೊದಲಿನಿಂದಲೂ ಅವನನ್ನು ತನಗಿಂತ ಮೇಲಿನ ಮಟ್ಟದಲ್ಲೇ ಇಟ್ಟುಕೊಂಡು ಅನುಸರಿಸುತ್ತಿದ್ದಳು. ಈ ಬಾಂಧವ್ಯವು ಅವಳ ತಿಳಿವಳಿಕೆಗೆ ಬಂದನೆಲಂತೂ ತನ್ನ ಭಾವೀ ಪತಿಯನ್ನು ಮನಸ್ಸಿನಲ್ಲಿಯೇ ಪೂಜಿಸುತ್ತಿದ್ದಳು.

ಅಕ್ಕನಿಗೆ ತಮ್ಮನ ಈ ದಿನದ ವಕ್ಕೋಕ್ತಿಯಲ್ಲಿ ಯಾವ ವಿಶೇಷವೂ ತೋರಿಬರಲಿಲ್ಲ. ಹುಡುಗತನದ ದೂಡಿಯ ಮಾತು ಎಂದುಕೊಂಡಿರಬೇಕು. ಗಂಗು ಬಾಗಿಲಿನ ಹಿಂದೆಯೇ ನಿಂತು ಇವರ ಮಾತುಗಳನ್ನು ಕೇಳುತ್ತಿದ್ದವಳು, ನಾಚಿಕೊಂಡು ಅವನೊಡನೆ ಊಟಕ್ಕೆ ಕುಳಿತುಕೊಳ್ಳಲು ಬರಲಿಲ್ಲ.

ಆ ರಾತ್ರಿ ವಿಶ್ವನಾಥನು ಹಾಸಿಗೆಯಲ್ಲಿ ಬಹಳ ಹೊರಳಾಡಿದನು. ಇವೇ ವಿಷಯಗಳನ್ನೇ ಅಳೆದು ಸುರಿದನು. ಈ ತಳನುಳದಲ್ಲಿ ನಿರ್ಧಾರಗಳನ್ನು ತಿರಿ-ತಿರಿವಿ ಹಾಕಿದನು. ಕಡೆಗೆ ಆಯಾಸದಿಂದ ಸೋತು ನಿದ್ದೆಗೊಳಗಾದನು.

ಅಂದಿನಿಂದ ವಿಶ್ವನಾಥನ ರೀತಿಯು ಬದಲಾಯಿಸಿತು. ಹಿಂದೆ ಕಾಣುತ್ತಿದ್ದ ನಿರಾತಂಕದ ಗೆಲುವು, ಈಗ ಚಿಂತೆಯ ಮುದ್ರೆಗೆ ಸ್ಥಳಗೊಟ್ಟಿದ್ದಿತು. ಕಾಲೇಜಿನ ಮತ್ತು ಐ. ಸಿ. ಎಸ್. ಪರೀಕ್ಷೆಯ ವ್ಯಾಸಂಗವು ಹಿಂದೆಬಿದ್ದು, ಹಾಗೆಯೇ ನಿಂತುಹೋಯಿತು. ಕಾಲೇಜಿನ ಚಟುವಟಿಕೆಗಳಲ್ಲೂ ಇವನ ಭಾಗವು ಕಡಿಮೆಯಾಯಿತು. ಅವನು ಅನೇಕ ಸಂಜೆಗಳನ್ನು ಗಂಗಾತೀರದಲ್ಲಿ ಕಳೆಯತ್ತಿದ್ದನು. ಹೊತ್ತು ಮೀರಿ ಜನರೆಲ್ಲರೂ ಹೋದಮೇಲೂ, ತಾನು ಆ ಪ್ರಶಾಂತ ಗಂಗೆಯ ಮುಂದೆ, ಕತ್ತಲೆಯಲ್ಲಿ ಮಿನುಗುತ್ತಿದ್ದ ನಕ್ಷತ್ರಗಳ ಬೆಳಕಿನಲ್ಲಿ, ನಿಶ್ಶಬ್ದ ಏಕಾಂತದಲ್ಲಿ ಕುಳಿತಿರುತ್ತಿದ್ದನು. ಈಚೆಗೆ ಇವನನ್ನು ಕಂಡವರಿಗೆಲ್ಲ ಇವನಲ್ಲಿ ಏನೋ ಒಳಯುದ್ಧ ನಡೆಯುತ್ತಿದೆಯೆಂದು ತೋರುತ್ತಿತ್ತು. ಅಕ್ಕನವರೂ ಒಂದೆರಡು ದಿನ 'ಏನಪ್ಪ, ಸಪ್ಪೆಯಾಗಿದೀಯೆ? ಮೈಯಲ್ಲಿ ಚೆನ್ನಾಗಿದೆಯೆ?' ಎಂದು ಕೇಳಿದರು. ಅವನು 'ಏನೋ ಕೊಂಚ ತಲೆನೋವು' ಎಂದು ಜಾರಿಕೊಂಡನು. ಒಬ್ಬ ಸ್ನೇಹಿತನು "ಇದೇನೋ, ಈಚೀಚೆಗೆ ಹೀಗೆ ಮಂಕಾಗಿ ಸ್ಮಶಾನಕ್ಕೆ ಹೋಗುವ ಜೋಲುಮುಖ ಹಾಕಿಕೊಂಡಿರುತ್ತೀಯೆ?" ಎಂದು ಕೇಳಿದಾಗ, ಅವನು 'ಹುಂ, ಈ ಜೊಂಡುಬಾಳನ್ನು ಅಲ್ಲಿಗೇ ಸಾಗಿಸಬೇಕಾಗಿದೆ!' ಎಂದು ಜುಗುಪ್ಸೆಯಿಂದ ಉತ್ತರ ಕೊಟ್ಟನು.

ತಿಂಗಳು ಕಳೆಯುವುದರೊಳಗಾಗಿ ವಿಶ್ವನಾಥನು ಸಂನ್ಯಾಸವನ್ನು ಸ್ವೀಕರಿಸುವ ನಿರ್ಧರಕ್ಕೆ ಬಂದುಬಿಟ್ಟನು. ರಾಮಕೃಷ್ಣಾಶ್ರಮಕ್ಕೆ ಸೇರಲು ಸ್ವಾಮಿಯವರ ಒಪ್ಪಿಗೆಯೂ ದೊರೆಯಿತು. ಇವನ ನಿರ್ಧರವು ಕಾಲೇಜಿನಲ್ಲಿ ಗೊತ್ತಾದಾಗ, ಮೇಷ್ಟರಿಗೂ ಸ್ನೇಹಿತರಿಗೂ ಬಹಳ ಆಶ್ಚರ್ಯವಾಯಿತು. 'ಇವನ ವಿಶೇಷಶಕ್ತಿಯು ತಾವು ನಿರೀಕ್ಷಿಸಿದ್ದಂತೆ ಬೆಳಗಲಿಲ್ಲವಲ್ಲ!' ಎಂದು ಅನೇಕರು ಮರುಗಿದರೂ, ಅದು ಒಳ್ಳೆಯ ದಾರಿಯಲ್ಲಿ ಉಪಯೋಗವಾಗಲಿದೆಯೆಂದು ಅವರು ಸಮಾಧಾನವನ್ನು ತಂದುಕೊಂಡರು. ಕೆಲವರು ಇವನ ನಿರ್ಧರವು ಸ್ತುತ್ಯವಾದುದೆಂದು ಸಂತೋಷಪಟ್ಟು, ಮೆಚ್ಚಿಗೆಯನ್ನು

ZANDU
PROTOCASEIN
(Whole Casein Hydrolysate)
PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH
Biological Laboratory
The Zandu Pharmaceutical Works, Ltd.
BOMBAY 14
Sole Agents:—
Mis. Pranlal and Sons
Chemists, Druggists
Station Road. HUBLI
(H. O. Bangalore City)

ಸೂಚಿಸಿದರು. ಪ್ರಿನ್ಸಿಪಾಲರು ಬಹಳ ಚರ್ಚೆಮಾಡಿ, ಕಡೆಗೆ 'ಆಗಲಪ್ಪ, ನಿನ್ನಂತೆಯೇ ಆಗಲಿ. ನಿನ್ನ ಯೋಗ್ಯತೆಯು ನಿನ್ನನ್ನು ಎಲ್ಲಾದರೂ ಮೇಲ್ಮಟ್ಟಕ್ಕೆ ತಂದೇ ತರುತ್ತದೆ' ಎಂದು ಬೀಳ್ಕೊಟ್ಟರು. ಒಬ್ಬ ಸ್ನೇಹಿತನು ಮಾತ್ರ "ಇದೇನು ವೈರಾಗ್ಯಬಿಡೋ, ಸಂನ್ಯಾಸತೆಗೆಮಕೊಂಡು ಮೂಲೆಯಲ್ಲಿ ಬಿದ್ದಿದೋಮು" ಎಂದು ಕೆಣಕಿದನು. ವಿಶ್ವನಾಥನು ಕೆರಳಿ "ಏನಂದೆ, ಮೂಲೆಯೆ? ಹಾಗೇಕೆ ಆಗಬೇಕು? ನಿನ್ಮ್ಕೆ ಎಷ್ಟು ಐ ಸಿ. ಎಸ್.ಗಳು ಒಬ್ಬ ವಿವೇಕಾನಂದರಿಗೆ ಸಮ? ಅವರ ಕೀರ್ತಿಯನ್ನು ಗಳಿಸಿದ್ದಾರೆ?" ಎಂದು ಬಾಯಿಮುಚ್ಚಿಸಿದನು.

ಮನೆಯವರಿಗೆ ಈ ವಿಷಯವನ್ನು ಹೇಗೆ ತಿಳಿಸುವುದೆಂಬುದು ವಿಶ್ವನಾಥನಿಗೆ ದೊಡ್ಡ ಸಮಸ್ಯೆಯಾಯಿತು. ಅವನು ಹಲವು ರೀತಿಗಳನ್ನು ಯೋಚಿಸುತ್ತ, ಹಲವು ದಿನಗಳನ್ನು ಕಳೆದನು. ಕಡೆಗೆ ಹೇಗೋ ನಯವಾಗಿ ಹೇಳಬೇಕೆಂದು ಹೋಗಿ, ಸಾಗದೆ ಕಟುಕನಂತೆ ಒರಟಾಗಿಯೇ ಒದರಿಬಿಟ್ಟನು. ಇದರ ಸೂಚನೆಯನ್ನು ಎಳ್ಳಷ್ಟೂ ಊಹಿಸದೆ ತನ್ನ ಸುಖಕನಸಿನಲ್ಲಿದ್ದ ಸಂಸಾರವು, ಈಗ ಭೂಕಂಪಕ್ಕೆ ಸಿಕ್ಕಿದಂತಾಯಿತು. ಮೊದ-ಮೊದಲು ಅಕ್ಕನವರಿಗೆ ಇವನ್ನು ನಂಬುವುದು ಕೂಡ ಸಾಧ್ಯವಾಗಲಿಲ್ಲ. ನಿಶ್ಚಯಸ್ಥಿತಿಯು ಮನಸ್ಸಿಗೆ ಹತ್ತಿದಾಗ, ಅವರು ಅವನ ದ್ಯಾರಿಯು ತಪ್ಪೆಂದು ವಾದಿಸಿದರು, ಅವನ ಕೃತಘ್ನತೆಗಾಗಿ ದೂರಿದರು, ನಿರ್ಧಾರವನ್ನು ಹಿಂತಿರುಗಿಸಬೇಕೆಂದು ಹಟ ಹಿಡಿದು ರಂಪವನ್ನೇ ಮಾಡಿದರು. ಅವನು ಅಪರಾಧಿಯ ದೈನ್ಯತೆಯಿಂದ ಬರಿಯ ಸಮಾಧಾನವನ್ನು ಹೇಳಿ, ಹುಚ್ಚನಂತೆ ತನ್ನ ಪಟ್ಟನ್ನು ಬಿಡದೆ ಇದ್ದಾಗ, ನಿಸ್ಸಹಾಯಕತೆಯಿಂದ ಗೋಳೋ ಎಂದು ಅತ್ತರು. ಭಾವನವರನ್ನು ಈ ಮೂಗುಪೆಟ್ಟು ಮೂಕರನ್ನಾಗಿ ಮಾಡಿತು. ಅವರು 'ದೇವರ ಇಷ್ಟ, ನಡೆಯಲಿ!' ಎಂದುಬಿಟ್ಟು ಸುಮ್ಮನಾದರು. ಗಂಗುವು ವಿಧವೆಯಾಗಿದ್ದರೆ ಇಷ್ಟು ಕುಗ್ಗಿ ಕೊರಗುತ್ತಿದ್ದಳೋ ಇಲ್ಲವೋ ಹೇಳುವಂತಿರಲಿಲ್ಲ. ಆದರೂ ಅವಳು ತನ್ನ ದುಃಖವನ್ನು ಪ್ರದರ್ಶಿಸದೆ, ಕಷ್ಟದಿಂದ ನುಂಗಿಕೊಳ್ಳಲು ಮಹಾಪ್ರಯತ್ನವನ್ನು ಮಾಡುತ್ತಿದ್ದಳು. ವಿಶ್ವನಾಥನು ನೊಂದನು, ಕರಗಿದನು; ಆದರೆ ಅದೃಷ್ಟನಾಗಲಿಲ್ಲ.

ಅವನು ಹೊರಡುವ ದಿನ ಆ ಮನೆಗೆ ಸಾವು ಸಂದಂತಿತ್ತು. ಅವನು ಬೀಳ್ಕೊಂಡಾಗ ಬಿಗಿಮನಸ್ಸಿನ ಭಾವನವರ ಕಣ್ಣಿನಲ್ಲಿಯೂ ನೀರೂರಿತ್ತು. 'ಹೇಗಾದರೂ ಚೆನ್ನಾಗಿ ಬಾಳಪ್ಪ' ಎಂದು ಹರಸಿದರು. ಅಡಿಗೆಯ ಮನೆಯಲ್ಲಿದ್ದ ಅಕ್ಕನವರನ್ನು ನೋಡುವ ಧೈರ್ಯವನ್ನೂ ಮಾಡಲಾರದೆ, ವಿಶ್ವನಾಥನು ಬಿಗಿದ ಕೊರಳಿನಿಂದ 'ಅಕ್ಕಾ' ಎಂದು ಮಾತ್ರ ಹೇಳಿದನು. ಅವರು ಈ ವರೆಗೆ ಸೈರಣೆಯಲ್ಲಿ ತಮಗೆ ಶಿಕ್ಷಣ ಕೊಟ್ಟುಕೊಂಡಿದ್ದು, ಬಾಗಿಲಿನ ಬಳಿಗೆ ಬಂದು ನಿಂತು ಕಣ್ಣೊರಸಿಕೊಂಡರು. ಗಂಗುವು ಈ ದೃಶ್ಯಕ್ಕೆ

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನುಮೇಲೆ
ಯಾವ ತೊಂದರೆಯೂ ಇಲ್ಲ.

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಅವಶ್ಯ ಸಂದರ್ಶಿಸಿರಿ.

ಹೆದರಿ ಕೋಣೆಯೊಳಗೆ ಸೇರಿಕೊಂಡು, ಬಾಗಿಲನ್ನು ಹಾಕಿಕೊಂಡು ಕಣ್ಣ ಆಳುವನ್ನು ಬಟ್ಟೆಯಿಂದ ಹಿಡಿಯುತ್ತಿದ್ದಳು. ಆದರೂ ಅದು ಈ ನಿರ್ಬಂಧವನ್ನು ಒಡೆದುಕೊಂಡು ಹೊರಗೆ ಬಂದು, ಅವಳ ಬಿಕ್ಕಳಿಕೆಯು ಅವನನ್ನು ಮುಟ್ಟಿತು. ಆಗ ಅವನಿಗೆ ತನ್ನ ನಿರ್ಧಾರವು ಕಳಚಿಕೊಳ್ಳುವಂತಾಯಿತು. ಅವನು ಗಾಬರಿಯಾಗಿ, ಇಪ್ಪತ್ತು ವರ್ಷಗಳಿಂದ ಆದರಿಸಿ ಬೆಳೆಸಿದ ಮನೆಯಿಂದ ಕಣ್ಣನ್ನು ಹರಿದುಕೊಂಡು ಆತುರದಿಂದ ಹೊರಬಿದ್ದನು.

* * * *

ವಿಶ್ವನಾಥನು ವಿಶ್ವಾನಂದನಾದನು. ಕೆಲವು ದಿನಗಳಲ್ಲೇ ಸ್ವಾಮಿಯವರು ಮುಖ್ಯ ಮಹಾಧಿಪತಿಗಳಾಗಿ ನೇಮಿಸಲ್ಪಟ್ಟು, ಕಲ್ಕತ್ತೆಯ ಬಳಿಯ ಬೇಲೂರ ಮಠಕ್ಕೆ ಹೋದಾಗ, ಶಿಷ್ಯನಾದ ವಿಶ್ವಾನಂದನನ್ನೂ ಕರೆದುಕೊಂಡು ಹೋದರು.

೨

ವಿಶ್ವಾನಂದನು ಆಶ್ರಮಕ್ಕೆ ಸೇರಿದ ಕೂಡಲೆ, ತಾನು ಹಿಂದೆ ಕಾಲೇಜಿನ ವ್ಯಾಸಂಗವನ್ನು ಹೇಗೆ ಮಾಡುತ್ತಿದ್ದನೋ ಅದೇ ಶ್ರದ್ಧೆಯಿಂದ ತತ್ತ್ವವಿಚಾರವನ್ನು ಅಧ್ಯಯನ ಮಾಡಲು ಪ್ರಾರಂಭಿಸಿ, ಸ್ವಲ್ಪ ಕಾಲದಲ್ಲಿ ಬಹಳ ಭಾಗವನ್ನು ಚೆನ್ನಾಗಿ ಅರಗಿಸಿಕೊಂಡನು. ತಿಳಿಯದ ವಿಷಯಗಳನ್ನು ಸ್ವಾಮಿಯವರೊಂದಿಗೆ ಚರ್ಚಿಸುತ್ತಿದ್ದನು. ಅವರಿಗೆ ಇವನು ಮೇಧಾವಿಯೆಂದು ಮೊದಲೇ ತಿಳಿದಿದ್ದರೂ, ಈ ಚರ್ಚೆಗಳ ಸಂದರ್ಭಗಳಲ್ಲಿ ಅವನು ತೋರಿಸುತ್ತಿದ್ದ ತೀಕ್ಷ್ಣಬುದ್ಧಿಯನ್ನು ಕಂಡು ಆಶ್ಚರ್ಯಪಡುತ್ತಿದ್ದರು; ಜಟಿಲವಾದ ನಿರ್ಮಸನಮಸ್ಯೆಗಳ ಸಿಕ್ಕನ್ನು ಬಿಡಿಸುವ ವಿಧಾನವನ್ನು ತಿಳಿದು, ಮೆಚ್ಚಿ ತಲೆದೂಗುತ್ತಿದ್ದರು; ವ್ಯಾಖ್ಯಾನವನ್ನು ಕೇಳಿ ಆನಂದಿಸುತ್ತಿದ್ದರು. ಕೆಲವು ವರ್ಷದಲ್ಲೇ ಅವನು ಹೊಂದಿದ ಪಾಂಡಿತ್ಯದ ಆಳವನ್ನು ತಿಳಿದು, ತಮ್ಮ ಉಪನ್ಯಾಸದ ಕೆಲಸವನ್ನೂ ಅವನಿಗೇ ಅನೇಕ ಬಾರಿ ಒಪ್ಪಿಸುತ್ತಿದ್ದರು. ಹೀಗಿದ್ದು ವಿಶ್ವಾನಂದನು ಹೊರಮಠಗಳಿಗೆ ಹೋಗಿ ಬರುವ ಅವಕಾಶವು ಹೆಚ್ಚಿತು. ಹೋದ ಕಡೆಯೆಲ್ಲ ಇವನ ಪ್ರತಿಭೆ, ಪಾಂಡಿತ್ಯ, ವಾಗ್ಝರಿಗಳು ಜನರನ್ನು ಬೆರಗುಗೊಳಿಸಿದುವು, ಕೃಪ್ತಿಪಡಿಸಿದುವು. ಇವನ ಹೆಸರು ಹರಡಿತು. ದೊಡ್ಡ ದೊಡ್ಡ ವಿದ್ವಾಂಸರೂ, ಘನವಾದ ಸಂಘಗಳೂ, ರಾಜ-ಮಹಾರಾಜರುಗಳೂ ಇವನ ಪರಿಚಯವನ್ನು ಮಾಡಿಕೊಂಡು ಮರ್ಯಾದೆ ಮಾಡುತ್ತಿದ್ದರು; ಮಠದ ಕಾರ್ಯಕ್ಕೆ ನೆರವಾಗುತ್ತಿದ್ದರು.

ಇಷ್ಟೇ ಅಲ್ಲ. ಮೊದಲಿನಿಂದಲೂ ವಿಶ್ವಾನಂದನಲ್ಲಿ ವ್ಯವಹಾರ ಕಾರ್ಯನಿರ್ವಾಹಕ ಶಕ್ತಿಯು ವಿಶೇಷವಾಗಿದ್ದಿತು. ಇದರಿಂದ ಇಲ್ಲಿಯೂ ಮಠಗಳ ವ್ಯವಸ್ಥೆ-ಮುನ್ನಡೆಗಳಲ್ಲಿ ಬಹಳ ಆಸಕ್ತಿಯನ್ನು ವಹಿಸಿ, ಸ್ವಾಮಿಯವರಿಗೆ ನೆರವಾಗುತ್ತಿದ್ದನು, ಅಮೂಲ್ಯವಾದ ಸಲಹೆಗಳನ್ನೂ ಕೊಡುತ್ತಿದ್ದನು. ಇವನ ತಿಳಿನಡೆವಳಿಕೆಯನ್ನೂ, ಕಷ್ಟಸಹಿಷ್ಣುತೆಯನ್ನೂ, ವಿವೇಚನೆಯ ಜ್ಞಾನವನ್ನೂ ಚೆನ್ನಾಗಿ ಅರಿತುಕೊಂಡು, ಸ್ವಾಮಿಯವರು ತಮ್ಮ ಕಾರ್ಯಗಳಲ್ಲಿ ಅನೇಕವನ್ನು ಇವನಿಗೆ ನಿರಾತಂಕವಾಗಿ ವಹಿಸಿಕೊಡುತ್ತಿದ್ದರು. ಇದೇ ಅಲ್ಲದೆ ಬಾಕಿಯ ಕೆಲಸಗಳಲ್ಲೂ ಇವನ ಭಾಗವನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದರು.

ಒಟ್ಟನಲ್ಲಿ ಹೇಳುವುದಾದರೆ, ಹತ್ತು ವರ್ಷಗಳಲ್ಲಿ ವಿಶ್ವಾನಂದನು ಸ್ವಾಮಿಯವರ ಅಚ್ಚುಮೆಚ್ಚಿನ ಪಟ್ಟಶಿಷ್ಯನಾದನು. ಅವರ ಕರುವಾಯ ಮಠವನ್ನು ನಡೆಸಿಕೊಂಡು ಅಭಿವೃದ್ಧಿಗೆ ತರುವುದಕ್ಕೆ ಎಲ್ಲ ವಿಧದಿಂದಲೂ ಯೋಗ್ಯನಾದವನೊಬ್ಬನು ಸಿಕ್ಕಿದನಲ್ಲ—ಎಂದು ಅವರು ತೃಪ್ತಿಪಟ್ಟು ಹಿಗ್ಗಿದರು. ಇದನ್ನು ಬಹಿರಂಗವಾಗಿಯೂ ಕೆಲವು ವೇಳೆ ಸೂಚಿಸಿಯೂ ಬಿಟ್ಟರು.

ಎಲ್ಲೇ ಆಗಲಿ, ಯಾವನೊಬ್ಬನು ಮುಂದೆ ಬರುತ್ತಿರುವುದನ್ನು ಕಂಡರೆ ಕೆಲವರಿಗೆ ಸಹಿಸಲಾಗುವುದಿಲ್ಲ. ಸಂನ್ಯಾಸಿಗಳ ಮಠವೂ ಕೂಡ ಇದಕ್ಕೆ ಹೊರಗಲ್ಲ. ಹೀಗಿದ್ದು ವಿಶ್ವಾನಂದನು ಚಿತ್ತವನ್ನಾಕ್ರಮಿಸುತ್ತಿದ್ದ ಬಗೆಯು ಕೆಲವು ಹಳಿಯ ಶಿಷ್ಯರಿಗೆ ಅಸಮಾಧಾನವನ್ನುಂಟುಮಾಡಿತೆಂದು ಹೇಳಬೇಕಾಗಿಲ್ಲ. ಇವರು ಸಮಯವನ್ನು ಕಾಯುತ್ತಿದ್ದು, ಅವನು ತಪ್ಪಿದ ಕಡೆಗಳನ್ನು ಎಣಿಕೆ ಹಾಕಿ, ಅವನ ದೌರ್ಬಲ್ಯಕ್ಕೆ ಉಪ್ಪುಹಚ್ಚಿ ಸ್ವಾಮಿಯವರ ಗಮನಕ್ಕೆ ಆಗಾಗ ತರುತ್ತಿದ್ದರು. ಆದರೆ ಅವರು ಅವನನ್ನು ಚೆನ್ನಾಗಿ ಪರೀಕ್ಷಿಸಿದ್ದ ಕಾರಣ, ಅವರಿಗೆ ಅವನ ಬಗ್ಗೆ ಇದ್ದ ಅಚಲವಾದ ವಿಶ್ವಾಸ-ನಂಬಿಕೆಗಳಿಗೆ ಧಕ್ಕೆ ತಗಲುತ್ತಿರಲಿಲ್ಲ. ಇದರಿಂದ ವಿಶ್ವಾ-

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಟ್ಟಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಪ್ರಪಂಚದೆಲ್ಲೆಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮನ್ನಣೆ ಪಡೆದ ಸ್ವಾರಸ್ಯಮಯ ಕಾದಂಬರಿ. ಕೆಲವೇ ದಿನಗಳಿವೆ. ಇಂದೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಕಾದಂಬರಿಗಳು

ದೇವದಾಸ (ಅಂಜೆವೆಚ್ಚ ಸೇರಿ)		೧—೧೨—೦
ವಿಜಯಾ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಷೋಡಶಿ	,,	೨— ೬—೦
ಚಿತ್ರ	,,	೧— ೦—೦

(ಪ್ರೇಮಸಪ್ತ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳು ಪ್ರಕಟಿಯುತ್ತಿವೆ. ಉಚಿತವಾಗಿ ಬರೆಯಿರಿ:—

ಸಮಾಜ ಪುಸ್ತಕಾಲಯ, ಧಾರವಾಡ.

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.
ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)— ಈ ಔಷಧಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುಸುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :
ಮೆಸರ್ಸ : ಮಿರ್ಜಾನಕರ ಮತ್ತು ಕಂಪನಿ

ನಂದನ ಜೀವನವು ನಿರಾತಂಕವಾಗಿ ಸಾಗುತ್ತಿದ್ದುದಲ್ಲದೆ, ದಿನದಿನಕ್ಕೆ ಕಳೆಗೂಡುತ್ತಿದ್ದಿತು.

ವಿಶ್ವಾನಂದನು ಆತ್ಮವಿಕಾಸಕ್ಕಾಗಿ ಎಷ್ಟು ಯತ್ನಿಸುತ್ತಿದ್ದನೋ, ಮಠದ ಮೂಲಕ ಸೇವೆಗಾಗಿ ಎಷ್ಟು ದುಡಿಯುತ್ತಿದ್ದನೋ, ಅಷ್ಟೇ ತನಗೆ ದೊರೆತ ಅನಕಾರ್ಯಕ್ಕಾಗಿ, ತನ್ನನ್ನು ಒಲಿದ ಪದವಿ, ಸುರ್ಯಾಪೆಗಳಿಗಾಗಿ ಸಂತೋಷಿಸಿದನು. ಇನ್ನೆಲ್ಲವೂ ಇನ್ನೂ ಹೆಚ್ಚು ಹೆಚ್ಚು ತೂಕದಲ್ಲಿ ಬರುವವೆಂದು ಆಶಿಸಿದನು. ಈ ಆಶೆಯ ಸಾಧನೆಗೋ ಎನ್ನುವಂತೆ, ಆ ವರ್ಷ ಯೂರೋಪಿನಲ್ಲಿ ಸರ್ವಮತಗಳ ಸಮ್ಮೇಳನವು ನಡೆಯುವುದೆಂದು ಗೊತ್ತಾಗಿ ಮರಕ್ಕೆ ಆಹ್ವಾನ ಬಂದಿತು. ವಿಶ್ವಾನಂದನು ಮಠದ ಪ್ರತಿನಿಧಿಯಾಗಿ ಆರಿಸಲ್ಪಟ್ಟನೆಂದು ಹೇಳಲೆ ಬೇಕಾಗಿಲ್ಲ. ಇಂತಹ ಸುಸಂದರ್ಭ ಒದಗಿದುದರಿಂದ, ಅವನು ಬಹುವಾಗಿ ಹಿಗ್ಗಿದನು. ಇವನ ಆಯ್ಕೆಯನ್ನು ತಿಳಿಸುವಾಗ ಸ್ವಾಮಿಯವರು "ಇಗೋ, ನಿನಗೂ ವಿವೇಕಾನಂದರ ಅವಕಾಶವೇ ದೊರೆಕಿದೆ. ಅವರ ಶಕ್ತಿಗೆ ನಿನ್ನದೇನೂ ಕಡಿಮೆಯಾಗಿಲ್ಲ. ಅವರಂತೆಯೇ ನೀನೂ ಈ ಸಮಯವನ್ನು ಉಪಯೋಗಿಸಿಕೊಂಡು ಹಿಂದೂ ಧರ್ಮದ ಬಾವುಟವನ್ನು ಮೇಲೇರಿಸಿ, ಭಾರತದ ಜಯಭೇರಿಯನ್ನು ಬಡಿದು, ಈ ಮಠಕ್ಕೂ ನಿನಗೂ ಕೀರ್ತಿಯನ್ನು ಸಂಪಾದಿಸುವೆಯೆಂದು ನಾನು ಖಂಡಿತವಾಗಿ ನಂಬಿದ್ದೇನೆ. ದೇವರೂ ಹಾಗೆಯೇ ಅನುಗ್ರಹಿಸಲಿ." ಎಂದು ಹೇಳಿದರು. ಈ ನೀಕ್ಷೆ-ಹರಕೆಗಳು ಅವನ ಮನಸ್ಸನ್ನು ತುಂಬಿ, ಹಲವಾರು ಕನಸುಗಳನ್ನು ಕಾಣಿಸಿದ್ದುವು. ಈ ಮಹದಾಶೆಯು ತನ್ನ ಜೀವನಕ್ಕೆ ಕಿರೀಟವ್ಯಾಯವಾದುದೆಂದು ಅವನು ಭಾವಿಸಿದನು. ಇದು ಫಲಿಸುವ ದಿನವನ್ನು ಅವನು ಆತುರದಿಂದ ಇದಿರುನೋಡುತ್ತ ತನ್ನ ಸಿದ್ಧತೆಗಳನ್ನು ತ್ವರೆಯಿಂದ ಸಾಗಿಸುತ್ತಿದ್ದನು.

೩

ಆ ದಿನ ಕಾಶಿಯ ರಾಮಕೃಷ್ಣಾಶ್ರಮದಲ್ಲಿ ಬಹಳ ಸಂಭ್ರಮ. ಆಶ್ರಮದ ರಜತೋತ್ಸವವು ನೆರವೇರುತ್ತಿದ್ದಿತು. ಕಟ್ಟಡವು ತಳಿರು-ತೋರಣಗಳಿಂದ ಅಂದವಾಗಿ ಅಲಂಕರಿಸಲ್ಪಟ್ಟಿದ್ದಿತು. ಒಳಗೆ ಪೂಜೆ, ಭಜನೆಗಳು ನಡೆಯುತ್ತಿದ್ದುವು. ಇವುಗಳು ಮುಗಿದ ಮೇಲೆ, ಕಲ್ಕತ್ತೆಯಿಂದ ಬಂದಿದ್ದ ಸ್ವಾಮಿಯವರು ಉಪದೇಶವನ್ನು ಮಾಡಿದರು. ಇವರೊಂದಿಗೆ ಬಂದಿದ್ದ ವಿಶ್ವಾನಂದನು ಹಿಂದೂಧರ್ಮದ ವಿಷಯವಾಗಿ ಮಹತ್ತ್ವವಾದ ಭಾಷಣವನ್ನು ಮಾಡಿದನು. ಇದನ್ನು ಕೇಳಿದವರೆಲ್ಲ, ಇಂತಹ ಭಾಷಣವು ಕೊಂಚ ದಿನಗಳಲ್ಲಿಯೇ ನಡೆಯಲಿದ್ದ ಸರ್ವಮತಗಳ ಸಮ್ಮೇಳನದಲ್ಲಿ ಬಹಳ ಪರಿಣಾಮಕಾರಿಯಾಗುವುದೆಂದು ಸಂತೋಷಪಟ್ಟರು. ವಿಶ್ವಾನಂದನಾದರೋ ಮುಂದೆ ಆಗಲಿದ್ದ ಭಾಷಣದ ಮುಖ್ಯ ಗೆರೆಗಳನ್ನು ಮಾತ್ರ ಇಲ್ಲಿ ಚಿತ್ರಿಸಿದ್ದನು. ಇನ್ನೂ ಬಣ್ಣ ತುಂಬುವುದು ಬಹಳ ಬಾಕಿ ಇದ್ದಿತು. ಇದಕ್ಕಾಗಿ ಅವನು ಬಹಳ ಶ್ರದ್ಧೆಯಿಂದ ಶ್ರಮಿಸುತ್ತಿದ್ದನು. ಸ್ವಾಮಿಯವರಿಗೆ ವಂದನಾರ್ಪಣವಾಗಿ, ವಿಶ್ವಾನಂದನ ಶ್ಲಾಘನೆ ಮತ್ತು ಅವನ ಮುಂದಿನ ಮಹಾಪ್ರಯತ್ನಕ್ಕೆ ಹಾರಯಿಕೆಯ ಮಾತುಗಳಾದುವು.

ಅನಂತರ ಉತ್ಸವದ ಅಂಗವಾಗಿ ಬಡ-ಬಗ್ಗರಿಗೆ ಅಹಾರದಾನವು ಮೊದಲಾಯಿತು. ಆಶ್ರಮದ ವರಾಂಡದಲ್ಲಿ ಮಕ್ಕಳಿಂದ ಮುದುಕರ ಪೂರ್ತಿ ನೂರಾರು ಜನರು ಊಟಕ್ಕೆ ಕುಳಿತಿದ್ದರು. ಈ ಗುಂಪನ್ನು ಆದರಿಸುತ್ತ ಸ್ವಾಮಿಯವರು ಅತ್ತಿತ್ತ ಅಲ್ಲೇ ಓಡಾಡುತ್ತಿದ್ದರು. ಯಾವುದೇ ಕಾರಣದಿಂದ ಇಲ್ಲಿ ಊಟ ಮಾಡಲು ಇಷ್ಟಪಡದ ಜನರಿಗೆ, ಗ್ಯಾಸದ ಹಂಚಿಕೆಯ ಏರ್ಪಾಡೂ ಆಗಿದ್ದಿತು. ವಿಶ್ವಾನಂದನು ಪ್ರಾಕಾರದ ಬಾಗಿಲಿನ ಬಳಿಯಲ್ಲಿ ನಿಂತುಕೊಂಡು, ಅಲ್ಲಿ ಸಾಲಾಗಿ ಬರುತ್ತಿದ್ದ ಜನರಿಗೆ ಗ್ಯಾಸವನ್ನು ಹಂಚುತ್ತಿದ್ದನು. ಎಲ್ಲರೂ ತಮ್ಮ ತಮ್ಮ ಭಾಗವನ್ನು ಪಡೆದು, ಅವನನ್ನು ವಂದಿಸಿ ಮುಂದೆ ಸರಿಯುತ್ತಿದ್ದರು. ಹೀಗೆಯೇ ಮುದುಕಿಯೊಬ್ಬಳ ಸರದಿಯು ಬಂದಾಗ, ಅವಳು ತನ್ನ ಮಾಸಲು ಬಿಳಿಯ ಸೀರೆಯ ಸೆರಗನ್ನೊಡ್ಡಿ, ದಾನವನ್ನು ಪಡೆದ ಮೇಲೂ ಮುಂದೆ ಸರಿಯದೆ ಕೊಂಚ ತಡೆದು, ಅವನ ಕಡೆಗೆ ಮುಖವನ್ನೆತ್ತಿ ದೈನ್ಯದಿಂದ "ಅಪ್ಪ, ಮನೆಯಲ್ಲಿ ಮಗಳೊಬ್ಬಳು ಹಸಿದು...." ಎನ್ನುವಷ್ಟರಲ್ಲಿ ಅವನು ಅವಳ ಕಡೆಗೆ ನೋಡಿ ಜೋರಾಗಿ "ಅಕ್ಕ!" ಎಂದನು.

"ವಿಶು!" ಈಗ ಅವಳೂ ಗುರುತಿಸಿದಳು.

ವಿಶ್ವಾನಂದನು ತನ್ನ ಕೆಲಸವನ್ನು ಬೇರೆಯವನಿಗೆ ಒಪ್ಪಿಸಿ, ಅಕ್ಕನವಮೊಡನೆ ಆಶ್ರಮದ ಕಡೆಗೆ ಹೊರಟನು. ಆವರಿಬ್ಬರೇ ಆದಾಗ

ಅವನು "ಇದೇನಕ್ಕ?" ಎಂದು ಭಾವಗರ್ಭಿತವಾಗಿ ಕೇಳಿದನು.

"ಹೂಂ ಕಣಪ್ಪ; ನಮ್ಮ ಗತಿ ಇಲ್ಲಿಗೆ ಬಂದಿದೆ." ಅಕ್ಕನವರು ಕಣ್ಣೀರನ್ನು ತಂದುಕೊಂಡು ಮುಂದುವರಿಸಿದರು: "ನೀನು ಹೋದ ಮೇಲೆ ನಮ್ಮ ಸಂಸಾರದ ಮೇಲೆ ಅನಿಷ್ಟ ಬಂತು. ಅದೇ ವರ್ಷ ನಿನ್ನ ಭಾವನವರು ಹೋದರು."

"ಅ!...ಏನಾಗಿತ್ತು—ಭಾವಂಗೆ?"

"ಏನು ಹೇಳಲಪ್ಪ, ನೀನು ಹೋದದ್ದನ್ನೇ ಬಹಳ ಹಚ್ಚಿಕೊಂಡು, ಕೊರಗಿ ಕೊರಗಿ ಸವೆದು ಹೋದರು. ಅವರದ್ದು ಒಳಗೇ ದುಃಖ ಅನುಭವಿಸೋ ಸ್ವಭಾವ. ಹೊರಗೆ ತೋರ್ಪಡಿಸಿಕೊಳ್ಳೋದಲ್ಲ!"

"ಹೂಂ...." ಅವನು ಮಂಕಾಗಿ ದೀರ್ಘ ನಿಟ್ಟುಸಿರನ್ನು ಬಿಟ್ಟನು.

"ಮುಂದಿನ ವರ್ಷ ನಾನು ಯಾರ ಯಾರ ಕಾಲಿಗೋ ಬಿದ್ದು, ಪಡಬಾರದ ಭಂಗವೆಲ್ಲ ಪಟ್ಟು, ಅವರು ಉಳಿಸಿದ್ದ ನಾಲ್ಕಾರು ಕಾಸನ್ನೆಲ್ಲ ಕರ್ಚುಮಾಡಿ, ಗಂಗುಗೆ ಹೇಗೋ ತಾಳಿ ಕಟ್ಟಿಸಿದೆ. ಆದರೆ ವರ್ಷ ಕಳೆಯೋದರಲ್ಲೇ ಅವಳೂ ನನ್ನ ಹಾಗೇ...."

"ಏನು! ಗಂಗು...." ಅವನಿಗೆ ಛಳುಕು ಹೊಡೆದಂತಾಯಿತು. ಮುಂದೆ ಮಾತು ಹೊರಡಲಿಲ್ಲ.

"ಹುಂ. ಅವಳು ತಂದಿದ್ದ ಭಾಗ್ಯ ಅಷ್ಟೇ!"

"ಛೇ!"

"ಏನು ಮಾಡೋದಪ್ಪ. ಇದನ್ನೆಲ್ಲ ನೋಡಿ ಸೈರಿಸಿಕೊಳ್ಳೋ ಹಣೆಬರಹ ನಂದು. ಅದೂ ಆಯ್ತು ಅಂದರೆ...."

"ಮತ್ತೇನು?"

"ಅವಳು ಇಷ್ಟು ವರ್ಷದ ಮೇಲೂ, ಅಷ್ಟು ಇಷ್ಟು ಸೈರಿಸಿಕೊಂಡಿದಾಳೆ ಅಂತೀಯ? ನೀನು ಬಿಟ್ಟ ದಿನದಿಂದ ಭೂಮಿಗೇ ಇಳಿದು ಹೋದಳು ಅನ್ನು. ಮದುವೆಯೂ ಕೂಡ ಅವಳಿಂದ ಒಂದು ನಸುನಗು ತರಲಿಲ್ಲ. ಅದೂ ಅಲ್ಲದೆ, ನೊಂದ ಬೆರಳಿಗೇ ಬೀಳೋ ಏಟನ ಹಾಗೆ, ಈ ಹೊಸ ಪೆಟ್ಟು ಬಿದ್ದ ಮೇಲಂತೂ ಕೊರಗಿ ಕೊರಗಿ ಕುಗ್ಗಿ ಮೂಳೆ-ಚರ್ಮ ಆಗಿ ಹೋಗಿದಾಳೆ. ಮನೆಯಿಂದ ಹೊರಗೆ ತಲೇನೂ ಹಾಕೋದಿಲ್ಲ. ನನ್ನ ಬಿಟ್ಟು ಯಾರ ಹತ್ತಿರವೂ ಮಾತಾಡೋದಿಲ್ಲ. ಹೀಗೇ ಸವೆದು ಹೋಗುತ್ತಾ ಇದಾಳೆ. ನಾನು ನನ್ನ ನಿಶ್ಶಕ್ತಿಯಲ್ಲಿ, ಅಷ್ಟು ಅವರಿವರ ಮನೇಲಿ ದುಡಿದೋ, ಇಲ್ಲ ಹೀಗೆ ಎಲ್ಲಾದರೂ ಭಿಕ್ಷೆ ಬೇಡಿಯೋ, ನಮ್ಮಿಬ್ಬರ ಹೊಟ್ಟೇನೂ ತುಂಬಿಸಬೇಕು."

"ಅಯ್ಯೋ, ಅಕ್ಕ!"

"ಹೋಗಲಿ. ಏನಾದರೂ ಮಾಡೇನು—ಹೇಗಾದರೂ ಮಾಡೇನು—ಅವಳು ಮಾತ್ರ ಸ್ವಲ್ಪ ಜೋರಿಸಿಕೊಂಡರೆ. ಉಹುಂ, ಅದರ ಭರವಸೇನೂ ಇಲ್ಲ."

"ಅವಳನ್ನು ಹಾಗೇ ಬಿಡಬಾರದು. ದಾರಿ ಬದಲಾಯಿಸಬೇಕು. ಇನ್ನೊಂದು ಮದುವೆಯ ವಿಚಾರ...."

"ಅಯ್ಯೋ, ನಮ್ಮಲ್ಲಿ ಹಣ್ಣಾಗಿ ಮೂದಲು ಮದುವೆಯೇ ಆಗ್ತಾ ಕಷ್ಟ. ಇನ್ನು ಎರಡನೆಯ ಮದುವೆ ಹೇಗೆ ಸಾಧ್ಯ ಹೇಳು? ಆಚಾರ ಬೇರೆ."

"ಓ, ಅದನ್ನು ಒತ್ತರಿಸಬೇಕು, ಅವಳನ್ನು ಉದ್ಧಾರ ಮಾಡಬೇಕಾದರೆ!"

"ಹಾಗೂ ಆಗಲಿ ಅಂತ ನಾನೂ ಒಪ್ಪಿಕೋತೀನಿ ಅನ್ನು; ಬಹಿಷ್ಕಾರ ಹಾಕಿದರೂ ಚಿಂತೆಯಿಲ್ಲ. ಆದರೆ ಅವಳು ಒಪ್ಪುತ್ತಾಳೇ? ಎಂದಿಗೂ ಇಲ್ಲ. ಮೊದಲನೇದು ಆಚಾರ—ಅಂತ ಮಾಡಿಕೊಂಡಳು—ಅಷ್ಟೆ. ಈಗ ಅದರ ಆಲೆಯೇ ಇಲ್ಲ ಬಿಡು."

"ಹುಂ."

"ಸುಮ್ಮನೆ ದುಃಖದಲ್ಲಿ ದಿನೇ ದಿನೇ ಬೆಂದು ಹೋಗದೆ, ಸ್ವಲ್ಪ ಸೈರಿಸಿಕೊಳ್ಳೋ ಹಾಗೆ ಮಾಡಿದರೆ, ಅದೇ ಒಂದು ದೊಡ್ಡ ಕೆಲಸ. ನಾನು ಏನಾದರೂ ಪ್ರಮಾಧಾನ ಹೇಳಿದಾಗೆಲ್ಲ 'ಅಯ್ಯೋ ಬಿಡಕ್ಕ, ಇದ್ದರೇನು? ಹೋದರೇನು?' ಅಂತಾಳೆ. ನೀನಾದರೂ ಬಂದು ಅವಳಿಗಷ್ಟು ಬುದ್ಧಿವಾದ...."

"ಅ!"

"ಹೂಂ ಕಣಪ್ಪ. ಅವಳಿಗೆ ಯಾವಾಗಲೂ ನಿನ್ನ ಮಾತಿನಲ್ಲಿ ಬಹಳ ಗೌರವ" ಸ್ವಲ್ಪ ಹೊತ್ತು ಮಾತು ನಿಂತಿತು.

"ಅ ..... ಗ ..... ಲಿ" ಅವನು ನಿದಾನವಾಗಿ ನಿರ್ಧರಿಸಿ ಹೇಳಿದನು.

"ಅಷ್ಟೊಂದು ಮಾಡಪ್ಪ ..... ಅಯ್ಯೋ, ನನ್ನ ದುಃಖ ಹೇಳಿಕೊಳ್ಳೋದರಲ್ಲಿ ನಿನ್ನ ಯೋಗ-ಕ್ಷೇಮಾನೇ ಕೇಳಲಿಲ್ಲ."

"ನಾನು ಸರಿಯಾಗಿದೀನಕ್ಕಾ"

"ಇಷ್ಟು ವರ್ಷವಾಗಿದ್ದರೂ ನೀನು ಒಂದು ಬಾರಿಯಾದರೂ ನಮ್ಮ ಕಡೆಗೆ ಬರಲೇ ಇಲ್ಲ. ಆಗ ಬರುತ್ತೀಯ, ಈಗ ಬರುತ್ತೀಯ ಅಂತ ನಾನೂ ಕನಸುಕಾಣುತ್ತಿದ್ದೆ."

ಸೂಚಿ ಶಿಲ್ಪಕಲೆ
(ಸಚಿತ್ರ)

ಸ್ವಿನ್ನಿವಾಲ್ ಪಳಸೇಟ ಚಿಂತಾಮಣರಾಯರು ಬರೆದ ಸೊಲಿಗೆಯ ಕಲೆಯ ಸಮಗ್ರ ವಿಷಯ ಸಂಗ್ರಹವುಳ್ಳ ಪುಸ್ತಕ. ಮುಂಬೈ ಸರಕಾರದಿಂದ ಶಾಲೆ ಕಾಲೇಜುಗಳಿಗೆ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಕೆಲವೇ ಪ್ರತಿಗಳು ಉಳಿದಿರುವದರಿಂದ ಇಂದೇ ತರಿಸಿಕೊಳ್ಳಿರಿ. ಬೆಲೆ ೩-೮-೦ ಅಂಚೆಯ ವೆಚ್ಚ ೦-೬-೦. ವ್ಹಿ. ಪಿ. ಯಿಂದ ಕಳಿಸಲಾಗುವದಿಲ್ಲ.

ಪ್ರತಿಗಳು ಸಿಗುವ ಸ್ಥಳ—

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಗಾಂಧೀ ಚೌಕು, ಧಾರವಾಡ.

"ಅಕ್ಕಾ, ನಿಜವಾಗಿಯೂ ನಾನು ಕಾಶಿಗೆ ಕೆಲವು ಸಾರಿ ಬಂದಿದ್ದೆ. ಆದರೆ ನಿಮ್ಮನ್ನು ಆ ರೀತಿ ತೊರೆದು ಮತ್ತೆ ನಿಮ್ಮನ್ನು ನೋಡೋ ಧೈರ್ಯ ನನಗೆ ಬರಲಿಲ್ಲ. ಆಶೆ ಹುಟ್ಟದರೂ ಅದುಮಿಬಿಟ್ಟೆ."

"ಹೋಗಲಿ, ಈಗಲಾದರೂ ಸಿಕ್ಕಿದೆಯಲ್ಲ. ದೇವರ ದಯೆ. ಮನೆಗೆ ಹೋಗೋಣವೆ?"

"ಹುಂ. ಇಲ್ಲಿ ಈ ದಿನದ ಕೆಲಸ ಕೊಂಚ ಉಳಿದಿದೆ. ಬೇಗ ಪೂರಯಿಸುತ್ತೇನೆ. ಆ ಮೇಲೆ ಇಬ್ಬರೂ....."

"ಈಗಾಗಲೇ ಹೊತ್ತಾಯ್ತು. ಮನೇಲಿ ಹುಡುಗಿ ಒಬ್ಬಳೇ ಇದ್ದಾಳೆ. ಏನು ಅಧೈರ್ಯ ಪಟ್ಟುಕೊಂಡಿದಾಳೋ ಏನೋ! ಅಡಿಗೆ, ಊಟ ಇನ್ನೂ ಆಗಬೇಕು. ನಾನು ಹೋಗುತ್ತೀನಿ. ನೀನು ನಿನ್ನ ಕೆಲಸ ಮುಗಿಸಿಕೊಂದು ಬಾರಪ್ಪ. ಬೇರೆ ಮನೆ— ಅಲ್ಲ ಎರಡು ಕೋಣೆ ಅನ್ನು— ಹನುಮಂತನ ಗುಡಿಯ ಎಡಪಕ್ಕದಲ್ಲಿದೆ. ನಿಂಗೆ ಅದೆಲ್ಲ ಗೊತ್ತಲ್ಲ."

"ಹುಂ"

ಅಕ್ಕನವರು ಹೊರಟುಬಿಟ್ಟರು.

ವಿಶ್ವಾನಂದನು ಹನುಮಾನ ಘಾಟಿನ ಸಂದಿಗಳಲ್ಲಿ ಸುಳಿದು, ಅಕ್ಕನವರ ಮನೆಯನ್ನು ಸಮೀಪಿಸಿದಾಗ, ಅವರೇ ಜಗುಲಿಯ ಮೇಲೆ ಕುಳಿತು ಅವನನ್ನು ನಿರೀಕ್ಷಿಸುತ್ತಿದ್ದುದು ಕಂಡಿತು. ಅವರು "ಬಾಪ್ಪ, ಬಂದೆಯಲ್ಲ" ಎಂದು ಬರಮಾಡಿಕೊಂಡು, ಅವನು ಬಾಗಿಲಿನ ಬಳಿ ಬಂದಾಗ "ಬಾಗಿಲು ಎತ್ತರ ಸಾಲದು. ತಲೆ ಜೋಪಾನ" ಎಂದು ಎಚ್ಚರಿಸಿದರು. ವಿಶ್ವಾನಂದನು ಮೌನ, ವಾಗಿಯೇ ಒಳಹೊಕ್ಕನು. ಅವರ ಕತೆಯನ್ನು ಕೇಳಿದಾಗಲೇ ಅವನ ಮನಸ್ಸಿಗೆ ಹುಳಿ ಹಿಂಡಿದಂತಾಗಿದ್ದಿತು. ಈಗ ಈ ಸಣ್ಣ ಮನೆಯನ್ನೂ ಅವರ ಸಂಸಾರದ ರೀತಿಯನ್ನೂ ಕಂಡು, ಹಿಂದಿನ ಸ್ಥಿತಿಯನ್ನು ನೆನೆಸಿಕೊಂಡು ಅವನು ನೊಂದುನಿಟ್ಟುಸಿರನ್ನು ಬಿಟ್ಟನು. ಒಳಗೆ ಮೊದಲೇ ಹಾಕಿದ್ದ ಹರಕುಚಾಪೆಯ ಮೇಲೆ ಕುಳಿತು ಕೊಳ್ಳುವಾಗ, ಅವನು ಅತ್ತಿತ್ತ ಕಣ್ಣನ್ನು ಹೊರಳಿಸಿದನು. ಆದರೆ ಗಂಗು ಅಲ್ಲಿರಲಿಲ್ಲ. ಅವನು ಕುಳಿತಾಗ ಅಕ್ಕನವರು ಒಳಕೋಣೆಯ ಕಡೆಗೆ ತಿರುಗಿ "ಗಂಗು, ವಿಶು ಬಂದಿದ್ದಾನೆ ಕಣೇ" ಎಂದರು. ಅವಳು ಹೊರಗೆ ಬರುವಳೆಂದು ನೀರೀಕ್ಷಿಸಿ, ಅವನು ಆ ಬಾಗಿಲಿನ ಕಡೆಗೆ ನೋಡಿದನು. ತಾನು ಅವಳಿಗಾಗಿ ಬಾಯಿಪಾಠ ಮಾಡಿ ಕೊಂಡುಬಂದಿದ್ದ ಉಪದೇಶದ ಮಾತುಗಳನ್ನು, ಸ್ಮರಿಸಿಕೊಂಡು ಸಿದ್ಧನಾದನು. ಆದರೆ ಗಂಗು ಹೊರಗೆ ಬರಲಿಲ್ಲ. ಅಕ್ಕನವರ ಮಾತಿಗೆ ಉತ್ತರವೂ ಬರಲಿಲ್ಲ. ಅವರು ಕಣ್ಣೀರನ್ನು ತಂದುಕೊಂಡು "ನೋಡಪ್ಪ, ಹೀಗೆ ಯಾರಿಗೂ ಮುಖತೋರಿಸೋದಿಲ್ಲ, ಮಾತಾಡೋದಿಲ್ಲ..." ಎನ್ನುತ್ತ ಮೊದಲು ಮಾಡಿದರು. ಆದರೆ ಅವನು

ದೇಶದ ಸ್ವಾತಂತ್ರ್ಯವನ್ನು ಉಳಿಸಬೇಕಿದ್ದರೆ ಮೊದಲು ಆರ್ಥಿಕ ಸ್ವಾತಂತ್ರ್ಯವನ್ನು

ಗಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ

ಅದಕ್ಕಾಗಿ

★ ತಮ್ಮ ಆದಾಯವನ್ನು ಬೆಳೆಯಿಸಿಕೊಳ್ಳುವವರೂ

★ ತಮ್ಮ ಹಣವನ್ನು ಸರಿಯಾದ ರೀತಿಯಲ್ಲಿ ತೊಡಗಿಸಬೇಕೆನ್ನುವವರೂ

★ ತಾರುಣ್ಯದಲ್ಲಿರುವಾಗಲೇ, ತಮ್ಮ ವೃದ್ಧಾಪ್ಯಕಾಲವು ನಿಶ್ಚಿಂತೆಯಿಂದ

ಕಳೆಯಲು ಕೂಡಿಡಬೇಕೆನ್ನುವವರೂ

ಶ್ರೀ. ಶೇಟ್ ಬಿ. ಎಮ್. ಬಿರ್ಲಾ

ಇವರ ನೇತೃತ್ವದಲ್ಲಿ ನಡೆದ

ರುಬಿ ಜನರಲ್ ಲಿಮಾ ಕಂಪನಿ ಲಿಮಿಟೆಡ್

ನಿರ್ಮಿತಿ, ಮಾರುತಿಗಲ್ಲಿ, ಬೆಳಗಾಂವಿ

ಇವರಿಂದ ವಿವರಗಳನ್ನು ತಿಳಿದುಕೊಳ್ಳಬೇಕು.

ವಿ. ಸೂ.— ಕರ್ನಾಟಕ ಇನ್ನೂ ಸಂಬಳದ ಮೇಲೆ ಬೇರೆ ಊರುಗಳಲ್ಲಿ ಸ್ತ್ರೀ ಹಾಗೂ ಪುರುಷ ಪ್ರತಿನಿಧಿಗಳನ್ನು ನಿಯುಮಿಸ ಬೇಕಾಗಿದೆ. ಕೆಲಸ ಮಾಡಬಯಸ್ಸುವವರು ಕಾಗದಬೇಳು.

ಸನ್ನೆ ಮಾಡಿ, ಆ ಮಾತುಗಳನ್ನು ನಿಲ್ಲಿಸಿದನು. ಅನಂತರ ಸುತ್ತು ಮುತ್ತಲಿನ ಆ ಮಾತು, ಈ ಮಾತುಗಳಾದುವು. ಹತ್ತು ವರ್ಷದ ವಿಷಯಗಳೆಲ್ಲ ಬಂದು ಹೋದುವು.

ಅವನು ಮತ್ತೆ ಆಶ್ರಮಕ್ಕೆ ಹೊರಡುವ ಹೊತ್ತಾದರೂ, ಗಂಗುವಿಗೆ ನಾಲ್ಕು ವಾಕ್ಯಗಳನ್ನು ಹೇಳುವ ಅವಕಾಶವೇ ಅವನಿಗೆ ದೊರಕಲಿಲ್ಲ. 'ಇದಕ್ಕಾಗಿ ಇನ್ನೊಂದು ಬಾರಿ ಬರುವುದೇ?' ಎಂದುಕೊಂಡನು. ಆದರೆ ಅವನ ಮನಸ್ಸು ತಡೆಯಲು ಒಪ್ಪಲಿಲ್ಲ. 'ಇಷ್ಟಕ್ಕೂ ಆಗಲೂ ಇದೇ ಸಂದರ್ಭ ತಾನೆ!' ಎಂದು ತನಗೇ ಉತ್ತರ ಹೇಳಿಕೊಂಡು, ಈಗಲೇ ಅವಳಿಗೆ ಹಿತೋಪದೇಶವನ್ನು ಮಾಡಿಬಿಡಬೇಕೆಂದು ನಿರ್ಧರಿಸಿ, ಒಂದೇ ಮನಸ್ಸಿನಿಂದ ಎದ್ದು ಒಳಕೋಣೆಯ ಬಾಗಿಲಿನ ಬಳಿಗೆ ಹೋಗುತ್ತ ಗಟ್ಟಿಯಾಗಿ "ಎಂಥಾದ್ದೇ ಆಗಲಿ, ಆಗಿಹೋದುದಕ್ಕಾಗಿ ಮುಂದೆಂದೂ ಮರುಗುತ್ತಿರುವುದು ವಿವೇಕವಲ್ಲ. ದುಃಖದಲ್ಲಿ ಧೈರ್ಯ-ಸೈರಣೆಗಳಿರಬೇಕು...." ಮುಂತಾಗಿ ಪಾಠ ಒಪ್ಪಿಸುತ್ತ ಕೋಣೆಯಲ್ಲಿ ಇಣಿಕಿ ನೋಡಿದನು. ಅಲ್ಲಿ ದೂರದಲ್ಲಿ ಗೋಡೆಯನ್ನು ಒರಗಿಕೊಂಡು ಗಂಗುವು ಕುಳಿತಿದ್ದಳು. ಅವಳ ತಲೆಯು ಮುಂದಕ್ಕೆ ಬಗ್ಗಿ ಮುಖವು ಮಂಡಿಗಳ ಮಧ್ಯದಲ್ಲಿ ಮುಚ್ಚಿಹೋಗಿದ್ದಿತು. ಆದರೆ ಅವನಿಗೆ ಕಾಣಿಸಿದಷ್ಟೇ ಅವನಿಗೆ ಸಾಕಾಯಿತು. ಗಾಬರಿಯನ್ನು ತಂದಿತು. ಪಾಠವು ತಾನಾಗಿ ನಿಂತುಹೋಯಿತು. ಅವನು ತನ್ನ ಕಣ್ಣುಗಳನ್ನು ಅರಳಿಸಿ ನೋಡಿದನು. ಅವಳೇ ತಾನು ಹಿಂದೆ ನೋಡಿದ್ದ ಗಂಗುವೆಂಬುದನ್ನು ಅವನು ನಂಬದಂತಾದನು. ಅಕ್ಕನವರು ಆಗಲೇ ಇವಳ ವಿಷಯವನ್ನು ಹೇಳಿದ್ದರೂ, ಅವಳು ಹೀಗೆ ಹಿಂದಿನ ವ್ಯಕ್ತಿಯ ನೆರಳಾಗಿಬಿಟ್ಟಿರುವಳೆಂದು ಅವನು ನಂಬಿರಲಿಲ್ಲ. ಹರಕು ಸೀರೆಯ ಹೊರಗೆ ಕಾಣುತ್ತಿದ್ದ ಕಾಲು, ಕೈಗಳನ್ನು ನೋಡುವುದೂ ಅವನಿಗೆ ಆಗದೆ ಹೋಯಿತು. ಕಣ್ಣುಗಳು ನೀರಿನಿಂದ ತುಂಬಿದುವು. ಆದು ಹರಿಯದಂತೆ ಅವನು ಬಹಳ ಹೋರಾಡಿ ಸೋತನು. ಎದೆಯು ಭಾರವಾಯಿತು, ಗಂಟಲು ಬಿಗಿಯಿತು. ಒಳಗಡೆಗೆ ಬಗ್ಗಿದ್ದವನು ಹಾಗೇ ಹಿಂದಕ್ಕೆ ನರಿದುಕೊಂಡನು. ಅಲ್ಲಿ ನಿಲ್ಲುವುದು ಅವನಿಗೆ ಸಾಧ್ಯವಾಗಲಿಲ್ಲ. ಹೋಗಬೇಕೆಂದು ಮನಸ್ಸು ಒತ್ತಾಯಪಡಿಸಿತು. ಹೇಗೋ ಒದ್ದಾಡಿ, ಅಕ್ಕನವರ ಕಡೆಗೆ ನೋಡಿ "ಅಕ್ಕ, ಗಂಗುಗೆ ಸಮಾಧಾನಹೇಳುವ ಯೋಗ್ಯತೆಯಾಗಲೀ, ಎದೆಯಾಗಲೀ ನನಗಿಲ್ಲ. ಮತ್ತೆ ಬರುತ್ತೇನೆ." ಎಂದು ತೊದಲುತ್ತ ಹೇಳಿ ಸರಸರನೆ ಹೊರಟುಬಿಟ್ಟನು.

ಆ ದಿನದ ಅವನ ತಳಮಳವನ್ನು ಹೇಳತೀರದು. ಸಂನ್ಯಾಸದ ತೀರ್ಮಾನದ ದಿನದ ಹೊಯ್ದಾಟವೂ ಇದಕ್ಕೆ ಸರಿದೂಗುತ್ತಿರಲಿಲ್ಲ. ಆಶ್ರಮದಲ್ಲಿ ಅವನು ಯಾವ್ಯಕೆಲಸವನ್ನೂ ಮಾಡಲಿಲ್ಲ. ಅವನ ಏರ್ಪಾಡಿನ ಪ್ರಕಾರ ಅವನು ಆ ದಿನ ರಾತ್ರಿ ಆ [illegible] ಮತ-ಸಮ್ಮೇಳನದಲ್ಲಿ ತಾನು ಮಾಡಬೇಕಾಗಿದ್ದ ಭಾಷಣದ ಕಡೆಯ ಭಾಗವನ್ನು ಬರೆಯಬೇಕಾಗಿದ್ದಿತಾದರೂ ಅದು ಸ್ಮರಣೆಗೇ ಬರಲಿಲ್ಲ. ಹತ್ತು ವರ್ಷಗಳ ಹಿಂದಿನ ಆ ರಾತ್ರಿಯಂತೆ ಇಂದೂ ಹಾಸಿಗೆಯಲ್ಲಿ ಸುಮ್ಮನೆ ಹೊರಳಾಡಿದನು. ಹಿಂದಿನ ಬಾಲಿನ ದೃಶ್ಯಗಳೆಲ್ಲ ಮನಸ್ಸಿನ ರಂಗದಲ್ಲಿ ನಡೆದುಹೋದುವು. ತನ್ನ ಅನಾಥ ಸ್ಥಿತಿ. ಭಾವ ಅಕ್ಕ ಇವರ ಪ್ರೇಮಪೋಷಣೆ, ಗಂಗುವಿನೊಡನೆ ಎಳತನದ ಆಟಪಾಟ, ಅವನ ವಿದ್ಯಾಭ್ಯಾಸ, ಇದಕ್ಕಾಗಿ ಭಾವನವರೂ, ಒಟ್ಟು ಸಂಸಾರವೂ ಪಟ್ಟ ಕಷ್ಟ, ಅವನ ಬಗ್ಗೆ ಅವರ ಆಶೆಗಳು, ಅವುಗಳ ಕೊನೆ, ಅದರ ಪರಿಣಾಮ, ತನ್ನ ಸಂನ್ಯಾಸಜೀವನ, ಅಲ್ಲಿ ತನ್ನ ಅಭಿವೃದ್ಧಿ, ಇದ್ದ ಮಹದವಕಾಶ, ನಿರೀಕ್ಷೆಗಳು— ಇವೆಲ್ಲ ಒಂದೊಂದಾಗಿ, ಒಟ್ಟೊಟ್ಟಾಗಿ ಮೇಲೆ ಮೇಲೆ ಸುಳಿದು ಜಾರಿದುವು. ಇವುಗಳ ಮಧ್ಯದಲ್ಲಿ ಆಗಾಗ ಗಾಯತ್ರೀ ಜಪದಂತೆ 'ಭಾವ ಹೋದರು. ಗಂಗು ಹೇಗಾಗಿದಾಳೆ! ಅಯ್ಯೋ ಅಕ್ಕ!' ಎಂದು ಹೇಳಹೇಳಿಕೊಂಡು ಬಿಸುಸುಯ್ಯುತ್ತಿದ್ದನು. ಬೆಳಗಾಗುವುದರೊಳಗಾಗಿ ತನಗೆ ಹುಚ್ಚೇ ಹಿಡಿಯುವುದೋ—ಎನ್ನಿಸಿತು.

೪

ಮಾರನೆಯ ಬೆಳಿಗ್ಗೆ ಸ್ವಾಮಿಯವರು ಎಲ್ಲರಿಗಿಂತಲೂ ಮುಂದಾಗಿ ಎದ್ದು, ಆಶ್ರಮದ ಆವರಣದಲ್ಲಿ ಕಥಪಥ ತಿರುಗುತ್ತಿದ್ದರು. ಸ್ವಾಭಾವಿಕವಾಗಿ ಏನನ್ನೋ ಯೋಚಿಸುತ್ತ ಕಲೆ ತಗ್ಗಿಸಿಕೊಂಡಿದ್ದುದರಿಂದ, ಅವರಿಗೆ ವಿಶ್ವಾನಂದನು ಹತ್ತಿರಬರುವ ವರೆಗೂ ಗೊತ್ತಾಗಲಿಲ್ಲ. ಕತ್ತೆತ್ತಿ ನೋಡಿದಾಗ, ಕಮ್ಮಿ ಬಳೆಯಲ್ಲಿ

ಗರ್ಭ ನಿರೋಧದ ಸಾಧನಗಳು

ಗಂಡಸರ ಪುರ್ಮಚೀಲ ಬಹಳ ತಾಳಿಕೆಯುಳ್ಳದ್ದು		೧ ಕ್ಕೆ ೧-೪-೦
,, ,, ಸಾಧಾರಣ	,,	೧ ಕ್ಕೆ ೧-೦-೦
,, ,, ಸಾದಾ	,,	೧ಕ್ಕೆ ೦-೮-೦
,, ಮಣಿ ಕಂಚುಕ	,,	೧ಕ್ಕೆ ೦-೮-೦
ಪುರುಷೇಂದ್ರಿಯ ಬೆಳೆಯದಂತೆ, ಬಾಹ್ಯ ಸುಖ ವ್ಹಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ		೧ಕ್ಕೆ ೨೫-೦-೦
ಬೀಜಾಂತಕ ತೈಲ		ಬಾ. ೧ ಕ್ಕೆ ೧-೦-೦
ಹೆಂಗಸರಿಗೆ ಜಿಕ್ಕಪೆಸರಿ	ನಂ. ೧	೧-೮-೦
,, ,,	ನಂ. ೨	೧-೪-೦
,, ,,	ನಂ. ೩	೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ		೧೨-೦-೦

ಬೆಲೆಯನ್ನೂ ಅಂಚೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

ವಿಶ್ವಾನಂದನು ಬಿಳಿಯ ಬಟ್ಟೆಯನ್ನುಟ್ಟು ತಲೆತಗ್ಗಿಸಿ ನಿಂತಿದ್ದುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಅವರು ತಮ್ಮ ಆಶ್ಚರ್ಯ-ಅನುಮಾನಗಳನ್ನು ನುಂಗಿಕೊಂಡು ನಸುನಗುತ್ತ "ಏನಪ್ಪ, ಇಷ್ಟು ಮುಂದಾಗಿ ಎದ್ದು ಬಂದಿದ್ದೀಯ?" ಎಂದು ಕೇಳಿದರು.

"ಗುರುಗಳೆ!...." ಅವನ ಮಾತು ಅಲ್ಲಿಗೇ ನಿಂತಿತು.

"ಹುಂ. ಹೇಳು. ಏನು ಸಮಾಚಾರ?" ಅವರು ಪ್ರೋತ್ಸಾಹಿಸಿದರು.

ಅವನು ಇನ್ನೂ ಕೆಲವು ಗಳಿಗೆ ಸುಮ್ಮನಿದ್ದನು. ಅವರು ಅತುರಪಡಿಸಲಿಲ್ಲ. ಕೇಳಲು ಸಿದ್ಧವಾಗಿ ಮಾತ್ರ ನಿಂತಿದ್ದರು.

"ಗುರುಗಳೆ, ನಾನು....ನಾನು ಗೃಹಸ್ಥಾಶ್ರಮಕ್ಕೆ ಹೋಗಲು ನಿರ್ಧರಿಸಿದ್ದೇನೆ." ವಿಶ್ವಾನಂದನು ನಿದಾನವಾಗಿ, ಆದರೆ ದೃಢವಾಗಿ ಹೇಳಿಬಿಟ್ಟನು.

"ಅ?" ಸ್ವಾಮಿಯವರಿಗೆ ಛಳಕು ಹೊಡೆದಂತಾಯಿತು.

"ಹುಂ, ಗುರುಗಳೆ."

ಸ್ವಾಮಿಯವರು ಮೌನವಾಗಿ ಶಾಂತವಾಗಿ ದೀರ್ಘಾಲೋಚನೆ ಮಾಡಿದರು. ವಿಶ್ವಾನಂದನು ವಿಚಾರವನ್ನು ವಿಶದಪಡಿಸಬೇಕೆಂದಿದ್ದರೂ ಅವರ ಮೌನವನ್ನು ಛೇದಿಸಲು ಇಷ್ಟಪಡಲಿಲ್ಲ. ಅವರು ಕಾರಣವನ್ನು ಕೇಳಿದಾಗ ಎಲ್ಲವನ್ನೂ ಹೇಳುವುದಾಗಿ ನಿಶ್ಚಯಿಸಿ ಸುಮ್ಮನಿದ್ದನು. ಆದರೆ ಅವರು ಹಾಗೆ ಕೇಳಲಿಲ್ಲ.

"ಅಪ್ಪ, ನಿನ್ನ ವಿಷಯವನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ನೀನು ಯಾವ ಸಂದರ್ಭದಲ್ಲೂ ಯೋಗ್ಯವಾಗಿಯೇ ನಡೆಯುವೆಯೆಂಬ ಭರವಸೆ ನನಗಿದೆ. ಹಾಗೇ ಆಗಲಿ. ಹೋಗಿ ಬಾ. ಶುಭವಾಗಲಿ!" ಎಂದುಬಿಟ್ಟರು.

ಇಷ್ಟು ಧಾರಾಳದ ಮುಂದೆ, ಇಷ್ಟು ನಂಬಿಕೆಯ ಮುಂದೆ ವಿಶ್ವನಾಥನು ಮೂಕನಾದನು. ಇತ್ಕೊಂದು ಕಾಲದ ಅವರ ಬಳಕೆಗಳು ಹರಿಯುವ ಹೊತ್ತಿನಲ್ಲಿ, ಅವನಿಗೆ ದುಃಖವು ಹತ್ತಿಬಂದಿತು. ಹೇಗೋ ಕಷ್ಟಪಟ್ಟುಕೊಂಡು "ಗುರುಗಳೆ, ಈ ವಿಚಾರವನ್ನೆಲ್ಲ ತಮಗೆ ಮುಂದೆ ತಿಳಿಸುತ್ತೇನೆ. ಈಗ ತಮ್ಮನ್ನು ಬಂದಿಸುವುದು ಮಾತ್ರ ನನಗೆ ಸಾಧ್ಯ" ಎಂದು ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಹೊರಟು ಹೋದನು. ಸ್ವಾಮಿಯವರು ಅವನ ಕಡೆಗೇ ನೋಡುತ್ತಿದ್ದು, ಅವನು ಮರೆಯಾದ ಮೇಲೆ ದೀರ್ಘವಾಗಿ ನಿಟ್ಟುಸಿರನ್ನು ಬಿಟ್ಟು ಆಶ್ರಮವನ್ನು ಒಳಹೊಕ್ಕನು.

ಆ ದಿನ ಆಶ್ರಮದಲ್ಲೆಲ್ಲ ಬಹಳ ಗುಜುಗುಜು. ಸ್ವಾಮಿಯವರ ಶಿಷ್ಯರೊಳಗೆ ಬಹಳ ಚರ್ಚೆಯಾಯಿತು. ಅವರಲ್ಲಿ ವಿಶ್ವಾನಂದನ ನೇರ್ಮೆಯನ್ನು ತಿಳಿದು ಅವನನ್ನು ಹಿಂಬಾಲಿಸುತ್ತ ಅವನೊಡನೆ ಸ್ನೇಹದಿಂದಿದ್ದವರನ್ನು ಅವನ ಈ ನಡತೆಯು ಆಶ್ಚರ್ಯಗೊಳಿಸಿತು, ಮಂಕಾಗಿಸಿತು. ಇಲ್ಲಿಯವರೆಗೆ ಅವನೊಡನೆ ಸ್ಪರ್ಧಿಸಿ ಸೋತು ಅವನನ್ನು ದ್ವೇಷಿಸುತ್ತಿದ್ದವರು, ಈಗ ಅವನನ್ನು ಹೀಯಾಳಿಸಿದರು, ದೂಷಿಸಿದರು. ಮಧ್ಯಾನ್ಹ ಸ್ವಾಮಿಯವರೂ ಶಿಷ್ಯರೂ ಊಟಕ್ಕೆ ಕುಳಿತಿದ್ದಾಗ ಒಬ್ಬ ಶಿಷ್ಯನು ಅಪಹಾಸ್ಯಧ್ವನಿಯಿಂದ "ಗುರುಗಳೆ, ಅವನಲ್ಲಿ ಅಷ್ಟೊಂದು ನಂಬಿಯನ್ನು ಇಟ್ಟುಕೊಂಡಿದ್ದಿರಲ್ಲ. ಈಗ ನೋಡಿ, ಅವನ ಯೋಗ್ಯತೆಗೊತ್ತಾಯ್ತೆ?" ಎಂದು ನಕ್ಕನು.

"ಯಾಕಪ್ಪ? ಯೋಗ್ಯತೆ ಏನಾಯ್ತು?" ಸ್ವಾಮಿಯವರು ಶಾಂತವಾಗಿ ಕೇಳಿದರು.

"ಏನಾಯ್ತು? ಹೆಣ್ಣಿನ ಆಶೆಗೆ ಬಿದ್ದದ್ದು ಸಾಲದೆ? ಕೆಲವರು ಗೊಳ್ಳೆಂದು ನಕ್ಕರು.

"ಹುಂ, ಯಾವ ಹೆಣ್ಣಿನಾಶೆ ತಾನೆ ಇಲ್ಲಿ ಅವನಿಗಿದ್ದ ದೊಡ್ಡ ಆಶೆ, ಆಕಾಂಕ್ಷೆಗಳನ್ನು ತೊರೆಯಿಸಲು ಸಾಧ್ಯವಾದೀತು? ಹಾಗ್ಗೀ ಉಹುಂ!" ಗುರುಗಳು ತಲೆಯಾಡಿಸಿದರು.

"ಅದೇನೋ ತಮ್ಮ ನಂಬಿಕೆ. ಅಂತೂ ಸಂನ್ಯಾಸವನ್ನು ಬಿಟ್ಟು ಸಂಸಾರಕ್ಕೆ ಸೇರಿದನಲ್ಲ!" ಒಬ್ಬನು ಒತ್ತಿ ಹೇಳಿದನು.

"ಅಪ್ಪ, ಸಂನ್ಯಾಸವೆಂದರೆ ಸಂಸಾರವನ್ನು ತೊರೆಯುವುದಲ್ಲ, ಸ್ವಾರ್ಥವನ್ನು ತೊರೆಯುವುದು!" ಸ್ವಾಮಿಯವರು ಗಂಭೀರವಾಗಿ ಪೂರ್ತಿಮಾಡಿದರು.

ಸುಖಕರವಾದ ವಸತಿ! .... ರುಚಿಕರವಾದ ಊಟ!

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ಸೇವಾಧರ್ಮ

ಡಿ. ಶಿವರಾಮ ಕಾರಂತರು, ಪುತ್ತೂರು

★

ಇಂದು ನಮ್ಮ ನಾಡಿನಲ್ಲಿ ಎಲ್ಲರೂ ಒಂದೊಂದು ವಿಧದ ಸೇವೆಮಾಡುವೆವೆಂದು ಹೊರಟಿರುವರು. ಸೇವೆ ಸೇವೆಗಾಗಿಯೆ ಇದ್ದರೆ ಸಮಾಜದಲ್ಲಿ ಶಾಂತತೆ ನೆಲೆಗೊಂಡೀತು; ಆದರೆ ಇವರೆಲ್ಲರ ಸೇವೆ ಸ್ವಾರ್ಥಸಾಧನೆಗಾಗಿ ಇರುವುದರಿಂದ, ಅಶಾಂತಿಯನ್ನೆ ಹಬ್ಬಿಸುತ್ತ ಹೊರಟಿದೆ.

★

ಸೇವಾಧರ್ಮ ಎಂದೊಡನೆಯೇ, ನಾವು ರೂಢಿಯಲ್ಲಿ ತಿಳಿದಿರುವ 'ಧರ್ಮ'ಕ್ಕೂ 'ಸೇವೆ' ಎಂಬ ಮಾತಿಗೂ ನಿಕಟವಾದ ಸಂಬಂಧವಿದೆ,—ಎಂದು ಯಾರು ತಿಳಿಯಬೇಕಾಗಿಲ್ಲ. 'ಸೇವೆ'ಗೆ ಸಂಬಂಧಿಸಿದ ವಿಚಾರವನ್ನಷ್ಟೆ ಇಲ್ಲಿ ಧರ್ಮವಾಗಿಯೇ, ಧರ್ಮಕ್ಕೆ ಹೇಳುತ್ತಿದ್ದೇನಷ್ಟೆ. (ಈ ಸಂದರ್ಭದಲ್ಲಿ 'ಧರ್ಮ' ಎಂಬ ಮಾತಿಗೆ ಬಟ್ಟೆ, ಪುಕ್ಕಟೆ, ದಾನವೆಂಬ ಅರ್ಥ ಬರುತ್ತದೆಯೆಂದು ಯಾರೂ ತಿಳಿದು ಗಾಬರಿಯಾಗಬೇಕಾಗಿಲ್ಲ.) ಈ ಲೇಖನ ಓದುವವರ ಮಟ್ಟಿಗೆ ಅದು ಮುಖತ್ತಾಗಿ ಕೊಟ್ಟ ಉಪದೇಶ ಎಂದು ತಿಳಿದರೆ ಸಾಕು.

ಸೇವೆ, ಸೇವಾ—ಎಂಬುದು ಕನ್ನಡದ ಶಬ್ದವಲ್ಲ. ಪರಭಾಷೆಯಿಂದ ಅದು ಬಂದು ನಮ್ಮಲ್ಲಿ ಸೇರಿಕೊಂಡಿತು. ಆದರೂ ನಾವು ಅದನ್ನು ಬಳಸುತ್ತಿದ್ದೇನೆ. ಇಂಗ್ಲಿಷಿನಲ್ಲಿ ಅದೇ ಮಾತಿಗೆ Service ಎಂಬ ಪದಪ್ರಯೋಗವಿದೆ. ಅದರಿಂದ ಹುಟ್ಟಿದ ಶಬ್ದಗಳು service, servant ಎಂಬವು. Servant ಎಂದರೆ ಅನೇಕರಿಗೆ ನಾಚಿಕೆ. ಕೆಲಸದ ಆಳು, ಜೀತದ ಆಳು—ಎಂದು ಅರ್ಥ ಬರುತ್ತದಲ್ಲಾ—ಎಂಬ ನೋವು. ಕಮ್ಯುನಿಸ್ಟ್ ಯುಗದಲ್ಲೂ ಈ ಶಬ್ದಕ್ಕೆ ಈ ಅರ್ಥ ಬರುತ್ತದೆ ಎಂದು ಯಾಕೆ ತಿಳಿಯಬೇಕು? Servant ಎಂಬ ಮಾತು ಹೇಗೆ ಬಂತು? 'ant' ಎಂಬ ಮಾತು ಹೊತ್ತಿದೆ ನಿಮಗೆ—'ಇರುವೆ'. ಇರುವೆಯಷ್ಟು ಮೆಲ್ಲಗೆ, ಇರುವೆಯಷ್ಟು ಅಲ್ಪವಾಗಿ ಕೆಲಸಮಾಡಿ ದಿನ ತೆಗೆಯುವುದಕ್ಕೆ ಜನ ಬಂಜಬೇಕೆ? Public servant ಆದರೂ ಅಷ್ಟೇನೆ. ಆಯುಷ್ಯವನ್ನೆಲ್ಲ ಸಾರ್ವಜನಿಕರಿಗಾಗಿ ಜೀತದ ಆಳಿನಂತೆ ಹಾಳುಮಾಡಿಕೊಳ್ಳಬೇಕೆಂದು ಆ ಮಾತಿನ ಅರ್ಥವಲ್ಲ. ಜನಕ್ಕಾಗಿ ಮಾಡುವ ಕೆಲಸ ಇರುವೆಯಷ್ಟು ಇದ್ದರೆ ಸಾಕು; ಪಡೆಯುವ ಲಾಭಕ್ಕೂ, ಮಾಡುವ ಕೆಲಸಕ್ಕೂ ಅಷ್ಟು ಆಪಾರ ಅಂತರವಿದ್ದರೇನೇ servant ಆಗಲು ಬರುತ್ತದೆ. ಅಲ್ಲದೆ 'ಸೇವಕ' ಎಂಬ ಮಾತಿಗೆ ಜೀತದ ಆಳು ಎಂಬ ಅರ್ಥವನ್ನು ಯಾವ ಸಾಮ್ರಾಜ್ಯವಾದಿಯೋ, ಭಂಡವಳಗಾರನೋ ಕಟ್ಟಿರಬೇಕೇ ಹೊರತು, ಸ್ವತಂತ್ರರಾದ ನಾವು ಕಟ್ಟುವ ಅರ್ಥ ಎಂದೆಂದೂ ಹಾಗಿಲ್ಲ. 'ಅನ್ನ ಸೇವಿಸಿರಿ', 'ಕಾಫಿ ಸೇವಿಸಿರಿ', 'ಹೊಗೆಬತ್ತಿ ಸೇವಿಸಿರಿ' ಎಂದರೆ—ಅವುಗಳ 'ಲಾಭ ಪಡೆಯಿರಿ' ಎಂದು ಅರ್ಥ ಆಗುತ್ತದೆಯೇ ಹೊರತು, ಅವುಗಳನ್ನು 'ಒಪ್ಪಿಸಿಕೊಳ್ಳಿ' ಎಂದು ಅರ್ಥವೇ ಹೊರತು, 'ಗುಲಾಮರಾಗಿ' ಎಂದು ಅರ್ಥ ಆಗುತ್ತದೆಯೇ? ಇದರ ಸರಿಯಾದ ಅರ್ಥ ತಿಳಿದು ಶಬ್ದ ನಿರ್ಮಿಸಿದ ಉದಾಹರಣೆ ಎಂದರೆ 'ಸ್ವಯಂಸೇವಕ' ಎಂದು ಹೇಳಿದಾಗ, ಇಂಗ್ಲಿಷಿನಲ್ಲಿ ಇದಕ್ಕು ತಲೆಕೆಳಗೆ ಮಾಡಿದ್ದಾರೆ. ಇಂಥವರ ಪಡೆಯನ್ನು volunteer corps ಎಂದಿದ್ದಾರೆ. ಕನ್ನಡದಲ್ಲಿ ಇದರ ಅರ್ಥ ಸ್ಪಷ್ಟವಿದೆ, 'ತನ್ನ ಕೆಲಸ ತಾನು ಮಾಡಿಕೊಳ್ಳುವವ', ಅಥವಾ 'ತನ್ನ ಸೇವೆ ಮಾಡಿಸಿಕೊಳ್ಳುವವ' ಎಂದು ಇದೆಯೇ ಹೊರತು, ಯಾರ್ಯಾರ ಬಟ್ಟೆ, ಚಾಕರಿ ಮಾಡುವ ಬಸವಯ್ಯ ಎಂದು ಯಾರೂ ತಿಳಿದಿಲ್ಲ, ನಂಬಿಲ್ಲ. ಸೇವಿಸಿಕೊಳ್ಳುವುದಕ್ಕೆ ಅತ ಮುಂದಾಗಬೇಕು. ಉಳಿದ ವಿಚಾರದಲ್ಲಿ 'corpse' ನ ಹಾಗೆ ಇರಬೇಕು. ಪರರ ಸೇವೆಗೆ

ಬಹುಮಾನ ೫೦೦ ರೂ.
— ಅದ್ಭುತ ಸಂಶೋಧನೆ —
ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಸ್ಟು ಖರ್ಚು ಪೇಕ.

MAHAKALI ASHRAM
NO. 247, KANPUR.

ಮಲೇರಿಯಾ
ಇನ್ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮೂದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಪೆಣನಾಗಿಯೂ, ಸ್ವಸೇವೆಗೆ ಧುರಂಧರನಾಗಿಯೂ ಇರಬೇಕಾತ. ಶಬ್ದವೇ ಬ್ರಹ್ಮ. ಹೀಗಿರುತ್ತ ಶಬ್ದಕ್ಕಿಲ್ಲದ ಅರ್ಥ ತಂದುಕೊಡುವ ಹಕ್ಕು ಯಾರಿಗೆ ಉಂಟಂತೆ? ಆ ಅರ್ಥ ತಂದುಕೊಡುವ ಬ್ರಹ್ಮ. ನಾದರೂ ಯಾರು? ಆ ವಿಷಯಕ್ಕೆ ಉತ್ತರವಾಗಿ ಶ್ರೀಶಂಕರಾಚಾರ್ಯರೇ ಹೇಳಿದ್ದಾರೆ—'ಅಹಂಬ್ರಹ್ಮಾಸ್ಮಿ' ಎಂದು.

ಇಷ್ಟಿದ್ದರೂ ನಮ್ಮ ಜನ ವಿವಿಧಸೇವೆಗಳನ್ನು ಮಾಡಿ, ಆತ್ಮೋದ್ಧಾರದ ಹಾದಿಯನ್ನು ಹುಡುಕಲು ಅಂಜುತ್ತಿರುವುದನ್ನು ಕಂಡರೆ, ಜನಗೇಕೋ ವ್ಯಥೆಯಾಗುತ್ತದೆ. ರಾಜಸೇವಕ, ದೇಶಸೇವಕ, ಕನ್ನಡಸೇವಕ, ಸಮಾಜದ ಸೇವಕ—ಎಂದೆನಿಸಿಕೊಳ್ಳುವ ಚಪಲ ಪ್ರತಿಯೊಬ್ಬರಿಗೂ ಇದೆ. ಇದ್ದರೂ 'ಶಬ್ದಾರ್ಥ' ತಿಳಿಯದೆ, ಇದೇನೋ ಮಹಾ ತಪಸ್ಸಿನಿಂದ ಬರುವ ಯೋಗ ಎಂದು ತಿಳಿದು ಹಿಂದಾಗುತ್ತಿದ್ದಾರಲ್ಲ! ಏನು ಭೀರುತನ! ಸೇವಕರು ಭೀರುಗಳಾಗಿರಬಾರದು. ಧೈರ್ಯ ಮುಖ್ಯ; ಆತ್ಮಗೌರವ ಮುಖ್ಯ. ಅನ್ನು ಹಿರಿದಾಗಿ ತಿಳಿಯಬೇಕೇ ಹೊರತು ತನ್ನನ್ನು ಕಡಿಮೆಯಾಗಿ ತಿಳಿದು, ಅನ್ಯರನ್ನು ದೊಡ್ಡದಾಗಿ ತಿಳಿದು ಹೆದರುವಂಥ ವಿಷಯ ಇದೇನೂ ಅಲ್ಲ. ಜನ ಜೇಗೆ ನಾನಾವಿಧದ ಸೇವೆಗಳನ್ನು ಮಾಡುತ್ತಾರೆ—ಎಂಬುದನ್ನು ಕಂಡನೋಲೆಯೂ, ಉಳಿದವರು ಅಂಜುತ್ತಿದ್ದಾರಲ್ಲ. ಈ ಅಂಜಿಕೆಗೆ ಕಾರಣ ಉಂಟೇ?

ವಿವಿಧಸೇವೆಗಳ ವಿಚಾರವಾಗಿ ನಾಲ್ಕು ಉಪಯುಕ್ತ ಸಲಹೆಗಳನ್ನು ಕೊಟ್ಟರೆ, ನನ್ನ ಈ ನಿಬಂಧಕ್ಕೆ ಪುಷ್ಟಿಬಂದೀತು. ಮೊದಲು 'ದೈವಸೇವೆ'ಯಿಂದ ತೊಡಗಿ, ಕೊನೆಗೆ ಕನ್ನಡಸೇವೆಯಲ್ಲಿ ನನ್ನ ಸಲಹೆ ಮುಗಿಸಬೇಕೆಂದಿದ್ದೇನೆ. 'ದೇವರಸೇವೆ'— ಇದಾದರೂ ಕಷ್ಟದ್ದೇ? ಸಾಮಾನ್ಯವಾಗಿ ನಾವೆಲ್ಲರೂ ಅದನ್ನು ಮಾಡುತ್ತಲಿದ್ದೇವೆ. ದೇವರು ದೊಡ್ಡವನೆಂದು ಒಪ್ಪಿಕೊಂಡುಬಿಡೋಣ ಅಷ್ಟು ಮಾಡಿದೆವೆಂದರೆ ಮುಂದೆ ಅವನಿಂದ ಯಾವ ತಕರಾರೂ ಬರುವುದಿಲ್ಲವೆಂದು ನನಗೆ ಗೊತ್ತುಂಟು. ಇಂಥ ಗುಡಿಯನ್ನೇ ಕಟ್ಟಿ, ಇಂಥ ಗೊಂಬೆಯನ್ನೇ ಹೂಡಿರಿ, ಇಂಥ ಪೂಜೆಯನ್ನೇ ಸಲಿಸಿರಿ, ಎಂದು ಅವನು ಎಂದಾದರೂ ಹೇಳಿದ್ದುಂಟೇ? ಜನಕ್ಕೆ ಖುಶಿಬಂದಾಗ, ವಿರಾಮವಿದ್ದಾಗ, ಮನಸ್ಸು ಹೇಳಿದಾಗ— ಗುಡಿ ಕಟ್ಟಿದ್ದಾರೆ, ಮೂರ್ತಿ ನೆಟ್ಟಿದ್ದಾರೆ. ಅವಕಾಶವಾದಾಗಲೆಲ್ಲ ಪೂಜೆ, ಅಲ್ಲ 'ಸೇವೆ' ಸಲ್ಲಿಸುತ್ತಿದ್ದಾರೆ. ರಾಗದ ಖುಶಿ, ಸಂಗೀತದ ಖುಶಿ ಬಂದರೆ ಮೃದಂಗ ಚನುತ್ಯಾರ ಸಹಿತವಾಗಿ ಅವನಿಗೆ ಬೇಸರು ಬರುವಷ್ಟು ಸಂಕೀರ್ತನೆ ಮಾಡಿದ್ದಾರೆ. 'ಅಪಸ್ವರ ತುಂಬಿದೆ, ತಾಳ ತಪ್ಪಿದೆ' ಎಂದು ಆಕ್ಷೇಪಿಸಲಾರದ ದೇವರ ಮುಂದೆ, ನಾವು ಹಾಡಿದ್ದೇ ಸಂಗೀತವಾಗುತ್ತದೆ. ಅವನ ಮುಂದೆ ಮಂತ್ರ, ಜಪ ಹೇಳಿದ್ದೇವೆ. ಅದರ ಅರ್ಥ ನಮಗಾಗದಿದ್ದರೂ, ಲಾಲಿ ಹಾಡಿದ ಹಾಗೆ ಪಾಡಿದ್ದೇವೆ. ಕಿವಿ ಒಡೆಯುವಷ್ಟು ಘಂಟೆ, ಜಾಗಟೆ ಬಾರಿಸಿ, ಗಂಟಲೊಡೆಯುವ ಧ್ವನಿಯಿಂದ 'ಮರಾ ಮರಾ' ಎಂದು ಭಜಿಸಿದ್ದೇವೆ. ಒಂದು ಗಳಿಗೆಯಾದರೂ— 'ನಿನ್ನ ಕಿವಿಗೆ ಇದು ಇಂಪೇ?' ಎಂದು ದೇವರನ್ನು ಕೇಳಿದ್ದೇವೆಯೇ? ಇಂಪಲ್ಲ ಎಂದು ಅವನು ಹೇಳಿದರೆ, ಬಿಟ್ಟುಬಿಡುತ್ತೇವೆಯೇ? ನಮ್ಮ ಸಂತೋಷಕ್ಕಾಗಿ ಆಡುವ ನಾಟಕ ಅದು. ಮುಂದೆ ಸಲ್ಲಿಸುವ ಪ್ರಸಾದ, ನೈವೇದ್ಯಗಳ ವಿಚಾರ ನೋಡೋಣ. ಖರ್ಚಿನ ಬಾಬುಗಳವು. ಪೇಡೆ, ಲಡ್ಡು, ಚಕ್ಕುಲಿ, ಯಾವುದೇ ಇರಲಿ, ಹಣ್ಣು-ಕಾಯೇ ಇರಲಿ, ಹೂವೇ ಆಗಿರಲಿ— ನಮಗೆ ದುರ್ನಾತ ಕಂಡ ಹೂವನ್ನು ಅವನಿಗೆ ಕೊಟ್ಟಲ್ಲ ನಮ್ಮ ಬಾಯಿಗೆ ರುಚಿಸದ ಬೇವು, ಕಿರಾತಕಡ್ಡಿಯ ಕಷಾಯ ಅವನಿಗೆ ಒಪ್ಪಿಸಿಲ್ಲ. ಅವನಿಗೆ ತೋರಿಸಿದ ತಿಂಡಿ ಏನಿದ್ದರೂ ಅವನು ಮುಟ್ಟಿದ್ದಿಲ್ಲ. 'ಮುಟ್ಟುವುದಿಲ್ಲ' ಎಂದು ಗೊತ್ತಿದ್ದೇ ತೋರಿಸಿದ್ದೇವೆ. ನಮ್ಮ ನಮ್ಮ ನಾಲಗೆಗಳ ಚಾಪಲ್ಯಕ್ಕೆ ಬೇಕಾದ ತಿಂಡಿ ತಯಾರಿಸಿ, ಜಠರದಲ್ಲಿ ಅಗ್ನಿ ಪ್ರಜ್ವಲಿಸುವತನಕ ಕಾದು, ಬೊಬ್ಬಿಟ್ಟು— ಗಳಿಗೆದಾಟದರೆ ಜಪ ಬೇಗ ಮುಗಿಸಿ, ದೇವರ ಮುಂದಿಟ್ಟ ಆ ನೈವೇದ್ಯವನ್ನೆಲ್ಲ ನಾವೇ ತಿಂದಿದ್ದೇವೆ. ದೇವಸ್ಥಾನದ ಇಲಿಗೂ ಒಂದಿಷ್ಟು ತಿಂಡಿ ಕೊಟ್ಟಲ್ಲ. ಹೀಗಿರುತ್ತ, ದೇವರಸೇವೆ ಕಷ್ಟವೇ? ಯಾರು ಮಾಡುವುದಿಲ್ಲ? ಯಾರು ಮಾಡಬಾರದು? 'ಜನಸಾಮಾನ್ಯರಿ'ಗೆ ಅದು ಕೀರ್ತಿ ತಂದುಕೊಡದೆ ಇರಬಹುದು. ಜನಸಾಮಾನ್ಯವಾದ ಯಾವ ವಸ್ತು ಕೀರ್ತಿ ತಂದುಕೊಡುತ್ತದೆ? ಉಳಿದವರಿಗಿಂತ ಹುಸು ಚೆನ್ನಾಗಿ ಹಾಡಿದರೆ 'ಕೀರ್ತಿ' ಬಂದೇ ಬರುತ್ತದೆ. ದಿನದ ಇಪ್ಪತ್ತುನಾಲ್ಕು

ಕಾಸೂ ಇದೇ ರೀತಿ ಸೇವೆಮಾಡುತ್ತೇನೆ ಎಂದು ಕುಳಿತರೆ, ನಿಮ್ಮ ಸುತ್ತಲು ಒಂದು ಆಶ್ರಮ ತನ್ನಂತೆಯೇ ನಿರ್ಮಾಣವಾಗುತ್ತದೆ.

ಹೀಗಿದ್ದರೂ 'ಸಾಕು ಸಾಕು ಮನುಜ ಸೇವೆ' ಎಂದೆರು ಕನಕದಾಸರು. ದೇವರಸೇವೆ ಸಾಕು ಎಂದು ಅವರು ಹೇಳಲಿಲ್ಲ. 'ಮನುಜ ಸೇವೆ ಸಾಕು' ಎಂದರು. ಮನುಜ ಅಸ್ಪರ ವಿಷಯದಲ್ಲಿ ತಕರಾರು ಮಾಡುವ ಪ್ರಾಣಿಯಾದುದರಿಂದ ಹಾಗೆ ಹೇಳಿದರು. ಮನುಜಸೇವೆ ಮಾಡುವವರು ದೇಶಸೇವೆಯನ್ನೋ, ಸಮಾಜಸೇವೆಯನ್ನೋ, ಕನ್ನಡದ ಸೇವೆಯನ್ನೋ ಮಾಡಬೇಕು. ಗುಡಿ-ಗೋಪುರಕ್ಕೆ ಹೋಗುವುದಲ್ಲ.

'ದೇಶಸೇವೆ'ಯಾದರೆ ತುಂಬ ಆಕರ್ಷಕವಾದ ಕೆಲಸ. ದೇಶ ದೊಡ್ಡದು, ದೇವರಂತೆ ಮಾತನಾಡಲಾರದ ವಿಸ್ತಾರವಾದ ಭೂಮಿ. ಮಾಡಿದ ಸೇವೆ ಕೊಳ್ಳಬೇಕು. ದೇಶಸೇವೆಯೆಂದ ಮಾತ್ರಕ್ಕೆ ಅಲ್ಲಿನ ಜನದ ಕೆಲಸ ಎಂದು ಯಾಕೆ ತಿಳಿಯಬೇಕು? ದೇಶದ ಮೇಲೆ ಜನಕ್ಕೆ ಪ್ರೀತಿ ಹುಟ್ಟಬೇಕು, ದೇಶದ ಮೇಲೆ ಮನ್ನಣೆ ಯಿದ್ದು ದೇಶಸೇವಕರು ಹೇಳಿದ ಹಾಗೆ ಜನ ಕೇಳಬೇಕು—ಎಂದು ಉಪದೇಶಿಸುವ ಕೆಲಸ ಕಷ್ಟದ್ದೇ? ಹಾದಿಯಲ್ಲಿ ಹೋಗುವವನೂ ಕೂಡ ಹಳ್ಳಕ್ಕೆ ಬೀಳುವುದುಂಟು. ಹಾಗೆ ದೇಶಸೇವೆ ಮಾಡುವ ವ್ಯಕ್ತಿ ತುರಂಗಕ್ಕೆ ಬಿದ್ದರೆ, ಆದೊಂದು ಆಕಸ್ಮಿಕ ಅವಘಡವೇ ಹೊರತು, ಅನಿವಾರ್ಯ ಪ್ರಸಂಗವಲ್ಲ. ಒಮ್ಮೆ ಬಿದ್ದು ಕಷ್ಟಪಟ್ಟ ಎಂದರೂ—ಏನು ಹಾನಿ? 'ಅಯ್ಯೋ ಪಾಪ' ಎಂದು ಹಳ್ಳಕ್ಕೆ ಬಿದ್ದವನನ್ನು ಕಂಡು ಜನ ಮರುಗುವುದಿಲ್ಲವೇ? ಹಾಗೆಯೇ ತುರಂಗಕ್ಕೆ ಹೋದವನನ್ನು ಕಂಡು 'ಅಯ್ಯೋ ಪಾಪ, ದೇಶಕ್ಕಾಗಿ ಏನೋ ಕಷ್ಟಪಟ್ಟ' ಎಂದು—ಯಾರೆ ದೇಶವಿದು ಎಂದು ತಿಳಿಯಲಾರದ ಜನ, ತನ್ನ ದೇಶಕ್ಕೆ ತಾನು ಮಾಡಿದ ಕೆಲಸ ಹೆಚ್ಚೆಂದು, ತಿಳಿಯಲಾರದೆ, ಹೊಗಳುತ್ತಾರೆ. ಹೀಗಾಗಿ ತುರಂಗವಾಸ ತಪಸ್ಸಿನ ಕಾಲವಾಗಿ ಬಿಡುತ್ತದೆ. 'ಋಷಿತ್ವ' ಬರುತ್ತದೆ ದೇಶ ಸೇವಕನಿಗೆ. ಅದನ್ನು ಬಿಟ್ಟು,—ದೇಶಸೇವಕರಾದ ಜನ ನಿಮ್ಮ ಮನೆಯ ಹಿತ್ತಲು, ತೋಟ ಜೊಕ್ಕವಾಡಬೇಕು—ಅನ್ನುತ್ತೀರಾ? ಹಾರಿ-ಗುದ್ದಲಿ ಹಿಡಿದು ಊರ ವೈದ್ಯಾನಿನಲ್ಲಿ ಕೃಷಿನಾಡಬೇಕು ಅನ್ನುತ್ತೀರಾ? ಆತ ಅನ್ನುವುದೇನು? 'Grow more Food' ಎಂದು ಯಾರಿಗೆ? ಉಳಿದವರಿಗೆ ಹೇಳುವ ಮಾತದು. ಅವನ ಪಾಲಿಗೆ ನೀವು ತೊಡುವ ಕಾಫಿ-ಉಪಹಾರಗಳೇ ಅತಿಯಾಗಿ ಹೋಗುತ್ತವೆ; ಸಹಿಸುವುದೇ ಕಷ್ಟವಾಗುತ್ತದೆ. ಅವನಿಗೆ ಅನ್ನ ಬೇಕಾಗಿಲ್ಲ. ಬೇಕಾದ್ದು ನಿಮಗೆ ನೀವು ಬೇಕಾದ್ದಕ್ಕಿಂತಲೂ ಹೆಚ್ಚಾಗಿ ಬೆಳೆದರೆ, ಅವನಿಗೆ ತನ್ನಂತೆಯೇ ಅದು ಸಿಗುವುದಿಲ್ಲವೇ?

'ನೀವು ಒಗ್ಗಟ್ಟಾಗಿರಿ,' 'ಜನಗಳಲ್ಲಿ ಒಡಕಿರಬಾರದು,' 'ಎಲ್ಲರ ಮನಸ್ಸು ಒಂದಾಗಿರಬೇಕು' ಎಂದು ಆತ ಹೇಳಿದರೆ' ಆತನ ಮನಸ್ಸಿನಂತೆ ನಿಮ್ಮ ಮನಸ್ಸು ಇರಬೇಕು ಎಂಬುದೇ ಅರ್ಥ. ನಿಮ್ಮ ಮನಸ್ಸಿನ ಹಾಗೆ ಆತನ ಮನಸ್ಸು ಇರ. ತ್ತದೆಯೇ? ಅನು ಸಾಧ್ಯವೇ? ಆತ 'ಒಬ್ಬ' ನಿಮ್ಮ ಸಾವಿರ ಮನಸ್ಸುಗಳ ಹಿಂದೆ ಓಡುವ ಬದಲು, ನಿಮ್ಮ ಸಾವಿರ ಮನಸ್ಸುಗಳು ಅವನೊಬ್ಬನ ಮನಸ್ಸಿನ ಹಿಂದೆ ಓಡಿದರೆ ಎಷ್ಟು ಸುಲಭವಿಲ್ಲ ಈ ಕೆಲಸ?

ಮೂರನೆಯ ಮಾತು 'ಸಮಾಜ ಸೇವೆ'. ದೇಶಸೇವೆಗಿಂತ ಇದು ತುಸು ಕಷ್ಟದ್ದು—ಎಂದು ನಾನು ಒಪ್ಪಿಕೊಳ್ಳುತ್ತೇನೆ. ಕಾರಣ ಸಮಾಜ ಎಂದರೆ ಭೌಗೋಲಿಕ ಪ್ರಾಂತವಲ್ಲ. ಮಾತು ಬರುವ ಮಂದಿಯ ಸಮುದಾಯ. ಸಮುದಾಯ ಎಂದಮೇಲೆ ಅದರಲ್ಲಿ ಜನ ಇದ್ದಷ್ಟು ನಾಲಗೆಗಳು ಇದ್ದೇ ಇವೆ. ಅವರ ಮಾತನ್ನು ಸಮಾಜಸೇವಕ ಕೇಳುವುದೂ ಇಲ್ಲ. ಕೇಳುವುದರಲ್ಲಿ ಅರ್ಥವೂ ಇಲ್ಲ. ಸಮಾಜ ತಮ್ಮ ನಾಲಗೆ ಬಂದುಹಿಡಿದು, ಅವನ ಮಾತು ಕೇಳಬೇಕಾದ್ದು ನ್ಯಾಯ. ವ್ಯಕ್ತಿಗೆ ನಾಲಗೆ ಉಂಟು, ಸಮಾಜಕ್ಕೆ ನಾಲಗೆ ಇದ್ದೂ ಇಲ್ಲ ಒಬ್ಬ ಆಡಿದರೆ ಮಾತು, ನೂರು ಜನರು ಆಡಿದರೆ—ಗೊಂದಲ. ಅಂಥ ಸಮಾಜಕ್ಕೆ ಉಪದೇಶ ಮಾಡಿ, ಅದರ ಕಿವಿಯನ್ನು ಉಬ್ಬಿಸಿ, ಅರಳಿಸಿ ತನ್ನ ಸೇವೆ ತಾನು ಮಾಡಿಸಿಕೊಳ್ಳಬೇಕು—ಸಮಾಜ ಸೇವಕ. ತಾನಿದ್ದರೆ ಜಗ ಉಂಟು.

'ಕನ್ನಡದ ಸೇವೆ' ಇದು ದೇವರ ಸೇವೆಯಷ್ಟೇ ಸುಲಭ. ಆದರೆ ಇದು ಹೊಸದಾಗಿ ಹುಟ್ಟಿದ ಧರ್ಮವಾದುದರಿಂದ, ಇದರ ವಿಚಾರದಲ್ಲಿ ದೊಡ್ಡ ಕಾಲ್ಪನಿಕ ಭ್ರಮೆ ಹುಟ್ಟಿದೆ ಜನಗಳ ಮನಸ್ಸಿನಲ್ಲಿ. ಭಾಷಾಸೇವೆಯೆಂದರೆ ಬಹಳ ದೊಡ್ಡ ವಸ್ತು. ಕವಿ ಆಗಬೇಕು, ವಾಗ್ಮಿ ಆಗಬೇಕು. ಪಂಡಿತನಾಗಬೇಕು—ಎಂದು ಏನೇನೋ ತಿಳಿಯುತ್ತಾರೆ ಜನ. ಕನ್ನಡ ಮಾತು ಬಲ್ಲ ಯಾವ ವ್ಯಕ್ತಿಯೂ ಈ ಸೇವೆಮಾಡಬಹುದು ಎಂದು ನನಗೆನಿಸುತ್ತದೆ. ಕನ್ನಡದಲ್ಲಿ ಬರೆಯುವ ತಾಕತ್ ಇಲ್ಲದಿದ್ದರೂ ಮಾತನಾಡುವುದಕ್ಕೆ ಬಾಯಿ ಇಲ್ಲವೇ? ನಿನಗೆ ಬರೆಯಲು ಅಕ್ಷರಭ್ಯಾಸವಿಲ್ಲದೆ ಹೋದರೆ ಗುಮಾಸ್ತರನ್ನಿಟ್ಟುಕೊಳ್ಳಿ. ಕನ್ನಡ ಪಾರ್ಟ್‌ಪೆಂಡ್ ಬಲ್ಲವರಿಲ್ಲವೆ? ಏನು ಕಷ್ಟನಂತೆ? ನಾಲಗೆ ದೊಡ್ಡದಿರಬೇಕು. 'ಸೇವೆ' ಅಂದರೆ

ಮನೋಹರ ಗ್ರಂಥಮಾಲೆ, ಧಾರವಾಡ.

೧೫ ವರ್ಷಗಳಿಂದಲೂ ಹೊರಡುತ್ತಲಿದ್ದು, ಈಗಾಗಲೇ ೯೦ ಕ್ಕಿಂತ ಹೆಚ್ಚಿಗೆ ಕಥೆ-ಕಾದಂಬರಿ-ನಾಟಕಗಳನ್ನು ಬೆಳಕಿಗೆ ತಂದಿದೆ.

ಇದೀಗ ಹೊರಬಿದ್ದಿರುವವು

ವೇಣುಮಾವ — ಬಹುಮಾನ ಪಡೆದ ಬರಿಹಗಳು — ಮುನಿಯನ ಮಾದರಿ

ವಾ. ಚಂ. ಸ್ಥಳಿಕರಿಗೆ ರೂ. ೫—೮—೦
ಪರಸ್ಥಳದವರಿಗೆ ರೂ. ೬—೮—೦

ಸೇವಿಸುವ ಪದಾರ್ಥ 'ಕನ್ನಡ' ವಾಗಿರಬೇಕು. ಉಸಿರು ಉಸಿರಿಗೂ ನಿಮ್ಮ ಬಾಯಲ್ಲಿ ಕನ್ನಡ ಬರುತ್ತಲೇ ಇರಬೇಕು. art for arts sake ಎಂದು ಕೇಳಿಲ್ಲವೇ ನೀವು? ಕಲೆ ಕಲೆಗಾಗಿ. (ಕೊಲೆಗಾಗಿ ಕೊಲೆ!) ಬೇರೆ ಪ್ರಯೋಜನ ಅದರಿಂದ ಬರಬೇಕಾಗಿಲ್ಲ. ಮಾತನಾಡುವುದಕ್ಕೆ ವಿಚಾರಬೇಕು, ಪಾಂಡಿತ್ಯಬೇಕು, ಸ್ಫೂರ್ತಿಬೇಕು, ಪ್ರತಿಭೆಬೇಕು—ಇಂಥದನ್ನೆಲ್ಲ ನಂಬಿಕೊಳ್ಳಬೇಡಿ. ಇನ್ನೊಬ್ಬರಲ್ಲಿ ಇಲ್ಲದ್ದನ್ನು ತಮ್ಮಲ್ಲಿದೆ ಎಂದು ಊಹಿಸಿ, ಅಥವಾ ತಮ್ಮಲ್ಲಿದ್ದುದನ್ನು ಅದೇ 'ಮಹಾ' ಎಂದು ತಿಳಿದು, ಆಡುವ ಜನಗಳ ಇಂಥ ಮಾತಿಗೆ ನೀವು ಮೋಸಹೋಗಬೇಡಿ. ನಾಸೊಮ್ಮೆ, ಒಬ್ಬ ಕನ್ನಡ ಸೇನಕರು ಅಮೋಘವಾಗಿ ಮಾತನಾಡಿದ್ದನ್ನು ಕೇಳಿದ್ದೇನೆ. ಅವರು ಮೂರು ತಾಸುಗಳ ತನಕ ಮಾತನಾಡಿ 'ವಿಷಯ'ಕ್ಕೆ ಬಂದೆನೆಂದರು ಮುಂಚೆ ನಾಲ್ಕು ತಾಸು ಮಾತನಾಡಿದರು. ಏನು ಆ ವಾಗ್ಝರಿ! ಹಿಮವಂತದಿಂದ ಗಂಗೆ ಹರಿದಂತೆ ಹರಿದಳು ವಾಣಿ. ಗಂಗೆ ಏನನ್ನು ತಂದೀತು? ವಿಷಯ ತರುತ್ತದೆಯೇ? 'ನಾಣಿಗೆ' 'ನೀರೇ' ವಿಷಯ. ಹೀಗಾಗಿ ಅವರ ಏಳು ತಾಸಿನ ಉಪನ್ಯಾಸದಲ್ಲಿ 'ಮಾತೇ' ಮುಖ್ಯವಾಗಿತ್ತು. ಅಷ್ಟೊಂದು ದಮ್ಮು ಹಿಡಿದು, ನೀವು ಮಾತನಾಡಬಲ್ಲಿರಾದರೆ, ಕನ್ನಡ ಸೇವೆ ಮಾಡಬಹುದಲ್ಲ? ಸಂಬಳ ಕೊಟ್ಟು, ಅಥವಾ ಬಿಟ್ಟಿ ಕಾಫಿ ಕೊಟ್ಟು, ನಿಮ್ಮ ವಾಕ್ ಪ್ರವಾಹವನ್ನು ಮಸಿ ಪ್ರವಾಹವನ್ನಾಗಿ ಮಾಡಿದರೆ ಉದ್ಗ್ರಂಥವಾಗುತ್ತದೆ.

ಹೌದು, ಏಳುತಾಸು ಮಾತನಾಡುವುದಕ್ಕೆ 'ಸ್ಫೂರ್ತಿ' ಬೇಡವೇ ಎಂದು ನೀವು ಕೇಳಬಹುದು. ಸ್ಫೂರ್ತಿ ಎಂದರೆ ಏನು? ಆ ಸಂಸ್ಕೃತ ಪದಕ್ಕೆ ಯಾಕೆ ಗಾಬರಿಯಾಗುತ್ತೀರಿ? 'ಹುಮ್ಮಸ' ಮಾತನಾಡುವ 'ಉಮೇದು' ಎಂಬುದೇ ಅದರ ಅರ್ಥ. ಉಮೇದು ಈ ಕೆಲಸಕ್ಕೂ ಬೇಕು; ಎಲ್ಲ ಕೆಲಸಗಳಿಗೂ ಬೇಕು. ಅಷ್ಟೇನೆ. ಮಾತನಾಡಬೇಕು—ಎಂಬ ಹಂಬಲಬೇಕು. ಪ್ರತಿಭೆ ಗಿತಿಭೆ ಇವೆಲ್ಲ ಭ್ರಾಮಕವಸ್ತುಗಳು. ತಮ್ಮ ಗುಂಪಿಗೆ ಇನ್ನೊಬ್ಬರು ಬಾರದಂತೆ ನಾಡುವ ಅಡ್ಡಿ, ಆಡಚಣೆಗಳು. ನಾವು ಆಡಿದ ಮಾತಿಗೆ ಇನ್ನೊಬ್ಬ—'ಇಂಥ ಅರ್ಥ ಬಂದೀತೇ?' 'ಇದು ಹೀಗಿರಲಾರದೇ' 'ಕವಿ ಹೀಗೆ ಹೇಳಿರಬಹುದೇ?' 'ಅವನ ಉದ್ದೇಶ ಇದಕ್ಕೂ ಆಳವಾಗಿರಬಹುದೇ' ಎಂದು ಅನುಮಾನ ಹುಟ್ಟಿಸಿ, 'ಆ ಗಳಿಗೆಯಲ್ಲಿ ತನಗೆ ಕಂಡದ್ದನ್ನು ಹೇಳಿದೆ' ಎಂದು ತನ್ನ ಶಬ್ದಾರ್ಥದ ಹೊಣೆಯನ್ನು ತಪ್ಪಿಸಿಕೊಳ್ಳುವ ದಾರಿ ಇಂದು. ಏಳುಗಂಟೆಗಳ ಕಾಲ ಮಾತನಾಡುವ ಆಸಾಮಿ, ಅಥವಾ ಕೇಳುವ ಆಸಾಮಿ ಉಪನ್ಯಾಸದ ಹಿಂದಿನದನ್ನಾಗಲಿ, ಅಥವಾ ಮುಂದಿನದನ್ನಾಗಲಿ ನೆನಪಿಟ್ಟುಕೊಳ್ಳಲು ಸಾಧ್ಯವೇ? ಅದು ಸಾಧ್ಯವಿಲ್ಲದ ಮೇಲೆ—ಅದರ ಅರ್ಥ — ಹೀಗಿದೆಯೇ ಎಂದು ಹೇಳುವುದು ಹೇಗೆ? ನಾಳೆ ಕೇಳಿದ ಇಲ್ಲವೆ ಬರೆದುಕೊಂಡ ಇನ್ನೊಬ್ಬನಿಗೆ ಹೇಳುವುದು ಕಷ್ಟವಾಗಿಯೇ ಆಗುತ್ತದೆ. ವಿಚಾರಗಳ ಜೋಡಣೆ ಕಡಿಮೆಯಾದಂತೆ ವಾಗ್ಝರಿ ಅನಿರ್ಬಂಧಿತವಾದಂತೆ, ಊಹೆಗೇ ಶರಣುಹೋಗಬೇಕಾಗುತ್ತದೆ ಜನ. ಆಗ ಅಲ್ಲಿ ಪ್ರತಿಭೆಯನ್ನು ಕಂಡೇ ಕಾಣುತ್ತೀರಿ.

ವಿಷಯ, ವಿಚಾರ, ಮಾತಿಗೆ ಅವಶ್ಯ ಎನ್ನುವುದು ಅಷ್ಟೇ ಶಿಥಿಲವಾದ. ಮಗು ಇರುವಂತೆ ಯುವಕನಿಲ್ಲ, ಯುವಕ ಇರುವಂತೆ ಮುದುಕನಿಲ್ಲ. ನಿನ್ನೆ ಇದ್ದಂತೆ ನಾಳೆ ಇಲ್ಲ. ಜಗತ್ತು ಕ್ಷಣಕ್ಷಣಕ್ಕೂ ಬದಲಿಸುತ್ತಿದೆ. ಹೀಗಿರುತ್ತ ಒಂದೇ ವಿಚಾರವನ್ನು ಏಳುಗಂಟೆಯ ತನಕ ಲಂಬಿಸಿ ಬಂತೇನು? ವಿಚಾರ ಎಂಬುದು ಪ್ರವಾಹವಾಗಿ ಹರಿಯುವ ವಾಣಿಯಲ್ಲಿ ತುಂಬಿದ ಕೊಳೆಯಂತೆ. ಆಟೀಚಿನ ಬಂಡಿಗಳಿಂದ ಕಿತ್ತೊಯ್ಯುವ ಕಸ, ಕಡ್ಡಿ ಮಣ್ಣು, ಮಟ್ಟಿಗಳು, ಇವೆಲ್ಲ ನೀರಲ್ಲಿ ಸಿಲುಕಿ, ಕಲಕಿ ಮೇಳವಿಸಿಬಿಟ್ಟರೆ—ಒಂದೊಂದೇ ವಿಚಾರಾಂಶದ ಲವಲೇಶವೂ ಉಳಿಯುವುದಿಲ್ಲ. ಮಾತಿನ (ವಾಣಿಯ) "ಭರ" ಬೇಕು. ಅದು ಇಷ್ಟ ಬಂದಹಾಗೆ, ಸಿಕ್ಕಿಸಿಕ್ಕಿದಂತಹ ವಿಚಾರಗಳನ್ನೇ, ವಿಚಾರದ ತುಣುಕುಗಳನ್ನೋ ಸೆಳೆದು, ಉರುಳಿಸಿ, ಕಲಕಿ, ಹಾರಿಸಿ ಉಪನ್ಯಾಸದ ಕೊನೆಗೆ ಎಲ್ಲವನ್ನು ನುಂಗುವ ಜನಜಂಗುಳಿಯ ಕಡಲಿಗೆ ಅವನ್ನು ತಳ್ಳಿಬಿಡಬೇಕು.

ಇಷ್ಟೊಂದು ಮಾತಿನ ರಭಸವನ್ನು ಗಳಿಸಿಕೊಳ್ಳುವುದು ಕಷ್ಟವೇ? ಕ್ಷಯ, ಉಬ್ಬಸ, ನೇವಸ, ಕೆಮ್ಮು ದಮ್ಮುಗಳಿಲ್ಲದ ಯಾವ ಸುದೃಢ ಕನ್ನಡಿಗನೂ ಮಾಡಬಹುದಾದ ಕೆಲಸವಿದು. ನಾನು ಹೇಳುವುದು ಇಷ್ಟೇ. ಜಾಗೃತರಾಗಿ! ಉಳಿದವರನ್ನು ಜಾಗೃತಿಗೊಳಿಸಿ! ಲೋಕ ನಿಮ್ಮ ಸೇವೆಯಿಂದ ಸುಖ, ಶಾಂತಿ, ನಿದ್ರೆಗಳನ್ನು ಮಾಡದಂತೆ ನೋಡಿಕೊಳ್ಳಿ—ಇದೇ ಸೇವಾಧರ್ಮದ ಗುಟ್ಟು.

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕರು: ಬಸವರಾಜ ಕಟ್ಟೀಮನಿ

ವರ್ಷಕ್ಕೆ ಆರುನೂರು ಪುಟಗಳಷ್ಟು ಸಾಹಿತ್ಯ. ಕತೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ.

ವಾ. ಚಂದಾ ೫ ರೂಪಾಯಿ (ರಜಿಸ್ಟರ್ ಆಂಚೆವೆಚ್ಚ ಸೇರಿ)

ಮೊದಲನೆಯ ಪ್ರಕಟಣೆ:

ಸೆರೆಯಿಂದ ಹೊರಗೆ

(ಸಣ್ಣಕತೆಗಳ ಸಂಕಲನ)

ಈಗ ತಾನೆ ಹೊರಟಿದೆ. ಕೂಡಲೆ ಚಂದಾದಾರರಾಗಿರಿ.

ಸಾಲಂಕೃತ ವಧು

ಡಿ. ಕೀರ್ತಿನಾಥ 'ಕಾವ್ಯಾನುಭವಮಂಟಪ' ಧಾರವಾಡ

★

೧

ಸಂಧ್ಯಾಕಾಲದ ಸ್ವರ್ಣಮಹೋತ್ಸವ
ಬಾನಿನ ಬಯಲೊಳು ನಡೆದಿತ್ತು;
ರಾತ್ರಿಯ ಕಣ್ಣಿನ ಕಾಡಿಗೆ ಹಸಿಹನಿ
ಮೂಡಣ ದಿಕ್ಕಿನೊಳಿಳಿದಿತ್ತು.
ಸಪ್ತಮಿಚಂದ್ರನ ಬೆಳ್ಳಯ ದೋಣಿಯು
ಮೆಲ್ಲಗೆ ಮೆಲ್ಲಗೆ ಸಾಗಿತ್ತು;
ಮೃದು ಗೋಧೂಳಿಯು ಮುಗಿಲಿನ ನಾಡಿಗೆ
ಚಿನ್ನದ ಪಥವನು ರಚಿಸಿತ್ತು.
ಸಾಲಂಕೃತ ವಧು ಬಂದಳು ಮೆಲ್ಲಗೆ
ಜೀವದ ಜೀವವನರಸುತ್ತ,
ಯುಗಯುಗದಿಂದಲಿ ಹರಿಯುವ ಪ್ರೇಮದ
ಹೊಳೆಯನು ನಡಿಗೆಯೊಳಾನುತ್ತ.

೨

ಕೆಂಪುಗುಲಾಬಿಯ ಎಸಳುಗಳಂದದಿ
ನಡುಗುತಲಿದ್ದುವು ಹೃದಯಗಳು;
ಅಂತಃಪಟವಲೆದಿದ್ದಿತು ಮುಧ್ಯದಿ—
ವೇದದ ಘೋಷವು ತುಂಬಿರಲು;
ಮಂಜಿನ ಮುಸುಕನು ಸರಿಸುತ ಕಾಣುವ
ಪೂರ್ವದಿಗಂತದ ಉಷೆಯಂತೆ—
ಕಂಡಳು ಒಮ್ಮೆಲೆ ಜೀವದ ನಲ್ಲೆಯು
ಹೊಸಹಸಿ ಮಿಂದಿಹ ಹೂವಂತೆ.
ಸಾಲಂಕೃತ ವಧು ನೋಟವ ಬೀರ್ದಳು
ನಾಚಿಕೆ ತುಳುಕಿಪೆ ನಯನದಲಿ;
ನನ್ನಯ ಹೃದಯಸರೋವರ ವೀಚಿಗ-
ಳಾಡಲು ಪ್ರೇಮದ ರಾಗದಲಿ.

೩

ಮುಂದಲೆಯೊಳು ಸುಳಿಗುರುಳಿನ ಬಂಬಲು
ತಿಲಕದ ಜೊತೆಯಲ್ಲಾಡುತಿರೆ—
ಕತ್ತಲೆಯಾಳದ ಕಂಗಳು ಹೃದಯದ
ಚಂದ್ರನ ಕಾಣಲು ಕಾಯುತಿರೆ—
ಇಬ್ಬನಿ ತೊಳೆದಿಹ ಹಸುರಿನ ತೆರದಲಿ
ಹುಬ್ಬಿನೊಳಲೆಯಲು ಬೆನರು ಹನಿ,
ಗಲ್ಲಗಳೆರಡರ ನಸುಕು-ಸಂಜೆಗಳು
ಕೈ ಕೈ ಹಿಡಿಯಲು ತುಟಿಗಳಲಿ,
ಸಾಲಂಕೃತ ವಧು ಕುಳಿತಳು ಎದುರಲಿ
ನಸುಕಿನ ಮುಗ್ಧತೆ ಬೀರುತ್ತ;
ನನ್ನ ಹೃದಯದಲಿ ನಲುಮೆಯ ಹೂಗಳ
ನಂದನದಂದವ ಸೃಜಿಸುತ್ತ.

೪

ಧರ್ಮದಿ ಅರ್ಥದಿ ಕಾಮದಿ ನನ್ನಯ
ಜೊತೆಯನು ಬಿಡದಿಹ ಮನದನ್ನೆ
ಕಂಕಣ ನೀಡುವ ನೆವದಲಿ ಹೃದಯವ
ಕೈಯಲಿ ಹಿಡಿದಳು ಮೃದುನಯನೆ;
ಪ್ರೇಮಿಗಳೆದೆಗಳ ತೆರದಲಿ ನಡುಗುತ
ಬಾನಲಿ ಹೊಳೆದುವು ತಾರೆಗಳು;
ಸಪ್ತಮುನಿಗಳಾ ಮಲ್ಲಿಗೆಬನದಲಿ
ನಗೆಯನರುಂಧದಿ ಬೀರಿದಳು.
ಸಾಲಂಕೃತ ವಧು ಪ್ರೇಮದಿ ನೋಡುತ
ತುಂಬಿದ ಹರಕೆಯ ಬೇಡಿದಳು,
ಕೊರಳಿನ ಮಂಗಳಸೂತ್ರಕೆ ಬಾನಿನ
ಬೆಳಕಿನ ರಕ್ಷೆಯ ಬಯಸಿದಳು.

೫

ತಂದೆಯ ಕಣ್ಮಣಿ ತಾಯಿಯ ಎದೆಹೂ
ನನ್ನನು ಸೇರಲು ಬರುತಿಹಳು;
ಅಣ್ಣ-ತಮ್ಮದಿರ ಕಣ್ಗಳ ಗೊಂಬೆಯು
ನನ್ನೆದೆಗೊಂಬೆಯ ನಲಿಸುವಳು.
ಹುಟ್ಟಿದ ಮನೆಯನು ಬೆಳಗಿದ ದೀಪವು
ಬಾಳುವ ಮನೆಯನು ಬೆಳಗಲಿದೆ;
ತವರಿನ ಅಂಗಳವಲ್ಲಿಯ ಮಲ್ಲಿಗೆ
ನಮ್ಮನೆ ವರೆಗೂ ಹಬ್ಬುತಿದೆ.
ಸಾಲಂಕೃತ ವಧು ಬಂದಳು ಬಳಿಯಲಿ
ಅರ್ಪಿಸಿ ಪ್ರೇಮದ ನೈದಿಲೆಯ—
ಮನೆಯನು ತುಂಬಿಸಿ ಮನವನು ಬಿಂಬಿಸಿ
ಚಿಮ್ಮಿಸಿ ನಲ್ಮೆಯ ಸವಿಸೆಲೆಯ.

೬

ಒಂದೆಡೆ ವಿರಹವು ಒಂದೆಡೆ ಮಿಲನವು
ಹೆಣ್ಣಿನ ಜೀವನವೆನಿಸಿತ್ತು ;
ಎದೆಯಲಿ ನೋವಿರೆ ಬಾಯಲಿ ಸಕ್ಕರೆ
ಸಿಹಿ ಕಹಿ ಬಾಳಲಿ ಬೆರೆತಿತ್ತು.
ಕಂಗಳ ಗಳಿಗೆಯ ಬಟ್ಟಲು ತುಂಬಿತು
ನಡೆದಿದೆ ಅವಿರತ ಜಲಧಾರೆ,
ಹೆಸರು, ಧರ್ಮ, ಮನೆ ಬದಲಿಸಿ ಬಂದಳು
ನನ್ನಯ ಬಾಳಿಗೆ ಧ್ರುವತಾರೆ.
ಸಾಲಂಕೃತ ವಧು ನಡೆದಳು ಹುಟ್ಟಿದ
ಮನೆಯಲಿ ಪ್ರೀತಿಯ ನೆನಹಿರಿಸಿ,
ಕನಸು ತುಂಬಿರುವ ನನ್ನಯ ಮನೆಯಲಿ
ನಾಕವ ನಗೆಯಲಿ ಹುದುಗಿರಿಸಿ.

೭

ತುಟಿಗಳ ಯುಗಲಕೆ, ಅಗಲಿಕೆ ಇಲ್ಲದೆ
ಬೆಸೆದುವು ಕೆಂಪಿನ ಮುದ್ರೆಯಲಿ
ಮೌನದ ಅಂತಃಪಟವಿಳಿದಿದ್ದಿತು
ಮಿಡಿಯುವ ಎದೆಗಳ ಮಧ್ಯದಲಿ.
ಸಹಜರಿ ಬಾ ಸಹಧರ್ಮಿಣಿ ಬಾರೆನೆ
ಶಬ್ದಗಳಿಲ್ಲದ ಭಾಷೆಯಲಿ,
ಮಲ್ಲಿಗೆಲತೆ ಸಹಕಾರವನಪ್ಪಿತು
ಸರ್ವಸಮರ್ಪಣ ಭಾವದಲಿ.
ಸಾಲಂಕೃತವಧು ನನ್ನವಳಾದಳು
ಅನಂತ ಪ್ರೇಮವ ಬೀರುತ್ತ
ತನ್ನಯ ಹೃದಯದ ಮಾನಸ ಸರದಲಿ
ಅರಳಿದ ಕಮಲವ ನೀಡುತ್ತ.

೮

ಬಳೆಯಲಿ ಕುಳಿತಳು ನಲ್ಲೆಯು ನಾಚುತ
ಮೋಹವನೆಲ್ಲೆಡೆ ಚೆಲ್ಲುತ್ತ
ಕೈಗಳ ಬಳೆಗಳ ಸದ್ದಿಗೆ ಹೆದರುತ
ಕಳವಿನ ನೋಟವ ಬೀರುತ್ತ ;
ಕಣ್ಣಿವೆ ಹಸಿರಿನ ಸಂಪಿಗೆ ಹೂವಿನ
ಪಕಳೆಗಳಂದದಿ ನಡುಗುತಿರೆ,
ತುಟಿಗಳು ಅದಿರುತ ಹಲ್ಗಳ ಮುತ್ತಿನ
ಬೊಕ್ಕಸವನು ತೆರೆತೆರೆಯುತಿರೆ—
ಸಾಲಂಕೃತ ವಧು ಬಳೆಯಲಿ ಕುಳಿತಳು
ಮಾನಸ ಕಮಲವನರಳಿಸುತ ;
ನಾದದ ಉನ್ಮಾದದ ಮಧುರಾಗದ
ಮೋಹಕ ಲೋಕವ ಸೃಷ್ಟಿಸುತ

೯

ಶ್ರಾವಣ ಕಂಬನಿ ತುಂಬುತ ಮೆಲ್ಲನೆ
ಬರುವುದು ದಿನದಿನ ಕಳೆದಂತೆ
ವಸಂತ ಮಾಸದ ನಲಿಯುವ ನವವಧು
ತಾಯಿಯ ರೂಪವ ತಳೆದಂತೆ
ಇಂದಿಗೆ ಆಟವು ಮುಂದಿದೆ ಜೀವನ—
ನೋವು ನಲಿವುಗಳ ಸಂಗಮವು!
ಒಂದೇ ತಾಳದ ಒಂದೇ ಮಿಡಿತದ
ಎದೆಗಳು ಬಾಳನು ಗೆಲ್ಲುವುವು.
ಸಾಲಂಕೃತ ವಧು! ನನ್ನಯ ಹೃದಯಕೆ
ಆತ್ಮಕೆ ಕಾವನು ನೀನೀಡು ;
ಮನೆಯ ದೀವಿಗೆಗೆ ಆತ್ಮದ ಧರ್ಮಕೆ
ರಕ್ಷೆಯ ಹಾಡನು ನೀ ಹಾಡು!

REPRESENT AS AGENT] ESTD. 1907. [SERVE AS INSPECTOR

THE GENERAL ASSURANCE SOCIETY LTD.
AJMER

Wanted Inspectors on salary and agents on commission against guarntee of business for the districts of Belgaum, Bijapur, Dharwar and Karwar.

APPLY TO:—

Pt. Brahma Datta B. Sc., LL. B., F. S. S. (London),
General Manager, Ajmer.

P. Venkobachar, B. A. B. T.
Branch Manager, Hubli.

ಗೋರಿಗಳ ಆಕ್ರೋಶ

(ಒಂದು ಅನುವಾದಿತ ಕತೆ*)

'ಯಾದವ'

★

ಸಮಾಜದಲ್ಲಿಯ ಕೃತ್ರಿಮವಾದ ನ್ಯಾಯನಿರ್ಣಯ ಪದ್ಧತಿಯು ನಿಜವಾದ ನ್ಯಾಯವನ್ನು ಹುಡಿಯಲ್ಲಿ ಮೆಟ್ಟುತ್ತಿರುವುದು. ನಮ್ಮಲ್ಲಿ ಶಿಕ್ಷೆಹೊಂದಿ ಮೃತರಾದ ಎಷ್ಟು ಜೀವಿಗಳ ಗೋರಿಯಿಂದ ಹೀಗೆ ಆಕ್ರೋಶದ ಕೂಗು ಹೊರಡುತ್ತಿರಬಹುದು?

★

ಅಮೀರನು ನ್ಯಾಯಾಸನದ ಮೇಲೆ ವಿರಾಜಮಾನನಾಗಿದ್ದನು. ಇಕ್ಕೆಲದಲ್ಲಿ ದೇಶದ ವಿದ್ವಾಂಸರು ಮಂಡಿಸಿದ್ದರು. ಅವರ ಗಂಭೀರವಾದ ಮುಖಗಳ ಮೇಲೆ, ದೊಡ್ಡ ದೊಡ್ಡ ಹೊತ್ತಿಗೆಗಳ, ಮಹಾ ಮಹಾ ಗ್ರಂಥಗಳ ಪ್ರತಿಬಿಂಬವು ಒಡಮೂಡಿತ್ತು. ಎಡ-ಬಲದಲ್ಲಿ ಬಿಚ್ಚುಗತ್ತಿಯ ಅಂಗರಕ್ಷಕರೂ ಭಲ್ಲೆಗಳನ್ನು ನೀಟಾಗಿ ಹಿಡಿದು ನಿಂತ ಕಾಪಿನ ಭಟರೂ ಕಂಗೊಳಿಸುತ್ತಿದ್ದರು. ಎದುರಿನ ಸಾಲಿನಲ್ಲಿ ತಪ್ಪುಗಾರರ ನ್ಯಾಯನಿರ್ಣಯವನ್ನು ನೋಡಲು ಕುತೂಹಲಿಗಳಾಗಿ ಬಂದ ಜನಜಂಗುಳಿ ಕಾಣುತ್ತಿತ್ತು. ಎಲ್ಲರೂ ವಿನಮ್ರರಾಗಿ, ಕತ್ತು ಬಾಗಿಸಿ, ಬೀಸಾಗಿ ಉಸಿರನ್ನು ಕೂಡ ಬಿಡದೆ ದೀನವದನರಾಗಿ ನಿಂತಿದ್ದರು. ಅಮೀರನ ಕಣ್ಣಲ್ಲಿಯ ನಿಷ್ಕರುಣತೆಯ ದರ್ಪವು ನೆರೆದವರನ್ನು ಭಯಭೀತರನ್ನಾಗಿ ಮಾಡಿತ್ತು.

ಔಪಚಾರಿಕ ಕೆಲಸಗಳು ಮುಗಿದು, ಮುಖ್ಯ ನ್ಯಾಯನಿರ್ಣಯಕ್ಕೆ ಆರಂಭವಾಯಿತು. ಅಮೀರನು ಕೈ ಮೇಲಕ್ಕೆತ್ತಿ, ಗಡುಸು ದನಿಯಲ್ಲಿ ಆಜ್ಞಾಪಿಸಿದನು :—'ಅಪರಾಧಿಗಳನ್ನು ಕ್ರಮವಾಗಿ ನನ್ನೆದುರು ತಂದು ನಿಲ್ಲಿಸಿರಿ ಮತ್ತು ಅವರ ಅಪರಾಧಗಳೇನೆಂಬುದನ್ನು ನಿವೇದಿಸಿರಿ.'

ಸೆರೆಮನೆಯ ಬಾಗಿಲುಗಳು ತೆರೆದು, ಭೀಕರವಾದ ಕಪ್ಪುಗೋಡೆಗಳು ಕಾಣತೊಡಗಿದುವು. ಬೇಡಿಗಳ ಖಣಖಣ ಶಬ್ದವು ಈಗ ನಿಚ್ಚಳವಾಗಿ ಕಿವಿಗೆ ಬೀಳತೊಡಗಿತು. ಆ ಖಣಖಣ ನಾದದಲ್ಲಿ ಸೆರೆಯಾಳುಗಳ ಆರ್ತಧ್ವನಿಯೂ ಮಿಶ್ರವಾಗಿತ್ತು. ನ್ಯಾಯಾಲಯದಲ್ಲಿ ಕುಳಿತ ಜನಸ್ತೋಮವು, ಆ ನೋಟವನ್ನು ಕಣ್ಬಿಸಿದು ನೋಡಲು ತೊಡಗಿತು!

* ಸುಪ್ರಸಿದ್ಧ ರಸಋಷಿ ಖಲೀಲ್ ಜಿಬ್ರಾನರ ಕತೆಯೊಂದರ ಅನುವಾದವಿದು.
—ಸಂ

ಹುಸು ಹೊತ್ತಿಗೆ ಇಬ್ಬರು ರಕ್ಷಕರು ಹೊರಬಂದರು.

ಅವರ ವಶದಲ್ಲಿ ಒಬ್ಬ ತರುಣ ಕೈದಿಯಿದ್ದ. ಏರಿಸಿದ ಹುಬ್ಬು, ನಿರ್ಭಯವಾದ ಮುಖಮುದ್ರೆಯುಳ್ಳ ಆ ತರುಣನು, ಸ್ವಾಭಿಮಾನವುಳ್ಳವನೂ ಆತ್ಮಶಕ್ತಿಯನ್ನು ಪಡೆದವನೂ ಎಂದೆನಿಸುವಂತಿತ್ತು. ರಕ್ಷಕರು ನ್ಯಾಯಾಲಯದ ಮಧ್ಯದಲ್ಲಿ ಅವನನ್ನು ತಂದು ನಿಲ್ಲಿಸಿ ತಾವು ಹಿಂದೆ ಸರಿದರು. ಒಂದು ಕ್ಷಣ ಕಣ್ಣರಳಿಸಿ ಅಮೀರನು ಆ ತರುಣನನ್ನು ನೋಡಿ ಕೇಳಿದನು :—'ನೀನು ನ್ಯಾಯಾಲಯದ ಎದುರು ಅಪರಾಧಿಯೆಂದು ನಿಂತಿರದೆ, ಬಂಧಿತನಾದರೂ ಸ್ವತಂತ್ರನಾಗಿರುವಂತೆ ಹೆಮ್ಮೆಯನ್ನು ತೋರುವ ಈ ಯುವಕ ಯಾವ ತಪ್ಪಿತವನ್ನು ಎಸಗಿದ್ದಾನೆ?'

ಅಮೀರನ ಮಂತ್ರಿಗಳಲ್ಲೊಬ್ಬನು ಉತ್ತರಿಸಿದನು :—'ಸರಕಾರದ ಒಬ್ಬ ಲಷ್ಕರೀ ಅಮಲದಾರನು ಒಂದು ಹಳ್ಳಿಗೆ ಹೋಗಿರಲು, ಈ ತರುಣನು ಅವನನ್ನು ಕೊಂದುಹಾಕಿದನು. ಆಗ ಅಮಲದಾರನ ಸಿಪಾಯಿಗಳು ಇವನನ್ನು ಬಂಧಿಸಿ, ಆ ರಕ್ತರಂಜಿತವಾದ ಕತ್ತಿಯನ್ನು ವಶಪಡಿಸಿಕೊಂಡರು!'

ನ್ಯಾಯಾಸನದಲ್ಲಿ ಕುಳಿತ ಅಮೀರನು ಕುಳಿತಲ್ಲಿಯೇ ಸಿಟ್ಟಿನಿಂದ ನಡುಗುತ್ತಿದ್ದನು. ಅವನ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಹೊರಚಿಮ್ಮುತ್ತಿದುವು. ಅವನು ಗಟ್ಟಿಯಾಗಿ ಕೂಗಿ ಹೇಳಿದನು :—'ಇವನನ್ನು ಬಲವಾದ ಶೃಂಖಲೆಗಳಿಂದ ಬಂಧಿಸಿ ಕತ್ತಲುಕೋಣೆಯಲ್ಲಿರಿಸಿರಿ! ನಾಳೆ, ಸೂರ್ಯೋದಯವಾದೊಡನೆಯೆ, ಇವನ ಕತ್ತಿಯಿಂದಲೇ ಇವನ ಕತ್ತನ್ನು ತುಂಡರಿಸಿ, ಪ್ರೇತವನ್ನು ಹದ್ದು-ಕಾಗೆಗಳ ಆಹಾರಕ್ಕಾಗಿ ಊರಹೊರಗೆ ಜೆಲ್ಲಿಬಿಡಿರಿ. ಇವನ ಹೆಣದಿಂದ ಹೊರಡುವ ಹೇಸಿ ವಾಸನೆ, ಇವನ ಬಂಧುಮಿತ್ರರಿಗೆ ತಾಗಲಿ.'

ಆ ತರುಣನನ್ನು ಮರಳಿ ಸೆರೆಮನೆಗೆ ಒಯ್ಯಲಾಯಿತು. ನೆರುಕಗೊಂಡ ಜನರ ದೃಷ್ಟಿಯು, ಸುಂದರನೂ, ಹರೆಯದವನೂ, ಬಲಿಷ್ಠನೂ ಆದ ಆ ಯುವಕನನ್ನೇ ಹಿಂಬಾಲಿಸಿತು

ಆ ಮೇಲೆ, ಇನ್ನಿಬ್ಬರು ಕಾವಲುಗಾರರು, ಒಬ್ಬ ಹೆಂಗುಸನ್ನು ಸೆರೆಮನೆಯಿಂದ ಹೊರತಂದರು. ಜಲುಪೆ ಹಾಗು ನಾಜೂಕು ಮೈಕಟ್ಟುಳ್ಳವಳಾದ ಆ ಹೆಂಗುಸಿನ ಕಣ್ಣಲ್ಲಿ, ಮುಖ-ನಿರಾತಂಕಗಳ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!
ಡಾ. ವಾಮನ ಗೋಪಾಳ
ಇವರ
ಸಾಸ್ವಾ ಪರಿಲ್ಲ



ಕೆಂಪು ಒಡೆದುಕಾಣುತ್ತಿತ್ತು. ಅವಳು ಲಜ್ಜೆಯಿಂದ ಮುಖವನ್ನು ಕೆಳಗೆಹಾಕಿದ್ದಳು.

ಅವಳನ್ನು ದಿಟ್ಟಿಸಿ, ಅಮೀರನು ಕೇಳಿದನು:—"ಪ್ರತ್ಯಕ್ಷದೆದುರು ಪತಿನೆಳಲು ಕಾಣುವಂತೆ, ನಮ್ಮೆದುರು ನಿಂತಿರುವ ಈ ಹೆಂಗುಸು ಮಾಡಿದ ಅಪರಾಧವೇನು?"

ಕಾವಲುಗಾರನೊಬ್ಬನು ಅರಿಕೆಮಾಡಿದನು:— "ಈ ಸ್ತ್ರೀ ವ್ಯಭಿಚಾರಿಣಿಯಾಗಿದ್ದಾಳೆ. ಇವಳ ಗಂಡನು ರಾತ್ರಿ ಮನೆಗೆ ಬಂದಾಗ, ಇವಳನ್ನು ಜಾರನ ಬಾಹುಪಾಶದಲ್ಲಿ ಕಂಡನು. ಗಂಡನು ಬಂದುದನ್ನು ನೋಡಿ ಪ್ರಿಯಕರನು ಓಡಿಹೋಗಲು, ಗಂಡನು ಇವಳನ್ನು ಪೋಲೀಸರ ವಶಕ್ಕೆ ಕೊಟ್ಟನು."

ಇದನ್ನು ಕೇಳಿ ಅಮೀರನು ಕಾಯ್ದು ಕೆಂಡವಾದನು. ಅವನ ಬಾಯಿಂದ ಆಜ್ಞೆ ಹೊರಟಿತು:—'ಇವಳನ್ನು ಮರಳಿ ಸೆರೆಮನೆಗೆ ಒಯ್ದು, ಮುಳ್ಳಿನ ಹಾಸಿಗೆಯ ಮೇಲೆ ಮಲಗಿಸಿರಿ; ಎಂದರೆ ತಾನು ಅಪವಿತ್ರಗೊಳಿಸಿದ ಹಾಸಿಗೆಯ ನೆನಪು ಇವಳಿಗೆ ಕೊನೆಯವರೆಗೆ ಉಳಿದೀತು— 'ಇನಾರು' ಎಂಬ ಅತಿ ಕಹಿಯಾದ ಮದ್ಯವನ್ನು ಇವಳಿಗೆ ಕುಡಿಯಲು ಕೊಡಿರಿ! ಬೆಳಗಾದ ಮೇಲೆ ಇವಳನ್ನು ಬೆತ್ತಲೆಮಾಡಿ ಬೀದಿಯಲ್ಲಿ ದರಗುಟ್ಟಿ ಎಳೆಯಿಸಿ ಆ ಮೇಲೆ ಊರಹೊರಗೊಯ್ದು 'ಸಂಗಸಾರ್'* ಮಾಡಿಬಿಡಿರಿ

ಸಿಪಾಯಿಗಳು ಅವಳನ್ನು ಕತ್ತಲುಕೋಣೆಗೆ ಒಯ್ದರು ಅಮೀರನ ನಿರ್ಣಯವನ್ನು ಕೇಳಿ ನೆರೆದ ಜನರಿಗೆ ಆನಂದವಾದರೂ, ಸುಂದರಿಯೂ ಚಿಕ್ಕ ಪ್ರಾಯದವಳೂ ಆದ ಆ ಸ್ತ್ರೀಯ ಮೇಲೆ ಕನಿಕರವೂ ಉಂಟಾಯಿತು.

ಆ ಮೇಲೆ, ಇಬ್ಬರು ಸಿಪಾಯಿಗಳು ಒಬ್ಬ ಮಧ್ಯಮ ವಯಸ್ಸಿನ ಬಡಕಲು ಮನುಷ್ಯನನ್ನು ಕರೆತಂದರು. ಅವನು, ನಡುಗುತ್ತಿರುವ ಕಾಲು ಹೆಜ್ಜೆಗಳನ್ನು ನೆಲಕ್ಕೆ ಸವರುತ್ತ ಬರುತ್ತಿದ್ದ. ನಿರಾಶೆ, ನಿನಾಶ, ದಾರಿದ್ರ್ಯದ ಭಾವಗಳು ಮುಖದಲ್ಲಿ ಮೂಡಿದ್ದುವು.

ಅವನನ್ನೊಂದು ಸಲ ನೋಡಿ, ಅಮೀರನು ಕರ್ಕಶಸ್ವರದಲ್ಲಿ ಅರಚಿದನು:— 'ಜೀವಂತನಿದ್ದರೂ ಹೆಣದಂತೆ ನಮ್ಮೆದುರು ನಿಂತಿರುವ ಈ ಮನುಷ್ಯನು ಯಾವ ತಪ್ಪಿತವನ್ನು ಮಾಡಿದನು?'

ಸಿಪಾಯಿಯು ಅರುಹಿದನು:—'ಇವನೊಬ್ಬ ಕಳ್ಳನು. ಒಂದು ರಾತ್ರಿ ಚರ್ಚಿನಲ್ಲಿ ಹೊಕ್ಕು, ನೈವೇದ್ಯದ ಮಾಂಸವನ್ನು ಕುದಿಸುವ ಪಾತ್ರೆಗಳನ್ನು ಕದಿಯಲು, ಅಲ್ಲಿಯ ಸಾಧುಗಳು ಇವನನ್ನು ಹಿಡಿದರು.'

ಹಸಿವ ಗಿಡಗ ರೆಕ್ಕೆಕಳೆದುಕೊಂಡ ಹಕ್ಕಿಯನ್ನು ನೋಡುವಂತೆ, ಅಮೀರನು ಆ ಮನುಷ್ಯನನ್ನೊಮ್ಮೆ ನೋಡಿ, ಅರ್ಭಟಿಸಿದನು:— 'ಇವನನ್ನು ಬೆಳಗಾಗುವ ವರೆಗೆ ಸೆರೆಮನೆಯಲ್ಲಿ ಬಂಧಿಸಿಟ್ಟು, ಮುಂಜಾನೆ ಊರಹೊರಗೊಯ್ದು, ರೇಶಿಮೆಯ ಹಗ್ಗದಿಂದ ಕಟ್ಟಿ, ಒಂದು ಗಿಡಕ್ಕೆ ತೂಗುಬಿಡಿರಿ. ನೆಲ-ಮುಗಿಲುಗಳ ನಡುವೆ ಇವನು ಹಾಗೇ ನೇತಾಡುತ್ತಿರಲಿ. ಎಂದರೆ ಕಳವುಮಾಡುವ ಇವನ ಕೈಯ ಬೆರಳುಗಳು ಕೊಳೆತು ಉದುರಿಬೀಳುವುವು; ಆಗ ಅದರ ದುರ್ವಾಸನೆ ಎಲ್ಲೆಡೆಗೂ ಹಬ್ಬಿಕೊಂಡೀತು.'

ಕಳ್ಳನನ್ನು ಒಯ್ಯಲಾಯಿತು. ಜನರು ಗುಣುಗುಟ್ಟಿದರು:— 'ಇಂಥ ನರಪೇತಲನು ಪ್ರಾರ್ಥನಾಮಂದಿರದಲ್ಲಿಯ ಪಾತ್ರೆಗಳನ್ನು ಕದಿಯುವ ಸಾಹಸವನ್ನು ಹೇಗೆ ಮಾಡಿದ್ದಾನು?'

ಅಮೀರನು ನ್ಯಾಯಾಸನದಿಂದ ಕೆಳಗಿಳಿದನು. ಅವನ ಬುದ್ಧಿವಂತರಾದ ಸಲಹೆಗಾರರೂ ಇನ್ನಿತರ ಜಾಣಬಂಟರೂ ಹಿಂದೆ ನಡೆದರು. ಅಂಗರಕ್ಷಕರು-ಕೆಲವರು ಮುಂಬಾಲಿಸಿಯೂ ಕೆಲವರು ಹಿಂಬಾಲಿಸಿಯೂ ನಡೆದರು. ನೆರೆದ ಜನ ಜೆದರಿತು. ನ್ಯಾಯಾಲಯವು ಬರಿಯದಾಯಿತು. ಕೈದಿಗಳ ಅಳುವು-ಮರುಕಗಳು ಮಾತ್ರ ಕೇಳಬರುತ್ತಿದ್ದುವು.

ಮಾನವನು ಮಾನವರಿಗಾಗಿ ರಚಿಸಿದ ಈ ಕಾನೂನುಗಳನ್ನು ನೋಡಿಯಂತೂ ನಾನು ದಿಙ್ಮೂಢನಾದೆ. ಜನರು 'ನ್ಯಾಯ' ಎಂದು ಯಾವುದಕ್ಕೆ ಹೇಳುವರೊ, ಆ ವಸ್ತು ಎಂತಹದು ಎಂಬುದನ್ನು ಆಲೋಚಿಸತೊಡಗಿದೆ. ಕಗ್ಗತ್ತಲೆಯಲ್ಲಿ ಸಂಧಿಪ್ರಕಾಶ ಲೀನವಾಗುವಹಾಗೆ, ನನ್ನ ವಿಚಾರಗಳು ಎಲ್ಲಿಯೊ ಲುಪ್ತವಾದುವು.

* ಒಂದುಬಗೆಯ ಮರಣದಂಡನೆಯ ಶಿಕ್ಷೆ.

ನಾನು ಆ ನ್ಯಾಯಾಲಯದಿಂದ ಹೊರಬಿದ್ದು, ನನ್ನಷ್ಟಕ್ಕೇ ಆಲೋಚನೆಗೊಳಗಾದೆ. 'ಮಣ್ಣಿನ ತತ್ತ್ವಗಳನ್ನು ವೈಗೂಡಿಸಿಕೊಂಡು ಹುಲ್ಲು ಬೆಳೆಯುತ್ತದೆ. ಆ ಹುಲ್ಲನ್ನು ಕುರಿ ತಿನ್ನುತ್ತದೆ. ಆ ಕುರಿಯನ್ನು ತೋಳ ತನ್ನ ಭಕ್ಷ್ಯವನ್ನಾಗಿ ಮಾಡುತ್ತದೆ. ತೋಳವನ್ನು ಗಂಡಕ ಕೊಂದುಹಾಕುತ್ತದೆ. ಅಂತಹ ಗಂಡಕಮೃಗವನ್ನು ಹುಲಿ ಯಮಸದನಕ್ಕಟ್ಟುತ್ತದೆ! ಜಗತ್ತಿನಲ್ಲಿ ಅಂತಹ ಯಾವ ಶಕ್ತಿಯಿದೆ.... ಯಾವುದು ಸಾವಿನ ಮೇಲೆ ವಿಜಯವನ್ನು ದೊರೆಕಿಸಿ, ಈ ಅತ್ಯಾಚಾರಗಳ ಪರಂಪರೆಯನ್ನು ಕೊನೆಗಾಣಿಸುವಂತೆ ಮಾಡೀತು? ಎಲ್ಲ ಹೊಳೆಗಳಿಗೂ ಕಡಲು ಆಶ್ರಯಕೊಡುವಂತೆ, ಜೀವನದ ಮೂಲತತ್ತ್ವಗಳನ್ನೆಲ್ಲ ತನ್ನ ಸ್ವಾಧೀನದಲ್ಲಿರಿಸಿಕೊಂಡು, ಅದನ್ನು ಆತ್ಮಸಾತ್‌ಮಾಡುವಂತಹ ಶಕ್ತಿ ಯಾವುದಾದರೂ ಇದೆಯೆ? ಕೊಲೆಗಾರ ಕೊಲೆಗೊಂಡವ, ಜಾರ-ಜಾರಿಣಿ, ಕಳ್ಳ-ಯಜಮಾನ ಇವರನ್ನು ಅಮೀರನ ನ್ಯಾಯಾಸನಕ್ಕಿಂತಲೂ ಅಧಿಕ ಉಚ್ಚವಾದ ನ್ಯಾಯಾಸನದೆದುರು ನಿಲ್ಲುವಂತೆ ಮಾಡುವ ಶಕ್ತಿಯಾದರೂ ಯಾವುದಿದೆ?'

ಮರುದಿನ, ಮನಸ್ಸು ನೆಮ್ಮದಿಗೊಳ್ಳಲಿ ಎಂದು, ಊರ ದೂಷಿತ ಹವೆಯಿಂದ ಹೊರಬಿದ್ದು, ಬಯಲು ಹವೆಗೆ ಬಂದೆ. ಊರನ್ನು ದಾಟಿ ಅಡವಿಯಲ್ಲಿ ಬಂದಾಗ, ಕಾಗೆ-ರಣಹದ್ದುಗಳು ಗುಂಪುಗುಂಪಾಗಿ ಬಾನಿನಲ್ಲಿ ಹಾರಾಡುತ್ತಿರುವುದನ್ನೂ, ನೆಲಕ್ಕೆ ಎರಗುವುದನ್ನೂ ಕಂಡೆ. ಅವುಗಳ ಕಿಲಬಿಲಾಟ, ರೆಕ್ಕೆಗಳ ಫಡಫಡ ಶಬ್ದಗಳು ಅಲ್ಲಿಯ ವಾತಾವರಣವನ್ನು ಕೀಸರಿಡಿಸಿದ್ದುವು. ನಾನು ತುಸು ಮುಂದಾಗಿ ನೋಡುತ್ತೇನೆ:—ಒಂದು ಪ್ರೇತವನ್ನು ಗಿಡಕ್ಕೆ ತೂಗುಬಿಡಲಾಗಿದೆ. ಹತ್ತಿರದಲ್ಲಿಯೇ 'ಸಂಗಸಾರ್' ಮಾಡಲಾದ ಬೆತ್ತಲೆ ಹೆಣ್ಣಿನ ಇನ್ನೊಂದು ಹೆಣವು ಕಲ್ಲುರಾಶಿಯಲ್ಲಿ ಬಿದ್ದಿದೆ. ಅದರ ಹತ್ತಿರವೇ ಕತ್ತು ಕಡೆಗಾದ, ಧೂಳಿ-ರಕ್ತಗಳಿಂದ ಆವರಿಸಿದ ತರುಣನ ಧಡವು ಕಾಣುತ್ತಿದೆ.

ನಾನು ಆ ವಧಸ್ಥಾನದ ಬಳಿ ನಿಂತೆ. ನನ್ನ ದೃಷ್ಟಿ ಹಾಗು ವಿಚಾರಶಕ್ತಿಗಳ ಮೇಲೆ ದಟ್ಟಾಪ ಕಪ್ಪು ಆವರಣವು ಪಸರಿಸಿತು. ನೆತ್ತರಿನ ಮಡಿಲಲ್ಲಿಯೇ ಬಿದ್ದಿರುವ ಆ ಪ್ರೇತಗಳನ್ನು ಆನನವಾಗಿ ಮಾಡಿ ಮೇಲೆ ಕುಳಿತ ಮೃತ್ಯುವಿನ ಹೊರತು ಬೇರೆಯೆನೂ ನನಗೆ ಕಾಣದಾಯಿತು; ವಿನಾಶದ ಗೋಳಿನ ಹೊರತು ಬೇರೆಯೇನೂ ನನಗೆ ಕೇಳದಾಯಿತು.

ಮಾನವನಿರ್ಮಿತ ಕಾನೂನುಗಳ ಹಿಡಿತದಲ್ಲಿ ಸಿಕ್ಕು ಪ್ರಾಣಕ್ಕೆ ಎರವಾದ ಆ ಮನುಷ್ಯರ ಪ್ರೇತಗಳ ಮೇಲೆ ಸುತ್ತಾಡುತ್ತಿರುವ ಹದ್ದು-ಕಾಗೆಗಳ ಕಲಕಲಾಟವೂ ಆ ಗೋಳಿನಲ್ಲಿ ಸಮ್ಮಿಶ್ರವಾಗಿತ್ತು.

ಮೂರು ಮಾನವಪ್ರಾಣಿಗಳು ನಿನ್ತೆಯ ವರೆಗೆ ಬದುಕಿದ್ದುವು. ಆದರೆ ಇಂದು? ಸಾವಿನ ದವಡೆಯಲ್ಲಿ ಸೇರಿದುವು!

ಮೂರು ಜನರು ಮಾನವೀಯ ಅಸ್ತಿತ್ವದಲ್ಲಿಯ ತಮ್ಮ ಪ್ರತಿಷ್ಠೆಯನ್ನು ಕಳೆದುಕೊಂಡರು. ಮತ್ತು ಕುರುಡುಕಾನೂನು ತನ್ನ ಕೈಚಾಚಿ, ಅವರನ್ನು ತನ್ನ ಕಾಲ್ಕೆಳಗೆ ಮೆಟ್ಟಬಿಟ್ಟಿತು!

ಮೂರು ಜನರನ್ನು ನ್ಯಾಯಾಲಯವು ಅಪರಾಧಿಗಳೆಂದು ನಿರ್ಣಯಿಸಿತು; ಯಾಕೆಂದರೆ ಅವರು ದುರ್ಬಲರಾಗಿದ್ದರು! ಕಾನೂನು ಅವರನ್ನು ಯಮಸದನಕ್ಕಟ್ಟಿತು. ಯಾಕೆಂದರೆ ಕಾನೂನು ಬಲಿಷ್ಠವಾಗಿತ್ತು!

ಇನ್ನೊಬ್ಬನನ್ನು ಕೊಲೆ ಮಾಡಿದನು; ಅಂತೆಯೇ ಅವನು ಕೊಲೆಗಾರನಾದನು! ಆದರೆ ಅಮೀರನು ಕೊಲೆಗಾರನನ್ನೇ ಕೊಲ್ಲಿಸಿದನು; ಆಗ ಮಾತ್ರ ಅವನು ನ್ಯಾಯದ ಪುತ್ಥಳಿಯಾದನು!

ವ್ಯಾಧ್ಯನಾ ಮಂದಿರದಲ್ಲಿಯ ಪಾತ್ರೆಗಳನ್ನು ಅಪಹರಿಸಿದನೆಂದು ಜನರು ಒಬ್ಬನನ್ನು ಕಳ್ಳನೆಂದು ತೀರ್ಮಾನಿಸಿದರು; ಆದರೆ ಆದೇ ಅವನ ಪ್ರಾಣವನ್ನು ಅಪಹರಿಸಿದ ಅಮೀರನು ನ್ಯಾಯವಂತನಾದನು.

ತನ್ನ ಪತಿಗೆ ಅಪ್ರಾಮಾಣಿಕಳಾಗಿ ನಡೆದುಕೊಂಡಳೆಂದು, ಒಬ್ಬ ಸ್ತ್ರೀ ವ್ಯಭಿಚಾರಿಣಿಯಾದಳು. ಆದರೆ ಅವಳನ್ನು ಬೆತ್ತಲೆಗೊಳಿಸಿ 'ಸಂಗಸಾರ್' ಮಾಡಿಸಿದ ಅಮೀರನು ಮಾತ್ರ ಸಜ್ಜನನೆನಿಸಿಕೊಂಡನು!

ಕೊಲೆ ಎಂಬುದು ನಿಷಿದ್ಧವಾಗಿದೆ. ಎಂದ ಮೇಲೆ, ಅಮೀರನಿಗೆ ಇಂತಹ ಕೊಲೆ ಮಾಡಿಸುವ ಅಧಿಕಾರವನ್ನು ಯಾರು ಕೊಟ್ಟರು?

ಪರರ ಒಡವೆಯನ್ನು ಅಪಹರಿಸುವುದು ಪಾಪದ ಕೆಲಸ; ಆದರೆ ಪರರ ಪ್ರಾಣವನ್ನು ಅಪಹರಿಸುವುದು ಯೋಗ್ಯವಾದುದು ಎಂದು ಯಾರು ನಿರ್ಣಯಿಸಿದರು?

ಇದೀಗ ಸಿದ್ಧವಾಗಿದೆ! ತ್ವರೆ ಮಾಡಿರಿ!

ಹಿಂದುಸ್ತಾನಿ-ಕನ್ನಡ ಬಾಲಬೋಧಿನಿ

ಲೇ. ಶ್ರೀ. ಎಸ್. ಬಿ. ಭಟ್ಟ, ಬಿ.ಎ., ಎಸ್.ಟಿ.ಸಿ., ಬಿ.ಟಿ.ಸಿ.

ಹಿಂದುಸ್ತಾನೀ ಕಲಿಯುವವರಿಗೆ
ಅತ್ಯಂತ ಉಪಯುಕ್ತ ಪುಸ್ತಕ
ಬೆಲೆ ಆರಾಣೆ ಮಾತ್ರ.

ನಮ್ಮಲ್ಲಿ ಹಿಂದುಸ್ತಾನೀ ಪ್ರಚಾರ ಸಮಿತಿಯ ಎಲ್ಲ ಪರೀಕ್ಷೆಗಳ ಪುಸ್ತಕಗಳೂ, ಕನ್ನಡ, ಮರಾಠಿ, ಇಂಗ್ಲೀಷ್ ಶಾಲೆ-ಕಾಲೇಜುಗಳ ಪುಸ್ತಗಳೂ ದೊರೆಯುತ್ತವೆ.

ಅಕಳಪಾಡಿ ಬುಕ್‌ಡಿಪೋ, ಧಾರವಾಡ

(ವಿಜಯ ಸಿನೇಮಾದ ಎದುರಿಗೆ)

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ವಿದ್ವಜ್ಜನ ವೈದ್ಯ
ವಿ. ಎಸ್. ಕಾಪಸೇ ಯವರ
ಭಾರತೀಯರ ಮುಖ್ಯ ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ತ್ರೀಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚೆಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಲಘು ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೮-೦. (ಇದರಿಂದ ೬ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವಿ. ಎಸ್. ಕಾಪಸೇ** ಮು. ಪೋ. ಮಿರಜ

ಸ್ತ್ರೀಯರು ಚಾರಿತ್ರ್ಯಹೀನರಾಗುವುದು ಹೇಸಿ ಕೆಲಸ; ಆದರೆ ಸುಂದರ ಸ್ತ್ರೀಯರ ಶರೀರಗಳನ್ನು 'ಸಂಗಸಾರ್' ಮಾಡಿಸಿ, ನಷ್ಟ ಗೊಳಿಸುವುದು ಯಾವ ಪುಣ್ಯದ ಕೆಲಸ?

ನಾವು ದುಷ್ಟತನವನ್ನೆದುರಿಸಲು ಅದಕ್ಕೂ ಹೆಚ್ಚಿನ ದುಷ್ಟತನವನ್ನು ಮಾಡುತ್ತೇವೆ. ಬಾಯಿಂದ ಮಾತ್ರ ಇದು ನ್ಯಾಯ ಎನ್ನುತ್ತೇವೆ. ಒಂದು ಪಾಪದ ಸೇಡು ತೀರಿಸಲು ಅದಕ್ಕೂ ಮಿಗಿಲಾದ ಪಾಪಕ್ಕೆ ಕೈಹಾಕುತ್ತೇವೆ. ಅದಕ್ಕೇ ಸದಾಚಾರ ಎನ್ನುತ್ತೇವೆ. ಒಂದು ಸಣ್ಣ ಅಪರಾಧದ ಪ್ರತೀಕಾರಕ್ಕಾಗಿ ಬಲು ದೊಡ್ಡ ಅಪರಾಧಕ್ಕೆ ಮನಸ್ಸು ಮಾಡುತ್ತೇವೆ. ಇದೇ ನ್ಯಾಯ—ಎಂದು ಕೂಗಾಡುತ್ತೇವೆ.

ಅಮೀರನು ಎಂದೂ ತನ್ನ ಹಗೆಗಳನ್ನು ಕೊಲ್ಲಿಸಿಲ್ಲವೆ? ತನ್ನ ರಾಜ್ಯದಲ್ಲಿ ದುರ್ಬಲರ ಆಸ್ತಿಯನ್ನು ಅಪಹರಿಸಿಲ್ಲವೆ? ಯಾವೊಬ್ಬ ಸುಂದರ ಸ್ತ್ರೀಯಳನ್ನು ಪಾಪದೃಷ್ಟಿಯಿಂದ ನೋಡಿಲ್ಲವೆ? ಇಂತಹ ಅಪರಾಧಿಗಳಿಗೆ ಬೇಹಾಂತಶಿಕ್ಷೆಯನ್ನು ವಿಧಿಸುವ ಈ ಅಮೀರನು, ತಾನು ಈ ಅಪರಾಧಗಳಿಂದ ನಿರ್ದೋಷಿಯಾಗಿರುವನೆ? ಧರ್ಮವು ಇಂತಹದಕ್ಕೇ ಸಮ್ಮತಿ ಕೊಡುವುದೆ?

ಕಳ್ಳನನ್ನು ಗಡಿಪಾರು ಮಾಡಿ ಪ್ರಾಣ ಹೀರುವ ಅಮೀರನ ಜನರು ಯಾರಿದ್ದರು? ಸ್ವರ್ಗದಿಂದ ದೇವದೂತರಂತೂ ಇದಕ್ಕಾಗಿ ಬಂದಿರಲಿಲ್ಲ ತಾನೆ? ಅವರು ಕೂಡ ಕೈಗೆ ಸಿಕ್ಕಿದ್ದನ್ನು ಕದಿಯುವ ಸಾಮಾನ್ಯರೇ ಆಗಿರಲಿಲ್ಲವೆ?

ಮತ್ತು ಆ ಕೊಲೆಗಾರನ ರುಂಡವನ್ನು ಹಾರಿಸಿದವರಾದರೂ ಯಾರಿದ್ದರು? ಆ ಕೆಲಸವನ್ನು ಮಾಡಲು ಅಲ್ಲಾನಿಂದ ಪೈಗಂಬರರು ಪ್ರೇಷಿತರಾಗಿ ಬಂದಿದ್ದರೆ? ಇಂತಹ ಹಲವು ಕೊಲೆ-ಹೊಡೆದಾಟಗಳನ್ನು ನಿತ್ಯವೂ ಮಾಡುತ್ತಿರುವ ಸಾಮಾನ್ಯರೇ ಅಲ್ಲವೇ ಅವರು ಕೂಡ?

ಆ ವ್ಯಭಿಚಾರಿಣಿಯನ್ನು 'ಸಂಗಸಾರ್' ಮಾಡಿದ ಜನರಾದರೂ ಕಣ್ಮಾರೆಗೆ ಎಷ್ಟೊಂದು ಕೃಷ್ಣಕೃತ್ಯಗಳಲ್ಲಿ ತಾವೇ ತೊಡಗಿರುವುದಿಲ್ಲ? ಎಲ್ಲರಂತೆ ಅವರೂ ಸಾಮಾನ್ಯರೇ ಅಲ್ಲವೆ?

ಕಾನೂನು! ಕಾನೂನೆಂಬುದು ಏನು ಪದಾರ್ಥ? ಎತ್ತರವಾದ ಮುಗಿಲಮೇಲಿಂದ ನೇಸರಿನ ಕಿರಣದಂತೆ ಅದು ಭೂಮಿಗಿಳಿಯುವುದನ್ನು ಯಾರಾದರೂ ಕಂಡಿದ್ದಾರೆಯೇ? ಹಾಗೆಯೇ ಈಶ್ವರನ ಇಚ್ಛೆಯು ಮಾನವನ ಇಚ್ಛೆಗೆ ಸಹಮತವಾಗಿರುವುದೆಂದು ಯಾರ ಅನುಭವವಾದರೂ ಹೇಳುತ್ತಿದೆಯೊ? ಅದೇ ಪ್ರಕಾರ ಯಾವ ಕಾಲದಲ್ಲಾದರೂ ದೇವದೂತರೇ ಭೂಮಿಗಿಳಿದು ಬಂದು 'ದುರ್ಬಲರನ್ನು ಬಾಳ-ಬೆಳಕಿಗೆ ಎರವಾಗುವಂತೆ ಮಾಡಿರಿ, ಪತಿತರ ಚಂಡು ಹಾರಿಸಿ, ತಪ್ಪಿತಸ್ಥರನ್ನು ಕಲ್ಲೆದೆಯಿಂದ ಕಾಲ್ಕೆಳಗೆ ತಳಿದು ಬಿಡಿರಿ,' ಎಂದು ಮಾನವರಿಗೆ ಆದೇಶವನ್ನಿತ್ತಿದ್ದಾರೆಯೆ?

ಇದೇ ಬಗೆಯ ವಿಚಾರಗಳು ನನ್ನನ್ನು ಬಲು ಕಳವಳಗೊಳಿಸಿದುವು. ಅಷ್ಟರಲ್ಲಿ ಯಾರದೊ ಕಾಲ ಸದ್ದು ಕೇಳ ಬಂತು. ನಾನು ಮುಖ ಮೇಲಕ್ಕೆತ್ತಿ ನೋಡಿದೆ; ಒಬ್ಬ ಹೆಣ್ಣುಮಗಳು ಗಿಡಬಳ್ಳಿಗಳನ್ನು ಬದಿಗೆ ಸರಿಸಿ, ಹಾದಿ ಮಾಡಿಕೊಳ್ಳುತ್ತ ಆ ಹೆಣದೆಡೆಗೆ ಬರುತ್ತಿರುವುದು ಕಂಡಿತು. ಅಲ್ಲಿಯ ಭೀಷಣ ದೃಶ್ಯವು ಅವಳನ್ನು ತುಂಬ ಗಾಬರಿಗೊಳಿಸಿತು. ಆಕೆ ನೇರವಾಗಿ ರುಂಡ ಕತ್ತರಿಸಿದ ಧಡದ ಹತ್ತಿರ ಬಂದಳು, ಗಟ್ಟಿದನಿ ತೆಗೆದು ಅಳತೊಡಗಿದಳು. ನಡುಕ ತುಂಬಿದ ತೋಳ ತೆಕ್ಕೆಯಲ್ಲಿ ಆ ಪ್ರೇತವನ್ನು ಅಪ್ಪಿಹಿಡಿದು ದುಃಖದ ಕೋಡಿಯನ್ನೇ ಹರಿಸಿದಳು ತನ್ನ ನಾಜೂಕಾದ ಬೆರಳುಗಳಿಂದ ಪ್ರೇತದ ಮುಂಗುರುಳನ್ನು ತೀಡುತ್ತ, ಎಷ್ಟೋ ಹೊತ್ತನ್ನು ಶೋಕದಲ್ಲಿ ಕಳೆದಳು. ಆ ಮೇಲೆ ಎದ್ದು, ಕೈಯಿಂದಲೇ ಭೂಮಿಯನ್ನು ಅಗಿದು, ಅವಳು ಗೋರಿಗೆ ಒಂದು ಕುಣಿಯನ್ನು ಸಿದ್ಧಪಡಿಸಿದಳು. ಆ ತರುಣನ ಹೆಣವನ್ನು ಅದರಲ್ಲಿರಿಸಿದಳು. ರಕ್ತಮುಳುಗಿದ ರುಂಡನನ್ನು ತಂದು ಧಡದ ಮೇಲಿಟ್ಟಳು. ಕುಣಿಯನ್ನು ಮಣ್ಣಿನಿಂದ ಮುಚ್ಚಿ, ಅಲ್ಲಿ ಬಿದ್ದಿರುವ ಕತ್ತಿಯನ್ನು ಗೋರಿಯ ಮೇಲೆ ಊರಿ ನಿಲ್ಲಿಸಿದಳು. ತರುವಾಯ ಅವಳು ನನ್ನ ಕಡೆಗೆ ನೋಡಿ 'ಅಮೀರನಿಗೆ ಹೋಗಿ ಹೇಳಿರಿ! ನನ್ನ ಮಾನಹರಣ ಮಾಡಬೇಕೆಂದಿರುವಾಗ ಯಾವ ಪುರುಷನು ನನ್ನನ್ನು ಉಳಿಸಿದನೊ, ಅವನ ಪ್ರೇತವನ್ನು ಪಶು-ಪಕ್ಷಿಗಳ ಭಕ್ಷ್ಯಕ್ಕೆ ಈಡು ಮಾಡುವುದ-

ಕ್ಕಿಂತ, ಮರಣವನ್ನು ಲಕ್ಷ್ಯಿಸದೆ ಆತನನ್ನು ಕೂಡುವುದು ನನಗೆ ಉಚಿತವೆಂದು ತೋಚಿತು!'

ನಾನು ಅವಳಿಗೆಂದೆ:—'ಅಮ್ಮಾ! ನೀನು ಎಷ್ಟೂ ಹೆದರಬೇಡ. ನಿನಗಿಂತ ಮುಂಚಿತವಾಗಿಯೇ ಈ ಮೃತಜೀವನಕ್ಕಾಗಿ ನಾನು ಕಂಬನಿ ಸುರಿಸಿದ್ದೇನೆ. ನಿನಗೊಂದು ಮಾತು ಕೇಳಬೇಕಾಗಿದೆ. ಈ ಯುವಕ ನಿನ್ನ ಮಾನವನ್ನುಳಿಸಿದ—ಎಂದು ಹೇಳಿದೆಯಲ್ಲ? ಅದೇನು ಸಂಗತಿ?'

ಕಂಪಿತ ಸ್ವರದಲ್ಲಿ ಆಕೆ ಹೇಳತೊಡಗಿದಳು:—'ಅಮೀರನ ಅಧಿಕಾರಿನೊಬ್ಬನು, ತೆರಿಗೆ ಹಾಗು 'ಜಿಝಿಮಾ' ಕರವನ್ನು ವಸೂಲು ಮಾಡಲು ನಮ್ಮ ಹೊಲಕ್ಕೆ ಬಂದಿದ್ದನು. ಆಗ ನಾನು ಅವನ ಕಣ್ಣಿಗೆ ಬೀಳಲು, ಅವನು ಬೀಕರ ಅಭಿಲಾಷೆಯಿಂದ ನನ್ನನ್ನು ನೋಡತೊಡಗಿದನು. ನನ್ನ ತಂದೆಯ ಮೇಲೆ ಹೆಚ್ಚು ಹಣ ಬಾಕಿ ತೆಗೆದು, ಅಷ್ಟು ಹಣವನ್ನು ತೆರುವ ಶಕ್ತಿಯಿಲ್ಲದ್ದಿನನ್ನ ತಂದೆಯ ಮೇಲೆ ಅತ್ಯಂತ ಕ್ರುದ್ಧನಾಗಿ, ಹಣಕ್ಕೆ ಬದಲಾಗಿ ಅಮೀರನ ಝನಾನ್‌ಖಾನೆಗೆ ಸೇರಿಸಲು ನನ್ನನ್ನು ! ವಶಪಡಿಸಿಕೊಂಡನು. ನಾನು ಪರಿಪರಿಯಿಂದ ಬೇಡಿಕೊಂಡರೂ, ಅವನಿಗೆ ದಯೆ ಉಂಟಾಗಲಿಲ್ಲ. 'ತಂದೆಯ ಹಣ್ಣಾದ ವಯಸ್ಸನ್ನಾದರೂ ನೋಡು!' ಎಂದೆ. ಆ ಕಟುಕನಿಗೆ ಕರುಣೆ ಬರಲಿಲ್ಲ. ಆಗ ನಾನು ಊರ ಜನರಿಗೆ ಕೇಳುವಂತೆ ದೊಡ್ಡ ದನಿಯಲ್ಲಿ ಮೊರೆಯಿಟ್ಟೆ. ಯಾವನೊಡನೆ ನನ್ನ ನಿಶ್ಚಯವಾಗಿತ್ತೊ ಆ ತರುಣನು ಮುಂದಾಗಿ, ಅಧಿಕಾರಿಯ ಪಾಶದಿಂದ ನನ್ನನ್ನು ಬಿಡಿಸಿದನು. ಅಧಿಕಾರಿಯು ತರುಣನನ್ನು ಕೊಲ್ಲಲು ಹವಣಿಸಿದನು. ಆ ತರುಣನು ಕೌಶಲ್ಯದಿಂದ ಪಾರಾಗಿ, ಗೋಡೆಗೆ ತಗಲುಹಾಕಿದ್ದ ಒಂದು ಹಳೆಯ ಕತ್ತಿಯಿಂದ ಅಧಿಕಾರಿಯನ್ನು ತುಂಡರಿಸಿ ಹಾಕಿ, ನನ್ನ ಗೌರವವನ್ನು ಕಾಯ್ದನು.

ಹೀಗೆ ಕೊಲೆಮಾಡಿ, ತರುಣನು ಹೇಡಿಯಂತೆ ಓಡಿಹೋಗದೆ, ಸತ್ಯದ ಪ್ರತಿಷ್ಠೆಗಾಗಿ ಆ ಹೆಣದ ಹತ್ತಿರ ನಿಂತನು. ಆಗ ಅಧಿಕಾರಿಯ ಸೀಪಾಯಿಗಳು ಅವನನ್ನು ಬಂಧಿಸಿ ಸೆರೆಮನೆಗೆ ಒಯ್ದರು.

ಇಷ್ಟು ಮಾತನಾಡಿ ಆ ಹೆಣ್ಣುಮಗಳು ಪ್ರಭಾವಿಯಾದ ನೋಟವನ್ನು ಬೀರಿ, ಲಗುಬಗೆಯಿಂದ ಹೊರಟು ಹೋದಳು. ಅವಳ ಕರುಣಾಮಯ ಸ್ವರವು ಅಲ್ಲಿಯ ವಾತಾವರಣದಲ್ಲೆಲ್ಲ ದನಿಗೊಂಡಿತು.

ಕುಸು ಹೊತ್ತಿನ ಮೇಲೆ ತರುಣನೊಬ್ಬನು ಬರುವುದನ್ನು ಕಂಡೆ. ಅವನು ತನ್ನ ಮುಖವನ್ನು ಬಟ್ಟೆಯಿಂದ ಮುಚ್ಚಿದ್ದನು. ಅವನು ಆ ವ್ಯಭಿಚಾರಿಣಿಯ ಬಳಿ ಬಂದು, ತನ್ನ ವೈಯಲ್ಲಿಯ ಉದ್ದಂಗಿಯನ್ನು ತೆಗೆದು ಆ ನಗ್ನ ಸ್ತ್ರೀದೇಹಕ್ಕೆ ಹೊದ್ದಿಸಿ, ಕೈಯಲ್ಲಿದ್ದು ಬಾಕಿನಿಂದ ನೆಲವನ್ನು ಅಗಿಯಹತ್ತಿದನು. ಗೋರಿ ತಯಾರಾದಕೂಡಲೆ ಅಲ್ಲಿ ಅವಳನ್ನು ಹೂಳಿಟ್ಟು, ಅಲ್ಲಲ್ಲಿಯ ನಾಲ್ಕು ಹೂಗಳನ್ನು ಆರಿಸಿ ತಂದು, ಅದರದೊಂದು ಗುಚ್ಛವನ್ನು ತಯಾರಿಸಿ, ಅದರ ಮೇಲಿಟ್ಟನು. ಆಗ ಅವನು ಹೊರಡಲನುವಾಗಲು, ನಾನು ಅವನನ್ನು ತಡೆದು ಕೇಳಿದೆನು:—'ಎಲೆ ಹುಡುಗಾ! ಯಾವ ಕಾರಣಕ್ಕಾಗಿ ನೀನು ಅಮೀರನನ್ನು ಲೆಕ್ಕಿಸದೆ, ಪ್ರಾಣವನ್ನು ಪಣಕ್ಕೆ ಹಚ್ಚಿ ಈ ಸ್ತ್ರೀಯ ದೇಹವು ಹದ್ದು-ಕಾಗೆಗಳಿಗೆ ಶುತ್ತಾಗಬಾರದೆಂದು ಈ ಸಾಹಸವನ್ನು ಕೈಕೊಂಡೆ?'

ತರುಣನು ನನ್ನನ್ನು ದಿಟ್ಟಿಸಿದನು. ಅವನು ರಾತ್ರಿಯನ್ನೆಲ್ಲ ನಿದ್ದೆ ಮಾಡದೆ ಅಳುವಿನಲ್ಲಿಯೇ ಕಳೆದಿರಬೇಕು ಎಂದೆನಿಸಿತು. ಥರಥರ ನಡುಗುತ್ತಿರುವ ದನಿಯಲ್ಲಿ ಅವನು ಉಸುರಿದನು:— 'ಯಾವನಿಗಾಗಿ ಈ ಬಡಪಾಯಿಗೆ 'ಸಂಗಸಾರ'ದ ಶಿಕ್ಷೆಯನ್ನನುಭವಿಸಬೇಕಾಯಿತೊ ಆ ದುರ್ದೈವಿ ನಾನು. ಚಿಕ್ಕಂದಿನಲ್ಲಿ ನಾನೂ ಆಕೆಯೂ ಕೂಡಿ ಬೆಳೆದವರು, ಕೂಡಿ ಆಡಿದವರು. ಆಗಿನಿಂದಲೂ ನಾವು ಒಬ್ಬರನ್ನೊಬ್ಬರು ಪ್ರೀತಿಸಿದೆವು. ಮುಂದೆ ನಾವು ವಯಸ್ಸಿಗೆ ಬರಲು, ನಮ್ಮ ಪ್ರೇಮವೂ ಹೂತು ಕಾಯಿಗೆ ಬಂತು. ಒಮ್ಮೆ ನಾನು ಊರಲ್ಲಿಲ್ಲದಾಗ, ಆಕೆಯ ತಂದೆಯು ಅವಳನ್ನು ಇನ್ನೊಬ್ಬನೊಡನೆ ಮದುವೆಮಾಡಿದನು. ಆ ಥಾರ್ತ್ ಇದು ಅವಳ ಮನಸ್ಸಿಗೆ ತೀರ ವಿರುದ್ಧವಾಗಿತ್ತು. ನಾನು ಊರಿಂದ ಮರಳಿ ಬಂದ ಮೇಲೆ ಈ ಸುದ್ದಿಯನ್ನು ಕೇಳಿ, ನನಗೆ ಜೀವನವೇ ಹಾಳು ಎನಿಸಿ, ಬದುಕುವುದೇ ಕಷ್ಟವಾಗಿ ತೋರಿತು. ನಾನು ಎಲ್ಲ ಬಗೆಯಿಂದಲೂ ಪರಾಭೂತನಾದೆ. ಆಗ ಪ್ರೇಮವೇ ನನ್ನ ಮಾರ್ಗದರ್ಶಕವಾಯಿತು. ನನ್ನ ಪ್ರಿಯತಮೆಯ ಕಣ್ಣಿನ ಅಂದವನ್ನು

ದಿ ನೂತನ ಆಯುರ್ವೇದ
ಕಾರ್ಯಾಲಯ ಲಿ., ವಿಜಾಪೂರ

ಎಲ್ಲ ಬಗೆಯ ಆಯುರ್ವೇದ ಔಷಧಗಳನ್ನು ಶಾಸ್ತ್ರಶುದ್ಧವಾಗಿ ಸಿದ್ಧಗೊಳಿಸುವ ಕರ್ನಾಟಕದ ಸರ್ವಾಂಗ ಪರಿಪೂರ್ಣವಾದ ಕಾರಖಾನೆ. ಅನೇಕ ವೈದ್ಯ-ಡಾಕ್ಟರರು ನಮ್ಮ ಔಷಧಗಳನ್ನು ಪಯೋಗಿಸಿ ಒಳ್ಳೇ ಗುಣಕಾರಿಯೆಂದು ಪ್ರಶಂಶಿಸಿದ್ದಾರೆ. ಎಲ್ಲ ಪ್ರಕಾರದ ಭಸ್ಮ-ರಸಾಯನ-ಮಾತ್ರೆ-ಆಸವಾರಿಷ್ಟ ಕಷಾಯಗಳು — ಅವಲೇಹ-ತೈಲ ಮೊದಲಾದ ಔಷಧಗಳಿಗೆಲ್ಲ ಇಂದೇ ಬರೆಯಿರಿ.

ಕರ್ನಾಟಕದಲ್ಲೆಲ್ಲ ಸ್ವಾಕಸ್ಥರು ಜೇಕಾಗಿದ್ದಾರೆ.

೩೦-೩೫ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಗಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಇದರಿಂದ ಮೂತ್ರದೊಂದಿಗೆ—ಸ್ವಪ್ನದ—ವೀರ್ಯಸ್ಖಲನ ಆಗುವುದು, ಸ್ಮರಣೆಯ ದುರ್ಬಲತೆಯಿಂದ ಉಂಟಾದ ಅಶಕ್ತತೆ, ಸರ್ವಾಂಗಶಕ್ತ, ಇಂದ್ರಿಯಶೈಥಿಲ್ಯ ಇತ್ಯಾದಿಗಳನ್ನೆಲ್ಲ ಹೊಡೆದೋಡಿಸಿ, ಜೀರ್ಣಾವಯವನ್ನು ಸಶಕ್ತಗೊಳಿಸುವುದು. ಮಲಕಟ್ಟಿದ್ದಿಯಾಗಿ ತುಂಬ ಹಸಿವೆಯಾಗುವುದು. ತರುಣರು ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೬೦-೭೦ ವಯಸ್ಸಿನ ಮುದುಕರೂ ಇದರ ಸೇವನೆಯಿಂದ ನವಚೈತನ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ ಹೆಣ್ಣು ಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಮಕ್ಕಳು ಕೂಡಲೆ ಸಾಯುವುದು, ಏನಾದಲಾದುವುಗಳ ಮೇಲೆ ಇದು ರಾಮಬಾಣೋಪಾಯ. ಇದರಲ್ಲಿ ಹಲವು ಗಿಡಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬಿಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೨ ರೂ. ೭ ದಿನಗಳಲ್ಲಿ ಗುಣ. ೨ ಡಬ್ಬಿಯ ಬೆಲೆ ೩ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟು-ಸಾಧಕಾರರ ಸಲುವಾಗಿ ಸ್ಪೆಷಲ್ ಡಬ್ಬಿಗೆ ೧೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೆ ೧ ರೂ. ದುಂತೆ ಆಡ್ವಾನ್ಸು ಕಳುಹಬೇಕು, ಅದನ್ನು ವಜಾಮಾಡಿ ಉಳಿದ ಹಣಕ್ಕೆ ವಿ. ಪಿ. ಸಾಮಾನು ತ್ತೇವೆ. ಕಮ್ಮೀಷನ್ ಇಲ್ಲ. ೧ ಡಬ್ಬಿ ೩ ದಿನಕ್ಕೆ ಸಾಲುವುದು. ೨ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚವಿಲ್ಲ. ೪ ಡಬ್ಬಿ ಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದಬಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ನ್ಯಾ. ಡಿ. ಎಸ್. ಆ್ಯಂಡ್ ಕೊ.**
ಔಷಧಾಲಯ
ಮು. ಪೋ. ಮಿರಜ (ಎಸ್. ಎಂ. ಸಿ.)

ಕಾಣಬೇಕು, ಸೊಲ್ಲ ಜೀವನ್ನು ಸವಿಯಬೇಕು ಎಂದು ಕಳ್ಳತನದಿಂದ ಅವಳ ಊರಿಗೆ ಹೋದೆ. ಆಗ ಆಕೆ ಮನೆಯಲ್ಲಿ ಒಬ್ಬಳೇ ಇದ್ದಳು. ತನ್ನ ಅನೈಷ್ಟವನ್ನು ಶಪಿಸುತ್ತ ಅವಳು ತನ್ನ ಹಾಳುಬಾಳಿಗಾಗಿ ಶೋಕಿಸುತ್ತಿದ್ದಳು. ನಾನು ಹೋಗಿ ಅವಳ ಹತ್ತಿರ ಕುಳಿತೆ. ನಾವು ಸಮಾಧಾನದಲ್ಲಿ ಮಾತು ನಡೆಯಿಸಿದೆವು. ದೇವರ ಸಾಕ್ಷಿಯಾಗಿ ಹೇಳುತ್ತೇನೆ — ಆಗ ನಮ್ಮ ಮನಸ್ಸುಗಳು ಅತ್ಯಂತ ಪವಿತ್ರವಾಗಿದ್ದುವು. ಒಂದು ಗಂಟೆಕಾಲ ಹೀಗೆ ಕಳೆಯುವ ಹೊತ್ತಿಗೆ ಕೆಯ ಗಂಡನು ಅಲ್ಲಿಗೆ ಬಂದನು. ನನ್ನನ್ನು ನೋಡಿಯಂತೂ ವನ ಸಿಟ್ಟು ನೆತ್ತಿಗೇರಿತು, ಅವನು ಹುಚ್ಚನೇ ಆದನು. ಆಗ ಮನುಷ್ಯನು ಆ ಹೆಂಗುಸಿನ ಕೊರಳಿಗೆ ಅರಿವೆಯನ್ನು ಸುತ್ತಿ, ಳನ್ನು ಹಿಡಿದು ಒದರಾಟ ಚೀರಾಟ ನಡೆಯಿಸಿದನು:— ಎಲ್ರೆಪ್ಪೊ ಬರ್ರಿ! ಈ ಜಾರಿಣಿಯನ್ನೂ, ಇವಳ ಜಾರನನ್ನೂ ತ್ಯಕ್ಷ ಕಣ್ಣಾರೆ ನೋಡಿರಿ!' ಕೂಡಲೆ ಜನರು ನೆರೆದರು, ತುಸು ತ್ತಿನಲ್ಲಿ ಪೋಲೀಸರೂ ಬಂದು ಸೇರಿದರು. ಆಗ ಗಂಡನು ಅವ-ನ್ನು ಪೋಲೀಸರ ವಶಕ್ಕೆ ಒಪ್ಪಿಸಿದನು. ಅವರು ಅವಳನ್ನು ದರ-ಟ್ಟ ಎಳೆಯುತ್ತ ಚೌಕಿಗೆ ಒಯ್ದರು. ಆದರೆ ನನ್ನ ಕೂದಲಕ್ಕೂ ಯಾವನೂ ಕೈ ಹಚ್ಚಲಿಲ್ಲ. ಯಾಕೆಂದರೆ ಕಾನೂನು! ಗಂಡುಸು ಹಾದರ ಮಾಡಿದರೂ ತಪ್ಪಲ್ಲ!'

ಈ ಸುದ್ದಿಯನ್ನು ಹೇಳಿ, ತರುಣನು ಮೌರಿ ಮುಚ್ಚಿಕೊಂಡು ಊರ ಕಡೆಗೆ ಹೊರಟನು. ನಾನು ನೇತಾಡುವ ಪ್ರೇತವನ್ನು ನೋಡುತ್ತ ಸಚಿಂತನಾಗಿ ಕುಳಿತೆ.

ಸುಮಾರು ಒಂದು ಗಂಟೆಯ ಹೊತ್ತಿಗೆ, ಸಾಯಲಾದ ಒಬ್ಬ ಹೆಂಗುಸು ಅಲ್ಲಿಗೆ ಬಂದಳು. ಮೈಮೇಲಿನ ಬಟ್ಟೆಯಂತೂ ಹರಿದು ಚಿಂದಿಯಾಗಿತ್ತು. ನೇತಾಡುವ ಹೆಣದ ಬಳಿ ಬಂದು, ಗೋಳಿಟ್ಟು ಅತ್ತು. ತನ್ನ ವೇದನೆಯನ್ನು ತೋಡಿಕೊಂಡಳು. ಬಳಿಕ ಅವಳು ಗಿಡವನ್ನೇರಿ, ತನ್ನ ಕೈಯಿಂದ ರೇಶಿಮೆಯ ಹಗ್ಗವನ್ನು ಬಿಚ್ಚಿದಳು. ಒದ್ದೆಬಟ್ಟೆಯಂತೆ ಆ ಹೆಣವು ಭೂಮಿಯ ಮೇಲೆ ಬಿದ್ದಿತು. ಹೆಂಗುಸು ಗಿಡದಿಂದ ಕೆಳಗಿಳಿದು, ಎರಡೂ ಗೋರಿಗಳ ನಡುವೆ ಮೂರನೆಯ ಕುಣಿಯನ್ನು ತೆಗೆದು, ಆ ಪ್ರೇತವನ್ನು ಅಲ್ಲಿ ದಫನ ಮಾಡಿದಳು. ಮಣ್ಣು ಮುಚ್ಚಿ ಆದ ಮೇಲೆ, ಎರಡು ಪುಳ್ಳಿಗಳನ್ನು ತಂದು ಕ್ರಾಸಿನಂತೆ ಗೋರಿಯ ತಲೆಯ ಕಡೆಗೆ ನಿಲ್ಲಿಸಿದಳು. ಆವಳು ಇನ್ನು ಹೊರಡುವ ಹವಣಿಕೆಯಲ್ಲಿದ್ದಳು. ಆಗ ನಾನೆಂದೆ:— "ತಾಯಿ, ನೀನು ಇಲ್ಲಿಯ ವರೆಗೆ ಬಂದು ಈ ಕಳ್ಳನಿಗೆ ಮಣ್ಣು ಕೊಡುವಂಥ ಯಾವ ಕಾರಣವಿತ್ತು? ಅಂಥ ಸಂಬಂಧವೇನಾದರೂ ಇದೆಯೆ?"

ವಿಚಾರಪೂರಿತ ದೃಷ್ಟಿಯುಳ್ಳ ಆ ಹೆಂಗುಸು ನನ್ನನ್ನು ಎವೆಯಿಕ್ಕದೆ ಒಂದು ಕ್ಷಣ ನೋಡಿದಳು. ಆ ಮೇಲೆ ಹೇಳತೊಡಗಿದಳು:—'ಇವನು ನನ್ನ ಗಂಡ. ನನ್ನ ಬಾಳ ಸಂಗಾತಿ, ನನ್ನ ಮಕ್ಕಳ ತಂದೆಯೂ ಆಹುದು. ಇಂದು ನಮ್ಮ ಐದು ಮಕ್ಕಳು ಹಸಿವೆಯಿಂದ ಸಾಯುವುದರಲ್ಲಿವೆ. ಅವರಲ್ಲಿ ಎಲ್ಲಕ್ಕೂ ಹಿರಿಯ ಮಗನಿಗೆ ೮ ವರ್ಷ, ಚಿಕ್ಕ ಮಗು ಮೊಲೆಯುಣ್ಣುತ್ತಿದೆ. ನನ್ನ ಗಂಡನೇನು ಕಳ್ಳನಲ್ಲ. ಚರ್ಚಿನ ಹೊಲದಲ್ಲಿ ಬೇಸಾಯ-ಮಾಡುತ್ತಿದ್ದ. ಅಲ್ಲಿಯ ಪಾದ್ರಿಗಳು ತೀರ ತುಸು ಸಂಬಳವನ್ನು ಕೊಡುತ್ತಿದ್ದರು. ಅದು ನಮ್ಮ ಒಪ್ಪೊತ್ತಿನ ಹೊಟ್ಟಿಗೆ ಕೂಡ ಸಾಲುತ್ತಿರಲಿಲ್ಲ. ಆಗ ನನ್ನ ಗಂಡ ಹೊಸ ಹರಯದ ಹುಡುಗನಾಗಿದ್ದ. ಅಲ್ಲಿಯ ತೋಟದ ಗಿಡಗಳಿಗೆ ಬೆವರು ಸುರಿಸಿ, ನೀರೆರೆದು, ಯಾವಾಗಲೂ ಅವು ಹೆಚ್ಚು ಹಸಿರಾಗಿ ಕಾಣುವಂತೆ ಇಡುತ್ತಲಿದ್ದ. ಎಷ್ಟು ಕಾಲ ಅವನಿಂದ ಹೀಗೆ ಕೆಲಸವಾದೀತು? ಅವನು ಬೇಗನೆ ಮುದುಕನಾದ, ಅವನ ಶಕ್ತಿ ಕುಗ್ಗಿತು, ಕೈಯಿಂದ ಕೆಲಸವಾಗದಾಯಿತು. ರೋಗಗಳು ಅವನಲ್ಲಿ ಮನೆ ಮಾಡಿದುವು. ಆಗ ಪಾದ್ರಿಗಳು ಅವನನ್ನು ಕೆಲಸದಿಂದ ಕಿತ್ತು ಹಾಕಿದರು. 'ಚರ್ಚಿಗೆ ಇನ್ನು ಮೇಲೆ ನಿನ್ನ ಕೆಲಸದ ಅಗತ್ಯ ವಿಲ್ಲ. ನೀನಿನ್ನು ಹೋಗು. ನಿನ್ನ ಮಕ್ಕಳು ದೊಡ್ಡವರಾದ ಮೇಲೆ ಬರಲಿ, ಅವರನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತೇವೆ!' ಎಂದು ಹೇಳಿದರವರು! ನನ್ನ ಗಂಡ ಅವರೆದುರು ಬೇಕಾದಷ್ಟು ಅತ್ತು ಗೋಳಾಡಿದ. 'ಯೇಸುಕ್ರಿಸ್ತನ ಹೆಸರಿನಲ್ಲಿಯಾದರೂ ದಯೆ-

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಸುಮಾರು ೬೦೦ ಪುಟಗಳಲ್ಲಿ ನಾಲ್ಕು ಗ್ರಂಥಗಳು.

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚಸೇರಿ

ಸಂಪಾದಕರು— **ಕಲಮದಾನಿ ಗುರುರಾಯರು**

ಹೊಸ ವರ್ಷದ ಮೊದಲನೆಯ ಗ್ರಂಥ

ಉತ್ಕಲಾ ಭಾಗ ೨

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ದೋರಿ' ಎಂದು ಬಿನ್ನವಿಸಿಕೊಂಡ. ಆಣೆ ಚೂರಿ ಇಟ್ಟುಕೊಂಡ! ಆದರೆ ಎಲ್ಲವೂ ಬಂಡೆಗಲ್ಲುಮೇಲೆ ಮಳೆಗರೆದಂತಾಯಿತು. 'ಆ ಪಾದ್ರಿಗಳಿಗೇನೂ ಅಂತಃಕರಣ ಬರಲಿಲ್ಲ!'

'ನವಕರಿಯನ್ನಾದರೂ ಹುಡುಕಬೇಕೆಂದು ಪಟ್ಟಣಕ್ಕೆ ಹೋದ; ಅಲ್ಲಿಂದಲೂ ನಿರಾಶನಾಗಿ ಮರಳಿದ. ಯಾಕೆಂದರೆ ದೊಡ್ಡ ದೊಡ್ಡ ಬಂಗಲೆಯಲ್ಲಿರುವವರು, ಗಟ್ಟಿಮುಟ್ಟಾಗಿರುವವರನ್ನೇ ಕೆಲಸಕ್ಕೆ ಇಡುತ್ತಾರೆ. ಆಮೇಲೆ ಭಿಕ್ಷೆಯಾದರೂ ದೊರೆತೀತು ಎಂದು ಬೀದಿಯ ಮೇಲೆ ಕುಳಿತ. ಅದೂ ನಡೆಯಲಿಲ್ಲ, 'ಇದುವರೆಗೆ ಗೃಹಸ್ಥಾಶ್ರಮಿಯಾಗಿ ಬಾಳಿದವರಿಗೆ ಭಿಕ್ಷೆ ಬೇಡುವುದು ಕೂಡ ಧರ್ಮಕ್ಕೆ ವಿರುದ್ಧವೇ ಅಲ್ಲವೆ?' ಜನರು ಇಂತಹ ಮಾತುಗಳನ್ನಾಡಿ ಭಿಕ್ಷೆ ನೀಡದೆ ಹೋಗುತ್ತಿದ್ದರು.

ಕೊನೆಗೆ ಒಂದು ರಾತ್ರಿ, ನಮ್ಮಮಕ್ಕಳು ಹಸಿವೆಯ ವ್ಯಾಕುಲತೆಯಿಂದ ನೆಲದ ಮೇಲೆ ಬಿದ್ದು ಸಂಕಟಪಡಹತ್ತಿದುವು. ಅನ್ನವಿಲ್ಲದೆ ಅವರ ಪ್ರಾಣವೇ ಹೋಗುವಂತೆನಿಸಿತು. ಹಸುಗೂಸು ಮೊಲೆಯುಣ್ಣುತ್ತಿತ್ತು. ಆದರೆ ಮೊಲೆಯಲ್ಲಿ ಹಾಲೇ ಇರಲಿಲ್ಲ. ಇದನ್ನು ನೋಡಿ ಸಹಿಸಲಾರದೆ ನನ್ನ ಗಂಡನು, ಆ ಕಗ್ಗತ್ತಲೆಯಲ್ಲಿ ಕಳ್ಳ ಹೆಜ್ಜೆಯಿಂದ, ಯಾರಿಗೂ ಕಾಣದಂತೆ ಚರ್ಚಿನ ಉಗ್ರಾಣದಲ್ಲಿ ಹೊಕ್ಕನು. ಅಲ್ಲಿ ಪಾದ್ರಿಗಳು ಅನ್ನ ಮತ್ತು ಮದ್ಯವನ್ನು ಸಂಗ್ರಹಿಸಿ ಇಡುತ್ತಾರೆ. ನನ್ನ ಗಂಡನು ಒಂದು ಜೋಳಿಗೆಯಲ್ಲಿ ತುಸು ಧಾನ್ಯವನ್ನು ತುಂಬಿ, ಅದನ್ನು ಹೆಗಲ ಮೇಲಿರಿಸಿ ಅಲ್ಲಿಂದ ಹೊರಬಿದ್ದನು. ನಾಲ್ಕು ಹೆಜ್ಜೆ ಹೋಗುವುದರೊಳಗಾಗಿ ಅಲ್ಲಿಯ ಕಾವಲುಗಾರರು ಎಚ್ಚರಾಗಿ, ಅವನನ್ನು ಬಂಧಿಸಿ, ಮರುದಿನ ಬೆಳಗಿನಲ್ಲಿ ಪೋಲೀಸರ ಸ್ವಾಧೀನಪಡಿಸಿದರು.

ಪೋಲೀಸರು ಅವನನ್ನು ತುರಂಗದಲ್ಲಿರಿಸಿದರು. ಮುಂದೆ ಅವನ ಪ್ರೀತಿಯನ್ನು ಹದ್ದು-ಕಾಗೆಗಳ ಆಹಾರಕ್ಕಾಗಿ ಇಲ್ಲಿ ಗಿಡಕ್ಕೆ ಜೋತು ಬಿಡಲಾಯಿತು. ಅವನು ಮಾಡಿದ ತಪ್ಪು ಇದೇ ತಾನೇ; ಕಷ್ಟಪಟ್ಟು ದುಡಿದು ಬೆಳೆಯಿಸಿದ ಚರ್ಚಿನ ಧಾನ್ಯವನ್ನು, ತನ್ನ ಮಕ್ಕಳ ಹೊಟ್ಟೆಗೆ ಹಾಕಲು ಹವಣಿಸಿದ!"

ಇಷ್ಟು ಮಾತುಗಳನ್ನಾಡಿ ಆ ಹೆಣ್ಣುಮಗಳು ಹೊರಟು ಹೋದಳು.

ನಾನು ಆ ಗೋರಿಗಳ ಪತ್ತಿರದಲ್ಲಿ ನಿಂತೆ. ಅಲ್ಲಿಯ ಮಣ್ಣಿನ ಕಣಕಣಗಳಿಂದಲೂ ಗೋಳಿನ ಸ್ವರಗಳೇ ಕೇಳಬರುತ್ತಿದ್ದುವು. ನಿಂತಾಗಲೆ ಹೀಗೊಂದು ವಿಚಾರ ಬಂತು:—'ನನ್ನ ಹೃದಯದಲ್ಲಿ ಎದ್ದಿರುವ ಈ ಉರಿಯ ಜ್ವಾಲೆಯು ಈ ಬಯಲಲ್ಲಿಯ ಗಿಡಗಳಿಗೂ ತಾಗಿದರೆ, ಅವು ಕೂಡ ಸಜೀವವಾಗಿ ತಮ್ಮ ಜಾಗದಿಂದ ಕದಲಿ, ಅವೀರನಸಿಸಾಯಿಗಳೊಡನೆ ಕಾಳೆಗಕ್ಕೆ ನಿಂತಾವು; ಮತ್ತು ಚರ್ಚಿನ ಗೋಡೆಗಳನ್ನು ನೆಲಸಮಗೊಳಿಸಿ, ಅಲ್ಲಿಯ ಪಾದ್ರಿಗಳನ್ನು ಮಣ್ಣುಮುಕ್ಕಿಸಿಯಾವು!'

ಸೂರ್ಯನು ತಾಯ ಮಡಿಲನ್ನು ಸೇರುತ್ತಿದ್ದನು. ಮಾನವರ ಅನ್ಯಾಯ—ಅತ್ಯಾಚಾರಗಳನ್ನು ನೋಡಿ ಹೇಸಿಕೆಯುಂಟಾಗಿಯೇ ಅವನು ಕಣ್ಮರೆಯಾಗುವುದನ್ನು ನಿಶ್ಚಯಿಸಿದ್ದನು. ಸಂಧ್ಯಾಕಾಲವು ಪ್ರಪಂಚದ ಮೇಲೆಲ್ಲ ತನ್ನ ಆವರಣವನ್ನು ಹೊದ್ದಿಸಲು ಸಿದ್ಧತೆ ನಡೆಸಿತ್ತು. ನಾನು ಆಕಾಶವನ್ನು ನೋಡುತ್ತ ಗಟ್ಟಿಯಾಗಿ ಕೂಗಿದೆ:—"ಎಲೋ ನೀರ ಬಂಟ, ನೋಡಿದೆಯಾ ನಿನ್ನ ಗೋರಿಯ ಮೆಲೆ ನಿಲ್ಲಿಸಿದ ಕತ್ತಿಯನ್ನು! ಎಲೋ ತಾಯಿಯೇ, ನೋಡಿದೆಯಾ ಪ್ರೇಮದ ಕಿರಣಗಳನ್ನೇ ಹೊರಸೂಸುವ ಈ ನಿನ್ನ ಹೂವುಗಳನ್ನು! ಪ್ರಭು ಏಸುವೆ, ನೋಡಿದೆಯಾ ಇರುಳನಲ್ಲಿ ನುಸಕಾಗುತ್ತ ನಡೆದಿರುವ ಈ ನಿನ್ನ ಕ್ರೂಸನ್ನು?"

ಹಿಂದಿನ ಮೀರಾದ ಉಪಯುಕ್ತ ಪುಸ್ತಕ

ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು

ಲೇ—ಡಾ. ವಾಸುದೇವರಾವ್. ಎಂ.ಎ., ಬಿ.ಟಿ.

ಸುರಪ್ಪಲ್ ದ. ಕ.

೫ ವಿಶಿಷ್ಟ ಭೂಪಟಗಳು — ೨೫ ಚಿತ್ರಗಳು

ಮದ್ರಾಸು ವಿಶ್ವವಿದ್ಯಾನಿಲಯದ ಬಹುಮಾನಪಡೆದ ಪುಸ್ತಕ.

ಬೆಲೆ ೨-೮-೦

(೧) ಪ್ರತಿಗಳನ್ನು ಗ್ರಂಥಕರ್ತರಿಂದಾಗಲಿ (೨) ಮಾನೋಹರ ಗ್ರಂಥ ಭಾಂಡಾರ, ಧಾರವಾಡ. (೩) ಕರ್ನಾಟಕ ಪುಸ್ತಕ ಭಾಂಡಾರ, ಬೆಂಗಳೂರು. (೪) ಇಂಡಿಯನ್ ಇಂಡಸ್ಟ್ರಿಯಲ್ಸ್ ಮತ್ತು ಏಜನ್ಸೀಸ್ ಬೆಂಗಳೂರು ಇವರಿಂದಾಗಲಿ ಪಡೆಯಬಹುದು.

ಆಧುನಿಕ ಮತ್ತು ಪಂಪನ ಕಾಲದ ವಸ್ತ್ರಾಭರಣಗಳು

ಪ್ರೊ. ಕೆ. ಜಿ. ಕುಂದಣಗಾರ ಎಂ. ಎ. ಬೆಳಗಾಂವಿ

ಒಂದು ತಲೆಯಿಂದ ಇನ್ನೊಂದು ತಲೆಗೆ ಬದಲಾಗುತ್ತಿರುವ ಇಂದಿನ ವಸ್ತ್ರಾಭರಣಗಳನ್ನು ನೋಡಿದರೆ, ಸಾವಿರ ವರ್ಷಗಳಿಗೆ ಮೊದಲಿನ ಪಂಪಕವಿಯ ಕಾಲದುವುಗಳಿಗಿಂತ ಇಂದಿನವು ಎಷ್ಟು ಬದಲಾವಣೆ ಹೊಂದಿರ ಬೇಡ? ಹೊತ್ತು ಹೊತ್ತಿಗೆ ಹೊಸಪರಿಯ ಸಿಂಗರ ಬೇಕು!

ಅಂದವಾದ ವಸ್ತು ಮಗುವಿಗೆ ಬೇಕು, ಚಿಕ್ಕ ಮಕ್ಕಳಿಗೆ ಬೇಕು, ದೊಡ್ಡವರಿಗೆ ಬೇಕು, ಮುದುಕರಿಗೂ ಬೇಕು ಎಂಬುದು ವ್ಯವಹಾರದೊಳಗಿನ ಅನುಭವ. 'ಹೀಗೇಕೆ?' ಎಂದು ವಿಚಾರಿಸುವುದಾದರೆ, ಅಂಥ ವಸ್ತುಗಳಲ್ಲಿ ಯಾವುದೋ ಒಂದು ಆಕರ್ಷಕ ಗುಣವಿರುತ್ತದೆ. ಅದನ್ನು ನೋಡಿದರೆ ಒಂದು ವಿಧದ ಸಂತೋಷ, ತಟ್ಟದರೆ ಒಂದು ವಿಧದ ಆನಂದ, ಅದನ್ನು ವಶಪಡಿಸಿಕೊಂಡರೆ ತೃಪ್ತಿ. ಅಷ್ಟಾವಕ್ರನನ್ನು ನೋಡಿದರೆ ಯಾರಿಗೂ ಸಂತೋಷವಾಗುವುದಿಲ್ಲ. ಕಲ್ಲು ತಟ್ಟಿದರೆ ಆನಂದವಿಲ್ಲ. ಹರಕು ಬಟ್ಟೆಯನ್ನು ವಶಪಡಿಸಿಕೊಂಡರೆ ತೃಪ್ತಿಯಿಲ್ಲ. ಆ ಆ ಭಾವಗಳ ಅನುಭವವಾಗಬೇಕಾದರೆ, ಆ ಭಾವೋದ್ದೀಪಕ ವಸ್ತುಗಳೇ ಬೇಕು. ಆ ವಸ್ತುಗಳು ಮನುಷ್ಯನ ವಯೋನುಗುಣವಾಗಿ ಬೇರೆ ಬೇರೆಯಾಗಬಹುದು. ಅವುಗಳನ್ನು **ಸ್ವಾಭಾವಿಕ** ಮತ್ತು **ಕೃತ್ರಿಮ** ಎಂದು ಎರಡು ವಿಧವಾಗಿ ವಿಂಗಡಿಸಬೇಕಾಗುವುದು. ಚಂದ್ರನಲ್ಲಿ ಆಹ್ಲಾದಕ ಗುಣವಿದೆ, ಕನುಲದಲ್ಲಿ ಸೌಂದರ್ಯವಿದೆ, ಮಾವಿನಹಣ್ಣಿನಲ್ಲಿ ರುಚಿಯಿದೆ—ಇವೇ ಮುಂತಾದ ಸ್ವಾಭಾವಿಕ ವಸ್ತುಗಳಲ್ಲಿರುವ ವಿಶಿಷ್ಟ ಗುಣಗಳ ಮೂಲಕ, ಆ ವಸ್ತುಗಳು ಪ್ರಿಯವಾಗುತ್ತವೆ. ಆ ಗುಣಗಳು ಬೇರೆ ಬೇರೆ ಭಾವೋದ್ದೀಪಕಗಳಾಗಿರುವುದರಿಂದ, ಅವುಗಳಲ್ಲಿ ಆಕರ್ಷಕತೆಯಿದೆ, ಸೌಂದರ್ಯವಿದೆ ಅಥವಾ ರುಚಿಯಿದೆ—ಎಂದು ಬೇರೆ ಬೇರೆ ಮಾತುಗಳಿಂದ ಹೇಳುವುದು. ಈ ಸೌಂದರ್ಯ ಅಥವಾ ರುಚಿಯಿಂದ ಸೊಗಸು ಉಂಟಾಗುತ್ತದೆ. ಅಷ್ಟಾವಕ್ರನನ್ನು ನೋಡಿದರೆ ಅಲ್ಲಿಯೂ ಒಂದು ಭಾವ ಉಂಟಾಗುತ್ತದೆ; ಇಲ್ಲವೆಂದಲ್ಲ. ಅವನನ್ನು ಮತ್ತೊಮ್ಮೆ ನೋಡಬಾರದೆಂಬುದು ಆ ಭಾವ. ಅದನ್ನು 'ಜುಗುಪ್ಸೆ' ಎಂದು ಹೇಳಬಹುದು. ಇನ್ನು ಕಲಾಕುಶಲನು ಕೋಟೆಯನ್ನು ಅಂದವಾಗಿ ಓರಣಗೊಳಿಸಬಹುದು, ಚಿತ್ರಕಾರನು ತನ್ನ ಕಲ್ಪನಾಸಾಮರ್ಥ್ಯದಿಂದ ಅಂದವಾದ ವರ್ಣಚಿತ್ರಗಳನ್ನು ಚಿತ್ರಿಸಬಹುದು. ಅದರಂತೆಯೇ ಶಿಲ್ಪಿ ಅಂದವಾದ ಶಿಲಾಬಾಲಿಕೆಯನ್ನು ನಿರ್ಮಿಸಬಹುದು. ಇವೆಲ್ಲ ಸ್ವಾಭಾವಿಕವಲ್ಲ, ಕಲ್ಪಿತ; ಆದರಿಂದಲೆ ಕೃತ್ರಿಮ. ಇವು ಆ ಆ ಕಲಾಕುಶಲರ ಸೃಷ್ಟಿಗಳಾದರಿ. ಇವುಗಳಿಂದಲೂ ಆನಂದವಾಗುತ್ತದೆ. ಆ ಆನಂದದ ಜೊತೆಗೆ ಕಲೆಗಾರನ ಕೌಶಲ್ಯದ ಬಗೆಗೆ ಮೆಚ್ಚುಗೆ ಪ್ರದರ್ಶನವಾಗುತ್ತದೆ.

ಮೇಲಿನ ವಿವೇಚನೆಯನ್ನು ತುಸು ಮುಂದುವರಿಸಿ ಪುರುಷ ಸ್ತ್ರೀಯರಲ್ಲಿ ಕಂಡುಬರುವ ಸೌಂದರ್ಯದ ಸ್ವಾಭಾವಿಕತೆ ಕೃತಿಮತೆಗಳನ್ನು ಪರಿಶೀಲಿಸಬಹುದು. ತನ್ನ ಸೌಂದರ್ಯದ ಬಗೆಗೆ ಅಭಿಮಾನವಿರುವ ನವತರುಣಿ "ಅಲಂಕಾರಗಳನ್ನಿಟ್ಟರೆ ಕಟ್ಟಗೆ ಗೊಂಬೆಯೂ ಅಂದಕಾಣುತ್ತದೆ. ಎಂದ ಮೇಲೆ, ಮನುಷ್ಯ ಆಭರಣ ಧರಿಸಿಕೊಳ್ಳುವುದರಿಂದ ಅಂದಕಾಣುವುದರಲ್ಲೇನಿದೆ ಆಭರಣಗಳಿಲ್ಲದೆ ಅಂದಕಾಣುವುದೇ ನಿಜವಾದ ಸೌಂದರ್ಯ" ಎಂದು ಹೇಳಬಹುದು. ಅವಳು ಹೇಳುವುದರಲ್ಲಿ ತಥ್ಯವಿದೆ. ಆದ ವ್ಯವಹಾರದಲ್ಲಿ ಇದನ್ನನುಸರಿಸಿ ಆಭರಣಗಳನ್ನು ಧರಿಸದವರು ಎಷ್ಟು ಜನ? ಪ್ರಾಪ್ತವಯಸ್ಕಳಾದ ರಾಜಪುತ್ರಿ ರತಿಯೋ ರಂಭೆಯೋ, ಊರ್ವಶಿಯೋ, ಮೇನಕೆಯೋ, ತಿಲೋತ್ತಮೆಯೊ ಎಂದು ನಮ್ಮ ಕವಿಗಳು ಅವಳ ಸೌಂದರ್ಯವನ್ನು ಹೊಗಳಿದರೂ ಅವಳ ಸ್ವಯಂವರದ ಕಾಲಕ್ಕೆ ಅವಳನ್ನು ಸಿಂಗರಿಸಿದುದನ್ನು ವರ್ಣಿಸುವುದೇಕೆ? ಅವಳಿಗೆ ಶಿರೋಭೂಷಣವೇಕೆ? ಕಜ್ಜಲವೇಕೆ? ಮಕರಪತ್ರವೇಕೆ? ಕುಂಡಲಗಳೇಕೆ? ಹಾರಗಳೇಕೆ? ಅಂಗದವೇಕೆ? ಬಾಹುಪೂರವೇಕೆ? ಮಣಿಬಂಧಗಳೇಕೆ? ಉಂಗುರಗಳೇಕೆ? ಕಾಂಚೀದಾಮವೇಕೆ? ಅಂದುಗೆಯೇಕೆ? ಚೀನವಸನವೇಕೆ? ಎಲ್ಲ ಸ್ತ್ರೀಯರಂತೆ ಅವಳೂ ಸಾಮಾನ್ಯವಸ್ತ್ರಾಲಂಕಾರಗಳನ್ನು ಧರಿಸಿದ್ದಳೆಂದು ಹೇಳಿದ್ದರೆ ಆಗುತ್ತಿರಲಿಲ್ಲವೇ ನಮ್ಮ ಕವಿಗಳಿಗೆ? ಅಲ್ಲ, ಹಾಗಲ್ಲ. ಸ್ತ್ರೀಯರಿಗೆ ತಮ್ಮ ಸೌಂದರ್ಯದ ಬಗೆಗೆ ಎಷ್ಟೇ ಅಭಿಮಾನವಿದ್ದರೂ, ಅದರಷ್ಟೇ ಮೋಹ ಆಭರಣಗಳಲ್ಲಿರುವುದು ಕಂಡುಬರುತ್ತದೆ; ಮತ್ತು ಅವುಗಳ ವೈಭವದೊಡನೆ ತನ್ನ ಸೊಬಗಿನ ಬೆಡಗಿನ, ಗಾಡಿಯ ಮೋಡಿಯ, ವಿಲಾಸದ ವಿಭ್ರಮದ

ವೈಭವವನ್ನೂ ಪ್ರದರ್ಶಿಸುವ ಮತ್ತು ಆದರಿಂದಾಗಿ ಜನರ ದೃಷ್ಟಿಯನ್ನು ತನ್ನೆಡೆಗೆ ಸೆಳೆದುಕೊಳ್ಳುವ ಉತ್ಸುಕತೆಯಿರುತ್ತದೆ. ಆದಕ್ಕಾಗಿಯೆ ಅವಳು ಆಭರಣಗಳನ್ನು ಪ್ರೀತಿಸುವುದು. ಪುರುಷನು ಆಭರಣಗಳನ್ನು ಅಷ್ಟು ಪ್ರೀತಿಸದಿದ್ದರೂ ಅವನಿಗೆ ಅವು ಜೇಡವೆನಿಸುವುದಿಲ್ಲ. ಅತನ ಗಂಡುಗಾಡಿ, ಹುರಿಕಟ್ಟಾದ ಅಂಗಾಂಗಗಳು, ಮೀಸೆ (ಈಗ ಅವು ಮುಖದ ಮೇಲೆ ಕಾಣದಂತಾಗಿವೆ) ಇವೇ ಅವನ ಸೌಂದರ್ಯದ ಲಕ್ಷಣಗಳು.

ಸ್ತ್ರೀ-ಪುರುಷರ ಆಭರಣಗಳಲ್ಲಿ ಕಾಲಕಾಲಕ್ಕೆ ಬದಲಾವಣೆಯಾಗುತ್ತ ಬಂದಿದೆ. ಆ ಬದಲಾವಣೆಗೆ ಕಲಿಗಾರನ ಕೌಶಲ್ಯ, ಅನುಕರಣ, ಅವನ ಮತ್ತು ಧರಿಸುವವರ ಅಭಿರುಚಿ ಮುಂತಾದುವು ಕಾರಣವಾಗಬಹುದು. ಆದುದರಿಂದ ಪುರಾತನಕಾಲದ ಆಭರಣಗಳು ಮತ್ತು ವಸ್ತ್ರಗಳು ಈಗ ಕಾಣುವುದಿಲ್ಲ. ಪೂರ್ವದ ಗ್ರಂಥಗಳಲ್ಲಿ ಬರೆಯುವ ಆಭರಣಗಳ ಹೆಸರುಗಳೂ ತಿಳಿಯುವುದಿಲ್ಲ. ಇಷ್ಟೇಕೆ? ಸುಮಾರು ಇಪ್ಪತ್ತು ವರುಷಗಳ ಹಿಂದಿನ ವಸ್ತ್ರಾಭರಣಗಳು ಈಗ ಇಲ್ಲ. ಮುದುಕರನ್ನು ಬಿಟ್ಟರೆ ಉಳಿದವರಿಗೆ ಅವುಗಳ ಅರ್ಥವೇ ಆಗುವುದಿಲ್ಲ. ಆದುದರಿಂದ ವಸ್ತ್ರಾಲಂಕಾರಗಳ ಹೆಸರುಗಳನ್ನು ತುಲನಾತ್ಮಕದೃಷ್ಟಿಯಿಂದ ದೃಷ್ಟಿಸಿ, ಪುರಾತನರ ಮತ್ತು ಆಧುನಿಕರ ಶೃಂಗಾರದ ಕಲ್ಪನೆಯನ್ನು ಕಾಣಬಹುದು. ಇಲ್ಲಿ ಐತಿಹಾಸಿಕದೃಷ್ಟಿಯಿಂದ ಪಂಪನ ಆದಿಪುರಾಣ-ಧಾರವಾಡಗಳಲ್ಲಿ ಕಂಡುಬರುವ ವಸ್ತ್ರಾಭರಣಗಳನ್ನು, ಆಧುನಿಕ ವಸ್ತ್ರಾಭರಣಗಳಿಗೆ ಹೋಲಿಸಿ ತೋರಿಸಲಾಗಿದೆ.

ಸುಮಾರು ಮೂವತ್ತು ವರುಷಗಳ ಹಿಂದೆ ಗಂಡುಸರು ಉಟ್ಟುಕೊಳ್ಳುವ ಮತ್ತು ಹೊದ್ದುಕೊಳ್ಳುವ ಪಂಚೆಗಳಲ್ಲಿ ಅನೇಕ ವಿಧಗಳು ಕಂಡುಬರುತ್ತಿದ್ದುವು. ಅವು ಬಿಳಿಯ ಬಣ್ಣದುವೇ ಆಗಿರುತ್ತಿದ್ದುದರಿಂದ, ಅಂಚುಗಳ ಮೇಲಿಂದ ಅವುಗಳಲ್ಲಿ ಭೇದಗಳು ಕಂಡುಬರುತ್ತಿದ್ದುವು. ಆಗ ಅಂಚುಗಳಲ್ಲಿ ಕರವತಕಾಟೀ, ಕಮಲಪೇಟಿ, ಫರಾಸಪೇಟಿ, ಗಂಗಾಜಮುನಾ, ಪಟ್ಟಯಂಚು, ದಬ್ಬಣಪಂಚು, ಸೂಜಿಯಂಚು, ದುಂಡಂಚು, ಕಪ್ಪುದಡಿ, ಕೆಂಪುದಡಿ ಮುಂತಾದ ಹೆಸರುಗಳು ಕಂಡುಬರುತ್ತಿದ್ದುವು. ಇತ್ತಿತ್ತಲಾಗಿ ಜನರ ಒಲವಿನಲ್ಲಿ ಬದಲಾವಣೆಯಾಗಿ, ದೊಡ್ಡ ಅಂಚಿನ ಪಂಚೆಗಳಿಗೆ ಪ್ರತಿಯಾಗಿ ಕಿರಿಯಂಚಿನ ಪಂಚೆಗಳು ಪ್ರಚಾರಗೊಂಡಿವೆ.

ಸ್ತ್ರೀಯರು ಉಟ್ಟುಕೊಳ್ಳುವ ಸೀರೆಗಳಲ್ಲಿಯೂ ಬದಲಾವಣೆಯಾಗಿದೆ. ಅವು ಹುಟ್ಟುವ ಸ್ಥಳಗಳಿಂದ ಮತ್ತು ಗಿರಣಿಗಳಿಂದ ಅವು ಇಳಕಲ್, ನಾರಾಯಣಪೇಟೆ, ಶಹಾಪೂರ, ಮಹೇಶ್ವರೀ, ಧರ್ಮಾವರಂ, ಇಚ್ಛಲಕರಂಜಿ, ಬೆಳೇಕರವಾಡಿ, ನಾಗಪೂರ, ಖಂಬಾಯಿತ. ಸ್ವಸ್ತಿಕ, ಖಟಾವ, ಅರವಿಂದ ಎಂದಾಗಿವೆ. ಮಾದರಿ, ಮೂಟೆ ಮತ್ತು ಬಣ್ಣಗಳಿಂದ ರಾಸ್ತಾ, ಡಫಳಾ, ಕರಿಚಂದ್ರಕಳಾ, ಕೆಂಪುಚಂದ್ರಕಳಾ, ಚಿಕ್ಕಿ, ರಾಗಾವಳಿ, ಅಂಜೂರಿ,

ಆಕಳವಾಡಿ ಬುಕ್ ಡಿಪ್ಪೋ
ಧಾರವಾಡ

ನಂಬುಗೆಯ ವ್ಯವಹಾರ! — ಉತ್ತಮವಾದ ವಸ್ತುಗಳು!

ಶಾಲೆ-ಕಾಲೇಜ್ ವಿದ್ಯಾರ್ಥಿಗಳಿಗೆ ಬೇಕಾಗುವ ಪುಸ್ತಕಗಳು, ಸ್ಟೇಶನರಿ, ಫೌಂಟನ್ ಪೆನ್ನುಗಳು, ಸಾಬೂನು, ಹೇಅರ್ ಆಯಿಲ್ ಮೊದಲಾದ ಸುಗಂಧ ದ್ರವ್ಯಗಳು ಸರಿಯಾದ ಬೆಲೆಗೆ ದೊರೆಯವವು.

ಒಂದ್ಸಲ ಬನ್ನಿರಿ! ಒಳ್ಳೆಯ ಅನುಭವ ಪಡೆಯಿರಿ!

ಕೋ ಆಪರೇಟಿವ್, ಗ್ರಾಮ ಪಂಚಾಯತಿ, ಮುನಿಲೆಂಡಸ್ಥ ಫಾರ್ಮುಗಳು, ಲೆಕ್ಕದ ಪುಸ್ತಕಗಳು ಕೂಡ ನಮ್ಮಲ್ಲಿ ದೊರೆಯುತ್ತವೆ.

ಒಡೆಯರು— ರಾಮಣ್ಣ ಆಕಳವಾಡಿ

ವಿಜಯ ರೋಡ್, ಧಾರವಾಡ.

ನೂತನ ಗಣಿತ

(ಪುನರ್ಮುದ್ರಣಗಳು ಸಿದ್ಧವಾಗುತ್ತಿವೆ)

೫, ೬, ೭ ನೆಯ ವರ್ಗಗಳ ಗಣಿತಗಳು

ಶ್ರೀ ಗಲಗಲಿ ಬರೆದುವು.

ಪ್ರಾಪ್ತಿಸ್ಥಾನ:

ಆಕಳೆವಾಡಿ ಬುಕ್ ಡಿಪೋ,

ವಿಜಯ ರೋಡ್, ಧಾರವಾಡ

ಟೋಪಸೆರಗು, ಪತ್ತಲಸೆರಗು ಎಂದು ಮುಂತಾಗಿ ರೂಢವಾಗಿದ್ದುವು. ಆ ತರುವಾಯ ಆಧುನಿಕ ಮುನ್ನಡೆಗೆ ಅನುಸಾರವಾಗಿ (ಮುಖ್ಯವಾಗಿ ಚಲಚ್ಚಿತ್ರಗಳಲ್ಲಿ ತಾರೆಗಳು ಧರಿಸುತ್ತಿರುವ ವಸ್ತ್ರಗಳಿಂದ) **ರುಬಾಲಾ, ಚಂದ್ರಪ್ರಭಾ, ಸೂರ್ಯಪ್ರಭಾ, ಚಂದೇರಿ** ಮುಂತಾದ ಹೊಸಮಾದರಿಗಳು ಬಂದಿವೆ. ಇವೆಲ್ಲವುಗಳಲ್ಲಿ ವೈವಿಧ್ಯಕ್ಕೆ ಕೊರತೆಯೇ ಇಲ್ಲ. ಅವುಗಳ ಉದ್ದಳತೆಯೂ ಕಡಿಮೆಯಾಗಿದೆ.

ಕುಪ್ಪುಸಗಳಲ್ಲಿ ಬೆಂಗಳೂರಿ, ಶಹಾಪೂರೀ, ಅತ್ತಿ ಹೂವು, ಬಂಗಾರಗೆರೆ, ರಾಗಾವಳಿ, ಚಂದ್ರಕಳಾ, ಕೇದಗೆ ಗರಿ, ಕೇದಗೆ ಗಿಡ, ಕವಳೀಹೂವು, ಸೂರ್ಯಪ್ರಭ, **ಹೆಡ್ ಆಫೀಸ್** ಮುಂತಾದ ಹೆಸರುಗಳಿದ್ದುವು. ಬರಬರುತ್ತ ಕುಪ್ಪುಸಗಳ ಸ್ಥಳವನ್ನು ಪೋಲಕೆ, ಆ ಮೇಲೆ ಬ್ಲಾವುಜುಗಳು ವ್ಯಾಪಿಸಿದ ಕಾರಣ, ನಮ್ಮ ಹೆಂಗುಸರಿಗೆ ಈ ಹೆಸರುಗಳ ಅರ್ಥವೇ ಆಗುವುದಿಲ್ಲ. ಅವರು ಅವುಗಳನ್ನು ಮರೆತುಬಿಟ್ಟಿದ್ದಾರೆ. ಗೋಪಾಳದುರದುಂಡಿ, ಕುಬ್ಬಣ್ಣ, ಮಲ್ಲೀಶಪ್ಪ ಮುಂತಾದ **ಲಾವಣಿಕಾರರ ಲಾವಣಿಗಳಲ್ಲಿ ಈ** ಹೆಸರುಗಳು ಬಂದರೆ, ಅವುಗಳನ್ನು ಗುರುತಿಸುವುದು ದುಸ್ತರವಾಗಬಹುದು. ಸೀರೆ-ಕುಪ್ಪುಸಗಳಲ್ಲಿ ಎದ್ದುಕಾಣುವ ಬಣ್ಣ ಸ್ತ್ರೀಯರಿಗೆ ಮೆಚ್ಚುಗೆಯಾಗಿರುವುದರಿಂದ, ಕುಪ್ಪುಸಗಳು ಈಗ ಮತ್ತೆ ಪ್ರಚಾರಗೊಳ್ಳುತ್ತಿವೆ. ಮಾತ್ರ ಅವುಗಳ ಆಕಾರ ಬದಲಾಗಿದೆ. ಅದೇ ಮೇರೆಗೆ, ವರ್ಣವೈವಿಧ್ಯದ ಮೂಲಕ ಹಿಂದಿನ ಕಾಲದ ಸೀರೆಗಳು ಮತ್ತೆ ರೂಢವಾಗಬಹುದೋ ಏನೋ! ನೋಡಬೇಕು. ಒಂದುವೇಳೆ ರೂಢವಾದರೆ, ಅವುಗಳ ಹೆಸರುಗಳಲ್ಲಿ **ಬದಲಾವಣೆ** ಉಂಟಾಗುತ್ತದೆಯೋ ಏನೋ!

ಪಂಪನ ಕಾಲದಲ್ಲಿದ್ದ ಸೀರೆಗಳ ಹೆಸರುಗಳು ಈಗ ವ್ಯವಹಾರದಲ್ಲಿಲ್ಲ ಅವುಗಳ ಬಣ್ಣವೆಂತಹದು ಎಂಬುದೂ ತಿಳಿಯುವುದಿಲ್ಲ. ಆತನು ತನ್ನ ಆದಿಪುರಾಣದಲ್ಲಿ ಸೀರೆಕುಪ್ಪುಸಗಳ ಕೆಲ ಹೆಸರುಗಳನ್ನು ಕೊಟ್ಟಿದ್ದಾನೆ. **"ಸಾಹಿಯಾಣ, ಚಿನ್ನದ ನವದಿ** (ಬಂಗಾರಗೆರೆ?), **ಭರ್ಮ, ಜೊಂಗ, ದೇವಾಂಗ"** ಮುಂತಾದ ಸೀರೆಗಳನ್ನೂ **"ಕಳ್ಳರವಳಿಗೆಯ, ಚಿತ್ರಾವಳಿಯ, ಪಳಿವೆಡೆಯ, ತುಳಿವೆಡೆಯ, ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣೆಗೆಯ"** ಜವುಳಿಗಳನ್ನೂ (೪-೩೪ ವ) ಉಲ್ಲೇಖಿಸಿದ್ದಾನೆ. ಬಣ್ಣಗಳು, ರೇಶಿಮೆ, ನೂಲು ಮುಂತಾದುವುಗಳಿಂದ ಮತ್ತು ಜನರ ಅಭಿರುಚಿಗಳಿಂದ, ಹೊಸಹೊಸ ಮಾದರಿಗಳನ್ನು ಪ್ರಚುರಗೊಳಿಸುವ ಕಾರ್ಮಿಕರ ಕಲಾನೈಪುಣ್ಯದಿಂದ ದಿನೇ ದಿನೇ ಜವುಳಿಗಳಲ್ಲಿ ಬದಲಾವಣೆಗಳುಂಟಾಗುತ್ತವೆ. ಆದುದರಿಂದ ಪಂಪನು ಹೇಳಿದ ಜವುಳಿಗಳು ಆತನ ತರುವಾಯ ಆಗಿಹೋದ ಕವಿಗಳ ಕಾವ್ಯಗಳಲ್ಲಿ ದೊರೆಯುವುದಿಲ್ಲ. ಈ ಬದಲಾವಣೆ ಆಭರಣಗಳಲ್ಲಿಯೂ ಕಂಡುಬರುತ್ತದೆ.

ಆಭರಣಗಳನ್ನು ಮಕ್ಕಳ ಆಭರಣ, ಗಂಡುಸರ ಆಭರಣ, ಹೆಂಗುಸರ ಆಭರಣ ಎಂದು ಮೂರು ಭಾಗ ಮಾಡೋಣ. ಮಕ್ಕಳ ಆಭರಣಗಳಲ್ಲಿ ಜುಲುಪೆಯ ಹೂವು, ಚವುಕಳಿ, ಹುಲಿಯುಗುರು, ಅಸಲಿ, ಉಡುದಾರ, ಪಟ್ಟಿಯ ಉಡುದಾರ, ಗೆಜ್ಜೆಯ ಉಡುದಾರ (ಕಿರುಗೆಜ್ಜೆಯೆಂದು ಪುರಂದರದಾಸರ ಕೀರ್ತನೆಗಳಲ್ಲಿ ದೊರೆಯುತ್ತದೆ), ಕಡೆ, ತೋಡೆ, ಗುಂಡು, ಬಿಂದಲಿ, ಉಂಗರ, ಉಂಗರ ಸರಪಣಿ, ನಾಗಮುರಿಗೆ, ಪೆಂಡೆಯ ಗೆಜ್ಜೆ, ಪಾಡಗ, ಕಾಲುಕಡಗ, ಹಾಲುಗಡಗ, ತೋಡೆ ಮುಂತಾದುವುಗಳನ್ನು ಹೇಳಬಹುದು.

ಗಂಡುಸರ ಆಭರಣಗಳಲ್ಲಿ (ಗಂಡುಸರು ಆಭರಣಗಳನ್ನು ಉಪಯೋಗಿಸುವುದು ಕಡಿಮೆಯಾದರೂ ಹಬ್ಬ-ಹುಣಿವೆಗಳಲ್ಲಿ ಮತ್ತು ಸಮಾರಂಭಗಳಲ್ಲಿ ಉಪಯೋಗಿಸವುದುಂಟು) ಚವುಕಳಿ, ಬಾವುಲಿ, ಕಂಠಿ, ಗೋಪು, ರಟ್ಟೆಬಳೆ, ಕಡೆ, ಪೋಚೆ, ಉಡುದಾರ, ಉಂಗರ ಮುಂತಾದವುಗಳು ಮುಖ್ಯ.

ಹೆಂಗುಸರ ಆಭರಣಗಳಲ್ಲಿ ಚಂದ್ರಕೋರ, ಕೇದಗೆ, ಬಟ್ಟಗೇದಗೆ, ಹೂವು, ನಾಗರ, ಗುಲಾಬಿಯ ಹೂವು, ಹೆಳಲುಬಂಗಾರ, ಗೊಂಡೆಯ, ಮೂಗಬಟ್ಟು, ಮೂಗುತಿ, ನತ್ತು, ಓಲೆ, ಬೆಂಡೋಲೆ, ಗಂಟೆಝುಮುಕಿ, ಸರಿಗೆ, ಪುತ್ತಳಿಸರ, ನೆಲ್ಲಿಯ ಸರ, ಎಕ್ಕ ಸರ, ಚಂದ್ರಹಾರ, ವಂಕಿ, ನಾಗಮುರಿಗೆ, ಬಳೆ, ಗೋಟು, ಪಾಟ್ಲ, ತೋಡೆ, ಕಡಗ, ಲಸಣೆ, ಹವಳಪಾಟ್ಲ, ಉಂಗುರ, ಒಡ್ಯಾಣ, ಪಟ್ಟೆ, ತೋಡೆ, ಪೈಜಣ, ರಣಜೋಡು, ಕಾಲುಂಗರ, ಗೆಜ್ಜಿಪಿಲ್ಲೆ, ಮೀನಪಿಲ್ಲೆ, ನಿಂಬೆಯ ಪಿಲ್ಲೆ, ಗುಳಪಿಲ್ಲೆ ಮುಂತಾದುವುಗಳು ಬರುತ್ತವೆ.

ಈ ಆಭರಣಗಳೆಲ್ಲ ಬಹುತರವಾಗಿ ಈಗ ಕಾಣುವುದೇ ಇಲ್ಲ. ಕಾರಣಗಳೇನೇ ಇದ್ದರೂ, ಜನರ ಅಭಿರುಚಿ ಬಹುಮಟ್ಟಿಗೆ ಬದಲಾಗಿದೆ. ವಂಕಿ, ನಾಗಮುರಿಗೆ, ಸರಿಗೆ, ಪುತ್ತಳಿಸರ, ಗೋಟು, ಪಾಟ್ಲ, (ಕೈಯೊಳಗಿನ) ತೋಡೆ ಮುಂತಾದ ಆಭರಣಗಳು ಜಡವಾಗಿರುವುದರಿಂದ ಬೇಸರವನ್ನುಂಟುಮಾಡಿರಬಹುದು. ಕಾಲೊಳಗಿನ ಪಿಲ್ಲೆ-ಅಂದುಗೆಗಳು ಆಗಿನ ಕಾಲದಲ್ಲಿ ಮಂಜುಳ ನಾದದಿಂದ ಆನಂದಗೊಳಿಸುತ್ತಿದ್ದರೆ, ಈಗ ಅವು ಮೆಟ್ಟುಗಳಿಗೆ ಆತಂಕವನ್ನುಂಟುಮಾಡುತ್ತವೆ ಎಂಬ ಭಾವನೆಯಿರಬಹುದು. ಅಥವಾ

ಸದ್ದಿಲ್ಲದೆ ಗುಟ್ಟಾಗಿ ಬಂದು ಪತಿದೇವನನ್ನು ಚಕಿತ ಗೊಳಿಸಬೇಕೆಂದು ಅವುಗಳನ್ನು ಅಡಗಿಸಿರಬಹುದು. ಏನಿದ್ದರೂ ಅವು ಕಾಣದಂತಾಗಿವೆ.

ಮಕ್ಕಳ ಆಭರಣಗಳಲ್ಲಿ ಚೇನು, ಕಿವಿಯೊಳಗಿನ ಡೂಲು ಇವೆರಡೇ ಕಾಣುತ್ತವೆ. ಸ್ತ್ರೀಯರ ತಲೆಯೊಳಗೆ ಆಭರಣಗಳೇ ಕಾಣುವುದಿಲ್ಲ. ಮೂಗುಬಟ್ಟು ಮಿಂಚಿಕೆಯಾಗಿದೆ. ಕರ್ಣಾಭರಣಗಳಲ್ಲಿ ಮುತ್ತಿನ ಬೆಂಡೋಲೆ ಪ್ರಚುರವಾಗಿದ್ದರೂ, ಅದು ಮಾಯವಾಗಹತ್ತಿ ಅದರ ಸ್ಥಳದಲ್ಲಿ ಚಿತ್ರವಿಚಿತ್ರವಾದ ಅಗ್ಗದ ಈಯರ್‌ರಿಂಗುಗಳು ಬರಹತ್ತಿವೆ. ಕಂಠಹಾರಗಳಲ್ಲಿ ಎಕ್ಕಸರ ಮಳಿಗಾಲದೊಳಗಿನ ಸೂರ್ಯನಂತೆ ಯಾವಾಗಲೋ ಒಮ್ಮೆ ಮೈದೋರುತ್ತದೆ ಚಪಲಾಹಾರ, ಚಂಚಲಾಹಾರ, ಬಕುಳಾಹಾರ, ಚೇನುಗಳು, ಹೊಸಮಾದರಿಯ ಹಾರಗಳು, ಹೊಸಹೊಸ ಮಾದರಿಯ ಬಿಲ್ವರಗಳು ಮತ್ತು ಹರಳು ಕೆಚ್ಚಿದ ಉಂಗುರಗಳು ಸ್ತ್ರೀಕಿಯ ಆಭರಣಗಳಾಗಿವೆ. ಹೀಗೆ ಸುಮಾರು ಮೂವತ್ತು ವರುಷಗಳಲ್ಲಿಯೇ ಇಷ್ಟು ಸ್ಥಿತ್ಯಂತರಗಳು ಉಂಟಾಗಿರುವಾಗ, ೧೦೦ನೆಯ ಶತಮಾನದಲ್ಲಿದ್ದ ಪಂಪನ ಕಾಲದ ಆಭರಣಗಳನ್ನು ಗುರುತಿಸುವುದು ಸುಲಭವಲ್ಲ. ಆತನು ತನ್ನ ಹಿಂದೆ ಇದ್ದ ಕೆಲವು ಆಭರಣಗಳನ್ನೂ ಹೇಳಿದ್ದಾನೆ. ಅವುಗಳನ್ನು ಇನ್ನು ಮೇಲೆ ವಿಚಾರಿಸುವಾ. :

ಪಂಪನು ಮುಕ್ಕಳ ಆಭರಣಗಳನ್ನು ಹೇಳುವಾಗ ಆದಿಪುರಾಣದಲ್ಲಿ ' ಕೊರಲೋಳ್ ಶಾರ್ದೂಲನಖಾಂಕುರಂಗಳುಂ ಹರಿನಖಾಂಕುರಂಗಳುಮುಂದೇಂ ಕರಮೆಸೆದಿರ್ದುವೋ' ಎಂದು (ಆ-೪೦) ಭರತನನ್ನು ವರ್ಣಿಸಿದ್ದಾನೆ. ಎಂದರೆ ಹುಲಿ-ಸಿಂಹಗಳ ಉಗುರುಗಳಿಂದ ಕೂಡಿದ ಆಭರಣಗಳನ್ನು ಈಗಿನಂತೆ ಆ ಕಾಲದಲ್ಲಿಯೂ ಧರಿಸುತ್ತಿದ್ದರು ಎಂದಂತಾಯಿತು. ಆದಿನಾಥನ ಜನ್ಮಾಭಿಷೇಕದ ತರುವಾಯ ಶಚಿ ಜಿನನ ಮೈಮೇಲಿಟ್ಟ ಆಭರಣಗಳ ವರ್ಣನೆ ಹೀಗಿದೆ : " ಮುಕ್ತಿಸಾಮ್ರಾಜ್ಯ ಕಂಠಿಕಾರ್ಹಂಗೆ ಮಣಿಮಯ ಕಂಠಿಕೆಯಂ ಕಟ್ಟಿ, ನಿಜಯಶ್ರೀನಿವಾಸಬಾಹುಯುಗಳಕ್ಕೆ ಕೇಯೂರ ಹಾರಾಂಗದ ಕಟಿಕಾಳಂಕಾರಂ ಮಾಡಿ, ಸಿಂಹವಿಷ್ಟರಾರೋಹಣೋಚಿತ ಕಟಿತಟಂಗೆ ಕಟಿತಟಸೊಳ್ ಮಾಣಿಕ್ಯ ಮಣಿಕಿಂಕಿಣೀ ದಾಮಮುಂ ತಗುಳ್ಚಿ, ಸುರಾಸುರೇಂದ್ರವಂದಿತಪಾದಂಗೆ ಮೃದುಪದಂಗಳೊಳ್ ಕಳರವರಣಿತ ನೂಪುರಂಗಳಂ ತುಡಿಸಿ, " ಎಂದರೆ ಕಂಠಿ, ರಟ್ಟೆಬಳೆ, ಕಡಗ (ಕಡೆ), ಗೆಜ್ಜೆಯ ಉಡುದಾರ, ಕಾಲಂದುಗೆ ಮುಂತಾದ ಮುಖ್ಯಾಭರಣಗಳನ್ನು ಹೇಳಿರುವಲ್ಲಿ, ಈ ಎಲ್ಲ ಆಭರಣಗಳು ಪುರಾತನ ಕಾಲದಿಂದ ಇಲ್ಲಿಯ ವರೆಗೆ ಪ್ರಚಲಿತವಾದುವುಗಳಿಂದಹಾಗಾಯಿತು. ಇವುಗಳಲ್ಲದೆ ಪುರಾತನ ಕಾಲದಲ್ಲಿ ಹೇಳಿದ ಹಾರ, ಪ್ರಚ್ಛಂದ, ನಿಜಯಚ್ಛಂದ, ಅರ್ಧಹಾರ, ದೇವ-

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಪರಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅವ್ಹೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಆಪಚನ, ಕಂತಿ, ಮೈಸೋತು, ಹಲ್ಲುನೋವು, ಮುಕ್ಕಳ ಕಾಡ ಪಿಡಾರ ಇತ್ಯಾದಿ ಅನೇಕ ಚಿಲ್ಲರೆ ಪಿಡಿಪೇಸರಿಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಶ್ಚಯವಾಗಿ ಕುಣಪಡಿಸುತ್ತದೆ. ಕಾಲರಾ ಮತ್ತು ಆಮಾಂಶಗಳಂಥ ಭಯಂಕರವಾದ ಪೀಡಾಕರ ರೋಗಗಳ ಮೇಲೆ ಇದರ ಉಪಯೋಗವಾಗುತ್ತದೆ. ಡಾಕ್ಟರುಗಳಾದಾಗ ಮೂವಾಗಲೂ ಇದನ್ನು ಉಪಯೋಗಿಸುವದರಿಂದ ಇವರ ಕೀರ್ತಿ ಬಾಚ್ಚಿಯನ್ನು ಸುಸೆಬಲ್ಲಿಯೂ ಮತ್ತು ಪ್ರಪಾಕದಲ್ಲಿ ಕಚ್ಚಿರವೂ ಇಟ್ಟುಕೊಳ್ಳುವಷ್ಟು (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ಮೂಡಿರುತ್ತಿಕ ಲಕ್ಷಣವಾಗಿದೆ. ಅಮಿಶ್ರವಾಗಿಯೂ (ವಿಷದ ವ್ಯಾಪಾರವಿಲ್ಲದಿಯೂ) ಕಳ್ಳರಿಗೆಲ್ಲಿ ಅಂಗವಿಕಾರವಿಲ್ಲದಿಯೂ ಮೊರೆಹುಟ್ಟಿದೆ.

ಎಮ್. ಎಲ್. ಜವೇರಿಯನ್ ಮತ್ತು ಕಂ.
ಬ್ರನ್ಸನ್ ಸ್ಟ್ರೀಟ್, ಮುಂಬಾಯಿ ೨.

ಮಕ್ಕಳು ಶಕ್ತಿವಂತರು ತೇಜಸ್ವಿಗಳು ಆಗಬೇಕಿದ್ದರೆ 'ಬಾಯೋ ಟೋನಾ' ಅವಶ್ಯ ಕೊಡಿ.

ಫಾಸ್ಫೊರಾ
ಏಕಮೇವ ಟಾನಿಕ್



" ಯಾವುದೇ ಕಾರಣದಿಂದ ಉಂಟಾದ ದೌರ್ಬಲ್ಯವನ್ನು ರೋಗದ ಸರಿಯಾದ ನಿದಾನದಿಂದಲೆ ಗುಣ ಪಡಿಸಬಹುದು.

ಫಾಸ್ಫೊರಾದಿಂದ ಈ ಜ್ಞಾನ ಬರುವುದು.

ರಾಯ್, ಮತ್ತು ಕಂ.
ಮುಂಬಯಿ

ಭಸ್ಮಗ್ರಸ್ತ ಅಮುಬೋಧದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಚ್ಛಂದಾರ್ಧಹಾರ, ರಶ್ಮಿಕಳಾಪ, ಗುಚ್ಛ, ನಕ್ಷತ್ರಮಾಲಾ, ಅರ್ಧಗುಚ್ಛ, ಮಾಣವಕ ಶೀರ್ಷಕ, ಉಪಶೀರ್ಷಕ, ಅವಘಾಟ, ಪ್ರಕಾಂಡಕ, ತರಳತರಬಂಧ ಮುಂತಾದ ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ ಹೇಳಿವ ಆಭರಣಗಳನ್ನು ಆದಿನಾಥನು ತನ್ನ ಮಕ್ಕಳಿಗೆ ತೊಡಿಸಿದನು [೮-೫೪ ವ]. ಇವುಗಳಲ್ಲಿ ಹಾರದೊಳಗೆ ಮುತ್ತಿನ ಒಂದು ಸಾವಿರ ಎಳೆಗಳಿರುತ್ತವೆ. ಅದನ್ನು ತೀರ್ಥಂಕರರಾಗುವವರೂ ಇಂದ್ರರೂ ಚಕ್ರವರ್ತಿಗಳೂ ಧರಿಸುವರು ಎಂದು ಹೇಳಲಾಗಿದೆ. ಇವುಗಳಲ್ಲಿ ನಕ್ಷತ್ರಮಾಲೆಯೊಂದನ್ನು ಬಿಟ್ಟು ಉಳಿದ ಯಾವ ಆಭರಣಗಳೂ ವ್ಯವಹಾರದಲ್ಲಿಲ್ಲ.

ಪುರುಷರ ಆಭರಣಗಳಲ್ಲಿ ಕಟೀಸೂತ್ರ (ಆ. ಪು. ೪-೩೬), ಎಕ್ಕಾವಳಿ (ನಕ್ಷತ್ರಮಾಲೆಯೇ ಇರಬೇಕು. ಆ. ಪು. ೪-೩೭), ಹಿಮಗೌರಹಾರ (ಆ. ಪು. ೪-೩೮), ಕೇಯೂರ, ಕಟಕ (೪-೪೦) ಎಂದು ಒಡೆದು ಕಾಣುವ ಆಭರಣಗಳನ್ನು ಪಂಪನು ಹೇಳಿದ್ದಾನೆ. ಇವು ಸಾಮಾನ್ಯವಾದುವುಗಳು. ಇವುಗಳನ್ನು ಅರಿಯುವುದು ಅಷ್ಟು ದುಸ್ತರವಲ್ಲ.

ಅದೇ ಆಶ್ವಾಸದಲ್ಲಿ ೪೧ನೆಯ ಪದ್ಯದ ಮುಂದಿನ ಗದ್ಯದಲ್ಲಿ ಸ್ತ್ರೀಯರ ಆಭರಣಗಳನ್ನು ಹೇಳಿದ್ದಾನೆ. ನೋಡಿ: ಝಣ ಝಣಾಯಮಾನ ಮಣಿಕಿಂಕಿಣೀ ವಿರಾಜಿತ ಕನಕ ಕಾಂಚೀ ಕಳಾಪ (ಕಾಂಚೀದಾಮ ಅಥವಾ ಗೆಜ್ಜೆಯ ಪಟ್ಟಿ), ತರಳತರ. ತಾರಹಾರ, ಚಿನ್ನಪೂ (ಬಂಗಾರದ ಹೂವು ತಲೆಯೊಳಗಿನದು), ತಲಿಸುಡುಗೆ (ಹೆಳಲು ಬಂಗಾರ), ಪೊಂದಳಿರು (ಬಂಗಾರದ ಕೇದಗೆ). ಪಂಪಭಾರತದಲ್ಲಿ ಹಾರ, ಕಟೀಸೂತ್ರ, ನೂಪುರ (೩-೮೬), ಚಿನ್ನಪೂ, ನೂಲ ತೊಂಗಲ (೩-೭೭), ಸರಿಗೆ, ತೋಳ್ವಳಿ, ಕಂಕಣ (೨-೧೬), ತಿಸರ, ವಜ್ರದಾಳಿ, ಎಕ್ಕಸರ (೪-೮೬); ಮತ್ತೆ ಆದಿಪುರಾಣದಲ್ಲಿ ಕ್ವಣಿತನೂಪುರ (೩-೪೪; ಪಂ. ಭಾ. ೩-೪೬), ಸರಿಗೆ (೧೧-೨೨), ಓರೊಂದೆ ವಜ್ರದ ಪಂಚಲೋಹ, ಅದರ್ಕಮರ್ಕೆವೆತ್ತ ಮುತ್ತಿನ ಮುಗ್ಗುಳ್ಗಳ್ (೪-೪೧ ವ.), ಮಣಿಮಯಕುಂಡಳ (೮-೨೩ ವ.), ಕರ್ಣಪೂರ (೮-೨೩ ವ.) ಎಂದು ಮುಂತಾದ ಆಭರಣಗಳು ಹೇಳಲಾಗಿವೆ. ಆದರೆ ಪುರಾತನಕಾಲದಿಂದಲೂ ದಕ್ಷಿಣದಲ್ಲಿ ರೂಢವಾಗಿದ್ದ ಮೂಗುತಿಯ ನಿರ್ದೇಶವಿಲ್ಲ. ನಾಗವರ್ಮನ ಛಂದೋಂಬುಧಿಯಲ್ಲಿ "ಗಂಡರ ಮೂಗುತಿಯೆನಿಸುವ" ಎಂಬ ಪ್ರಯೋಗ ದೊರೆಯುತ್ತದೆ. ಆದರೆ ಜೈನಪುರಾಣಗಳಲ್ಲಿಯಾಗಲಿ, ರುದ್ರಭಟ್ಟನ ಜಗನ್ನಾಥವಿಜಯದಲ್ಲಿಯಾಗಲಿ ಅದು ದೊರೆಯುವುದಿಲ್ಲ. ಅದರಿಂದ ಅದು ಉಚ್ಚವರ್ಣೀಯರಲ್ಲಿ ರೂಢವಾಗಿರಲಿಲ್ಲವೆಂದು ತೋರುತ್ತದೆ. ಈಗಲಾದರೂ ಅದು ಕೆಳತರಗತಿಯ ಜನರಲ್ಲಿ ಮಾತ್ರ ಕಂಡುಬರುತ್ತದೆ. ಈ ಎಲ್ಲ ಆಭರಣಗಳನ್ನು ಹೆಸರುಗಳಿಂದ ಮನೋಭೂಮಿಯ ಮೇಲೆ ಚಿತ್ರಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಇದಕ್ಕಾಗಿ ಬೇರೆ ಸಾಧನ-ಸಾಹಿತ್ಯಗಳನ್ನು ಹುಡುಕಿಕೊಳ್ಳಬೇಕು. ಆ ಸಾಧನ-ಸಾಮಗ್ರಿ ದೃಶ್ಯರೂಪವಾಗಿ ನಮಗೆ ಮೂರ್ತಿಶಿಲ್ಪಗಳಲ್ಲಿ ಮತ್ತು ಅಜಂತೆಯ ವರ್ಣಚಿತ್ರಗಳಲ್ಲಿ ದೊರೆಯುತ್ತದೆ. ಅದನ್ನು ಚೆನ್ನಾಗಿ ಪರೀಕ್ಷಿಸಿ ವಿಂಗಡಿಸಿ ಗುರುತಿಸುವಷ್ಟು ತಾಳ್ಮೆಬೇಕು.

ಪ್ರಾಚೀನಕಾಲದಲ್ಲಿ ಆಭರಣ ವಿಷಯವು ಒಂದು ಶಾಸ್ತ್ರವೇ ಆಗಿದ್ದಿತು. ಅವುಗಳನ್ನು ಧರಿಸುವಲ್ಲಿ ನುರಿತವರು ವಾರನಾರಿಯರು. ಅವರಲ್ಲಿ ಶೃಂಗಾರದಿಂದ ಸೊಬಗನ್ನುಂಟುಮಾಡುವಿಕೆ, ಹೊಸಮಾದರಿಗಳನ್ನು ಕಲ್ಪಿಸುವಿಕೆ, ವಿಲಾಸ-ವಿಭ್ರಮ, ಹಾವಭಾವ ಮುಂತಾದ ಗುಣಗಳಿದ್ದುದು, ಅಂತಃಪುರದಲ್ಲಿ ಶೃಂಗಾರಕ್ರಿಯೆಯಲ್ಲಿ ಅವರ ನಿಯೋಜನೆಗೆ ಸಹಾಯಕವಾಗಿದ್ದಿತು. ಅವರ ಆ ಗುಣಗಳ ಮೂಲಕವಾಗಿಯೇ, ಬೇಲೂರಿನ ಚೆನ್ನಕೇಶವ ದೇವಾಲಯದ ಮೇಲಿನ ಶಿಲಾಬಾಲಿಕೆಯರ ಕೇಶರಚನೆಯಲ್ಲಿ ಅನೇಕ ವಿಧಗಳನ್ನು ಕಾಣುತ್ತೇವೆ. ಅಜಂತೆಯ ವರ್ಣಚಿತ್ರಗಳಲ್ಲಿ ಕರ್ಣಕುಂಡಲ, ಹಾರ ಮುಂತಾದ ಆಭರಣಗಳಲ್ಲಿ ಅನೇಕ ರೂಪಗಳು ಕಂಡುಬರುತ್ತವೆ. ಇತ್ಯರ್ಥನೆಂದರೆ ವಸ್ತ್ರಾಭರಣಗಳಲ್ಲಿ ಕಾಲಕಾಲಕ್ಕೆ ಬದಲಾವಣೆಗಳುಂಟಾಗುತ್ತವೆ. ಅವುಗಳನ್ನು ಗುರುತಿಸುವ ಸಾಧನಗಳನ್ನು ಇಂದಿನಿಂದಾದರೂ ಮುಂದಿನ ಪೀಳಿಗೆಗೆ ಒದಗಿಸಿಕೊಡುವ ಪ್ರಯತ್ನ ನಡೆಯಬೇಕು.*

---

* ಸೌ. ಕಮಲಾಬಾಯಿಯವರು ಈ ಲೇಖನವನ್ನು ಬರೆಯಲು ಪ್ರಚೋದಿಸಿ ಒತ್ತಾಯಪಡಿಸಿದರು. ಮತ್ತು ಅದಕ್ಕೆ ಬೇಕಾಗುವ ಎಲ್ಲ ಸಾಹಿತ್ಯವನ್ನು ಒದಗಿಸಿಕೊಟ್ಟರು. ಅದಕಾರಣ ಅವರಿಗೆ ನಾನು ಋಣಸ್ವೀಕಾರವನ್ನು ಸಲ್ಲಿಸುತ್ತೇನೆ. —ಲೇ.

ಕೃಷ್ಣಾದೇವಿ

ಶ್ರೀ. ' ವಿನಾಯಕ '

ವಿಶಾಲ ಶ್ಯಾಮಲ ಕಾಂತಿಯ ತಳೆದು
ನೈ ತುಂಬಿರೆ ಮಂಗಲ ಹೊಳೆಹೊಳೆದು
ಚಕ್ರವರ್ತಿನಿಯು ಮೆಲ್ಲಗೆ ಇಳಿದೂ
ಹರಿಯುತಿಹಳು ಕೃಷ್ಣೆ.
ಅವಳ ಸಲಿಲ ಲೀಲೆಯ ಕಣ್ತುಂಬ
ನೋಡಿದ ಮನುಜಗೆ ಬಂದಿತು ಜಂಭ;
ಆವಳ ಪ್ರಯೋಜನ ಪಡೆವನು ಪುಂಬ
ಹೊತೊರೆವುದು ತೃಷ್ಣೆ; ೧
ದಂಡೆಗೆ ಹಬ್ಬಿತು ಕಬ್ಬಿನ ಹಸಿರು,
ಫಲವತ್ತಿರೆ ನೆಲ, -ಸ್ಪರ್ಧೆಯ ಉಸಿರು,
ಆಡಿಯಿಟ್ಟಲ್ಲಿದೆ ರಾಡಿಯು, ಕೆಸರು.
ಹರಿಯುತಿಹಳು ಕೃಷ್ಣೆ.
ಹರಿವ ಜಲಕೆ ಬಲದುಂಬುತ ಕಟ್ಟೆ
ಮಹಡಿಯ, ಮೆರೆದರು ಧನಿಕನು ಸೆಟ್ಟೆ;
ಜೀತದಾಳುಗಳ ಹೃದಯವ ಸೆಟ್ಟೆ
ಮೀಲ್ಪರಿವುದು ತೃಷ್ಣೆ ! ೨
ಇಲ್ಲಿ ನೋಡ ಬಾ ! ಸಕ್ಕರಿ ಗಿರಣಿ !
ನವೀನ ರೀತಿಯ ಉದರಂಭರಣಿ !
ದುಡಿವರ ಬಾಳಿಗೆ ನಂಜಿನ ಸರಣಿ ! —
ಆಳುತಿರಲು ತೃಷ್ಣೆ !

ತನ್ನ ಪ್ರಯೋಜನ ಪಡೆದೂ ಪಡೆದು
ಕೊಬ್ಬುತ ತಮ್ಮುದಿರನೆ ಸದೆಬಡೆದು
ಬಾಳುವ ಮನುಜನ ನೋಡಲು ತಡೆದು
ಹರಿಯುತಿಹಳು ಕೃಷ್ಣೇ ! ೩
ಶಿಲ್ಪಿಯು ಬಣ್ಣದಿ ರೂಪಿಸಲೆಳಸಿದ;
ಕವಿಯು ಕಾವ್ಯದಲಿ ಮೂಡಿಸ ಬಯಸಿದ;
ಜ್ಞಾನಿಯು ತತ್ತ್ವದಿ ಪೆಣೆಯಲೆಸಗಿದ;
ಹರಿಯುತಿಹಳು ಕೃಷ್ಣೇ !
ಹುಬ್ಬಿನ ಗೆಲುವನು ಬಣ್ಣಿಪರಾರು ?
ಮೌನಗೀತವನು ನುಡಿಸುವರಾರು ?
ರಸವನು ಹನಿ ಹನಿ ವಿವರಿಪರಾರು ?
ಮೆರೆಯುತಿಹಳು ಕೃಷ್ಣೆ ! ೪
ಕಡಲ ಕೂಡುವಾ ನಂಬುಗೆ ತುಂಬಿರೆ !
ಪ್ರಶಾಂತ ಜೀವಿಯ ಗಮನಕೆ ಇಂಬಿರೆ
ಧ್ಯಾನಲೋಲಳಾಗುತ ಗಂಭೀರೆ
ಹರಿಯುತಿಹಳು ಕೃಷ್ಣೆ !
ಇದು ಆ ದೇವಿಯ ಚಿನ್ಮಯ ಮೂರ್ತಿ.
ನೋಡಿದ ! ಕಣ್ಣನು ತುಂಬಲಿ ಸ್ಫೂರ್ತಿ.
ನೋಡುತ ಉಗಮಿಸಬಹುದೈ ಸ್ಫೂರ್ತಿ.
ಹಿಂಗಬಹುದು ತೃಷ್ಣೆ ! ೫

ಮಿಲನ

ಶ್ರೀ. ಚೆನ್ನವೀರ ಕಣವಿ, ಧಾರವಾಡ

ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ,
ಆ ಗಂಗಾ-ಯಮುನೆಯರೊಲು ಚಿರಸಂಗಮ ಬಯಸಿ.
ನಡುದಾರಿಗೆ ಆಡ್ಡೈಸಿವೆ ಗುಡುಗಾಡಿವೆ ಮುಗಿಲು,
ಹೆಡೆಯೆತ್ತುತ ಫೂತ್ಕರಿಸಿದೆ ಬಿರುಗಾಳಿಯ ಪುಯಿಲು !
ನಿಡುಬಯಕೆಯ ಹಿಂದೂಡಿರೆ ಹರಿಗಡಿಸಿರೆ ಸೋಲು
ಗಿರಿ-ದರಿಗಳು ಅಸ್ಪಳಿಸಿರೆ ತಿರುಗಣಿಯೊಲು ಹೊನಲು-
' ಕಟ್ಟಳೆಗಳ ಕಟ್ಟೊಡೆಯುನೆ ಸ್ವಚ್ಛಂದದಿ ನಲಿವೆ '
ಎನ್ನುತ ಹಿರಿಯೊಲವಿನ ಝರಿ ಹರಿದಿರಲೇ ಗೈವೆ ?
ಸವಿಯೊಲುಮೆಗೆ ರಂಗೆರಚಿದೆ ಬಾಂಬಿಲ್ಲಿನ ಬಣ್ಣ
ಮುಂಬಾಳಿಗೆ ಮುಂಬಟ್ಟೆಯು ತೆರೆದಂತಿದೆ ಕಣ್ಣ !

ಬಾನವರನು ಬಿಟ್ಟೋಡುತ ಮಾನವರೆದೆ ಸೇರಿ
ವಿದ್ಯುನ್ನಟ ಇಳೆಗಿಳಿದಳೊ ಮಿಂಚಿನ ನಗೆ ಬೀರಿ !
ಹೆಣ್ಣಿನ ಕಣ್ಣಂಚಿನಲಿದೆ ಕಡೆಗಾಣವ ಆಶೆ
ಆ ಕಾಂತಿಯೆ ತಾರಾಪಥದೆಡೆಗೊಯ್ಯುವದೈಸೆ ?
ಸವಿಸೊಲ್ಲಿಗೆ ನಗೆಮಲ್ಲಿಗೆ-ಸಖಿಜೀವದ ಕಾಣ್ಕೆ
ರೋಮಾಂಚನ ಪಡೆದಂತಿದೆ ಹಸುರುಟ್ಟಿಹ ನೆಲಕೆ !
ಪಂಜರದಲಿ ಆಗನಟ್ಟಿಹ ಗಿಳಿಗೆಲ್ಲಿದೆ ತ್ರಾಣ ?
ಪಕ್ಕದಲಿಹ ರೆಕ್ಕೆಗಳಲಿ ಬಿಕ್ಕಳಿಸಿದೆ ಪ್ರಾಣ !
ಬಾನಾಡಿಯ ನುಣ್ಗೊರಲಿಗೆ ಗುಡಿಗಟ್ಟಿವೆ ದಿಕ್ಕು,
ಎದೆಗೂಡಿನ ಗೆಡೆವಕ್ಕಿಗೆ ಬಹುದೆಂದಿಗೆ ಉಕ್ಕು ?

ಓ, ಎಂದಿಗೆ ? ಇನ್ನೆಂದಿಗೆ ನೋಂತರ ಸಮ್ಮಿಲನ ?
ಹೊಸ ಬಾಳಿನ ಹೊಸ ಹಾಡಿಗೆ ರಸಮಯ ಸಂಸ್ಮರಣ !

ಜೀವನ-ನಾಟಕ

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್

★

ಜೀವನವೆ ನಾಟಕವು ಜಗವೆ ರಂಗಸ್ಥಳವು
ಜೀವಕೋಟಿಗಳೆಲ್ಲ ಅದರ ನಟರು.
ಜನನ ಸಂತಸವದರ ಸುಖದ ನಾಂದೀಗೀತೆ,
ಮರಣಮೌನವೆ ಅದರ ಚರಮನುಡಿಯು. ೧

ಶಿಶುತನವು ಚಿಕ್ಕಂದು ಪ್ರಾಯ ವೃದ್ಧಾಪ್ಯ ಮೃತಿ
ಇವುಗಳೇ ನಾಟಕದ ಪಂಚಸಂಧಿಗಳು;
ನಟರ ಆಗಮನ ನಿರ್ಗಮನವನೆ ಹೋಲುವುವು
ಬಾಳಿನಲಿ ಬರಲಿರುವ ಏಳು ಬೀಳುಗಳು. ೨

ಸತ್ತ್ವ ತಮ ರಾಜಸದ ಉದ್ರೇಕ್ತಿಯಿಂದೊಗೆದ
ಮನುಜಚಿತ್ತದ ವಿಕೃತಿ ವಿವಿಧಂಗಳು.
ಹೃದಯದೊಲವನು ಬೀರಿ ಮನದ ವಿಪ್ಲವ ತೋರಿ
ನೆರೆದಪವು ಜೀವನದ ರಮ್ಯದೃಶ್ಯಗಳು. ೩

ಮನುಜಮನದಲಿ ಮೊಳೆತು ಚಿಗುರೊಡೆದು ಕೊನರುತಿಹ
ಕಾಮವೇ ಮೊದಲಾದ ವೈರಿವರ್ಗಗಳು
ಮೈಮನದಿ ಹೊಮ್ಮಿಸಿವ ಹಾವಭಾವಗಳೆಲ್ಲ
ನಟಗಣವು ಧರಿಸಲಿಹ ವೇಷಭೂಷಗಳು. ೪

ವ್ಯವಹಾರ ಭರದಲ್ಲಿ ಶುಷ್ಕಮನದಿಂ ನುಡಿದ
ನುಡಿಗಳೇ ನಾಟಕದ ಗದ್ಯವಹುದು.
ಭಾವನಿರ್ಭರವಾದ ಹೃದಯದುದ್ಗಾರಗಳೆ
ರಸಿಕಲೋಕದ ಮಧುರ ಪದ್ಯವಹುದು. ೫

ಒಮ್ಮೆ ಪ್ರೇಕ್ಷಕನಾಗಿ ಒಮ್ಮೆ ನಾಯಕನಾಗಿ
ಮತ್ತೊಮ್ಮೆ ನಾಟಕದ ನಟವರ್ಯನಾಗಿ,
ನಟಿಸುವನು ಮಾನವನು ತಾನೊಲಿದ ಪಾತ್ರವನು
ತನ್ನ ನಾಟ್ಯಕೆ ತಾನೆ ಆಚಾರ್ಯನಾಗಿ. ೬

ಹರಿಯನೊಲಿಸಲು ಬಹುದು ನರಜನರನೊಲಿಸುವುದು
ಅರಿವೆಂಬ ನಾಣ್ಯ ಡಿಯು ದಿಟವೆ ಇಹುದು.
ಎಂತು ನಡೆವರು ಜಗವು ಕುಂದಿಟ್ಟು ಜರೆಯುವುದು
ಅಖಿಲ ಪ್ರೇಕ್ಷಕವೃಂದ ನಲಿದು ಬರದು. ೭

ಜಗದ ಮೆಚ್ಚಿಕೆಯೆಂಬ ದುರ್ಲಭದ ತೋಷಕ್ಕೆ
ಸಲಿಮ ನಟನೆಯ ಗೈವ ಮರುಳುತನಕಿಂತ
ನಟನ ಸಚ್ಚರಿತೆಯೇ ನಾಟಕದ ಪರಿತೋಷ,
ಶೀಲಸಂಪನ್ನತೆಯೆ ನಟವರನ ಪಂಥ. ೮

೧೯೩೭-೩೮ ನೆಯ ವರುಷದಿಂದ ಅನ್ವಯಿಸುವ ನವೀನ ಅಭ್ಯಾಸಪತ್ರಿಕೆಯಿಂತೆ ಬರೆದುದು.

卐 ನೂತನ ಗಣಿತ 卐

[ಕನ್ನಡದ ಎರಡನೆಯ ವರ್ಗಕ್ಕಾಗಿ]

ಇದೀಗ ಪ್ರಕಟವಾಗಿದೆ ! ಅನೇಕ ಚಿತ್ರಗಳು !! ಬಣ್ಣಬಣ್ಣದಲ್ಲಿ ಸುಂದರವಾದ ಮುದ್ರಣ !!!
ಆದರೂ ಬೆಲೆ ೦—೭—೦ ಮಾತ್ರ. ಇದು ಶ್ರೀ "ಗಲಗಲಿ" ಬರೆದುದು.

ಮಾರಾಟಗಾರರು :— ಆಕಳವಾಡಿ ಬುಕ್‌ಡಿಪೋ, ವಿಜಯ ರೋಡು, ಧಾರವಾಡ.

ತೂತಿನ ಚೀಲ

(ಒಂದು ವ್ಯಕ್ತಿತ್ವ ವಿವರಣೆ)

ಡಿ. ನಾ. ಕಸ್ತೂರಿ ಎಂ. ಎ. ಬೆಂಗಳೂರು

★

ನಂಜುಂಡನೆಂಬ ಹೆಸರಿನವರೇ ಊರೂರಿಗೂ ಇರದಿದ್ದರೂ, ನಂಜುಂಡನಂತಹ ದಿವ್ಯವ್ಯಕ್ತಿತ್ವವುಳ್ಳವರು ಊರಿಗೊಬ್ಬರಾದರೂ ಇದ್ದೇ ಇರುವರೆಂಬುದು ಅನೇಕರಿಗೆ ಅನುಭವದ ವಿಷಯವಾಗಿರಬಹುದು.

★

ನಮ್ಮ ನಂಜುಂಡ ಇದಾನಲ್ಲಾ.... ಓ! ಮರೆತೆ! ನೀವೆಲ್ಲ ಪುಣ್ಯ ಮಾಡಿದೀರಿ; ಪೂರ್ವಜನ್ಮದಲ್ಲಿ ಸುಕೃತ ಮಾಡಿದೀರಿ.... 'ನಮ್ಮ ನಂಜುಂಡ,' ನಿಮ್ಮ ನಂಜುಂಡ ಅಲ್ಲ. ನೀವು ಅವನನ್ನು ಕಾಣೆರಿ. ಅವನ ಪರಿಚಯದ ಪಾಪ ಅನುಭವಿಸುವವರು ನಾವೇ ಹೊರತು, ನೀವಲ್ಲ.

ನಂಜುಂಡನಿಗೆ ಮನೆ ಎಂದರೆ ಬೇಸರಿಕೆ; ಆದರೂ, ಅವನು ಮಠ ಸೇರಿಲ್ಲ. ಸದಾ ಬೀದಿಯಲ್ಲೇ ತಿರುಗುತ್ತಿರುತ್ತಾನೆ, ನನ್ನಂಥವರನ್ನು ಹುಸಿಸಿಸುವುದಕ್ಕಾಗಿ ಕೆದರಿದ ಕೇಶರಾಶಿ, ಧೂಳು-ತುಂಬಿದ ನಿಲುವಂಗಿ, ಹರಿದ ಪಾಯಿಜಾಮ, ಮುಖದ ಕೆರ, ಉಜ್ಜದ ಹಲ್ಲು.... ಸಾಕು, ಅವನ ವಿವರಣೆ.

ನಂಜುಂಡನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಾನು ವಾರಕ್ಕೊಂದು ಹೊಸ ಉಪಾಯ ಹುಡುಕಬೇಕಾಗಿದೆ. ಎಲ್ಲಾದರೂ ಹೇಗಾದರೂ ಅವನ ಕೈಗೆ ಸಿಕ್ಕಿಬಿದ್ದೆ ಅಂದರೆ, ತೀರಿತು, ತೋಳಿಗೆ ತೋಳು ಬೆಸೆದು, ಕಿವಿಕಚ್ಚಿ, ಪ್ರಾಣವನ್ನೇ ಹಿಂಜಿಬಿಡುತ್ತಾನೆ.

ಅವನ ಮಾತೆಂದರೆ, ಜೋಗದ ಜಲಪಾತ; ಗಂಟೆಗಟ್ಟಲೆ ನೀರು ಕುಡಿಯದೆ ನಾಲಗೆಬಾರಿಸುತ್ತಾನೆ. ಪ್ರಪಂಚದ ಸಮಸ್ಯೆಗಳನ್ನೆಲ್ಲ ತಲೆಗೆ ತುಂಬಿಕೊಂಡು ತಿರುಗುತ್ತಾನೆ. ಅವೆಲ್ಲಕ್ಕೂ ಅವನ ಹತ್ತಿರ ಸಿದ್ಧೌಷಧಗಳಿವೆ. ಕ್ರಿಪ್ಸನ ತಲೆನೋವು, ಟೀಟೊ ಮಹಾಶಯನನ್ನು ಹಿಡಿದಿರುವ ಕಂಟಕ, ಪಾಕಿಸ್ತಾನದ ಕಾಶ್ಮೀರದಾಹ, ಮುಲಾನ್‌ನ ದೃಷ್ಟಿಗೆ ಬಂದಿರುವ ವರ್ಣಮಾಂದ್ಯ— ಎಲ್ಲವನ್ನೂ ಅವನು ಕೂಲಂಕಷವಾಗಿ ಪರಿಶೀಲಿಸಿ, ಒಂದೊಂದಕ್ಕೂ ಪರಿಹಾರ ಕಂಡುಹಿಡಿದಿದ್ದ. ಟೀಕೆ-ಟಿಪ್ಪಣಿಗಳಲ್ಲಿ ಅವನ ತೇಂಕಾರ ಬಹಳ. ಹಿಡಿದ ಪಶುವನ್ನು ಬಿಡದೆ, ವಾಶಹಾಕಿ, ಅದರ ಮೆದುಳಿಗೆ ತನ್ನ ಮಾತಿನ ಮೊಳೆಯನ್ನು ಹೊಡೆಯುವುದೇ ಅವನ ಪವ್ಯಾಸ; ಪಶುಗಳಿಗಾಗಿ ಸುತ್ತ ನೋಡುತ್ತ, ಸುಳಿಯುತ್ತಿರುತ್ತಾನೆ.

ಇದ್ದರಿಂದಲೇ, ಅವನನ್ನು ಕಾಣುತ್ತಲೂ, ನಾನು ಅಕ್ಕಪಕ್ಕದ ಅನುಕೂಲಸಂದಿ ಹುಡುಕುವುದು. ಪೇಟೆರಸ್ತೆಯಲ್ಲಿ ಅವನನ್ನು ಕಂಡರಂತೂ, ನಾನ್ಯುಹತ್ತಿರದ ಅಂಗಡಿಯೊಂದರೊಳಕ್ಕೆ ಹಾರಿಬಿಡುವೆ. ಹಾರಿದ ನಂತರ, ಅಲ್ಲಿ ಏನಾದರೂ ಕೊಳ್ಳದೆ ಹೊರಬಿದ್ದರೆ, ಆ ಮಾಲೀಕ ನನ್ನನ್ನು ಹುಂಬ ಎನ್ನುವುದಿಲ್ಲವೆ? ಸರಿ! ನಾಲ್ಕಾಣೆ ಎಂಟಾಣೆ ಖರ್ಚುಮಾಡಿ, ಬೇಡದ ಪದಾರ್ಥ ಒಂದನ್ನು ಕೊಂಡು ಮನೆಗೆ ಸಾಗಿಸುವುದು! ಕಳೆದ ತಿಂಗಳೊಂದರಲ್ಲೇ ನಾನು ಇದೇ ರೀತಿ, ನಂಜುಂಡನ ಬಾಯಿಂದ ಪಾರಾಗಲು, ಏಳೂವರೆ ರೂಪಾಯಿ ವೆಚ್ಚಮಾಡಿ, ಒಂದು ಕಟ್ಟು ಹೇರ್‌ಪಿನ್ (ನನ್ನದು ಬಟ್ಟಲತಲೆ), ಒಂದು ಟೂಟಲ್‌ಬ್ರೈ (ನಾನು ಕೋಟು ತೊಡುವುದೇ ಇಲ್ಲ) ಒಂದು ವ್ಯಾಕೆಟ್ ಮೂಲಂಗಿಬೀಜ. (ನನ್ನ ಮನೆಗೆ ಹಿತ್ತಲೇ ಇಲ್ಲ; ನಾವು ಮೂಲಂಗಿ ತಿನ್ನದ ಸನಾತನಿಗಳು) ಒಂದು ಇಲೆಕ್ಟ್ರಿಕ್ ಬಲ್ಬು (ಚಿಮ್ಮಿಣಿ ಎಣ್ಣೆ ಬುಡ್ಡಿಯೇ ನನ್ನ ಗೃಹವನ್ನು ಬೆಳಗುವ ಜ್ಯೋತಿ), ಒಂದು ಜರ್ಮನ್ ಹಾಡಿನ ರಿಕಾರ್ಡ್ (ನನಗೆ ರಾಗ, ಎಂದರೆ ದ್ವೇಷ)— ಇಷ್ಟನ್ನೂ ಸಂಪಾದಿಸಿ ಸೊರಗುತ್ತಿದೇನೆ.

ಏಕೆ ಹೇಳುವದಕ್ಕೆ ಹೊರಟೆ ಅಂದರೆ, ನಿನ್ನೆ ಬೆಳಿಗ್ಗೆ ಅಹುಲಿಯ ದವಡೆಗೆ ತಲೆ ಕೊಡಬೇಕಾಗಿ ಬಂತೇ ಬಂತು; ಸಿಕ್ಕೇ ಸಿಕ್ಕ ನಂಜುಂಡ! "ಆಪದಿಕಂ ಕರಣೀಯಂ?" "ಸ್ಮರಣೀಯಂ ಚರಣಯುಗಳಮಂಬಾಯಾಃ" ಅದರಂತೆ ಅಂಬಾ, ಅಂಬಾ ಎಂದು ಅಂತರಂಗದಲ್ಲಿ ಹೂಲಬಿದೆ. ಪೇಟೆ ಬೀದಿಯಲ್ಲೇ ಸಿಕ್ಕ, ಆದರೂ ಭಾನುವಾರ ಸಂಜೆ; ಉದ್ದಕ್ಕೂ ಅಂಗದಿಗಳೆಲ್ಲ ಬಂದ್! ಮೋರಿಯಲ್ಲಿ ಮಲಗೋಣವೆಂದರೆ, ಅಸಹ್ಯ; ಜಕ್ಕಡಿಗಳ ಹಿಂದೆ ಅವಿತು ಕೊಳ್ಳೋಣವೆಂದರೆ, ಒಂದೂ ಹತ್ತಿರದಲ್ಲಿಲ್ಲ. ಥಟಕ್ಕನೆ, ಅಂಗವಸ್ತ್ರವನ್ನು ತಲೆಗೆ ಸುತ್ತಿ, ಹಲ್ಲು ಮುಂದುಮಾಡಿ, ನಾಲಗೆಚಾಚಿ, ವೇಷ ಬದಲಾಯಿಸಿ ಮುಂದರಿದೆ! ಗುರುತು ಹಿಡಿದೇ ಬಿಟ್ಟ. ನನ್ನ ಎಡಗೈಯನ್ನು ತನ್ನ ಬಲಗೈಯಿಂದ ಹಿಡಿದು ಹಿಸುಕುತ್ತ, ಪ್ರಾರಂಭಿಸಿಯೇ ಬಿಟ್ಟ—ನಂಜನ್ನು ಬಡಿಸುವುದಕ್ಕೆ.

"ಏನಪ್ಪ! ಡಾಕ್ಟರ ಮನೆಗೇನು? ಯಾಕೆ ಹೀಗಿದೆ ಮೋತಿ? ಹಲ್ಲು ನೋವೇನು? ಆಕಳಿಸಿದಾಗ, ದವಡೆ ಕಟ್ಟಿತೇನು?" ಎಂದು ಕನಿಕರಿಸುತ್ತ, ಕ್ರೂರ ವಿಧಿಯಂತೆ, ಕೈಗೆ ಬೇಡಿ ತೊಡಿಸಿಯೇ ಬಿಟ್ಟ; ದರದರನೆ ನನ್ನನ್ನೂ ಎಳೆದುಕೊಂಡು, ಕೋಟೆ ಕಡೆ ಧಾವಿಸಿದ. ನಾನು ಹಲ್ಲು ಕಿರಿದು ನೋವು ನಟಿಸಿದ್ದೇ ಅವನ ಹಿಂಸೋವನ್ಯಾನಕ್ಕೆ ಪ್ರೇರಕವಾಯಿತು.

ಹಲ್ಲು, ಒಸಡು, ತುಟಿ, ತುದಿನಾಲಗೆ, ಕಿರುನಾಲಗೆ, ದಂತ, ಶ್ರೀರಾಮೋದಂತ, ದಂತದ ಬಾಚಣಿಗೆ, ಬಟ್ಟಲತಲೆ, ಕೂದಲು, ತುರುಬು, ಪಾಂಚಾಲಿ, ಪಂಜಾಬು, ಶರಣಾರ್ತಿ, ಸಕ್ಕೇನ, ಸೇನಾನಿ, ಕಾರಿಯಪ್ಪ, ಕೊಡಗು, ನಡೆದು ನೋಡು ಕೊಡಗಿನ ಬೆಡಗಂ, ಡಿ. ವಿ. ಗುಂಡಪ್ಪ, ಮಂಕುತಿಮ್ಮ....ಅವನ ಬತ್ತದ

ಬತ್ತಳಿಕೆಯಿಂದ ಬಾಣಗಳನ್ನೆಳೆದು ಡೊಂಕುಮಾತಿನ ಬಿಲ್ಲಿನಲ್ಲಿ ಹೂಡಿ, ನನ್ನ ಹೃದಯವನ್ನು ಭೇದಿಸಿದ.

ಅವನು ಬಟ್ಟತಲೆಯ ವ್ಯಾಖ್ಯಾನ ಮಾಡಲು ಮೊದಲು ಮಾಡಿದಾಗಲೇ, ನನಗೆ ತಲೆಸಿಡಿತ ಪ್ರಾರಂಭವಾಗಿ ಬಿಟ್ಟಿತ್ತು. ಅಲ್ಲಿಂದಾಚೆಗೆ ನಾನು ನಿದ್ದೆಯಲ್ಲಿ ನಡೆಯುವವನಂತೆ, ಪತ್ತರಿಸುತ್ತ ಹೆಜ್ಜೆ ಇಟ್ಟೆ. ಆದರೆ ಸಕ್ಸೇನನ ನೀತಿಯ ಖಂಡನೆಯತ್ತ ಅವನ ವಾಗ್ಝರಿ ಸರಿಯುತ್ತಲೂ, ನನ್ನ ದೃಷ್ಟಿ, ಅವನ ಎಡಗೈ ಮೇಲೆ ನೇತಾಡುತ್ತಿದ್ದ ಚೀಲದತ್ತ ಹರಿಯಿತು. ರೇಷನ್ ಡಿಪೋದಿಂದ ಅವನು ಅದರಲ್ಲಿ ಅಕ್ಕಿ ತುಂಬಿ, ನೋಳ್ಕೆಗೆ ತೂಗು ಹಾಕಿದ್ದ. ಆದರೆ, ಅದು ತೂತಿನ ಚೀಲ! ಬುಸ್ಸಕ್ಕೂ ಒಂದೊಂದೇ ಕಾಳು ಜಿಲ್ಲುತ್ತ ಬರುತ್ತಿತ್ತು. ಅವನ್ನು ಪತ್ತೆ ಹಚ್ಚಿವ ಮೇಲೆ, ನನಗೆ, ನನ್ನ ಗಮನವನ್ನು ತಿರುಗಿಸಲು, ಅನುಕೂಲವಾದ ಸಾಧನವೊಂದು ದೊರೆತಹಾಗಾಯಿತು. ಕೆಳಗೆ ಬೀಳುತ್ತಿದ್ದ ಕಾಳನ್ನು ನುಂಗಲು, ಗುಬ್ಬಿಗಳು ಬೇರೆ ಸಾಲಾಗಿ ಹಿಂದೆ ಬರುತ್ತಿದ್ದುವು.

"ಕ್ಷಮಿಸು, ನಂಜುಂಡ! ನಿನ್ನ ಈ...."

"ಗೊತ್ತಪ! ನೀನು ಏನೇ ಹೇಳು! ಸುಂಕುತಿಮ್ಮನ ಕಗ್ಗಕ್ಕಿಂತ, ಆಗ್ಗವಾದ ಕಗ್ಗವನ್ನು ನೀರು ಕುಡಿದಂತೆ ಒದರುವ ಪುಣ್ಯಾತ್ಮರು ಈಗ ಸಾವಿರಾರು ಜನ ಹುಟ್ಟಿಕೊಂಡಿದ್ದಾರೆ. ನೋನ್ನೆ ಗಾಂಧೀ ಪಾರ್ಕ್‌ನಲ್ಲಿ ಒಬ್ಬರು ಬಂದಿದ್ದರು ನೋಡು. ಅವರು ಸಮಾಜವಾದಿಗಳ ಒಳತಂತ್ರ ಕುರಿತು, ಪೆಟ್ರೋಂಡ್ ರಸ್ಸೆಲ್ ಹೇಳಿರುವ ಮೂರು ಮುಖ್ಯ ಅಭಿವ್ರಾಯಗಳನ್ನು ....ಅಭಿವ್ರಾಯವೆಂದರೆ, ಅದನ್ನು ಕೊಡುವವಕ್ಕೂ ವ್ಯಾಯ ಬರಬೇಕು, ಅನ್ನು.... ಮೂರು ಮುಖ್ಯ ಅಭಿವ್ರಾಯಗಳನ್ನು....ಮೂರೇಕೆ? ಅಂತ ಕೇಳುತ್ತೀಯೇನು? ಅವರು ನಾಲ್ಕನ್ನೇ ಕೊಡಬಹುದಾಗಿತ್ತು, ಅವರೇನು, ಲಾರ್ಡ್ ಬಿರುದನ್ನೂ ಕೂಡ ತ್ಯಜಿಸಿ ಮೆರೆಯುವವರಲ್ಲವೆ? ಅವರಿಗೇನು ಕಡಮೆ? ಕೆಲವರಿದಾರಲ್ಲಾ, ನಮ್ಮೂರಲ್ಲಿ ಬಿರುದು ಬಿರುದು ಅಂತ ಹೇಚಾಡುತ್ತ ಕೈಗೆ ಬಂದದ್ದು ಬಾಯಿಗಿಲ್ಲದೆ...."

"ನೋಡಪ್ಪ! ನಂಜುಂಡ! ಕೆಲವರಿದಾರೆ, ಸರಿ. ಇಲ್ಲ ನಿನ್ನಲ್ಲಿಲ್ಲ; ಆದರೆ, ನಿನಗೂ ನಾನೊಂದು ಹೇಳುವುದಿದೆ...."

ಆದರೆ, ನಂಜುಂಡ ಎಲ್ಲಿ ಕಿವಿ ಕೊಡುತ್ತಾನೆ? ಅವನು ಒದರುತ್ತಲೇ ನಡೆದ.

"ಬರುದು ಎಂದಾಗ ಜ್ಞಾಪಕಕ್ಕೆ ಬಂತು. ಈ 'ಸ್ವಾತಂತ್ರ್ಯ' ಎಂಬುದು ಗಳಿಸಿಟ್ಟ ಹಣವೇನಯ್ಯ? ಹೂತಿಟ್ಟ ನಿಧಿಯೇನಯ್ಯ? ಕೈಗೆ ಕೆಸರು ಮೆತ್ತಿಸಿಕೊಂಡರೆ, ನೋಡು, ಬಾಯಿಗೂ ಕೆಸರೇ ಬೀಳುವುದು. ಮುಖ್ಯ ಕೈ ಶುದ್ಧವಾಗಿರಬೇಕು. ಲಂಚ ಎನ್ನುವುದನ್ನು ಪಂಚಮಹಾ ಪಾತಕದಲ್ಲಿ ಏಕೆ ಸೇರಿಸಿಲ್ಲ ಪರಾಶರ ಮಹರ್ಷಿಗಳು, ತಿಳಿಯುವುದೆ ನಿನಗೆ? ಅವೆಲ್ಲಕ್ಕಿಂತ 'ಮಹಾ' ಅದು. ಅದಕ್ಕಾಗಿಯೇ ಒಂದು ಪ್ರತ್ಯೇಕ ಕುಂಭೇಶಾಖವಿದೆ, ನರಕದಲ್ಲಿ ..... " ನಂಜುಂಡ ನನ್ನನ್ನೂ ಹಿಡಿದುಕೊಂಡು, [ಆ ಚೌಕದಲ್ಲೆ ಅರ್ಧ ನಿಮಿಷ ನಿಂತ. ಒಂದು ಹಿಡಿ ಅಕ್ಕಿ ಅಲ್ಲೀಸೋರಿತು ಗುಬ್ಬಿಗಳಿಗೆ ಒಳ್ಳೇ ಸಂತರ್ಪಣೆ.

ನನ್ನ ಕಿವಿನೋವು ತುಂಬಾ ಬಾಧೆಕೊಟ್ಟಿತು. ನಂಜುಂಡನ ಮನೆಯಾಕೆ, ಪಾಪ, ಹೇಗೆ ಸಂಸಾರ ನಡೆಸುತ್ತಿದಾಳೆ, ಈ ಶತಮೊಂಡು ಸರ್ವಜ್ಞನ ಸಂಗಡ, ಎನಿಸಿತು. ಹೆಣ್ಣಿನ ಬಾಳು ಕಣ್ಣೀರು, ಎಂಬುದು ನೆನಪಿಗೆ ಬಂತು.

"ನೋಡು, ನಮ್ಮ ದೇಶಕ್ಕೆ ಇವತ್ತು ಬೇಕಾಗಿರುವವರು ನೀರಮಾತೆಯವರು, ಶೂರಸೇನರು,..... ಖಾರ ವಿಮರ್ಶಕರಲ್ಲ! ದೀನದಲಿತರಲ್ಲ; ಮಾನಲಲಿತೆಯರು. ಯಾವ ಕಾರ್ಯವನ್ನು ವಹಿಸಿದರೂ, ಅದನ್ನ ಕಾಯಕದಂತೆ ನಿರ್ವಹಿಸುವವರು ಬೇಕು. ಅವರ ಆಗು ನಿನ್ನು, ಹೋಗು ಏನು, ಸಾಧಕ ವೆಂಧದ್ದು ಬಾಧಕವೆಂಧದ್ದು, ಕ್ರಮ ಹೇಗೆ, ಶ್ರಮ ಎಷ್ಟು....'

ಮಾತಿನಮೂಲಕ ಅರ್ಥ ಚೀಲ ಖಾಲಿಯಾದರೂ, ಅದರ ಭಾರ ಇಳಿದದ್ದು ಈ ನಂಜುಂಡನಿಗೆ ಗೋಚರವಾಗಲೇ ಇಲ್ಲವಲ್ಲಾ, ಎಂದು ನಾನು ಆಶ್ಚರ್ಯಪಟ್ಟೆ. ಲೋಕವನ್ನೆಲ್ಲ ಟಿಕಿಸುವವನಿಗೆ ತನ್ನ ಚೀಲದ ತೂತು ಪತ್ತೆಯಾಗಲಿಲ್ಲವೆಂದರೆ, ನಗಬೇಕೆ, ಅಳಬೇಕೆ?

"ಅದನ್ನೇ ಕಣಯ್ಯ ನಾನು ಒತ್ತಿ ಒತ್ತಿ ಹೇಳೋದು" ಎಂದು ಹೇಳುತ್ತ ನಂಜುಂಡ ಅವನ ಮನೆ ಇದ್ದ ರಸ್ತೆಗೆ ತಿರುಗಿದ. ಯಾವ ವಿಷಯವನ್ನೂ ಮತ್ತೆ ಮತ್ತೆ ಒತ್ತುವುದು ಅವನ ರೂಢಿ.

ಆಗ, ನಮ್ಮನ್ನೇ ಹಿಂಬಾಲಿಸುತ್ತ, ಅಕ್ಕಿ ಕಾಳನ್ನೆಲ್ಲ ತಿನ್ನುತ್ತಾ ಬರುತ್ತಿದ್ದ ಗುಬ್ಬಿಗಳು ಮೆಲ್ಲಗೆ, ಅವನ ಚೀಲ ಬರಿದಾದ್ದನ್ನು ತಿಳಿದು, ಅವನ ಕೈ ಮೇಲೆ ಹಾರಿ ಕುಳಿತುವು. ತಕ್ಷಣ ನಂಜುಂಡನಿಗೆ ಜ್ಞಾನೋದಯವಾಯಿತು, ನಾನು ನಕ್ಕೇ ಬಿಟ್ಟೆ.

ಆದರೆ, ಆದಕ್ಕೆ ಪ್ರತೀಕಾರ ನಾನು ಅನುಭವಿಸಬೇಕಾಗಿ ಬಂತು. "ಚಾ! ನಿನ್ನ ಮನೆಯಿಂದ ಒಂದು ಸೇರು ಅಕ್ಕಿಯನ್ನಾದರೂ ನೀನು ಕೊಡಲೇ ಬೇಕು. ತಕ್ಕ ಸಮಯದಲ್ಲೇ ನೀಚ ಎಚ್ಚರಿಕೆ ಕೊಟ್ಟಿದ್ದರೆ..... ನನಗೆ ಉಪವಾಸ ತಪ್ಪುವುದಲ್ಲಾ!" ಎಂದು ರೇಗಿದ. ಉಪವಾಸದ ಸಾಧ್ಯಾಸಾಧ್ಯತೆಗಳನ್ನು ಕುರಿತೂ, ಕಮ್ಯೂನಿಸ್ಟರು ಕಾರಾಗೃಹಗಳಲ್ಲಿ ಈಗ ಹೂಡುತ್ತಿರುವ .....

ನನ್ನ ಗ್ರಹಚಾರ! ದಾರಿ ಉದ್ದಕ್ಕೂ ಮತ್ತೆ ಅದೇ ಹಿಂಸೆ; ಅಲ್ಲದೆ, ನನ್ನ ಮನೆ ಎಲ್ಲಿತ್ತು ಎಂಬುದನ್ನು ಅವನಿಗೆ ತಿಳಿಸದೆ, ಅವನಿಂದ ಅಷ್ಟು ದಿವಸ ಮರೆ ಮಾಚಿದ್ದೆ; ಅದನ್ನೂ ಪತ್ತೆ ಹಚ್ಚಿಬಿಟ್ಟ,..... ಮುಖ್ಯ, ಕರ್ಮಫಲ!

ಸ್ವಿಝರ್ಲಂಡಿನ ಕೂದಲು

(ಒಂದು ವಿನೋದಕಥನ)

★

ಡಾ. ಬಿ. ಜಿ. ಕುಲಕರ್ಣಿ, ಬಿ.ಎ. (ಆನರ್ಸ್) ಮುಂಬಯಿ.

ಸ್ವಿಝರ್ಲಂಡಿಗೆ ಹೋಗಿಬಂದ ಅನಂತಶಯನರಾಯರು, ಅಲ್ಲಿ ಅನುಭವಿಸಿದ ಕತೆಯೊಂದನ್ನು ಸಂದರ್ಭವಶಾತ್ ಹೇಳಿದರು. ಪದ್ಮಕ್ಕನವರ ಬಾಡಿ ಬತ್ತಿದ ಮುಖದಲ್ಲಿಯೂ ನಗೆಮಲ್ಲಿಗೆ ಅರಳಿತು.

★

ಅಂದು ನಮ್ಮಲ್ಲಿ ಆನಂದವೇ ಆನಂದ. ಪ್ರತಿ ದೀಪಾವಳಿಯೋ ಏನೋ ಎನ್ನುವಷ್ಟು ಸುಖಸಂಭ್ರಮದ ದಿನವದು. ಅಂದೆಯೆ ನನ್ನ ಮುದುನೆಯು, ಪೂರ್ವ ಆಫ್ರಿಕೆಯಲ್ಲಿಯ ಹಿಂದೀ ಪ್ರತಿನಿಧಿಯ ಮುಖ್ಯ ಸಹಾಯಕರಾದ ಮೋಹನರಾಯರೊಡನೆ ನಿಶ್ಚಯವಾಗಿತ್ತು. ಸತ್ಯನಾರಾಯಣ ಮಾಡಿಸಿ ಊರಲ್ಲಿಯ ಪ್ರತಿಷ್ಠಿತರನ್ನೂ ಆಪ್ತಮಿತ್ರರನ್ನೂ ಊಟಕ್ಕೆ ಕರೆದಿದ್ದೆವು.

ಪೂಜೆ-ಪುರಸ್ಕಾರಗಳು, ಹರಟೆ-ಸಂಭಾಷಣೆಗಳು ಭರದಿಂದ ಸಾಗಿದ್ದುವು. ಅಷ್ಟರಲ್ಲಿಯೆ ಅಣ್ಣನು ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್ ಪರೀಕ್ಷೆಯಲ್ಲಿ ಪಾಸಾಗಿ ಮೇಲಿನ ಕ್ರಮಾಂಕ ಪಡೆದುದಾಗಿ, ದಿಲ್ಲಿಯಲ್ಲಿದ್ದ ಆಪ್ತರೊಬ್ಬರಿಂದ ತಂತಿ ಬಂದಿತು. ಕೇಳುವುದೇನು? ಆನಂದದಲ್ಲಿ ಆನಂದ. ಕ್ಷೀರಸಾಗರದಲ್ಲಿ ಸಕ್ಕರೆಯ ಹಿಮಾಲಯವನ್ನಿರಿಸಿದಂತಾಯಿತು. ಸುಖ ತಾನು ಬರುವಾಗ ಗುಳೆಯೆತ್ತಿ ಬರುವುದು ಸುಳ್ಳಲ್ಲ—ಎಂದೆನಿಸಿತು.

ತಾಯಿಯ ಹರ್ಷಕ್ಕೆ ಮೇರೆ ಉಳಿಯಲಿಲ್ಲ. ಅದರ ಉಬ್ಬಿನಲ್ಲಿ ಅಂದು, ತಾನೇ ಅಡುಗೆ ಮಾಡಲು ಸಿದ್ಧಳಾದಳು. 'ಮಗಳ ಭಾಗ್ಯ ತೆರೆಯಿತು, ಮಗ ಸ್ವತಂತ್ರಭಾರತದ ಸೇವೆಗೆ ಅಣಿಯಾದ—ಇಂಥ ಸುದಿನ ಅಡುಗೆಯವರು ಮಾಡಿದ ಅಡುಗೆಯನ್ನು ದೇವರಿಗೆ ನೈವೇದ್ಯವನ್ನಾಗಿ ಇಡಿಸಲಾರೆ!' ಎನ್ನುತ್ತ ತಾಯಿ ಸೆರಗನ್ನು ಅಡ್ಡಗಟ್ಟಿದಳು.

ಭೋಜನದ ಪಜ್ತಿಗೆ ವಿಶೇಷ ಕಳೆ ಏರಿದ್ದಿತು. ಮೊದಲನೆಯದಾಗಿ, ಅನ್ನಧಾನ್ಯಗಳ ಕೊರತೆಯ ಈ ಕಾಲದಲ್ಲಿ, ಸತ್ಯನಾರಾಯಣನಿಗೆ ಅನ್ನಧಾನ್ಯಗಳ ಪಕ್ವಾನ್ನಗಳು ರುಚಿಸಲಿಕ್ಕಿಲ್ಲೆಂದೂ ಪೂರಕ ಆಹಾರಗಳನ್ನೇ ಬಳಸಿ ತಾಯಿ ಮೃಷ್ಟಾನ್ನವನ್ನು ತಯಾರಿಸಿದ್ದಳು. ಇದರಿಂದ ಅಡುಗೆಗೆ ನಾವೀನ್ಯ ವೈವಿಧ್ಯಗಳ ಒಗ್ಗರಣೆ ಬಿದ್ದಂತಾಗಿತ್ತು. ನವಣೆಯ ಅಕ್ಕಿಯ ಅನ್ನ, ಗೆಣಸಿನ ಹೋಳಿಗೆ, ಸೇಂಗಾ ಹಿಂಡಿಯ ಅಂಬೋಡಿ, ಖರ್ಜೂರದ ಪಾಯಸ, (ತೆಂಗಿನ ನೀರಿನಲ್ಲಿ ಮಾಡಿದ್ದು) ಸಬ್ಬಕ್ಕಿಯ ಚಿತ್ರಾನ್ನ—ಇತ್ಯಾದಿಗಳನ್ನು ಮಾಡಲಾಗಿತ್ತು. ತಾಟಿನಲ್ಲಿ ಎಲ್ಲಿ ಕೈ ಇಟ್ಟರೂ ಹೊಸ ಪದಾರ್ಥವೇ, ನಾಲಗೆಯ ಮೇಲೆ ಏನನ್ನಿಟ್ಟರೂ ಹೊಸ ರುಚಿಯೆ!

ಅಡುಗೆಯ ಪದಾರ್ಥಗಳಂತೆ ಭೋಜನ ಪಜ್ತಿಯೂ ಸರಸವೂ ನಾವೀನ್ಯ ವೈವಿಧ್ಯಗಳಿಂದ ತುಂಬಿದುದೂ ಆಗಿತ್ತು. ಎಲ್ಲಿ ಕಿವಿಗೊಟ್ಟರೂ ಹೊಸ ವಿನೋದ, ಹೊಸ ವಿಚಾರಗಳೇ .....ಜೀವನದ ವಿವಿಧ ಕ್ಷೇತ್ರಗಳಲ್ಲಿ ಅನುಭವ ಪಡೆದವರು ಅಂದಿನ ಪಜ್ತಿಯಲ್ಲಿದ್ದರಾದ್ದರಿಂದ.

ನನ್ನ ಭಾವೀ ಯಜಮಾನರು ಪೂರ್ವ ಆಫ್ರಿಕೆಯ ಜನಜೀವನ, ಅಲ್ಲಿಯ ಹಿಂದೀಯರ ಸ್ಥಿತಿಗತಿ ಮೊದಲಾದುವುಗಳ ಬಗ್ಗೆ ಹೇಳುತ್ತಿದ್ದರು. ಸ್ವಿಝರ್ಲಂಡಿನಿಂದ ಅದೇ ಮರಳಿ ಬಂದಿದ್ದ ಅನಂತಶಯನರಾಯರು, ಗಡಿಯಾರಗಳ ತವರುಮನೆಯಾದ ಆ ದೇಶದ ನಿಸರ್ಗಶೋಭೆಯನ್ನು ಮನವಾರೆ ಬಣ್ಣಿಸುತ್ತಿದ್ದರು. ತಂದೆಯವರು, ತಮ್ಮ ಕಾಲಕ್ಕೆ ಸರಕಾರೀ ಕಛೇರಿಗಳಲ್ಲಿ ಲಂಚಗುಳಿತನ ಹೇಗಿದ್ದಿತು, ಯಾವ ಯಾವ ರೂಪ ತಾಳುತ್ತಿದ್ದಿತು—ಎಂಬುದನ್ನು ಉದಾಹರಣೆಗಳನ್ನು ಕೊಟ್ಟು (ಆದರೆ ಹೆಸರೊಡೆಯದೆ) ಹೇಳುತ್ತಿದ್ದರು. ಶ್ರೀ. ಭೂಮಾಚಾರ್ಯರು ತಮ್ಮ ಕಂಬಾಕಿನ ವ್ಯಾಪಾರದಲ್ಲಿಯ ವಿನೋದ ಪ್ರಸಂಗಗಳನ್ನು ಹೇಳಿ ಹಾಸ್ಯತುಷಾರಗಳನ್ನು ಎಬ್ಬಿಸುತ್ತಿದ್ದರು. ಪ್ರೊಫೆಸರ್ ಚತುಷ್ಕೋಣರವರು, ಹೊಸ ಪೀಳಿಗೆಯ ವಿದ್ಯಾರ್ಥಿಗಳಲ್ಲಿ ಶಿಸ್ತು-ಸಂಘಟನೆಯ ಹುರಿಕಟ್ಟು ಶಿಥಿಲವಾಗುತ್ತಿದೆಯೆಂದು ಆಗಾಗ ಗೊಣಗುತ್ತಿದ್ದರು. ಪೋಲಿಸ್ ಇನ್ಸ್‌ಪೆಕ್ಟರ್ ಟೊಣಪಿಯವರು, ಕಾವ್ಯಸೌಂದರ್ಯ-ಚಿತ್ರಕಲೆಗಳಿಗೆ ಉಗಮಸ್ಥಾನವಾದ ಪ್ರಣಯವು ಅನೇಕ ಅಪರಾಧಗಳ ಬುಡದಲ್ಲಿರುವುದೆಂದು ಪ್ರಸ್ತಾಪಿಸಿ, ತಾವು "ಪತ್ತೆ ಹಚ್ಚಿದ" ಅಪರಾಧಗಳನ್ನು ಸೋಲೀಸೀ ಭಾಷೆಯಲ್ಲಿ ವಿವರಿಸುತ್ತಿದ್ದರು. ಹುಚ್ಚರ

ಇದೀಗ ಹೊಸ ಸ್ಟಾಕು ಬಂದಿದೆ

ಇಂಡಿಯಾ ಹಾರ್ಸ್ ಪವರಿನ

ನಾರ್ಮನ್

ಮೋಟರು ಸ್ಕೈಕಲ್‌ಗಳು

ಸುಲಭ ಬೆಲೆಯಲ್ಲಿ ದೊರೆಯುವವು.

ಯೋಗ್ಯಜಾಮೀನು ಕೊಟ್ಟಲ್ಲಿ ಕಂತಿನ ಮೇಲೆ ಸಹ ದೊರೆಯುವವು

ವಿಚಾರಿಸಿರಿ:

ದೇಸಾಯಿ ಮತ್ತು ಕಂಪನಿ

ಮೋಟರ್ ಮತ್ತು ಸಾಯಿಕಲ್ ವ್ಯಾಪಾರಿಗಳು

ಹೆಡ್ ಆಫೀಸು: ಹುಬ್ಬಳ್ಳಿ — ಶಾಖೆ: ಬೆಳಗಾವ.

ಆಸ್ಪತ್ರೆಯ ಡಾ. ಕರಡೀಗುದ್ದಿಯವರು, ಹುಚ್ಚು ಎಷ್ಟು ಪ್ರಕಾರದ್ದು, ಎಂಥ ಹುಚ್ಚರನ್ನು "ಡುರಸ್ತ್" ಮಾಡಬಹುದು.....ಎಂಥವರ ಹುಚ್ಚು "ಕಾಯಂ" ಆಗುವದು—ಎಂದು ಹೇಳಿ, ಹುಚ್ಚರ ಜಗದ ವಿಹಂಗಮಾವಲೋಕನವನ್ನು ಮಾಡಿಸುತ್ತಿದ್ದರು. ಅಣುಶಕ್ತಿಯು ಕಾಣಾದನಿಗೆ ಗೊತ್ತಿರದಿರಲಿಲ್ಲವೆಂದು, ಪಂಡಿತ ಅರದ್ಯುಡಿ ಅವರು, ಸಂಸ್ಕೃತ ಶ್ಲೋಕವಾಕ್ಯಗಳನ್ನು ಘೋಷಿಸಿ ಪ್ರಸ್ತಾಪಿಸುತ್ತಿದ್ದರು. ಹೊಸತಾಗಿ ವಕೀಲವೃತ್ತಿಯನ್ನು ಪ್ರಾರಂಭಿಸಿದ ಕು. ಅಹಲ್ಯಾ ಸೀತೀಮನಿ ಅವರು, ತಮ್ಮ ಹೊಸ ಅನುಭವವನ್ನು ಸಾದರಪಡಿಸುತ್ತಿದ್ದರು. ಸಂಸ್ಥಾನವನ್ನು ಪ್ರಜೆಗಳಿಗೆ ಬಿಟ್ಟುಕೊಟ್ಟು ರಿವಿನ್ಯೂ ಖಾತೆಯಲ್ಲಿ ಸಿರಸ್ತೇದಾರರಾದ ಛಿದ್ರಾಪೂರದ "ಸರಕಾರ"ರು, ತಮ್ಮದೈನಂದಿನದ ಜೀವನದಲ್ಲಾದ ಸ್ಥಿತ್ಯಂತರವನ್ನು ಬಣ್ಣಿಸುತ್ತಿದ್ದರು. ಹರಟೆಯೆಂದರೆ ಪರಮೇಶ್ವರನಂತೆ ಅನಾದಿ-ಅನಂತವಂತೆ. ಈ ಮಾತು ಹದಿನಾರಾಣೆ ಸತ್ಯನೆಂದು ಅಂದು ನನಗೆ ಮನದಟ್ಟಾಯಿತು.

ಹರಟೆಯು ರಸವತ್ತಾಗಿ ಸಾಗಿತ್ತು. ಆದರೆ ಅಷ್ಟರಲ್ಲಿ ಅನಂತಶಯನರಾಯರ ಗಂಟಲಕ್ಕೆ ಏನೋ ಹತ್ತಿ, ಅವರು ಕೆಮ್ಮತೊಡಗಿದರು.

ಗಬಗಬನೆ ನೀರು ಕುಡಿದು ನೋಡಿದರು—ಬಗೆಹರಿಯಲಿಲ್ಲ. "ವ್ಯಾಳ ಅಜ್ಜಾ ಬನ್ನಾನ ನೋರ್ರಿ," ಎಂದು ನಮ್ಮ ಅಕ್ಕನ ಚಿಕ್ಕ ಮಗು ಸೂಚಿಸಿತು.

ನಗು ಬಂದು ಅನಂತಶಯನರಾಯರ ಕೆಮ್ಮು ಮತ್ತಷ್ಟು ಹೆಚ್ಚಿತು. ಅವರು ಸಿಟ್ಟಿಗೆದ್ದು ಕೈಯಲ್ಲಿಯ ಚಮಚೆ—ಮುಳ್ಳು-ಚಮಚೆಗಳನ್ನು ಬದಿಗೆ ಸರಿಸಿ ಒಗೆದು, ಮುಖಕ್ಕೆ ಟಾವೆಲ್ಲು ಹಿಡಿದುಕೊಂಡರು. ಗಂಟಲಿನಲ್ಲಿ ಬೆರಳುಗಳನ್ನು ಹಾಕಿ, ಏನೋ ಹೊರಗೆಳೆದರು. ಏನೋ ಏಕೆ—ಒಂದು ಉದ್ದವಾದ ಕೂದಲೆಳೆಯನ್ನು ಹೊರಗೆಳೆದರು!

ಕೂದಲನ್ನೂ ಅವರ ಉದ್ದಳತೆಯನ್ನೂ ನೋಡಿ ಎಲ್ಲರೂ ಖೊಳ್ಳೆಂದು ನಕ್ಕರು.

"ಇದರಿಂದ ಅಡುಗೆಯವನು ಅಡುಗೆ ಮಾಡಿಲ್ಲವೆಂಬುದು ಸಿದ್ಧವಾಗುತ್ತದೆ. ಇ. ಸ್ಥಾ. ಬೇ." ಎಂದು ಪ್ರೊಫೆಸರ್ ಚತುರ್ಕೋಣರು ನಗೆಯಾಡಿದರು.

ಅತ್ತ ನಗೆಬಳ್ಳಿ ಬೆಳೆದು ಹಬ್ಬಿ ಹೂ-ಕಾಯಿ ಬಿಡತೊಡಗಿತು; ಆದರೆ ಇತ್ತ ತಾಯಿಯ ಮೈ ಬೆವರಿಟ್ಟಿತು. ಮುಖ ಬಾಡಿತು. ಸ್ವತಃ ಅಡುಗೆ ಮಾಡುವ ಬುದ್ಧಿ ಎಲ್ಲಿಂದ ಬಂದಿತೋ ಎಂಬ ಹಳಹಳಿಯು ಅವಳ ಮೋರೆಯ ಮೇಲೆ ಒಡೆದು ಕಾಣತೊಡಗಿತು.

ಅನಂತಶಯನರಾಯರು ಸುತ್ತಲೆಲ್ಲ ದೃಷ್ಟಿ ಬೀರುತ್ತಿದ್ದಾಗ, ಅವರಿಗೆ ತಾಯಿಯ ಬಾಡಿದ ಮುಖ ಕಂಡಿತು. ಅವಳ ಕಳವಳವನ್ನು ಅವರು ಒಮ್ಮೆಲೆ ತಿಳಿದುಕೊಂಡರು.

"ಹಿಂದುಸ್ತಾನದಲ್ಲಿ ಊಟದಲ್ಲಿ ಕೂದಲು ಬರುವದೇನಾಶ್ಚರ್ಯ? ಸ್ವಿಝರಲಂಡಿನಲ್ಲೂ ತಾಟಿನಲ್ಲಿ ಕೂದಲು ಬರುತ್ತವೆ," ಎಂದು ಅವರು ಪ್ರಾರಂಭಿಸಿದರು.

"ಕೂದಲನ್ನು ಬಾಬ್ ಮಾಡಿಸಿಕೊಳ್ಳುವವರ ದೇಶದಲ್ಲಿ? ಸ್ವಿಝರ್ಲಂಡಿನಲ್ಲಿ? ಎಂದೂ ಶಕ್ಯವಿಲ್ಲ!" ಎಂದರು ಪ್ರೋ. ಇ. ಟೊಣಪಿ.

"ಆ—ರ—ಕ್ಯ!" ಡಾ. ಕರಡೀಗುದ್ದಿ ಉದ್ಗರಿಸಿದರು.

"ರಿಡಕ್ಸಿಯೊ ಆ್ಯಡ್ ಅಬ್ಸರ್ಡಮ್"—ಪ್ರೊಫೆಸರ್ ಚತುರ್ಕೋಣ.

"ಮೊಲಕ್ಕೆ ಕೋಡು ಇರುತ್ತವೆಂದು ಹೇಳಿದಂತೆಯೇ!" ಪಂಡಿತ ಅರದ್ಯುಡಿ ಅವರು ಸಂಸ್ಕೃತ ವಾಕ್ಯವೊಂದನ್ನು ಉದ್ಧರಿಸಿದರು.

ಪೂರ್ವ ಆಫ್ರಿಕೆಯಲ್ಲಿಯ ಹಿಂದೀ ಕಚೇರಿಯ ಮುಖ್ಯ ಸಹಾಯಕರೂ ನಾನೂ ಹುಬ್ಬು ಏರಿಸಿ, ಕಣ್ಣು ಹಿಗ್ಗಿಸಿ ಅದೇ ಅರ್ಥವನ್ನು ಸೂಚಿಸಿದೆವು.

ಬೇರೊಂದು ರೀತಿಯಲ್ಲಿ ಪ್ರಹಾರ ಬರುವುದೊ, ಪರಿಹಾರ ಸಿಗುವುದೊ ತಿಳಿಯದೆ, ತಾಯಿ ಕುತೂಹಲದಿಂದ ಅನಂತಶಯನರಾಯರ ಕಡೆಗೆ ನೋಡಿದಳು.

ಅನಂತಶಯನರಾಯರು ಹೇಳತೊಡಗಿದರು. ಅವರು ಹೇಳಿದಂತೆಯೇ ಅವರ ಕತೆಯನ್ನು ಹೇಳುತ್ತೇನೆ:—

"ನಾನು ಸ್ವಿಝರಲಂಡಿಗೆ ಹೋದಾಗಿನ ಮಾತು. ಈಶ್ವರನಿಗೆ ನಮಸ್ಕಾರ ಮಾಡಿ ಬಸವಣ್ಣನಿಗೆ ವಂದಿಸದೆ ಬರಬಾರದೆಂದು

ಹೇಳುತ್ತಾರಲ್ಲ....ಹಾಗೆ, ಜಿನಿವಾ ಕಂಡು ಆದರ ಬಳಿಯಲ್ಲಿಯ ಓಮಾನ್ ಹಳ್ಳಿಯನ್ನು ನೋಡದೆ ಬಿಡಬಾರದೆಂದು ನನಗೆನಿಸಿತು. ಆದ್ದರಿಂದ ಒಂದುದಿನ ಮುಂಜಾನೆ, ಜಿನಿವಾದಲ್ಲಿ ಒಂದು ಮೋಟರ್-ಸಾಯಕಲ್ ಬಾಡಿಗೆಯಿಂದ ತೆಗೆದುಕೊಂಡು ಓಮಾನಕ್ಕೆ ಹೊರಟೆ.

ಸ್ವಿಝುರ್ಲಂಡಿನಲ್ಲಿ ಹಳ್ಳಿಗಳೂ ಪಟ್ಟಣಗಳಂತೆ ಆರೋಗ್ಯ-ಸೌಂದರ್ಯ-ಸಂಪತ್ತುಗಳಿಂದ ಸಂಪೂರ್ಣವೆಂದು ಕೇಳಿದ್ದೆ. "ಹಳ್ಳಿಯೇನು ಪಟ್ಟಣವೇನು, ಸ್ವಿಝುರ್ಲಂಡಿನಲ್ಲಿ ರಸ್ತೆಗಳು ಕನ್ನಡಿಯಷ್ಟು ಲಕಲಕ. ತುಪ್ಪವನ್ನು ಚೆಲ್ಲಿ ಬಳಿದುಕೊಳ್ಳಬಹುದು," ಎಂದು ಅಲ್ಲಿದ್ದ ಹಿಂದೀ ಮಿತ್ರರೊಬ್ಬರು ಆಗಾಗ ಹೇಳುತ್ತಿದ್ದರು. ಜಿನಿವಾದ ರಸ್ತೆಗಳಿಗೆ ಈ ಮಾತು ತಂತೋತಂತವಾಗಿ ಅನ್ವಯಿಸುವುದನ್ನು ಮನಗಂಡಿದ್ದೆ. ಸ್ವಿಝುರ್ಲಂಡಿನ ಹಳ್ಳಿಯೊಂದನ್ನೂ ಪ್ರತ್ಯಕ್ಷ ನೋಡಿಕೊಳ್ಳುವ ಲವಲವಿಕೆ ಮನದಲ್ಲಿತ್ತು.

ಆದರೆ ಯಾವ ಮುಹೂರ್ತದಿಂದ ಮೋಟಾರ್ ಸಾಯಕಲ್ಲನ್ನು ಹತ್ತಿದೆನೊ ಏನೋ ಎಂದೆನಿಸುವಂತೆ, ಓಮಾನ್ ಹಳ್ಳಿಯನ್ನು ಪ್ರವೇಶಿಸುತ್ತಿರುವಾಗಲೆ ನನ್ನ ಮೋಟಾರ್ ಸಾಯಕಲ್ಲು ಫಸ್ಸೆಂದು ಪಂಕ್ಚರ್ ಆಯಿತು. ನೋಡುತ್ತೇನೆ, ದೊಡ್ಡದೊಂದು ಮುಳ್ಳು ಗಾಲಿಯಲ್ಲಿ ಸಿಕ್ಕಿತ್ತು! ಸ್ವಚ್ಛತೆಯ ಜಂಬಪೇಳುವ ಹಳ್ಳಿಯಲ್ಲಿ ರಸ್ತೆಯ ಮೇಲೂ ದೊಡ್ಡ ಮುಳ್ಳುಗಳೆ?---ಎಂದು ಗೊಣಗುಟ್ಟುತ್ತ ಕೆಳಗಿಳಿದೆ.

ಪಂಕ್ಚರ್ ಸಪ್ಪಳವನ್ನು ಕೇಳಿ ಸುತ್ತುಮುತ್ತಲಿನ ಮನೆಗಳೊಳಗಿಂದ ಹಲವಾರು ಮಹಿಳೆಯರೂ ಸಣ್ಣ ಹುಡುಗರೂ ಹೊರಗೆ ಬಂದರು. ಪ್ರಸಂಗ ಬಂದರೆ ಇರೋಣವೆಂದು ನಾಲ್ಕಾರು ನಾಯಿಗಳೂ ಓಡಿಬಂದುವು. ಆದರೆ ಸುದ್ದಿಯಿಂದ ನಾನು ವಿದೇಶೀಯನೆಂದು ತಿಳಿದು, ಅವರಲ್ಲೊಬ್ಬಳು ತಾನಾಗಿಯೆ ನನ್ನ ಸಹಾಯಕ್ಕೆ ಮುಂದೆ ಬಂದಳು.

"ಏನಿದು? ನಿಮ್ಮ ಕನ್ನಡಿಯಂಥ ಲಕಲಕ ರಸ್ತೆಗಳಲ್ಲಿ ಮೋಟಾರ್ ಸಾಯಕಲ್ಲು ಪಂಕ್ಚರ್ ಆಗುವಂಥ ಮುಳ್ಳುಗಳಿರಬಹುದೆಂದು ಎನಿಸಿರಲಿಲ್ಲ." ಎಂದೆ ನಗೆಸೂಸುತ್ತ.

ಅವಳು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಕೆಳಗೆ ಬಾಗಿ ನನ್ನ ಮೋಟಾರ್ ಸಾಯಕಲ್ಲಿನ ಗಾಲಿಯಲ್ಲಿ ಸಿಕ್ಕ ಮುಳ್ಳನ್ನು ಹಿರಿದಳು.

"ಓ, ಇದು ಮುಳ್ಳಲ್ಲ ನೋಡಿರಿ. ದೊಡ್ಡ ಗಡಿಯಾರದೊಳಗಿನ ಮಿನೀಟಿನ ಕೈ." ಎಂದು ನಸುನಗೆಯಿಂದ ಹೇಳಿದಳು.

"ಗಡಿಯಾರದ ತವರ್ಮನೆಯಾದ ನಿಮ್ಮ ದೇಶದಲ್ಲಿ ಹೀಗಾಗುವುದೇನೂ ಆಶ್ಚರ್ಯವಲ್ಲ!" ಎಂದೆ.

ಅವಳು ಆಸ್ಥೆಯಿಂದ ನನ್ನನ್ನು ತನ್ನ ಗುಡಿಸಿಲುಮನೆಯಲ್ಲಿ ಕರೆದುಕೊಂಡು ಹೋದಳು. ಮೋಟಾರ್ ಸಾಯಕಲ್ಲನ್ನು ಸಮೀಪದಲ್ಲಿಯ ಒಂದು ಅಂಗಡಿಗೆ ದುರಸ್ತಿಗಾಗಿ ಕಳುಹಿಕೊಟ್ಟಳು.

ಅವಳು ಸುಮಾರು ೪೫ ವರ್ಷದವಳಿರಬಹುದು. ಆದರೆ ಇನ್ನೂ ತರುಣಿ. ಮೋಹನರಾವ್, ೪೫ ವರ್ಷಗಳಾದರೂ ಅನಳ ನೋರೆಯ ಮೇಲೆ ನಿನ್ನ ಭಾವೀ ಪತ್ನಿಯ ಕಾರುಣ್ಯ-ಸೌಂದರ್ಯದ ಕಳೆಯೇ ಕಾಣುತ್ತಿತ್ತು. ಅವಳ ಮನಸಿನಲ್ಲಿ ಕೃತಿಯಲ್ಲಿ ಉತ್ಸಾಹ ಹೊರಹೊಮ್ಮುತ್ತಿತ್ತು.

ಅವಳ ಮನೆಯನ್ನು ಪ್ರವೇಶಿಸಿದೆ. ಗಡಿಯಾರ ದುರಸ್ತಿ ಮಾಡುವವರ ಅಂಗಡಿಯನ್ನು ಪ್ರವೇಶಿಸಿದಂತೆ ಎನಿಸಿತು. 'ಢಿಣ್ ಢಿಣ್ ಢಿಣ್' ಎನ್ನುವ ದೊಡ್ಡ ಗಡಿಯಾರಗಳು, 'ಚಿಕ್ ಚಿಕ್ ಚಿಕ್' ಎನ್ನುವ ನೂರಾರು ಕೈಗೆ ಕಟ್ಟುವ ಚಿಕ್ಕ ಗಡಿಯಾರಗಳು ಎಲ್ಲಿ ನೋಡಿದರೂ ಕಾಣುತ್ತಿದ್ದುವು, ಕೇಳುತ್ತಿದ್ದುವು. ಅವಳ ಯಜಮಾನನು ಬಹುಶಃ ಗಡಿಯಾರ ದುರಸ್ತಿಮಾಡುವವನಿರಬೇಕೆಂದು ಲೆಕ್ಕಹಾಕಿದೆ.

ನಾಲ್ವತ್ತೈದು ವರ್ಷದ ಆ ತರುಣಿಯು, ಆಸ್ಥೆಯಿಂದ ನನ್ನೊಡನೆ ಹಿಂದುಸ್ತಾನದ ವಿಷಯವಾಗಿ ಚರ್ಚಿಸಿದಳು. ಹೆಂಗುಸರನ್ನು ಪರದೆಯ ಮುಸುಕಿನಲ್ಲಿ ಇಲ್ಲವಾದರೆ ಅಜ್ಞಾನದ ಮುಸುಕಿನಲ್ಲಿಟ್ಟಿರುವಿರಾ ನಿಮ್ಮಲ್ಲಿ?— ಎಂದು ಹರಿಹಾಯ್ದಳು. ಹೀಗೇ ಚರ್ಚೆ ನಡೆಯಿತು.

ಅವಳ ಮಾತಿನ ಮೇಲಿಂದ ಅವಳು ಮನೆಯ ಒಡತಿಯೆಂದು ತಿಳಿಯಿತು. 'ಯಜಮಾನನು ಹಗಲುಹನ್ನೆರಡುತಾಸೂ ಕೆಲಸಕ್ಕೆಂದು ಹೊರಗೇ ಇರುವನು, ಇಲ್ಲಿಯವರಿಗೆ ಕೆಲಸವೇ ಹೆಂಡತಿಯಿದ್ದಂತೆ, ಮನೆಯ ಕಡೆಗೆ ಅವರ ಲಕ್ಷ್ಯ ಕಡಿಮೆ; ಎದ್ದರೆ ಕೆಲಸ ಬಿದ್ದರೆ ಕೆಲಸ' ಎಂದು ಅವಳು ಪ್ರೇಮಪೂರ್ವಕವಾಗಿ ತನ್ನ

ಅತಿ ಬಲಾಢ್ಯವಾದ
ಈ ಕಂಪನಿಯಲ್ಲಿಯೇ
ವಿಮೆ ಇಳಿಸಿರಿ!

ಚಾಲೂ ಜೀವವಿಮೆಯು ೧೦ ಕೋಟಿಯನ್ನು ಮಿಕ್ಕಿದೆ. ಅಗ್ನಿ, ಅಪಘಾತ ವಿಮೆಗಳ ಖಾತೆಗಳೂ ಇವೆ.

ಏಜೆನ್ಸಿಗಾಗಿ ಬರೆಯಿರಿ—
ಆರ್. ಎಲ್. ಅಗ್ನಿಹೋತ್ರಿ,
ಬ್ರಾಂಚ್ ಮ್ಯಾನೇಜರ್
ಏಶಿಯನ್ ವಿಮಾ ಕಂಪನಿ ಲಿ.,
ಹುಬ್ಬಳ್ಳಿ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆರ್ಟ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಗಂಡನ ಬಾಡಿಯನ್ನು ಹೇಳಿದಳು. ಅವನು ಹನ್ನೆರಡು ತಾಸು ಹೊರಗೆ ಕೆಲಸಮಾಡಿದರೆ, ಆ ಎಲ್ಲ ಗಡಿಯಾರಗಳನ್ನು ಯಾವಾಗ ದುರಸ್ತ ಮಾಡುವನೆಂದು ಕೇಳಬೇಕೆಂದೆನಿಸಿತು. ಆದರೂ ಜಿಜ್ಞಾಸೆಯನ್ನು ಪ್ರಕಟಿಸಲಿಲ್ಲ.

ನಮ್ಮ ಚರ್ಚೆ ಹಾಗೆಯೆ ಸಾಗಿತು. ಊಟದ ವೇಳೆಯು ವರೆಗೂ ಸಾಗಿತು. ಇಲ್ಲಿಯೇ ಭೋಜನವಾಗಬೇಕೆಂದು ಅವಳು ಆಗ್ರಹ ತೊಟ್ಟಳು. ರೋಗಿ ಬಯಸಿದ್ದು ಹಾಲೋಗರ, ವೈದ್ಯನು ಹೇಳಿದ್ದೂ ಹಾಲೋಗರವೇ. ನಾನು ಒಪ್ಪಿದೆ.

ಒಳಗಿನ ಒಂದು ಕೋಣೆಯಲ್ಲಿ ಟೇಬಲ್ಲು ಬಳಿ, ನನ್ನ ಸಲುವಾಗಿ ಒಂದು ಟೇಬಲ್ಲನ್ನು ಅವಳು ಸಿದ್ಧಪಡಿಸಿದ್ದಳು. ಪಂಡಿತ ಅರವಿಂದ್ಯಡಿಯವರೆ, ನಾನು ಮಾಂಸಾಹಾರಿಯಲ್ಲ ಎಂದು ಅವಳಿಗೆ ಮೊದಲೆ ಹೇಳಿದ್ದೆ. ಆದ್ದರಿಂದ ನನ್ನ ಟೇಬಲ್ಲಿನ ಮೇಲೆ ಅಲ್ಲದ ಸಲ್ಲದ ಪದಾರ್ಥಗಳು ಬಂದಿರಲಿಲ್ಲ. ಒಂದು ತಟ್ಟೆಯಲ್ಲಿ ಬ್ರೆಡ್ಡುಗಳ ಹೋಳುಗಳು, ಇನ್ನೊಂದರಲ್ಲಿ ಬೆಣ್ಣೆ, ಮತ್ತೊಂದರಲ್ಲಿ ನಾಲ್ಕಾರು ತರದ ಹಣ್ಣುಗಳು. ಹರವಾದ ಹರಿವಾಣದಲ್ಲಿ ನಮ್ಮ ರಸಪಲ್ಲೆಯನ್ನು ಹೋಲುವಂಥ ಒಂದು ಅರ್ಧ ಸುರ್ಧ ಪ್ರವಾಹೀ ಪದಾರ್ಥವಿದ್ದಿತು. ಒಂದು ದೊಡ್ಡ ಗ್ಲಾಸಿನ ತಂಬ ಹಾಲು. ಮುಗಿಯಿತು, ಇಷ್ಟೇ ಭೋಜನದ ಪದಾರ್ಥಗಳು.

ರಸಪಲ್ಲೆಯಂಥ ಪದಾರ್ಥವನ್ನು ಒಂದೆರಡು ಚಮಚೆ ಬಾಯಲ್ಲಿ ಹಾಕಿಕೊಂಡೆನೋ ಇಲ್ಲವೊ, ಅಷ್ಟರಲ್ಲಿ ಇದೇ ಈಗ ಸಂಭವಿಸಿದಂಥ ಘಟನೆಯೇ ಸಂಭವಿಸಿತು. ಹಲ್ಲಿಗೆ ಏನೋ ತಟ್ಟಿದಂತಾಯಿತು. ಗಂಟಲಿಗೆ ಏನೋ ಹತ್ತಿದಂತಾಯಿತು. ಕೆಮ್ಮು ಬಂದಿತು, ನಾಲಗೆ ಕೊರೆಯತೊಡಗಿತು

ನೀರು ಕುಡಿದು ನೋಡಿದೆ. ಪ್ರಸಂಗ ನೀಗಲಿಲ್ಲ. ಆ ಮೇಲೆ ಆ ಚಮಚೆ-ಮುಳ್ಳುಚಮಚೆಗಳನ್ನೆಲ್ಲ ಬದಿಗೆ ಸರಿಸಿಟ್ಟು, ಬಾಯಲ್ಲಿ ಬೆರಳುಗಳನ್ನು ಹಾಕಿ, ಆ ಆತಂಕವನ್ನು ಹುಡುಕಲು ಉದ್ಯುಕ್ತನಾದೆ.

ಬಹಳ ವೇಳೆ ಹತ್ತಲಿಲ್ಲ. ಕೂದಲೆಳೆ ಹುಡುಕುವುದು ನನಗೆ ಬಾಲ್ಯದಿಂದ ಅಭ್ಯಾಸವಾಗಿ ಹೋಗಿದೆ. ಆದ್ದರಿಂದ ನೋಡುನೋಡುತ್ತಿರುವಷ್ಟರಲ್ಲಿ ಕೂದಲೆಳೆ ಬೊಟ್ಟುಗಳಿಗೆ ಸಿಕ್ಕಿತು. ಬಲು ಬಿರುಸಾದ ಕೂದಲೆಳೆಯದು. ಇಷ್ಟು ಬಿರುಸಾದ ಕೂದಲೆಳೆ ಯಾವ ಮಾದೇವಿಯದಿರಬಹುದೆಂದು ಆಶ್ಚರ್ಯವಾಯಿತು. ಆದರೆ ವಿಶೇಷ ವಿಚಾರಕ್ಕೆ ಎಡೆಯಿರಲಿಲ್ಲ. ಹಾಗೂ ಹೀಗೂ ಅದನ್ನು ಹೊರಗೆಳೆದು, ತಟ್ಟೆಯಲ್ಲಿ ಬುಡದಲ್ಲಿ ಇಟ್ಟು, ಭೋಜನ ಸಾಗಿಸಲು ಹವಣಿಸಿದೆ. ಆದರೆ ಈ ಎಲ್ಲ ಗುದ್ದಾಟವು ಅವಳ ಕಣ್ಣಿಗೆ ಬೀಳದೆ ಹೋಗಲಿಲ್ಲ.

"ಏನಾಯಿತು?" ಎಂದವಳು ಕೇಳಿದಳು.

"ಏನೂ ಇಲ್ಲ. ಏನೇನೂ ಇಲ್ಲ. ಬಾಯಲ್ಲಿ ಕೂದಲೆಳೆ ಬಂದಿತ್ತು ತೆಗೆದೊಗೆದೆ. ಹಿಂದುಸ್ತಾನದಲ್ಲಿ ಕೂದಲೆಳೆ ಬಾಯಲ್ಲಿ ಬಾರದೆ ಒಂದೂ ದಿನ ನಮ್ಮ ಊಟವಾಗುವುದಿಲ್ಲ. ಇದೇನು ಮಹತ್ತ್ವದ್ದಲ್ಲ. ಕೂದಲುಗಳು ಬಂದರೆ ಊಟಕ್ಕೆ ಒಂದು ತರದ ರುಚಿ," ಎಂದು ಮುಂತಾಗಿ ಪ್ರಸ್ತಾಪಿಸಿದೆ, ಅವಳಿಗೆ ಕೆಟ್ಟೆನಿಸಬಾರದೆಂದು.

"ಕೂದಲು ಬಂದಿತೆ? ಛೀ, ಎಂದೂ ಶಕ್ಯವಿಲ್ಲ!" ಎಂದು ಆತ್ಮವಿಶ್ವಾಸದಿಂದ ಎನ್ನುತ್ತಲೆ ಅವಳು, ನನ್ನ ಟೇಬಲ್ಲಿನ ಹತ್ತಿರ ಬಂದು, ನಾನು ಎಳೆದಿಟ್ಟ ಕೂದಲೆಳೆಯನ್ನು ಪರೀಕ್ಷಿಸಿದಳು. ಅವಳಿಗೂ ಅದು ಗಹನವೆನಿಸಿತು. ಕೂದಲಿನಂತೆ ಕಾಣುವುದಕ್ಕೆ ಕೂದಲಲ್ಲವೆನ್ನುವುದು ಹೇಗೆ? ಪೋಲೀಸ ಇನ್ಸಪೆಕ್ಟರ್ ಟೊಣಪಿಯವರೆ, ಮುದ್ದೆಮಾಲು ಸಿಕ್ಕಬಳಿಕ ತುಡುಗು ಪಾರಾಗುವುದೆ? ಆದರೂ ಅವಳು ಪಾರಾದಳು. ಅಲ್ಲಿಯೆ ಬದಿಗಿದ್ದ ಒಂದು ಲೋಹಚುಂಬಕವನ್ನು ಅದಕ್ಕೆ ಹಚ್ಚಿದಳು. ಲೋಹಚುಂಬಕಕ್ಕೆ ಹತ್ತಿ ಅದು ಮೇಲಕ್ಕೆದ್ದಿದ್ದು ನನಗೆ ಈಗ ನಿಮಗಾಗುತ್ತಿದ್ದಂತೆ ಆಶ್ಚರ್ಯವಾಯಿತು. ಅದೆಂಥ ಕೂದಲೆಳೆಯದು?

"ಓ, ಇದು ಕೂದಲಲ್ಲ. ಕ್ಷಮಿಸಿರಿ, ಇಕೊ ನೋಡಿರಿ! ಲೋಹಚುಂಬಕಕ್ಕೆ ಎದ್ದು ಬರುತ್ತಿದೆ. ವಾಚಿನಲ್ಲಿಯ ಹೇಯರ್‌ಸ್ಪ್ರಿಂಗ್ ಇದು. ಅಡುಗೆ ಮಾಡುವಾಗ ವಾಚುಗಳನ್ನು ಜೋಡಿಸುತ್ತಿದ್ದೆ. ಒಂದು ಹೇಯರಸ್ಪ್ರಿಂಗ್ ಸಿಡಿದು ಸೂಪಿನಲ್ಲಿ (ರಸಪಲ್ಲೆ) ಬಿದ್ದಿರಬಹುದು," ಎಂದೆಳವಳು ನಗುತ್ತ.

"ನೀವೇ ವಾಚುಗಳನ್ನು ಜೋಡಿಸುವಿರಾ?" ಎಂದು ಆಶ್ಚರ್ಯದಿಂದ ಕೇಳಿದೆ.

"ಹೌದು. ಇಲ್ಲಿಯ ಗ್ರಾಮೋದ್ಯೋಗವದು—ಗಡಿಯಾರಗಳ ಬಿಡಿಭಾಗಗಳನ್ನು ತರುವದು, ಅವುಗಳನ್ನು ಜೋಡಿಸುವದು; ಇಲ್ಲಿಯ ಎಲ್ಲ ಹೆಣ್ಣುಮಕ್ಕಳೂ ಅದೇ ಕೆಲಸ ಮಾಡುತ್ತಾರೆ."

"ಎಲ್ಲ ಮಹಿಳೆಯರು ಮಾಡಿದ ಸೂಪಿನಲ್ಲಿ ಇದೇ ರೀತಿ ಕೂದಲುಗಳು ಬರುವುವೆ?" ಎಂದು ಪ್ರಶ್ನಿಸಿದೆ. ಈಗ ಪದ್ಮಕ್ಕನವರು ನೋರೆ ತಗ್ಗಿಸಿದಂತೆ ಅವಳು ಅಲ್ಪಸ್ವಲ್ಪ ನೋರೆ ಕೆಳಗೆ ಹಾಕಿದಳು.

* * * *

ಎಲ್ಲರೂ ಪೊಳ್ಳೆಂದು ನಕ್ಕರು. ಇದೂ ಸಾರೆ ನಗೆಯ ಬಳ್ಳಿ ಹಬ್ಬಿ ಹೂ-ಕಾಯಿ ಬಿಟ್ಟಿತು. ಆದರೆ ತಾಯಿಯ ಮುಖ ಬಾಡಲಿಲ್ಲ. ಬದಲು ಅರಳಿತು.

ಸಂಕಲ್ಪದ ಸಂಕಟ

(ಪುತ್ತೋದಿಲ್ಲೀಚಣಾತ್ಮಕ ಅನುಭವಚಿತ್ರ)

ಶ್ರೀ. ರಂ. ರಾ. ನೆಗಳೂರ ಎಂ. ಎ., ಬಿ. ಟಿ. ಮುಂಬಯಿ

✱

ಮಾನವನ ಮನಸ್ಸಿನದೊಂದು ವಿಚಿತ್ರರೀತಿ. ಅದು ಕರ್ತೃವೂ ಆಗಿರುವುದು; ಸಾಕ್ಷಿಯೂ ಆಗಿರುವುದು. ತನಗೇ ತಿಳಿಯದಂತೆ ಏನೋ ಒಳಸಂಕಲ್ಪ ಮಾಡಿರುವುದು. ಹೊರಸಂಕಲ್ಪದ ಸಿದ್ಧಿಗಾಗಿ ಸಂಕಟಪಡುತ್ತಿರುವುದು.

✱

"ಸಂಕಲ್ಪದಿಂದ ಸಿದ್ಧಿ" ಎಂಬ ಮಾತನ್ನು ಬಲು ಚಿಕ್ಕವನಿದ್ದಾಗಿನಿಂದಲೂ ಕೇಳಿದ್ದೆ. ಆದರೆ ಈಗ ಕೆಲ ದಿನಗಳ ಹಿಂದಿನ ಘಟನೆಗಳ ಅನುಭವದಿಂದ "ಸಂಕಲ್ಪದಿಂದ ಸಂಕಟ" ಎಂದು ಅದನ್ನು ಬದಲಿಸಬೇಕೆಂದು ಎನ್ನಿಸತೊಡಗಿದೆ. ಹಾಗೆ ನೋಡಿದರೆ, ಉಳಿದವರಂತೆ ನಾನು ಎಂದೂ ಸಂಕಲ್ಪಮಾಡಿಯೇನೂ ಕಾರ್ಯಕ್ಕೆ ತೊಡಗಿರುವವನಲ್ಲ. ಮೊದಲೇ ಧಾರ್ಮಿಕ ರೀತಿ-ನೀತಿಗಳಲ್ಲಿ ವಿಶ್ವಾಸ ಕಡಿಮೆ ಸಂಕಲ್ಪಮಾಡುವುದೆಂತು? ಆದರೆ ಎಂತಹನು ಕೂಡ ಸಂಕಲ್ಪಮಾಡುವ ಗೋಜಿಗೆ ಒಮ್ಮೊಮ್ಮೆ ಹೋಗಬಹುದು— ಎಂದು ತೋರುತ್ತದೆ. ಅದರ ಸೆಳೆತ ಅಷ್ಟಿದೆ.

ಒಮ್ಮೆ ಹೀಗಾಯಿತು: ನಾನು ಪೇಟೆಗೆ ಹೊರಟಿದ್ದೆ. ದಾರಿಯಲ್ಲಿ ಒಂದು ದುಡ್ಡು ನನ್ನ ಕಣ್ಣಿಗೆ ಬಿದ್ದಿತು. ಅದನ್ನು ಎತ್ತಿ ತೆಗೆದುಕೊಳ್ಳಬೇಕೋ ಬಾರದೋ? ಎಂಬ ವಿಚಾರಮೂಡಿತು. 'ನನ್ನದಲ್ಲದ ದುಡ್ಡು. ನಾನು ಏತಕ್ಕಾಗಿ ತೆಗೆದುಕೊಳ್ಳಬೇಕು?' ಎಂಬುದು ಮೊದಲನೆಯ ವಿಚಾರ. 'ನನಗಾಗಿ ಅದು ಇರದಿದ್ದರೆ ನನ್ನ ಕಣ್ಣಿಗೇಕೆ ಕಾಣಬೇಕು ಅದು? ಅದು ಅಲ್ಲಿ ಬಿದ್ದು ಎಷ್ಟು ಸಮಯ ಕಳೆದು ಹೋಗಿರಬಹುದೊ! ಅನೇಕ ಹುಡುಗರು ಇದೇ ದಾರಿಯಿಂದ ಹಾದು ಹೋಗಿದ್ದಾರೆ. ಅವರಾರ ಕಣ್ಣಿಗೂ ಕೈಯಿಗೂ ಬೀಳದುದು ನನ್ನ ಕಣ್ಣಿಗೆ ಬಿದ್ದಿದೆಯೆಂದ ಮೇಲೆ ಇದನ್ನು ನಾನು ತೆಗೆದುಕೊಳ್ಳಲೇಬೇಕು. ಇದು ನನ್ನದು, ನನಗೆ ಸಿಕ್ಕಿದೆ!' ಎಂಬ ವಿಚಾರ ಮೂಡುವುದೆ ತಡ; ಟೊಂಕ ಬಗ್ಗಿಸಿ ಬೀದಿಯಲ್ಲಿ ಬಿದ್ದಿದ್ದ ದುಡ್ಡನ್ನು ಎತ್ತಿದೆ. ಅದರ ಮೇಲೆ ನನ್ನದೆಂಬ ಭಾವನೆಯಿಂದ ಕೈಯಾಡಿಸುವಾಗ, ಅದು ತುಸ ಸನೆದು ಹೋದುದರ ಅರಿವು ಬಂದಿತು. ಅದಕ್ಕೆಂದೇ ಅನೇಕರು ಇಲ್ಲಿ ಅದನ್ನು ನೋಡಿದ್ದರೂ ಬಿಟ್ಟುಹೋಗಿರಬಹುದು— ಎಂಬ ಜ್ಞಾನದ ಉದಯವಾಯಿತು. 'ಇನ್ನೇನು ತೆಗೆದುಕೊಂಡಿದ್ದೇನೆ, ಎಂತಹದು ಇದ್ದರೇನು?' ಎಂದು ಸಮಾಧಾನ ಹಚ್ಚಿಕೊಂಡು ಅದನ್ನು ಕಿಸೆಯಲ್ಲಿ ಹಾಕಿದೆ.

ನಾಲ್ಕು ಹೆಜ್ಜೆ ಸಾಗುವಷ್ಟರಲ್ಲಿಯೆ ಒಂದು ಹೊಸ ವಿಚಾರ ಸುಳಿಯಿತು: 'ಈ ದುಡ್ಡನ್ನು ನಾನು ಇಟ್ಟುಕೊಳ್ಳದೆ, ಇದನ್ನು ಯಾರಿಗಾದರೂ ಬಡ ಭಿಕ್ಷುಕರಿಗೆ ಕೊಟ್ಟುಬಿಡಬೇಕು' ಎಂದು. ಮರುಕ್ಷಣಕ್ಕೆ ಮತ್ತೊಂದು ವಿಚಾರ ತಿವಿಯಿತು: 'ಸವಕಳಿ ದುಡ್ಡಿನ ಉಪಯೋಗವಿಲ್ಲೆಂದು ಈ ಉದಾರ ಭಾವ ಬಂದಿರಬಹುದೆ! ಇಸಿದುಕೊಂಡ ಭಿಕ್ಷುಕನು ಸವಕಳಿ ದುಡ್ಡಿಗಾಗಿ ನನ್ನನ್ನು ಶಪಿಸಲಾರನೆ! ಕೊಡುವುದೇ ಆದಲ್ಲಿ ಒಳ್ಳೆಯದಾಗಿರುವಂತಹದನ್ನು ಕೊಡಬೇಕು. ಇಲ್ಲವಾದರೆ ಕೊಡಬಾರದು!' ಅಹುದು, ನಿಜ! ಆದರೆ ಸವಕಳಿ ದುಡ್ಡಿನ ಉಪಯೋಗ ನನಗಂತೂ ಇರಲಿಲ್ಲ. ಬಡಬಗ್ಗರಿಗೆ ಅದರ ಉಪಯೋಗವಿಲ್ಲೆಂಬ ನನ್ನ ಎಣಿಕೆ ತಪ್ಪೆನಿಸಿತು. ಎಂದರೆ ಅವರು ಇಂತಹ ದುಡ್ಡು ಕೊಟ್ಟರೆ, ಯಾರೂ ತಕರಾರು ಮಾಡಲಿಕ್ಕಿಲ್ಲ. ಅವರಿಗಾಗಿ ವ್ಯಾಪಾರಿಗರು ಕನಿಕರ ತೋರಿಸಬಹುದು. ಅಹುದು, ಹಾಗೆ ತೋರಿಸುತ್ತಾರೆ. ಆದಕ್ಕೆ ಇದನ್ನು ಬಡವರಿಗೆ– ಭಿಕ್ಷುಕರಿಗೆ ಕೊಡಬೇಕು ಎಂದು ಗೊತ್ತು ಮಾಡಿಕೊಂಡು, ಇನ್ನೂ ನಾಲ್ಕು ಹೆಜ್ಜೆ ಮುಂದೆ ಸಾಗಿದೆ.

ಅಷ್ಟರಲ್ಲಿಯೆ ಆ ದಾರಿಯ ತುದಿಗೆ ಒಬ್ಬ ಭಿಕ್ಷುಕನೆ ಇದ್ದ. ಆದರೆ ಅವನಿಗೆ ಆ ದುಡ್ಡು ಕೊಡಲು ನನಗೆ ಧೈರ್ಯಸಾಲಲೊಲ್ಲದು. ನಾನು ಕೊಡುವುದನ್ನು ಯಾರಾದರೂ ನೋಡಿದರೆ! 'ಎಂತಹನಿವನು. ಸವಕಳಿ ದುಡ್ಡು ಕೊಟ್ಟು ಆ ದಾನದ ಪೂರ್ಣ ಲಾಭ ಪಡೆಯಬೇಕೆನ್ನುತ್ತಾನಲ್ಲ!' ಎಂದರೆ? ಅವರಿಗೇನು ಗೊತ್ತು ಅದು ಸವಕಳಿ ದುಡ್ಡು ಎಂಬುದು? ಭಿಕ್ಷುಕನಿಗೆ ಗೊತ್ತಾಗುವುದಲ್ಲ! ಅವನು 'ರಾಯರೇ ಮತ್ತೊಂದು ಕೊಡಿ,' ಎಂದು ಕೂಗಿದರೆ! ಕೊಟ್ಟದ್ದನ್ನು ಇಸಿದುಕೊಳ್ಳುವಂತಿಲ್ಲ. ಬೇರೊಂದನ್ನು ಕೊಡದೆ ಬಿಡುವುದು ದೊಡ್ಡಿಸ್ತಿಕೆಯಲ್ಲ. ಏನು ಮಾಡುವುದು? ನಾನೇ ಕೊಡಬೇಕೆಂದರೆ ಇಷ್ಟೆಲ್ಲ ತೊಂದರೆ. ಇನ್ನೊಬ್ಬರಿಂದ—ನನ್ನು ಕಚೇರಿಯ ಕೈಯಾಳಿನಿಂದ—ಕೊಡಿಸಿದರಾಯಿತು, ಎಂದು ನೇರವಾಗಿ ಕಚೇರಿಯ ಕಡೆಗೆ ಸಾಗಿದೆ.

ದಾರಿಯಲ್ಲಿ ಸಿಕ್ಕ ದುಡ್ಡನ್ನು ನಾನು ಇಟ್ಟುಕೊಳ್ಳಬಾರದು ಎಂದು ಸಂಕಲ್ಪ ಮಾಡಿ, ಅಳಿನ ಕೈಗೆ ಕೊಟ್ಟು, ಯಾರಾದರೂ ಭಿಕ್ಷುಕರಿಗೆ ಕೊಡೆಂದು ಹೇಳಿದೆ.

ಸಂಕಲ್ಪಮಾಡಿದ ಕೂಡಲೆ ಪ್ರಾರಂಭವೆ ಆಯಿತು ಪರೀಕ್ಷಾಕಾಲ. ಮುಂದೆ ಮೂರು ನಾಲ್ಕು ದಿನಗಳನಂತರ ನನಗೆ ನಾಲ್ವಾಣೆಯ ಒಂದು ತುಣುಕು ಕಂಡಿತು. ಯಾವ ಬಗೆಯಿಂದಲೂ ಹಿಂತೆಗೆಯದೆ ಅವನ್ನು ತೆಗೆದುಕೊಂಡೆ. ಆದರೆ ಅದು ಕೈಗೆ ಬರುವುದೊಂದೇ ತಡ; ಮನಸ್ಸಿನಲ್ಲಿ ತೊಡಕು, ತಾಕಲಾಟ ಪ್ರಾರಂಭವಾಯಿತು. ಇಡಿ ನಾಲ್ವಾಣೆಯನ್ನು ಒಬ್ಬ ಭಿಕ್ಷುಕನಿಗೆ ಕೊಟ್ಟರೆ, ಜನರು ನನಗೆ ಏನೆಂದಾರು? ನನಗೆ ನಿನಾದರೂ ಎನ್ನುವುದು ಒತ್ತಟ್ಟಿಗಿರಲಿ, ಇಸಿದುಕೊಂಡ ಭಿಕ್ಷುಕನಿಗೆ ಹುಚ್ಚು

ಹಿಡಿದೀತು? ಅಥವಾ ನನಗೆ ಹುಚ್ಚು ಹಿಡಿದಿದೆಯೆಂದು ಅವನು ನಿರ್ಣಯಿಸಬಹುದು. ಹಾಗೆ ಒಮ್ಮೆಲೆ ಈ ನಾಲ್ಕಾಣೆಯನ್ನು ಒಬ್ಬನಿಗೆ ಕೊಡುವುದು ತರವಲ್ಲ—ಎಂದೆನ್ನಿಸಿತು.

ಆದರೆ ಆ ಹಣ ನನ್ನದಲ್ಲವೆಂಬ ಮೇಲೆ ಅದರ ವಿಸಿಯೋಗದ ಬಗ್ಗೆ ವಿಚಾರಮಾಡಲು ನನು ಅಧಿಕಾರ? ಯಾರು ಏನೇ ಅಂದರೂ ನನ್ನದಲ್ಲದ ದುಡ್ಡನ್ನು ನನ್ನ ಹತ್ತಿರ ಇಟ್ಟುಕೊಳ್ಳುವದು ಒಳಿತಲ್ಲವೆಂದೂ ಎನಿಸಿತು. ದಾರಿಯಲ್ಲಿ ಸಿಕ್ಕಿದ್ದರೂ ನಾಲ್ಕಾಣೆಯನ್ನು ಹತ್ತಿರ ಇಟ್ಟುಕೊಂಡು, ಒಂದೊಂದೆ ದುಡ್ಡನ್ನು ಒಬ್ಬೊಬ್ಬ ಭಿಕ್ಷುಕನಿಗೆ ಕೊಡಬೇಕೆಂದು ನಿರ್ಣಯಮಾಡಿದೆ.

ಮುಂಬಯಿಯಲ್ಲೇನು ಭಿಕ್ಷುಕರು ಕಡಿಮೆಯೆ? ನಾಲ್ಕು ಹೆಜ್ಜೆ ನಡೆಯುವ ತೊಂದರೆ ಕೂಡ ತೆಗೆದುಕೊಳ್ಳಬೇಕಾಗಿಲ್ಲ. ನಿಂತಲ್ಲಿಯೆ ಭಿಕ್ಷುಕನ ಅವತಾರವಾಗುವುದು. ನೆನಸಿದವರ ಮನಸಿನಲ್ಲಿಯೆ ಇರುವನಂತೆ ಭಗವಂತ! ಮುಂಬಯಿಯಲ್ಲಿ ಎಲ್ಲಿ ನಿಂತರೂ, ನೆನೆಸದೆ ಇದ್ದರೂ ನುಗ್ಗುಲಲ್ಲಿಯೆ ಭಿಕ್ಷುಕನ ಉದಯವಾಗುವುದು. ನನ್ನ ಅನುಭವವಂತೂ ಹಾಗಿದೆ. ಆದೇನು ನನ್ನ ಮುಖದಲ್ಲಿ ಕಾಣುವುದೋ; ನನ್ನನ್ನು ಕಂಡ ಕೂಡಲೆ ಭಿಕ್ಷುಕ ಬರುವುದುಂಟು. ಅವರಿಗೆ ಯಾರಿಗೂ ಇಲ್ಲದ ಚಾಣಾಕ್ಷ ಬುದ್ಧಿ ಇರಬೇಕೆಂದು ಎನ್ನಿಸುತ್ತದೆ. ಎಂದೆಂದು ನನ್ನನ್ನು ಭಿಕ್ಷುಕ ಕೇಳಿಕಿದ್ದಾರೆಯೊ, ಅಂದೆಂದು ನಾನು ದುಡ್ಡನ್ನೊ, ಎರಡು ದುಡ್ಡನ್ನೋ ಕೊಟ್ಟೇ ಇದ್ದೇನೆ. ಹೀಗಾಗಿ ಭಿಕ್ಷುಕರು ನನ್ನ ಗುರುತು ಇಟ್ಟಿರಬಹುದೆಂದೂ ಒಮ್ಮೆ ಭಾಸವಾಗುತ್ತಿತ್ತು. 'ಭಿಕ್ಷುಕರಾದರೂ ನನ್ನ ಗುರುತು ಇಟ್ಟಿರುವರಲ್ಲ!' ಎಂದ ಸಮಾಧಾನ.

ಈ ಸಮಾಧಾನದ ನಗೆ ಬೀರುವಾಗಲೆ ಬಂದ ಒಬ್ಬ ಭಿಕ್ಷುಕನ ಕೆನೆಗೆ ಕೈ ಹೋಯಿತು. ಆದರೆ ಅಂದು ನಾನು ಕೊಡುತ್ತಿರುವುದು ನಾನು ಗಳಿಸಿದ ದುಡ್ಡಲ್ಲ; ಆದಕ್ಕೇ ಎಂಬೂ ಇಲ್ಲ; ಚಿಕಿತ್ಸೆ ಸುರುವಾಗಿರಬೇಕು. ಅದಕ್ಕಾಗಿ ಆ ಭಿಕ್ಷುಕನ ಮೇಲೆ—ಅಡಿಯಿಂದ ಮುಡಿಯವರೆಗೆ—ಕಣ್ಣಾಡಿಸಿದೆ. 'ಇವನು ಸಾಕಷ್ಟು ಸಶಕ್ತನಿರುವ, ಇವನಿಗೆ ಕೊಡಬಾರದು!' ಎನ್ನಿಸಿತು. ಅದರೊಡನೆ ದನಿ ಗಡುಸಾಗಿ ಬಂದಿತು; 'ಚಾವ್ ಯಹಾಸೇ' ಎಂದೆ



ಶ್ರೀ. ಭಾಗವತ

GE 8109 — ಏರಿತು ಗಗನಕೆ ನಮ್ಮ ಧ್ವಜ / ಬಂತು ಬಂತು ಮಾಗಿ ಭಾಮೆ

GE 8202 — ವಸಂತ ಮುಖ / ಯಾರಿಗೂ ಹೇಳೋಣು ಬ್ಯಾಡಾ

GE 8093 — ಕನ್ನಡದ ಬಾವುಟ / ರಕ್ಷಿಸು ಕರ್ನಾಟಕ ದೇವಿ

ಶ್ರೀ. ಸುಶೀಲಾ ಟೇಂಬೆ

GE 8394 — ಇಪೆ ನಮ್ಮ ದೇವರ ಪೂಜೆ / ಇದು ಸುದಿನ

GE 8092 — ಸೋಹೆ ಮಧು ವಸಂತವಿದುಹಾ / ನಲಿದು ಬಾರೋ ಮುರಲಿ

ಸೌ. ಸೋನೂಬಾಯಿ ಹಾವೇರಿ

GE 8359 — ಸಖಿ ಬಾರೆ ಪೋಗಿ ತಾರೆ / ನಗಿ ಸವಾರಿ ಬಂದಿತು ಸ್ವಾರಿ

ಇವುಗಳಲ್ಲದೆ ಕರ್ನಾಟಕದ ತುಂಬೆಲ್ಲ ಹೆಸರು ಗಳಿಸಿದ ಉಮರಜಿ ಮತ್ತು ಸೋನೂಬಾಯಿ ಇವರ ಕಲಾಪಥಕದವರು ಹಾಡಿದ 'ಅಕ್ಕ ಮಹಾದೇವಿ' ನಾಟಕದಲ್ಲಿಯ ಈಗಾಗಲೇ ಜನಪ್ರಿಯವಾದ ಧ್ವನಿಮುದ್ರಿಕೆಗಳು (GE 8342 ರಿಂದ 8344) ರ ವರೆಗೆ ಇಂದೇ ಕೋಲಂಬಿಯಾದ ಮೇಲೆ ಕೇಳಿರಿ.

ಇದರ ಬಗ್ಗೆ ಬೇಕಾದ ವಿವರಗಳು ನಿಮ್ಮ ಊರಿನ ಗ್ರಾಮೋಫೋನ್ ಅಂಗಡಿಯಲ್ಲಿ ದೊರೆಯುವುವು

ಕು. ಸೀತಾ ಮುಲ್ಕಿ

GE 8339 — ಕ್ಷಣದಾ ಪ್ರಣಯ ಭಾವನಾ / ಮಧು ಮಾಸದಾ ಸುಖನಾದಾ



ಪಾಪ! ಅವನು ಸರಿದು ಹೋದ. ಎಷ್ಟು ಗಟ್ಟಿಗನಾಗಿದ್ದರೂ ಆ ಭಿಕ್ಷುಕವೃತ್ತಿ ಕೆಟ್ಟುದು. ಅದು ಮಾನವನ ಶಕ್ತಿಯನ್ನೇ— ಹೀರುತ್ತದೆ.

ಒಮ್ಮೊಮ್ಮೆ ನಮಗೂ ಹಾಗಾಗುತ್ತದೆ. ನಾವೇನಾದರೂ ಯಾರಲ್ಲಾದರೂ ಹಣವನ್ನಾಗಲಿ, ಮತ್ತಾವುದಾದರೂ ಒಡವೆಯನ್ನಾಗಲಿ ಎರವಲಾಗಿ ತರಲು ಹೋದಾಗ, ಕಾಲಿನ ಶಕ್ತಿ ಉಡುಗಿ ಹೋಗುತ್ತದೆ. ನಾಲಗೆಯು ಮುದುಡಿಕೊಳ್ಳುತ್ತದೆ. ಸಾಮಾಜಿಕ ಜೀವನದಲ್ಲಿ ಎಂತಹ ಉಚ್ಚ ಮಟ್ಟದ ಸ್ಥಾನವನ್ನು ನಾವು ಪಡೆದಿದ್ದರೂ, ಅಂದು ಕಿರಿಯ ಮನುಷ್ಯನ ಹಾಗೆ ಆಗುತ್ತದೆ. ಬೇಡುವಾಗ ಅಷ್ಟು ಆಸಹಾಯತೆಯ ಅರಿವಾಗುವುದು. ಸ್ವಾಭಿಮಾನವನ್ನು ತುಸ ಬದಿಗಿಡಬೇಕಾಗುವುದು. ಭಿಕ್ಷುಕರಾದವರ ಪರಿಸ್ಥಿತಿಯೂ ಹಾಗಾಗಿರುತ್ತದೆ. ಗಳಿಸಿ ಬಾಳು ನಾಗಿಸುವಂತಹವನು ಭಿಕ್ಕೆ ಬೇಡಲು ಏತಕ್ಕೆ ತೊಡಗುತ್ತಾನೆ? ನಾವು ಸಾಲಕೇಳುವಾಗ ಯಾವ ಸಂದರ್ಭ ಬಂದಿರುತ್ತದೆಯೋ ಹಾಗೆ ಪಾಪ, ಭಿಕ್ಷುಕನಿಗೆ ಸಪ್ಪೆಯ ಸ್ಥಿತಿ ಇರುತ್ತದೆ. ಇಷ್ಟೇ, ನಾವು ಸಾಲ ಕೇಳುತ್ತೇವೆ; ಅವನೂ ಕೇಳುತ್ತಾನೆ. ನಾವು ಮರಳಿ ಕೊಡುವ ವಿಚಾರ ನೂಡುತ್ತೇವೆ; ಅವನು ಅದರ ಗೋಜಿಗೆ ಹೋಗುವುದಿಲ್ಲ.

ಹಾಗೆ ಸಹಾನುಭೂತಿಯಿಂದ ಅಂತಃಕರಣ ಅಲುಗಿತೆಂದೇ ಮಗ್ಗುಲಿನಲ್ಲಿ ನಿಂತು ಕೈಯೊಡ್ಡಿದವನ ಕೈಯಲ್ಲಿ ಒಂದಾಣೆಯ ತುಣುಕು ಇಟ್ಟೆ. ಆದರೆ ಹಾಗ್ಗರೊಕ್ಕ ಕೊಟ್ಟುದು ತಪ್ಪಾಯಿತೇನೋ ಎನ್ನಿಸಿತು. ಏಕೆಂದರೆ ಮರುಕ್ಷಣವೆ ಭಿಕ್ಷುಕರ ತಂಡವು ಮುತ್ತಿತ್ತು ನನ್ನನ್ನು. ಒಬ್ಬನನ್ನಾದರೆ ಜಬರಿಸಿಯೇನು. ಒಂದೇ ಏಟಿಗೆ ಹತ್ತಾರು ಮುಖಗಳು ಅಂಗಲಾಚಿ ಅರ್ತಸ್ವರದಿಂದ ಕೈಯೊಡ್ಡಿ ನಿಂತರೆ, ನಮಗೆ ದಿಗ್ಭ್ರಮೆಯಾಗುವುದು. ಇಂತಹ ಪ್ರಸಂಗದಿಂದ ದಾಟಿ ಪಾರಾಗಬೇಕಾದರೆ ಎರಡೇ, ದಾರಿ: ಒಂದು ಹತ್ತಿರವಿದ್ದ ಹಣವನ್ನೆಲ್ಲ ಕೊಟ್ಟು ಅವರ ಸಾಲಿನಲ್ಲಿಯೆ ನಿಲ್ಲುವುದು; ಇಲ್ಲವೆ ಅಪರಾಧಿಯಂತೆ ಮುಖಮುಚ್ಚಿಕೊಂಡು ದೂರ ಓಡಿಹೋಗುವುದು. ನನಗೆ ಅಂದು ಎರಡನೆಯ ಮಾರ್ಗ ಸುಲಭವೆಂದೆನ್ನಿಸಿತು.

ಆದರೆ ಭಗವಂತನನ್ನು ತಪ್ಪಿಸಿ ಕದ್ದು ತಿಂದ ಹಾಗೆ. ಭಗವಂತನನ್ನು ತಪ್ಪಿಸಬಹುದಾದರೂ ಭಿಕ್ಷುಕನನ್ನು ತಪ್ಪಿಸುವುದು ಅಸಾಧ್ಯ. ಅಂದು ಬೇರೆ ನನ್ನ ಸಂಕಲ್ಪ ನನ್ನನ್ನು ಹಿಡಿದು ಎಳೆದು ತಂದು ಭಿಕ್ಷುಕರ ಸನ್ನಿಧಾನದಲ್ಲಿ ಇಡುತ್ತಿತ್ತು. ದಾರಿಯಲ್ಲಿ ಸಿಕ್ಕ ದುಡ್ಡನ್ನು ಭಿಕ್ಷುಕರಿಗೆ ಕೊಡಬೇಕೆಂಬ ಸಂಕಲ್ಪ ಜಪೇಕೆ ಮಾಡಿದೆನೋ ಎನ್ನಿಸಿತು. ತಪ್ಪಾಯಿತೆಂದು ಗಲ್ಲಗಲ್ಲ ಬಡಿದುಕೊಳ್ಳಬೇಕೆನ್ನಿಸಿತು. ಆದರೇನು? ದುರಭಿಮಾನವೊಂದಿದೆಯಲ್ಲ. ಇಂತಹ ಸಣ್ಣ ಮಾತಿಗೂ ನೋಲ ಬೇಕೆ? ಕೈಗೆ ಬಂದುದನ್ನು ಕೈಯೆತ್ತಿ ಕೊಟ್ಟ ಕ್ಷಣಾರ್ಧದಲ್ಲಿ ಅದರ ಯಾತನೆಯಿಂದ ಪಾರಾಗಿ ಬಿಡಬೇಕು—ಎಂದು ನಿರ್ಧಾರಮಾಡಿದೆ.

ಆದರೆ ದುಡ್ಡು ಬಲು ಕೆಟ್ಟುದು. ಎಲ್ಲಿಯೂ ಇಲ್ಲದ ಮೋಹ ತರುವುದು. ನಮ್ಮದೆ ಇರಲಿ, ಹೆರವರಧೆ ಇರಲಿ. ನಮ್ಮ ಪತ್ತಿರ ಇದ್ದಾಗ ಅದರ ಮೇಲೆ ನಾವು ಅಧಿಕಾರ ನಡಿಸಬೇಕೆನ್ನಿಸುವುದು. ಇಷ್ಟೆ ಅಲ್ಲ, ಅದನ್ನು ಬಹಳ ಹೊತ್ತು ಹತ್ತಿರ ಇಟ್ಟುಕೊಳ್ಳಬೇಕೆಂಬ ಆಶೆಯೂ ಬಿಗುವುದು. ಆ ಆಶೆಗೆ ಪೋಷಕವಾಗಿ ಅನೇಕ ಸಿದ್ಧಾಂತಗಳು ಸಹಾಯ ಮಾಡುವುವು. ನಾವು ಮಾಡುತ್ತಿರುವುದು ಸರಿಯೆಂದು ಕವಿಮಾತು ಹೇಳುವುದು. ಇದೆಲ್ಲ ಸರಿಯಲ್ಲವೆಂದು ಮಾತ್ರ ಆ ದಿನದ ಸಂಕಲ್ಪ ಕೂಗಿ ಕೂಗಿ ಜೇಳುತ್ತಿತ್ತು.

ಮತ್ತೊಂದು ಎರಡು ದುಡ್ಡಿನ ತುಣುಕು ಕೈಯಲ್ಲಿ ಹಿಡಿದುಕೊಂಡು, ಪಾತ್ರನಾದ ಭಿಕ್ಷುಕನನ್ನು ಹುಡುಕುತ್ತ ನಾಗಿದೆ. ಯೋಗ್ಯನಾದ ಭಿಕ್ಷುಕನು ಎಲ್ಲಿ ಸಿಗಬೇಕು? ಬರಿಯ ಭಿಕ್ಷುಕನಾಗಿರಬಾರದು ಅವನು. ಅವನಿಗೆ ನನ್ನ ಕೈಯಿಂದ ಈ ಎರಡು ದುಡ್ಡು ಪಡೆಯುವ ಯೋಗ್ಯತೆ ಇರಬೇಕು.

ಹಾಗೆ ಯೋಗ್ಯ ಭಿಕ್ಷುಕನ ಶೋಧ ನಡೆಸುತ್ತಿರುವಾಗ, ಒಂದು ವಿಚಾರ ಒಂದಿತು: ಕನ್ನಡ ಮಾತನಾಡುವ ಭಿಕ್ಷುಕನಿಗೆ ಅದೇಕೆ ಕೊಡಬಾರದು? ಒಂದೇ ಗಳಿಗೆಯಲ್ಲಿ ಎರಡು ಮಹಾಕಾರ್ಯವಾಗುವುವು. ಆದರೆ ನಾಚಿಕೆ ಎನ್ನಿಸತೊಡಗಿತು ಈ ವಿಚಾರದ ಮೂಲಕ. ಅಲ್ಲ, ಕನ್ನಡಿಗನು ಭಿಕ್ಷುಕನಾಗಬೇಕೆ? ಈ ನನ್ನ ಕೈಯಿಂದ ದುಡ್ಡು ಪಡೆಯಲು ನಮ್ಮ ಜನ ಇಷ್ಟು ಹೀನಸ್ಥಿತಿಗೆ ಇಳಿಯಬೇಕೆ? ಛೇ, ಬಾರದು; ನಮ್ಮ ಜನ ಭಿಕ್ಷುಕರಾಗುವುದು ಬೇಡ. ಜನ್ಮಜನ್ಮಾಂತರಕ್ಕೂ ಬೇಡ.

ಈ ಮೋಹ, ಕನ್ನಡದ ಅಭಿಮಾನ ಇವೆಲ್ಲ! ದುಡ್ಡು ಕೈ ಬಿಡಬಾರದೆಂಬುದಕ್ಕಾಗಿ ಜಾಲಹಬ್ಬಿಸುತ್ತಿರಬಹುದೇ ಮನಸ್ಸು?— ಎಂದು ಸಂಶಯ ಬಂದಿತು. ಮರುಕ್ಷಣವೆ ಅದು ಸತ್ಯವೆಂದು ಸಾರಲು ನನ್ನ ಮಿತ್ರರು ಹೇಳಿದ ಕತೆಯೊಂದು ನೆನಪಾಯಿತು:

ಒಬ್ಬನು ಹೀಗೇ ದಾರಿಗುಂಟ ಹೊರಟಿದ್ದ. ಆವನಿಗೆ ಒಂದು ವಿಚಾರ ಬಂದಿತು: 'ಭಗವಂತಾ, ನನಗೆ ಈ ದಾರಿಯಲ್ಲಿ ಒಂದು



ನಮ್ಮ ಗದುಗಿನ ಏಜಂಟರು:

ಶ್ರೀನಿವಾಸ ಸ್ಟೋರ್ಸ್; ಗದಗ

ರೂಪಾಯಿ ಸಿಕ್ಕಿದ್ದಾದರೆ, ಅದರಲ್ಲಿ ಅರ್ಧಪಾಲನ್ನು ನಿನಗೆ ಮುಡುಪು ಕೊಡುವೆ. ದಯೆಪಾಲಿಸಲಾರೆಯಾ?' ಅವನ ಮನದ ವಿಚಾರ ಮೂಡಿ ಮುಗಿಯುವಷ್ಟರಲ್ಲಿ ಭಗವಂತನ ಕೃಪೆಯಾಯಿತು. ದಾರಿ ಬಹಳೇನು ಅವನು ನಡೆಯಬೇಕಾಗಲಿಲ್ಲ. ಅವನಿಗೆ ಒಂದು ಎಂಟಾಣೆಯ ಚೂರು ಕಂಡಿತು. ಸಿಕ್ಕಿತು. ತೆಗೆದುಕೊಂಡ. ಮರುಕ್ಷಣವೆ ಅವನ ಬಾಯಿಂದ ಮಾತು ಹೊರಟಿತು: "ಭಗವಂತನಿಗೆ ಇಷ್ಟೂ ನನ್ನ ಮೇಲೆ ವಿಶ್ವಾಸವಿಲ್ಲ ಕಾಣುತ್ತದೆ. ತನ್ನ ಎಂಟಾಣೆ ತಾನು ಇಟ್ಟುಕೊಂಡೇ ನನಗೆ ನನ್ನ ಎಂಟಾಣೆ ಕೊಟ್ಟಿದ್ದಾನೆ!' ಎನ್ನುತ್ತ ಇಡಿ ಎಂಟಾಣೆ ಬಗಲಿಗೆ ಹಾಕಿಕೊಂಡು ಹೋದ.

ಹಾಗೆ ಸುಮ್ಮನೆ ಅನಾಯಾಸವಾಗಿ ಕೈಗೆ ಬಂದುದನ್ನು ಯಾರಾದರೂ ಬಿಡುವುದುಂಟೆ? ದುಡ್ಡು ಹೇಗೆ ಕೈಬಿಟ್ಟೀತು?

ನನಗೆ ನಿಜವಾಗಿಯೂ ಹೇಸಿಗೆ ಎನ್ನಿಸಿತು. ನಾನು ಕೂಡ ಮೇಲೆ ವಿವರಿಸಿದ ಕತೆಯಲ್ಲಿಯ ಮನುಷ್ಯನಂತೆ ವರ್ತಿಸಬಾರದೆಂದು ನಿಶ್ಚಯಮಾಡಿ, ಎದುರಿಗೆ ಸಿಕ್ಕ ಭಿಕ್ಷುಕನಿಗೆ ಕೈಗೆಬಂದಷ್ಟು ದುಡ್ಡು—ಎರಡು ದುಡ್ಡು— ಆಣೆ ಕೊಟ್ಟು, ಆ ನಾಲ್ಕಾಣೆಯ ಋಣದಿಂದ ಪಾರಾಗಬೇಕೆಂದು ಕೊಡತೊಡಗಿದೆ. ಈ ಭರದಲ್ಲಿ ನನ್ನ ಸ್ವಂತದ ಹಣ ಹೋದರೂ ಚಿಂತೆಯಿಲ್ಲ. ದುಡಿಯದೆ ಗಳಿಸದೆ ಆಯತ್ತವಾಗಿ ಬಂದುದನ್ನು ಇಟ್ಟುಕೊಳ್ಳಬಾರದೆಂಬ ಸಂಕಲ್ಪದ ಸಿದ್ಧಿ ಮಾಡಬೇಕೆಂದು ಹೊರಟೆ. ಮಾಡಿದೆ.

ಆದರೆ ನಾನು ಎಷ್ಟು ಹಣ ಕೊಟ್ಟರೂ ನನ್ನ ಕೈಗೆ ಸಿಕ್ಕ ನಾಲ್ಕಾಣೆ ಮಾತ್ರ ಹಾಗೆಯೆ ನನ್ನ ಕಿಸೆಯಲ್ಲಿ ಉಳಿಯಿತು ಹಾಗೆ ಉಳಿಯುವ ಯೋಗ್ಯತೆಯು ಅದರದು. ಅದು ಖೊಟ್ಟಿ.

ಆಗ ಎಚ್ಚರವಾಯಿತು. ಅರಿವುಂಟಾಯಿತು. ಸಂಕಲ್ಪಮಾಡಿ ಮಹಾಕೀರ್ತಿಪಡೆವ ಸಾಹಸವನಾಡಿ ಸಂಕಟಪಡುವುದು ಮೂರ್ಖತನ. ಮುಡ್ಡಿಸಿಕ್ಕಲಿ ಎಷ್ಟೆಸಿಕ್ಕಲಿ, ಅದನ್ನು ಹೀಗೆಯೆ ವಿನಿಯೋಗಿಸಬೇಕೆಂದು ಕಟ್ಟುಹಾಕಿ ಇನ್ನು ಮೇಲೆ ಸಂಕಟಪಡಬಾರದೆಂದು ಮಾತ್ರ ದೃಢನಿಶ್ಚಯ ಮಾಡಿದೆ. ಆಗ ಮತ್ತೊಂದು ರೀತಿಯಿಂದ ಸಂಕಲ್ಪವನ್ನೆ ಮಾಡುತ್ತಿದ್ದೇನೆಂಬ ಅರಿವು ಮಾತ್ರ ಬರಲಿಲ್ಲ.

The United Karnatak Insurance Co. Ltd.

[Estd. 1929]

H. O. DHARWAR

WANTED

Young men for the post of organisers, Superintendent of Agencies and Branch managers on attractive terms.

For further particulars please apply to :—

DHARWAR
10—10—1949

N. S. KINI,
Director-Secretary.

ಔದ್ಯೋಗಿಕ ಶಿಕ್ಷಣಕ್ರಮ

(ಒಂದು ಪ್ರಾಯೋಗಿಕ ಪ್ರಬಂಧ)

ಶ್ರೀ. ಹಳಪೇಟಿ ವೆಂಕಾಮಣರಾಯರು, ಟಿ. ಸಿ. ಡಿ. ಧಾರವಾಡ

★

" ಕೇವಲ ಜ್ಞಾನ ಇಲ್ಲವೆ ಕೇವಲ ಉದ್ಯೋಗಗಳಲ್ಲಿ ಮುಳುಗಿದವರನ್ನು ದೂರ ಸರಿಸಿ, ಉದ್ಯೋಗ ಹಾಗು ಜ್ಞಾನಗಳ ಸುಂದರ ಸಮನ್ವಯವನ್ನುಂಟುಮಾಡಬಲ್ಲವರ ಕೈಯಲ್ಲಿ ಅಧಿಕಾರ-ಸೂತ್ರಗಳನ್ನು ಕೊಡುವುದರಿಂದ ಮಾತ್ರ ಸಮಾಜವು ಸುಖಿಯಾಗಬಲ್ಲದು; ಕತ್ತಲೆಯು ಕರಗಿ ಪ್ರಕಾಶವು ದಶದಿಕ್ಕುಗಳಲ್ಲಿ ಪಸರಿಸಬಹುದು. "

— ಪ್ಲೇಟೊ

★

ಮನುಷ್ಯನು ದಾಸ್ಯದಿಂದ ಪಾರಾಗಿ ಸ್ವತಂತ್ರನಾಗಬಹುದು; ಆದರೆ ದಾಸ್ಯ ಮನೋವೃತ್ತಿಯಿಂದ ಪಾರಾಗಿ ಸ್ವತಂತ್ರ ಮನುಷ್ಯನಾಗುವುದು ಅಷ್ಟು ಹಗುರಾದದ್ದಲ್ಲ. ಇಂಗ್ಲಿಷನ್ನು ಆದರ ಸ್ಥಾನದಿಂದ ಇಳಿಸಿ, ಶಿಕ್ಷಣಕ್ಕೆ ಸರಿಯಾದ ಸಾಧನವನ್ನು ಒದಗಿಸಬಹುದು; ಆದರೆ ಶಿಕ್ಷಣಕ್ಕಂಟಿಕೊಂಡ ಇಂಗ್ಲಿಷ್ ಮನೋವೃತ್ತಿಯು ಅಳಿಯುವುದು, ಮೇಲೆ ಮೇಲೆ ಕಾಣುವಷ್ಟು ಸುಲಭವಿಲ್ಲ. ಉದಾಹರಣೆಗಾಗಿ ಔದ್ಯೋಗಿಕ ಶಿಕ್ಷಣಕ್ರಮದ ವಿಷಯವಾಗಿ ಮುಂದೆ ಬರುತ್ತಿರುವ ವಿಚಾರಧಾರೆಗಳನ್ನು ನೋಡಬಹುದು. ಶಿಕ್ಷಣದಲ್ಲಿ ಇಂಗ್ಲಿಷಿಗೆ ಸಿಕ್ಕ ಅವಾಸ್ತವ ಮಹತ್ತ್ವವು ಇನ್ನು ಮುಂದೆ ಕಡಿಮೆಯಾಗುವುದು ನಿರ್ಧಾರವೇ ಎಂದಾಗ, — ಅನಿವಾರ್ಯವಾಗಿ ಮೇಳೈಸುವ ದೃಷ್ಟಿಯಿಂದ—ಶಿಕ್ಷಣದಲ್ಲಿ ಕೈಕಸಬುಗಳನ್ನು ಸೇರಿಸುವ ಚರ್ಚೆ ನಡೆದಿದೆ. ಔದ್ಯೋಗಿಕ ಶಿಕ್ಷಣವು ಮುಖ್ಯವಾಗಿ ರಾಷ್ಟ್ರೀಯ ಜೀವನದ ತಳಪಾಯವೆಂಬ ಭಾವನೆಯು ಮೂಡುವುದು ಹೋಗಿ, ಹೇಗಾದರೂ ಮಾಡಿ ಮುತ್ತೆ ನೊದಲಿನ ಕ್ರಮಕ್ಕೇ ಎಳಸುವ ಪ್ರತಿಗಾಮೀ ಮನೋವೃತ್ತಿಯದೇ ಪ್ರಾಬಲ್ಯವಾಗುತ್ತಿದೆ. ' ಇಂಗ್ಲೀಷು ಪರಭಾಷೆಯಾದರೆ ಹೋಗಲಿ, ಅದರ ಸ್ಥಳದಲ್ಲಿ ನಮ್ಮ ರಾಷ್ಟ್ರಭಾಷೆಯನ್ನು ತರಲಿ, ಆದರೆ ಈ ಕೈಕಸಬುಗಳನ್ನು ಜ್ಞಾನಸಾಧನೆಗೆ ಜೋಡಿಸುವುದು ಬೇಡ' —ಎಂಬ ಭಾವನೆ ಅನೇಕರಲ್ಲಿದೆ. ಹೊಸಪರಿಸ್ಥಿತಿಗನುಗುಣವಾಗಿ ಶಿಕ್ಷಣದಲ್ಲಿ ಮೂರ್ಖಾಡಾಗಿ, ಶಿಕ್ಷಣದಲ್ಲಿ ಕೈಕಸಬುಗಳ ಜೋಡಣೆಯ ಯೋಜನೆಗೆ ಶಿಕ್ಷಣ ಸಂಸ್ಥೆಗಳಿಂದ ದೊರಕುತ್ತಿರುವ ಸ್ವಾಗತವೇ ಈ ಮಾತನ್ನು ಎತ್ತಿ ತೋರಿಸುತ್ತದೆ.

ಭಾರತದ ಮೂಲ ಉದ್ಯೋಗವಾಗಬೇಕಾಗಿರುವ ಒಕ್ಕಲುತನವನ್ನು ಕಣ್ಣೆದುರಿಗಿಟ್ಟುಕೊಂಟು, ಗವರ್ನರ್ ಜನರಲ್ ರಾಜಗೋಪಾಲಾಚಾರ್ಯ ಅವರು, ಶಿಕ್ಷಣದ ಸಾರ್ವತ್ರಿಕತೆಯ ವಿಷಯವಾಗಿ ಇತ್ತ ಒಂದು ಸೂಕ್ತ ಸಲಹೆಯು ಅತ್ಯಂತ ಮಹತ್ತ್ವದ್ದಾಗಿದೆ. ಅದರೆ ಆ ಸೂಚನೆಯನ್ನು ಒಪ್ಪುವಲ್ಲಿ ಅಥವಾ ನಿರಾಕರಿಸುವಲ್ಲಿ ಶಿಕ್ಷಣತಜ್ಞರೆನ್ನಿಸಿಕೊಳ್ಳುವವರು, ಜನಸಾಮಾನ್ಯರೂ ಜ್ಞಾನಸಾಧನೆಗೆ ಅರ್ಹರಾಗಬೇಕಾಗಿರುವರೆಂಬುದನ್ನು ಲಕ್ಷಕ್ಕೆ ತೆಗೆದುಕೊಳ್ಳಬೇಕಾಗಿದೆ. ನಮ್ಮ ನಾಡಿನಲ್ಲಿ ಒಕ್ಕಲುತನವು ಒಂದು ಉದ್ಯೋಗವಾಗಿ ಮಾರ್ಪಟ್ಟಿರದೆ, ಕೇವಲ ಉಪಜೀವನದ ಸಾಧನ ಮಾತ್ರ ಆಗಿದೆ—ಎಂಬುದು ಗಮನಿಸಶಕ್ಯ ವಿಷಯವಾಗಿದೆ. ಒಕ್ಕಲಿಗನನ್ನು ಇದ್ದ ಸ್ಥಿತಿಯಲ್ಲಿಯೇ ಇಟ್ಟು, ಅವನಿಗೂ— ಉಪಕಾರವೆನ್ನುವಂತೆ — ಜ್ಞಾನಸಾಧನೆಯ ಲಾಭ ಮಾಡಿಕೊಡುವಂತೆ, ವಾರದಲ್ಲಿ ಕೆಲದಿನ ಶಿಕ್ಷಣ, ಕೆಲದಿನ ಅವನ ಅನುವಂಶಿಕ ಉದ್ಯೋಗಕ್ಕನುವು—ಹೀಗೆ ಒಕ್ಕಲಿಗನ ಅಥವಾ ಕೈಕಸಬುದಾರನ ಶಿಕ್ಷಣವಿರಲಿ. ಈ ರೀತಿಯಲ್ಲಿ ಅವರ ಸೂಚನೆಯನ್ನು ಮನ್ನಿಸುವುದಾದರೆ, ಮೇಲೆ ಉದ್ಧರಿಸಿದ ಪ್ಲೇಟೋನ ಉಕ್ತಿಯನ್ನು ನಾವು ನೆನೆಯಬೇಕು. ಸಮಾಜದಲ್ಲಿ ರೂಢವಾಗಿರುವ ಅನ್ಯಾಯ, ಅವ್ಯವಸ್ಥೆಗಳನ್ನು ಹಾಗೇ ಇಟ್ಟು, ರಾಜ್ಯಯಂತ್ರವನ್ನು ಮಾತ್ರ ಲೋಕಸತ್ತಾತ್ಮಕವನ್ನಾಗಿ ಮಾಡುವುದರಿಂದ, ಲೋಕಸತ್ತಾತ್ಮಕ ರಾಷ್ಟ್ರಗಳು ನಿರ್ಮಾಣವಾಗುತ್ತಿರುವುದಿಲ್ಲ; ಅದರಂತೆಯೇ ಯಾವುದೊಂದು ಘನವಾದ ಉದ್ದೇಶವನ್ನಿಟ್ಟುಕೊಂಡು ಮಾಡಿದ ಸೂಚನೆಯನ್ನು ಅದರ ಮೂಲ ಉದ್ದೇಶವನ್ನೇ ಮರೆಯಿಸುವ ಹಾಗೆ ಸ್ವೀಕರಿಸುವುದರಿಂದ, ಶುಭಫಲದ ಆಶೆ ಇರಲಾರದು. ಅಂಥ ಶಿಕ್ಷಣದಿಂದ ನಮ್ಮ ನಾಡಿನಲ್ಲಿ ಗಾಂಧೀ-ನೆಹರೂಗಳಂಥವರು ಹುಟ್ಟಿಬರಲಾರರು.

ಮಹಾತ್ಮಾ ಗಾಂಧಿಯವರಿಂದ ರೂಪುಗೊಂಡ ವರ್ಧಾಯೋಜನೆಯಂತೆ ವಿಚಾರಿಸುವುದಾದರೆ, ಔದ್ಯೋಗಿಕ ಶಿಕ್ಷಣಕ್ರಮ ಎಂಬುದಾಗಿ ಬೇರೆ ವಿಚಾರಿಸುವ ಅಗತ್ಯವೇ ತೋರಲಿಕ್ಕಿಲ್ಲ. ಆದರೆ ನೂರಾರು ವರುಷಗಳಿಂದ ಸಾಹಿತ್ಯಪ್ರಧಾನ— ಹೆಚ್ಚೇನು ಸಾಹಿತ್ಯಪರಾಯಣ—ವಾದ ಶಿಕ್ಷಣಕ್ರಮದ ಚೌಕಟ್ಟಿನಲ್ಲಿ ಸಿಕ್ಕಿ

ಸ್ವಸ್ತಿಕ ಪ್ರಿಂಟಿಂಗ್ ಪ್ರೆಸ್
ಹುಬ್ಬಳ್ಳಿ.

ಕಮರ್ಶಿಯಲ್ ಆರ್ಟ್ ಪ್ರಿಂಟರ್ಸ್ ಮತ್ತು ಬೈಂಡರ್ಸ್

ಸುಶಿಕ್ಷಿತ ಪದವೀಧರರ ಮೇಲ್ವಿಚಾರಣೆಯಲ್ಲಿ ಹೊಸತಾಗಿಯೆ ಪ್ರಾರಂಭವಾಗಿರುವ ಈ ಸುವ್ಯವಸ್ಥಿತ ಮುದ್ರಣಾಲಯದಲ್ಲಿ, ಸುಂದರವಾಗಿ ಮುದ್ರಣ ಮತ್ತು ಬೈಂಡಿಂಗ್ ಮಾಡಿಕೊಡಲಾಗುವುದು.

ಮಿತವಾದ ದರಗಳು!
ಸಮಯಕ್ಕೆ ಸರಿಯಾಗಿ ಕೆಲಸಗಳು!

ಪುಸ್ತಕ ಮುದ್ರಣ, ವ್ಯವಹಾರಸ್ಥರಿಗೆ ಮತ್ತು ವಕೀಲರಿಗೆ ಬೇಕಾಗುವ ಎಲ್ಲಬಗೆಯ ಮುದ್ರಣ. ಇಂಗ್ಲಿಷ್, ಕನ್ನಡ, ದೇವನಾಗರಿಗಳಲ್ಲಿ ಮನಸ್ಸಿಗೊಪ್ಪುವ ವಿವಿಧ ಟೈಪುಗಳು!
ಒಮ್ಮೆ ಬಂದು ಅನುಭವ ಪಡೆಯಿರಿ!

ಬಿದ್ದು 'ಅದೇ ನೈಸರ್ಗಿಕವಾದ ಹಾಗೂ ತ್ರಿಕಾಲಾಬಾಧಿತವಾದ ವ್ಯವಸ್ಥೆ' ಎಂಬ ಭಾವನೆಗೆ ಬಲಿಬಿದ್ದ ಕಾರಣದಿಂದಾಗಿ ಜ್ಞಾನಸಾಧನೆಗೆ ಸಾಹಿತ್ಯವೆ ಆಧಾರವಾದಂತೆ, ಉದ್ಯೋಗದ ಶಿಕ್ಷಣಕ್ಕೂ ಸಾಹಿತ್ಯವೇ ಮುಖ್ಯವಾಗಲೆಂಬ ಕಲ್ಪನೆ ಅನೇಕ ಪರಂಪರಾಪ್ರೀಯ ಶಿಕ್ಷಣತಜ್ಞರಲ್ಲಿದ್ದಂತಿದೆ. ಅಂತೆಯೇ ಶಿಕ್ಷಣಕ್ಕೆ ಯಾವುದೊಂದು ಉದ್ಯೋಗವು ಸಾಧನವಾಗದೆ, ಸಾಹಿತ್ಯದ ಶಿಕ್ಷಣದಲ್ಲಿದ್ದ ಇನ್ನುಳಿದ ಅನೇಕ ವಿಷಯಗಳಂತೆ ಯಾವುದೊಂದು ಉದ್ಯೋಗ ಅಥವಾ ಕೈಕಸಬು-ಕಲೆಗಳೂ ಒಂದೊಂದು ವಿಷಯಗಳಾಗಲೆಂಬ ಪ್ರತಿಪಾದನೆ ಬೆಳಕಿಗೆ ಬರುತ್ತಿದೆ.

ಸಾಹಿತ್ಯವು ಶಿಕ್ಷಣದ ಒಂದು ಸಾಧನ—ಬಹಳ ಉಪಯುಕ್ತ ಸಾಧನ; ಆದರೆ ಅದೇ ಶಿಕ್ಷಣದ ಸಾಧ್ಯವಲ್ಲವೆಂಬುದನ್ನು ಇಂದಾದರೂ ಗುರುತಿಸಬೇಕಾದದ್ದು ಅಗತ್ಯವಾದ್ದಾಗಿದೆ. ಶಿಕ್ಷಣವು ಜೀವನಕ್ಕೆ ಸಂಬಂಧಿಸಿದ ವಿಷಯ. ಉದಿತೋದಿತ ಜೀವನೋನ್ಮುಖ ಶಿಕ್ಷಣಕ್ಕೆ, ಜೀವನವಿಮುಖ ಸಾಹಿತ್ಯವು ಸಾಧನವಾದರೆ—ಹಾಗಾಗಿದೆ ಎಂತಲೇ ಶಿಕ್ಷಣ ವಿಫಲವಾಗಿದೆ ಎಂಬುದನ್ನೆಲ್ಲರೂ ಒಪ್ಪುತ್ತಿದ್ದಾರೆ—ಆ ಮೇಲೂ ಅದೇ ಸಾಧನವನ್ನೇ ಜ್ಞಾನಾರ್ಜನೆಯು ಸಾಧ್ಯ, ಅರ್ಥಾರ್ಜನೆಯ ಸಾಧನವನ್ನಾಗಿ ಮಾಡಿದರೆ, ಬಾಧಿಸುವುದಾದ ಫಲಕ್ಕೆ ಪ್ರಯೋಗವೇ ಬೇಡ. ನಯೀತಾಲೀಮಿನ ಕ್ಷೇತ್ರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನತೆಯನ್ನು ಪೋಷಿಸಬಲ್ಲ, ಜೀವನದ ವಿವಿಧ ಅಂಗಗಳಿಗೆ ನಿಕಟವರ್ತಿಗಳಾದ ವೃತ್ತಿ ಅಥವಾ ಕಸಬುಗಳು ಶಿಕ್ಷಣದ ಮಾಧ್ಯಮವಾಗಬೇಕೇ ವಿನಾ ಸಾಹಿತ್ಯವಲ್ಲ ಎಂಬ ಮತವಿದೆ. 'ಜ್ಞಾನಸಾಧನೆಗಿದ್ದಂತೆ, ಅರ್ಥಸಾಧನೆಗೂ ಅದಕ್ಕನುಗುಣವಾದ ಸಾಹಿತ್ಯನಿರ್ಮಿಸಿದರೆ ಸಾಕು' ಎಂಬ ತಜ್ಞತೆಯ ಹೆಸರಿನಲ್ಲಿ ಮೆರೆವ ಅರ್ಥಬೆಂದ ಮತವು, ಮೂಲಶಿಕ್ಷಣದ ಪಾಸಂಗಕ್ಕೆ ಹತ್ತಲಾರದು. ಪರಿಸ್ಥಿತಿ ಹೀಗಿದ್ದರೂ, ಜೀರ್ಣ-ಪರಂಪರೆಯು ಅನ್ಯದೇಶಗಳ ಉದಾಹರಣೆ ತೋರಿಸಿಯಾದರೂ ಬದುಕಬಯಸುತ್ತಿದೆ. ನಿಚ್ಚಳ ತಿಳಿವಳಿಕೆಗಾಗಿ, ಅದನ್ನು ಕೂಡ ತುಸು ಹಿಂಜಿ ನೋಡಬಹುದು:

"ಯುರೋಪದೊಳಗಿನ ಲೋಕಸತ್ತಾತ್ಮಕ ರಾಷ್ಟ್ರಗಳ ಶಿಕ್ಷಣ ಸಂಸ್ಥೆಗಳೂ ಕೂಡ ಮಧ್ಯಯುಗದ ಸಂಸ್ಕೃತಿಯ ಪಾಯದ ಮೇಲೆ ಅನೇಕ ವರ್ಷಗಳ ವರೆಗೆ ನಿಂತಿದ್ದುವು; ಅವು ಇಂದು ಅತ್ಯಾಧುನಿಕ ಭಂಡವಲುವಾದೀ ಸಂಸ್ಕೃತಿಯ ಬೆಂಬಲಕ್ಕೆ ನಿಂತಿವೆ. ಇಂಗ್ಲಂಡದ ಧನಿಕವರ್ಗದ ಖಾಸಗೀ ಶಿಕ್ಷಣಸಂಸ್ಥೆಗಳು ನಿರ್ಧನರ ಬಗ್ಗೆ ಅನಾದರವನ್ನೂ ಕಷ್ಟಜೀವನ ಮತ್ತು ಸುಸಂಸ್ಕೃತತನ ಕೂಡಿರಲಿಕ್ಕೆ ಸಾಧ್ಯವೇ ಇಲ್ಲ ಎಂಬ ಭಾವನೆಯನ್ನೂ ಬೀರುವ ಕೇಂದ್ರಗಳಾಗಿವೆ. ಬಡವರಿಗಾಗಿ ಸರಕಾರೀ ಶಾಲೆಗಳಿರುತ್ತವೆ; ಮಧ್ಯಮವರ್ಗದವರಿಗಾಗಿ ಬೇರೆ ಶಾಲೆಗಳು. ಬಡ ಹುಡುಗರ ಕೂಡ ಬೆರೆಯುವ ಮನಸ್ಸಿಲ್ಲ. ಸಿರಿವಂತ ಹುಡುಗರ ಶಿಕ್ಷಣ ಸಂಸ್ಥೆಗೆ ಹೋಗುವುದು ಸಾಧ್ಯವಿಲ್ಲ. ಇಂಥವರ ಸಲುವಾಗಿ ಮತ್ತೊಂದು ತರದ ಶಾಲೆಗಳು. ಹೀಗೆ 'ಬೇರೆ ಬೇರೆ ವರ್ಗದ ಹುಡುಗರು ಬೇರೆ ಬೇರೆ ಶಾಲೆಗಳಿಗೆ' ಎಂಬ ವಿಷಮತೆಯು ತಾನೇ ತಾನಾಗಿದೆ ಅಲ್ಲ. ಆದರಲ್ಲಿಯೇ ವೈಶಿಷ್ಟ್ಯವೆಂದರೆ ಫ್ರಾನ್ಸ್‌ನಲ್ಲಿ. ಅಲ್ಲಿ ಎಲ್ಲ ವರ್ಗದ ಹುಡುಗರೂ ಒಂದೇ ಬಗೆಯ ಶಾಲೆಗಳಿಗೆ ಹೋಗುತ್ತಿದ್ದರೂ, ಕೇವಲ ಬೌದ್ಧಿಕಶ್ರಮಕ್ಕೆ ಹೆಚ್ಚು ಮಹತ್ವ ಕೊಟ್ಟು ಶಾರೀರಿಕಶ್ರಮದ ಕೆಲಸವನ್ನು ಕೀಳೆಂದು ತಿಳಿಯಲಾಗುತ್ತಿದೆ." ಮುಂತಾಗಿ ತಜ್ಞರ ಮತವಿದೆ.

ಎಲ್ಲರಿಗೂ ಒಂದೇ ಬಗೆಯ ಶಿಕ್ಷಣ, ಅಥವಾ ಎಲ್ಲ ಬಗೆಯ ಶಿಕ್ಷಣವೂ ಒಂದೇ ವರ್ಗದವರಿಗೆ—ಎಂಬ ಎರಡು ಕ್ರಮಗಳು ಅಸ್ವಭಾವ್ಯವಾದುವುಗಳೇ ಎಂಬುದು ಅನುಭವವಾಗಿದೆ. ಆದರೆ ಎಲ್ಲರಿಗೂ ಎಲ್ಲ ಬಗೆಯ ಶಿಕ್ಷಣ ಎನ್ನುವುದಾದರೆ ಆಕ್ಷೇಪಗಳ ಸುರಿಮಳೆಯೇ ಆಗಬಹುದಾಗಿದೆ. ಆದರೆ ಅದರಲ್ಲಿ ಹುರುಳಿಲ್ಲ. 'ಬಡಿಗತನವನ್ನು ಎಲ್ಲರೂ ಕಲಿಯಬೇಕೆಂದರೆ, ಎಲ್ಲರೂ ಬಡಿಗರೇ ಆಗಬೇಕಾಯಿತಲ್ಲವೆ?' ಎಂಬ ಆಕ್ಷೇಪವನ್ನೇ ತೆಗೆದುಕೊಂಡರೆ 'ಛಂದಸ್ಸು, ವ್ಯಾಕರಣಗಳನ್ನು ಎಲ್ಲರೂ ಕಲಿಯಬೇಕೆಂದರೆ, ಎಲ್ಲರೂ ವಾಣಿನಿಯ ಅವತಾರವೇ ಆಗಬೇಕಾಯಿತಲ್ಲ!' ಎಂದು ಕೇಳಬಹುದು. ಒಂದು ವೇಳೆ ಉದ್ದೇಶವನ್ನು ಬೇರೆಯಾಗಿ ಇಟ್ಟುಕೊಂಡು, ಬಡಿಗತನವನ್ನೂ ಕಲಿಯಲಿ, ವ್ಯಾಕರಣವನ್ನೂ ಕಲಿಯಲಿ ಎಂದು—ಇಂದಿನಂತೆ ಅರ್ಥಮನಸ್ಸಿನಿಂದ—ಒಪ್ಪಂದಕ್ಕೆ ಬರಬಹುದು. ಆದರೆ ಇಲ್ಲಿ ಒಂದು ಮೂಲ ಮಾತನ್ನೆ ಮರೆಯಿಸುವ ಸಂದರ್ಭವಿದೆ. ಎರಡೂ ವಿಷಯಗಳಿಗೆ 'ಸಾಹಿತ್ಯವೇ

ಸಾಧನ' ಎಂದು ಒಬ್ಬರಿಂದರೆ, 'ಉದ್ಯೋಗವೇ ಮೂಲ' ಎಂದು ಮೂಲ ಶಿಕ್ಷಣಯೋಜಕರ ಹಟವಿದೆ. ಇದೇ ಇಂದು ನಮ್ಮ ಶಿಕ್ಷಣದ ಸಮಸ್ಯೆಯ ತಿರುಗಣಿಯ ಮಡುವಾಗಿದೆ. ಶಿಕ್ಷಣಕ್ಕೆ ಯಾವುದೊಂದು ಉದ್ಯೋಗವು ಮಾಧ್ಯಮವಾಗಬಲ್ಲದೆಂಬುದಕ್ಕೆ ಪರಂಪರೆಯ ಶಿಕ್ಷಣತಜ್ಞರಲ್ಲಿ ಬರಿಯ ಆಸ್ಥೆ ಇದ್ದರೆ ಹೇಗಾದರೂ ಮಾಡಬಹುದಿತ್ತು; ನಾಸ್ತಿಕತೆಯೂ ಬೆಳೆದು ಬಂದಿದೆ.

ಈ ಮಧ್ಯದಲ್ಲಿ ಆನುವಂಶಿಕ ಕಸಬುದಾರರ ಹಣೆಯಬರಹವೂ ಒಂದು ಬಂಡೆಗಲ್ಲಾಗಿದೆ. ಬಡಿಗನ ಮಗನು ಬಡಿಗನೇ ಆಗಬಯಸದ್ದೊಂದು ಕಡೆಗೆ; ಇಂದಿನ ಬಡಿಗತನವು ಆನುವಂಶಿಕ ಬಡಿಗತನವಾಗುಳಿಯದ್ದಿನ್ನೊಂದು ಕಡೆಗೆ. ಹೀಗೆ ಪ್ರತಿಯೊಂದು ಉದ್ಯೋಗಗಳು ಇಕ್ಕೆಲಗಳಲ್ಲಿ ಸಿಕ್ಕು, ಇಂದಿನ ಶಿಕ್ಷಣದಲ್ಲಿಯೇ ಉದ್ಯೋಗಗಳನ್ನು ಜೋಡಿಸುವಲ್ಲಾಗಲೀ, ಉದ್ಯೋಗಗಳನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವಲ್ಲಾಗಲೀ, ನಿಚ್ಚಳವಾದ ಮಾರ್ಗದರ್ಶನ ಇಲ್ಲದಾಗಿದೆ. ಅಭ್ಯಾಸದ ದೃಷ್ಟಿಯಿಂದ ಇದರ ಪ್ರಯೋಗಕ್ಕೆಂದು ಧಾರವಾಡದ ನಾಲ್ಕು ಬೇರೆ ಬೇರೆ ಜನವಸತಿಗಳಲ್ಲಿರುವ ಹೈಸ್ಕೂಲುಗಳ (೮೦೪) ಎಂಟುನೂರಾ ಎಂಟು ವಿದ್ಯಾರ್ಥಿ—ವಿದ್ಯಾರ್ಥಿನಿಯರಿಂದ, ಉದ್ಯಮಶಿಕ್ಷಣದ ಆವಶ್ಯಕ ಮಾಹಿತಿಯನ್ನು ಸಂಗ್ರಹಿಸಲಾಯಿತು.* ತಮಗಿಷ್ಟವಿದ್ದ ಉದ್ಯಮವನ್ನು ಆರಿಸುವಂತೆ ಹೇಳಿ (೧) ನೂಲುವುದು ನೇಯುವುದು (೨) ಬಡಿಗತನ (೩) ಬುಕ್ ಬೈಂಡಿಂಗ್ (೪) ಮುದ್ರಣ (೫) ಹೊಲಿಗೆ (೬) ಕಟ್ಟಿಗೆ-ಕೋಡುಗಳಿಂದ ಗುಂಡಿ, ಹಣಿಗೆಗಳನ್ನು ಮಾಡುವುದು—ಹೀಗೆ ಆರು ಕೈಗಾರಿಕೆಗಳನ್ನು ಕೊಡಲಾಗಿತ್ತು. ಇದರಲ್ಲಿ ಕೆಲವರಿಗೆ ವಿಚಾರಿಸಲು ವೇಳೆ ಕೊಟ್ಟು, ಕೆಲವರಿಗೆ ಹಿರಿಯರ ಹಾಗೂ ಶಿಕ್ಷಕರ ಸಹಾಯ ಪಡೆಯಲು, ಇನ್ನು ಕೆಲವರಿಗೆ ಆಗಿಂದಾಗ ತಿಳಿಸಲು ಕೇಳಿಕೊಳ್ಳಲಾಗಿತ್ತು. ಅವರೆಲ್ಲರಲ್ಲಿ ೧೯೦ ಹೊಲಿಗೆ, ೧೮೫ ಮುದ್ರಣ, ೧೫೨ ಗುಂಡಿ—ಹಣಿಗೆ ಮಾಡುವುದು, ೧೨೪ ನೂಲುವುದು ನೇಯುವುದು. ೯೮ ಬುಕ್ ಬೈಂಡಿಂಗ್. ೭೭ ಬಡಿಗತನ—ಹೀಗೆ ಆರಿಸಿದ್ದಾರೆ. ಇವೆಲ್ಲ ಉದ್ಯಮಗಳನ್ನು ಆನುವಂಶಿಕವಾಗಿ ಮಾಡುವವರ ಮಕ್ಕಳಲ್ಲಿ ಐದು ಜನರು ಮಾತ್ರ ಮನೆತನದ ಉದ್ಯೋಗವನ್ನಾರಿಸಿದ್ದಾರೆ. ಅದರಲ್ಲಿಯೂ ಆಯಾ ಉದ್ಯಮಗಳನ್ನು ಜೀವನದ ಉದ್ಯಮಗಳನ್ನಾಗಿ ಆರಿಸಿದವರು ಇಬ್ಬರೇ. ವಿದ್ಯಾರ್ಥಿನಿಯರೆಲ್ಲ ಹೊಲಿಗೆ, ನೂಲುವುದನ್ನಾರಿಸಿದ್ದಾರೆ. ಏಕೆ ಈ ವಿಷಯ ಆರಿಸುತ್ತೀರೆಂದು ಕೇಳಿದಾಗ 'ಶಾಲೆಯಲ್ಲಿ ಕಲಿಸುತ್ತಾರಂತೆ, ಅದಕ್ಕೆ' ಎಂದುತ್ತರವಿತ್ತವರೇ ಬಹಳ. ಒಬ್ಬನಂತೂ "ಬಡಿಗತನ, ಕಮ್ಮಾರಿಕೆ ಮಾಡಲೇ ಬೇಕಾದರೆ, ಹೈಸ್ಕೂಲಿಗೇಕೆ ಬರಬೇಕು?" ಎಂದು ಗೊಣಗುಟ್ಟಿದ. ಇದರ ಮೇಲಿಂದ ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಸಹಜವಾಗಿ ಅರ್ಥಮಾಡಿಕೊಳ್ಳಬಹುದು. ಬಡವರಲ್ಲಿ ಕೂಡಲಾರರು. ಸಿರಿವಂತರಲ್ಲಿ ಸೇರುವ ಯೋಗ್ಯತೆ ಇಲ್ಲ. ಇಂತಹರ ಶಾಲೆಗಳಾಗಿ ನಮ್ಮ ಹೈಸ್ಕೂಲುಗಳು ಮಾರ್ಪಾಟಾಗಲಿವೆ—ಎಂದು ತೋರುತ್ತದೆ.

ದುರ್ದೈವದಿಂದ ನಮ್ಮಲ್ಲಿ ಗ್ರಾಮೋದ್ಯೋಗಗಳಾಗಲಿ, ಕುಲಕಸಬುಗಳಾಗಲಿ, ಉಪಜೀವನದ ಸಾಧನಗಳಾಗಿವೆಯೇ ಹೊರತು ಅವುಗಳನ್ನು ಕೈಕೊಂಡವನ ಜೀವನವನ್ನು ಸುಖಸಮೃದ್ಧಿಯುಳ್ಳದ್ದನ್ನಾಗಿ ಮಾಡಲಾರವಾಗಿವೆ. ಮೊದಲನೆಯದಾಗಿ ಆಯಾ ಕಸಬುಗಳನ್ನು ಸುಧಾರಿಸಿ, ಅಕ್ಷರ ಶಿಕ್ಷಣ ಪಡೆದವನನ್ನಾಕರ್ಷಿಸುವಂತೆ ಮಾಡಬೇಕು. ಅನಂತರ ನಾಡಿನಲ್ಲಿ ಉದ್ಯಮಶೀಲ ಮನೋವೃತ್ತಿ ಮೂಡುವಂತೆ ಅವುಗಳ ಶಿಕ್ಷಣ ಕ್ರಮವನ್ನು ಅಥವಾ ಶಿಕ್ಷಣಕ್ರಮದಲ್ಲಿ ಅವುಗಳ ಸ್ಥಾನವನ್ನು ನಿರ್ಣಯಿಸಬೇಕು. ನಾಡಿನ ನಾಳಿನ ನಾಯಕರಾದ ಇಂದಿನ ವಿದ್ಯಾರ್ಥಿಗಳಲ್ಲಿ, ಈ ಚಿಕ್ಕ ಕೈಗಾರಿಕೆಗಳ ಆಕರ್ಷಣೆಯಿಂದ ಉದ್ಯಮಶೀಲ ಮನೋವೃತ್ತಿ ಕೈಗೂಡಿದಾಗ, ದೊಡ್ಡ ದೊಡ್ಡ ರಾಷ್ಟ್ರಪೋಷಕ ಉದ್ಯಮಗಳಲ್ಲಿ ತಜ್ಞತೆ ಪಡೆಯಲನುಕೂಲವಾಗಬಹುದು.

ಕುಶಲಕಲೆಗಳ ಶಿಕ್ಷಣದ ವಿಷಯವಾಗಿಯೂ, ಮೇಲಿನ ಮಾತುಗಳನ್ನೇ ಅನ್ವಯಿಸಬಹುದು. ಕುಶಲ ಕಲೆಯನ್ನಾಗಲೀ, ಕೈಗಾರಿಕೆಯನ್ನಾಗಲೀ ಅದು ಈಗಿದ್ದಂತೆ ಉಳಿಯುತ್ತದೆಂಬಂತೆ ಕಲಿಸದೆ, ಉಪಜೀವನದೊಂದಿಗೆ ಜೀವನಶಕ್ತಿಯನ್ನು ಪ್ರಫುಲ್ಲಿತವಾಗಿಡಬಲ್ಲದೆಂಬ ನಂಬಿಕೆ ವಿದ್ಯಾರ್ಥಿಯಲ್ಲಿ ಬರುವಂತೆ ಕಲಿಸಬೇಕು. ಆಯಾ ವಿದ್ಯಾರ್ಥಿಯ ಮನದೊಲವನ್ನನುಸರಿಸಿ, ಅವನ ಸಂಘಟನಾ ಶಕ್ತಿ, ಪ್ರತಿಭಾಶಕ್ತಿ, ವಾಕ್‌ಶಕ್ತಿಗಳಿಗೆ ವಿಶೇಷ ಗಮನವಿಟ್ಟುರಬೇಕು. ಒಟ್ಟಾರೆ ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವ ಪ್ರಕಟನೆಗೆ ಪೂರ್ಣ ಅವಕಾಶವು ದೊರೆವಂತಹ ವಾತಾವರಣ ಶಿಕ್ಷಣದಲ್ಲಿ ಬರಬೇಕಾಗಿದೆ. ಯಾಕೆಂದರೆ ನಾಳಿನ ನಾಡಿನಲ್ಲಿ ಪರೋಪಜೀವಿಗಳಲ್ಲಿ ಜೀವ ಹಿಡಿದುಕೊಂಡಿರಲು ಬಾರದಂತಹ ಸಮಾಜದ ಸರ್ವೋದಯದ ಶುಭಚಿಹ್ನವಾಗಿ ನಮ್ಮ ಔದ್ಯೋಗಿಕ ಶಿಕ್ಷಣಕ್ರಮ ರೂಪುಗೊಳ್ಳಬೇಕಾಗಿದೆ. ಹಾಗಾದಾಗಲೇ ಪ್ಲೇಟೊ ಹೇಳಿದಂತೆ, ಕತ್ತಲೆಯು ಕರಗಿ ಪ್ರಕಾಶವು ದಶದಿಕ್ಕುಗಳಲ್ಲಿ ಪಸರಿಸುವುದು.

* ಧಾರವಾಡದ ಕೆ. ಇ. ಬೋರ್ಡ್ ಕರ್ನಾಟಕ ಹೈಸ್ಕೂಲಿನ ಪರವಾಗಿ ಈ ಪ್ರಯೋಗವನ್ನು ನಡೆಯಿಸಿತು. —ಲೇ.



ಪದ್ಮಾವತೀ ಪರಿಣಯ

(ಜನಪದ ಸಾಹಿತ್ಯ)

★

ಸಂಗ್ರಾಹಕರು: ಶೀ. ಶಾಂತವೀರ, ನಿಡಸೋಸಿ

೧

ಪದ್ಮರಾಜನ ಮಗಳು ಪದ್ಮಾವತಿ ಖರೆ ಚೆಲ್ವಿ
ನೂರೆಂಟು ಕಳೆಗಳ ಸುಕ್ಕುತ ।
ಚೆಲ್ವ-ಹವಳ ತುಟಿಯ ಬಣ್ಣ ಹೊಳೆವುತ ॥
ವಾರಿಗಿ ಗೆಳತೆರ ಕೂಡಿ ಮಾತಾಡುತ
ತೋಟಕ ಹೊಂಟಾರ ನಗನಗತ·
ಕೃಷ್ಣ-ಕಂಡಾನು, ಅವರನ್ನ ದೂರಿರತ.

೨

ನೀಲಗುದರಿನೇರಿ ಥೈ ಥೈ ಕುಣಿಸುತ
ಹಿಂದ್ಹಿಂದ ಬರತಾನ ಓಡಿಸುತಾ
ಅವರ್ನ-ಸುತ್ತಾಕಿ ಸುತ್ತಾಕಿ ಫೇರೀ ತಿರುವುತಾ ॥
' ಕಂಡಾನು ಕರಿ ಹುಡಗಾ ಕಣ್ಣೀಗೆ ಖರೆ ಚೆಲ್ವಾ
ಯಾರ ಮಗ 'ನಂತ ಪದ್ಮಾ ಕೇಳುತಾ
ಅವರು-ಹೇಳ್ಯಾರ ನಮಗ ಗೊತ್ತಿಲ್ಲನ್ನುತಾ.

೩

ತೋಟಕ್ಕ ಹೋದಾರು ನೆರಳಾಗ ಕುಂತಾರು
ಬೇಕಾದ ಹಣ್ಣು ಕಂದು ತಿನ್ನುತಾ ।
ಕೃಷ್ಣ-ಬಂದಾನಲ್ಲಿ ಕುದರೀ ಓಡಿಸುತಾ ॥
ಕುದರಿಯ ಕಟ್ಟ್ಯಾನ ನೆರಳೀಗಿ ಕುಂತಾನ
ಒಂದೊಂದು ಹಳ್ಳನವರಿಗೊಗಿಯೂತಾ ।
ಅವರ್ನ-ನೋಡ್ನೋಡಿ ಮುಗಳು ನಗೀ ನಗತಾ.

೪

' ಯಾಕಲೇ ಕರಿ ಹುಡುಗಾ ನಿನ್ನ ಮೈಯಾಗ ಸೊಕ್ಕs ?
ಭಾಳs ಬಂದತಿ ನಮಗ ಕಾಣಿಸಿತು ।
ನಿನ್ನ-ಜೀವಕಳಾ ತೊಗೊಂಡೇವs ವ್ಯರತು ॥
ಅರಸರ ಮುಂದ ಹೇಳೇವು, ನಿನ್ನ ತಲೀ ಒಡಿಸೇವು;
ಸಿಪಾಯ್ರ ಕೈಯಿಂದ ನಿನ್ನ ಜಗ್ಗಿಸುಕೂ ।
ಚಾವಡ್ಯಾಗ-ಕಟ್ಟಿ ಹಾಕಿ ನಿನ್ನs ಬಡಿಸೂತು.

೫

ಯಾರ್ ಮಗಾ ನೀ ನಿನ್ನ ಹೆಸರೇನೆನ್ನುತ
ವಿಚಾರ ಮಾಡಿ ಮಾಡಿ ಕೇಳುತಾ ।
ಅವನ್ನ-ನೋಡ್ನೋಡಿ ಮುಗುಳ ನಗೀ ನಗತಾ. ॥
ನಂದ ಗೋಪಾಲನ ಮಗ, ಯಶೋದಾ-ದೇವಕಿ ಮಗ,
ವಸುದೇವರ ಮಗನಂತ್ಹೀಳೂತೂ
ಮತ್ತ-ಊರಾಗ ಬಡವರಾಗಿ ನಾವಿರತೂ.

೬

ಕೃಷ್ಣನಂತ ಕರೀತಾರ, ವಿಷ್ಣುನಂತ ಕರೀತಾರ,
ರಾಮನಂತ ಕರೀತಾರ ನಗನಗತಾ
ಬಲ-ರಾಮ ದೇವಧನುಜನು ನಾ ಶರತಾ ! ॥
ಕೃಷ್ಣನ ಮಾತು ಕೇಳಿ ಪದ್ಮಾ ಚಿಟ್ಟನೆದ್ದು ಮನಿಗೆ ಹೋಗಿ
ತಲಿಕಟ್ಟಿ ಮುಲಿಗ್ಯಾಳ ಹುಡಿಗಿ ।
ಮನ್ಯಾನವ-ರಂತಾರ ಏನಾಯಿತಿವಳಿಗಿ.

೭

ನಿನ್ನೆ ತ್ವಾಟಕ್ಕೊ್ಹೀದಲ್ಲಿ ಗಾಳಿ ಆದೀತೇನಂತ
ಮಂತ್ರಗಾರರನ್ನ ಕರತರಿಸಿ ।
ಯಂತ್ರ-ಮಾಡಿಸತಾರ ಲಿಂಬೀ ಕಾಯಿ ಹರಿಸಿ ॥
ಕೃಷ್ಣ-ತೋಟದಿಂದ ಬಂದಾನು ಕುದರಿಯ ಕಟ್ಟ್ಯಾನು
ತಾಯಿಾ ಮುಂದ ನಿಂತಾನು ಅಳತಳತಾ ।
' ನಿನಗ-ಯಾರ ಬಡದಾರು ಹೊರಗಿಂದ ಬರತ ? '.

೮

' ನನಗ್ಯಾರು ಬಡಿದಿಲ್ಲ, ನನಗ್ಯಾರು ಬೈದಿಲ್ಲ ;
ಪದ್ಮರಾಜನ ಮಗಳನ್ನ ತುರತಾ ।
ತಾಯಿಾ-ಮದಿವೀ ಮಾಡಿಕೊಡ ನಿನ್ನ ಜೀವಿರತಾ' ॥
' ಅವರು ಅರಸರಪ್ಪಾ ನಾವು ಬಡವರಪ್ಪಾ !
ನಮಗ್ಯಾಂಗ ಕೊಟ್ಟಾರು ತುರತಾ ।
ಮುಂದ-ನೋಡಾಕ ಬಂದೀತು ಅನಕಾ ಇರಲೆನ್ನುತಾ.

೯

ತಾಯೀ ಮ್ಯಾಗ ಸಿಟ್ಟುಮಾಡಿ, ಗುಡ್ಡದ್ದಾದಿ ಹಿಡದು ಹೋಗಿ
ಹುಲೀ ಗವ್ಯಾಗ ಆಡಗಿ ಕುಳಿತಾ ।
ಹುಲಿ–ಬಂದ್ ಬಂದು ನಮಸ್ಕಾರ ಮಾಡುತಾ ॥
ಹುಲಿಗಿಲೀ ಮುರಿದೀತಂಕ ಯಶೋದಾ ಗಾಬರ್ಯಾಗಿ
ದೂರ ನಿಂತು ಕರೀತಾಳ ಅಳತಾ !
ನಿನ್ನ–ಹೊರತು ನಮಗ್ಯಾರಿಲ್ಲಂತಾ.

೧೦

ರಟ್ಟೆಯ ಹಿಡದಾಳ, ಮನಿಗೆ ಕರತಂದಾಳ;
ಅನ್ನಾ ಮಾಡಿ ಮಗ್ಗ ನೀಡುತಾ ।
ಮಗ—ಉಣ್ಣೂತ ಹೇಳತಾನ ಮಾತಾ ॥
ಕೊರವಂಜ್ಯಾಗಿ ಹೋಗತೀನ, ಆ ಹೆಣ್ಣ ತರತೀನ
ಚಿಂತೀ ಮಾಡಬ್ಯಾಡ ತಾಯಿ ತುರತಾ ।
ನೀ–ಸಂತೋಸ್ಲೇ ಇರಹೋಗss ನಗತಾ.

೧೧

ಕೃಷ್ಣ ಕೊರವಂಜ್ಯಾದಾನು ಓಣಿಗುಂಟ ನಡದಾನು;
ಚೆಂದ ಚೆಂದ ಧನಿ ತಗದ್ಹಾಡುತಾ ।
ಹಿಂದಾ—ದದ್ದು ಮುಂದಾಗೂದೆಲ್ಲ ಹೇಳೂತಾ ॥
ಕೊರವಂಜಿ ಸುದ್ದೀ ಕೇಳ್ಯಾರ, ಕೊರವಿನ್ನ ಕರಿಸ್ಯಾರ,
ಗದ್ದಿಗಿ ಹಾಸಿ ಪಾದಾ ಹಿಡಿಯುತಾ ।
ನಮ್ಮ—ಪದ್ಮನ ಜೀವ ಉಳವ್ರ ನಮ್ದು ತಿರತ !

೧೨

ಮುಂಗೈಯ ಹಿಡದಾಳು ಅಂಗೈಯ ನೋಡ್ಯಾಳು
ಖದಖದ ಕೊರವಂಜಿ ನಗತಾ ।
ಇಕಿಗೆ—ಗಾಳಿ ಆಗಿಲ್ಲಂತ್ಹೇಳುತಾ ॥
ಗೋಕುಲ ಕೃಷ್ಣನ ಮದಿವೀ ಆದೇನಂತ ಮಲಿಗ್ಯಾಳ
ಹೋಗತೈತನಬ್ಯಾಡ್ರೆವ್ವಾ ಮಾತಾ ।
ತಂದು—ಮದಿನೀ ಮಾಡಿ ಕೊಡರೆವ್ವಾ ತುರತಾ.

೧೩

ಕೊರನೀ ಮಾತ ಕೇಳ್ಯಾರ ಮದಿವೀ ಸಾಹಿತ್ಹಿಡದಾರ;
ಹಂದರ ಹಾಕಿ ತಳಲ ಕಟ್ಟುತಾ ।
ಮಂತ್ರಿ—ಹೋದಾನ ಕೃಷ್ಣನ ಕರತರತಾ ॥
ನಂದ ಗೋಪಾಲಾ ಯಶೋದಾ ದೇವಕಿ
ವಸುದೇವ ಸಹಿತವರು ಹೊರಡುತಾ ।
ತಂಗಿ—ದ್ರೌಪದಿ ಕೂಡಿ ಅಲ್ಲಿ ಇಳಿಯುತಾ.

೧೪

ಮದ್ದು-ಬಾಣಾ ಹಾರಿಸ್ಯಾರ, ಬೀಗರನಿದರಗೊಂಡಾರ;
ಆರಿಸಿಣ್ಣಾಚ್ಚಿ ಸುರಗೀ ಸುತ್ತೂತಾ ।
ಅಂತರ ಪಟ—ಹಿಡಿದು ಅಕ್ಕೈಕಾಳ ಒಗಿಯುತಾ ॥
ಸೆರವಣಿಗೀ ತಗದಾರ, ಊರಿಗೂಟ ಹಾಕ್ಯಾರ,
ಉಡಗೋರಿ–ಆಹ್ಯಾರ್ ಮಾಡುತಾ ।
ಬಂದಾರ—ಪದ್ಮಾನ ಸಂಗಡ ಕರತರತಾ.

* * * *

ಪದ್ಮನ ಹಾಡು ಕೇಳಿದವರಿಗೆ ಮುದಿವಿ-ಮುಂಜಿ ಆಗಲಿ
ಮುತ್ತೈದಿತಾನಾ ಘನವಿರಲಿ ।
ಬಂದ—ದುಖ್ಖ-ದರಿದ್ರಗಳೆಲ್ಲಾ ದೂರಾಗಲಿ ॥

ವಿಶೇಷ ಟಪ್ಪಣಿ

ಪದ್ಮಾವತೀಪರಿಣಯದ ಸಾಂಪ್ರದಾಯಿಕ ಕಥೆ ನಮ್ಮಲ್ಲಿ ಬಹುಜನರಿಗೆ ಪರಿಚಯದ್ದಾಗಿದೆ. ಆದರೆ ಮೇಲಿನ ಹಾಡನ್ನು ರಚಿಸಿದ ಹಳ್ಳಿಯ ಅಜ್ಞಾತ ಕವಿ, ಆ ಪುರಾಣದ ಅದ್ಭುತ ರಮ್ಯಕತೆಗೆ ಒಂದು ಬಗೆಯ ವಾಸ್ತವಸ್ವರೂಪವನ್ನು ಹೇಗೆ ತಂದುಕೊಟ್ಟಿದ್ದಾನೆಂಬುದನ್ನು ಇದರಲ್ಲಿ ನೋಡಬಹುದು. ಪುರಾಣದ ಕತೆಯ ನಾಯಕನಾದ ವೆಂಕಟೇಶ, ದೇವರ ಪ್ರತ್ಯಕ್ಷ ಅವತಾರ. ಇಲ್ಲಿಯ ಕೃಷ್ಣ ಸಾಮಾನ್ಯ ಮನುಷ್ಯ. ಊರಲ್ಲಿಯ ಬಡವರ ಮಗ. ಅವನ ತಾಯಿ ಸಾಮಾನ್ಯ ತಾಯಿಯಂತೆ ಮಗನಿಗಾಗಿ ಪಟ್ಟ ಕಳವಳ-ತಳಮಳಗಳು ಹೃದಯಾಕರ್ಷಕವಾಗಿವೆ. ದೇವರನ್ನೂ ಮಾನವನಂತೆ ಕಂಡು, ತಮ್ಮ ಆಶೆ-ಆಕಾಂಕ್ಷೆ, ಮನಸ್ಸು-ಹೃದಯಗಳ ವಿಕೃತಿಗಳಿಗೆ ಅವನೂ ಹೊರತಾಗಿಲ್ಲವೆಂದು ತೋರಿಸಿದ ಹಳ್ಳಿಗರ ತಿಳಿಯಾದ ಎಳಸಾದ ಮನೋಭಾವ, ಈ ಹಾಡಿನ ಮಾತು-ಮಾತುಗಳಲ್ಲಿಯೂ ತುಂಬಿ ಸೂಸುತ್ತಲಿದೆ. ಸಾಂಗತ್ಯದ ಅಂಶಗಣಗಳನ್ನು ಬಳಸಿ ಬರೆದ ಲಾವಣಿಯ ಜಾತಿಯಿದೊಂದು.

—ಸಂ. ಜ.

ನಂದಾದೀಪ

(ಒಂದು ಕೇಡಿಯೊ ರೂಪಕ)

ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಮುಂಬಯಿ

ಪಾತ್ರಗಳು :

ಛಾಯಾದೇವಿ (ಸಂಸ್ಕಾರವಂತಿ)
ಉಷಾದೇವಿ (ಸಾಂಪ್ರದಾಯಿಕ ಬುದ್ಧಿಯಾಕೆ)
ರಜನೀದೇವಿ, ಸರಸ್ವತಿ } (ಗೆಳತಿಯರು)
ಅಲ್ಲದೆ ಆವಣೇಕಾರ, ಕೆಂಚ.

★

(ಛಾಯಾದೇವಿಯ ಮನೆಯಲ್ಲಿ)

ಛಾಯಾ :— ಚಹಾ ತಗೋತೀರೊ, ಕಾಫೀ ತಗೋತೀರೊ ಉಷಾದೇವಿ ?

ಉಷಾ :— ಇಂಥಾ ಆಡ್ಡ ವ್ಯಾಳ್ಯಾದಾಗ ಏನೂ ಬ್ಯಾಡ್ರೀವ್ವಾ! ಏನೋ, ನಾಳೆ ನವರಾತ್ರಿ ಬಂತು, ರಾಮಾಚಾರ್ಗೆ ಅಷ್ಟು ಹೇಳಿ ಹೋಗಬೇಕೂ ಅಂತ ಇತ್ಲಾಗ ಬಂದಿದ್ದೆ. ಇಲ್ಲೀ ತನಕಾ ಬಂದ ವ್ಯಾಳೆ.. ಮತ್ತ ಛಾಯಾದೇವಿಯವರ ಮನಿಯೊಳಗ ಹಣಿಕಿ ಹಾಕದಿದ್ದರ ಅನ್ಯಾಯ ಆದೀತೂ ಅಂತ ಬಂದೆ.

ಛಾಯಾ :— ಇರ್ಲಿ, ಅಂಕೂ ನ್ಯಾಯ ಅನ್ಯಾಯ ನೋಡಿ ಯಾದರೂ ಮನೆಗೆ ಬಂದಿರೀ.. ಆತು.

ಉಷಾ :— ನೀವು ಇಷ್ಟು ಅಂತೀರಿ ಅಂತ ಗೊತ್ತೇ ಇತ್ತು. ಆಲ್ಲಾ, ನೀವು ಒಮ್ಮೆಯಾದರೂ ನಮ್ಮ ಮನೀ ಕಡೆ ಹಾಯತೀರೇನು ?

ಛಾಯಾ :— ಈಗಂತೂ ಚಹಾ ತಗೋತಿರೊ, ಕಾಫೀ ತಗೋತೀರೋ ಹೇಳ್ರಿ.

ಉಷಾ :— ಉಹೂಂ! ನಮ್ಮಲ್ಲೆ ಮೊದಲು ನೀವು ಬಂದು ಉಷಃಪಾನ ಮಾಡುವವರೆಗೂ, ನಾನು ನಿಮ್ಮಲ್ಲೆ ಚಹಾನೂ ಒಲ್ಲೆ ಕಾಫೀನೂ ಒಲ್ಲೆ !....

ಛಾಯಾ :— ಒಳ್ಳೇದು. ಉಷಾಬಾಯಿಯವರ ಮನೆಗೆ ಉಷಃಪಾನಕ್ಕ ಅಂತ ನವರಾತ್ರಿಯೊಳಗ ಒಮ್ಮೆ ಬರತೀನಿ ಆಯಿತ ?

ಉಷಾ :— ಅಗತ್ಯ ಆಗಲಿ. ಈಗ ಮನಸ್ಸಿಗೆ ಸಮಾಧಾನ ಆತು ನೋಡ್ರಿ.

ಛಾಯಾ :— ಕೂತಿರ್ರಿ ಹಾಂಗಾರ, ನಾ ಚಹಾ ಮಾಡಿಕೊಂಡು ಬರತೀನಿ. ಚಹಾ ಆದೀತೊ, ಏನು ಕಾಫೀ ಮಾಜ್ಲೊ ?

ಉಷಾ :— ಏನು ಽ .... ಚಹಾನೆ ಇರ್ಲಿ. ಅಥವಾ ನಿಮಗೆ ಯಾವುದು ಬೇಕೋ ಆದಿರ್ಲಿ.

ಛಾಯಾ :— ಒಳ್ಳೇದು ಹಂಗಾರ ಉತ್ತಮ ಕಾಫೀ ಮಾಡಿ. ಕೊಂಡು ಬರತೀನಿ. ಅನಕಾತಃ ಹಾಡು ಕೇಳತಃ ಕೂಡ್ರಿ, ಗ್ರಾಮೊಫೋನ್ ಹಚ್ಚತೀನಿ.

('ಉದರ ವೈರಾಗ್ಯವಿದು' ಎಂಬ ರೆಕಾರ್ಡು ಹಚ್ಚುವಳು)

ಛಾಯಾ :— ಕೇಳಿದಿರೇನು ಹಾಡು ? ಕಾಫೀ ತೊಗೊಳ್ರಿ. (ಕಾಫಿ ಕುಡಿಯುವ ಸಪ್ಪಳ.)

ಉಷಾ :— ಕೇಳಿದೆ, ಬಹಾಳ ಛಂದ ಅಂದಽನ್ರೀ! ಸುಡಗಾಡು ನಮಗ ಸರಳ ಧನೀ ತಗದು ಒಂದು ಆರತೀ ಹಾಡು ಸುದಾ ಹಾಡಲಿಕ್ಕೆ ಬರೋದಿಲ್ಲ.

ಛಾಯಾ :— ಬರೇ ಸಂಗೀತ ಇಷ್ಟೇ ಕೇಳಿದಿರೋ, ಹಾಡಿನ ಆರ್ಥಾನೂ ತಿಳಿದುಕೊಂಡಿರೊ ?

ಉಷಾ :— ಆಯ್ಯಽ, ಅದರಾಗೇನದರೆ ನಾವೊಲ್ಲೆ! ಹೇಳಿ ಹೇಳಿ ಪುರಂದರದಾಸರ ಹಾಡು. ನಮ್ಮ ಅಜ್ಜ-ಮುತ್ಯಾನ ಕಾಲದಿಂದಲೂ ಹಾಡಿಕೋತ ಬಂದದ್ದು. ಮೊನ್ನೆ ಮೊನ್ನೆ ತನಕಾ, ನಮ್ಮ ತೌರು ಮನೀಗೆ ಹೋದಾಗ ನಮ್ಮ ತಂದಿ, ನಮ್ಮನ್ನೆಲ್ಲಾ ದುಂಡಗ ಕೂಡಿಸಿಕೊಂಡು ಭಜನೀ ಹೇಳತಿದ್ದರು ..... ಆದರ ಏನು ಮಾಡೋದನೆವಾ! ಆ ಕಾಲ ಹೊರಟು ಹೋತು. ಇನ್ನ ಬಾ ಅಂದರ ಬಂದೀತ ? ನಮ್ಮ ತಂದಿ ಇರೂತನಕಾ ನಮ್ಮ ಮನಿಯೊಳಗ, ನವರಾತ್ರೀ ಹಬ್ಬಾ ಅಂದರ ತೀರಿ ಹೋತು; ನಂದಾ ದೀಪದ ತುಪ್ಪದೊಳಗ ದೇವರ ಕಟ್ಟಿ ತೇಲಿ ಹೋಗತಿತ್ತು. ದಿನಾ ನೂರು ಮಂದಿ ಬ್ರಾಂಬರ ಭೋಜನೇನು, ದೊಡ್ಡ ದೇವರ ಪೂಜಾ ಏನು, ವೆಂಕಟೇಶ ಮಹಾತ್ಮೀ ಪುರಾಣ ಏನು, ಮಂಗಳೇನು, ಮಂಗಳಾರತಿ ಏನು .... ಒಂಬತ್ತು ದಿವಸ ಮನೀ ಅಂದರ ಝಗ ಝಗ ಬೆಳಗಬೇಕು ನಂದಾದೀಪದಿಂದ! (ಮತ್ತೆ 'ಉದರ ವೈರಾಗ್ಯವಿದು')

ಅಯ್ಯ ಮತ್ತ ಅದನ್ನೆಽ ಹಚ್ಚತೀರಲ್ರೀ! ಒಂದ್ಯಾವದರ ಸಿನೇ-ಮಾದ ಹಾಡರೆ ಹಚ್ಚರಿ-'ಪಿಯಾ ಘರ ಆಜಾ ಆಜಾ' ಅಂತ.

ಛಾಯಾ :— ಉಷಾದೇವಿ! ನಿಮ್ಮ ಹೆಸರು ಮಾತ್ರ ಉಷಾದೇವಿ; ನಿಮ್ಮ ಬುದ್ಧಿಗೆ ಇನ್ನೂ ಉಷಃಕಾಲ ಬಂದೇಇಲ್ಲ. ನವರಾತ್ರಿ ಅಂದರ ಬರೇ ಬ್ರಾಂಬರ ಭೋಜನ—ತುಪ್ಪದ ನಂದಾದೀಪದೊಳಗ ಅದ ಏನು?

ಉಷಾ :— ಅಯ್ಯಯ್ಯ! ನವರಾತ್ರ್ಯಾಗ ನಂದಾದೀವಗಿ ಹಚ್ಚದೆ, ಇನ್ನೇನು ಶಿವರಾತ್ರ್ಯಾಗ ಹಚ್ಚತೀರೇನು? ದೊಡ್ಡ ದೇವರ ಪೂಜಾ ಅಂದಿಂದ ದಿನಪರತ್ತೆ ನಡಿಯೋಹಾಂಗ ನಡಸೇನು ಅಂದರ ಹ್ಯಾಂಗ ಆದೀತು ಹೇಳ್ರಿ, ಛಾಯಾಬಾಯಿ!

ಛಾಯಾ :— ದೇವರೊಳಗ ದೊಡ್ಡ ದೇವರು, ಸಣ್ಣ ದೇವರು ಅಂತ ಇರತಾರೇನು? ಅಂದರೇನು ಸರಕಾರಿ ಕಚೇರಿಯೊಳಗ ದೊಡ್ಡ ಅಧಿಕಾರಿಗಳು, ಸಣ್ಣ ಅಧಿಕಾರಿಗಳು ಇರೂ ಹಾಂಗ, ದೇವರೊಳಗೂ 'ಸಣ್ಣ ದೇವರು' 'ದೊಡ್ಡ ದೇವರು' 'ಹೆಡ್ ದೇವರೂ' ಅಂತ ಇರತಾರೇನು? ದೇವರು ಅಂದರ ಒಬ್ಬಾತಾ. ಪರಮಾತ್ಮಾ, ಪರಮೇಶ್ವರ!

ಉಷಾ :— ಅಯ್ಯಯ್ಯ! ನೀವೇನು ಸ್ಮಾರ್ತರು ಕಾಣಸ್ತsದ, ಇದಕ್ಕsಽ ಹೀಂಗಂತೀರಿ. ನಮಗ ವಿಷ್ಣುನsಽ ದೊಡ್ಡ ದೇವರು. ಅಂದರ ಅದೇ ವೆಂಕಟೇಶ ದೇವರು!

ಛಾಯಾ :— ನೀವು ವೈಷ್ಣವರು. ವಿಷ್ಣುನ ಭಕ್ತರು, ಹೌದಲ್ಲೊ?

ಉಷಾ :— ಅಯ್ಯ ಮತ್ತ ಸುಳ್ಳೇನು? ಮ್ಯಾಲೆ ಉತ್ತರಾದಿ ಮಠದವರು!

ಛಾಯಾ :— ಆದರ ಗಣೇಶಚವತಿಯೊಳಗ ನೀವು ಗಣಪತಿ ಪೂಜಾ ಮಾಡತೀರೊ ಇಲ್ಲೊ?

ಉಷಾ :— ಬೇಶರೆವಾ. ಇನ್ನ ಅಜ್ಜ-ಮುತ್ಯಾನ ಕಾಲದಿಂದ ನಡಕೋತsಽ ಬಂದ ರೂಢೀನ ತಪ್ಪಸಬೇಕೂ ಅಂತೀರೇನು?

ಛಾಯಾ :— ಗಣಪತಿ ಶಿವಾ-ಪಾರ್ವತೀ ಮಗಾ ಹೌದಲ್ಲೊ?

ಉಷಾ :— ಆದರೇನು ತಪ್ಪಾತರೇ ಛಾಯಾಬಾಯಿ! ಗಣೇಶ್ವತಿ ಸುಳ್ಳ? ಮೋದಕಾ ಮಾಡೋದು ಸುಳ್ಳ? ಹುಡುಗರು ಪಟಾಕ್ಷಿ ಹಾರಸೂದು ಸುಳ್ಳ?

ಛಾಯಾ :— ಒಳ್ಳೇದು, ನೀವು ವರುಷದೊಳಗ ಗೌರೀ ಎಷ್ಟು ಸರದ್ದು ಕೂಡಿಸತೀರಿ?

ಉಷಾ :— ನಮಗ ಶ್ರಾವಣಮಾಸದ ಗೌರಿ ಮುಖ್ಯರೆವಾ. ಯಾಕಂದರ ಸಂಪತ್ತು ಶುಕ್ರವಾರ—ಮನೀಗೆ ಲಕ್ಷ್ಮೀ ಬರೋ ದಿವಸ. 'ವರವ ಕೊಡ ತಾಯಿ ವರವ ಕೊಡ!' ಹಾಡಿ ಬೇಡಿಕೊಂಬೋ ಭಾಗ್ಯದ ದಿನಾ ಅದು. ಸಂಪತ್ತು ಶುಕ್ರವಾರದಷ್ಟು ದೊಡ್ಡ ಹಬ್ಬ ಇನ್ನೊಂದು ಯಾವುದೂ ಇಲ್ಲಾ ಅಂತೀನಿ.

ಛಾಯಾ — ಒಳ್ಳೇದು, ಶುಕ್ರವಾರದ ಗೌರೀ ಅಂತೀರಿ; ಗೌರೀ ಅಂದರ ಪಾರ್ವತಿ ಹೌದಲ್ಲೊ?

ಉಷಾ :— ಅದು ಹ್ಯಾಂಗರೆ? ಸುಮ್ಮನೇ ವಾದಿಸತೀರೆಲ್ಲ. ಗೌರೀ ಅಂದರ ಸಂಪತ್ತು ಶುಕ್ರವಾರ. ಸಂಪತ್ತು ಶುಕ್ರವಾರ ಅಂದರ ಲಕ್ಷ್ಮೀ. ಎರಡನೇ ಸಂಪತ್ತು ಶುಕ್ರವಾರ ಅಂದರ ವರ್ಮಾ ಲಕ್ಷ್ಮೀ. ಶುಕ್ರವಾರದ ಗೌರಿ ಮುಗಿಯೋದರಾಗsಽ ಒಸ್ಟವಿಾ ಗೌರಿ ಬರತsದ. ಆಮ್ಯಾಲ ಮೊದಲಗಿತ್ತಿಯರ ಮಂಗಳಗೌರಿ, ಆಷಾಢದಾಗ ದಿವಸೀ ಗೌರಿ ಬರತsದ. ಅದಾದಮ್ಯಾಲೆ ಸೀಗೀ ಗೌರಿ. ಮುಂದ ಚೈತ್ರಮಾಸದ ಗೌರಿ. ಇಷ್ಟೆಲ್ಲಾ ಗೌರೀ ಗಂಗೀ ಅಂದರ ಮುತ್ತೈದಿ ಸಾವಿತ್ರಿಯರಿಗೆ ಮಂಗಲದ ಉತ್ಸವ.

ಛಾಯಾ :— ಒಳ್ಳೇದು, ನೀವು ಶಿವರಾತ್ರೀ ಮಾಡತೀರೋ ಇಲ್ಲೊ?

ಉಷಾ :— ಮಾಪತೀವಿ. ಮಾಡದೇ ಏನು? ಆದರ ನಿಮ್ಮ ಹಾಂಗ ನಾವೇನು ಉಪಾಸ ಬೀಳಲಿಕ್ಕೆ ಹೋಗೋದಿಲ್ಲ. ಸಜ್ಜಾಗಿ ಹೋಳಿಗೀ ತುಪ್ಪಾ ಹೊಡೀತೀವಿ.

ಛಾಯಾ — ಅಂದ ಮ್ಯಾಲೆ ದೇವರು ನಮಗೂ ದೇವರು, ನಿಮಗೂ ದೇವರೂ ಅಂಥಾಂಗ ಆಯಿತಿಲ್ಲೊ? ಅದಕ್ಕನsಽ ದೇವರು ಅಂದರ ಒಬ್ಬಾಂವಾ—ಅಂತ ಹೇಳೋದು.

ಉಷಾ :— ಇದೇನೋ ನೀವೊಂದು ಹೊಸಾ ಪುರಾಣಾನsಽ ತಗದಿರೆಲ್ರೀ! ಇರ್ಲಿರೆವಾ ಇನ್ನೂ ಆಚಾರ್ರ ಮನೀಗಷ್ಟು ಹೋಗಿ ಬರತೀನಿ, ಮತ್ತೆಲ್ಯಾರ ಔತನಾ ತಗೊಂಡು ಕೂತರೂ ಅಂದರ ಪಂಚೇತಿ. ಆಮ್ಯಾಲ ಹತ್ತು ಹತ್ತು ರೂಪಾಯಿ ದಕ್ಷಿಣೀ ಕೊಟ್ಟರೂ, ದೊಡ್ಡ ದೇವ್ರ ಪೂಜೀ ಮಾಡಲಿಕ್ಕೆ ಆಚಾರ್ರು ಸಿಗಲಿಕ್ಕಿಲ್ಲ.

ಛಾಯಾ :— ಏನು ತಪ್ಪಾಯಿತು ಸಿಗದಿದ್ದರ?

ಉಷಾ :— ಹೂಂ, ನೋಡ್ರೆವ್ವಾ! ನಮ್ಮ ಹಾಂಗ ನಿಮಗೂ ಖಟ್ಟಾ ಅತ್ತಿ ಒಬ್ಬಾಕಿದ್ದರ ಹೇಳತಿದ್ದೆ. ಒಂದೇನು ಹಬ್ಬಾ ಹುಣ್ಣೀವೀ ನಿಂದರೂ ಹಾಂಗಿಲ್ಲಾ ಸಮನ್ಯಾಗ. ಸುಡ್ಲಿ ಅದರಾಗ ಬ್ಯಾರೆ ರೇಶನ್ ದಿವಸಾ. ಇತರೂ ತನಕಾ ಇವತು ಗೋಳ್ಯಾಡತಾರ. ಆದರೂ ಮುಪ್ಪಿನ ತಾಯಿ ಮಾತು ನಡಿಸಬೇಕಲ್ಲಾ! ಹೀಂಗಾಗಿ ಮೊನ್ನೆ ಶ್ರಾವಣಮಾಸದಾಗ ಎಂಟೆಂಟಣೇಕ್ಕ ಒಂದೊಂದು ಪಡವಲಕಾಯಿ ಅಂತ ಹೇಳಿದರೂ, ಗುಕ್ಕಸದೇ ತಂದು ಕೆಲಸಾ ಸಾಗಿಸಬೇಕಾತು. ಇಷ್ಟು ಯಾಕ, ಒಂದು ಬೆಲ್ಲಾ, ಒಂದು ಕಡ್ಲೀಬ್ಯಾಳಿ ಸುದ್ದಾ ಕಳ್ಳಪ್ಯಾಟೀ ಹುಡಿಕಿ ಸಾಮಾನಾ ತರೂತನಕಾ ತಿಂಗಳ ಪಗಾರ ಚಟ್ಟ ಅಂದು ಹೋತು.

ಛಾಯಾ :— ದಿವಾಳೀ ತಗಿಯೋ ಹಾಂಗ ಹೋಳಿಗೀ ಮಾಡಿ ಹೊಡದರ ಹಬ್ಬ ಏನು?

ಉಷಾ :— ಮತ್ತ ಹಿರೇರು ಹಬ್ಬಾ ಅಂತ ಮಾಡಿಟ್ಟ ಮ್ಯಾಲೆ, ನಮ್ಮ ಧರ್ಮದಾಗ ಏನು ಹೇಳೇದ ಅದನ್ನೆಲ್ಲಾ ಮಾಡಲಿಕ್ಕೇ ಬೇಕಲ್ಲೇನ್ರೆವಾ?

ಛಾಯಾ :— ಯಾವುದರೇ ಉಷಾಬಾಯಿ ನಿಮ್ಮ ಧರ್ಮ?

'ಉ ದ ಯ'

ಟೆ, ಕಾಫಿ ಮತ್ತು ಸ್ಟೇಶನರಿ ಅಂಗಡಿ

ಯಾವುದೇ ವಸ್ತು ಉಚಿತವಾದ ಬೆಲೆಗೆ

ದೊರೆಯುವದು.

ರಾಮದೇವಗಲ್ಲಿ, ಬೆಳಗಾವ.

ಉಷಾ : — (ನಕ್ಕು) ಅಯ್ಯ ಹಣೇಬಾರ! ಧರ್ಮ ಯಾವುದೂ ಅಂತ ಕೇಳತೀರಲ್ರೀ ಛಾಯಾಬಾಯಿ! ಯಾವ ಧರ್ಮ ಅಂದರ ಏನು ಹೇಳಬೇಕು—ಬ್ರಾಂಬರ ಧರ್ಮ!

ಛಾಯಾ:— ಬ್ರಾಂಬರ ಧರ್ಮ ಅಂದರೇನು?

ಉಷಾ:—ಅಂದರೇನು? ಬ್ರಾಂಬರಿಗೆ ಊಟಕ್ಕ ಹೇಳೋದು; ಮಡೀಲೆ ಅಡಿಗೀನಾಡೋದು; ಹೂರಣಾ-ಕಣಕಾ ಮಾಡಿ ನೇವಿದ್ಯ ಇಡೋದು, ಊಟಾದನ್ಯಾಲೆ ಬ್ರಾಂಬರಿಗೆ ದಕ್ಷಿಣೀ ಕೊಡೋದು.

ಛಾಯಾ:— ಇದಕ್ಕ ಧರ್ಮಾ ಅಂತಾರೇನು?

ಉಷಾ:— ಹೌದರೆನಾ. ನಮ್ಮ ಭಾಷಾದಾಗಂತೂ ಅಂತಾರ ಧರ್ಮಾ ಅಂತ.

ಛಾಯಾ:— ಹಾಂಗಾರ ನಮ್ಮ ಭಾಷಾದಾಗ ಧರ್ಮ ಅಂದರ ಏನು ಕೇಳ್ರಿ.

('ದಯವಿಲ್ಲದ ಧರ್ಮವಾವುದಯ್ಯ' ಎಂಬ ರೆಕಾರ್ಡು ಹಚ್ಚುತ್ತಾಳೆ) ಕೇಳಿದಿರಾ?

ಉಷಾ:— ಅಂತೂ ಅವಷ್ಟು ನ್ಲೇಟು ತೀರೋ ತನಕಾ ನಿಮ್ಮ ಫೋನೋ ಒದರಿಸಬೇಕೂ ಅಂತೀರೇನು?

ಛಾಯಾ:— ಹೌದು. ಅದೂ ಒಂದು ಫೋನೋ ಯಂತ್ರ, ನಾನೂ ಒಂದು ಫೋನೋ ಯಂತ್ರ, ನಾವು ಹೇಳುವ ಮಾತಿನ ಅರ್ಥವೇ ನಿನಗೆ ತಿಳಿಯದಿದ್ದ ಮೇಲೆ, ನೀವೂ ಒಂದು ಫೋನೋ ಯಂತ್ರ!

ಸರಸ್ವತಿ:— (ಬಾಗಿಲು ತಟ್ಟುವಳು.) ಛಾಯಾದೇವಿ!

ಛಾಯಾ:—ಓಹೋ, ಯೋಗ್ಯ ವೇಳೆಗೆ ಬಂದ್ರಿ. ಬರ್ರಿ ಒಳಗ!

ಉಷಾ:— ಯೋಗ್ಯ ವೇಳೆ ಎಲ್ಲೀದು ನಾವಾ. ಕಾಫೀತೀರಿದ ಮೇಲೆ ಬಂದಾರ.

ಛಾಯಾ:— ಕಾಫೀ ಮತ್ತೆ ಮಾಡಿಕೊಡಬಹುದು ಬಿಡ್ರಿ. ಯೋಗ್ಯ ವೇಳೆಗೆ ಅಂದರ, ನಮ್ಮ ಚರ್ಚಾ ನಡೆದ ಕಾಲಕ್ಕೆ ಬಂದ್ರೂ ಆಂತ.

ಸರಸ್ವತಿ:— ಚರ್ಚಾ ಏನು ಥಡೆದಿತ್ತು? ನಮಗೂ ಸ್ವಲ್ಪ ಹೇಳರಲ್ಲ.

ರಜನೀ:— (ಬಾಗಿಲು ತಟ್ಟುವಳು) ಓಹೊ! ಮಹಿಳಾಗೋಷ್ಠಿ ಇಲ್ಲೇ ನಡೆದಿದೆ ಅಲ್ಲಾ.

ಛಾಯಾ:— ಮತ್ತೆಲ್ಲಿ ನಡೆಯೋದು?

ರಜನೀ:— ಇವೊತ್ತು ನಾಡಹಬ್ಬದ ನಿಮಿತ್ತ ನಗರಸಭೆಯಲ್ಲಿ ಮಹಿಳಾಗೋಷ್ಠಿ ಸೇರಲಿದೆ. ಎಲ್ಲರೂ ಹೋಗೋಣು ಬರತೀರೇನು?

ಸರಸ್ವತಿ:— ಹೌದು. ನಾನೂ ಅದಕ್ಕಾಗೇ ಹೊರಟಿದ್ದೆ.

ಉಷಾ:—ಅಯ್ಯ, ಅಲ್ಲೇನು ಮಾಡತೀರಿ ಸರಸೋತಿಬಾಯ್ಯ? ಇಲ್ಲೆ ಲಕ್ಷ್ಮೀನಾರಾಯಣ ದೇವರ ಗುಡಿಗೆ ಹೋಗೋಣು ಬರ್ರಿ. ಅಲ್ಲೆ ಒಂಬತ್ತು ದಿವಸೂ ಒಂಬತ್ತು ಥರದ ಛಂದಾಛಂದದ ವೇಷಾ ಹಾಕಿರತಾರ ದೇವರಿಗೆ. ನೋಡಲಿಕ್ಕೆ ಜನಜಾತ್ರಿ ನೆರೆದಿರತಕದ. ಹೋಗಿ ಬರೋಣು ನಡೀರೆ!

ಸರಸ್ವತಿ:—ನೀವು ಗುಡಿಗೆ ದೇವರ ಸೌಂದರ್ಯ ನೋಡಲಿಕ್ಕೆ ಹೋಗತೀರೊ, ಏನು ಗುಡಿಗೆ ಬಂದವರ ಸೌಂದರ್ಯ ನೋಡಲಿಕ್ಕೆ ಹೋಗತೀರೊ, ಅಥವಾ ದೇವರ ಭಕ್ತಿಯಿಂದ ಹೋಗತೀರೊ?

ಉಷಾ:— ದೇವರು ನೋಡಲಿಕ್ಕೆ ಛಂದ ಕಾಣಸ್ತಕದಂತ ಭಕ್ತಿ ಹುಟ್ಟತಕದ.

ರಜನೀ:—ಹೌದು ನಿನ್ನೆ ಲಕ್ಷ್ಮೀಗೆ ಉಡಿಸಿದ ಸೀರೆಯ ಅಂಚು ಎಷ್ಟು ಅಂದವಾಗಿತ್ತು. ಹೊಟ್ಟೆಯೊಳಗೂ ಸೀರಿ ಬಹಳ ನಯ ಅಗಿತ್ತು.

ಸರಸ್ವತಿ:—ನವರಾತ್ರಿ ಅಂದರ ನಾಡಹಬ್ಬ. ನಾಡಹಬ್ಬದಲ್ಲಿ ನಂದಾದೀಪ ಬೆಳಗಬೇಕು. ಅಂದರೆ ಮನೆ ತೊಳೆದುಹೋಗುವ ಹಾಂಗೆ ತೊಪ್ಪದ ದೀವಿಗೆ ಬೆಳಗಬೇಕು—ಅಂತಲ್ಲ. ಆದರೆ ಜ್ಞಾನದ ನಂದಾದೀವಿಗೆ ಬೆಳಗಬೇಕು ಅಂತ ಅರ್ಥ. ನವರಾತ್ರಿಯ ಹಬ್ಬ ಅಂದರೆ ಮನೆಯಲ್ಲಿಯ ಹೆಡ್ಡದೇವರ ಪೂಜೆ ಅಲ್ಲ; ನಾಡಹಬ್ಬವಾಗಿ ಜ್ಞಾನದೇವಿಯ ಪೂಜೆಯಾಗಬೇಕು. ಇನ್ನಾದರೂ ನಾವು ಅಜ್ಞಾನದ ಸಿನೋಲ್ಲಂಘನ ಮಾಡೋಣ. ಜ್ಞಾನದ ವಿಜಯಯಾತ್ರೆಯನ್ನು ಕೈಕೊಳ್ಳೋಣ....ಅಂತ ನಮಗೆ ತಿಳಿಸಿ ಹೇಳುವುದೇ ನಮ್ಮ ನಾಡಹಬ್ಬ.

ರಜನೀ:—ನಿಮ್ಮ ಮಾತು ಅಗದೀ ಖರೇ ಸರಸ್ವತೀ ಬಾಯಿ! ನಂದಾದೀಪ ಅಂದರೆ ಜ್ಞಾನದೀಪವಾಗಿ ನಮ್ಮ ಬುದ್ಧಿಯನ್ನು ಬೆಳಗಬೇಕು. ಇದು ನಿಜ, ಆದರೆ ನಾವು ದೇವರ ಗುಡಿಗೆ ಹೋಗಲೇ ಬಾರದು—ಅನ್ನೋದು ತಪ್ಪು. ಅದೂ ಒಂದು ನಂದಾದೀಪ, ಇದೂ ಒಂದು ನಂದಾದೀಪ. ಅದೂ ಒಂದು ಸಾಮಾಜಿಕ ಕಾರ್ಯಕಲಾಪ, ಇದೂ ಒಂದು ಸಾಮಾಜಿಕ ಕಾರ್ಯಕಲಾಪ. ಸರಕಾರದವರು ಇಂಥ ಸಾಮಾಜಿಕ ಕಾರ್ಯಕಲಾಪಗಳಲ್ಲಿ ಸರ್ವಜಾತೀಯ ಜನರು ಸೋದರಭಾವದಿಂದ ಬೆರೆತು ಪರಸ್ಪರ ಸ್ನೇಹಪ್ರೀತಿಯನ್ನು ಹೆಚ್ಚಿಸುವಂತಾಗಬೇಕು .... ನಮ್ಮ ನಮ್ಮೊಳಗಿನ ಮೇಲು ಕೀಳು ಎಂಬ ದ್ವೈತಭಾವನೆ ಅಳಿದು ನಾವೆಲ್ಲಾ ಒಂದೇ, ನಾವು ಭಾರತೀಯರೆಲ್ಲಾ ಒಂದೇ, ಎಂಬ ಅದ್ವೈತಭಾವ ಮೂಡ-

ಟೀಕು— ಎಂಬ ಉದ್ದೇಶದಿಂದಲೆ ಹರಿಜನರ ಗುಡಿ ಪ್ರವೇಶದ ಕಾಯಿದೆ ಮಾಡಿದ್ದಾರೆ. ಎಂದಮೇಲೆ, ನಾವು ಗುಡಿಗೆ ಹೋಗುವ ಸಂಪ್ರದಾಯವನ್ನು ಹೀಯಾಳಿಸಬಾರದು!

(ಅಳು ಕೆಂಚ ಬರುವನು.)

ಕೆಂಚ :— ಅವ್ವಾವ್ರ, ಅವ್ವಾವ್ರ ! ಅಗಾ, ಅಲ್ಲೆ ನಾರಾಯಣದೇವರಗುಡೀ ಹುಚ್ಚಾಯ ಬಂತು. ಗಡಾ ನಡೀರಿ ಹೋಗೋಣ. ಬಂದ ಕೂಡ್ಲೀನs ಮತ್ತ ಕರ್ಯಾಕ ಬಾ ಅಂತ ಹೇಳಿದ್ರಿ. ನಾನು ಹೊರ್ಯಾಕ ಕಟ್ಟೀಮ್ಯಾಗ ಜಪ್ಪಿಸಿಗೊಂಡs ಕುಂತಿದ್ನಿ ಬಂದ ಕೂಡ್ಲೀನ ಗಬಕ್ಕನ ಓಡಿ ಬಂದು, ಅವ್ವಾವ್ರಿಗೆ ಹೇಳೂನೂ ಅಂತ.

ಸರಸ್ವತಿ :— ಓಹೋ ನಡೆಯಿರಿ. ಎಲ್ಲರೂ ದೇವರ ಉತ್ಸವ ನೋಡಿಕೊಂಡು, ನಗರಸಭೆಯ ಮಹಿಳಾಗೋಷ್ಠಿಯನ್ನೂ ಕೇಳಿಕೊಂಡು ಬರೋಣ.

ರಜನೀ :— ಯಾರು ಮಾತಾಡುವವರಿದ್ದಾರೆ ಮಹಿಳಾಗೋಷ್ಠಿಯಲ್ಲಿ ?

ಸರಸ್ವತಿ :— ಮುಂಬಯಿಯಿಂದ ಶಾರದಾಬಾಯಿಯವರು ಬಂದಾರೆ. ಅವರದೇ ಭಾಷಣ. 'ಮಹಿಳೆಯರೂ ಸಾಡಹಬ್ಬವೂ' ಅಂತ ವಿಷಯ.

ಕೆಂಚ :— ಅವ್ವಾವ್ರ, ಸಬಾಕ್ಕ ಹೊಕ್ಕೀರೇನ್ರಿ ಬಾಸಣಾ ಕೇಳಾಕ ? ಅದs ಸಬಾದಾಗ ನಮ್ಮ ಏಕದಾರಿ ತುಕ್ಯಾ ಲಾವಣೀ ಹೇಳಾಂವ ಅದಾನ್ರಿ. ಈಗ ಹೊರಗ ಕುಂತಗೊಂಡು ಶಂತೀನೀಟಾಕ ಹತ್ಯಾನ್ರಿ. ಒಳ್ಯಾಕ ಕರೀಲೇನ್ರಿ ?

ಛಾಯಾ :— ಕರೀ, ಕರೀ ಕೆಂಚಪ್ಪಾ. ಲಾವಣಿ ಕೇಳೂಣು. ನಮ್ಮ ನಾಡಿನ ಜೀವನ ತುಂಬಿಹರಿಯೋದು ಲಾವಣಿಯೊಳಗ !

ಕೆಂಚ :— ಹೌದರಿಯವ್ವಾ. ನೀನೇನು 'ನಂದಾದೀಪ' ಅಂತಿದ್ರೆಲ್ರಿ; ಅದs ಲಾವಣೀಪದಾ ಹೇಳತಾನ್ರಿ ಅವನೂ. ಲೇ ತುಕ್ಯಾ; ಒಳ್ಯಾಕ ಬಾರೊ. ಅವ್ವಾವ್ರು ಪದಾ ಕೇಳತಾರಂತ ಬಾ. ನಿನ್ನ ಏಕತಾರೀ ತೊಗೊಂಡು.

ತುಕ್ಯಾ :— ಯೀ ಬಿಡೋ, ಅವ್ವಾರು ನನ್ನ ಪದಾ ಏನು ಕೇಳ್ಯಾರು. ಯಾವಾಗಲೂ ಆ ಪೆಟಗೀ ಪದಾ ಕೇಳಾವ್ರ ಅವ್ರು.

ಕೆಂಚ :— ಪೆಟಗೀ ಪದಾ ಅಂದರೇನ್ಲೆ. ನೀ ಒಂದು ಹೊಸ ಪಾತನs ಹುಡಿಕಿದೆಲ್ಲಾ !

ತುಕ್ಯಾ :— ಅದನೋ ಕೀಲೀಕೊಟ್ಟರ ಹಾಡತೈತೆಲ್ಲಾ— ಆ ಯಂತ್ರದ ಪೆಟಗಿ !

ಎಲ್ಲರೂ :— (ನಗುವರು)

ಛಾಯಾ :— ಹೇಳು, ಹೇಳು ತುಕಾರಾಮಾ. ನಿನ್ನ ನಂದಾದೀಪದ ಲಾವಣಿ ಹೇಳು. ಮನುಷ್ಯನಿಗೂ ಯಂತ್ರಕ್ಕೂ ಕೂಡೇ ಬುದ್ದಿಬರೋ ಅಂಥಾ ನಿನ್ನ ನಂದಾದೀಪದ ಲಾವಣೀ ಹೇಳು ! (ತುಕಾರಾಮ ಹೇಳುವನು).

ಹಚ್ಚು ನಂದಾದೀಪ !
ಆನಂದದ ದೀಪ !
ಸುತ್ತುಮುತ್ತು ಜಗತ್ತು ಬೆಳಗಲ್ಯೋ— ಅಣ್ಣಾಯ್ಯಗಳರಾ
ನಿಮ್ಮ ಬುದ್ದಿಯು ಬೆಳಗಲ್ಯೋ !
ಇದೊ ಉಡುಗಿತು ಓಡಿತು ಅಜ್ಞಾನಾ
ಉದಿ ಉದಿಸಿ ಬಂತು ಸುಜ್ಞಾನಾ !
(ನೋಡು ನೂಡಿ ಬಂತು ದಿವ್ಯಜ್ಞಾನಾ)
ಹಿಡಿ ಜ್ಞಾನದ ಪಂಜು
ಓಡಿಹೋಗಲಿ ಮಂಜು
ಜೈ ಹಿಂದ ಎನ್ನುವ ಬನ್ನಿರೋ, ಅಣ್ಣಾಯ್ಯಗಳರಾ
ಎಲ್ಲಾರೂ ಒಂದೇ ಎನ್ನೀರೋ ॥

'ಕೃಷ್ಣಾ ಕೆಫೆ' ಬೋರ್ಡಿಂಗ್
ಮತ್ತು
ಲಾಜಿಂಗ್ ಹೌಸ್
ಖಡೇಬಜಾರ, ಬೆಳಗಾಂವಿ

ನಗರದ ಹಾಗು ಮಾರ್ಕೆಟಿನ ಮಧ್ಯದಲ್ಲಿ, ಕೋರ್ಟು, ಕಚೇರಿ, ಶಾಲೆ-ಕಾಲೇಜುಗಳಿಗೆ ತೀರ ಸಮೀಪವಾಗಿದ್ದು, ಎಲ್ಲ ಜನರಿಗೆ ಒಳ್ಳೇ ಅನುಕೂಲವಾಗಿರುವ ಸುಖ-ಸೌಕರ್ಯಗಳುಳ್ಳ ಹೊಸಪದ್ಧತಿಯ ಇಳಕೊಳ್ಳುವ ಸ್ಥಳವೆಂದರೆ ಇದೇ—

ಒಂದು ಸಲ ಅನುಭವ ಪಡೆಯಿರಿ.



ರಸಿಕ

(ಕಣ್ಣಾಲಿ)

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ.ಎ., ಬಿ.ಟಿ. ಗೋಕಾಕ

★

ಮೂರ್ತಿಯಂತಹ ಭಾವನಾತ್ಮಕ ತರುಣನ ಮಂಕುಬುದ್ಧಿಯ ಮೂಗಿಗೆ ತುಪ್ಪಹಚ್ಚಿ, ಸಂಪಾದಕರು ತಮ್ಮ ಕಾರ್ಯ ಸಾಧಿಸಿದರು. ಪಾಪ, ಮೂರ್ತಿ ಪೆಚ್ಚಾಗಿ ಹೋದ!

★

೧

ಆ ಮಾಸಪತ್ರಿಕೆಯಲ್ಲಿ ತನ್ನ ಕವನದ ಜೊತೆಗೆ ಪ್ರಕಟವಾದ ಇನ್ನೊಂದು ಕವನವನ್ನು ನೋಡಿ, ಮೂರ್ತಿಯ ರಸಿಕ ಹೃದಯದ ರಸದುಂಬಿ ಪಕ್ಕ ಪಡೆಯಿತು. ಅದರಲ್ಲಿಯೂ ಆ ಕವನದ ಕೆಳಗೆ ಮುದ್ರಿತವಾದ '**ವಾರಿಜಾ**' ಎಂಬ ಅಂಕಿತವು, ತನ್ನ ಹೆಸರಿನ ತೀರ ಹತ್ತಿರದಲ್ಲಿಯೇ ಮುದ್ದಾಗಿ ಮೂಡಿರುವುದನ್ನು ನೋಡಿ, ಮೊದಲೆ ಪಕ್ಕ ಪಡೆದಿದ್ದ ಅವನ ರಸದುಂಬಿ ಝೇಂಕರಿಸತೊಡಗಿತು. ಈ ಸಂದರ್ಭವು ಕೇವಲ ಆಕಸ್ಮಿಕವೆಂದು ನಂಬದ ಮೂರ್ತಿ, ಅದಾವುದೋ ದೈವೀಸಂಕೇತವನ್ನು ನಿರ್ಧರಿಸಿಬಿಟ್ಟ. ಆ ಸಂಚಿಕೆಯಲ್ಲಿ ಪ್ರಕಟವಾದ ಅನೇಕ ಕವನಗಳಲ್ಲಿ ಈ ಎರಡೇ ಕವನಗಳು ಒಂದರ ಬದಿಗೊಂದು ಪ್ರಕಟವಾಗುವುದರಲ್ಲಿ ಯಾವ ಆರ್ಥವೂ ಇಲ್ಲವೆ? ಮೇಲಾಗಿ ತಾನು ಬರೆದ '**ಒಲುಮೆಯ ಹಾದಿ**'ಗೆ ಉತ್ತರ ರೂಪದಂತಿರುವ '**ನಲುಮೆಯ ರಮಣ**' ಎಂಬ ಆ ಕವನವ ಅಂತರಂಗದಲ್ಲಿ ಮಿಡಿಯುತ್ತಿರುವ ಭಾವದಲ್ಲಿ ಅದೆಂತಹ ಕಾತರ ತುಂಬಿದೆ? ಅದು ಯಾರಿಗಾಗಿ ಇರಬಹುದು? ಅವಳ ಹೃದಯ ಯಾವ ರಮಣನನ್ನು ಅರಸುತ್ತಿರಬಹುದು? ಅತೃಪ್ತ-ಹೃದಯದ ಆಶೆ, ನೆರವೇರದ ಭಾವ ಅದೆಷ್ಟು ಪ್ರಖರವಾಗಿದೆ? ಆ ಹೃದಯಕ್ಕೆ ಸಹಾನುಭೂತಿಯ ಸುಖ ಸಿಗದಿದ್ದರೆ ಆ ಹೃದಯ ವೊಂದು ಹುಚ್ಚು ಹೊಳೆಯಾದೀತು....ಹೀಗೆ ವಿಚಾರಿಸಿದ ಮೂರ್ತಿ ಒಂದು ನಿರ್ಧಾರಕ್ಕೆ ಬಂದು, ಕೂಡಲೆ ಸಂಪಾದಕರಿಗೊಂದು ಪತ್ರ ಬರೆದುಬಿಟ್ಟ:

"ಪ್ರೀಯ ಸಂಪಾದಕ ಮಹಾಶಯರೆ,

ಕುಮಾರಿ '**ವಾರಿಜಾ**' ಅವರು ಬರೆದ '**ನಲುಮೆಯ ರಮಣ**' ನನ್ನ ಓದಿ ನನ್ನ ಹೃದಯವು 'ಪದ್ಮಪತ್ರದ ಮೇಲಿನ ಜಲ-ಬಿಂದು' ವಿನಂತೆ ಹೊಯ್ದಾಡತೊಡಗಿದೆ. ಅವರಿಗೆ ನನ್ನ ಸಹಾನು-ಭೂತಿಯನ್ನು ತಿಳಿಸಿ ನನ್ನೊಡನೆ ನೇರವಾಗಿ ಕಾವ್ಯಸಂಬಂಧವನ್ನು ಬೆಳಸಿಕೊಳ್ಳಲು ನನ್ನ ಅಭ್ಯಂತರವಿಲ್ಲವೆಂಬುದನ್ನು ದಯವಿಟ್ಟು ತಿಳಿಸಬೇಕು. ಅವರಿಗೆ ನನ್ನ '**ಒಲುಮೆಯ ಹಾದಿ**' ದಾರಿ ತೋರಬಹುದೆಂದು ಆಶೆ ಇಟ್ಟುಕೊಂಡಿದ್ದೆನೆ. ದಯವಿಟ್ಟು ಅವರ ವಿಳಾಸವನ್ನು ನನಗೆ ತಿಳಿಸಬೇಕು. ನನ್ನ ವಿಳಾಸ ನಿಮಗೆ ಗೊತ್ತು. ಈ ಪತ್ರವ್ಯವಹಾರಕ್ಕೆ ಶಗಲಬಹುದಾದ ಆಂಚೆಯ ಚೀಟಿಗಳನ್ನು ಇಟ್ಟಿದ್ದೇನೆ. ಅವರ ಹೃದ್ಗತದ ಓಲೆಯನ್ನು ಕೂಡಲೇ ನನ್ನ ಕಳುಹುವಿರಾಗಿ ನಂಬಿದ್ದೇನೆ.

ಪತ್ರವನ್ನು ಕೂಡಲೇ ಟಪಾಲಿಗೆ ಹಾಕಿಬಂದ ಮೂರ್ತಿ, ಮತ್ತೆ ಮತ್ತೆ 'ವಾರಿಜಾ' ಅವರು ಬರೆದ ಕವನವನ್ನು ಓದತೊಡಗಿದ. ಓದಿದ ಸಲ ಅವನಿಗೆ ಆ ಕವನ ಅರ್ಥಗರ್ಭಿತವಾಗಿರುವಂತೆ ಕಂಡ ಬರಹತ್ತಿತಲ್ಲದೆ, ತನ್ನ ಪತ್ರಕ್ಕೆ ಕೂಡಲೇ ಉತ್ತರ ಬರುವುದೆಂಬ ಭಾವ ಬಲವಾಗತೊಡಗಿತು.

ಸರಿಯಾಗಿ ಎಂಟನೆಯ ದಿನ ಸಂಪಾದಕರಿಂದ ಉತ್ತರ ಬಂದಿತು. ಅದರಲ್ಲಿ '**ವಾರಿಜಾ**' ಅವರು ಮೂರ್ತಿಯ ಪತ್ರವನ್ನು ಬಹಳ ಅಭಿಮಾನದಿಂದ ಕಂಡರೆಂತಲೂ, '**ಒಲುಮೆಯ ದಾರಿ**' ಅವರಿಗೆ ಬಾಯಿಪಾಠವಾಗಿದೆಯೆಂತಲೂ, ನೇರವಾದ ಕಾವ್ಯಸಂಬಂಧವನ್ನಿಟ್ಟುಕೊಳ್ಳಲು ಅವರು ಆತುರರಿದ್ದರೂ ಇನ್ನೂ ಕಾಲ ಪಕ್ವವಾಗಿಲ್ಲವೆಂತಲೂ, ಆ ದಿನವನ್ನು ಅವರು **ಚಾತಕಪಕ್ಷಿಯಂತೆ** ನಿರೀಕ್ಷಿಸುತ್ತಿರುವರೆಂತಲೂ ಬರೆದಿರುವರಾಗಿ ತಿಳಿಸಿದ್ದರು.

ಸಂಪಾದಕರಿಂದ ಬಂದ ಈ ಪತ್ರವನ್ನು ಓದಿದ ಮೂರ್ತಿಯ ಮನಸ್ಸು, ಈ ಲೋಕವನ್ನು ಬಿಟ್ಟೆಂದು ಹೇಳುವುದು ಅತಿಶಯೋಕ್ತಿಯಲ್ಲ. ಅದು, ಭಾವರಾಜ್ಯದ ಬಯಲುಸೀಮೆಯಲ್ಲಿ ಕಂಡ ಹಸಳದ ನಡುಗಡ್ಡೆಯಲ್ಲಿ ಹಸುರಾಗಿ ನಿಂತ ಹೊಸ ಮಾವಿನ ಸಸಿಚಿಗುರನ್ನು ತನ್ನ ಚಂಚುವಿನಿಂದ ಕುಕ್ಕತೊಡಗಿತು. ಆ ವೃಕ್ಷದ ತಣ್ಣಿಳಲ ಹಿತದಲ್ಲಿ, ಮೂರ್ತಿ ಕಂಡ ಭಾವದೇವಿ ತನ್ನನ್ನು ಕರೆಯುವಂತೆ ಭಾಸವಾಗತೊಡಗಿತು. ಅವಳ ಸೌಂದರ್ಯ, ಅವನನ್ನು ಮುಗ್ಧನನ್ನಾಗಿ ಮಾಡಿತು. ಅವಳ ವೈಯಾರ ಬಹಳ ಆಕರ್ಷಣೀಯವಾಗಿತ್ತು. ಅವಳ ದನಿ ಬಹಳ ಕೋಮಲವಾಗಿರಬೇಕೆಂದು ಮೂರ್ತಿ ನಿಶ್ಚಯಿಸಿದ. ಬಳ್ಳಿಯಂತೆ ಬಳುಕುತ್ತಿರುವ ಕೋಮಲ ತನುವಲ್ಲರಿಯಲ್ಲಿ ಮಾಧುರ್ಯದ ದನಿಗೆ ಅಸರವಲ್ಲದೆ ಕಠೋರತೆಗೆ ಅಸ್ಪದವಿಲ್ಲವೆಂಬುದು ಆ ಕ್ಷಣ ಅವನಿಗೆ ಹೊಳೆಯಿತು. ಅವಳ ಹಾಡು ಹಾಲಿನ ಹೊಳೆಯಾಗಿ, ಜೇನಿನ ಹನಿಯಾಗಿ ಹರಿಯತೊಡಗಿತು. ಮೂರ್ತಿ ಕೇಳಿದ. ಕೇಳುತ್ತಿರುವಂತೆಯೇ ಅವನಲ್ಲಿ ಉದ್ರೇಕ ತುಂಬಿಕೊಂಡಿತು. ಅವನ ಭಾವನಾಡಿ ಮಿಡಿಯತೊಡಗಿತು. ಅವನೂ ಹಾಡತೊಡಗಿದ. ಅವನ ಹಾಡು ಅವಳ ಮನಸ್ಸಿಗೆ ಬಹಳ ಹಿಡಿಯಿತೆಂದು ಅವನಿಗೆನ್ನಿಸಿತು. ಆ ತುಂಬುಗಲ್ಲದಲ್ಲಿ ಸುಳಿದ ಜೆಲುಗುಲಾಬಿಯ ಸೆಳಕು ಅವಳಂತರಂಗವನ್ನು ಮೂರ್ತಿಗೆ ತೋರಿಸಿತು. ಆ ಜೆಲುವೆ ಸ್ವರ್ಗಲೋಕದಿಂದ ಇಳಿದು ಬಂದ ಕಾವ್ಯಕನ್ನಿಕೆಯಾಗಿರಬೇಕೆಂದು ಅವನಿಗೆನ್ನಿಸಿ ಉತ್ಸಾಹಭರಿತನಾದ. ಉತ್ಸಾಹದ ಭರದಲ್ಲಿ ಅವನು ಅವಳನ್ನು ಕೂಗಿದ.

"ವಾರಿಜಾ! ನಿನ್ನ ಕವನವನ್ನು ಓದಿದ ದಿನವೇ ನೀನಿಂತಹ ಆಸ್ಪರೆಯೆಂಬುದನ್ನು ನಿಶ್ಚಯಿಸಿದ್ದೆ."

ವಾರಿಜಾ ಕಿಲಕಿಲನೆ ನಕ್ಕು ನುಡಿದಳು.

"ನಿಮ್ಮ ಕವನವನ್ನು ಓದಿದ ದಿನವೇ ತಾವು ಈ ಲೋಕವವರಲ್ಲ ಎಂಬುದನ್ನು ಗ್ರಹಿಸಿದೆ."

ಮೂರ್ತಿ ಅವಳ ಮಾತಿಗೆ ಗಹಗಹಿಸಿ ನಕ್ಕ.

"ವಾರಿಜಾ! ನನ್ನ 'ಒಲುಮೆಯ ದಾರಿ' ನಿನಗರ್ಥ ವಾಯಿತೆ?"

"ನನ್ನ 'ನಲುಮೆಯ ರಮಣ' ದಲ್ಲಿ ನಿಮಗೆ ಆದರ ಉತ್ತರ ಬಗಲಿಲ್ಲವೆ?"

"ಸಿಕ್ಕಿತು ವಾರಿಜಾ! ಅದಕ್ಕೆಂತಲೆ....."

ವಾರಿಜಾ ಕಿಲಕಿಲನೆ ನಗುತ್ತ ಸರಿಯತೊಡಗಿದಳು. ಮೂರ್ತಿಗೆ ಬಹಳ ಕಳವಳವಾಗಿ 'ಹೋಗಬೇಡ ನಿಲ್ಲು ವಾರಿಜಾ! ನಾನು ನಿನಗಾಗಿಯೇ ಹಂಬಲಿಸುತ್ತಿರುವೆನೆಂಬುದನ್ನು ನೀನು ತಿಳಿಯಬೇಡವೆ?' ಎಂದ.

ವಾರಿಜಾ ಅವನನ್ನೊಮ್ಮೆ ಕುಡಿಹುಬ್ಬುಗಳನ್ನು ಮೇಲಕ್ಕೇರಿಸಿ ನೋಡಿದಳು. ಆ ನೋಟ ಬಹಳ ತೀಕ್ಷ್ಣವಾಗಿತ್ತೇನೋ. ಮೂರ್ತಿ ದಿಗ್ಮೂಢನೆ ಎದ್ದು 'ಬಾ! ವಾರಿಜಾ!' ಎಂದು ಕೂಗಿದ.

ವಾರಿಜಾ ಮಾಯವಾಗಿಬಿಟ್ಟಳು.

"ವಾರಿಜಾ! ವಾರಿಜಾ!" ಮೂರ್ತಿ ಸೇರವಾಗಿ ಓಡಿದ. ಕೋಣೆಯ ಬಾಗಿಲ ಚಿಲಕವಿಟ್ಟು ಹಣೆಗೆ ಬಡಿಯಿತೇನೋ ಪಾಪ. ಗಕ್ಕನೆ ನಿಂತು ಸುತ್ತಲೂ ನೋಡಿದ. ಸಂಪಾದಕರ ಪತ್ರವೊಂದು ಮಾತ್ರ ಅವನಿಗೆ ಕಾಣಿಸಿತು. ಪತ್ರನೆ ಬಾಗಿಲನ್ನು ತೆರೆದ. ಹೊರಗೆ ಕಸ ಗುಡಿಸುವ ಅವನ ಮನೆಯಾಳು ನಿಂತು 'ದಣಿಯರು ಕೂಗಿದಿರಾ?' ಎಂದು ಕೇಳಿದಳು. ಮೂರ್ತಿ ಭ್ರಾಂತನಾದವನಂತೆ:

'ನೀನಾರು?' ಎಂದು ಕೇಳಿದ.

ಅವಳು ಮೂರ್ತಿಯ ವಿಲಕ್ಷಣ ಆಕಾರವನ್ನೂ, ಅವನು ಕೇಳಿದ ಪ್ರಶ್ನೆಯನ್ನೂ ಕೇಳಿ, ಹೆದರಿ ಒಳಕ್ಕೆ ಓಡಿ ಹೋಗಿಬಿಟ್ಟಳು

೨

ವಾರಿಜಾ ತನ್ನನ್ನು ಪ್ರೀತಿಸುವುದೇ ನಿಶ್ಚಯವೆಂದು ಮೂರ್ತಿ ದೃಢವಾಗಿ ನಂಬಿದ. ಅವಳ ಅವ್ಯಕ್ತ ಸ್ವರೂಪದ ವ್ಯಕ್ತರೂಪವು ತನಗಾಗಿ ಮೀಸಲೆಂದು ಅನನ್ಯಭಾವದಿಂದ ತಿಳಿದುಕೊಂಡ. ತನ್ನಂತಹ ಕವಿರಾಜನಿಗೆ ಇಂತಹ ಕವಯಿತ್ರಿ ನೋಹೆಗೊಳ್ಳುವುದು

ಧಾರವಾಡದ ಪ್ರತಿಯೊಬ್ಬ ಸಭಿಗಾರನ ಬಾಯಲ್ಲಿ
ಈಗ ಬರುವ ಹೆಸರಾವುದು ಗೊತ್ತೆ?

ಕಾಲೇಜ್ ಕೆಫೆ

(ಕೆ. ಇ. ಬೋರ್ಡ್ ಕಾಲೇಜಿನ ಆವಾರದಲ್ಲಿ)

ಸಾಯಂಕಾಲ ತಿರುಗಾಡಲು ಬರುವವರು ತಮ್ಮ ಶ್ರಮವನ್ನು
ಒಂದು ಕ್ಷಣದಲ್ಲಿ ಪರಿಹರಿಸಿಕೊಳ್ಳಬಹುದು!
ರುಚಿರುಚಿಯಾದ ತಿಂಡಿ-ತಿನಿಸುಗಳೂ ಪೇಯ-ಪಾನಕಗಳೂ
ನಿಮ್ಮ ಆರೋಗ್ಯವನ್ನು ಹೆಚ್ಚಿಸುವವು!

ಆಕರ್ಷಕ ವ್ಯವಸ್ಥೆ! ಆದರದ ಆತಿಥ್ಯ!

ಒಮ್ಮೆ ಬಂದೇ ನೋಡಬೇಕು!

THE UNION LIFE & GENERAL INSURANCE CO. LTD.

Station Road, Hubli

Wanted Agents & organisers on Commission basis.

Please apply to :—

R. A. Am'e.

Inspector of Agencies

ಅಷ್ಟೇನೂ ಅಸಹಜವಲ್ಲವೆಂದು ತನ್ನಲ್ಲಿ ತಾನೇ ಅಭಿಮಾನವನ್ನು ತಾಳಿಕೊಂಡ. ಅವಳು ಸಂಪಾದಕರಿಗೆ ಬರೆದ ಪತ್ರದಲ್ಲಿ ಈ ಭಾವನವನ್ನು ಪ್ರಕಟಿಸಿರಬಹುದು. ಆದರೆ ಈ ಸಂಪಾದಕರು ಆ ಪತ್ರವನ್ನು ನೇರವಾಗಿ ನನಗೆ ಕಳಿಸದೆ, ಅದರ ಸಾರಾಂಶವನ್ನು ಮಾತ್ರ ಕಳಿಸಿ ತಮ್ಮಲ್ಲಿರುವ ಸಾರಸಂಗ್ರಹ ಶಕ್ತಿಯನ್ನು ಹೊರಪಡಿಸುವ ಅಧಿಕಪ್ರಸಂಗವನ್ನೇಕೆಮಾಡಿದರೋ ತಿಳಿಯದು. ಸಂಪಾದಕರಿಗೆ ಕೂಡಲೇ ಪತ್ರಬರೆದು, ಆ ಮೂಲ ಪತ್ರವನ್ನು ರಜಿಸ್ಟರ್ ಮೂಲಕ ಕಳಿಸಿಕೊಡಲು ಬಿನ್ನವಿಸಿಕೊಳ್ಳಬೇಕೆಂದೂ, ಇನ್ನುಮೇಲೆ ತಮ್ಮ ಪತ್ರವನ್ನು ಓದುವ ಅಧಿಕಪ್ರಸಂಗವನ್ನು ಬಿಟ್ಟು ಬಿಡಬೇಕಾಗಿಯೂ ತಿಳಿಸಬೇಕು. ಪ್ರೇಮದ ಪತ್ರದಲ್ಲಿ ರುಕ್ಷಹೃದಯದ ಸಂಪಾದಕರಿಗೇನು ತಿಳಿಯುತ್ತದೆ ಮಣ್ಣು! ಅವರಲ್ಲಿಯು ವ್ಯಾಕರಣದೋಷ, ವಾಕ್ಯರಚನಾದೋಷ ಮಾತ್ರ ಅವನಿಗೆ ತಿಳಿಯುವ ಮಾತು. ಪ್ರೇಮಕ್ಕೆ ವ್ಯಾಕರಣದ ಕಟ್ಟು ಇರುವುದೆ? ಇಲ್ಲವೆ ವ್ಯಾಕರಣವೆಂದರೆ ಪ್ರೇಮವೆ! ಪ್ರೇಮ ವ್ಯಾಕರಣವಲ್ಲ; ವ್ಯಾಕರಣ ಪ್ರೇಮವಲ್ಲ. ಮೇಲಾಗಿ ನನ್ನ ಪತ್ರವನ್ನು ನನಗೆ ಕಳಿಸದೆ ತಮ್ಮ ಹತ್ತಿರ ಇಟ್ಟುಕೊಳ್ಳುವುದು 'ಹೆತ್ತವರ ಕಿಡುಗಣ್ಣೊಳಗೆ ಕಡುಸಂತಸಕ್ಕೆಡೆಗುಡುವ' ದುಷ್ಟ ಪ್ರವೃತ್ತಿಯೆಂಬುದನ್ನು ಅವರು ತಿಳಿದುಕೊಳ್ಳಬೇಕಾಗಿತ್ತು." ಹೀಗೆ ವಿಚಾರಿಸಿದ ಮೂರ್ತಿ, ಕೂಡಲೇ ಸಂಪಾದಕರಿಗೊಂದು ಪತ್ರ ಬರೆದ:

" ಸಂಪಾದಕಮಹಾಶಯರೆ,

'ವಾರಿಜಾ' ಅವರ ಹಸ್ತಲಿಖಿತ ಪತ್ರವನ್ನು ನನಗೆ ಕಳುಹಿಸಿ ಅವರ ಸಂದೇಶವನ್ನು ಮಾತ್ರ ತಿಳಿಸಿರುವಿರಿ. ತಮಗೆ ಕನ್ನಡ ಬರುತ್ತಿದ್ದರೆ ನನ್ನ ಪತ್ರ ಅರ್ಥವಾಗಬೇಕಾಗಿತ್ತು. ನನಗೆ ಅವರ ವಿಳಾಸ ಬೇಕಾಗಿತ್ತು. ತಾವು ಅದನ್ನು ಬಿಟ್ಟು ಏನೇನೋ ವ್ಯರ್ಥ ಪ್ರಯಾಸಮಾಡಿರುವಿರಿ ದಯವಿಟ್ಟು ಆ ಪತ್ರವನ್ನೂ ಅವರ ನಿಳಾಸವನ್ನೂ ಕೂಡಲೇ ಕಳಿಸಿಕೊಡುವ ಕೃಪೆಮಾಡಿರಿ. ನನಗೆ ಒಂದು ದಿನ ಕಳೆಯುವುದು ಒಂದು ಯುಗ ಕಳೆದಂತೆ ಆಗತೊಡಗಿದೆ. ವಿರಹವು ನನ್ನನ್ನು ದಹಿಸತೊಡಗಿದೆ. ದಯವಿಟ್ಟು ಕೃಪೆಮಾಡಿರಿ.

ಪತ್ರವನ್ನು ಓದಾಲಿಗೆ ಹಾಕಿಬಂದ ಮೂರ್ತಿಯಲ್ಲಿ ನಿಜವಾಗಿಯೂ ವಿರಹದುರಿ ಏಳತೊಡಗಿತು. ಅವನು ಆ ದಿನ ಕಂಡ ರೂಪ ಅವನ ಕೋಣೆಯಲ್ಲೆಲ್ಲಾ ಅಡ್ಡಾಡುವಂತೆ, ತನ್ನನ್ನು ಓರೆಗಣ್ಣಿನಿಂದ ಕೆಣಕುವಂತೆ, ಮಂಜುಳವಾಗಿ ಹಾಡುವಂತೆ— ಭಾಸವಾಗತೊಡಗಿತು. ಅವಳ ಪ್ರತ್ಯಕ್ಷ ಸಾನ್ನಿಧ್ಯಕ್ಕಾಗಿ ಅವನ ಕಾತರಿಸತೊಡಗಿದ. ಅದು ಕೂಡಲೇ ಸಾಧ್ಯವಾಗದ್ದರಿಂದ, ತನ್ನನ್ನ ವಿರಹದುಃಖವನೇಳುವುದು ಅಸಹಜವಲ್ಲವೆಂದು ಭಾವಿಸಿದ. ಕನ್ನಡ ಕಾವ್ಯದಲ್ಲಿ ಈ ವಿರಹಪ್ರಸಂಗಗಳ ಕೊರತೆಯಿಲ್ಲದಿರುವಾಗ ಕನ್ನಡದ ರಸಿಕಕವಿ ವಿರಹಿಯಾಗುವುದೇನು ಆಶ್ಚರ್ಯವೆ?

ಮೂರ್ತಿಯ ವಿರಹ ಅನೇಕ ಕವನಗಳಲ್ಲಿ ಹರಿಯತೊಡಗಿತು. 'ತಾಳತಪ್ಪಿದ ತಲೆಯ ಮೇಳಹೊಂದಿಸುವಂತೆ, ಗಾಳಿಯೊಡ ಬಂದಂತೆ ಬಂದವಳು ನೀನಾರು ಹೇಳು ರಮಣಿ!" ಎಂದ ಪ್ರೇಯಸಿಯನ್ನು ಅಪ್ಪಾನಿಸಿ " ಕೊರಗುತಿರುವೆ, ಮರುಗುತಿರುವೆ ಸೊರಗುತಿರುವೆ ನಿನ್ನ ಬಯಸಿ ಬೇಡುತಿರುವೆ, ನನ್ನ ಸುಂದರಿ!' ಎಂದು ತನ್ನ ಅಂತರಂಗದ ಕಳವಳವನ್ನು ಚಿತ್ರಿಸಿ " ಏತಕೆಂತ ಸುಮ್ಮನಿರುವೆ ಮುಗ್ಧಪ್ರಣಯಿನಿ?" ಎಂದು ಕಾತರಿಸಿ ಕೇಳುತ್ತ " ನಿನ್ನ ಬಿಟ್ಟು ಬಾಳಲಾರೆ, ನಿನ್ನ ವಿರಹ ತಾಳಲಾರೆ" ಎಂದು ತನ್ನ ಹೃದ್ಗತವನ್ನು ನಿವೇದಿಸುತ್ತ " ಭಾವವೇನು ಹೇಳು ಗೆಳತಿ ಭಾವದೇವಿ ನೀ" ಎಂದು ಅವಳನ್ನು ಬಣ್ಣಿಸುತ್ತ " ಕವಿಯ ಕಣ್ಣ ಕೆಣಕಬೇಡ ಮತ್ತೆ ಬಣ್ಣಗೆಡಿಸಬೇಡ ಮಾಟಗಾತಿ ನೀ" ಎಂದು ಸೂಕ್ಷ್ಮವಾಗಿ ಪ್ರೇಮವನ್ನು ಸೂಚಿಸುತ್ತ " ಕಲ್ಲುಗುಡ್ಡ ಕರಗಬಹುದು, ಕೆರೆಯನೀರು ಬತ್ತಬಹುದು, ನನ್ನ ಪ್ರೇಮದುಸಿರು ಮಾತ್ರ ಬತ್ತದೆಂದಿಗೂ" ಎಂದು ಪ್ರೇಯಸಿಗೆ ದೃಢವಾದ ಆಶ್ವಾಸನವನ್ನು ಕೊಟ್ಟ ಈ ಕವನಪ್ರವಾಹವು ಜೋರಿನಿಂದ ಬೀಳತೊಡಗಿತು. ಮೂರ್ತಿ ಈ ಕವನಗಳನ್ನೆಲ್ಲ ಮುದ್ದಾಗಿ ಬರೆದು, 'ನನ್ನ ಪ್ರೇಯಸಿಗೆ ಈ ಸಪ್ತಸುಮನಗಳ ವಿರಹಮಾಲೆಯನ್ನು ಅರ್ಪಿಸಿದ್ದೇನೆ "ವಿರಹಮಾಲೆ" ಎಂದು ತಾವು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬಹುದು' ಎಂದು, ಮೂರ್ತಿ ಈ ಕವನಗಳನ್ನೆಲ್ಲ ಸಂಪಾದಕರಿಗೆ ಕಳಿಸಿಕೊಟ್ಟು ಕೃತಕೃತ್ಯನಾದ.

ಇದಾಗಿ ಎಂಟು ದಿನಗಳಲ್ಲಿಯೇ ಸಂಪಾದಕರಿಂದ ಮೂರ್ತಿಗೊಂದು ಪತ್ರ ಬಂದಿತು. ಅದು ಅವನ ಮೊದಲಿನ ಪತ್ರಕ್ಕೆ, ಉತ್ತರವಾಗಿರದೆ, ಕಳುಹಿಸಿಕೊಟ್ಟ ಕವನಗಳ ಒಪ್ಪಿಗೆಯ ಅಭಿನಂದನಾತ್ಮಕ ಚೀಟಿಯಾಗಿತ್ತು. ಅದರಲ್ಲಿ ಅವರು 'ನಿಮ್ಮ ವಿರಹದುರಿ ಇಷ್ಟು ಪ್ರಖರವಾಗಿರುವುದು ಸಂತೋಷದ ವಿಷಯ. ಕನ್ನಡ ರಸಿಕರಿಗೆ ನಿಮ್ಮ ವಿರಹವೊಂದು ರಸದೂಟ. ಕರ್ನಾಡ ರಸಿಕವೃಂದವು ನಿಮ್ಮ ವಿರಹಮಾಲೆಯ ಎರಡನೆಯ ಕಂತವನ್ನು ನಿರೀಕ್ಷಿಸುತ್ತಿದೆ' ಎಂದು ಬರೆದು, ಕಳುಹಿಸಿದ ಕವನಗಳನ್ನೆಲ್ಲ ಬರುವ ಸಂಚಿಕೆಯಲ್ಲಿಯೇ ಪ್ರಕಟಿಸುವುದಾಗಿ ತಿಳಿಸಿದ್ದರು.

ಮೂರ್ತಿಗೆ ಸಂಪಾದಕರ ಪತ್ರದಿಂದ ಅಭಿಮಾನವೂ ಪ್ರತಿಭಟನೆಯೂ ಒಮ್ಮೆಲೆ ಮೂಡಿದುವು. ತನ್ನ ಕವನಶಕ್ತಿಗಾಗಿ

ಅಭಿಮಾನ, ಸಂಪಾದಕರು ತನ್ನ ಮೊದಲಿನ ಪತ್ರಕ್ಕೆ ಉತ್ತರ ಹಾಕದಿದ್ದುದಕ್ಕಾಗಿ ಪ್ರತಿಭಟನೆ. ಅವನಿಗೆ ಸಂಪಾದಕರನ್ನು ಹರಿದು ತಿನ್ನುವಷ್ಟು ಸಿಟ್ಟು ಬರತೊಡಗಿತು. ಆದರೂ ಈ ಕವನಗಳೆಲ್ಲ ಪ್ರಕಟವಾಗುವುದು ತನ್ನ ಪ್ರೇಮದ ದೃಷ್ಟಿಯಿಂದ ಅಪಶ್ಯವಾಗಿರುವುದರಿಂದ, ಬಂದ ಸಿಟ್ಟನ್ನು ನುಂಗಿಕೊಳ್ಳುತ್ತಾ 'ಪ್ರೇಮತನ' ಎಂದು ಬಗೆದನು. ಅವನು ಬರುವ ಸಂಚಿಕೆಯನ್ನು ಎಮರು ನೋಡುತ್ತ, ಅದು 'ವಾರಿಜಾ'ನ ಮೇಲೆ ಯಾವ ಪರಿಣಾಮವನ್ನುಂಟುಮಾಡಬಹುದೆಂಬುದನ್ನು ನಿರೀಕ್ಷಿಸಬೇಕೆಂದು ಆತುರನಾದನು. ಅವನಿಗೆ ಆ ಹದಿನೈದು ದಿನಗಳನ್ನು ಕಳೆಯುವುದು ಹದಿನೈದು ವರುಷಗಳನ್ನು ಕಳೆದಂತೆ ಎನ್ನಿಸತೊಡಗಿತು.

೩

ಆ ಸಂಚಿಕೆಯಲ್ಲಿ, 'ವಿರಹಮಾಲೆ' ಪ್ರಾರಂಭವಾಗುವ ಮೊದಲು ಅಜ್ಞಾತ ಕುಮಾರಿ 'ವಾರಿಜಾ' ಅವರ ಕವನವನ್ನು ಮೂರ್ತಿ ಕಣ್ಣರಳಿಸಿ ನೋಡತೊಡಗಿದನು. ಆ ಅಷ್ಟಪಟ್ಟದಿಯಂತಿರುವ ಪುಟ್ಟ ಕವನದ ಮೊದಲ ಚರಣ "ನಿನ್ನ ಕವನವೆನ್ನ ಉಸಿರು, ನನ್ನ ಜೀವಕದುವೆ ಕುಸುರು ನೋಡು ಪ್ರಿಯಕರಾ!" ಹೀಗೆ ಪ್ರಾರಂಭವಾದುದರಲ್ಲಿ, ಮೂರ್ತಿ ಬರೆದವಳ ಅಂತರಂಗವನ್ನು ಊಹಿಸಿ, ಗರಿ ಮೂಡಿದವನಂತೆ ಹಾರಾಡಲು ತೊಡಗಿದ. ಅವನ ಪ್ರೇಮ. ದುಂಬಿ ಹೃದಯದುಂಬಿ ಝೇಂಕರಿಸತೊಡಗಿತು. ಅವನು ಲೆಕ್ಕಣಿಕೆಯನ್ನು ಕೈಗೆ ತೆಗೆದುಕೊಂಡೇ ಬಿಟ್ಟ. ಇಂತಹ ಪ್ರೇಮಪುತ್ಥಳಿಯ ಸಾನ್ನಿಧ್ಯವನ್ನು ತಪ್ಪಿಸುತ್ತಿರುವ ಸಂಪಾದಕರನ್ನು ಮನಸಾ ನಿಂದಿಸುತ್ತ ಲೆಕ್ಕಣಿಕೆಯನ್ನು ಓಡಿಸತೊಡಗಿದ. ಅವನ ವಿರಹ ಕಳಕಳಿಸಿ, ಕೆರಳಹತ್ತಿತು. ಅವಕ್ಕಾಗಿ ಪ್ರೇಯಸಿಯನ್ನು ಉರಿತು 'ಮೌನವಿನಿತು ಸಾಕು ಬಾರೆ ಸ್ವಪ್ನಸುಂದರಿ!' ಎಂದು ಹೇಳಿ 'ಉರಿವ ಮನೆಯ ತಾಳಬಹುದು ವಿರಹದುರಿಯ ಸಹಿಸೆನೆ" ಎಂದು ಅಂತರಂಗವನ್ನು ಬಿಚ್ಚಿ 'ನಿನ್ನ ಸ್ಪರ್ಶವಮೃತವರ್ಷ ಕರಿವುದೆಂದು ಕೆಳದಿಯೆ?' ಎಂದು ಕಾತರನಯನದಿಂದ ಕೇಳಿ "ಸಾವುಬಂದರೇನು ಕೆಡುಕು ನಿನ್ನನುಳಿವ ಜೀವಕೆ!" ಎಂದೊಂದು ಬೆದರುಗುಂಡನ್ನು ಹಾರಿಸಿ "ವಿರಹದುರಿಗೆ ಜೀವ ಮುನ್ನ ಬಂದು ಕರವ ಹಿಡಿಯೆಯಾ?" ಎಂದು ಕೊನೆಯ ಎಚ್ಚರಿಕೆಯನ್ನು ಕೊಟ್ಟು, ಈ ವಿರಹಮಾಲೆಯ ಎರಡನೆಯ ಕಂತಕ್ಕೆ 'ಪಂಚಬಾಣ' ಎಂಬ ಇನ್ನೊಂದು ಹೆಸರನ್ನು ಕೊಟ್ಟು, ಕೂಡಲೇ ಸಂಪಾದಕರಿಗೆ ಅದನ್ನು ಕಳಿಸಿ, ಜೊತೆಗೆ ಇನ್ನೊಂದು ಗುಪ್ತಪತ್ರವನ್ನಿರಿಸಿ, ಮೂರು ದಿನಗಳಲ್ಲಿಯೇ 'ವಾರಿಜಾ' ಅವರ ವಿಳಾಸವನ್ನೂ, ಅವರ ಅಲ್ಪ ಪರಿಚಯವನ್ನೂ ಕಳಿಸಬೇಕಾಗಿ ಪ್ರಾರ್ಥಿಸಿದನು.

ಈ ಮೂರು ದಿನಗಳನ್ನು ಕಳೆಯುವುದು ಮೂರ್ತಿಗೆ ಒಂದು ಮಹಾಕಾವ್ಯಯೋಗವಾಗಿಯೇ ಪರಿಣಮಿಸಿತು. ಅವನಿಗೆ ಊಟ ರುಚಿಸಲೊಲ್ಲದು. ನಿದ್ರೆ ಹಾರಿಯೋಯಿತು. ಕಣ್ಣು ಮುಚ್ಚಿದಾಗ ವಾರಿಜಾನದೆಂದು ತಿಳಿದುಕೊಂಡ ಸುಂದರ ಸ್ವರ್ಗೀಯ ಮುಖ ಕಣ್ಣೆದುರು ಕುಣಿಯಹತ್ತಿತು. ಇದು ಬಹಳ ಹಿತವಾಗಿ ಪರಿಣಮಿಸಿದ್ದರಿಂದ, ಅವನು ಯಾವಾಗಲೂ ಕಣ್ಣು ಮುಚ್ಚಿಕೊಂಡು ವಾರಿಜಾಧ್ಯಾನ ನುನಸ್ಯನಾಗಿ, ವಾರಿಜಾಯೋಗ ಸಮಾಧಿಯಲ್ಲಿಯೇ ಇರತೊಡಗಿದನು. ಅವನ ಸಮಾಧಿ ಇಳಿಯುವ ಜಂಬಲ ಅವನಿಗೆ ಇಲ್ಲದಿರುವಾಗ, ಆ ಸಮಾಧಿ ಇಳಿಯುವುದೆಂತು?

ನಾಲ್ಕನೆಯ ದಿನ ಬಂತು. ಸಂಪಾದಕರಿಂದ ನಿರೀಕ್ಷಿಸುವ ಪತ್ರವೂ ಬಂದಿತು. ಮೂರ್ತಿ ಸಂತೋಷದಿಂದ ಉಬ್ಬಿ, ಆ ಪತ್ರವನ್ನು ಕೋಣೆಗೆ ತೆಗೆದುಕೊಂಡು ಹೋಗಿ, ತನ್ನ ಹೃದಯವನ್ನೇ ಮಿಡಿಯುತ್ತಿರುವಂತೆ ಒಮ್ಮೆ ಅವನ್ನು ಮೃದುವಾಗಿ ಅದುಮಿ ಅದರ ಬಾಯಿ ತೆರೆದನು. ಅವನ ಸಿಟ್ಟು ಕಳಕಳಿಸಿತು. ಪತ್ರದಲ್ಲಿ ಅವನಿಗೆ ಬೇಕಾದ ಪ್ರಿಯಕರ ವಾರ್ತೆಯಿರದೆ, ದಪ್ಪಕ್ಷರದಲ್ಲಿ ಸಂಪಾದಕರು 'ನಿನ್ನ ಕವನಗಳೆಲ್ಲ ಮುಟ್ಟಿದುವು' ಎಂದು ಮಾತ್ರ ಬರೆದಿದ್ದರು. ಸಂಪಾದಕರ ಈ ರುಕ್ಷಹೃದಯವನ್ನು ಕೆಣಕದೇ ಗತ್ಯಂತರವಿಲ್ಲವೆಂದು ನಿರ್ಧರಿಸಿ, ಕೂಡಲೇ ಅವರಿಗೊಂದು 'ಎಕ್ಸಪ್ರೆಸ್ ಡಿಲಿವ್ಹರಿ' ಪತ್ರವನ್ನು ಬರೆದನು. ಅದರ ಒಕ್ಕಣಿಕೆ ಇದು:

"ಸಂಪಾದಕರೆಂಬ ಮಹಾಶಯರೆ,

ನಾನೇನು ನಿಮಗೆ ಸ್ವತಂತ್ರ ಹೀದುಸ್ತಾನದಲ್ಲಿ ಅಂಚೆಖಾತೆ ಸರಿಯಾಗಿ ಕೆಲಸಮಾಡುವುದೋ ಇಲ್ಲವೋ ಎಂದು ಕೇಳಿರಲಿಲ್ಲ. ಟಪಾಲಿಗೆ ಹಾಕಿದ ಪತ್ರಗಳು ಮುಟ್ಟುವುವೆಂಬುದನ್ನು ಅರಿಯದಷ್ಟು ನಾನು ಮೂಢನಲ್ಲ ತಿಳಿಯಿತೇ? ನನಗೆ ಬೇಕಾದದ್ದು ವಾರಿಜಾಕುಮಾರಿಯ ವಿಷಯವೆಂಬುದನ್ನು ನೀವು ಅರಿತರೂ, ಅದರ ಉತ್ತರವನ್ನು ಕೊಡದಿರುವ ನಿಮ್ಮ ಸಾಹಸವು ಆಕ್ಷಮ್ಯವಾದುದು. ಕೂಡಲೇ ಈ ಪತ್ರಕ್ಕಾದರೂ ಏನಾದರಗಳನ್ನು ತಿಳಿಸಿರಿ."

ಪತ್ರವನ್ನು ಮೂರ್ತಿ ಸ್ವತಃ ತಾನೇ ಹೋಗಿ ಟಪಾಲಿಗೆ ಹಾಕಿ ಬಂದ. ಮರುದಿನವೇ ಉತ್ತರ ಬಂದಿತು. ಅದರಲ್ಲಿ ಸಂಪಾದಕರು ಗೊಡ್ಡು ಹರಟೆಯನ್ನು ಹೊಡೆದು "ತಮ್ಮ ಕಾವ್ಯಝರಿ ನಿರರ್ಗಳವಾಗಿ ಹರಿಯಬೇಕಾದರೆ, ವಾರಿಜಾನ ಸಮಾಚಾರವನ್ನು ಗುಪ್ತವಾಗಿಡುವುದೇ ನನ್ನ 'ಸಂಪಾದಕತನ' ಎಂದು ನಾನು ತಿಳಿದಿರುವೆನಾದ್ದರಿಂದ, ದಯವಿಟ್ಟು ಆ ವಿಷಯವನ್ನು ತಾವು ಮತ್ತೆ ಮತ್ತೆ ಕೇಳಕೂಡದು. ಕ್ಷಮಿಸಿ" ಎಂದು ಬರೆದಿದ್ದರು.

ಮೂರ್ತಿ ಸಂಪಾದಕರ ಈ ಉದ್ದಟತನಕ್ಕಾಗಿ ಕರಕರ ಹಲ್ಲು ತಿನ್ನತೊಡಗಿದ. ತನ್ನ ನೋವಿನೊಡನೆ ಚೆಲ್ಲಾಟವಾಡುವ ಈ ಸಂಪಾದಕರು ಮನುಷ್ಯವರ್ಗಕ್ಕಾದರೂ ಸೇರಿರುವರೋ—ಎಂಬ ಸಂದೇಹವೇ ಬಂದಿತವನಿಗೆ. ಒಮ್ಮೆ ಪ್ರತ್ಯಕ್ಷವಾಗಿ ಹೋಗಿ ಬಂದು ಎಲ್ಲವನ್ನೂ ನಿರ್ಧರಿಸಬೇಕೆಂದು ನಿಶ್ಚಯಿಸಿದ. ಆವನ ಹೃದಯದೊಂದು ತಾಂಡವವೆ ತವರೂರಾಯಿತು. ಪತ್ರವನ್ನು ಚರಚರನೆ ಹರಿದು ಬೀಸಾಕಿದ. "ನನ್ನ ಕಾವ್ಯಝರಿ ಹರಿಯಬೇಕಾದರೆ ವಾರಿಜಾ ಗುಪ್ತಳಾಗಿರಬೇಕಂತೆ. ಇದೆಂತಹ ಕಟುಕತನ! ನಿರ್ಲಜ್ಜತನ! ಪಾಪ! ಅವಳಿಷ್ಟು ಕಾತರದಿಂದ ಕುದಿಯುತ್ತಿರುವಳೋ! ಪ್ರಿಯಕರನ ಸಮಾಗಮಕ್ಕಾಗಿ ತಾತೊರೆಯುತ್ತಿರುವಳೊ! ಬಂದ ಲೇಖನಗಳನ್ನು ತಿದ್ದುವುದರಲ್ಲಿಯೇ ಜನ್ಮ

ಅಡಿಗೆ ಮಾಡಲು ಅತ್ಯುತ್ತಮ ವನಸ್ಪತಿ

ಕಾಮಧೇನು

ಬಟ್ಟೆ ಹಸನಾಗಿ ಒಗೆಯಲು—

ಕಾವೇರಿ ಬಾರ್ ಸೋಪ್, ಚಿಪ್ಸ್

ಮೆಟ್ಟೂರ್ ಕೆಮಿಕಲ್ ಎಂಡ್ ಇಂಡಸ್ಟ್ರಿಯಲ್
ಕಾರ್ಪೋರೇಶನ್ ಲಿಮಿಟೆಡ್ ಅವರ
ಧಾರವಾಡ, ಬೆಳಗಾಂವ ಮತ್ತು ಕಾರ-
ವಾರ ಜಿಲ್ಲೆಗಳ ಅಧಿಕೃತ
ಪಂಚಿಕೆಗಾರರು—

ಎಸ್. ಟಿ. ದಾಬಡೆ,
ವಿಜಯ ರೋಡ್, ಧಾರವಾಡ.

ಸವಿಸಿವ ಸಂಪಾದಕರು. ಹೃದಯವನ್ನು ಕೂಡ ಕೂರಿಬಿಡುವುದು ಯಾವ ನ್ಯಾಯ! ನನಗಾಗಿ ಅವರಿಗೆ ಅಭಿಮಾನವಿಲ್ಲ. ನನ್ನ ಕವನಕ್ಕಾಗಿ ಅವರು ಬಾಯಿತೆರೆದಿರುವರು. ವಾರಿಜಾನನ್ನರಿಯದ ನಾನು ಇನ್ನು ಕವನ ಬರೆಯುವುದು ಸಾಧ್ಯವೆ? ವಾರಿಜಾ! ವಾರಿಜಾ! ಎಂತಹ ಹೂವಿನಂತಹ ಹೆಸರು....."

ಕೆಲಹೊತ್ತಿನ ನೀಲೆ ಮೂರ್ತಿ ದೃಢವಾಗಿ ಎದ್ದು, ಸಂಪಾದಕರಿಗೊಂದು ವಿಸ್ತಾರವಾದ 'ಟೆಲಿಗ್ರಾಂ' ಕೊಟ್ಟುಬಂದ. ಅವರಲ್ಲಿ ಸಂಪಾದಕರು ಕೂಡಲೇ ವಾರಿಜಾನ ವಿಷಯವನ್ನು ತಿಳಿಸಬೇಕೆಂದೂ, ಇಲ್ಲದಿದ್ದರೆ ಅದನ್ನು ತಾನೇ ತಿಳಿದುಕೊಳ್ಳಲು ಬರುವುದು ಅನಿವಾರ್ಯವಾಗಬಹುದೆಂದೂ ಕಾಣಿಸಿದನು.

ಎರಡು ದಿನ ಯಾವ ಸುದ್ದಿಯೂ ಬರಲಿಲ್ಲ. ಮೂರ್ತಿ ಆ ದಿನಗಳಲ್ಲಿ ಅನುಭವಿಸಿದ ನೋವನ್ನು ವಿರಹಿಗಳೇ ಬಲ್ಲರು. ಅವನಿಗೆ ಕುಳಿತಾಗ, ನಿಂತಾಗ, ಉಣ್ಣುವಾಗ, ಮಲಗುವಾಗ, ನಿದ್ರೆಯಲ್ಲಿ, ಕನಸಿನಲ್ಲಿ ಕೂಡ ವಾರಿಜಾನ ಸುಂದರ ಮುಖವೇ ಕಾಣತೊಡಗಿತು. ಆ ಮುಖಕ್ಕಾಗಿ ಹಂಬಲಿಸಿ ಬರೆದ ಕವನಗಳನ್ನು ಅವನು ದಿನಾಲು ಪಾರಾಯಣ ಮಾಡತೊಡಗಿದನು. ಆ ಪಾರಾಯಣದಲ್ಲಿ ಮಾತ್ರ ಅವನಿಗೆ ಅಪೂರ್ವಸುಖ ಸಿಗುತ್ತಿತ್ತು.

ಮೂರನೆಯ ದಿನ ಮೂರ್ತಿ ಹೌಹಾರಿದವನಂತೆ ಎದ್ದು, ನೇರವಾಗಿ ಟಪಾಲುಕಚೇರಿಗೆ ಹೋದ. ಅಲ್ಲಿಯ ಅಂಚೆಯ ಜವಾನನನ್ನು 'ನನ್ನ ಪತ್ರ ಬಂದಿದೆಯೇ?' ಎಂದು ಕೇಳಿದ. ಅವನು ಆವನನ್ನು ನೇರವಾಗಿ ನೋಡುತ್ತ 'ರಾಯರೆ! ಟಪಾಲುಬರುವ ವೇಳೆ ಇನ್ನೂ ಮೂರು ತಾಸು ಅಲ್ಲವೆ?' ಎಂದು ಕೇಳಿದ.

ಮೂರ್ತಿ ನಿರಾಶೆಯಿಂದ ಮನೆಗೆ ಹೋಗಿ ಕೋಣೆಯಲ್ಲಿ ಬಿದ್ದುಕೊಂಡ. ಉತ್ಸಾಹ ಕುಂದಿದ ಕಳೆ ಮುಖದಲ್ಲಿ ಮೂಡಿತ್ತು.

ಅಂಚೆಯ ಜವಾನ ತಂದುಕೊಟ್ಟ ಪತ್ರವನ್ನು ಮೂರ್ತಿ ಬಣ್ಣನೇ ಹಾರಿ ಹಿಡಿದುಕೊಂಡ. ಲಗುಬಗೆಯಿಂದ ಅದರ ಬಾಯಿ ತೆರೆದ. ಅದೇ ಸಂಪಾದಕರ ಅಕ್ಷರಗಳು. ಸಂಪಾದಕರ ಒಕ್ಕಣಿಕೆ ಹೀಗೆ ಇತ್ತು:

"ಪ್ರಿಯ ಮೂರ್ತಿಯವರೆ,

ನಿಮ್ಮ 'ವಿರಹನಾಲೆ' ಕನ್ನಡ ರಸಿಕರಿಗೊಂದು ರಸದೂಟ. ನಿಮ್ಮ 'ಪಂಚಬಾಣ' ಪ್ರೇಮಿಗಳಿಗೊಂದು ಪರಮಾನ್ನ. ಅದಕ್ಕೆ ಕಾರಣಳಾದ 'ವಾರಿಜಾ' ಕನ್ನಡ ಕುಲರಸಿಕರಿಗೆ ಒಂದು ಉಪಕಾರವನ್ನೆ ಮಾಡಿದ್ದಾಳೆ. ಈ ವಿರಹ ನಿಮ್ಮಲ್ಲಿ ನಿರಂತರವಾಗಿದ್ದರೆ ಕನ್ನಡ ಕಾವ್ಯಸಂಪತ್ತು ಇನ್ನೂ ಉಜ್ವಲವಾಗಿ ಬೆಳೆಯಬಹುದಾಗಿತ್ತು. ಅಷ್ಟು ರಸವತ್ತಾಗಿವೆ ನಿಮ್ಮ ಕವನ; ಆದರೆ ಕನ್ನಡ ನಾಡು ಈ ಯೋಗವನ್ನು ಕಳೆದುಕೊಳ್ಳುವ ಸಂದರ್ಭ ಬಂದುದಕ್ಕಾಗಿ ನನಗೆ ಅತ್ಯಂತ ವಿಷಾದವಾಗಿದೆ. ಆದರೂ ನಿಮ್ಮ ಹಟದ ಮುಂದೆ ನನ್ನ ಹಟ ನಿಲ್ಲದು. ಆದುದರಿಂದ ವಾರಿಜಾನ ಪರಿಚಯವನ್ನು ಇದೋ ಮಾಡಿ ಕೊಡುತ್ತಲಿದ್ದೇನೆ. ರಸಿಕ ಮಹಾಶಯ, ಆ ವಾರಿಜಾ ಮತ್ತಾರೂ ಆಗಿರದೆ, ನಿಮ್ಮ ಅಭಿಮಾನಿಯೂ ೫೫ ವರುಷದ ಮುಪ್ಪಿನ ಸಂಪಾದಕನೂ ಆದ ನಾನೇ ಇರುತ್ತೇನೆ. ನಮಸ್ಕಾರ."

ಮೂರ್ತಿಯ ಕೈಯಿಂದ ಪತ್ರ ಕಳಚಿ ಬಿದ್ದಿತು.....

ಬಿದ್ದ ಪತ್ರ, ಗಾಳಿಯ ಸುಳಿಗೆ ಸಿಕ್ಕು ಕೋಣೆಯಲ್ಲಿ ಅತ್ತಿತ್ತ ಹಾರಾಡ ತೊಡಗಿತು.....

ಮೂರ್ತಿ ಆ ಪತ್ರವನ್ನು ಗಟ್ಟಿಯಾಗಿ ಹಿಡಿದು 'ನನ್ನ ವಾರಿಜಾ ನನ್ನ ಕವನದಲ್ಲಿದ್ದಾಳೆ' ಎಂದು ಕಿಲಕಿಲನೆ ನಕ್ಕ.

ಓಂ ಅಶಾಂತಿಃ !

(ಮುಕ್ತಛಂದದಲ್ಲಿ)

★

ಪ್ರೊ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗಲಿ

ಯಾವುದಿಂದಿನ ಮಂತ್ರ ?
ಜೀವಜೀವರ ಹೃದಯಗಹ್ವರದಲ್ಲಿ
ಹೊಕ್ಕಾಡಿ ಹೊರಬಂದು ಮಾತಿನಲಿ ಕೃತಿಯಲ್ಲಿ
ಸುರುನುಡಿವ ಮಂತ್ರವಾವುದು ?
ಬೇರಾವುದು ? ಕಿವಿದೆರೆದು ಕೇಳು ಕೇಳು :
ಓಂ ಅಶಾಂತಿಃ, ಓಂ ಅಶಾಂತಿಃ, ಓಂ ಅಶಾಂತಿಃ !
' ನನಗಿಲ್ಲ ಶಾಂತಿ ! ಯಾರಿಗೂ ಇಲ್ಲ ಶಾಂತಿ !
ಬೇಕಾದುದೆನಗೆ ದೊರೆತಿಲ್ಲ, ಬೇಡಾಡುದೆನ್ನ ತೊರೆದಿಲ್ಲ.
ನನಗೆ ಸಲ್ಲುವುದೆನ್ನ ಬಳಿ ಬರಲೊಲ್ಲದು, ಬಾಳು ನಿಲ್ಲದು.
ಕ್ರೂರವಿಧಿಯೆನ್ನ ಬೆನ್ನಟ್ಟಿ ಹಿರಿಹೊಂಚು ಹಾಕಿ
ಅನ್ನವನು, ಧನವನ್ನು, ಮಾನವನು, ಸುಖವನ್ನು
ಪ್ರಾಣವೊಂದನು ಬಿಟ್ಟು ಎಲ್ಲವನು ಕಸಿಯುತಿದೆ.
ಬದುಕಿನಾವಗೆಯಲ್ಲಿ ಕುದಿಕುದಿಸಿ ಕೊಲ್ಲುದೆಯೆ
ಕೊಲ್ಲುತಿದೆ—
ನಮ್ಮ ಕರ್ಮದ ಕಾಡುಕೋಣನನು ತಾನೇರಿ
ವಿಷದ ಬದುಕಿನ ಪಾಶವನು ನಮ್ಮೊಳು ಬೀಸಿ
ಬಾಳಿಸಿ ಸಾಯಿಸುವ ಹೊಸ ಕರಾಳ ಯಮನಂತೆ !
' ಬದುಕಿನಲಿ ಸಿರಿಯಿಲ್ಲ, ಸವಿಯಿಲ್ಲ, ನೆಮ್ಮದಿಯಿಲ್ಲ '
ಈ ಇಲ್ಲಗಳ ಇಲ್ಲಣವಿಡಿದ ಮನೆ-ಮನೆಗೆ
ಪತ್ತಿದುರಿಯಾಗಿ ಅಶಾಂತಿ ತನ್ನ ಕೆನ್ನಾಲಗೆ-
ತಂಡವನು ದಿಕ್ಕುದಿಕ್ಕಿನಲಿ ಹೊರಚಾಚಿ ಬಾನ ಬಾಚಿ
ನೆರೆಮನೆಗಳ ಸೀದು ತೇಗಿ ತಣಿದು
ಅಶಾಂತಿಸಂಥವ ಬಲಿಸಿ ಶಾಂತಿಯೆಂಬುದ
ಕಾಂಬುದೇನೊ !

* * *

ಇಲ್ಲದವರಿಗಿಲ್ಲವೆಂಬ ಅಶಾಂತಿ.
ಇದ್ದವರಿಗಿನ್ನು ಮಿಗಿಲಾದುದಿಲ್ಲೆಂಬ ಅಶಾಂತಿ.
ಬೇಡಿ ಬಳಲುವ ಎತ್ತರದ ಹದ್ದುಕಣ್ಣಿಗೆ
ಇದ್ದುದದಂ ತೀರ ತುಸು, ಇಲ್ಲವೆಂದರು ಲೇಸು.
ಯಾರ ಗೋಣನು ಮುರಿದರೇನು, ಯಾರ ಎದೆಯನು
ತುಳಿದರೇನು,
ಸುಳ್ಳುಮೋಸಗಳನೇಸು ಸಲ ಹಾಸಿ ಹೊದ್ದರು ಏನು,
ಎಣಿಕೆಯಿಲ್ಲದ ಹಣ, ಗಣಿಕೆಯೊಂದಿಗೆ ಸುಖದ ಕ್ಷಣ,
ಎಲ್ಲ ಸುಖಸಾಧನ ಬೇಕು, ಇನ್ನೂ ಬೇಕು,
ಎಲ್ಲೆಡೆಗಳಲ್ಲಿ ಮಾನ, ಎಲ್ಲರ ಬಾಯಲ್ಲಿ ಸ್ತುತಿಗಾನ—
ಕಾಮನೆಗೆ ಕೊನೆಯಿಲ್ಲ, ಕೊಟ್ಟಂತೆ ಕೊನರುವುದು.
ಇದ್ದರು ಅಶಾಂತಿ, ಇಲ್ಲದಿರೆಯೂ ಅಶಾಂತಿ.

* * *

ಈ ಕದಡಿ ಕೆರಳಿದ ಕಾಲಸಾಗರದಲ್ಲಿ
ಅಶಾಂತಿಯ ದ್ವೀಪಗಳು ಹೊಯ್ದಾಡಿ ಸಿಡಿದೆದ್ದು
ಒಂದನೊಂದನು ತಾಕಲಾಡುತಿರುವಲ್ಲಿ—
ಬಂಡೆಯಲಿ ಕಾಲೂರಿ ಬಾನಿನಲ್ಲಿ ಕೈಯೆತ್ತಿ
ಶಾಂತಿಯನು ಬಯಸಿ ಅಶಾಂತಿಯಲಿ ಮುಳುಗಿ
ನಿಂದಿಹುದೊಂದು ಜೀವದ ದೀಪಸ್ತಂಭ
ಒಂಟಿಯಾಗಿ ಆಂಟಿ ನಿಂದಿಹುದೆ ಆದರ ದಂಭ.
ಕೆಳೆಯ ಬೇಡುವ ಆದರ ಕೈಹಿಡಿದು ಕುಲುಕಿ ಸವಿನುಡಿದು
ಕೆಳಗೆಳೆದ ಕುಹಕಿಗಳೆ ಸುತ್ತು ನೆರೆದಿಹರು.
ಮೊಸಳೆಗಳ ಮಧ್ಯದಲಿ ಸಿಲುಕಿದ ಹಸುಳೆಯಂತೆ
ಹೊರಬರದೆ ಒಳಗಿರದೆ ವಿಲಿವಿಲಿಸುತಿಹುದು.
ಹೃದಯದ ಮೊರೆಯ ಕೇಳುವರಿಲ್ಲ,
ತಿಳಿವಿನ ತಿರುಳ ಹೇಳುವರಿಲ್ಲ.
ಸ್ವಾರ್ಥಯಜ್ಞಕೆ ಬಲಿಗೈದ ಕುರಿಯ ಸಿಂಗರಿಸಿ
ಹಸುರ ಮೇಯಿಸುವಂತೆ ಸವಿಯಾಡಿ ಕೊಂಡಾಡಿ
ಜೀವಕೊಳ್ಳುವರಿಹರು ಬೇಡಿದಷ್ಟು ಜನ.
ವಕ್ರಪಂಥದ ವಾಮವಿದ್ಯಾನಿಪುಣ ಎರಡುನಾಲಗೆ ಜಾಣ
ನಾಗರಿಕ ನಾಗರ ಹಾವುಗಳು ಸುತ್ತು ಸುಳಿಯುತಿಹವು.
ಬಾಯ್ತುಂಬ ಉಚ್ಚತಮ ಉಕ್ತಿಗಳ ಉಚ್ಚಾರ,
ಮನವೆಲ್ಲ ಅಧಮತಮ ಭಾವಗಳ ಸಂಚಾರ.
ಆಡುವುದೊಂದು, ಮಾಡುವುದೊಂದು,
ಆದರೇನು, ಮಾಡಿದುದಕೆಲ್ಲ ತತ್ತ್ವದ ಬೆಂಬಲ,
ನೀತಿಯ ನೆಲಗಟ್ಟು ಇಹುದೆಂಬ ಭ್ರಾಂತಿಯೋಗ.
ಹೃದಯವ ಕೊಳೆಯನ್ನು, ಕೃತಿಯ ಕೀಳ್ಮೆಯನ್ನು
ಮಣ್ಣಿನಲಿ ಮುಚ್ಚಿ ನಿರ್ಮಲಿನವೆಂದು ತೋರುವ
ಮತಿಯೊಂದ ನೀಡಿಹುದು ಇವರ ದೈವ
ಆತ್ಮನಾಶಕೆನೆ ಮಾಡಿದ ಸೀಳುದಾರಿಯಾಗಿ.
ತನ್ನ ಕರ್ಮದ ಕಾಳಿವಡುವಿನಲಿ ಸಿಲುಕಿ
ತನ್ನ ಕಾಮದ ಕನಕಮೃಗಕಾಗಿ ಸಿಲುಕಿ
ಬಲವ ಪಡೆಯದೆ ಶಾಂತಿದೊರೆಯದೆ
ಹುರಪಳಿಸಿದ ಜೀವವಿದು ಬಂದು ನೆಲಸಿಹುದು
ಇಂಥ ಹಿತಶತ್ರುಗಳ ಗಂಟಲಲಾಣರ ನಟ್ಟನಡುವೆ.

* * *

ದಿನದಿನಕೆ ಶಾಂತಿ ಹಿಂಜಾರುವುದು
ಅಶಾಂತಿ ಉರಿದೆದ್ದು ಮುಂದೋರುತಿಹುದು.
ಎಲ್ಲರನು ಪ್ರೀತಿಸು, ಯಾರಲ್ಲಿಯೂ ಹಗೆಸಲ್ಲ—
ಎಂಬ ಜೀವನಕೆ ವಿಧಿಯು ಕಟ್ಟುಣಕದ ಕಾಣಿಕೆಯಿದು.
ಪರಿಸರದಿ ಎಳ್ಳನಿತು ಬದಲಿಲ್ಲ.
ಬದಲಿರದೆ ಎಳ್ಳನಿತು ಮುದವಿಲ್ಲ. ತಣಿವಿಲ್ಲ.
ಎಲ್ಲ ಕಾಮಗಳ ತೊರೆದು ನಿಸ್ಪೃಹನಾಗಿ
ನಾನೆಂಬುದನು ನನ್ನದೆಂಬುದನು ನೀಗಿ
ನಿಂತವನೆ ಶಾಂತಿಹೊಂದುವನು—ಎಂದಿತು ಗೀತೆ
ಸುಖವೆಲ್ಲ ಆತ್ಮದಲಿ ಎಂದು ಸಾರಿದ ಸೂತೆ.
ಅದು ಹೇಗೆ ತೊರೆಯುವುದು ಎಲ್ಲ ಕಾಮಗಳನು ?
ನಾನೆಂಬುದಿಲ್ಲದ ಬಾಳಿದೇನು ?
ಸುಖದ ಸಾಗರವನ್ನೆ ನುಂಗಿ ನೀರ್ಕುಡಿಯಲೆನೆ
ಒಳಗಿಚ್ಚು ನಿಗಿನಿಗಿಸುತಿರೆ ಎಲ್ಲಿದೆ ಆತ್ಮ ?
ಸಂತಪ್ತಹೃದಯದ ಭೀಕರಾಕೃತಿ ಕಂಡು
ವಿವೇಕಶಿಶು ಬೆಬ್ಬಳಿಸಿ ನೆಲತಬ್ಬಿಕೊಂಡಿತು.
ಕಾಮಲೋಹವ ಪ್ರೇಮಸಾರಜದಿಂದ ಜೊನ್ನಾಗಿಸಿ
ಬೇಡಿ ಕೊರಗದೆ ಕೊಡುತ ಹಿಗ್ಗುವ ಕಲೆಯಾಗಿಸಿ
ಶಾಂತಿಸುಖವನು ಪಡೆದ ಅನುಭವದ ಲಹರಿಗಳು
ಇಂದಿನೀ ಅಲ್ಲೋಲಕಲ್ಲೋಲದಲ್ಲಿ ಅಡಗಿದವು,
ತಳತಳದಿ ಮಡಗಿದವು.
ಬೆಳೆಯುತಿರೆ ಅಶಾಂತಿ, ಜೀವಕೂಗಿತು ಆಗ :
'ನಮೊನಮ ಓ ಅಶಾಂತಿ, ನೀನಿಂದು ಎನ್ನ
ಆರಾಧ್ಯ ದೈವ !
ನನ್ನ ಮೈಯನು ಮುತ್ತು, ಮನವನು ತುತ್ತು,
ಒಳಗೊಳಗೆ ಹೊತ್ತು ದಣಿದಣಿಸಿ ದಳ್ಳುರಿಯಾಗಿ !
ಹಿಂಜರಿಯದಿರು, ಕನಿಕರಿಸದಿರು,
ಪ್ರತಾಪ ಪರಮಾವಧಿಯ ತರುಬದಿರು;
ಜಿಯ್ಯುಡುವ ಜೀವನದ ವನದೆಲ್ಲ
ಕಾಡುತನವನ್ನು ಬಯಲಿಗೆಳೆ;
ನನ್ನ ಬಾಳಿನ ಬುರುಕೆಯನು ಹಾರಿಸುತ
ನಗ್ನ ಸತ್ಯಕ್ಕೆ ಕನ್ನಡಿ ಹಿಡಿದು ತೋರಿಸು;
ಅಗ್ನಿ ದೇವತೆಯಾಗಿ ಪ್ರಜ್ವಲಿಸಿ ಸುತ್ತರಿದು ನಿಲ್ಲು,
ಶಾಂತಿಯೆಂಬುದಿರೆ, ನಿನ್ನ ಗರ್ಭದಿ ಜನಿಸಿ
ಬಂದೀತು, ನಿಂದೀತು ನವಯುಗದ ಅವತಾರವಾಗಿ.
ಓಂ ಅಶಾಂತಿಃ ಓಂ ಅಶಾಂತಿಃ ಓಂ ಅಶಾಂತಿಃ.

ಇತ್ತ ಲಕ್ಷ್ಯ ಕೊಡುವಿರಾ ?

ನಮ್ಮಲ್ಲಿ ಮುಂಬಯಿಯ ಸ್ವಸ್ತಿಕ ಆಯಿಲ್ ಮಿಲ್ಸ್‌ನ ಎಲ್ಲ ಬಗೆಯ ಸಾಬೂನು, ಸುಗಂಧದ ಎಣ್ಣೆಗಳು, ವನಸ್ಪತಿ ಮುಂತಾದುವು ಕಂಪನಿಯ ಬೆಲೆಗೆ ದೊರೆಯುವವು.

ಅಲ್ಲದೆ

ಮುಂಬಯಿಯ 'ಸರದಾರ್ ಕ್ಯಾರ್‌ಬಾನಿಕ್ ಗ್ಯಾಸ್ ಕಂ.' ಇವರ ಗ್ಯಾಸ್ ಸಿಲಿಂಡರ್‌ಗಳು, ಸೋಡಾವಾಟರ್ ಮಶಿನ್‌ಗಳು ಮತ್ತು ಅದಕ್ಕೆ ಬೇಕಾಗುವ ಬಿಡಿ ಭಾಗಗಳು, ಪೇಯದ ಎಸೆನ್ಸುಗಳು, ಸೋಡಾ ಬಾಟ್ಲಿಗಳು, (ಜರ್ಮನ್ ಮೇಕ್)
ನಮ್ಮಲ್ಲಿ ಅತ್ಯಂತ ಯೋಗ್ಯ ಬೆಲೆಗೆ ದೊರೆಯುವವು.

ಎಚ್. ವ್ಹಿ. ಗುತ್ತೀಕರ್, ಮಾರುತಿಗಲ್ಲಿ, ಬೆಳಗಾಂವ

ಬೆಳಗಾಂವ ಮತ್ತು ಧಾರವಾಡ ಜಿಲ್ಲೆಗಳಿಗೆ ಏಜಂಟರು

ಸ್ವಸ್ತಿಕ ಕೆಮಿಕಲ್ ಕಂ. ಮತ್ತು ಸರದಾರ್ ಕ್ಯಾರಬಾನಿಕ್ ಗ್ಯಾಸ್ ಕಂ. ಮುಂಬಯಿ.

ಕನ್ನಡ ಭಾರತದ ಕರ್ಣ

(ಸ್ಥಾಲೀಪುಲಾಕ)

ಡಿ. ಗೋವಿಂದ ಪೈ, ಮಂಜೇಶ್ವರ

ಕನ್ನಡ ಭಾರತಗಳಲ್ಲಿ ಕರ್ಣನಿಗೆ ಕೊಟ್ಟಿರುವ ಗೌರವ ತುಂಬ ದೊಡ್ಡದು. ಕರ್ಣನ ಚಾಗ, ನನ್ನಿ, ಕಲಿತನಗಳು ನಮ್ಮ ಕವಿಗಳ ಮನಸ್ಸು ಹೃದಯಗಳನ್ನೇ ಆಕರ್ಷಿಸಿ ಬಿಟ್ಟಿವೆ. ಎಂತಲೆ ಪಂಪ-ಕುಮಾರವ್ಯಾಸರು ಕರ್ಣನನ್ನು ಮನಮೆಚ್ಚಿ ಹಾಡಿದ್ದಾರೆ.

★

ಕರ್ಣನೆಂದರೆ ಮೊತ್ತಮೊದಲಲ್ಲಿ ಮಹಾದಾನಪತಿ, ಮಹಾತ್ಯಾಗಿ, ತನ್ನನ್ನೇ ಆದರೂ ಬೇಡಿದವರಿಗೆ ಕೊಟ್ಟು ಬಿಡುವಷ್ಟರ ದಾತಾರ. ತನ್ನನ್ನು ಯಾಚಿಸಿದವರಿಗೆ ಅತಪು (ಪಂಪ ಭಾರತ I. ೧೩೨)

ಏಂದುಂ ಪೋಗೆಂದಪೆ ? ಪೂ
ಣೆಂದನೆ ? ಪೆರತೊಂತಪೀಪೆನೆಂದನೆ ?।

ಬುಳ್ಳೆಂಬುದು ಅತನಿಗೆ ಸುತರಾಂ ಗೊತ್ತಿಲ್ಲ, ಅತನಿದ್ದಲ್ಲಿ ನೋಭವಿಲ್ಲ, ಭಯವೆಂದರೆ ಏನೆಂದು ಅತನು ಕಂಡಿಲ್ಲ—

ಅನೃತಂ ಲೋಭಂ ಭಯಮೆಂ
ಬಿವಱಂ ನೀನಿರ್ದ ಪಾಡೊಳಿಱಿವೆ ? ರವಿಸಂ- ।
ನ ನನ್ನಿ ಜಾಗಪುಣ್ಯಂ
ದಿವಸಕ್ಕಂ ನೀನೆ ಕೊತ್ತ ವೊದಲಿಗನಾದ್ಯೆ ॥
(ಗದಾಯುದ್ಧ, V. ೧೭)

ಅದರೊಂದಿಗೆ ಅತನು ಸಜೀವವಾದ ಪೌರುಷ, ಮೂರ್ತಿಮಂತವಾದ ಪುರುಷ ಪ್ರಯತ್ನ, ನಿಷ್ಕೇವಲವಾದ ಪುರುಷಕಾರ, ಪ್ರತಿಕೂಲವಾದ ದೈವವನ್ನು ಕಿಂಚಿತ್ತಾದರೂ ಗಣಿಸದೆ ಅದರೊಂದಿಗೆ ತೋಳಿಗೆ ತೋಳನ್ನು ಮಸೆದು ಹೋರಾಡಿದ ಮಹಾವೀರ. ಪ್ರತಿಕೂಲವಾದ ಗಾಳಿಗೆ ಅಂಜದೆ, ಹುಟ್ಟಿನ ಮೇಲೆ ಹುಟ್ಟನ್ನು ಒತ್ತಿ ಬಿರುಗಾಳಿಯಲ್ಲೂ ಹಡಗನ್ನು ಮುಂದಟ್ಟಿದ, ಅಥವಾ ಮುಂದಟ್ಟಲಿಕ್ಕೆ ಜೀವದ ಹಂಗನ್ನು ತೊರೆದು ಪೆಣಾಡಿದ ಹುಟ್ಟುವೀರ. ಭಾರತಯುದ್ಧದ ಕುದುರೆಯ ಜೂಜಾಟದಲ್ಲಿ ದೈವಹೀನನಾದ ದುರ್ಯೋಧನನು ಪೀಳಿಗೆ ನೋಡದೆ ಪಣ ಒಡ್ಡಿದ ಜಾತಿ ಗೊತ್ತಿಲ್ಲದ ಪಾತ್ಯಶ್ವ. ಕರ್ಣನಿಗೆ ತನ್ನ ಜೀವಮಾನದಲ್ಲೇ ಅನೇಕ ವಿಷ್ಣೂರಗಳು ಒದಗಿದುವು. ನಿಯತಿ ಅತನಲ್ಲಿ ಹುಬ್ಬುಗಂಟಿಕ್ಕಿ, ಎಷ್ಟೋ ಬಲವಾಗಿ ಎಷ್ಟೋ ನಿಷ್ಕರುಣವಾಗಿ ಅತನನ್ನು ವಂಚಿಸಿ, ಅತನಿಂದ ಅನ್ಯಾಯವಾಗಿ ಕವಚ ಸುಂಕವನ್ನು ಸೆಳೆಕೊಂಡಿತು. ಪ್ರತ್ಯುತ ಅದೇ ನಿಯತಿ ಅರ್ಜುನನಲ್ಲಿ ತುಂಬ ಪ್ರಸನ್ನವಾಗಿ, ಅತನು ಕೇಳಿಲ್ಲದಷ್ಟೂ ಒಡವೆಯಿಂದ ಅತನ ಹಸುಬೆಯನ್ನು ಹೇರಿತು. ಉದಾಹರಣೆಯಾಗಿ ಹೇಳುವುದಾದರೆ—

ಮುಂಚಿತವಾಗಿ ಕರ್ಣನು ಹುಟ್ಟುತ್ತಲೆ ಅತನ ತಾಯಿಯಾದ ಕುಂತಿ ಆ ಮಗುವನ್ನು ಗಂಗೆಗೆ ಎಸೆದುಬಿಟ್ಟಳು. ಗಂಗೆ ಆ ಶಿಶುವನ್ನು ಮುಳುಗಲೀಯದೆ ತೇಲಿಸುತ್ತಿರಲು, ಸೂತನೊಬ್ಬನು ಕಂಡು ಅದನ್ನೆತ್ತಿ ಮನೆಗೆ ತಂದು ಬೆಳಸಿದನು. ಅತವಿವ ಅತನೂ ಹೆರವರೂ ಆಗ್ಗೆ ಬಲ್ಲಷ್ಟರ ಮಟ್ಟಿಗೆ, ಅತನು ಹುಟ್ಟಿನಲ್ಲಿ ಕೀಳ—ಸೂತ ಪುತ್ರ, ಕಬ್ಬಿಲನ ಮಗ (ಕನ್ನಡ ಭಾರತ, ಕರ್ಣಪರ್ವ: ೨೫-೪೦), ಅಂಬಿಗನ ಸೋರ. ಮುಂದೆ ದುರ್ಯೋಧನನ ಕೃಪಾಬಲದಿಂದ ಅಂಗರಾಜ್ಯಾಧಿಪತಿಯಾದ ಮೇಲೂ ಅತನು ಹೀನ ಜಾತಿಯವನೆಂಬುದನ್ನು ಸುತ್ತಮುತ್ತಣ ಬ್ರಾಹ್ಮಣರೂ ಕ್ಷತ್ರಿಯರೂ ಮರೆಯಲೂ ಇಲ್ಲ, ಶ್ರೀಕೃಷ್ಣನೂ ಕುಂತಿಯೂ ಅತನ ಜನ್ಮರಹಸ್ಯವನ್ನು ಅತನಿಗೆ ಅರುಹುವವರೆಗೆ ಆ ಹೀನಾಯವನ್ನು ಅತನಿಗೆ ಮರೆಯಗೊಡಲೂ ಇಲ್ಲ.

ಆ ಮೇಲೆ ಚಿಕ್ಕಂದಿನಲ್ಲೇ ಪರುಶುರಾಮನಲ್ಲಿಗೆ ಹೋಗಿ ತಾನು ಬ್ರಾಹ್ಮಣನೆಂದು ಸಟೆಯಾಡಿ ಧನುರ್ವಿದ್ಯೆಯನ್ನು ಕಲಿತುದಕ್ಕಾಗಿ 'ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯುಂ ಕೆಯ್ಕೊಂಡುದರ್ಕೆ ದಂಡಂ ಪೆರತಿಲ್ಲ, ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮನಸಾನಕಾಲದೊಳ್ ಬೆಸಕೆಯ್ಯದಿರ್ಕೆ' (ಪಂ. ಭಾ. I ೧೦೫ ವ) ಎಂದು ಪರುಶುರಾಮನ ಶಾಪ ಬಂತು (ಕ. ಭಾ. ಆದಿ: ೬-೪೨). ಹೀಗೆ ಅತನ ಭವಿಷ್ಯ ಜಳ್ಳಾಯಿತು, ನೀಕ್ಷೆ ಬಂಜೆಯಾಯಿತು, ಉದ್ಯಮವೆಲ್ಲವೂ ಒಂದರಿಯಲ್ಲಿ ಸೇದಿದ ನೀರಾಯಿತು.

ಕರ್ಣನು ಎಂದೋ ಒಮ್ಮೆ ಅಜಾಗರೂಕತೆಯಿಂದ ಯಾವನೋಬ್ಬ ಬ್ರಾಹ್ಮಣನ ದನವನ್ನು ಕೊಲ್ಲಲಾಗಿ, ಸಿಟ್ಟುಗೊಂಡ ಆ ವಿಪ್ರನು ಅತನ ರಥಚಕ್ರವು ಯಾವೊಂದು ವಿಷಮವಾದ ಸಂದುಕಟ್ಟಿನಲ್ಲಿ ರಣಭೂಮಿಯಲ್ಲಿ ಹೂಳಿಹೋಗಲಿ ಎಂದು ಅತನಿಗೆ ಶಾಪವಿತ್ತನು (ಸಂಸ್ಕೃತ ಭಾರತ, ಕರ್ಣ: ಅ. ೪೬; ಶಾಂತಿ: ಅ. ೨) ಆ ಶಾಪ ಕರ್ಣನ ಕೊನೆಯ ಕಾಳಗದಲ್ಲಿ ಅಳ್ಯಾಪಾತದಂತೆ ಈಡೇರಿತು.

ಅನಂತರ ಇಂದ್ರನು ಬ್ರಾಹ್ಮಣರೂಪದಿಂದ ಬಂದು ಅತನ ಮರ್ಮವಾಗಿದ್ದ ಕವಚವನ್ನು ಕೆಡುತ್ತಲೆ, ತಂದೆಯಾದ ಸೂರ್ಯನು ಮಾ ಎಂದರೂ ಕರ್ಣನು ಕೊಚ್ಚಿಬಿಟ್ಟನು (ಸಂ. ಭಾ. ವನ: ಅ. ೩೦೧). ಆ ಬಳಿಕ ಅತನ ತಾಯಿಯಾದ ಕುಂತಿ ಒಂದೇ ಮಾತಿನಿಂದ ಅತನ ಸರ್ವಶಕ್ತಿಯನ್ನೆಂಬಂತೆ ಅಪಹರಿಸಲಿಕ್ಕೆ ಬಂದಾಗ, ಮರಳಿಯೂ ಒಮ್ಮೆ ಸೂರ್ಯನು ಅತನನ್ನು ಎಚ್ಚರಿಸಿದರೂ (ಪಂ. ಭಾ. IX. ೭೭ ೭೮),

ಇಂತಿಱಿವಂ ರವಿ ಬಂದಪ್ಪಟ
ಱಿದನೀತನ ಕಿವಿಯೊಳ್ಳಿಷ-
ತೊರೆದ ನಿನಗೆ ಪುಗಸೆ ಕುಂತೀದೇವಿ ತಾಯಪುದು !
ಪುರಪಟ್ಟದ ಪುಂತಿದಂದ ನಿಸ್ಪೃಹ
ನರಕ್ಕೆ ಬೇಡಲು ಬಂದಳಂದಿತ
ಹರಿಗೆ ಶ- ಚಿಪಹಸ್ತವೊಲು ಹುರುಳುಗ ಬೇಡಿಂದ ॥
(ಕ. ಭಾ. ಕರ್ಣಾಟ: ೧೦. ೨ ಗ.)

ಮಹಾದಾನಪತಿಯೂ ತ್ಯಾಗಮೂರ್ತಿಯೂ ಆದ ಕರ್ಣನ-

ತಂದೆಯ ಮಾತಿಗೆ ಕಿವಿ ಮುಚ್ಚಿ, ಆಕೆ 'ಬೆಸಸಿದುದಕೆ ಹಸಾದ-ವೆಂದು' ತನ್ನ ಶಕ್ತಿಯನ್ನೆಲ್ಲ? ತನ್ನ ಜೀವನವನ್ನೇ ಆಕೆಯ ಬಗಸೆಯಲ್ಲಿ ಇದೋ ಎಂದು ಒಂದೇ ಒಂದು ಮಾತಿನಲ್ಲಿ ಎರೆದು ಬಿಟ್ಟು ತಾನು ಶೂನ್ಯನಾದನು.

ಅಷ್ಟೆಪರು ಮುಳ್ಳಿನ್ನು ತಲೆ
ಗದು ತೋರ್ದೆ ಎಂದ ನಿನಗಿ
ನ್ನೀ ಮುಂಡ್ರ್ಯಶಕ್ತಿಯುಡೆ ಲೋಕವನ ಸೇವೆಯುಂ।
ಹೋದ ಬಾಣಕ ಮುಂದೆ ತೊಡದಿರು
ವನಾದು ಳಿ ವೈರವನೆನಗೆ ಇ–
ನಾದವೆಂದನು ಬೀಳ್ಕೊಟ್ಟನು ಬಂದನರಮನೆಗೆ ॥
(ಶ. ಭಾ. ಉದ್ಯೋಗ: ೧೦, ೫೫) ॥

ಏಡಿಸೆಂ ಪುರಂ ನೆಯುಂ ನರ
ನೆಡೆಗೊಂಡೊಡಮುಳಿದ.ನಿನ್ನ ಮುಳ್ಳಿನಿನ್ನೇ।
ಕೊಡಮುಂಡಿಂ ಪೆರ್ಚಸಮಂ
ಪಡಿಸಿನ್ನಸೆ ದೊಳಿಸೆನಿಸದಿರೆಯೆತ್ತಿಂ ॥ (ಪಂ. ಭಾ. IX. ೬೭) ॥

—ನಿನ್ನ ಯಾವ ಮಕ್ಕಳನ್ನೂ ಕೊಲ್ಲೆ, ಮಹಾಕೀರ್ತಿಯನ್ನು ಅಪ್ಪಿಕೊಂಡು ಯುದ್ಧದಲ್ಲಿ ತಾನೇ ಅಳಿವೆನೆಂದು ಆಕೆಗೆ ಆ ಆತ್ಯುದಾತ್ತವಾದ, ಅನನ್ಯಾದೃಶವಾದ ಭಾಷೆಯನ್ನು ಕೊಟ್ಟು ಅತನು ತನ್ನನ್ನೇ ಅಳಿಸಿಕೊಂಡನು.

ಆ ಮೇಲೆ ಕುರುಕ್ಷೇತ್ರದ ಯುದ್ಧ ತೊಡಗುತ್ತಲೆ, ಅರ್ಜುನನ ಮೇಲೆ ಎಸೆಯಬೇಕೆಂದು ಕರ್ಣನು ಹಿಂದಿನಿಂದ ಕಾದಿಟ್ಟ ಆ ಶಕ್ತ್ಯಾಯುಧಕ್ಕೆ ಶ್ರೀಕೃಷ್ಣನು ಪಾಂಡವರ ಬಲದ ಘಟೋತ್ಕಚನನ್ನು ಪುಟ್ಟಾಗಿಸಿ, ಅತನ ಆ ಆಕಾಂಕ್ಷೆಯನ್ನೂ ಬೆಂಡಾಗಿಸಿದನು. ಅಲ್ಲಿಂದ ಕೆಲವೇ ದಿನಗಳ ಮುಂದೆ ಅರ್ಜುನನಿಗೂ ಅತನಿಗೂ ಆಗುತಿದ್ದ ಆ ಘೋರ ಸಂಗ್ರಾಮದಲ್ಲಿ ಕರ್ಣನು ತ್ರಿಭುವನಗಳನ್ನೂ ಕಳವಳಿಸುವ ಆ ಉರಗಾಸ್ತ್ರವನ್ನು ಅರ್ಜುನನ ಗಂಟಲಿಗೆ ಗುರಿಯಿಟ್ಟು ಎಸೆದುದುದನ್ನು ಕಂಡು ಶಲ್ಯನು

ಪಂ. ಭಾ. IX. ೧೪೫

ಕೊ ಳಿಗೊಡ್ಡಿದೆ ತೊಳ್ಬಾಂದು
ಸರಳು ಮುಂಳಾಟವ ತಾಗುವುದು ತೆಗ–
ಮುಂಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ।
ಮುಂದಳೆ ತೊಡು ತೊಮ್ಮ.... (ಕ. ಭಾ. ಕರ್ಣ: ೨೫-೧೭)

ಎಂದು ಎಷ್ಟು ಒತ್ತಾಯಿಸಿದರೂ, ತಾನು ಕುಂತಿಗೆ ಕೊಟ್ಟ ಮಾತನ್ನು ನೆನೆವರಿಸಿ,

ಒಂದು ಶರಸಂಧಾನ ಕಾಲಗೆ
ಯೊಂದ.....॥ (ಕ. ಭಾ. ಕರ್ಣ: ೨೫-೧೫) ॥

ಎಂದು ಅತನ ಮಾತನ್ನು ಧಿಕ್ಕರಿಸುತ್ತಲೆ, ಶ್ರೀಕೃಷ್ಣನು ಅರ್ಜುನನ ರಥವನ್ನು ಎಣ್ಬೆರಲಿಗೊ (ಪಂ. ಭಾ. XII. ೨೦೦) ಐದಂಗುಲಕೊ (ಕ. ಭಾ. ಕರ್ಣ: ೨೫. ೨೮) ನೆಲಕ್ಕೆ ತುಳಿದನು. ಆ ಬಾಣ ಪಾರ್ಥನ ಕಿರೀಟವನ್ನು ವಸ್ತ್ರ ಎತ್ತಿಕೊಂಡು ಹೋಯಿಶಲ್ಲದೆ ಅತನನ್ನು ಕೊಲ್ಲಲಿಲ್ಲ. ಪಾರ್ಥನು ಬದುಕಿದನು ಅಥವಾ ಪಾರ್ಥನನ್ನು ಶ್ರೀಕೃಷ್ಣನು ಬದುಕಿಸಿದನು. ಆಗ ಆ ಸರ್ಪಾಸ್ತ್ರವು ಮರಳಿ ಕರ್ಣನ ಇದಿರಿಗೆ ಬಂದು ನಿಂತು, ತನ್ನನ್ನು

ಮುಂದು ತೊಡು ಇನ್ನೊಮ್ಮೆಯಂಬಿಟಾ
ಕೆಡಿಸಿದೆಯಲಾ ಸ್ವಾಮಿಕಾರ್ಯವ..... ॥

ಎಂದು ಬೇಡಿಕೊಂಡರೂ, ಕರ್ಣನು ಆ ಮಾತಿಗೆ ಒಪ್ಪದೆ ಬಾಣವನ್ನು ಮತ್ತೆ ಬಿಡಲಿಲ್ಲ. ಶಲ್ಯನೂ ಅದೇ ಅಸ್ತ್ರ ಬಿಡು ಬಿಡು ಎಂದು ಎಷ್ಟೇ ಮೂದಲಿಸಿದರೂ, ಸತ್ಯಸಂಧ ಕರ್ಣನು ಆದನ್ನು ಕೇಳಿ ಕೇಳದ ಕಾರಣ, ಶಲ್ಯನು ಆ ಬೋಸಿ, ರೇಗಿ ತಟ್ಟನೆ ಸಾರಥ್ಯದಿಂದ ಇಳಿದು ಹೋ ನೊದಲೇ ಮಹಾಪತ್ತಿನ ಬಾಯಲ್ಲಿ ಸಿಲುಕಿದ್ದ ಕರ್ಣನಿಗೆ ರ ತೊರವಿಯೂ ಮಹತ್ತರವಾದೊಂದು ವಿಡ್ಡೂರವಾಯಿತು.

ಕೊನೆಗೆ ಆ ರಣಾಂಗಣದಲ್ಲೇ, ಆತನು ಸಾವುದಕ್ಕೆ ಒಂದೆ ಗಳಿಗೆಗಳ ಮುಂಚೆ ಏನೋ, ಶ್ರೀಕೃಷ್ಣನು ಆತನನ್ನು ಬೇಡಿ ದ್ವಿತೀಯ ಮರ್ಮವಾಗಿದ್ದ ಕರ್ಣಕುಂಡಲಗಳನ್ನು ಎ ಕೊಂಡನು. ಆ ಘಟನೆಯನ್ನು ಕನ್ನಡಭಾರತದಲ್ಲಿ ಈ ಯಲ್ಲಿ ಅತ್ಯಂತ ಹೃದಯಂಗಮ ಹಾಗೂ ಹೃದಯದ್ರಾವಕ ವರ್ಣಿಸಿದೆ. ಕೃಷ್ಣನು ತನ್ನ ಹುಟ್ಟಿನ ಗುಟ್ಟನ್ನು ತನಗೆ ತ

[ಗೊಡಂ ಕೊಯ್ದನು ಕೃಷ್ಣ ಮುನ್ನಿನ ಳಂ ಪಡಿಚ್ಚರಿಸಿ ॥
(ಕ. ಭಾ. ಕರ್ಣ: ೨೭-೫೫) ॥]

ಎಂದು ಕರ್ಣನು ಮನಮರುಗಿದರೂ, ಪಾರ್ಥನ ತೇರಿನ ಬೊ ನಾಗಿ ತನ್ನ ಮುಂದಿರುವ ಆತನನ್ನು ಎವೆಯಿಕ್ಕದೆ ನೋಡುತ್ತ

ಸಲಹಿದೊಡೆಯನ ಜೋಳವಾಳಿಗೆ
ತಲೆಯ ಪೂರುವುದೊಂದು ಪುಣ್ಯದ
ಬೆಳಸು ಕಾರಣದ ಹೊತ್ತು ಕೃಷ್ಣನ ತಾಂಬ ಮುಳ್ಳತಳಲ।
ಇಳೆಯೊಳಿಂದೆನಗಲ್ಲದಾತಂಗೆ
ಫಲಿಸುವುದು ತಾ ಧನ್ಯನೆನ ತೆವೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ ॥
ಒಳಗೆ ಹೃದಯಾಂಬುಜದ ಮುಗ್ಧ–
ಸ್ಥಳದೊಳಗೆ ಮುರವೈರಿಯ.ನು ಹೊರ–
ವಳಯುವಲಿ ಫಲಗಾಣನ ಸಜೀವಧನುರ್ಗುಣಾಗಮಲಿ।
ಹೊಳೆವ ಹರಿಯಂನು ಕಂಡನದು ಹೊರ
ಗೊಳಗು ಹರಿತಾನೆಂಬ ಭೇದವ
ತಿಳಿದು ನಿಜದೆಚ್ಚರಿನ ತಪ್ಪಳದೊಳಿರ್ದನಾ ಕರ್ಣ ॥
(ಕ. ಭಾ. ಕರ್ಣ: ೨೭-೧೦

ಎಂಥಾ ನಿರ್ಮಲವಾದ, ನಿಶ್ಚಲವಾದ, ನಿಃಸ್ವಾರ್ಥವಾದ ಭ ಸ್ವಯಂ ಶ್ರೀ ಕೃಷ್ಣನೇ ಒಲಿದು ಬೆಂಬಲಿಸಿದ ಪಾಂಡವರಿಗಾ ಅತನಲ್ಲಿ ಈ ಬಗೆಯ ಅನನ್ಯವಾದ ಭಕ್ತಿ ಇತ್ತೇ? ಎಂದು ಕೆ ದರೆ, ಪ್ರತಿಧ್ವನಿ ಇತ್ತೇ? ಎಂದು ಕೇಳಿಸುತ್ತದೆ.

ಆಗ್ಗೆ, ಅರ್ಜುನನು ಕರ್ಣನ ಮೇಲೆ ಬಿಟ್ಟ ಅಂಜನಾಸ್ತ್ರ ಅತನ ಎದೆಯನ್ನು ಭೇದಿಸಿತೇ ಹೊರತು ಅತನ ಪ್ರಾಣ ತೊಲಗಿಸಿಲ್ಲದ ಕಾರಣ, ಅತನ ಕಿವಿಯ ಕುಂಡಲಗಳನ್ನು ಅತ ಅಗಲಿಸಿದಲ್ಲದೆ ಅತನು ಮಡಿಯನೆಂದು ಶ್ರೀ ಕೃಷ್ಣನು ಕಂ ಕೊಂಡು (ಕ. ಭಾ. ಕರ್ಣ: ೨೭),

ತೋಳ ಕಂಡಲವಿರಲು ಪ್ರಾಣವು
ಲಂಗಡಕ್ಷಿಂದಾಗ ಕೃಷ್ಣನು
ಭವು ವಿಪ್ರನ ರೂಪ ತಾಳ್ದ ಪನ್ನಗಯ್ತಂದ ॥ ೧೫ ॥
ಗ್ಯಾಗಿ ಜಗದೊಳಗೆಂಬ ಕೀರ್ತಿಯು
ತೀಗರಿಂದವೆ ಕೇಳಿ ಬಂದೆವು
ಗಲತಿಶಯು ಫಲವನೊಲಿಸರ ಮುನಿದ ಬಯಕೆಯನು।
ಗಲಾವುದು ನಿನ್ನ ಭೀಪ್ಸೆಯು
ಶ್ರೀಗೆ ಮಂಗಳವೆಂದು ಹರಸಿದ
ಗಲರಿದನು ಕರ್ಣ ನಸುನಗುತಿರೆ ಮುನಿದೊಳಗೆ ॥ ೧೬ ॥
ಗ್ಯಾಗಸಿಂಹಾಸನದ ಮೇಲಿ–
ದ್ದಾಗ ಬೇಡಿದಡೀವೆ ನಾನಿಕೆ–
ಗಣ ರಣದಲಿ ಬಂಹು ಹೇಡುವದುಂಟೆ ಹೇಳೆನಲು ।
ಗಂತಿಹ ಕುಂತಿಯನೀಗಲೆ
ಗ ಧಾರೆಯನೆರೆದು ಕೊಡು ಎನ
ಗಲುದಕ್ಷಪಸಿ ಕರ್ಣನು ತೆಲನ ತೋಡಿದನು ॥ ೧೭ ॥
ಸುದಳವನು ಹೊತಗರಸುತಿರಲಾ
ಕುವನಾಥನು ನಂದಿದ ನಿನ್ನೆಯ
ಕೃಷ್ಣಯುದೊಳಗಿದ್ದ ಪುಲ ಗಂಗಾಜಲವ ತೆಗೆದೆನಗೆ ।
ಮಳದಿಂದೆರೆ ಧಾರೆಯನು ಸಂ-
ತದ ಮುತ್ತಿಯ ಪಡದಸೊಲುಪಡೆ
ದು ಶುಭೋದಯವೆಂದು ಮಾಯಾವಿಪ್ರನೆದ್ದನು ॥ ೧೮ ॥
ರಳ ತೆಗೆದನು ಸರಸಿಜಪ್ರಿಯು
ರಸ-ತನು ತನ್ನುರವ ಬಗೆತನು
ಕರಿಘರಿಲು ಘಂಟೆನಲು ತೆಗೆದನ ನಿರ್ಮಲೆಂದೀವ ।
ರವು ಸಂತೋಷದಲಿ ಧಾರೆಯ
ರವೆ ಮಾಡುತ್ತಿರಲು ಹೇಳಿದ
ಸಿರಂಘೇ ಎಂದೆನಲು ಪುಷ್ಪವರ್ಷಿಸುದಂಬರದಿ ॥ ೧೯ ॥
ೀಡಿದಕೆ ಕುಂತಲವ ತೆಗೆದೀ
ಡಿದನ ಲೋಕೈಕನಾಥನ
ೀಡಿ ಧನ್ಯತೆನುತ್ತ ರಚಿಸುತನಂಲ ಭಕ್ತಿಯಲಿ ।
ೀಡಿದನು ಕರುಣಾಳು ನಾರಿಯ
ಮಾಡಿ ದಾನವನೀವೆನೆಂದೆ ಕೈ
ೀಡಿ ಹೃದಯವ ಬಗಿದನನ್ಯಕದ ಜಿಂದುಗಳು ಸುರಿಯೆ ॥ ೨೦ ॥
ಡವು ಕರುಣಾಸಿಂಧು ಕರ್ಣಂ
ಡದೆ ನಿಜಪುರುಷಾರ್ಥಿಯನು ತೋರಿಸಿ
ುರುತರ ಶ್ರೀಪುರದಲಿ ಮುಕ್ತಿಯ ಪದವ ಸೇವಿಸಿದ ॥ ೨೧ ॥

ಪರೆ ಪರಮಾತ್ಮನ ಸಶರೀರ ಮೂರ್ತಿಯಾದ ಶ್ರೀಕೃಷ್ಣನು ಲ್ಲಿರುವುದನ್ನು ಕರ್ಣನಿಗೆ ಕೊಟ್ಟ—ಇಹದಲ್ಲಿ ತನ್ನ ಸಾಕ್ಷಾ-ರ, ಪರದಲ್ಲಿ ತನ್ನ ಸಾಯುಜ್ಯ. ಆದರೆ ಛಲಾ, ಆತನ ಜೀವದ ಾಳವಾದ, ಆತನು ಯಾವಜ್ಜೀವ ತನ್ನಲ್ಲಿ ಸಾಕಿ ಬೆಳಸಿದ ನ ಮಹತ್ತ್ವಾಕಾಂಕ್ಷೆಯ ಪರಾಕಾಷ್ಠೆಯಾದ ಆ ಜಯಶ್ರೀ-ನ್ನು ಮಾತ್ರ ಆತನಿಗೆ ಕೊಡಲಾರನಾದನು! ಅಥವಾ ಹೇಗೆ ಕೊಟ್ಟಾನು, ಅದನ್ನು ತನ್ನದೆಂದು ತಾನು ಅಪ್ಪಿಕೊಂಡ ಜಕ್ಕೆ ಒಮ್ಮೆ ಕೊಟ್ಟು ಹೋದ ಮೇಲೆ? ಇಬ್ಬರು ಪ್ರತಿ-ರ್ಧಿಗಳಲ್ಲಿ ಇಬ್ಬರಿಗೂ ಗೆಲುವು ದೊರೆಯಲುಂಟೇ?

ಅಂಥಾ ಮಹಾವೀರನಿಗೆ, ಆತನ ಮಹಾವೀರತೆಗೆ ಎಲ್ಲಕ್ಕಿಂತ ಮೇಲಾಗಿ ಬೇಕಾದುದೆಂದರೆ ಇಂದ್ರಿಯನಿಗ್ರಹ. ತನ್ನನ್ನು ಗೆದ್ದಿಲ್ಲದಾತನು ಅನ್ಯರನ್ನು ಸುತರಾಂ ಗೆಲ್ಲಲಾರ. ಜಿತೇಂದ್ರಿಯನು ಏಕಭಾರ್ಯನೇ ಆಗಿರಬೇಕೆಂದಿಲ್ಲ, ಆವಂದಿನ ಪದ್ಧತಿಯ ಮೇರೆಗೆ ಬಹುಭಾರ್ಯನಾಗಿರಲೂ ಬಹುದು. ಆದರೆ ಪರದಾರವನ್ನು ಮಾತ್ರ ಆತನು ಕಣ್ಣೆತ್ತಿ ನೋಡಲೂ ಬಾರದು—'ಅನಿರ್ವರ್ಣನೀಯಂ ಪರಕಲತ್ರಮ್' — ಮನಸ್ಸಿನಲ್ಲಿ ನೆನಸಲಾದರೂ ಬಾರದು. ಕರ್ಣನು ಅಂಥಾ ತ್ರಿಕರಣಶುದ್ಧನಾದ ಸಂಯಮಿ; ಉದಾ. ಪ್ರತಿರಾತ್ರಿಪ್ಪೊ ದುರ್ಯೋಧನನನ್ನು ಮಂಜದ ಕಾಲಿಗೆ ಕಟ್ಟಿಹಾಕಿ, ಆತನ ಪತ್ನಿಯಾದ ಭಾನುಮತಿಯನ್ನು ಬಲಾತ್ಕಾರದಿಂದ ಕೆಡಿಸಿ ಹೋಗುತ್ತಿದ್ದ ಯಾವನೋಬ್ಬ ಗಂಧರ್ವನನ್ನು ಕೊಲ್ಲಲೆಂದು ದುರ್ಯೋಧನನಿಂದ ನಿಯೋಜಿಸಲ್ಪಟ್ಟು ಭಾನುಮತಿಯ ಪಕ್ಕದಲ್ಲಿ ಆತನ ಸುಪ್ಪತ್ತಿಗೆಯಲ್ಲಿ, ಆತನ ಎಡೆಯಲ್ಲಿ ಮಲಗಿದ್ದ ಕರ್ಣನು, ಅಂದಿನಿರುಳು ಆ ಶಯ್ಯಾಗೃಹದಲ್ಲಿ ನುಗುಳಿ ಬಂದ ಆ ಜಾರನನ್ನು ಕೊಲ್ಲುತ್ತಲೆ, ತನ್ನ ಬಿಲುವಿಗೂ ಗೆಲುವಿಗೂ ಮನಸೋತ ಭಾನುಮತಿಯಿಂದ ಅಭ್ಯರ್ಥಿತನಾದಾಗ ತಾನು ಷಂಢನೆಂದು ಸುಳ್ಳಾಡಿಯೇ ಆದರೂ ಆ ಕಂಟಕದಿಂದ ತಪ್ಪಿಸಿಕೊಂಡು, ಒಣಕಾಲಿಂದ ತಡಿ ಸೇರಿ ಪರಾಂಗನೆಯಲ್ಲಿ ತನಗಿದ್ದ ಅಚಾಲ್ಯವಾದ ಮಾತೃಭಾವನೆಯನ್ನು ಕಾಪಾಡಿಕೊಂಡನಂತೆ.

ಆದರೆ ಒಟ್ಟಾರೆ ಆತನಿಗೆ ಮೊದಲಿಂದ ಕೊನೆಯನಕಾ ದೈವಬಲ ಇದ್ದಿಲ್ಲವೇ ಅಲ್ಲ, ಪ್ರತ್ಯುತ ಧ್ರುವಕ್ಕೆ ಧ್ರುವದಂತೆ ಪ್ರತಿಕೂಲವೂ ಆಗಿತ್ತು. 'ಕುರುಪತಿಗಿಲ್ಲ ದೈವಬಲ' ಪಂ-ಭಾ.[IX.೭೦] ಎಂದು ಕರ್ಣನಾಡಿದ ಮಾತು ಕುರುಪತಿಗಿಂತ ಮಿಗಿಲಾಗಿ ಕರ್ಣನಿಗೇ ಅನ್ವಯಿಸುತ್ತದೆ. ಏಕೆಂದರೆ ಕೌರವನು ಒಂದರ ಹಿಂದೆ ಒಂದಂತೆ ತಾನೆಸಗಿದ ಅಗಣಿತವಾದ ಅಸುರ ಕೃತ್ಯಗಳಿಂದ ದೈವಬಲವನ್ನು ತನ್ನಿಂದ ಪ್ರಯತ್ನ ಪೂರ್ವಕವಾಗಿ ತೊಲಗಿಸಿಕೊಂಡನಾದರೆ, ಕರ್ಣನು ಏನೊಂದೂ ತಪ್ಪನ್ನು ತಾನು ಮಾಡುವೆನೆಂದು ಮಾಡಿದನಲ್ಲ, ತನ್ನ ಒಡೆಯನಾದ ದುರ್ಯೋಧನನ 'ಜೋಳಮನೆಂತು ನೀಗುವೆಂ?' (ಪಂ. ಭಾ. X. ೪) ಎಂಬ ಔತ್ಸುಕ್ಯದಿಂದ ತಾನೆ, ಆತನನ್ನು ಮೆಚ್ಚಿಸುವುದಕ್ಕೆ ಮಾತ್ರ, ಆತನನ್ನು ಮನಃಪೂರ್ವಕವಾಗಿ ಸೇವಿಸಲೆಂದೇ, ತನ್ನ ಸ್ವಾಮಿಭಕ್ತಿಯ ಧರ್ಮವನ್ನು ಚಾಚೂ ತಪ್ಪದೆ ನೆರವೇರಿಸಲಪ್ಪೆ, ಆತನ ಅಕೃತ್ಯಗಳಲ್ಲಿ ತಾನೂ ಕೆಲ ಅಥವಾ ಹಲವುಬ್ಬಿಗೆ ಪಾಲುಗಾರನಾಗಿರಬಹುದು ಇಲ್ಲವೆ ಆಗಬೇಕಾಯಿತು. ಆದನ್ನು ಕೊಂಚ ಒತ್ತಟ್ಟಿಗೆ ಇಟ್ಟರೆ, ವಿಯತ್ತಲದಂತೆ ವಿಪುಲವೂ ನಿಸ್ಸೀಮವೂ ಆದ ಆತನ ತ್ಯಾಗವೆಂಬೋ, ಆಂತೆಯೇ ಹಿಮವಚ್ಛಿಖರದಂತೆ ಮಹೋಚ್ಚ್ರಯವೂ ಅವದಾತವೂ ಆಗಿತ್ತು ಆತನ ಸ್ವಾಮಿಭಕ್ತಿ. ತಾನು ಸ್ವತಂತ್ರನಾದರೆ ಮಾತೃ ಭೂಭಕ್ತಿ, ಕರ್ಣನಂತೆ ಪರತಂತ್ರನಾದರೆ ಸ್ವಾಮಿಭಕ್ತಿ, ಇವು ವೀರತ್ವದ ಅವಿಯೋಜ್ಯವಾದ ಅವಯವಗಳು. ಆ ತ್ಯಾಗವೂ ಆ ಭಕ್ತಿಯೂ

ಇಲ್ಲದ ವೀರತ್ವ ಸುತರಾಂ ಅಪೂರ್ಣ, ಅಥವಾ ಅದು ವೀರತ್ವವಲ್ಲ, ಕ್ರೂರತ್ವ. ಅವಳ್ಲಿಯೂ ತನ್ನ ಅದ್ವಿತೀಯವಾದ ತ್ಯಾಗದ ಮುಂದೆ ಆತನು ಸ್ವಾಮಿಭಕ್ತಿಯನ್ನು ಕೆಲವೊಮ್ಮೆ ನಿಶ್ಚಿಂತನಾಗಿ ಈಡಾಡಿದನು, ಉದಾ—ಇಂದ್ರನ ಹಾಗೂ ಕುಂತಿಯ ಬೇಡಿಕೆಗಳನ್ನು ಸಲ್ಲಿಸುವಲ್ಲಿ. ಅಥವಾ ತನ್ನ ತ್ಯಾಗಕ್ಕಾಗಿ ತನ್ನನ್ನೇ, ತನ್ನ ಜೀವವನ್ನೇ ಎರೆದುಬಿಟ್ಟವನಿಗೆ ಉದಾ—ಕೃಷ್ಣನ ಬೇಡಿಕೆಗೆ ಸಕ್ಕಾಗಿ ತನ್ನ ಜೀವಕ್ಕೇ ಜಲಾಂಜಲಿ ಇತ್ತವನಿಗೆ, ಬೇರೆ ಯಾವ ವಿಷಯವೂ ಏನು ಗಣ್ಯ? ಮಹಾತ್ಯಾಗಿಯೇ ಮಹಾವೀರ, ಮಹಾವೀರನೇ ಮಹಾತ್ಯಾಗಿ. ಈ ಕಾರಣ ಕರ್ಣನು ಅಪ್ರತಿರೂಪನಾದ ವೀರ, ಜಗದ್ವೀರ. ಆತನಿಗೆ ದೈವಬಲ ಒಂದಿದ್ದರೆ, ಭಾರತ ಯುದ್ಧದ ಮೋರೆ ಹಿಂದುಮುಂದಾಗುತ್ತಿತ್ತು. ಆತನು ಪಾಂಡವರ ಪಕ್ಷದಲ್ಲಿ ಇರುತ್ತಿದ್ದರೆ—ಏನೆಂದೆ? ಈ ಮಾತು ಆತನಿರುವ ವೀರಸ್ವರ್ಗದಲ್ಲಿ, ಆ ವಿರಾಧಿವೀರರ ವೈಕುಂಠದಲ್ಲಿ ಆತನಿಗೆ ಕೇಳಿಸಿದರೆ, ಆ ಕೂಡಲೆ ನನ್ನಲ್ಲಿ ಇಹುಪಾತವನ್ನು ಮಾಡುವನೇನೋ! ಮಾಡಿದರೂ ಪರವಾ ಇಲ್ಲ. ಹೇಳಿದ ಮಾತನ್ನು ಹೇಳಿಯೇ ಬಿಡೋಣ—ಆತನು ಪಾಂಡವರ ಪಕ್ಷದಲ್ಲಿ ಇರುತ್ತಿದ್ದರೆ, ಅರ್ಜುನನು ಆತನ ಸೆರಳಿನಲ್ಲಿ ತೇಲಿಹೋಗುತಿದ್ದನೇನೋ! ಕೃಷ್ಣನು ಅರ್ಜುನನನ್ನು ಬಿಟ್ಟು ಗೀತೆಯನ್ನು ಆತನಿಗೆ ಅರುಹುತಿದ್ದನೇನೋ! ..... ಏನೋ, ಏನೋ! ಆದರೆ ಶ್ರೀಕೃಷ್ಣನು, ಅರ್ಥಾತ್ ದೈವವೇ, ಆತನ ಪ್ರತಿಪಕ್ಷದಲ್ಲಿ ಪ್ರತ್ಯಕ್ಷವಾಗಿ ನಿಂತಿದ್ದಾಗ, ಆತನ ವಿಶ್ವಪ್ರಯತ್ನ 'ಜಲೌಘವತ್' ನೀರಿನಲ್ಲಿ ಬೇಳ್ದ ದೋಸೆಯಾಯಿತು! ಏಗೆ ಆತನಲ್ಲಿ ದೈವ ತುದಿಯಿಂದ ತುದಿವರೆಗೆ ಪ್ರತಿಕೂಲವಾಗಿರಲಿಕ್ಕೆ ಕಾರಣವೇನು? ಎಂದರೆ, ಇದೆಯಷ್ಟೇ ನಮ್ಮ ತತ್ತ್ವಜ್ಞಾನದ ಹಾಗೂ ಕರ್ಮವಿಪಾಕದ ಪ್ರಾಜ್ಞ ಜವಾಬು—ಪೂರ್ವಾತನ ಪ್ರಾರಬ್ಧ!

ಇಷ್ಟಾದರೂ ಕರ್ಣನು ಮಾನವನೇ ವಿನಾ ಅತಿಮಾನವನಲ್ಲ. ಆ ಕಾರಣ ಆತನಲ್ಲಿ ಮನುಷ್ಯಸ್ವಭಾವೋಚಿತವಾದ ಕೆಲಕೆಲವು ಕೊರತೆಗಳೂ ಇವೆ. ಮುಖ್ಯವಾಗಿ ಅಹಂಕಾರ ಮತ್ತು ಮಹತ್ತ್ವಾಕಾಂಕ್ಷೆ. ಆದರೆ ಕಂಡಿತವಾಗಿಯೂ ಅವು ಜ್ಞಾನಿಗೆ ಸಲ್ಲನಾದರೂ, ವೀರನಲ್ಲಿ ಅವು ಭೂಷಣವೇ ಹೊರತು ದೂಷಣಗಳಾಗವು, ಅತಏವ ಆತನ ವೀರಶ್ರೀಗೆ ಅವು ಶೋಭಾಯಮಾನವೇ ಸರಿ. ಆದರೆ ಕೌರವನ ಅಜ್ಞಾನುಸಾರವಾಗಿ ಹಸ್ತಿನಾವತಿಯ ಆ ತುಂಬುಸಭೆಯಲ್ಲಿ ದುಶ್ಶಾಸನನು ದ್ರೌಪದಿಯನ್ನು ಮಾನಭಂಗಿಸುತಿದ್ದಾಗ, ಕರ್ಣನು ಆಡಿದ ಮಾತುಗಳು ತೀರ ಹೇಯವೂ ಹೀನವೂ ಮಾತ್ರವಲ್ಲ, ಆತನ ವೀರತೆಯನ್ನು ತಕ್ಕಷ್ಟು ಕಿಲುಬಿಸುತ್ತಲೂ ಇವೆ, ನಮ್ಮ ಮೆಚ್ಚುಗೆಯನ್ನು ತಕ್ಕಷ್ಟು ಸಡಲಿಸುತ್ತಲೂ ಇವೆ. ಆ ಮೇಲೆ ಭಾರತ ಯುದ್ಧಾವತಾರದಲ್ಲಿ ಕರ್ಣನು ಭೀಷ್ಮಾಚಾರ್ಯನೊಡನೆ ವೃಥಾ ಜಗಳಾಡಿ, ಆ ಕುರುವೃದ್ಧನು ಮಡಿವ ಅಥವಾ ಕೆಡೆವ ವರೆಗೂ ತಾನು ಬಿಲ್ವಿಜಿವೆ.—

ಗಾಂಗೇಯಸಕಲೊಡಪಿತಕ
ಸಾಂಗಿರೆ ಕಲ್ಪಿತವಿಸನಕ್ಕಿಗಂ ಕಲ್ಪಿಡಿಯೆಂ ॥ (ಪಂ. ಭಾ. X)

ಎಂದು ಪ್ರತಿಜ್ಞೆಗೆಯ್ದು ಯುದ್ಧದಿಂದ ಕಾಲನ್ನು ಹಿಂದೆ ಇತ್ತನಲ್ಲ? ಅದಕ್ಕೇನೆನ್ನಬೇಕು? ಆಗ್ಗೆ ಆತನ ಸ್ವಾಮಿ ಎಲ್ಲಿ ಹೋಯಿತು? ಆ ಬಳಿಕ ದ್ರೋಣಾಚಾರ್ಯನ ನಾನಂತರ, ಸ್ಥಿರಂಜೀವಿಯಾದ ಅಶ್ವತ್ಥಾಮನಿಗೆ ಸರ್ವಸೇನಪತ್ಯದ ವೀರಪಟ್ಟವನ್ನು ಕಟ್ಟಬೇಕೆಂದು ಕೃಪಾಚಾರ್ಯ ಕೌರವನಿಗೆ ಸೂಚಿಸಿದಾಗ, ಕರ್ಣನು ಅದನ್ನು ಎದುರಾ (ಪಂ. ಭಾ. XII),

ಎನಗಳವಲ್ಲೆಂ ದ್ರೋಣಂ ದಿವ್ಯಜಗಂಡುಗುಣಕ್ಕಗಿಸನ್ನರಾಮಂ
ಟ್ಟಪೆ ವಿಷಮಪೊಕ್ಕೆಗುಳ್ಕೃಪಜ ದೊಳ್ಕೆಯು ಕಾಳೆಯ ನಾಗನಾಗದು ॥

ಎಷ್ಟು ಪರಾಕ್ರಮವಿದ್ದರೂ ಬ್ರಾಹ್ಮಣನ ಗಂಡುಗುಣಕ್ಕೆ, ಆ ವೀರತೆಗೆ ಅಂಜುವರಾರು? ಒಳ್ಳೆಗೆ ವಿಷವಿದ್ದರೂ ಅದು ಒಳ್ಳೆ ವಿನಾ ಕಾಳಿಂಗನೆಂಬ ಘಟಸರ್ಪವಾಗದು ಎಂದು ಅಶ್ವತ್ಥಾನನ್ನು ಹೀಗಳೆದು ಆ ಸೇನಾನಿಪಟ್ಟವನ್ನು ತನಗೆ ಕಟ್ಟಿಸಿಕೊನಷ್ಟೆ? ಆಗ್ಗೆ ಆತನ ತ್ಯಾಗ ಎಲ್ಲಿಗಾಯಿತು? ಆತನ ಸ್ವಾಮಿ ಎಲ್ಲಿ ಮಾಯಿತು? ಸ್ಥಿರಂಜೀವಿಯಾದ ಅಶ್ವತ್ಥಾಮನ ಸರ್ವಸೇನಾನಿಯಾಗಿದ್ದ ಪಕ್ಷದಲ್ಲಿ, ಒಂದು ವೇಳೆ ಆತನು ಅರ್ಜನನ್ನು ಕೆಡಹುತ್ತಿದ್ದನೇನೋ? ಜಯಶ್ರೀಯ ತಕ್ಕಡಿಯ ತಟ್ಟೆ ತಿರುಗುತ್ತಿದ್ದವೇನೋ? ಆದರೆ ಭೀಷ್ಮನಿಗೆ ಕಟ್ಟುವ ಬಮೊತ್ತಮೊದಲಿನ ವೀರಪಟ್ಟವನ್ನೇ ತನಗೆ ಕಟ್ಟಿದರೆ, ತಾನು ಪಕ್ಷವನ್ನು ಆಚಿರಾತ್ ಕೊನೆಯ ಮನುಷ್ಯನ ವರೆಗೆ ನಿಪಬಲ್ಲೆನೆಂದು ಕರ್ಣನಿಗೆ ತನ್ನಲ್ಲಿದ್ದ ಆ ದೃಢವಾದ ಆತ್ಮವಯವೋ?ಅಥವಾ ಭೀಷ್ಮನ ಬಾರಿಯೂ ದ್ರೋಣನ ಬಾರಿಮುಗಿದು ಹೋಗಿ ಮತ್ತೂ ಆ ಪಟ್ಟ ತನಗೆ ಬಾರದೆ ಹೋಕೊನೆಯ ವರೆಗೂ ತನ್ನ ಬಾರಿಯೇ ಕಳೆದು ಹೋಗಿ ತಾನು ರೊಡನೆ ಹನ್ನೊಂದು ಆಗಿ ಹೋಗುವೆನಲ್ಲ ಎಂಬ ಉದ್ವೇಗವಿಲ್ಲವೆ ತನ್ನ ರಕ್ತದಲ್ಲಿ ಆ ದುರ್ದಮ್ಯವಾದ ಕ್ಷಾತ್ರತೇಜ ಕೊಂಡಿದ್ದರೂ, ಹಾಗೂ ಪರಶುರಾಮನು ತನಗೆ ಶಾಪವಿತ್ತ ತಾನು ಕ್ಷತ್ರಿಯನೆಂಬ ಶಂಕೆಯ ನಸುಗದಿರು ತನ್ನ ಮನಒಮ್ಮೆ ಚನುಕಿಸಿದ್ದರೂ, ಅದನ್ನು ಬುಡಮುಟ್ಟಿ ಆರಿಯಕೊನೆಗೊಮ್ಮೆ ಇತ್ತೀಚೆ ಕೃಷ್ಣನಿಂದಲೂ ಕುಂತಿಯಿಂದಲೂ ಜನ್ಮತಃ ಕ್ಷತ್ರಿಯನೆಂದು ತಿಳಿದಮೇಲೆ, ತನ್ನನ್ನು ಅಂದಿಂದಿನ ತನಕಾ ಸೂತಪುತ್ರನೆಂದು ಕಾಳುಗೆಡೆದ ಬ್ರಹ್ಮ-ಕ್ಷತ್ರಿಮುಂದೆ ತನ್ನ ಕ್ಷಾತ್ರವನ್ನೊಮ್ಮೆ ಮೆರಸಲಿಕ್ಕೆ, ಜಗದ ಅದನ್ನೊಮ್ಮೆ ಸಾರಲಿಕ್ಕೆ, ಹಾಗೂ ಅರ್ಜುನನೊಡನೆ ಖಖಾಡಿಯಾಗಿ ಕಾದಾಡಿ ಅದನ್ನು ಪ್ರತ್ಯಕ್ಷನಾಗಿ ಕಾಯಶೋರ್ಪಡಿಸಲಿಕ್ಕೆ ತನಗಿರುವ ಏಕಮಾತ್ರವಾದ ಅವಕ ಜಗುಳಿ ಹೋಗುವುದಲ್ಲ ಎಂಬ ಸಂಕ್ಷೋಭವೊ?—ಅಲ್ಲ, ಮ

ಗಹನವಾದ ವಿಚಾರವೋ? ಕರ್ಣನ ಮನಸ್ಸನ್ನು ಮಥಿಸುತ್ತಿದ್ದಿತು ಎಂಬುದು ಕೇವಲ ದುರ್ವಿಭಾವ್ಯ.

ವ್ಯಾಸಭಾರತದ ನಾಯಕನು ಭಾರತಯದ್ಧದ ಯಾವ ವೀರನೂ ಅಲ್ಲ; ಸ್ವಯಂ ಶ್ರೀಕೃಷ್ಣನೇ ಆದರೂ, ಪಂಪಭಾರತದ ನಾಯಕನು ಹೇಗೂ, ಕನ್ನಡ ಭಾರತದ ನಾಯಕನು ಬಹುಮಟ್ಟಿಗೂ ಅರ್ಜುನನೇ ಎನ್ನಬಹುದು. ಆದರೂ ಪಂಪನೂ ಕನ್ನಡ ಭಾರತಕಾರನೂ ಕರ್ಣನಿಗೆ ಮನಸೋತು, ಪಂಪನು 'ಚಾಗದ ನನ್ನಿಯ ಕಲಿತನದಾಗರ' ವಾದ (ಪಂ. ಭಾ. XII. ೨೧೪) ಆತನನ್ನು ಕುರಿತು ನಿಃಸ್ವಾರ್ಥವಾಗಿ ಹಾಗೂ ಮುಕ್ತಕಂಠವಾಗಿ ಈ ಉದಾರವಾದ ಉದ್ಗಾರವನ್ನು ಎತ್ತಿರುತ್ತಾನೆ (ಪಂ. ಭಾ. XII)—

ನೆನೆಯುದಿರ್ಪ್ಪ ಭಾರತದೊಳಂ ಪೆರರಾರುಮನೊಂದೆ ಚಿತ್ತದಿಂ
ನೆನೆಪೊದೆ ಕರ್ಣನಂ ನೆನೆಯು! ಕರ್ಣನೊಳ್ಳರ್ದೊರೆ?
ಕರ್ಣನೇರು, ಕರ್—।
ಜನ ಕಡುನ್ನ, ಕರ್ಣನಳವಂಕದ ಕರ್ಣನ ಚಾಗಮೆಂಪುದ-
ರ್ಜನ ಪಡೆವಂತಿರಲ್ ಪುದಿದು ಕರ್ಣರನಾಯನನುಳ್ತೆ ಭಾರತಂ?
॥ ೨೧೭ ॥

ಕನ್ನಡ ಭಾರತಕಾರನು ಕರ್ಣನನ್ನು ಕುರಿತು ಅರ್ಜುನನ ರಥಧ್ವಜದಲ್ಲಿ ಮಂಡಿಸಿದ ಹನುಮಂತನಿಂದ (ಕರ್ಣ : ೨೭)—

ಅತಿ ಭಾಪು ಕರ್ಣ! ಪೊಯ್ದು ಭಾ-
ಪೆಂ ಭಟಾಗ್ರಣಿ! ನಿನ್ನ ಕಂಡೊರೆ
ಎರಡು ಯುಗದಲಿ ಕಾಣೆನೆಂದಳಿ ನು ಕಲಿತನುನು ॥ ೨ ॥

ಎಂದೂ, ಅಂತೆ ಕರ್ಣನು ದ್ವಾಪರ ಯುಗದ ಅಪ್ರತಿಮ ವೀರನೇ ಅಲ್ಲ, ತ್ರೇತೆಯಲ್ಲಿದ್ದ ಶ್ರೀರಾಮನಿಗೂ ಮಿಕ್ಕ ವೀರನೆಂದಂತಾಯಿತು! ಅಂತರಿಕ್ಷದಲ್ಲಿ ನೆರೆದು ಕರ್ಣಾರ್ಜುನರ ಸಂಗ್ರಾಮವನ್ನು ಅವಲೋಕಿಸುತಿದ್ದ ದೇವತೆಗಳಿಂದ—

ಕೊಟ್ಟ ಭಾಷೆಯ ತಿಮಿರಿ ಬಾಣವ
ತೊಟ್ಟನೇ ಖಾನೆಡೆಯುನೆಂದರೆ
ಅಬ್ಬದತೆ ಪಾಂಡವರೊಳನು ಸಂಧಾನವನು ಬಿಸುಟು!
ನೆಟ್ಟ ಕಡೆ (ಳುಕಿದನೆ ಕಾರವ
ಕೆಟ್ಟನಳಟಳಿಂದು ಕಾಯುವ
ಬಟ್ಟೆ ಕರ್ಣಂಗಾರು ಸರಿಯೆನ ತಿಪ ರದವರಗಣ ॥ ೨೬ ॥

ಎಂದೂ ಇಷ್ಟು ಉಚ್ಚೈಸ್ತರವಾದ ಶ್ಲಾಘೆಗಳನ್ನು ಉದ್ಘೋಷಿಸಿರುತ್ತಾನೆ. ಅವರಿಬ್ಬರೂ ಕವಿಗಳು ಇಷ್ಟು ಉದಾತ್ತವಾಗಿ ಇಷ್ಟು ನಿತಾಂತವಾಗಿ ಭಾರತದ ನಿಮ್ಕ ಯಾವ ವೀರರನ್ನೂ ಹೊಗಳಿಲ್ಲ. ಕರ್ಣನ ಚಾಗಕ್ಕೆ, ನನ್ನಿಗೆ, ಕಲಿತನಕ್ಕೆ, ಆತನ ವ್ಯಕ್ತಿತ್ವಕ್ಕೆ ಇದಕ್ಕೂ ಮಿಂಚಿನ ಬೇರೆ ಕಪ್ಪಬೇಕೇ?



DHARWAR RADIO STATION

Opens Shortly!

Ekco & Pilot Radios

ROLEX Famous Watches

FOR

Gents and Ladies

Most Reasonable Rates.

Quality goods at Low Cost.

Authorised Dealers:

M/s. HUDDAR & SONS.

DHARWAR



'ಚಾರಪಾಯ'

(ದೇಶಾಚಾರ ಪರಿಚಯ)

ಶ್ರೀ. ಎಚ್. ಎಸ್. ಸಾಟೀಲ, ಎಮ್. ಎ., ಬಿ. ಕಾಮ್., ದಿಲ್ಲಿ

★

ಉತ್ತರ ಭಾರತದಲ್ಲಿ ಒಲೆ ಮನೆಗೊಂದೆ ಆದರೂ ತಲೆಗೆ ಒಂದೊಂದು 'ಚಾರಪಾಯಿ' ಇರುವವು. ಅಲ್ಲಿಯ ಜನಜೀವನದಲ್ಲಿ ಚಾರಪಾಯಿಯ ಬಳಕೆ ವಿವಿಧ ರೂಪದಲ್ಲಿದೆ.

★

ನೀವು ಕರ್ನಾಟಕದಿಂದ ಹೊರಟು ಉತ್ತರ ಭಾರತದಲ್ಲಿ ಪ್ರವೇಶ ಪ್ರವಾಸ ಮಾಡಿರುವಿರೇನು? ಹಾಗೆ ಮಾಡಿದಾಗ, ಪುಣೆ-ಮುಂಬಯಿಗಳ ನೇರಿಂದ ಉತ್ತರಾಪಥದಲ್ಲಿ ಬಂದಿದ್ದರೆ ನಿಮಗೆ ಈ ಲೇಖನದ ತಲೆಬರಹದ ಅರ್ಥವು ತುಸುವಾದರೂ ಆಗಬಹುದು; ಅದರ ಬದಲಾಗಿ ಗುಂತಕಲ್ಲು ಮಾರ್ಗವಾಗಿಯೋ, ಪುಣ್ಯಾಸಿನ ಮೇಲಿಂದಲೋ ಉತ್ತರ ಸೀಮೆಯನ್ನು ಕೇರಿದ್ದರೆ, 'ಚಾರಪಾಯ' ಶಬ್ದದ ಅರ್ಥವು ನಿಮಗೆ ಸಹಜವಾಗಿಯೂ ಸರಿಯಾಗಿಯೂ ಆಗುವುದು ಕಿಂಚಿತ್ ಕಠಿಣವೆಂದೇ ಹೇಳಬಹುದು. ಮಹಾರಾಷ್ಟ್ರದ ಭಾಗದೊಳಗಿಂದ ಬಂದುದರಿಂದ ಇದೊಂದು ಹೆಚ್ಚಿನ ಅನುಕೂಲ.... ನಮ್ಮ ಉತ್ತರ ದೇಶದ ಜಾಂಧವರನ್ನು ಛಾತುಕೊಳ್ಳಲಿಕ್ಕೆ ಎಂದು ಹೇಳಬಹುದು. ಆದರೆ ಸುರಾತಿಯ ಮುಖಪರಿಚಯದಿಂದ ಮಾತ್ರ ಈ ಶಬ್ದದ ಅರ್ಥವನ್ನು 'ನಾಲ್ಕು ಕಾಲುಗಳು' ಎಂದು ಮಾಡ ಹೋದರೆ, ಅದು ದೊಡ್ಡ ಪ್ರಮಾದವೆನಿಸಬಹುದು; ಅದಕ್ಕಿಂತ ಆ ಶಬ್ದವನ್ನು ತಿಳಿಯದಿರುವುದೇ ಮೇಲು ಎನ್ನಬೇಕಾಗುವುದು. ಇತ್ತ ಈ ಬಗೆಯ ದ್ರಾವಿಡೀ ಪ್ರಾಣಾಯಾಮ ಬೇಡ ಎನ್ನುವ ನಾವು-ಕನ್ನಡಿಗರು, ಸಾಮಾನ್ಯನಾಗಿ ಈ ಪದದ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳುವೆವು ಎಂಬಲ್ಲಿ ಸಂಶಯವಿಲ್ಲ.

ಉತ್ತರ ಭಾರತದಲ್ಲಿ 'ಚಾರಪಾಯ' ಎಂಬುದೊಂದು ವಸ್ತು-ವಿಶೇಷ. ಇಷ್ಟೊಂದು ದೊಡ್ಡ ರೀತಿಯಲ್ಲಿ ಈ ವಸ್ತುವಿನ ಪರಿಚಯ ಮಾಡಿಕೊಡುವುದಕ್ಕಿಂತ, ಅದೊಂದು ಕಾಟುಂಬಿಕ ವಸ್ತು ಎಂದು ಹೇಳಿದರೆ ಹೆಚ್ಚು ಸುಗಮವಾಗಿ ತಿಳಿಯಬಹುದು. ನಮ್ಮ ಕಡೆಯಲ್ಲಿ ಮಂಚ, ಪಲ್ಲಂಗ್ಯು ಎಂಬ ವಸ್ತುವು ಈಗ ಸಾಮಾನ್ಯನಾಗಿ ಎಲ್ಲ ಮನೆಗಳಲ್ಲಿ ಕಾಣುತ್ತಿದ್ದರೂ ಹೆಚ್ಚಾಗಿ ದೊಡ್ಡ ದೊಡ್ಡ ಮನೆತನಗಳಲ್ಲಿ ನೋಡಲು ಕಾಣುತ್ತಿತ್ತು. ಇಷ್ಟೆ ಅಲ್ಲದೆ, ಅದರ ಉಪಯೋಗವು ಕೂಡ ನಿರ್ದಿಷ್ಟವಾದುದಿರುತ್ತದೆ. ಆದರೆ ಚಿತ್ತರೇಯರಲ್ಲಿ ಇದೊಂದು ತೀರ ಸಾಮಾನ್ಯವಾದ ವಸ್ತುವಾದರೂ ಇದರ ಮಹಿಮೆಯು ಅಸಾಮಾನ್ಯವಾಗಿದೆ. ಇದಕ್ಕೆ 'ಖಟಿಯಾ' 'ಬೆಡ್' ಎಂಬ ಸಮಾನಾರ್ಥದ ಪದಗಳು ಆ ಆ ಅಂತಸ್ತಿನ ಕುಟುಂಬಗಳಲ್ಲಿ ರೂಢವಾಗಿದ್ದರೂ, 'ಚಾರಪಾಯಿ' ಎಂಬುದರ ಉಪಯೋಗವು ಮಾತ್ರ ಹೆಚ್ಚು-ಕಡಿಮೆ ಒಂದೇ ರೀತಿಯದೆಂಬುದು ಕಂಡು ಬರುವುದು.

ನಿಮ್ಮನ್ನು ನಾನು ಇಲ್ಲಿಯ ಒಬ್ಬ ಹಿಂದೀ ಮಿತ್ರರ ಮನೆಗೆ ಕರೆದೊಯ್ದರೆ, ಅಲ್ಲಿ ನಿಮಗೆ ಹಾರ್ದಿಕ ಸ್ವಾಗತವು ದೊರೆಯುವುದು ಖಂಡಿತ. ಹೋಗತ್ತಲೆ 'ಬನ್ನಿರಿ, ಬರಬೇಕು' ಎಂಬ ಮಾತುಗಳೊಂದಿಗೆ 'ಕುಳಿತುಕೊಳ್ಳಿರಿ' ಎಂದೆನ್ನುತ್ತ ತಾವು ಕುಳಿತ ಆಸನಬಲ್ಲಿಯೆ ತುಸು ಸ್ಥಳವನ್ನು ಮಾಡಿಕೊಡುವರು. ಆದರೆ ನೀವು ಮಾತ್ರ ಅನಾಗರಿಕಂತೆ 'ಥೂ, ಆ ಹೊರಸಿನ ಮೇಲೆ ಯಾರು ಕೂಡ್ರಬೇಕು' ಎಂದು ನೊಂದುಕೊಂಡು ನಿಡಿದು ನಿಲ್ಲಬಹುದು. ನಮ್ಮಲ್ಲಿ ಹೊರಸಿನ ದರ್ಶನವು ಬಾಣಂತಿಯರ ಕೋಣೆಯಲ್ಲಿ ಮಾತ್ರ ಆಗುತ್ತಿದ್ದರೆ, ಇಲ್ಲಿ ಅದು ಸರ್ವಸಾಧಾರಣವಾದ ಉಪಯೋಗದ ವಸ್ತು; ಅಂತೆಯೆ ಎಲ್ಲ ಮನೆಗಳಲ್ಲಿಯೂ ಕಾಣುವ ಒಡನೆ! ಎಲ್ಲ ಕಾಲಗಳಲ್ಲಿಯೂ ಕಂಗೊಳಿಸುವ ಸಾಮಾನು! ಇದೇನು ಆಶ್ಚರ್ಯದ ಸಂಗತಿ! ಹುಟ್ಟು-ಸಾವುಗಳಿಗೆ ಸ್ಥಳ-ಕಾಲಗಳ ನಿರ್ಬಂಧವೆ? 'ಎಲ್ಲಿ ಹುಟ್ಟುಗಳು ಸಂಭವಿಸುತ್ತವೆಯೊ ಅಲ್ಲಿ ಹೊರಸುಗಳು ಬೇಕೆ ಬೇಕು' ಎಂದು ನೀವು ವಾದಿಸಬಹುದು. ಹುಟ್ಟು-ಸಾವುಗಳು ಎಲ್ಲಿ ಹೋದರೂ ಒಂದೇ ಎಂಬ ಮಾತನ್ನು ಒಪ್ಪಿದಂತೆಯೆ, ನಾನು ಆ ಎರಡನೆಯ ವಾಕ್ಯದ ವಾದ ಸರಣಿಯನ್ನು ಮಾತ್ರ ಸ್ವೀಕರಿಸಲಾರೆ. ನಮ್ಮ ಭಾಗದಲ್ಲಿ ಹತ್ತು ಮನೆತನಗಳಲ್ಲಿ ಒಂದು ಹೊರಸು ಇರುತ್ತಿದ್ದರೆ, ಇಲ್ಲಿ ಹತ್ತು ಜನರಿರುವ ಒಂದು ಮನೆಯಲ್ಲಿಯೆ ಹತ್ತು ಹೊರಸುಗಳು ಗೋಚರವಾಗುತ್ತವೆ.

ಇಂತಹ ಒಂದು ಮಾತಿನಿಂದ ತಾವು ಇಲ್ಲಿಯ ಜನಸಂಖ್ಯೆಯು ದೊಡ್ಡ ಪ್ರಮಾಣದಲ್ಲಿರಬಹುದು—ಎಂದು ತಿಳಿಯಬಹುದು; ಆದರೆ ಈ ಬಗೆಯ ತಮ್ಮ ಭಾವನೆಯು ತಕ್ಕಮಟ್ಟಿಗೆ ತಪ್ಪಾದುದು ಎಂದೇ ಇಲ್ಲಿ ಹೇಳಬೇಕಾಗುವುದು. ಇಡಿಯ ಭಾರತದಲ್ಲಿ ಒಂದು ಮಲಬಾರ, ಒಂದು ಬಂಗಾಲ ಈ ಎರಡು ಪ್ರದೇಶಗಳಲ್ಲಿ ಜನಸಂಖ್ಯೆಯು ಹಿರಿದಾಗಿರುವುದು ನಿಜ. ಆದರೆ ಉತ್ತರಭಾರತದಲ್ಲಿ—ಹೆಚ್ಚು ಸಾಂದ್ರತೆಯಂತೆಯೆ—ಕಡಿಮೆ ಸಾಂದ್ರತೆಯ ಪ್ರದೇಶಗಳೂ ಸಾಕಷ್ಟಿವೆ. ಹೀಗಿದ್ದರೂ ಕೂಡ ಹೊರಗಿನ ಪ್ರಮಾಣವು ಮಾತ್ರ ಜನರ ಸಂಖ್ಯೆಯಷ್ಟೆ, ಅದೇಕೆ—ಅದಕ್ಕಿಂತ ಕದಾಚಿತ್ ಹೆಚ್ಚಾದುದಾಗಿಯೆ ಇರಬಹುದು.

'ಹಾಗಾದರೆ ಈ ಬಗೆಯ ಪರಿಸ್ಥಿತಿಗೆ ಇಲ್ಲಿಯ ಹವಾಮಾನವೆ ಕಾರಣವಾಗಿರಬಹುದು!' ಎಂದು ತಾವು ಹೇಳಬಹುದಲ್ಲವೆ? ಇಲ್ಲಿಯ ವಿಪರೀತವಾದ ಚಳಿ ಮತ್ತು ಅಸಹನೀಯವಾದ ಸೆಕೆಯ

ಕಾಲಗಳಲ್ಲಿ ನೆಲದ ಮೇಲೆ ಕುಳಿತುಕೊಳ್ಳುವುದು ಕೂಡ ಅಸಾಧ್ಯವಾಗಿರಬಹುದು, ಅಂತೆಯೆ ಇಲ್ಲಿ ಪ್ರತಿದಿನ ಮಲಗಿಕೊಳ್ಳುವುದಕ್ಕಾಗಿ ಈ ವಸ್ತುವನ್ನು ಉಪಯೋಗಿಸುತ್ತಿರಬಹುದು ಎಂದು ತಾವು ನನ್ನನ್ನು ಸಮಾಧಾನಗೊಳಿಸಲೆಳಸಬಹುದು. ಈ ತಮ್ಮ ದೃಷ್ಟಿಯು ತಕ್ಕ ಮಟ್ಟಿಗೆ ಸರಿಯಾದುದು. ಇಲ್ಲಿ ಚಳಿಯು ಘನವಾಗಿರುವುದು ನಿಜ. ಅದಕ್ಕಾಗಿ ನೆಲದ ಮೇಲೆ ಹಾಗೆಯೆ ಮಲಗುವುದು ಕಠಿಣ. ಅಂತೆಯೆ ಬಡವರ ಬಂಧುವಾದ ಈ "ದೇಶೀ ಮಂಚ"ವನ್ನು ಇಷ್ಟು ಪ್ರಚಾರದಲ್ಲಿಟ್ಟುಕೊಂಡಿರುವರು ಎಂಬ ಮಾತು ನಿಜ. ಆದರೆ ಅದು ಪೂರ್ಣ ಸತ್ಯವಾದ ಮಾತಲ್ಲ. ಚಾರಪಾಯಿಗೆ ಒಂದು ಸಾಮಾನ್ಯವಾದ ಕೌಟುಂಬಿಕ ಔಪಯೋಗಿಕ ವಸ್ತು ಎನ್ನುವುದೇಂದರೆ ಅದರ ಕೀರ್ತಿಗೆ ಒಂದು ಕುಂದಕವನ್ನುಂಟುಮಾಡಿದಂತೆ! ಈ ಭಾಗದಲ್ಲಿ ಚಾರಪಾಯಿಯೊಂದು ಸಂಸ್ಥೆ!

ಕುಟುಂಬವು ಒಂದು ಸಂಸ್ಥೆ ಎಂದು ಸಮಾಜಶಾಸ್ತ್ರಿಗಳು ಹೇಳುವುದಿಲ್ಲವೆ? ಅದರಲ್ಲಿ ಕಾರ್ಯವಿಭಜನೆಯು ಇರುವಂತೆ, ಚಾರಪಾಯಿಯಿಂದಲೂ ಅನೇಕ ತರದ ಕೆಲಸಗಳು ಆಗುತ್ತವೆ. ಅದರಲ್ಲಿ ಶರಣಾರ್ಥಿಗಳ ಸಂಖ್ಯೆಯು ಎಲ್ಲೆಲ್ಲಿಯೂ ಮನೆಯೆ ಇಲ್ಲದೆ ತಿರುಗುವಾಗ್ಗೆ ಚಾರಪಾಯಿಯೆಂಬುದೆ ಒಂದು ಮನೆ ಹೇಗೆ ಎಂಬುದು ಉತ್ತರಭಾರತದ ಯಾವುದೇ ಸ್ಥಳದಲ್ಲಿ ನಿಮಗೆ ನೋಡಲಿಕ್ಕೆ ದೊರೆಯಬಹುದು. ಈ ಮಳೆಗಾಲದಲ್ಲಿ ಡೇರೆಗಳಲ್ಲಿರುವ ದುರ್ಭಾಗ್ಯಬಂದ ಶರಣಾರ್ಥಿಗಳು ಚಾರಪಾಯಿಗೆ 'ತ್ವಮೇವ ಶರಣಂ ಮಮ' ಎಂದು, ಹೇಗೆ ಜೀವಿಸುತ್ತಿದ್ದರೆಂಬುದು ಆದ್ಭುತರಮ್ಯ ಕತೆಯೆ ಆಗಿರುವುದು.

ಅಂದು ಒಂದೇ ಸಮನೆ ಮಳೆಯು ಧೋ ಧೋ ಎಂದು ಸುರಿಯುತ್ತಿತ್ತು. ಶ್ರೀಮಂತರ ಗಚ್ಚು-ಕಲ್ಲಿನ ಮನೆಗಳು ಕೂಡ ಅಲ್ಲಲ್ಲಿ ಛಿದ್ರಗಳೊಡೆದು ಸೋರುತ್ತಿದ್ದುವು. ಆಗ್ಗೆ ಇಳಿತದ ಸ್ಥಳದಲ್ಲಿ ತಂಬೂಗಳಲ್ಲಿರುತ್ತಿದ್ದ ಶರಣಾರ್ಥಿಗಳ ಪಾಡು ಕಂಗೆಟ್ಟುಹೋಗಿತ್ತು. ಇದ್ದ ಬಿದ್ದ ನಾಲ್ಕು ಮನೆಯ ಸಾಮಾನುಗಳನ್ನು ಅವರು ಹೊರಸಿನ ಮೇಲೆ ಹೇರಿ, ಅದರ ಮೇಲೆಯೆ ತಮ್ಮ ದೈನಂದಿನ ಕಾರ್ಯಕ್ರಮವನ್ನು ಸಾಗಿಸುವಂತಹ ದುರ್ಧರ ಪ್ರಸಂಗವು ಅವರಿಗೊದಗಿತ್ತು. ಹೊರಸಿನ ನಾಲ್ಕು ಕಾಲುಗಳು ಮುಕ್ಕಾಲು ಪಾಲು ನೀರಿನಲ್ಲಿ ಮುಳುಗಿವೆ; ಮೇಲೆ ಡೇರೆಯ ಬಟ್ಟೆಯ ಸೇಲೆಲ್ಲ ಮಳೆಯು ಸುರಿಯುತ್ತಲೇ ಇದೆ. ಇತ್ತ ಅಡುಗೆಯನ್ನು ಮಾಡಿಕೊಳ್ಳುತ್ತಿರುವ ಗಿಡದಡಿಯಲ್ಲಿ ಸಹ ನೀರು ಟಪಟಪನೆ ಬೀಳುತ್ತಿತ್ತು; ಅತ್ತ ಗೇಣು ಬಟ್ಟೆಯಿಲ್ಲದೆ ಮಕ್ಕಳು ಕಟಕಟ ನಡುಗುತ್ತಲಿದ್ದಾರೆ. ಇಂತಹ ಸಮಯದಲ್ಲಿ ರಾಮಕೃಷ್ಣಾಶ್ರಮದ ಸೇವಾಪಥಕವಾಗಲಿ, ಮಿಶನರಿಗಳ ಯಾವುದೇ ಗುಂಪಾಗಲಿ ಮಾಡಿದ ಕಾರ್ಯದ ನೂರು ಪಟ್ಟು ಸೇವೆಯನ್ನು ಇದೊಂದು ಚಾರಪಾಯ ಮಾಡಿರುತ್ತದೆ. ಎಂದ ಮೇಲೆ ಅದೊಂದು ಸಂಸ್ಥೆಯಲ್ಲವೆಂದು ಹೇಳುವ ಧೈರ್ಯ ಯಾರದು?

ಇದು, ಒಂದು ಅಸಾಮಾನ್ಯ ಪರಿಸ್ಥಿತಿಯಲ್ಲಿ ಚಾರಪಾಯಿಯು ಹೇಗೆ ಉಪಯೋಗವಾಗುತ್ತಿರುವುದು ಎಂಬುದನ್ನು ತಿಳಿಸಿಕೊಡುವ ದೃಷ್ಟಾಂತವಾಯಿತು. ಆದರೆ ಪ್ರತಿದಿನದಲ್ಲಿ, ಸಾಮಾನ್ಯವಾಗಿ ಇತ್ತಣಿನ ಜನರಿಗೆ ಇದೊಂದು ವಸ್ತುವಿನ ಮೇಲೆ ಅಪ್ರತಿಮವಾದ ಪ್ರೀತಿಯಿದ್ದುದು ಕಂಡು ಬರುವುದು. ಇದಕ್ಕೆ ಅವರು ಜೀವನದಲ್ಲಿ ಇಟ್ಟುಕೊಂಡ ಮೇಲಿನ ಮಟ್ಟವೆ ಕಾರಣ ಎಂಬ ಒಂದು ಮಾತಿನ ರೀತಿಯಿಂದ ತಾವು ನನ್ನನ್ನು ಕೆಣಕಬಹುದು. ಒಂದು ಉತ್ತರ ಕೊಡುವೆ ಈ ಮಾತಿಗೆ! ಚಾರಪಾಯಿಯ ಈ ಲೋಕಪ್ರಿಯತೆಗೆ ಜನರ ಜೀವನದ ಮೇಲ್ಮಟ್ಟವು ಕಾರಣವಲ್ಲ, ಅವರ ಚಾಣಾಕ್ಷತೆಯು ಕಾರಣ. ಸಾವಿರ ತರದ ಕೆಲಸಗಳಿಗೆ ಇದೊಂದೇ ವಸ್ತು ಉಪಯೋಗವಾಗುವಂತೆ ಅವರು ಅದನ್ನು ಹುಡುಕಿ ತೆಗೆದಿದ್ದಾರೆ ಎಂದು ನನ್ನ ಮತ. ಅದು ಹೇಗೆ ಎಂಬುದನ್ನು ನೀವೆ ನೋಡಿಕೊಳ್ಳಬಹುದು.

ಒಂದು ದಿನ ನಾನು ತಿರುಗಾಡಲಿಕ್ಕೆ ಹೋಗಿ ಮನೆಯ ದಾರಿಯಲ್ಲಿದ್ದೆ. ಎದುರಿಗೆ ನಮ್ಮ ಗೆಳೆಯರ ಸೇವಕನೊಬ್ಬ ಸೈಕಲ್ಲಿನ ಮೇಲೆ ಬರುತ್ತಿದ್ದದು ನನಗೆ ಗೋಚರವಾಯಿತು. ಆದರೆ ಅದೇನು ದೃಶ್ಯ! ತಲೆಯಮೇಲೆ ಹೊರಸನ್ನು ಹೇರಿಕೊಂಡು ಹೊರಟಿದ್ದಾನೆ ಈ ವ್ಯಕ್ತಿ! ನನಗೆ ಹೆದರಿಕೆ! ಇಂತಹ ಪ್ರಸಂಗದಲ್ಲಿ ತುಂಬ ಪಿಶೋಯತೆಯಿಂದ ಸಲಾಮು ಎಲ್ಲ ನಾಡುವನೊ ಎಂದು! ಎಂದರೆ ಹೊರಸು-ಸೈಕಲ್ಲು ಸಮೇತನಾಗಿ ನನ್ನ ಮೇಲೆಯೆ ಬೀಳಬಹುದಿತ್ತು. ಈ ಗಂಡಾಂತರವನ್ನು ತಪ್ಪಿಸುವ ಉದ್ದೇಶದಿಂದ ನಾನು ಸರ್ರನೆ ಕಾಲುಹಾದಿಯ (Foot path) ಮೇಲೆ ಏರಿದೆ; "ಏನೊ ಇದು?" ಎಂದು ಗದ್ದರಿಸಿದೆ. ಆದರೆ ಅವನ ಕುದುರೆ ತುಂಟ ಪ್ರಾಣಿ. ಅವನನ್ನು ಆ ಕಾಲುದಾರಿಯ ಮೇಲೆಯೆ ಹತ್ತಿಸುವ ಪ್ರಯತ್ನದಲ್ಲಿದ್ದಂತೆ ತೋರಿತು. ಏನೋ ಒಳ್ಳೆಯ ಗಮಯವೆಂದೇ ಹೇಳಬಹುದು, ಆತ ಮೆಲ್ಲನೆ ಒಂದು ಬದಿಗೆ ಕಾಲು ಉರಿದ; ಇಳಿದ; ಮತ್ತೆ ಮುಗುಳು ನಗೆ ನಗುತ್ತಾ, "ಸಾಹೇಬ್, ಇವ್ರೊತ್ತು ನಾನು ಮನೆಯನ್ನು ಬದಲಿಸಬೇಕಾಯಿತು; ಅಂತೆಯೆ ಈ ಎಲ್ಲ ಸಾಮಾನುಗಳನ್ನು ಕಟ್ಟಿಕೊಂಡು ನನಗೆ ಹೊಸದಾಗಿ ದೊರೆತ ಕ್ವಾರ್ಟರ್ಸಿಗೆ ಹೊರಟ್ಟಿದ್ದೇನೆ" ಎಂದು ಹೇಳತೊಡಗಿದ. ಅವನ ಹಿಂದೆ, ಯಾರೊ ನೋರೆಗೆ ಮುಸುಕು ಹಾಕಿಕೊಂಡು ನಿಂತಂತೆ ಕಂಡಿತು. ನಾನು ಸ್ವಲ್ಪ ತೀಕ್ಷ್ಣವಾದ ನೋಟದಿಂದ ಅತ್ತ ನೋಡುತ್ತಿರುವುದನ್ನು ಕಂಡು, ಆತನೆ ಆ ಸಮಸ್ಯೆಯ ಪರಿಹಾರವನ್ನು ಮಾಡಿದ. "ನನ್ನ ಜನಾನ" ಎಂದು ಹೆಲ್ಲುಕಿರಿದ. ನನಗೆ ತಿಳಿಯದಷ್ಟು ಆಶ್ಚರ್ಯವಾಯಿತು. ಮುಂದೆ ಒಂದು ಚಾಪಿಯ ಪೆಟ್ಟಿಗೆಯನ್ನು ಮಾಡಿ, ಅದರಲ್ಲಿ ತನ್ನ ಎರಡು ವರ್ಷದ ಮಗುವನ್ನು ಕೂಡಿಸಿದ್ದಾನೆ. ಸೈಕಲ್ಲಿನ ಕಂಬಿಗೆ ತನ್ನ ಕುಟುಂಬದ ನಾಲ್ಕಾರು ಸಾಮಾನುಗಳನ್ನು ಗಂಟುಕಟ್ಟಿ ತೂಗಿಸಿದ್ದಾನೆ. ಹಿಂದೆ ಹೆಂಡತಿ; ಮೇಲೆ ಚಾರಪಾಯಿ, ಅಯ್ತು ಅವನ ಸಂಸಾರ. ಬಗೆಹರಿಯಿತು ಅವನ ವಾಹಪಥದ ಸಮಸ್ಯೆ.

ಒಂದು ವೇಳೆ ಚಾರಪಾಯ ಇದು ಸಂಸಾರದ ಒಂದು ಔಪ-
ಯೋಗಿಕವಸ್ತು ಎಂಬ ಸಿದ್ಧಾಂತವನ್ನು ನಾವು ಒಪ್ಪಿದರೆ, ಅದರಲ್ಲಿ
ಕೂಡ ಅದರ ಉಪಯೋಗ ನೈವಿಧ್ಯವನ್ನು ಕಂಡು, ದಕ್ಷಿಣಭಾರತದ
ಯಾವ ಮನುಷ್ಯನೂ ಬೆರಗಾಗದಿರನು. ಇಷ್ಟು ಫಲದ್ರೂಪವಾದ
ಈ ಪ್ರದೇಶದಲ್ಲಿ ಜನರು, ಹೆಚ್ಚು ಶ್ರಮಪಟ್ಟು ಜೀವನದಲ್ಲಿ ವಿವಿಧ
ವಸ್ತುಗಳ ಅವಶ್ಯಕತೆಯನ್ನು ಉಂಟು ಮಾಡಿಕೊಳ್ಳುವ ಬದಲು
ಇದೊಂದೆ ವಸ್ತುವಿನ ಶೋಧಮಾಡಿ, ಅದರಿಂದ ಎಷ್ಟು ಬಗೆಯ
ಸೇವೆಯನ್ನು ಪಡೆಯುವರಲ್ಲ ಎಂಬ ವಿಷಯವು ಅವರ ಬುದ್ಧಿಯ
ಬಗ್ಗೆ ನಿಮ್ಮ ಅಭಿಮಾನವನ್ನೂ, ಅವರ ಜಾಣತನದ ವಿಷಯವಾಗಿ
ನಿಮ್ಮ ಕೌತುಕವನ್ನೂ ಹುಟ್ಟಿಸದಿರವು. ಒಕ್ಕಲುತನದ ಮೇಲೆಯೆ
ಎಲ್ಲ ಉದ್ಯಮಗಳು ಅವಲಂಬಿಸಿದಂತೆ ಚಾರಪಾಯ ಮೇಜೆಯೆ
ಇಲ್ಲಿಯ ಜನರ ಎಲ್ಲ ಚಟುವಟಿಕೆಗಳು ಕೇಂದ್ರಿತವಾಗಿರುತ್ತವೆ.
ಒಂದೆರಡು ಸಣ್ಣ ದೃಷ್ಟಾಂತಗಳನ್ನು ಸ್ಪಷ್ಟೀಕರಣಕ್ಕಾಗಿ ಕೊಡ-
ಬಹುದು.

ನೊನ್ನಿನ ಮಹಾ ಯುದ್ಧದ ಪರಿಣಾಮವಾಗಿ ನುತ್ತು
ಹಿಂದುಸ್ಥಾನದ ಸ್ವಾತಂತ್ರ್ಯದೊಡನೆ ಅಪರಿಹಾರ್ಯವಾಗಿ ಬಂದ
ದೇಶ ವಿಭಜನೆಯ ಫಲವಾಗಿ, ಉತ್ತರಭಾರತದ ಎಲ್ಲ ನಗರಗಳ-
ಲ್ಲಿಯೂ ಈಗ ಜನಸಂಖ್ಯೆಯ ಪ್ರಮಾಣವು ವಿಪರೀತವಾಗಿ ಬೆಳೆದು
ಜನರಿಗೆ ಇರಲಿಕ್ಕೆ ಕೂಡ ಸ್ಥಳವು ಸಿಗದಂತಾಗಿರುವುದು. ಇಂತಹ
ವಿಷಮ ಪರಿಸ್ಥಿತಿಯ ದಿನಗಳನ್ನು ಕುರಿತು ನಾವು ವಿಚಾರ
ಮಾಡಿದರೆ, ಅದು ಅಷ್ಟೊಂದು ಪ್ರಾತಿನಿಧಿಕವಾದ ಪರೀಕ್ಷೆಯೆನಿಸ-
ಲಾರದು. ಅಂತೆಯೆ ನಾವು ನೀವು ಸೇರಿ, ಒಂದು ಯಾವುದಾ-
ದರೂ ಸಣ್ಣ ಊರಿಗೆ ಹೋಗೋಣ. ಅಲ್ಲಿ ನಿಜವಾಗಿ ನೋಡಿ-
ದರೆ ಜನರ ಗದ್ದಲವೂ ಕಡಿಮೆ; ಮನೆಗಳು ಸಿಗುವುದಿಲ್ಲ ಎಂಬ
ತೊಂದರೆಯೂ ಇದೆ. ಆದರೂ ಕೂಡ ಅಲ್ಲಿಯ ಚಿಕ್ಕಪುಟ್ಟ
ವ್ಯಾಪಾರಿಗಳು ಒಂದು ಅಂಗಡಿಯನ್ನು, ಮಳಿಗೆಯನ್ನು ಬಾಡಿಗೆ-
ಗಾಗಲಿ, ಬಿಡಿಸಿಕೊಂಡಾಗಲಿ ಹಿಡಿದು, ಅಲ್ಲಿ ತಮ್ಮ ಸರಕುಗಳ
ಮಾರಾಟವನ್ನು ಮಾಡುವರೆಂದು ನೀವು ತಿಳಿದಿರುವಿರೇನು ?
ಎಂದಿಗೂ ಇಲ್ಲ. ರಾತ್ರಿಯಲ್ಲಿ ತಾವು ಮಲಗಲಿಕ್ಕೆ, ಮಧ್ಯಾಹ್ನದಲ್ಲಿ
ಕೂಡಲಿಕ್ಕೆ ಉಪಯೋಗಿಸುವ ಚಾರಪಾಯವನ್ನೇ ಅವರು ವ್ಯಾಪಾರ
ವಾಗುವ ಸಮಯದಲ್ಲಿ ತಮ್ಮ ಅಂಗಡಿಯನ್ನು ನುಂಡಿಸಲಿಕ್ಕೆ
ಉಪಯೋಗಿಸುವರು. ಸಂಜೆಗೆ, ಮಕ್ಕಳು ಮನೆಗೆ ಬಂದರೆಂದರೆ,
ಆದರ ಮೇಲೆಯೆ ಅವರ ಓದು-ಬರಹ ನಡೆಯುವುದು. ಆ
ಮೇಲೆ ದಿನದ ಗಳಿಕೆಯ ಲೆಕ್ಕಪತ್ರದ ಕಚೇರಿಯೂ ಕೂಡ ಆ
ಚಾರಪಾಯವೆ ! ಹೀಗೆ ವಿವಿಧೋಪಯೋಗಿಯಾದ ಈ ಚಾರ-
ಪಾಯವು ಇಲ್ಲಿಯ ಜನರ ಜೀವನದಲ್ಲಿ ಒಂದು ಅನಿವಾರ್ಯವಾದ
ಘಟಕವೆ ಆಗಿರುವುದು.

ಇನ್ನೊಂದೆ ಒಂದು ಮಾತನ್ನು ಈ ವಿಷಯವಾಗಿ ವಿಶದಪಡಿ-
ಸಿದರೆ, ಚಾರಪಾಯವು ಉತ್ತರ ಹಿಂದುಸ್ತಾನದಲ್ಲಿ ಹೇಗೆ ಉಪ-
ಯುಕ್ತವಾಗಿರುವುದು ಎಂಬುದು ನಿಮಗೆ ತಿಳಿದು, ಆದರೆ ನಿಜವಾ
ಭೂಮಿಕೆಯಿಂತಹದಿದೆ ಎಂಬುದು ಸ್ಪಷ್ಟವಾಗುವುದು. ಹೊಸದಾ
ಕೆಲಸವನ್ನು ನೋಡಿಕೊಂಡು, ಪರವೂರಿಗೆ ಹೋಗುವ ಎಲ್ಲರಿ
ಮನೆಗಳ ಸಮಸ್ಯೆಯನ್ನು ಎದುರಿಸಬೇಕಾದಂತೆಯೆ ನನಗ
ಎದುರಿಸಬೇಕಾಯಿತು. ಆದರೆ ಅದೇನೊ ಒಂದು ಕಾರಣದಿಂ
ತುಸ ಅನುಕೂಲವಾಯಿತು ನನಗೆ. ಆದರೆ ಅದೂ ಎಂತ
ಅನುಕೂಲ ? ಮನೆ ಎಂದು ಮನಸ್ಸಿನಲ್ಲಿ ಮಾತ್ರ ಮಾಡಿಕೊಳ್ಳ
ಬೇಕು. ಅದಕ್ಕೆ ಅಡುಗೆಯ ಮನೆಯಿಲ್ಲ, ಬಚ್ಚಲುಮನೆಯಿ
ಕೆಲವು ದಿನ ನಾನು ನನ್ನ ನೆರೆಮನೆಯವರ ಬಚ್ಚಲವನ್ನೆ ಉಪ
ಯೋಗಿಸಬಹುದು ಎಂದು ನಾನು ಆ ಮನೆಯನ್ನು ಪ್ರವೇಶಿಸಿದೆನ
ಆದರೆ ನೆರೆಮನೆಯ ಮಿತ್ರನು ಮರುದಿನ ನಾನು ಸಂಕೋಚಪಡುವ
ಹೊತ್ತುಗಳೆಯುವದನ್ನು ಕಂಡು ಇತ್ತ ಕಡೆಗೆ ಬಂದನು. 'ಇ
ಸ್ನಾನ ಮಾಡಬೇಕಾಗಿತ್ತು, ಎಂದೆ ನಾನು ತಡೆತಡೆಯುತ್ತ
'ಅವರಲ್ಲೇನಿದೆ ನಾವು ಮಾಡುವೆವಲ್ಲ, ಹಾಗೆಯೆ ಮಾಡಿದರಾ
ಯಿತು' ಎಂದು ಅವನು ಹೇಳಿದ. ಒಂದು ಸಮಸ್ಯೆಯು, ಬಗೆಹ
ದಂತಾಯಿತು, ಎಂದು ನಾನು ನನ್ನ ಪಂಜೆಯೊಂದಿಗೆ ಅತ್ತ ನಡೆ
ಅಲ್ಲಿ ನನ್ನ ಮಿತ್ರ ಸ್ನಾನದಲ್ಲಿ ತೊಡಗಿದ್ದ. ನೋಡುತ್ತೇನೆ-ಅದೇ
ಬಚ್ಚಲುಮನೆ ! ಒಂದು ಕಲ್ಲನ್ನು ನಾಲ್ಕು ಇಟ್ಟಂಗಿಗಳ ಮೇ
ಇಟ್ಟು, ಒಂದು ಗೋಡೆಯ ಬದಿಗೆ ನಡೆದಿದೆ ಅವನ ಜಳಕ
ಮರೆಯಾಗಲಿಕ್ಕೆಂದು ಒಂದು ಚಾರಪಾಯನ್ನು ಇರಿಸಿಕೊಂಡಿದ್ದಾ
ಭಲೆ ! ಎಂದೆ ನಾನು. ಈ ಜನರ ಸಮಯಸೂಚಕತೆಗೆ ಮೆಲೆಯ
ಇಲ್ಲ, ಎಂದುಕೊಂಡೆ. ಸ್ನಾನ ಮಾಡುವಾಗ್ಗೆ ಆಣೆಯಾಗುವ
ಚಾರಪಾಯವು ಊಟ ಮಾಡುವಾಗ್ಗೆ, ನಿದ್ದೆ ಮಾಡುವಾಗ್ಗೆ
ಬಟ್ಟೆಗಳನ್ನು ಉಡುವಾಗ್ಗೆ ಪಡದೆಯಾಗಿ ಪರಿಣಮಿಸುತ್ತದೆ
ಇಷ್ಟೊಂದು ಸಮರಸವಾಗಿ ಹೋಗಿದೆ ಈ ವಸ್ತು ಇಲ್ಲಿಯ ಜೀವನ
ದೊಡನೆ.

ಅಂತೆಯೆ ನಾನು ಇದಕ್ಕೆ ಕೇವಲ ಒಂದು ವಸ್ತುವೆಂದಾಗಲೆ
ಸಂಸ್ಥೆಯೆಂದಾಗಲಿ ಅನ್ನುವದಕ್ಕಿಂತ ಇದೊಂದು ಸಂಕೇತ ಎನ್ನ
ಬಯಸುತ್ತೇನೆ. ಹಿಂದುಸ್ತಾನದಲ್ಲಿ ಕೇವಲ ಗಂಗಾಯಮುನೆಗ
'ದುವಾಬ' ಪ್ರದೇಶಕ್ಕಾಗಿ ಎಲ್ಲ ಯುದ್ಧಗಳು ಜರುಗಿದ್ದವ
ಅಂತಹ ಯುದ್ಧಗಳು ಇತ್ತೀಚೆಗೆ ಕಡಿಮೆಯಾದುದಕ್ಕೆ ಎಲ್ಲರಿಗೂ
ಸಮವಾಗಿ ಬೇಕಾಗುವ ಈ ಚಾರಪಾಯವೆ ಕಾರಣ ಎಂದು ಹೇಳ
ಬಹುದು. ಕಬೀರನಾನಕರಿಂದ ಮೊದಲು ಮಾಡಿಕೊಂಡು ಇಂದಿ
ನವರೆಗೆ ಹಿಂದು-ಮುಸಲ್ಮಾನರಲ್ಲಿ ಐಕ್ಯವಾಗುವ ಪ್ರಯತ್ನವು ತಕ್ಕ
ಮಟ್ಟಿಗೆ ಯಶಸ್ವಿಯಾಗಿದ್ದರೆ, ಅದಕ್ಕೆ ಹೆಚ್ಚಾಗಿ ಕಾರಣ ಒಂದ
ಚಿಲ್ಲಣ, ಇನ್ನೊಂದು ಚಾರಪಾಯ ಎಂದು ನಿಸ್ಸಂಶಯವಾ
ಸಾರಬಹುದು. ಊಟ, ಉಡಿಗೆ, ವ್ಯಾಪಾರ, ವ್ಯವಹಾರಗಳಂ
ಒಂದು ನಾಗರಿಕತೆಯ ಪರೀಕ್ಷೆಯಾಗುವಂತೆ ಇಲ್ಲಿಯ ಜನಜೀವನ
ವನ್ನು ಅರಿಯಬೇಕಾದರೆ ಅದರ ಸಂಕೇತವೆನಿಸುವ ಚಾರಪಾಯ
ವನ್ನು ಮೊದಲು ತಿಳಿದುಕೊಳ್ಳಬೇಕು.

ನ್ಯಾಯಾಧೀಶನ ಪಲಾಯನ

ಶೀ. ದ. ಲ. ಕೆರೂರ, ಬಿ. ಎ. ಹುಬ್ಬಳ್ಳಿ

★

ನಮ್ಮ ಸಂಸ್ಥಾನಿಕರ ನಿರಂಕುಶ ಆಡಳಿತಗಳಲ್ಲಿ ಇಂತಹ ಕತೆಗಳು ಹಲವಾರು ನಡೆದಿರಬಹುದು.
ಕರಡಿಯಾಡಿಸಿ ಮನಸ್ಸು ಮೆಚ್ಚಿಸಿದವನು ಕಾರ್ಯಭಾರಿಯಾಗಬಹುದಿತ್ತು.
ಲಾವಣಿ ಹಾಡಿ ಮೆಚ್ಚಿಸಿದವನು ನ್ಯಾಯಾಧೀಶನಾಗಬಹುದಿತ್ತು !

★

"ತನ್ನ ಸ್ವಾತಂತ್ರ್ಯಕ್ಕಾಗಿ ಸ್ವಾಭಿಮಾನಿಯಾದ ಝಾಂಸಿ ಮಹಾರಾಣಿಯಾದ ಲಕ್ಷ್ಮೀಬಾಯಿಯು, ಪುರುಷರನ್ನು ಮೀರಿಸುವ ಕಲಿತನದಿಂದ ಕಾದಾಡಿ ಧಾರಾತೀರ್ಥದಲ್ಲಿ ದೇಹವನ್ನಿಟ್ಟು ವೀರ-ಸ್ವರ್ಗವನ್ನೈದಿದಳು. ಆಹಾ! ಧನ್ಯ ಮಾತೆ!" ಈ ವಾಕ್ಯ-ಗಳನ್ನು ಓದಿ ಮುಗಿಸಿ, ರಾಜಕುಮಾರಿ ವಿಲಾಸಿನಿಯು ಇತಿಹಾಸದ ಪುಸ್ತಕವನ್ನು ಮುಚ್ಚಿಬಿಟ್ಟು,

"ಮಾಸ್ತರ, ನಮ್ಮ ಮರಾಠಿಯಲ್ಲಿ ಝಾಂಸಿ ಲಕ್ಷ್ಮೀಬಾಯಿಯ ಉತ್ಕೃಷ್ಟ ಲಾವಣಿಯಿದೆ" ಎಂದಳು.

"ಹೌದು, ಆದರೆ ಪುಸ್ತಕ ಮುಚ್ಚಿದಿರೇಕೆ? ಇನ್ನೂ ಅರ್ಧ ಗಂಟೆ ವೇಳೆಯಿದೆಯಲ್ಲ."

"ನಾವು ಪುಣೆಯಲ್ಲಿದ್ದಾಗ ಅದನ್ನು ಕೇಳಿದೆವು. ಬಹಳೇ ಆವೇಶಪೂರ್ಣವಾದದ್ದಿದೆ."

"ಹೌದು, ನನಗೂ ಗೊತ್ತು. ಆದರೆ....."

"ಅಂದರೆ ಆ ಮರಾಠಿ ಲಾವಣಿ ನಿಮಗೆ ಬರುತ್ತದೆಯೆ?" ಎಂದು ರಾಜಕುಮಾರಿ ತನ್ನ ಮಾತನ್ನೇ ಚಾಚಿದಳು.

"ಇಲ್ಲಿ ನಿಮಗೆ ಪಾಠಹೇಳಲು ಬರುತ್ತಿರುವೆನೆಂದ ಮೇಲೆ ಮರಾಠಿ ಅರಿತುಕೊಂಡಿದ್ದೇನೆ—ಎಂದಾದರೂ ನೀವು ತಿಳಿದಿರ-ಬಹುದಲ್ಲ."

"ಹೀಗೇನು ಮಾಸ್ತರ, ನಿಮಗೆ ಮರಾಠಿ ಬರುವುದಿಲ್ಲವೆಂದು ನಾವು ಹೇಳಲಿಲ್ಲ. ಆ ಲಾವಣಿಯನ್ನೂ ನೀವು ಕೇಳಿರಬಹುದು ಆದರೆ ಮುಖೋದ್ಗತವಿದೆಯೆ?—ಎಂದು ಕೇಳಿದೆ."

"ಆ ಮಾತು ಈಗೇಕೆ? ಪಾಠ ಮುಂದೆ ಸಾಗಲಿ. ಹಂ. ಲಕ್ಷ್ಮೀಬಾಯಿಯ ಕಥೆಯನ್ನು ನೀವೀಗ ಹೇಳಬಲ್ಲಿರಾ?"

"ಮಾಸ್ತರ, ಇರಲಿ ಬಿಡಿರಿ. ಆ ಲಾವಣಿ ನೀವು ಎಲ್ಲಿ ಕಲಿತಿರಿ?"

"ಬೆಳಗಾಂವಿಯಲ್ಲಿ. ವಕೀಲಿ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಮರಾಠಿ ಕಾವ್ಯಗಾಯನ ಸ್ಪರ್ಧೆಯಲ್ಲಿ ಕನ್ನಡಿಗರ ಕೈತೋರಿಸಿ ಬಿಡಬೇಕೆಂದು, ಆ ಲಾವಣಿಯನ್ನು ಕಲಿತು ಒಂದು ಭಾಗ ಅಂದು ತೋರಿಸಿದ್ದೆ. ಇನಾಮೂ ಸಿಕ್ಕಿತ್ತು."

"ನಮಗೆ ಈಗ ಅಂದು ತೋರಿಸುವುದಿಲ್ಲೇನು ಮಾಸ್ತರ?" ಎಂದು ಕುರ್ಚಿಯಲ್ಲಿಯೆ ಉತ್ಸಾಹದಿಂದ ಕುಣಿದಾಡಿದಳಾಕೆ.

"ಅಲ್ಲ, ಪರೀಕ್ಷೆ ಸಮೀಪ ಬಂತು. ನಾಳ್ಕನೆಯ ಈಯತ್ತೆ, ಬೀಜಗಣಿತ ಮುಂತಾದ ಹೊಸ ವಿಷಯಗಳು ಪ್ರಾರಂಭವಾಗುತ್ತವೆ. ಈಗ ಅಭ್ಯಾಸದಲ್ಲಿ ಚಿತ್ತವಿಡುವುದನ್ನು ಬಿಟ್ಟು ಹೀಗೆ ವೇಳೆಯ ಅಪವ್ಯಯಮಾಡಿದರೆ ಹೇಗೆ?"

"ಪರೀಕ್ಷೆಯ ಕಾಳಜಿ ನಮಗೇಕೆ ಮಾಸ್ತರ? ಅಭ್ಯಾಸವೆಲ್ಲ ಮುಗಿದುಹೋಗಿದೆ. ದಿನಾಲು ಓದಿದ್ದನ್ನೇ ಎಷ್ಟೆಂದು ಓದಬೇಕು? ಲಾವಣಿ ಕೇಳಿಸಿರಲ್ಲಾ ಇಂದು," ಎಂದು ಕೊರಳುಕೊಂಕಿಸಿ ಒಯ್ಯಾರದಿಂದ ಕೇಳಿಕೊಂಡಳು.

"ಈಗ ಇಲ್ಲಿ ಅರಮನೆಯಲ್ಲಿ ಸಾಧ್ಯವಿಲ್ಲ, ರಾಜಕುಮಾರಿ! ಇಂದು ಶಾಲೆ ಬಿಟ್ಟನಂತರ ಶಾಲೆಯಲ್ಲಿ ಅಂದುತೋರಿಸುತ್ತೇನೆ. ಎಲ್ಲ ಹುಡುಗರೂ ಕೇಳಿದಂತಾಗುವುದು" ಎಂದ. ಸಂಸ್ಥಾನಿಕರ ಮಕ್ಕ-ಳಾದ ನಿಮಗೇಕೆ ಪರೀಕ್ಷೆಯ ಚಿಂತೆ? ಆ ಚಿಂತೆ ನಿಮ್ಮ ಮಾಸ್ತರರಿಗೇ ಹೆಚ್ಚು—ಎಂದು ಮಾಸ್ತರನು ಮನಸ್ಸಿನಲ್ಲಿ ಎಂದುಕೊಂಡ.

"ನೀವು ಬಹಳ ಹಟವಾದಿಗಳಿದ್ದೀರಿ, ಮಾಸ್ತರ್" ಎಂದು ರಾಜಕುಮಾರಿ ಸ್ವಲ್ಪ ಬಿಗುವಿನಿಂದಲೇ ಆಡಿ, ಮುಖವನ್ನು ತಿರುಗಿಸಿ ಕುರ್ಚಿಯಿಂದ ಎದ್ದುಬಿಟ್ಟಳು.

"ಹೊರಟುಬಿಟ್ಟೆನೇನು! ಇನ್ನೂ ಐದು ನಿಮಿಷಗಳಿವೆ." ಎಂದು ಮಾಸ್ತರನು ಆಕೆಗೆ ಅಂದರೂ, ಬೇರೆ ಯಾವ ವಿದ್ಯಾರ್ಥಿ-ಯಾದರೂ ತನ್ನನ್ನು ಹಟವಾದಿ ಎಂದು ಕರೆದಿದ್ದರೆ ತೆಗೆದು ಕನ್ನೆಗೆ ನಾಲ್ಕೇಟು ಬಿಗಿಯುತ್ತಿದ್ದೆ ಎಂದು ಮನಸಿನಲ್ಲಿ ಕುದಿಯುತ್ತಿದ್ದ.

"ಇಂದಿನ ಓದು ಮುಗಿಯಿತು ಮಾಸ್ತರ್" ಎಂದು ಕಿಲಕಿಲನೆ ನಕ್ಕು ಕುರ್ಚಿಯಿಂದ ಎದ್ದೇಬಿಟ್ಟಳು. ಹೊರಟು ಹೋಗಲೆಂದು ಬಾಗಿಲ ಕಡೆಗೆ ಸಾಗಿದವಳು ತಡೆದು "ನಾಳೆ ಶನಿವಾರ ಬೆಳಿಗ್ಗೆ ಶಾಲೆ, ನೀವು ಇಲ್ಲಿ ಯಾವಾಗ ಬರಬೇಕೆಂಬುದನ್ನು ಕೇಳಿ ತಿಳಿಸುತ್ತೇನೆ, ತಡೆಯಿರಿ" ಎಂದು ಹೇಳಿದಳು.

2nd Anniversary Diwali Greetings.

We wish every member of our free India

A BEST, HAPPY & PROSPEROUS

NEW YEAR

on occasion of our 2nd Anniversary.

M/s VASANT FILM

DISTRIBUTORS

959, College Road, BELGAUM.

Distributors of high class

MOTION PICTURES

FOR

Karnatak and Deccan States.

FOR PARTICULARS APPLY

"ಮಾಡಿಕೆಯಂತೆ ಮಧ್ಯಾಹ್ನ ನಾಲ್ಕು ಗಂಟೆಗೆ ಬರುತ್ತೇನೆ" ಎಂದ ಮಾಸ್ತರು.

"ನಾಳೆ ನಮ್ಮಲ್ಲಿ ವಸಂತಪೂಜೆಯಿದೆ ಮಧ್ಯಾಹ್ನಕ್ಕೆ. ಕಾರಣ ಓದಿಗೆ ರಜೆ ಸಿಗಬಹುದು, ಕೇಳುತ್ತೇನೆ."

ಅಷ್ಟರಲ್ಲಿ ಸಮವಸ್ತ್ರದಲ್ಲಿದ್ದ ಆಳೊಬ್ಬನು ಬಂದು, ಚಹದ ಸಿದ್ಧತೆ ಆಗಿದೆಯೆಂದು ತಿಳಿಸಿದ.

"ಏ, ನಾನು ತಿರುಗಿ ಇಲ್ಲೇ ಬರುತ್ತೇನೆ. ಮಾಸ್ತರರಿಗೂ ನಮಗೂ ಚಹ ಇಲ್ಲೇ ಕೊಡಲಿಕ್ಕೆ ತಿಳಿಸು" ಎಂದವಳೇ ನಾಗಾಲೋಟದಿಂದ ಅವಳು ಓಡಿದಳು. ಆ ರಾಜಕುಮಾರಿಯು ಧರಿಸಿದ್ದ ಹಸಿರು ರೇಷ್ಮೆಯ ಲಂಗ ಮತ್ತು ಕೆಂಪು ರೇಷ್ಮೆಯ ರವಿಕೆಯು ಸರ್ರೆಂದು ಬೀಸಿಹೋಗುವಾಗ, ಮಾಸ್ತರನ ಕಣ್ಣಿಗೆ ಇಂದ್ರಚಾಪದ ಸೊಬಗನ್ನು ಬೀರಿತು.

ರಾಜಪಿಂಡ, ಗೌರವರ್ಣದ ಆ ಬಾಲಿಕೆಯು ತ್ರಯೋದಶ ವಸಂತಗಳ ಸೌಂದರ್ಯಸಾರವನ್ನೇ ಹೀರಿಕೊಂಡು ಬೆಳೆದಂತಿದ್ದಳು. 'ಈಕೆಗೆ ಇನ್ನು ಲಂಗ ಒಪ್ಪುವುದಿಲ್ಲ, ಸೀರೆಯನ್ನು ಉಡಬೇಕು' ಎಂದು ಹೇಳುವಂತೆ ಅವಳ ಅಂಗಸೌಷ್ಠವವು ಪರಿಪೂರ್ಣವಾಗಿತ್ತು. ಸ್ವಭಾವತಃ ವಿಲಾಸಿನಿಯಾದ ಅವಳೆದುರು ಒಂದು ಗಂಟೆ ಕಾಲ ಕುಳಿತು ಇತಿಹಾಸದ ಪಾಠ ಹೇಳಿ ಹೋಗಬೇಕಾದರೆ, ಮಾಸ್ತರನು ತನ್ನ ಪೂರ್ವಪುಣ್ಯವನ್ನೆಲ್ಲ ವಿನಿಯೋಗಿಸಬೇಕಾಗುತ್ತಿತ್ತು. ಪಾಠಕ್ಕೆ ಬರುವಾಗ ಇಂದು ದ್ರಾಕ್ಷಿ, ನಾಳೆ ಗೋಡಂಬಿ, ನಾಡಿದು ಕಲ್ಲುಸಕ್ಕರೆ ಹೀಗೆ ಒಂದಿಲ್ಲೊಂದು ಪದಾರ್ಥವನ್ನು ಬಾಯಾಡಿಸಲು ತರುತ್ತ ಅವಳು, ಮಾಸ್ತರರಿಗೂ ಗುರುದಕ್ಷಿಣೆ ಅರ್ಪಿಸದಿರುತ್ತಿರಲಿಲ್ಲ. ರೀತಿ ಸದಾ ಹುಡುಗಾಟಿಕೆಯಲ್ಲಿಯೇ ಕಾಲಕಳೆಯುವ ಈ ಬಾ ಕೆಗೆ ಯಾವ ಚಿಂತೆ ಏಕೆ ಇರಬೇಕು---ಎಂದುಕೊಂಡ ಮಾಸ್ತರ ರಾಜಮನೆತನದಲ್ಲಿ ಜನ್ಮಿಸಿದ ಅವಳಿಗೆ ಯಾವ ಕೊರತೆ ?.....

"ಮಾಸ್ತರ್, ನಾಳೆ ನಿಮಗೆ ರಜೆ, ವಸಂತಪೂಜೆಗೆ ಬರ ನಿಮಗೂ ಆಮಂತ್ರಣ ಬರಬಹುದು." ಎಂದು ಕೂಗುತ್ತ ರಾಜಕುಮಾರಿ ಒಳನುಗ್ಗಿದಳು.

"ಆಂತೂ ಮತ್ತೊಂದು ದಿನ ಹಾಳಾಯಿತು."

"ಇದೇನು ಹೀಗೆ ಮಾಸ್ತರರೆ? ನಮ್ಮಲ್ಲಿ ವಿಶೇಷ ಕಾರಣ ಗಳಿದ್ದಾಗ ಕೂಡ ಪುಸ್ತಕ ಹಿಡಿದುಕೊಂಡು ನಿಮ್ಮ ಮುಂದ ಕುಳಿತುಕೊಂಡಿರಬೇಕೆ?" ಎಂದು ಕೊಂಕುನೋಟದಿಂದ ಕೇಳ ವಳು. ಮಾಸ್ತರನ ಕೈಯಿಂದ ತಪ್ಪಿಸಿಕೊಳ್ಳುವ ಹಂಚಿಕೆ ಅದ

ಅಷ್ಟರಲ್ಲಿ ಚಹ ಬಂತು. ಮೇಜಿನ ಮುಂದೆ ಕುರ್ಚಿಗಳ ಮೇ ಎದುರು ಬದಿರಾಗಿ ಕುಳಿತು, ಚಹಾಪಾನವಾಯಿತು. ಮಾಸ್ತರನ ಮನೆಗೆ ಹೋಗಲು ಎದ್ದನು.

"ಮಾಸ್ತರ, ಇಂದು ಸಂಜೆಗೆ ಶಾಲೆಯಲ್ಲಿ ಝಾಂಸಿ ಲಕ್ಷ್ಮಿ ಬಾಯಿ...." ಎಂದು ನಗುಮೊಗದಿಂದ ಪುನಃ ನೆನಪು ತಂದ ಕೊಟ್ಟಳು ಮಾಸ್ತರನಿಗೆ. ಮಾಸ್ತರನೂ ಮುಗುಳುನಗೆ ಬೀ ತೆರಳಿದನು.

* * * *

ಮರುದಿನ ಮುಂಜಾನೆ ಏಳು ಗಂಟೆಗೆ, ಅರಮನೆಯ ಕಾರ ಬಂದು ಮಾಸ್ತರನ ಮನೆಯ ಮುಂದೆ ನಿಂತಿತು. ಏನು ಪ್ರಸಂಗ ವಿವೆಂದು ಮಾಸ್ತರನ ಹೆಂಡತಿ ಬಾಗಿಲನ್ನು ತೆರೆದು ನೋಡುತ್ತಾಳೆ ಕೆಂಪು ಡಗಲಿಯ ಜವಾನನೊಬ್ಬ ಎದುರು ನಿಂತಿದ್ದ. ಅವಳ ಒಳಗೆ ಬಂದು, ಇನ್ನು ಸಿಗರೇಟನ್ನು ಹೊತ್ತಿಸಲಿದ್ದ ತನ್ನ ಪತಿರಾಯ ನನ್ನು ಹೊರಗೆ ಕಳಿಸಿದಳು.

"ಮಾಸ್ತರ್, ನಿಮ್ಮನ್ನ ಈಗಲೇ ಕರಕೊಂಡು ಬಾ ಅಂ ಹೇಳ್ಯಾರ್ರೀ, ರಾಣೇಸರಕಾರ್."

"ಮತ್ತೇನಪಾ ಇದು, ಇದೊಂದು ದಿನ ಬಿಡುವು ಅಂತ ಅಂದ ಕೊಳ್ಳೋದರಾಗ! ನಸುಕಿನ್ಯಾಗ ನರೀ ಮೋರೆ ನೋಡೀವೊ ನಾಯಿನಾ ಮೋರೆ ನೋಡೀವೊ."

"ಅದೆಲ್ಲ ನನಗೇನ ಗೊತ್ತರಿ. ಈಗಿಂದೀಗ ಕರಕೊಂಡ ಬ ಅಂತ ಮೋಟಾರ ಕಾರು ಕೊಟ್ಟು ಕಳಿಸ್ಯಾರ್ರಿ."

"ಆಲ್ಲೋ ಬರಿ 'ಕಾರು' ಅನ್ನು, ನನಗ ತಿಳೀತದ."

"ಹೂಂ. ಹಾಂಗs ಅನ್ನರಿ. ಹೊಲದಾಗ ನೇಗಿಲಾ ಹೊಡೆ ಯುವನನ್ನ ತಂದು, ನನ್ನ ತಂದಿ ಇಲ್ಲಿ ತುರುಕ್ಯಾನ. ಇನ್ನೂ ಮೂರು ತಿಂಗಳ ಆಗಿಲ್ಲ. ಇವೆಲ್ಲ ನಮಗೇನು ಗೊತ್ತಾಗಬೇಕ್ರಿ. ಇರಲಿ ನಡೀರಿಲಾ ಇನ್ನು, ಟೈಂ ಆಗ್ತಾ ಬಂತು."

"ನಡೀಯಪ್ಪಾ" ಎಂದು ಟೊಪ್ಪಿಗೆ ತಲೆಗೇರಿಸಿ ಮಾಸ್ತರು ಕಾರಿನಲ್ಲಿ ಕುಳಿತು ಹೊರಟ.

ಅರಮನೆಯ ದೊಡ್ಡ ದಿವಾಣಖಾನೆಯ ಬಲಕ್ಕಿರುವ ಕೋಣೆಯಲ್ಲಿ ಮಾಸ್ತರನನ್ನು ಒಯ್ದು ಕುಳ್ಳಿರಿಸಲಾಯಿತು. ರಾಣಿಯವರು ಅತಿಥಿಗಳನ್ನು ಕಂಡು ಮಾತನಾಡಿಸುವ ಕೋಣೆಯೆಂದರೆ ಅದೇ. ಅವರು ಪ್ರವೇಶಿಸಿದ ಕೂಡಲೇ ಮಾಸ್ತರನು ಎದ್ದುನಿಂತು ಕೈಜೋಡಿಸಿ, ತಲೆಬಾಗಿಸಿ ವಂದಿಸಿದನು. ಇಬ್ಬರೂ ತಂತಮ್ಮ ಆಸನಗಳಲ್ಲಿ ಮುಂಡಿಸಿದರು.

"ಮಾಸ್ತರ್, ನಮ್ಮ ವಿಲೂರಾಜೇ ಅವರಿಗೆ ಹುಚ್ಚು ಹಿಡಿಸಿಬಿಟ್ಟೀರಿ ನೀವು. ರಾತ್ರಿಯೆಲ್ಲ ಅವರು ಲಕ್ಷ್ಮೀಬಾಯಿ.....ಕಾಲ್ಪಿ..... ಸಿರಂಗಿ....ಗುಂಡು ಎಂದು ಬಡಬಡಿಸುತ್ತಿದ್ದರು."

"ನಿನ್ನೆ ಶಾಲೆಯಲ್ಲಿ ಝಾಂಸೀರಾಣಿ ಲಕ್ಷ್ಮೀಬಾಯಿಯ ಪಾಠ ಹೇಳಿಕೊಡಬೇಕಾಗಿತ್ತು. ಅನಂತರ ಅವರ ಅಗ್ರಹಕ್ಕಾಗಿ ಆ ಶೂರ ರಾಣಿಯನ್ನು ಕುರಿತು ಮರಾಠಿಯಲ್ಲಿದ್ದ ಲಾವಣಿಯನ್ನು ಅಂದು ತೋರಿಸಿದೆ. ಅದನ್ನೇ ಅವರು ರಾತ್ರಿ ಕನವರಿಸುತ್ತಿರಬಹುದು."

ಆಷ್ಟರಲ್ಲಿಯೆ ಶಾಲೆಗೆ ಹೋಗುವ ಸಿದ್ಧತೆ ಮುಗಿಸಿಕೊಂಡು ಬಂದು, ತಾಯಿಯ ಬಳಿ ನಿಂತ ವಿಲಾಸಿನಿಯು :

"ಹೌದು, ಸುಧಾತಾಯಿ, ಅವರು ಹಾಡಿದ ಲಾವಣಿ ಇನ್ನೊಮ್ಮೆ ಕೇಳಬೇಕಾಗೇದ. ಇಲ್ಲದಿದ್ದರ ಸಮಾಧಾನ ಆಗುವದಿಲ್ಲ..."

ಇನ್ನೂ ಏನೋ ಹೇಳತಕ್ಕವಳಿದ್ದಳು. ಆದರೆ ರಾಣಿಯ ಕೆಂಗಣ್ಣ ನೋಟವನ್ನು ಎದುರಿಸಲಾರದೆ ಸುಮ್ಮನಾದಳು.

"ವಿಲೂರಾಜೇ, ನಿಮ್ಮ ಮನೀಣಿ ನಮಗೆ ಅರ್ಥವಾಯಿತು. ಅರಮನೆಯ ನಡೆ-ನುಡಿಗಳನ್ನು ಕಲಿತುಕೊಳ್ಳಿರಿ. ನೀವೇನೂ ಚಿಕ್ಕವರಲ್ಲ ಇನ್ನು."

ತನ್ನ ಮಗಳು ತನ್ನನ್ನು 'ರಾಣೀ ಸರಕಾರ್' ಎಂದು ಸಂಬೋಧಿಸದೆ ಕೇವಲ 'ಸುಧಾತಾಯಿ' ಎಂದು ಕರೆದು ಅಕ್ಕರತೆ ತೋರಿದ್ದು ಅವರ ಮನಸ್ಸಿಗೆ ಬರಲಿಲ್ಲವೇನೊ! ಇದೆಂಥ ತಾಯಿ-ಮಕ್ಕಳ ಸಂಬಂಧವೆಂದು ಮಾಸ್ತರನು ಮನಸ್ಸಿನಲ್ಲಿಯೆ ಚಿಂತಿಸಿದ

"ಹೌದೇನು ಮಾಸ್ತರರೇ! ನಿಮ್ಮ ಹಾಡುಗಾರಿಕೆ ಅಷ್ಟು ಚೆನ್ನಾಗಿದ್ದರೆ, ನಮಗೂ ಅಷ್ಟು ಕೇಳಿಸಿರಿ ಆ ತಾಯಿಯ ಲಾವಣಿ."

"ನಿಮ್ಮ ಮಾತು ಮೀರಿ ನಾನೆಲ್ಲಿದ್ದೇನೆ" ಎಂದು ಮಾಸ್ತರನು, ಕಾವೇರಿದ ಆ ವಾತಾವರಣದಲ್ಲಿ ಬೇರೊಂದು ಮಾತನಾಡಲು ತಿಳಿಯದೆ ನುಡಿದುಬಿಟ್ಟನು.

"ಹಾಗಾದರೆ ಇಂದು ಬೇಡ. ನಾಳೆ ರವಿವಾರ. ನಿಮಗೂ ಬಿಡುವು. ನಾಳೆ ಸಂಜೆ ಐದು ಗಂಟೆಗೆ ನಿಮ್ಮ ಕಾರ್ಯಕ್ರಮವಾಗಲಿ. ಇಂದು ನಮ್ಮಲ್ಲಿ ವಸಂತಪೂಜೆ. ನಿಮಗೆ ಆಮಂತ್ರಣ ಮುಟ್ಟಿತೆ?"

"ನನಗೆ?"

"ಹಂ, ನಿಮಗೇ ಹೇಳಕಳಿಸಿದ್ದೆ"

"ಅಂತೇ ಬಂದಿದ್ದೇನೆ"

"ನಿಲ್ಲಿರಿ. ನಿಮಗೆ ತಿಳಿಯುವುದಿಲ್ಲ. ವಸಂತಪೂಜೆಯ ಆಮಂತ್ರಣ ಹೇಳಕಳಿಸಿದ್ದೆ. ನಿಮಗೆ ತಿಳಿಸಿಲ್ಲವೆಂದೇ ತೋರುತ್ತದೆ. ಏ ರಾಮಾ"

ಆಳೊಬ್ಬನು---ಮಾಸ್ತರನನ್ನು ಕರೆಯಲಿಕ್ಕೆ ಕಾರು ತೆಗೆದುಕೊಂಡು ಹೋದವನು--- ಬಂದು ನಿಂತ.

"ನಾವು ಕಳಿಸಿದ ನಿರೋಪ ಇವರಿಗೆ ಮುಟ್ಟಸಲಿಲ್ಲ?"

"ಹೇಳಿಸ್ರಿ ಸರಕಾರ, ಇಲ್ಲೇ ಕರಕೊಂಡು ಬಂದೀನ್ರಿ"

"ಏನು ಆಮಂತ್ರಣ ಮುಟ್ಟಿಸಿದೆಯಾ?"

ರಾಮನು ಕೌಲೆತ್ತಿನಂತೆ ಗೋಣು ಹಾಕಿದ.

"ನೋಡಿರಿ ಮಾಸ್ತರರೇ, ಹೇಗೆ ದೆವ್ವ ಬಡಿದವರಂತೆ ನಿಂತಿದ್ದಾನೆ! ಹೋಗು, ತೊಲಗಾಚೆ. ಮಾಸ್ತರ್, ನೀವಿಂದು ವಸಂತ ಪೂಜೆಗೆ ಮಧ್ಯಾಹ್ನ ೩-೪೫ಕ್ಕೆ ಬರಬೇಕು." ಎಂದು ನುಡಿದವರೇ ರಾಣೀ ಸರಕಾರ ಒಳಗೆ ನಡೆದರು.

ಮಾಸ್ತರನು ಕೋಣೆಯೊಳಗಿಂದ ಹೊರಗೆ ಬಂದು, ಉಪ್ಪರಿಗೆಯ ಪಾವಟಿಗೆಗಳನ್ನು ಇಳಿಯಹತ್ತಿದ. ಮುಂದೆ ಆ ರಾಮು ಇದ್ದ.

"ಏನೋ ರಾಮಾ, ಅವರ ಮುಂದೆ ಸುಳ್ಳು ಹೇಳಬೇಕೆ? ಆಮಂತ್ರಣದ ವಿಷಯ ನನಗೆಲ್ಲಿ ಹೇಳಿದ್ದಿ?"

"ಕಾಲಿಗೆ ಬೀಳತೀನಿ ಬುದ್ದಿ. ತಣ್ಣಗಾಗಿರಿ. ಬಡವನ ಹೊಟ್ಟೇ ಮ್ಯಾಲೆ ಹೊಡೀಬ್ಯಾಡರಿ."

"ಅಂತೇ ಆ ಮೌನನಾಟಕ ಮಾಡಿದೆಲ್ಲಾ!"



"ಮತ್ತೇನ ನಾಡಾಕಾಗ್ತಿತ್ತಿದರಿ."

"ಅಂತೂ ಮೂರೇ ತಿಂಗಳೊಳಗೆ ಪೂರಾ ತಯಾರಾಗಿ ಬಿಟ್ಟೀಳು"

"ಎಲ್ಲಾ ತಮ್ಮ ಕಿರಪಾರಿ."

"ಎಲಾ, ನನ್ನ ನ್ಯಾಲೇ ತಿರಗಿ ಬೀಳತೀ ಏನು? ಸಾಕು. ಹೋಗಿನ್ನ, ಸಾಲಿಗೆ ಹೋಗಬೇಕು, ಹೊತ್ತಾತು."

"ಅವಕ್ಕರಿ, ವಿಲೂವಾಜಾಅವರ ಸಂಗಡ, ಅವರ ಕಾರಿನಾಗ ಸಾಲಿಗೆ ನಿಮ್ಮನ್ನ ಮುಟ್ಟಿಸಿ ಬಾ ಅಂತ ಹೇಳ್ಯಾರ್ರಿ. ಮರೆಯದೆ ತಿಳಿರಬೇಕು ಅಂತ ಈಗ ಬಂದಿನ್ರಿ."

ಮಾಸ್ತರನು ಡ್ರೈಯ್ವರನ ಪಕ್ಕದಲ್ಲಿ ಕುಳಿತು, ವಿಲಾಸಿನಿಯ ಕಾರಿನಲ್ಲಿ ಶಾಲೆಗೆ ತೆರಳಿದನು.

* * * *

"ವಾಹನ್ವಾ! ಏಕ ನಂಬರ ಶಾಹೀರ್ ಇದ್ದೀರಿ ನೀವು" ಎಂದು ಕಣ್ಣರಳಿಸಿದ ನರೇಂದ್ರ.

"ಈ ವಿದ್ಯಾ ಇಷ್ಟು ದಿವಸ ಮುಚ್ಚಿಟ್ಟಿದ್ದು ಆಶ್ಚರ್ಯ. ಕಸ್ತೂರಿ ಪರಿಮಳ ಹರಡಲೇಬೇಕು!" ಎಂದರು ಪಡದೆಯ ಹಿಂದೆ ಕುಳಿತಿದ್ದ ರಾಣೇಸರಕಾರ್.

"ನಮ್ಮ ಮಾಸ್ತರು ಕರ್ನಾಟಕೀ ಅಂತ ಯಾರು ಹೇಳ್ತಾರ. ಕೇಳಿದಿರೇನು ಅವರ ಈ ಲಾವಣಿ?" ಎಂದು ಸಂತೋಷಾತಿರೇಕದಿಂದ ಕುಣಿದಾಡಿದಳು ವಿಲಾಸಿನಿ.

ಪತಿರಾಯನ ಗುಣದಿಂದ ಮುಗ್ಧಳಾದ ಮಾಸ್ತರನ ಹೆಂಡತಿ ರಮಾ, ಅವನನ್ನು ಆದರದಿಂದ ಮನಸಿನಲ್ಲಿಯೆ ಪೂಜಿಸಿ, ಹೊಳೆವ ಕಂಗಳ ಆರತಿ ಬೆಳಗಿದಳು.

ಮಾಸ್ತರನು ಒಂದು ಗಂಟೆಕಾಲ ಅಖಂಡವಾಗಿ ಅಸ್ಖಲಿತವಾಗಿ ಭಾವೋದ್ರೇಕದಿಂದ ಹಾಡಿದ ರುಗ್ಮಾಂಗದರಾಣಿಯ ಲಾವಣಿಯ ವೀರವಾಣಿಯಿಂದ, ಆ ದಿವಾಣಖಾನೆಗೇ ಜೀವಕಳೆ ತುಂಬಿದಂತಾಗಿತ್ತು. ಮಾಸ್ತರನ ಬಗ್ಗೆ ಮೆಚ್ಚುಗೆ, ಆದರ ಆ ಸಭೆಯಲ್ಲಿದ್ದ ಎಲ್ಲರ ಕಣ್ಣುಗಳಲ್ಲಿ ಒಡಮೂಡಿದ್ದುವು. ಆ ಸಭೆಯಲ್ಲಿ ಮಾತಾಡಲು ಅಧಿಕಾರವಿದ್ದವರು ಪ್ರಶಂಸೋದ್ಗಾರಗಳನ್ನು ಹೊರಡಿಸಿದರು. ಉಳಿದವರು ಮಂತ್ರಮುಗ್ಧರಂತೆ ನಿಂತಿದ್ದರು.

"ಈ ಲಾವಣಿ ನಾವು ಈ ಮೊದಲೇ ಕೇಳೀನಿ. ಆದರೆ ಇಷ್ಟು ಜೀವಕಳೆ ತುಂಬಿದ್ದಿಲ್ಲ." ಎಂದ ನರೇಂದ್ರ.

"ಹೀಗೆ ಹೊಗಳಬಾರದು ತಾವು. ಏನೋ ನನ್ನ ಮನಸ್ಸಿನ ಸಂತೋಷಕ್ಕೆಂದು ಆಗೀಗ ಹಾಡಿಕೊಳ್ಳುತ್ತೀನೆ."

"ಛೇ, ಇಲ್ಲಿ ಇಷ್ಟೆಲ್ಲ ನಿಮ್ಮ ಹಾಯಸ್ಕೂಲ ಮಾಸ್ತರರು ಇದ್ದಾರೆ. ಅವರಲ್ಲಿ ಯಾರಿಗಾದರೂ ನಿಮ್ಮಂತೆ ಹಾಡಲಿಕ್ಕೆ ಬರುತ್ತದೆಯೆ?" ಎಂದರು ರಾಣೇಸರಕಾರ್.

"ಒಬ್ಬರ ವಿದ್ಯೆ ಇನ್ನೊಬ್ಬರಿಗಿರುವದಿಲ್ಲ. ನನ್ನ ಅಲ್ಪ ವಿದ್ಯೆಯನ್ನೇ ತಾವಿಷ್ಟು ಮೆಚ್ಚಿರುವುದು ತಮ್ಮ ಉದಾರ ಬುದ್ಧಿಯಲ್ಲದೆ ನನ್ನ ಯೋಗ್ಯತೆಯೇನಲ್ಲ."

ಹಾಡಿನಿಂದ ಮರುಳು ಮಾಡಿ, ಏನೋ ಬಲೆ ಬೀಸುತ್ತಿದ್ದಾನಲ್ಲ ಶಾಲೆಗೆ ಬಂದ ಒಂದು ವರ್ಷದಲ್ಲಿಯೆ—ಎಂದು ಮುಖ್ಯಾಧ್ಯಾಪಕರು ಮನಸ್ಸಿನಲ್ಲಿ ಕುದಿಯುತ್ತಿದ್ದರೆಂದು, ಅವರು ತಮ್ಮ ಆಸನದಲ್ಲಿ ಹೊಯ್ದಾಡುತ್ತಿದ್ದುದರ ಮೇಲಿಂದಲೇ ಸುಲಭವಾಗಿ ಕಂಡು ಬರುತ್ತಿತ್ತು.

"ನಮ್ಮ ಉದಾರ ಬುದ್ಧಿಯ ಪರಿಚಯವಾದ ನಿಮಗೆ, ನಮ್ಮ ಉದಾರಹಸ್ತದ ಪರಿಚಯವೂ ಆಗತ್ಯವಾಗಿ ಆಗಬೇಕು. ನಿಮಗೆ ತೊಂದರೆ ಕೊಡುವುದಕ್ಕಾಗಿ ಈ ಸಭೆ ಏರ್ಪಡಿಸಿಲ್ಲ" ಎಂದು ಘೋಷಿಸಿದ ನರೇಂದ್ರ.

"ನನಗೇನೂ ಬಹುಮಾನ ಬೇಕಿಲ್ಲ, ಪ್ರಭೂ!"

"ಎಂಥ ವಿಚಿತ್ರ ಜನ ನೀವು? ಶಾಪಾದಪಿ ಶರಾದಪಿ ಸ್ವಪಕ್ಷ. ಮಂಡನಾ ಚತುರರಾದ ವಕೀಲರಾದ ನೀವು ಹೀಗೆ ಹೆದರುವುದೇಕೆ?"

"ನಾನು ಮಾಸ್ತರು; ವಕೀಲಿ ಕಾಲೇಜಿನಲ್ಲಿ ಒಂದು ವರ್ಷ ಕಳೆದಿದ್ದೇನೆ, ನಿಜ, ಆದರೆ ವಕೀಲಿ ಪರೀಕ್ಷೆಯನ್ನು ಪಾಸಾಗಿಲ್ಲ."

"ಅಷ್ಟೇ ಕಾಯದೆ ಜ್ಞಾನ ಸಾಕು ನಮಗೆ. ನಾಳೆನಿಂದ ನೀವು, ನಮ್ಮ ಸಂಸ್ಥಾನದಲ್ಲಿ ಜಿಲ್ಲಾ ನ್ಯಾಯಾಧೀಶರಾಗಬೇಕು. ಈ ಬಹುಮಾನ ತಮಗೆ ಉಚಿತವಾದದ್ದೆಂದು ನನ್ನ ನಂಬಿಕೆ.

"ಪ್ರಭೂ, ಈಗ ಆ ಸ್ಥಾನದಲ್ಲಿದ್ದವರಿಗೆ ಅನ್ಯಾಯವಾಗುತ್ತದೆ. ನನ್ನ ಮಾಸ್ತರಿಕೇ ನನಗೆ ಸಾಕು"

"ಅಧಿಕಾರ ವಹಿಸಿಕೊಳ್ಳುವ ಪೂರ್ವದಲ್ಲಿಯೆ ನ್ಯಾಯಾ" ನ್ಯಾಯದ ವಿಮರ್ಶೆಗೆ ನಿಂತಿರಾ? ಸ್ವಲ್ಪ ತಾಳಿರಿ. ನಾಳೆ ನಿಮ್ಮ ಕೈಗೆ ಆಜ್ಞಾಪತ್ರ ಬಂದನಂತರ ಮಾತನಾಡಿರಿ. ಈಗ ಜಿಲ್ಲಾ ನ್ಯಾಯಾಧೀಶರಾಗಿರುವವರು ನನ್ನ ಆಪ್ತ ಕಾರ್ಯದರ್ಶಿಗಳಾಗುತ್ತಾರೆ." ಎಂದು ಮತ್ತೆ ನರೇಂದ್ರ ಗರ್ಜಿಸಿದ.

ಮುಂದೆ ಮಾತು ಬೆಳೆಸಲು ಮಾಸ್ತರನಿಗೆ ಧೈರ್ಯವಿರಲಿಲ್ಲ. ಸಭೆಯಲ್ಲಿದ್ದ ಅವನ ಹೆಂಡತಿಗೂ ಈ ನೋಟವನ್ನೆಲ್ಲ ನೋಡಿ ಮುಂಕು ಕವಿದಂತಾಗಿತ್ತು.

ತಾಂಬೂಲಾರ್ಪಣೆಯಾದನಂತರ, ನರೇಂದ್ರನು ಸಭೆ ಬಿಟ್ಟು ತೆರಳಿದ. ಸಭೆಯು ವಿಸರ್ಜಿಸಲ್ಪಟ್ಟಿತು. ಮಾಸ್ತರನ ಸಹೋದ್ಯೋಗಿಗಳು ಅವನ ಅದೃಷ್ಟಕ್ಕಾಗಿ ಅವನನ್ನು ಅಭಿನಂದಿಸದಿರಲಿಲ್ಲ. ಇಂಥ ಸ್ಥಾನಪಲ್ಲಟವು ಅವರಿಗೆ ಮೈಯುಂಡು ಹೋಗಿತ್ತೇನೊ!

ಮರುದಿನ ನಸುಕಿನಲ್ಲಿಯೆ, ಸರಕಾರೀ ಆಜ್ಞಾಪತ್ರದೊಂದಿಗೆ ಆಳುಗಳು ಮಾಸ್ತರನ ಮನೆಗೆ ಬಂದರು. ಆದರೆ ಮುಚ್ಚಿದ ಕದವೇ ಅವರನ್ನು ಸ್ವಾಗತಿಸಿತು.

ಈ ಹೊಸ ಜಿಲ್ಲಾನ್ಯಾಯಾಧೀಶನು, ತನ್ನ ಹೆಂಡತಿಯೊಡನೆ ರಾತ್ರಿಯಲ್ಲಿಯೇ ಪರಾರಿಯಾಗಿದ್ದ.

ಮನೆ

(ಒಂದು ವಿಚಾರಲಹರಿ)

ಪ್ರಿನ್ಸಿಪಾಲ್ ವಿ. ಕೃ. ಗೋಕಾಕ, ಕೊಲ್ಹಾಪುರ

★

ಮನೆಯು ಒಂದು ಪ್ರಯೋಗಶಾಲೆ, ವಿರಾಮಧಾಮ. ನಿದ್ರಾವಶವಾದ ಕೂಸಿಗೆ ಹಾಸಿದ ಹಾಸಿಗೆ ಅದು; ಆಂಬೆಗಾಲಿಕ್ಕುವ ಮಗುವಿಗಿದ್ದ ಪಡಸಾಲೆ. ಮನೆಯು ರಣಾಂಗಣವಾಗಬಾರದು, ಲೀಲಾಂಗಣವಾಗಬೇಕು. ಕುರುಕ್ಷೇತ್ರವಾಗಿರಬಾರದು, ಧರ್ಮಕ್ಷೇತ್ರವಿರಬೇಕು. ದೇವರ ದಿವ್ಯಮಂದಿರವನ್ನು ಕಟ್ಟಲು ಬೇಕಾದ ಆತ್ಮದ್ರವ್ಯವನ್ನು ಅಗಿಯಲು ಆಸ್ಪದಕೊಡುವ ಗಣಿಯದು, ಮನೆ.

ಮನೆಗೊಂದು ಶಿಸ್ತು ಬೇಕು. ನಿಯಮಿತತೆ ಇಲ್ಲದ ಮನೆ ಮನೆಯಲ್ಲ; ದಿನ್ವನ ಮನೆ ಮಾತು ಮೆಲ್ಲಗೆ, ಕೃತಿ ಹಿತವಾಗಿ, ಮನೆಯವರೊಡನೆ ಉಲ್ಲಾಸ, ಅತಿಥಿಗಳೊಡನೆ ಆದರ—ಹೀಗೆ ಯಾವ ಮನೆಯಲ್ಲಿರುವುದೋ ಅದು ಬರಿ ಮನೆಯಲ್ಲ; ದೇವಾಯತನ.

ಮನೆಗೊಂದು ಮಹಡಿಬೇಕು. ಆ ಮಹಡಿಯಲ್ಲಿ ದೇವಾಗಾರವಿರಬೇಕು. ಮನೆಯವರಿಗೆಲ್ಲ ಅದೊಂದು ಶಕ್ತಿಯ ಕೇಂದ್ರ. ಅಲ್ಲಿ ಪಡೆದ ಶಕ್ತಿಯನ್ನು ಮನೆಯವರು ಒಳಗೂ ಹೊರಗೂ ಕೂಡಿಯೇ ಉಪಯೋಗಿಸಬಹುದು.

ಮನೆಯವರೊಡನೆ ಕೂಡಿ ನಡೆಯದವನು ಸಮಾಜದೊಡನೆ ಹೇಗೆ ಸಮರಸನಾಗಬಲ್ಲ? ಮನೆಯನ್ನು ಗೆಲ್ಲದೆ ಮಾರನ್ನು ಯಾರು ಗೆಲ್ಲಬಹುದು?

ಓ ಮನೆಯ ಯಜಮಾನ! ನಿನಗೆ ಮನೆಯನ್ನು ಯಾಕೆ ಕರುಣಿಸಿದೆ ಗೊತ್ತೋ? ನಿನ್ನ ಮಡದಿ-ಮಕ್ಕಳಿಂದ ನೀನು ಪೂತ ಕಲಿಯಲೆಂದು; ನಿನ್ನಿಂದ ಅವರು ಕಲಿಯಲೆಂದು. ಇಂಥ ಒಂದು ಕಲಿತ—ಇಂಥವರಿಂದ ಮಾತ್ರ—

ನೀವು ಕೂಡಿ ಒಂದು ಮನೆಯಾಗಿದ್ದೀರಿ! ಅಯತನವೆಂದರೆ ರಾಮಪಂಚಾಯತನ. ಇದನ್ನು ಮರೆಯದಿರು. ಮನೆಮುರುಕತನದಿಂದ ಮನೆ ನರಕವಾಗದಿರಲಿ. ಅದು ದೇವೇಂದ್ರನ ಸ್ವರ್ಗವೂ ಆಗದಿರಲಿ. ನವ್ಯ ಭವ್ಯಜೀವನದ ಪ್ರಯೋಗಶಾಲೆಯಾಗಲಿ ಮನೆ.

ಷಡ್ರಿಪುಗಳ ಅರಡಿಯು ಅಲ್ಲಿ ಸುಳಿಯದಿರಲಿ, ಆದರೆ ಹೂದೋಟದ ಒಂದು ಮರದ ಮೇಲೆ ಕುಳಿತು ಸೌಂದರ್ಯದ ಕೋಕಿಲ ತನ್ನ ಶಾಂತಿಗಾನವನ್ನು ಮಾಡಲಿ. 'ಲೋಚ್ ಲೋಚ್' ಎಂದು ನುಡಿಯುವ ಲೋಭದ ಹಲ್ಲಿ—ಅಲ್ಲಿ ಬೇಡ. 'ಕಾಕಾ, ಎಂದು ಕರೆಯುವ ಕಂಗಾಲ ಕಾಗೆತನ ಬೇಡ. ಹಗಲಿಗೆ ಹೆದರುವ ಗೂಗೆಯ ಜೋಗುಳವೂ ಬೇಡ. ಕಳ್ಳತನದಿಂದ ನುಸುಳುವ ಬೆಕ್ಕು ಆಜೆ ತೊಲಗಲಿ. ಬಂದವರ ಮೇಲೆ ವಿವೇಕಶೂನ್ಯವಾಗಿ ಏರಿ ಹೋಗುವ ನಾಯಿ ಅಲ್ಲಿ ಇಲ್ಲದಿರಲಿ. ಹವಣಿನಲ್ಲಿದ್ದ ಸೌಹಾರ್ದ, ಸೌಂದರ್ಯ, ಇರಬೇಕಾದಷ್ಟು ಅಚ್ಚುಕಟ್ಟು ಅಳತೆಯನ್ನರಿತ ಆತಿಥ್ಯ, ಅಳೆಯಲಾಗದಷ್ಟು ಪ್ರೇಮ, ಕವಿಯಲ್ಲುಸುರಿದ ತಿದ್ದುಪಡೆ, ಕಣ್ಣಿನಲ್ಲಿ ತುಳುಕುವ ಸಮಾಧಾನ, ಸ್ವಾಗತದ ತೋರಣ, ನಿಮಲ ಮನೋಗತದ ಓರಣ,—ಹೀಗೆ ಶುದ್ಧಾಂತಃಕರಣನ ಕನ್ನಡಿ- ಪಡಿಗನ್ನಡಿಗಳ ಮಂದಿರವಾಗಲಿ ಮನೆ. ಪರಾಪ್ರಕೃತಿಗೆ ಪ್ರಕೃತಿಯ ರೂಪವನ್ನೂ ಪ್ರಕೃತಿಗೆ ಪರಾಪ್ರಕೃತಿಯ ದೈವಿಕತೆಯನ್ನೂ ಪ್ರತಿನಿತ್ಯ ಕೊಡುವ ಪರಿವರ್ತನ ನಿಕೇತನವಾಗಲಿ. ಬ್ರಹ್ಮರಹಸ್ಯವನ್ನರಿತ ತಾತ, ಪ್ರೀತಿ-ತಾಳ್ಮೆಗಳಿಂದ ಮನೆಯ ನಂದಾದೀಪವಾದ ತಾಯಿ, ದೈವಿಕತೆಯ ಕೈಗಂಬವಾದ ತಂದೆ, ಸಾಹಸದ ಮುನ್ನೊನೆಯಾದ ಮಕ್ಕಳು,—ಹೀಗೆ ಮನೆ-ಮನೆಗೆ ನವೀನ ಸೃಷ್ಟಿಯಾಗಲಿ, ಕೈದೋಟದಲ್ಲಿಯ ಗುಲಾಬಿಯಂತೆ ಅಲ್ಲಿಯ ಮನ-ಮುಖವೆಲ್ಲ ಅರಳಿ ತನಿಗಂಪನ್ನು ಬೀರಲಿ.



ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್
ಸ್ಟಾರ್ ಕಂಪನಿ,
ಬೆಳಗಾಂವಿ.

ಇವರ ಪಾಲನೆ -- ಪೋಷಣೆಯ
ಹೊಣೆಯು ನಿಮ್ಮ ಮೇಲಿಲ್ಲವೆ?

ಹಾಗಿದ್ದರೆ

ಇಂದಿನಿಂದಲೇ ಉಳಿತಾಯವನ್ನು
ಪ್ರಾರಂಭಿಸಿರಿ!

ಚಿಕ್ಕ ಉಳಿತಾಯದ ಯೋಜನೆ!

ನಿಮ್ಮ ಉದ್ಯೋಗ ವ್ಯವಹಾರ ಬೇಳಲಿ,
ಸರಕುಗಳ ಬೆಲೆಗಳು ಇಳಿಯಲಿ,
ನಿಮಗೆ ಅನಾರೋಗ್ಯವುಂಟಾಗಲಿ,
ಅಥವಾ ನಿಮ್ಮ ಕೆಲಸ ಕೈಬಿಡಲಿ,

ಇಂಥ ಯಾವದೇ ಕಷ್ಟದ ಕಾಲದಲ್ಲಿ—

ನಿಮ್ಮ ಬಾಳು ಸುರಕ್ಷಿತವಾಗಿರಬೇಕಾಗಿದ್ದರೆ—

ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ಕೊಳ್ಳಿರಿ!

ಹತ್ತು ರೂಪಾಯಿಗಳಿಗೆ ೧೫ ರೂಪಾಯಿಗಳನ್ನು ಪಡೆಯಿರಿ.

ಸಂಪೂರ್ಣ ಸುರಕ್ಷಿತತೆ! . . . . ಅಧಿಕ ಬಡ್ಡಿ!

ಸ್ಟ್ಯಾಂಪ್ ಡ್ಯೂಟಿ ಇಲ್ಲ! . . . . ಇನ್‌ಕಮ್‌ಟ್ಯಾಕ್ಸ್ ಇಲ್ಲ!

ಯಾವ ಪೋಸ್ಟ್ ಆಫೀಸಿನಲ್ಲಿಯೂ ದೊರೆಯುತ್ತವೆ.

ಹೆಚ್ಚಿನ ಮಾಹಿತಿಗಾಗಿ—

ಸ್ಪಾವ್ಹಿನ್ಸಿಯಲ್ ನ್ಯಾಶನಲ್ ಸೇವ್ಹಿಂಗ್ಸ್ ಆಫೀಸರ್, ಕೋಟೆ, ಮುಂಬಯಿ ೧.

ಇವರಿಗೆ ಬರೆಯಿರಿ.

ನಿಜವಾದ ಲಕ್ಷ್ಮೀಪೂಜನ

ಎಂದರೆ

ಚಿಕ್ಕ ಉಳಿತಾಯಗಳ ಸದ್ವಿನಿಯೋಗ!

ಶ್ರೀ. ಎಂ. ಎ. ಜಾಲಿಹಾಳ, ಬಿ. ಕಾಮ್, ಜಿ. ಡಿ. ಸಿ. ಅಂಡ್ ಎ. ಕಿಲ್ಲೇಸ್ಕರವಾಡಿ.

★

ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣವನ್ನು ತೊಡಗಿಸುವುದೇ ಈಗಿನ ಕಾಲದಲ್ಲಿ ರಾಷ್ಟ್ರಕ್ಕೂ ವ್ಯಕ್ತಿಗೂ ಲಾಭದಾಯಕವೆನಿಸಬಲ್ಲದು.

★

ಈಗ ನಾವು ಪಡೆದಿರುವ ಸ್ವಾತಂತ್ರ್ಯಕ್ಕಾಗಿ ನಮ್ಮ ಹಿರಿಯರು ಹಿಂದಿನವರು ಅಪಾರ ಸ್ವಾರ್ಥತ್ಯಾಗ ಮಾಡಿದರು. ಕಷ್ಟನಷ್ಟಗಳನ್ನು ಸಹಿಸಿದರು. ನೆತ್ತರದ ಕಾಲುವೆಯನ್ನು ಹರಿಸಿದರು. ಈಗ ನಾವು ಸ್ವತಂತ್ರರಾಗಿದ್ದೇವೆ. ನಾಡನ್ನು ಕಟ್ಟುವ ಅವಕಾಶ ನಮಗೀಗ ದೊರೆತಿದೆ. ನಾವೀಗ ದುಂದುವೆಚ್ಚಮಾಡಿದರೆ, ಹಣವನ್ನು ಉಳಿಸದೆ ಹಾಳುಮಾಡಿದರೆ, ನಾಡ ಜೊಕ್ಕಸ ಬರಿದಾಗಿ, ಹಣದ ಹೊನಲು ಬತ್ತಿಹೋಗಿ, ಹುಟ್ಟುವಳಿ ಕಡಿಮೆಯಾಗಿ ನಾಡು ಬಡವಾಗುವುದು. ನಾವೀಗ ಮಿತವ್ಯಯಿಗಳಾಗಿ ಹಣವನ್ನು ಉಳಿಸಬೇಕು. ನಾಡನ್ನು ಕಟ್ಟುವ ಕೆಲಸಕ್ಕೆ ಹಣದ ರಾಶಿ ಬೇಕು. ನಿರಕ್ಷರತೆಯನ್ನು ನಿರ್ಮೂಲ ಮಾಡಬೇಕಾಗಿದೆ; ನಾಡಿನ ಮೂಲೆ ಮೂಲೆಗಳಲ್ಲಿ ಸಾಲೆಗಳನ್ನು ಸ್ಥಾಪಿಸಿ, ಸಾವಿರಾರು ವರ್ಷಗಳಿಂದ ಅಜ್ಞಾನದ ಕತ್ತಲೆಯಲ್ಲಿದ್ದವರಿಗೆ ಜ್ಞಾನದ ನಂದಾದೀವಿಗೆಯನ್ನು, ತಿಳುವಳಿಕೆಯ ಬೆಳಕನ್ನು ತೋರಿಸಬೇಕಾಗಿದೆ. ಬೀಡು ಬಿಟ್ಟಿರುವ ಚಳಿಜ್ವರದಂತಹ ವ್ಯಾಧಿಗಳ ಬಾಧೆಯನ್ನೇ ಕತ್ತರಿಸಬೇಕಾಗಿದೆ. ಔಷಧಗಳಿಲ್ಲದೆ, ಆರೈಕೆಗಳಿಲ್ಲದೆ ಮೃತ್ಯುವಿನ ಬಾಯಿಗೆ ತುತ್ತಾಗುತ್ತಿರುವವರನ್ನು ಉಳಿಸಬೇಕಾಗಿದೆ. ನೀರಿನ ಬರದಿಂದ ಸೊರಗಿ ಕೊರಗಿದ ಒಕ್ಕಲಿಗರ ಬವಣೆಯಿಂದ ಮರುಗುತ್ತಿರುವ ಭೂದೇವಿಯ ಒಡಿದಾವರೆಗಳನ್ನು ನೀರಾವರಿಯ ನೀರಿನಿಂದ ತೊಳೆದು, ಗೊಬ್ಬರದ ಕಾಣಿಕೆಯನ್ನು ಸಲ್ಲಿಸಿ, ಹರುಷವನ್ನು ಸೂಸುವ ಹುಲುಸಾದ ಹಸಿರು ಬೆಳೆಯ ವರವನ್ನು ನೀಡೆಂದು ಬೇಡಿಕೊಳ್ಳಬೇಕಾಗಿದೆ. ನಾಡಪಡೆಯನ್ನು ಕಟ್ಟಬೇಕಾಗಿದೆ, ಹಡಗುಪಡೆಯನ್ನು ಹೆಚ್ಚಿಸಬೇಕಾಗಿದೆ. ಹುಟ್ಟುವಳಿಯನ್ನು ಹೆಚ್ಚಿಸಿ, ಭೂಮಿಯ ಕಣಜವನ್ನು ಕಿಕ್ಕಿರಿ ತುಂಬಿ, ಬಡವರ ಬಗ್ಗರ ಕುತ್ತಿನ ಚೀಲವನ್ನು ತುಂಬಿ, ನಾಡಿನ ಸರ್ವೋದಯವಾಗುವಂತೆ, ನೆಮ್ಮದಿ ನೆಲಸುವಂತೆ ತಣಿವು ನಲಿಯುವಂತೆ ಮಾಡಬೇಕಾಗಿದೆ.

ಈ ಕನಸು ನೆನಸಾಗಬೇಕಾದರೆ ಸರಕಾರಕ್ಕೆ ಜನಸಾಮಾನ್ಯರ ನೆರವು ಬೇಕು. ಆ ಸಹಕಾರ ಮಹಾಮಂತ್ರದಿಂದ ನಾವು ಸ್ವಾತಂತ್ರ್ಯ ಪಡೆದೆವು. ಈಗ ನಮ್ಮ ಸರಕಾರವಿದೆ. ಸರಕಾರ ವೆಂದರೆ ನಾವೇ. ಸರಕಾರದಜೊಡನೆ ಪೂರ್ಣ ಸಹಕಾರ ಮಾಡಬೇಕು. ಹಣದ ಕೊರತೆಯಿಂದ ಯೋಜನೆಗಳನ್ನು ಮುಂದೂಡುವುದನ್ನು ತಪ್ಪಿಸಬೇಕು. ಬಡವರು ಕೂಡ ಚಿಕ್ಕ ಉಳಿತಾಯಗಳ ಯೋಜನೆಯ ಮೇರೆಗೆ ಸೆವ್ಹಿಂಗ್ಸ್ ಸ್ಟ್ಯಾಂಪ್ಪುಗಳನ್ನೂ ಸರ್ಟಿಫಿಕೇಟುಗಳನ್ನೂ ಕೊಂಡು ಆಳಿಲಸೇವೆ ಸಲ್ಲಿಸಲು ಅವಕಾಶವಿದೆ. ನಮ್ಮ ಕಣಕಣಗಳಿಂದ ನಾಡಿನ ಬಿಡುಗಡೆಗಾಗಿ ಮಿಡಿದ ನಾವು, ನಮ್ಮ ಹಣದಿಂದ ನಾಡಿನ ಏಳ್ಗೆಗಾಗಿ ಯತ್ನಿಸಬೇಕಾಗಿದೆ. "ಉಳಿತಾಯ, ನಾಡಿನ ಏಳ್ಗೆಗಾಗಿ ಅವರ ಸದ್ವಿನಿಯೋಗ" ಇದು ಈಗ ನಮ್ಮ ಬೀಜಮಂತ್ರವಾಗಲಿ. ನ್ಯಾಶನಲ್ ಸೇವ್ಹಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣವನ್ನು ತೊಡಗಿಸುವುದರಲ್ಲಿಯೇ ನಮ್ಮ ಚಿಕ್ಕ ಉಳಿತಾಯಗಳ ಸದ್ವಿನಿಯೋಗವಿದೆ. ಸದ್ಯ ಹಣವನ್ನು ತೊಡಗಿಸಬೇಕಾದ ಅಧಿಕೃತ ವಿಧಾನಗಳು ಈ ರೀತಿಯಲ್ಲಿವೆ :—

(೧) ನ್ಯಾಶನಲ್ ಸೇವ್ಹಿಂಗ್ಸ್ ಸರ್ಟಿಫಿಕೇಟುಗಳು. (ಚಿಕ್ಕ ಉಳಿತಾಯಗಳ ಪ್ರಮಾಣಪತ್ರಗಳು.) (೨) ಹೊಲ. (೩) ಮನೆ ಕಟ್ಟಡಗಳು. (೪) ತೋಟಗಳು. (೫) ತೋರು-ಡಿಬೆಂಚರುಗಳು. (೬) ಸರಕಾರದ ಸಾಲಪತ್ರಗಳು. (೭) ಷೇಸು. (೮) ಬಡ್ಡಿಯ ವ್ಯವಹಾರ. (೯) ಒಡವೆಗಳು.

ಇವು ಹಣವನ್ನು ತೊಡಗಿಸುವ (ವಿನಿಯೋಗಿಸುವ) ನವ ವಿಧಾನಗಳು ಎಂದು ಹೇಳಬಹುದು.

ಈಗ ಹೊಲ-ಮನೆಗಳ ಬೆಲೆ ೧೯೬೫ ರಷ್ಟು ಏರಿವೆ. ಆದುದರಿಂದ ಇವು ಚಿಕ್ಕ ಉಳಿತಾಯಗಳ ಹಣವನ್ನು ಮಾರಿವೆ. ಈಗ ಏರಿದ ಬೆಲೆಗಳು ಇಳಿದ ಮೇಲೆ, ಈಗ ತೊಡಗಿಸಿದ ಹಣದ ಮೇಲೆ ಬಡ್ಡಿಯೂ ಕಡಿಮೆ ಸಿಗುತ್ತದೆ. ಬೆಲೆಗಳು ಇಳಿಯುವುದರಿಂದ ಅವುಗಳನ್ನು ಮಾರಿದರೆ ಬರುವ ಹಣವೂ ಕಡಿಮೆಯಾಗಿ ಗಂಟು ಕೂಡ ಕರಗುತ್ತದೆ.

ಒಡವೆಗಳಲ್ಲಿ ಹಣವನ್ನು ತೊಡಗಿಸಿದರೆ, ಈಗ ಏರಿದ ಬೆಳ್ಳಿ-

ಬಂಗಾರಗಳ ಬೆಲೆ ಮುಂದೆ ಇಳಿಯುವುದರಿಂದ ಮತ್ತು ಒಡವೆಗಳು ಸವೆಯುವುದರಿಂದ ಗಂಟು ಕರಗುತ್ತದೆ. ಬಡ್ಡಿಯಂತೂ ಇಲ್ಲವೇ ಇಲ್ಲ. ಕಳ್ಳ-ಕಾಕರ ಅಂಜಿಕೆ ಬೇರೆ. ಇದಲ್ಲದೆ ಅಷ್ಟು ಹಣ ಹೂಳಿಟ್ಟ ಹಣದಂತೆ ಆಗಿ, ಹಣದ ಪ್ರವಾಹ ಬತ್ತಿಹೋಗುತ್ತದೆ. ನಾಡು ಅಷ್ಟು ಬಡವಾಗುತ್ತದೆ.

ಬ್ಯಾಂಕುಗಳಲ್ಲಿ ಠೇವುಗಳನ್ನು ಇಡಬೇಕೆಂದರೆ ಆ ಸಂಸ್ಥೆಗಳ ಭದ್ರತೆಯ ವಿಷಯವಾಗಿ ಸರಿಯಾದ ಕಲ್ಪನೆ ಇರುವುದಿಲ್ಲ. ಹಳ್ಳಿ-ಹಳ್ಳಿಗಳಿಗೆ ಬ್ಯಾಂಕುಗಳೂ ಹಬ್ಬಿಲ್ಲ.

ಚಿಕ್ಕ ಉಳಿತಾಯಗಳಿಗೇ ನೀಸಲಾದ ಸರಕಾರದ ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಜನಸಾಮಾನ್ಯರು ಕಣ್ಣು ಮುಚ್ಚಿ ಕೂಡ ತಮ್ಮ ಚಿಕ್ಕ ಉಳಿತಾಯಗಳನ್ನು ತೊಡಗಿಸಬಹುದು. ಹಣ ಪೂರ್ಣ ಸುರಕ್ಷಿತವಾಗಿರುತ್ತದೆ.

ನಮ್ಮ ನಾಡಿನಲ್ಲಿ ಪೋಸ್ಟ್ ಆಫೀಸುಗಳು ಹಳ್ಳಿ-ಹಳ್ಳಿಗಳಿಗೆ ಹಬ್ಬಿದಷ್ಟು ಬ್ಯಾಂಕುಗಳು ಹಬ್ಬಿಲ್ಲ. ಸರಕಾರದ ಪೋಸ್ಟ್ ಆಫೀಸುಗಳ ಮೇಲೆ ಇವ್ವಷ್ಟು ಜನರ ನಂಬಿಗೆ ಬೇರೆ ಯಾವ ಸಂಸ್ಥೆಗಳ ಮೇಲೆಯೂ ಇಲ್ಲ. ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಪೋಸ್ಟ್ ಆಫೀಸುಗಳಲ್ಲಿ ಮಾರಲಿಕ್ಕೆ ಸಿಗುತ್ತವೆ. ಸರಕಾರದವರು ಇವುಗಳಿಗೆ ವಿಶೇಷ ಸೌಕರ್ಯಗಳನ್ನು ಕೊಟ್ಟಿದ್ದಾರೆ. ಇವುಗಳಿಗೆ ಹೆಚ್ಚಿನ ಬಡ್ಡಿ ಸಿಗುತ್ತದೆ. ೧೨ ವರ್ಷದ ಸರ್ಟಿಫಿಕೇಟುಗಳಿಗೆ ನೂರಕ್ಕೆ [illegible] ನಂತೆ, ೭ ವರ್ಷದುವುಗಳಿಗೆ ನೂರಕ್ಕೆ ೬೧ ಯಂತೆ ೫ ವರ್ಷದುವುಗಳಿಗೆ ನೂರಕ್ಕೆ ೩೧ರಂತೆ ಬಡ್ಡಿ ಸಿಗುತ್ತದೆ. ಇವುಗಳ ಬಡ್ಡಿಗೆ ಆದಾಯಕರವಿಲ್ಲದ್ದರಿಂದ ಈ ಉತ್ಪನ್ನ ನಿವ್ವಳ ಉತ್ಪನ್ನ.

ಜನರಿಗೆ ಚಿಕ್ಕ ಉಳಿತಾಯಗಳ ರೂಢಿಯಾಗಬೇಕು. ತೀರ ಚಿಕ್ಕ ಉಳಿತಾಯಗಳನ್ನು ಕೂಡ ತೊಡಗಿಸಲು ಬರಬೇಕೆಂದು ೦-೪-೦, ೦-೮-೦, ರೂ. ೧ ರ ಸೇವ್ಹಿಂಗ್ಸ್ ಸ್ಟ್ಯಾಂಪುಗಳನ್ನು ಕೊಡುತ್ತಾರೆ. ರೂ. ೫ ಬೆಲೆಯ ಸ್ಟ್ಯಾಂಪುಗಳಾದ ಕೂಡಲೆ ಸ್ಟ್ಯಾಂಪುಗಳನ್ನು ಕೊಟ್ಟು ೫ ರೂ. ಯ ಸೇವಿಂಗ್ ಸರ್ಟಿಫಿಕೇಟನ್ನು ಪಡೆಯಬಹುದು.

ಈ ವಿಶೇಷ ಸೌಕರ್ಯಗಳ ಲಾಭ ಬಡವರಿಗಾಗಿ—ಚಿಕ್ಕ ಉಳಿತಾಯಗಳನ್ನು ತೊಡಗಿಸುವವರಿಗಾಗಿ—ಇದೆ. ಈ ಉದ್ದೇಶದಿಂದಲೇ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದಾದ ಹಣಕ್ಕೆ ಮರ್ಯಾದೆಯಿದೆ. ಪ್ರತಿಯೊಬ್ಬನೂ ರೂ ೫೫೦೦೦ಗಳ ವರೆಗೆ ಹಣವನ್ನು ತೊಡಗಿಸಬಹುದು.

ಈ ಸರ್ಟಿಫಿಕೇಟುಗಳು ಕಳವಾದರೆ, ಇಲ್ಲವೆ ಕಳೆದು ಹೋದರೆ, ಇಟ್ಟಲ್ಲಿಯೇ ಸುಟ್ಟುಹೋದರೆ, ಅವುಗಳ ಬದಲಾಗಿ ಬೇರೆ ಸರ್ಟಿಫಿಕೇಟುಗಳನ್ನು ಪಡೆಯಬಹುದು.

ಬಡ್ಡಿ ಬರಬೇಕೆಂದು ಹಣವನ್ನು ತೊಡಗಿಸುತ್ತೇವೆ. ಆದರೆ ಹೆಚ್ಚು ಬಡ್ಡಿ ಬರುವುದೆಂಬ ಆಶೆಯಿಂದ ವಿಚಾರ ಮಾಡದೆ ಹಣವನ್ನು ತೊಡಗಿಸಿದರೆ ಅಸಲನ್ನು ಕೂಡ ಕಳೆದುಕೊಳ್ಳುವ ಪ್ರಸಂಗ ಬರಬಹುದು. ಬೆಲೆಗಳು ಇಳಿಯಲಿರುವ ಈ ಸಂಧಿಕಾಲದಲ್ಲಿಯಂತೂ ಬಹಳ ಎಚ್ಚರದಿಂದ ಹಣವನ್ನು ತೊಡಗಿಸಬೇಕು.

ಈ ಸರ್ಟಿಫಿಕೇಟುಗಳಿಗಾಗಿ ಹೆಚ್ಚು ಹಣವನ್ನು ತೆರಬೇಕಾಗಿಲ್ಲ ಮೂಲಬೆಲೆಗೇ ಹಣವನ್ನು ತೊಡಗಿಸಬಹುದು. ರೂ. ೫ ಬೆಲೆಯ ಸರ್ಟಿಫಿಕೇಟುಗಳು ೫ ರೂ. ಗಳಿಗೇ ದೊರೆಯತ್ತವೆ ಅವಧಿ ಮುಗಿದ ಮೇಲೆ ಪೂರ್ಣ ಹಣ ಬಡ್ಡಿಸಹಿತ ತೆರುಸಿಗುತ್ತದೆ. ಶೇರು ಮೊದಲಾದುವುಗಳ ಬೆಲೆಗಳು ಇಳಿದರೂ ಈ ಸರ್ಟಿಫಿಕೇಟುಗಳ ಬೆಲೆ ಇಳಿಯುವುದಿಲ್ಲ.

ಇವುಗಳಲ್ಲಿ ತೊಡಗಿಸಿದ ಹಣ ಬಂಯ ಬಡ್ಡಿಯನ್ನು ಮಾತ್ರ ದುಡಿಯುವುದಿಲ್ಲ. ನಾಡಿನಲ್ಲಿಯ ಬಂಡವಲದ ಬರವನ್ನು ದೂರ ಮಾಡುತ್ತದೆ. ಇವುಗಳಿಂದ ನಮಗೆ ತೀರ ಹೆಚ್ಚೆಂದರೆ ೪% ಬಡ್ಡಿ ಸಿಗುತ್ತದೆ. ಆದರೆ ಈ ಬಡ್ಡಿಗಿಂತ ನಮ್ಮ ಹಣ ನಾಡನ್ನು ಕಟ್ಟುವ ಕೆಲಸಕ್ಕೆ ಉಪಯೋಗವಾಗುತ್ತಿದೆಯೆಂಬುದು ಹೆಚ್ಚು ಮಹತ್ವದ್ದು.

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯುಕ್ತವು ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಚಂಪಿ

(ಸಣ್ಣಕತೆ)

ಶ್ರೀ. ವರಗಿರಿ ಮಾರ್ತಾಂಡರಾಯರು, ಎಂ.ಎ., ಬಿ.ಟಿ.

★

'ಸಂಸ್ಕೃತಿ ದೊಡ್ಡ ದೊಡ್ಡ ಪದವಿಯಲ್ಲಿಲ್ಲ. ದೊಡ್ಡ ದೊಡ್ಡ ಮಾತುಗಳಲ್ಲಿಲ್ಲ. ಆ ಹಾಲಿನಾಕೆಯಲ್ಲಿರುವ ತಿಳಿವಳಿಕೆಯ ಒಂದು ಅಂಶದಷ್ಟಾದರೂ ಈ ಪ್ರೊಫೆಸರನಲ್ಲಿಲ್ಲ' ಎಂದರು ನಾರಾಯಣರಾಯರು.

೧

".....ಆವರು ಕೊಡೋ ನಾಲ್ಕು 'ಚಿಪ್ಪಿ'ಗಾಗಿ ನನ್ನ ಬುದ್ಧೀ ಮಾರಿಕೊಳ್ಳೋ ಹೇಸಿ ಕೆಲಸ, ಅದ್ಯಾಕೋ ನನ್ನ ಸ್ವಭಾವಕ್ಕ ಒಗ್ಗಲಿಲ್ಲ. ಅಂತೇ ಪ್ರೊಫೇಸರ್ ಕೆಲಸಾ ಬಿಟ್ಟುಬಂದೆ. ನಮ್ಮ ಕರ್ನಾಟಕದಾಗಽ ಇದ್ದು ಸಮಾಜಸುಧಾರಣಾ ಮಾಡೋಂವ ಇದ್ದೇನಿ. ಮಾಡಬೇಕು ಅಂದ್ರ, ಬೇಕಾದಷ್ಟು ಅದ ಕೆಲಸ, ನಿ. ನಾರಾಯಣರಾವ್! ನಮ್ಮ ಸಮಾಜದ ಕೊಳಕುತನ, ಅನ್ಯಾಯ, ಡಾಂಭಿಕತೆ, ಸ್ವಾರ್ಥ, ಅಸಮಾನತೆ— ಎಲ್ಲಾ ಹೇಸಿಗೆ ಇಟ್ಟು ಹೋಗೇದ ನೋಡ್ರಿ ನನಗ. ಶ್ರೀಮಂತರು ಶ್ರೀಮಂತರೇ ಆಗಲಿಕ್ಕೆ ಹತ್ಯಾರ; ಬಡವರು ಬಡವರೇ ಆಗಲಿಕ್ಕೆ ಹತ್ಯಾರ. ದಯಾ, ದಾಕ್ಷಿಣ್ಯ, ಅಂತಃಕರಣ ಅನ್ನೋದರ ಗಂಧ ಸುದ್ದಾ ಉಳಿದಿಲ್ಲ ನಮ್ಮ ಜನದಾಗ." ಎನ್ನುತ್ತಲೇ ಪ್ರೊ. ಕುಲಕರ್ಣಿಯವರು ನಿಲುವುಗನ್ನಡಿಯ ಮುಂದೆ ನಿಂತು ತಲೆಯ ಕೂದಲುಗಳನ್ನು 'ಡ್ರೆಸ್ಸು'ಮಾಡುವ ಕೆಲಸ ಹುಗಿಸಿದರು; ಹಣೆಗೆಯ ಹಲ್ಲುಗಳಲ್ಲಿ ಸಿಕ್ಕ ಹೊಲಸನ್ನು ಹೆಗಲ ಮೇಲಿನ ಟಾವೆಲ್ಲಿನಿಂದ ಒರಸಿ, ಅದನ್ನು ಬದಿಯಲ್ಲಿಯ ಮೇಜಿನ ಮೇಲೆ ಇಟ್ಟು 'ಸ್ನೋ'ವಿನ ಬಾಟ್ಲಿಯಲ್ಲಿ ತೋರುಬೆರಳನ್ನು ಎದ್ದಿ, ಮುಖಕ್ಕೆ ಸ್ನೋ ಹಚ್ಚಿ ತಿಕ್ಕಿಕೊಳ್ಳಲು, ಉದ್ಯುಕ್ತರಾದರು.

ಬದಿಯಲ್ಲಿಯೇ ಆರಾಮಖುರ್ಚಿಯ ಮೇಲೆ ಕುಳಿತಿದ್ದ ನಾರಾಯಣರಾಯರು, ಪ್ರೊ. ಕುಲಕರ್ಣಿಯವರ ವಿಚಾರಗಳ ಲಾಲಿತ್ಯಕ್ಕೆ ತಲೆದೂಗಿದರು. "ವಯಸ್ಸು ಎಳೆಯದಾದರೂ ಎಷ್ಟು ವಿಚಾರವಂತರಾಗಿದ್ದಾರೆ! ಇದಕ್ಕೆಲ್ಲ ಕಾರಣ ಈ ಪುಸ್ತಕಗಳು." ಎಂದು ಮನಸಂದು, ಕೋಣೆಯ ನಾಲ್ಕೂ ಗೋಡೆಗಳ ಕಡೆಗೆ ಕಣ್ಣಳನ್ನು ಹೊರಳಿಸಿದರು. ದೊಡ್ಡ ದೊಡ್ಡ ಕಾಜಿನ ಕಪಾಟುಗಳಲ್ಲಿ, ನಾನಾ ಬಗೆಯ ಅಂದವಾದ ಸೆಲ್ಫುಗಳಲ್ಲಿ, ಮೇಜಿನ ಮೇಲೆ— ಎಲ್ಲಿ ನೋಡಿದಲ್ಲಿ — ಬೇರೆ ಬೇರೆ ಭಾಷೆಗಳ ಅಂದ-ಚಂದವಾದ ಸಣ್ಣ ದೊಡ್ಡ ಪುಸ್ತಕಗಳೇ.

ಪ್ರೊ. ಕುಲಕರ್ಣಿಯವರು, ನಾರಾಯಣರಾಯರ ಎದುರಿನ ಖುರ್ಚಿಯ ಮೇಲೆ ಬಂದು ಕುಳಿತುಕೊಂಡರು. ಕೈಯನ್ನು ಮುಂದೆ ಚಾಚಿ ಟೇಬಲ್ಲಿನ ಮೇಲಿನ ಗಂಟೆಯನ್ನು ಎರಡು ಸಲ ಬಾರಿಸಿದರು.

ಆಳೇನೂ ಬರಲಿಲ್ಲ. ಮುಖದಲ್ಲಿ ಅಳನ್ನಿಟ್ಟ ಲಕ್ಷಣಗಳೂ ಕಾಣಲಿಲ್ಲ. ಎರಡು ನಿಮಿಷಗಳಲ್ಲಿ ಪ್ರೊ. ನಾರಾಯಣರಾಯರ ಹೆಂಡತಿ, ಒಂದು ಟ್ರೇಯಲ್ಲಿ ಎರಡು ಕಪ್ಪು ಚಹವನ್ನು ತಂದು ಮುಂದಿಟ್ಟಾಗ, ನಾರಾಯಣರಾಯರಿಗೆ ಹೊಳೆಯಿತು: ಅವರು ಗಂಟೆಯನ್ನು ಏಕೆ ಎರಡು ಸಲ ಬಾರಿಸಿದರು ಎಂಬುದು. ಆಮೇಲೆ ಮತ್ತೆ ಮಾತು ಪ್ರಾರಂಭವಾಯಿತು:

"ನೀವು ಇಲ್ಲೆಯ ವರೆಗೆ ಎಲ್ಲಿ ಇದ್ದಿರಿ, ನಾರಾಯಣರಾವ್?"

"ಕಾರವಾರದಲ್ಲಿ ಇದ್ದೆ; ನಿನ್ನೆಯೇ ಇಲ್ಲಿಗೆ ವರ್ಗವಾಗಿ ಬಂದೆ. ಈ ಊರಿಗೆ ನಾನು ತೀರ ಹೊಸಬನು!"

"ಪುಣ್ಯಕ್ಕ ನಿಮ್ಮ ತಮ್ಮ ಇಲ್ಲಿ ಇದ್ದಾರ; ಅಂತೇ ನಿಮಗೆ ಅಷ್ಟ ತ್ರಾಸ ಆಗಲಿಲ್ಲ. ನಿಮ್ಮ ತಮ್ಮ ಬಹಳ ಒಳ್ಳೆಯವರು ನೋಡ್ರಿ. ನಮ್ಮ ಕಂಪೌಂಡಿನಾಗ ಇರಲಿಕ್ಕೆ ಹತ್ತಿ ಎರಡು ವರ್ಷ ಆತು; ಆವರಿಂದ ನಮಗೇನೂ ತ್ರಾಸ ಇಲ್ಲ. ನಾನೂ ಸಹ ನಮ್ಮ ಮನೀ ಬಾಡಿಗೀ ಹೆಚ್ಚು ಮಾಡಿಲ್ಲ; ಮೊದಲು ಕೊಟ್ಟಷ್ಟs ಕೊಡತಾ ಇದ್ದಾರ. ಮುಂದೇನು, ನೀವೂ ಆವರೂ ಕೂಡೇ ಇದೇ ಮನಿಯಾಗs ಇರೋ ವಿಚಾರ ಅದ ಏನು?"

"ನೋಡಬೇಕು, ಬೇರೆ ದೊಡ್ಡ ಮನಿ ಸಿಕ್ಕರ ಹೋಗಬೇಕು—" ಎಂದು ಆವರು ಎನ್ನುವಷ್ಟರಲ್ಲಿ, ನಾಯಿಯ ಕುನ್ನಿಯೊಂದು ಹೊರಬಾಗಿಲಿನಲ್ಲಿ ಹಣಿಕಿಹಾಕಿತು. ನಾರಾಯಣರಾಯರ ಚಿತ್ತ ಅತ್ತ ಬಿತ್ತು.

ವಯಸ್ಸು ಏಳೆಂಟು ತಿಂಗಳು ಆಗಿರಬಹುದು; ಬಹಳ ಮೂಟಾದ ಕುನ್ನಿ; ಉದ್ದದೇಹ; ಸಣ್ಣ ನಡು; ಗಿಡ್ಡ ಕಾಲುಗಳು; ಬಾಳೆಯ ಗೊನೆಯಂತೆ ಜೊಂಕಾದ ಬಾಲ; ಹರವಾದ ಹಣೆ; ಅಂದನಾಗಿ ಕೆಳಗೆ ಜೋತುಬಿದ್ದ ಅಗಲವಾದ ಕಿವಿಗಳು; ಮೈತುಂಬ ಸಾದುಗೆಂಪಿನ ಉದ್ದುದ್ದ ಕೂದಲುಗಳು.

ಕುನ್ನಿ ಒಳಗೆ ಬಂತು. ಕಾಲೊರಸುವ ಚಟ್ಟಿನ ಮೇಲೆ ನಿಂತು ಬಾಲವನ್ನು ಅಲುಗಾಡಿಸಿತು. ನೇರವಾಗಿ ಮುಂದೆ ಬಂದು, ಪ್ರೊ. ಕುಲಕರ್ಣಿಯವರು ಕುಳಿತ ಖುರ್ಚಿಯ ಬಳಿ ಹೋಗಿ, ಅವರ ಪಾದಕ್ಕೆ ಮೈ ಹೊಂದಿಸಿಕೊಂಡು ಕುಳಿತುಕೊಂಡಿತು.

ಅದರ ಮಾಟ, ಅದರ ದಿಟ್ಟತನ, ಅದರ ಸಲುಗೆ ನಾರಾಯಣರಾಯರ ಕುತೂಹಲವನ್ನು ಕೆರಳಿಸಿದುವು. ತೊಡೆಗಳ ಮೇಲೆ ಇರಿಸಿದ ಅಪ್ಪುಗೈಗಳ ಮೇಲೆ ಭಾರಹಾಕಿ, ಮುಂದೆಬಾಗಿ ಅದರ ಕಡೆ ನೋಡಿ, ಸಿಳ್ಳುಹೊಡೆದು ಅದನ್ನು ಮಾತಾಡಿಸಹತ್ತಿದರು. ಅದೂ ಬಾಲವನ್ನು ಅಲುಗಿಸಿ ಉತ್ತರ ಕೊಟ್ಟಿತು.

ಪ್ರೊ. ಕುಲಕರ್ಣಿಯವರಿಗೆ ಅದರ ಸಲುಗೆ ಸೇರಲಿಲ್ಲ. ಅದು ತನ್ನ ಮೈಯನ್ನು ಆವರ ಪಾದಕ್ಕೂ ಹೈಜಮದ ಆಂಟಿಗೂ

ದಿ ಕ್ಯಾನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

(ಹಣಕಾಸಿನ ಹೊಣೆಗಾರಿಕೆಯು ಷೇರ್ಗಳ ಮೇಲೆ ಸ್ಥಾಪಿತವಾದದ್ದು — ಕಂಪನಿ)

— ಹೆಚ್ಚಿರಲಿ, ಕಡಿಮೆಯಿರಲಿ, —

ದಿನದಿನಕ್ಕೂ ಬೆಳೆಯುವ ನಿಮ್ಮ ಉಳಿತಾಯದ ಹಣವನ್ನು **ಕ್ಯಾನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್**ನಲ್ಲಿರಿಸುವದು ಅತ್ಯುತ್ತಮವಾದ ವ್ಯವಸ್ಥೆಯಾಗಿರುವದಲ್ಲದೆ, ನಿಮಗೆ ಬೇಕಾದಾಗ ಕೂಡಲೇ ದೊರಕುವ ನಿಧಿಯಾಗಿ ಉಳಿಯುವದು.

ಸಣ್ಣ ಪ್ರಮಾಣದಲ್ಲಿಯೇ ಆಗಲಿ, ನಮ್ಮ ಬ್ಯಾಂಕಿನಲ್ಲಿ ನಿಮ್ಮ ಹೆಸರಿನಿಂದ 'ಸೇವಿಂಗ್ಸ್ ಬ್ಯಾಂಕ್' ಆಕೌಂಟನ್ನು ಕೂಡಲೇ ಪ್ರಾರಂಭಿಸಿರಿ. ಬೆಲೆ ಏರುತ್ತಿರುವ ಈ ಕಾಲದಲ್ಲಿ ಈ ಉಳಿತಾಯವು ಖಂಡಿತವಾಗಿ ನಿಮ್ಮ ಅಭಿವೃದ್ಧಿಗೆ ಕಾರಣವಾಗುವದು.

ಬ್ಯಾಂಕಿನ ಅಧೀನ ಹಣ ಸಂಗ್ರಹಣಾ ಸಂಸ್ಥೆ

ಟಿ. ಎಮ್. ಎ. ಪೈ.
ಚೇರ್ಮನ್ ಮತ್ತು
ಮ್ಯಾನೇಜಿಂಗ್ ಡೈರೆಕ್ಟರು.

The Canara Industrial & Banking Syndicate, Ltd.
UDIPI

ಉಚ್ಚಿದುದು ಅವರನ್ನು ರೇಗಿಸಿತು. ಒಂದು ಕ್ಷಣ ಅದನ್ನು ಜಗುಪ್ಸೆಯಿಂದ ಬಿರಿಬಿರಿ ನೋಡಿದರು. ಬದಿಯಲ್ಲಿಯ ಅರಾಮ ಖುರ್ಚಿಯ ಅರಿವೆಯ ತುದಿಗಿದ್ದ ಕಟ್ಟಿಗೆಯನ್ನು ಹಿರಿದು, ಅದರ ಮೇಲೆ ಒಮ್ಮೆ ಅಪ್ಪಳಿಸಿದರು. ಗುರಿ ಅದರ ಹಿಂಗಾಲಿಗೆ ಬಿದ್ದು, ಕುನ್ನಿ ನೋವಿನಿಂದ ಕಳವಳಗೊಂಡಿತು; ಕುಂಯಿಗುಡುತ್ತ ಕುಂಟುತ್ತ ಹೊರಗೆ ಹೋಯಿತು.

ನಾರಾಯಣರಾಯರ ಅಂತಃಕರಣ ಕದಡಿತು.

ಒಟ್ಟನಲ್ಲಿಯೇ ಪ್ರೊ. ಕುಲಕರ್ಣಿಯವರು ಎಂದರು :

"ನೋಡ್ರಿ, ಮುಂದಿ ನಮಗ ಎಷ್ಟು ತ್ರಾಸಕೊಡತಾರ! ನಿಮ್ಮ ತಮ್ಮ ಇರೋ ಮನಿಯ ಎಡಕಿನ ಖೋಲಿಯೊಳಗ, ಒಬ್ಬ ವಿದ್ಯಾರ್ಥಿ ಇರತಿದ್ದ. ತಾ ನೋಡಿದರ ಬಡವ; ತನಗಽ ಕೂಳಿನ ಅಭಾವ; ಅಂಥಾದ್ರಾಗ ಈ ನಾಯೀಕುನ್ನೀ ಬ್ಯಾರೆ ಸಾಕಿದ್ದ. ಈಗ ಹದಿನೈದು ದಿನದ ಕೆಳಗ, ಅಂವ ನಮ್ಮ ಖೋಲಿಬಿಟ್ಟು ಎಲ್ಲೋಽಗೇ ಹೋದ. ಹೋಗೋ ಮುಂದ ಈ ಕುನ್ನೀನೂ ಇಲ್ಲಿ ಬಿಟ್ಟು ಹೋಗ್ಯಾನ. ಅದು ಈಗ ನಮಗ ತ್ರಾಸುಕೊಡಲಿಕ್ಕೆ ಹತ್ತೀದ. ಉಪಾಸಾ ಕಂಪೌಂಡಿನಾಗ ಬಿದ್ದಿರತಕದ. ಈ ರೇಶನ್ ದಿನಸದಾಗ ಅದಕ್ಕಾರು ಕೂಳುಹಾಕಬೇಕು? ಹುರುಕು ಬ್ಯಾರೆ ಹತ್ತೀದ ಕಾಣಸತದ; ಪರಾಪರಾ ಕೆರಕೋತಕದ....."

ನಾರಾಯಣರಾಯರ ಚಿತ್ತ ಇತ್ತ ಇರಲಿಲ್ಲ; ಹೊರಗೆ ನರಳುತ್ತ ಲಿದ್ದ ಕುನ್ನಿಯ ಆರ್ತಧ್ವನಿಯ ಕಡೆಗೆ ಹೋಗಿತ್ತು. ಕುನ್ನಿಯ ದೂರದೂರ ಹೋದಂತೆ, ಅದು ಕುಂಯಿಗುಡುವುದು ನಿಲ್ಲಲ್ಲಿಕೇಳಿಸುತ್ತಿತ್ತಾದರೂ, ರೋದನ ಒಂದೇ ಸವನೆ ನಡೆದೆ ಇತ್ತು ಪೆಟ್ಟು ಬಹಳ ಹತ್ತಿದ್ದಿತೇನೊ! 'ಮತ್ತೆ ಭೆಟ್ಟಿಯಾಗತೇನೆ' ಎಂದೆಂದು, ಚಹವನ್ನು ಕೊಟ್ಟುದಕ್ಕಾಗಿ ಪ್ರೊ. ಕುಲಕರ್ಣಿಯು ಉಪಕಾರ ಸ್ಮರಿಸಿ, ಅವರು ಹೊರಗೆ ಹೋದರು.

ಕುನ್ನಿಯು ನಾರಾಯಣರಾಯರ ತಮ್ಮನಿದ್ದ ಪಕ್ಕದ ಖೋಲಿಯ ಮೆಟ್ಟಿಲಿನ ಬದಿಗೆ ಬಿದ್ದುಕೊಂಡಿತು; ಇನ್ನೂ ಒದರುತ್ತಿತ್ತು. ಪೆಟ್ಟುತಿಂದ ಕಾಲು ಗದಗದ ನಡುಗುತ್ತಿತ್ತು. ನಾರಾಯಣರಾಯರು ಹೆಂಡತಿಗೆ, ತುಣುಕು ಭಕ್ಕರಿಯನ್ನು ತರಲು ಹೇಳಿ ಕುನ್ನಿಯ ನುಂದೆ ಕುಳಿತು, ಕಾಲನ್ನು ಹಿಡುಕಿ ನೋಡಿದರು. ಕುತ್ತಿಗೆಯ ಮೇಲೆ ಕೈಯಿಟ್ಟು ಜೆಪ್ಪರಿಸಿದರು.

೨

ನಾರಾಯಣರಾಯರ ತಮ್ಮ ನಾಲ್ಕು ಜನರಿಗೆ ಬೇಕಾದಷ್ಟು ರಾದ್ದರಿಂದ, ಅವರಿಗೆ ಬೇರೆ ಒಂದು ದೊಡ್ಡ ಮನೆ ಬೇಗನೆ ಸಿಕ್ಕಿತ್ತು. ಆ ಮನೆಗೆ ಹೋಗುವುದೂ ಆಯಿತು. ಚಂಪಿಯೂ— ಚಂಪಿಯೆಂಬುದು ಆ ನಾಯಿಯ ಹೆಸರು— ಕುಂಟುತ್ತ ಕುಂಟುತ್ತ ನಾರಾಯಣರಾಯರ ಬೆನ್ನುಹತ್ತಿ ಹೊಸ ಮನೆಗೆ ಹೋಯಿತು. ಈ ಸಲುಗೆ, ಅವಳು ನಾಲ್ಕಾರು ದಿನ ಅದಕ್ಕೆ ಅನ್ನ ಹಾಕಿದ್ದುದರ ಪರಿಣಾಮ. ನಾರಾಯಣರಾಯರಿಗೆ ಆ ಕುನ್ನಿ ತಮ್ಮ ಬೆನ್ನುಹತ್ತಿ ಬಂದುದಕ್ಕೆ ತೊಂದರೆಯೇನೂ ಎನಿಸಲಿಲ್ಲ; ಅನಂದವೇ ಆಯಿತು. ನಾಲ್ಕಾರು ದಿನಗಳ ಅವಧಿಯಲ್ಲಿ ಅವರು, ಚಂಪಿಯ ಪರಾಮರಿಜೆನ್ನಾಗಿ ಮಾಡಿದ್ದರು. ಉಂಡು ಉಳಿದುದೆಲ್ಲವನ್ನೂ, ಊಟವಾದ ಮೇಲೆ ಬಳಿದು ಅದರ ಮುಂದೆ ಇಡುತ್ತಿದ್ದರು. ಸ್ನಾನಮಾಡುವ ಮುಂದೆ, ನೋನಿನ ಕಾಲನ್ನು ತಿಕ್ಕಿ ಬಿಸಿನೀರನ್ನು ಹನಿಸುತ್ತಿದ್ದರು. ಅಂತೆಯೇ ಅದರ ಬಗ್ಗೆ ಕನಿಕರ ಹುಟ್ಟಿದ್ದಿತು. ಮಡಿ-ಮೈಲಿಗೆಯ ಬೆಳೆದ ನಾರಾಯಣರಾಯರ ಹೆಂಡತಿಗೆ, ನೊದ-ನೊದಲು ಕುನ್ನಿ ತಮ್ಮ ಬೆನ್ನುಹತ್ತಿ ಬಂದುದು ಸೇರಲಿಲ್ಲ. ಆದರೆ ಅದರ ಅಂದ ಅದರ ಚಿನ್ನಾಟ, ಅದರ ಬಗ್ಗೆ ಗಂಡನಿಗಿದ್ದ ಹುಚ್ಚು— ಇವೆಲ್ಲ ಅವರ ಅಂತಃಕರಣವನ್ನು ಕಲಕಿಸಿದುವು. ದಿನಾಲು ಬಕ್ಕೆ ಸುಡುವುದು ಮುಗಿದೊಡನೆ, ತಪ್ಪದೆ ಚಂಪಿಗೊಂದು ಬಕ್ಕೆ ಮಾಡುವುದನ್ನು ಮರೆಯುತ್ತಿರಲಿಲ್ಲ.

ದಿನಗಳೆದಂತೆ ಚಂಪಿ ನಾರಾಯಣರಾಯರನ್ನು ಪ್ರಾಣವೆಂಬಿತು. ಅದರ ಸಲುಗೆಯೂ ಹೆಚ್ಚಿತು. ರಾಯರ ಹೆಂಡತಿ ಹುಚ್ಚಾಹುಚ್ಚಾ ಮಾಡಿದರೂ ಬಡಿಗೆಯ ಮನೆಯ ವರೆಗೆ ನಿರಾತಂಕವಾಗಿ ಓಡಾಡಹತ್ತಿತು. ಹಾಸಿದ ಹಾಸಿಗೆಯ ವರೆಗೂ ಹೋಗಿ ಚಿನ್ನಾಟವಾಡುವ ಹಟಹಿಡಿಯಿತು. ಅದರ ಮೈಮೇಲೆ ಅಲ್ಲಿ ಇಲ್ಲಿ ಕೂದಲು ಉದುರಿದ್ದುವಾದ್ದರಿಂದ, ಅದಕ್ಕೆ ಹುರುಕುಹತ್ತಿರುವುವೋ ಏನೋ ಎಂಬ ಭಯದಿಂದ ನಾರಾಯಣರಾಯರು, ಬಿಟ್ಟದ್ದು ಬಿಟ್ಟ

ಟ್ಟ. ಹುಟ್ಟನ್ನು ತಂದರು. ದಿನಕ್ಕೆರಡು ಸಲ ಡಿ.ಡಿ.ಟಿ. ಹಚ್ಚಿ ಮೈ ತೊಳೆದು, ತಿಂಗಳೆಂಬುದರಲ್ಲಿ ಅದರ ಮೈಕಡಿತ-ಕಡಿಮೆನಾಡಿದರು.

* * * *

ಸಿ ಬೆಳೆಯಿತು; ದೊಡ್ಡದಾಯ್ತು. ಪಕ್ಕೆಯೆಲುಬುಗಳೆಲ್ಲ ಕೊಂಡು ದುಂಡುದುಂಡಾಯಿತು. ಉದುರಿದ ಕೂದಲು-ಮತ್ತೆ ಹೇರಳವಾಗಿ ಬೆಳೆದುವು; ಮಿರಿಮಿರಿ ಮಿಂಚಹತ್ತಿ-ಅದರ ಹಳದಿಯ ಗುಡ್ಡಿಗಳಲ್ಲಿ ಬೆಳಕು ಹೊರಹೊರಡು-ಕಾಣುತ್ತಿತ್ತು. ಅದರ ಆಟ, ಅದರ ಕೂಡುವ ಮಾಟ, ಓಡಾಟ, ಅದರ ಚಿನ್ನಾಟ— ಎಲ್ಲವೂ ಮನೋಹರ-ವು. ಮನೆಗೊಂದು ಅಲಂಕಾರವೋ ಏನೋ ಎನ್ನುವಂತೆ, ಬಂದುಹೋದವರ ಮನಸ್ಸನ್ನು ಆಕರ್ಷಿಸುತಲಿದ್ದಿತು

ಗಂಡ-ಹೆಂಡಂದಿರಿಗೆ ಜೀವನದಲ್ಲಿ ಯಾವ ಕೊರತೆಯೂ ಲ್ಲ. ಕೈತುಂಬ ಸಂಬಳ ಸಿಗುತ್ತಿತ್ತು. ಉಂಡುಟ್ಟು ಸುಖ-ದ್ದರು. ಆದರೂ ಅವರ ಮನಸ್ಸಿನ ಒಂದೇ ಒಂದು ಕೊರಗು ಎಂದರೆ ಮಕ್ಕಳಿಲ್ಲದುದು. ಇಂದಿನ ವರೆಗೂ ಮಕ್ಕಳ ಆಶೆ ಅಪೂರ್ಣವಾಗಿಯೇ ಉಳಿದಿದ್ದಿತು. ಎಳೆಯ ಜೀವನವೊಂದನ್ನು ಬೆಳೆಯಿಸಬೇಕು, ಪರಾಮರಿಸಬೇಕು, ಆಡಿಸಬೇಕು, ಬೆಳೆಯುವು-ದನ್ನು ನೋಡಿ ನಲಿಯಬೇಕು— ಎಂಬ ಆಶೆ ಆಶೆಯಾಗಿಯೇ ಉಳಿದಿದ್ದಿತು; ನಿರಾಶೆಯಾಗಿ ಪರಿಣಮಿಸಹತ್ತಿದ್ದಿತು. ಹೃದಯದ ತುಂಬ ತುಂಬಿದ ಹಾಗೆಯೇ ಮೀಸಲಾಗಿ ಸೂಸಿ ನಿಂತಿದ್ದಿತು. ಮೊನ್ನೆ ಮೊನ್ನೆ ಮದುವೆಯಾದ ತಮ್ಮನ ಹೆಂಡತಿಯ ಹೊಟ್ಟೆ-ಯಲ್ಲಿ ಮಕ್ಕಳಾಗುವ ದಾರಿಯನ್ನು ವರು ನೋಡುತ್ತಿದ್ದರು.

ಚಂಪಿ ನಾರಾಯಣರಾಯರ ಹೃದಯವನ್ನು ಸೆಳೆಯಿತು. ಅವರು ಜೀವನದಲ್ಲಿ ಹೊಸ ಹುರುಪನ್ನು ಕಾಣಹತ್ತಿದರು ಆಫೀಸಿಗೆ ಹೋಗುವವರೆಗೆ ಚಂಪಿಯೊಡನೆ ತಿರುಗಾಡಿ ಬರುವ-ದರಲ್ಲಿ, ಅದರ ಮೈ ತೊಳೆದು ಸ್ವಚ್ಛ ಮಾಡುವುದರಲ್ಲಿ, ತುಣುಕು. ತುಣುಕು ರೊಟ್ಟಿಯನ್ನು ಮೇಲೆ ತೂರಿದಾಗ ಅದು ಗುರಿಯಿಟ್ಟು ಮೇಲೆ ನೆಗೆದು ಅದನ್ನು ಕಚ್ಚುತ್ತಿದ್ದಾಗಿನ ಅದರ ಆಟ ನೋಡಿ ನಲಿಯುವುದರಲ್ಲಿ, ತಮ್ಮ ಪೇಲೆ ಕಳೆಯುತ್ತಿದ್ದರು. ಆಫೀಸು ಮುಗಿಯುವುದೊಂದೇ ತಡ, ಕಂಪೌಂಡಿನಲ್ಲಿ 'ಚಂಪೀ'

ಈ ಅಂಕಿ-ಸಂಖ್ಯೆಗಳು ನಿಮ್ಮ ನಂಬಿಗೆಯನ್ನು ಹೆಚ್ಚಿಸುತ್ತವೆ!!

'ವೆಸ್ಟರ್ನ್ ಇಂಡಿಯಾ'ದ ಕಳೆದ ೧೨ ವರ್ಷಗಳಲ್ಲಿಯ ಅಖಂಡ ಪ್ರಗತಿ

		೧೯೩೫	೧೯೪೭
ವಾರ್ಷಿಕ ಉತ್ಪನ್ನ	ರೂ.	೧೬,೬೫,೨೫೩	ರೂ. ೮೧,೯೩,೫೫೦
ಪೂರ್ಣವಾದ ಹೊಸ ವಿಮೆಗಳು	,,	೫೧,೫೦,೦೪೨	,, ೨,೭೧,೫೮,೪೮೯
ಒಟ್ಟು ಆಸ್ತಿ	,,	೭೧,೭೧,೦೯೪	,, ೩ ೫೯,೪೧,೬೬೪
ಜಾರಿಯಲ್ಲಿದ್ದ ಒಟ್ಟು ವಿಮೆಗಳು	,,	೨.೭೬,೧೧,೫೯೯	,, ೧೧,೪೪,೧೧,೬೯೫
ಮೂಲ್ಯ ಮಾಪನದಲ್ಲಿ ಕಂಡುಬಂದ ಲಾಭ	,,	೭.೭೬,೫೧೪	,, ೨೩,೫೨,೦೫೧

೧೯೪೭ರಲ್ಲಿ ಹಂಚಿದ ಬೋನಸ್ಸು :— ಪ್ರತಿ ೧೦೦೦ ಕ್ಕೆ ವರ್ಷಕ್ಕೆ — ರೂ. ೧೦ ಮತ್ತು ೮.

ಕಂಪನಿಯ ಈ ಬೆಳೆಯುವ ವೈಭವದಲ್ಲಿ ಸಹಭಾಗಿಗಳಾದ ಎಲ್ಲ ವಿಮೇದಾರರು ಸಮಾಧಾನವನ್ನು ವ್ಯಕ್ತಮಾಡುತ್ತಲಿದ್ದಾರೆ. ನೀವೂ ಈ ದೀಪಾವಳಿಯ ಸಂಭ್ರಮದಲ್ಲಿ ನಮ್ಮ ಆಕರ್ಷಕ ಯೋಜನೆಯ ಪಾಲಿಸಿಯನ್ನು ಪಡೆದು, ನಿಮ್ಮ ಪ್ರಾಪಂಚಿಕ ಹೊಣೆಯಿಂದ ಮುಕ್ತರಾಗಿರಿ.

ಕೆಳಗಿನ ವಿಳಾಸಕ್ಕೆ ಈಗಲೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ವೆಸ್ಟರ್ನ್ ಇಂಡಿಯಾ ಲಾಯಿಫ್ ಇನ್ಶ್ಯೂರನ್ಸ್ ಕಂಪನಿ ಲಿ., ಸಾತಾರಾ

ಹುಬ್ಬಳ್ಳಿ ಶಾಖೆ :—

ನವಲೆ ಬಿಲ್ಡಿಂಗ್, ಕೊಪ್ಪೀಕರ ರೋಡು.

ಎನ್ನುತ್ತಲೇ ಕಾಲಿಡುತ್ತಿದ್ದರು. ಎದ್ದು ದೀಪದ ಬೆಳಕಿನಲ್ಲಿ ಅದರೊಡನೆ ಆಟವಾಡುತ್ತಿದ್ದರು; ಸ್ಪ್ರಿಂಗಿನ ಕಾಟನ ಮೇಲೆ ಎತ್ತಿ ಒಗೆಯುತ್ತಿದ್ದರು. ಚಂಪಿಗೂ ಇದೇ ಬೇಕಾಗಿರುತ್ತೆ ತ್ತೋ ಏನೋ! ಅವರು ಸಂಜೆಯ ಮುಂದೆ ಬೇಗ ಬಾರದಿನ್ನರೆ, ಕಂಪೌಂಡಿನ ತುಂಬ ಕುಂಯಿಗುಡುತ್ತಾ ಅಲೆದಾಡುತ್ತಿತ್ತು. ನಾರಾಯಣರಾಯರ ಹೆಂಡತಿ ಹೊರಗೆ ಹೊರಟಾಗೆಲ್ಲ, ಅವರ ನೆಳಲಾಗಿ ಕಾವಲುಗಾರನಂತೆ ಅಲೆದಾಡುತ್ತಿತ್ತು ಚಂಪಿ. ಚಂಪಿಯ ಸ್ವಭಾವವನ್ನರಿತ ಅವರ ಗೆಳತಿಯರು, ಚೇಷ್ಟೆಗಾಗಿ ಅವರನ್ನು ಹೊಡೆಯು ಹೋದಂತೆ ನಟಿಸಿದಾಗೆಲ್ಲ, ಚಂಪಿ ಅವರ ಮೇಲೆ ಹರಿಹಾಯ್ದು ಹೋಗುತ್ತಿದ್ದುದು ಒಂದು ಆಟವೇ ಆಗುತ್ತಿತ್ತು. ರಾತ್ರಿ ಕಂಪೌಂಡಿನ ಸನಿಯಕ್ಕೆ ಒಂದು ಕಡ್ಡಿ ಮಿಸುಕಿದರು ಸಹ ಅದು 'ಗುರ್' ಎನ್ನುತ್ತಿತ್ತಿದ್ದಿತು. ಗಸ್ತೀ ತಿರುಗುವ ಪೋಲೀಸರು ಅಲ್ಲಿ ಬಂದೊಡನೆ, ಅವರ ಮೇಲೂ ಏರಿಹೋಗುತ್ತಿದ್ದ ಇದರ ಗುಣವನ್ನು ತಿಳಿದು, ಅವರು ನಗೆಚಾಟಿಕೆಯಿಂದ ಇವರ ಕಣ್ಣಿಗೆ 'ಟಾರ್ಚು' ಹಿಡಿದು ಓಡಿಸುತ್ತಿದ್ದರು.

೩

"ಇಲ್ಲಿ ಸ್ವಲ್ಪ ಬರ್ರಿಲ್ಲೆ, ಒಂದು ಮಾತು ಅಪ!" ಎಂದರೊಮ್ಮೆ ನ್ನೆ ತೊಳೆಯುವ ಮುನ್ನ ಚಂಪಿಯನ್ನು ಸ್ಪರ್ಶ ಮಾಡುತಲಿದ್ದ ನಾರಾಯಣರಾಯರ ಹೆಂಡತಿ.

"ಏನದು!"

"ನಿನುಗ ಬಾಣಂತಿತನ ಮಾಡೋ ಪಾಳಿ ಬಂತಲ್ಲ!" ಎಂದು ನಕ್ಕರವರು.

ನಾರಾಯಣರಾಯರ ಚಿತ್ತ ತಮ್ಮನ ಹೆಂಡತಿಯು ಕಡೆಗೆ ಹೋಯಿತು; ನಾದಿನಿ ಬಸಿರಿರಬಹುದೇನೋ ಎಂದು ತಿಳಿದರು.

"ಈಗಿನಿಂದಾನೆ ದುಡ್ಡು ಕೂಡಿ ಇಡ್ರೆಲ್ಲ ಮತ್ತ!" ಎಂದು ಚಂಪಿಯು ಹಣೆಯ ಮೇಲಿನ ಸಬಕಾರದ ಬಾರುಗನ್ನು ಗೀರಿದರು; ಅದು ನ್ನೆಯನ್ನು ಕೊಡಹಿದಾಗ, ಇವರ ನ್ನೆಗೆ ನೀರು ಸಿಡಿಯುವು ದೂರ ಸರಿದು ನಿಂತರು.

"ಏನೋ ಮಹಾರಾಯಳೆ, ನಿನ್ನ ಮಾತೇ ತಿಳಿಯೋದಿಲ್ಲ."

"ನಿನ್ನ ಮಗಳು ಗಬ್ಬ ಅದ!"

ನಾರಾಯಣರಾಯರು ಚಂಪಿಯ ಹೊಟ್ಟೆಯ ಕಡೆಗೆ ನೋಡಿದರು. ಮುಖ ಅರಳಿತು. "ಜಾತಿಯ ನಾಯಿ; ಒಳ್ಳೇ ಮರಿ ಆಗತಾವ. ಜೋಕೆಯಿಂದ ಜೋಪಾನ ಮಾಡಬೇಕು ನೋಡು ಅದನ್ನು!" ಎಂದರು. ಹೆಂಡತಿಗೆ ನ್ನೆ ತೊಳೆಯಲು ಹೇಳಿ, ತಾವೇ ಚಂಪಿಯ ನ್ನೆಯನ್ನು ಅಡಿಕೆ ಟಾವೆಲ್ಲಿನಿಂದ ಒರೆಸಲು ಹತ್ತಿದರು. ಇಂದು ಚಂಪಿ ಅವರಿಗೆ ಬಹಳ ಚೆಂದ ಕಂಡಿತು. ಮೊದಲೇ ಹೊಳೆಯುತಲಿದ್ದ ಅದರ ಕೂದಲುಗಳು ಮತ್ತಷ್ಟು ಹೊಳೆಯುತಿದ್ದುವು. ನ್ನೆಯೆಲ್ಲ ತುಂಬ ತುಂಬಿಕೊಂಡಿದ್ದಿತು.

ನಾರಾಯಣರಾಯರ ಹಿಗ್ಗಿಗೆ ಅಳವೇ ಇರಲಿಲ್ಲ. ತಮ್ಮ ಸ್ನೇಹಿತರಿಗೆಲ್ಲ ಚಂಪಿಯು ಗಬ್ಬವಿದ್ದ ಸುದ್ದಿಯನ್ನು ಹೇಳಿದರು. ಮೂವರು-ನಾಲ್ವರಿಗೆ ಒಳ್ಳೆಯ ಕುನ್ನಿಗಳನ್ನು ಕೊಡುವುದಾ ಭರವಸೆ ಇತ್ತರು. ಚಂಪಿಯ ಪೋಷಣೆಯ ಬಗ್ಗೆ ಹೆಚ್ಚ ಲಕ್ಷ್ಯಕೊಡಹತ್ತಿದರು. ಹಾಲಿನಾಕೆಗೆ ದಿನಾಲು ಒಂ ತಾಲಿ ಹೆಚ್ಚಿಗೆ ಕೊಡಲು ಹೇಳಿದರು. ಚಂಪಿಗಾಗಿ ಎರಡು ದಿ ಕ್ಕೊನ್ಮೆ ಬ್ರೆಡ್ಡನ್ನೂ ತರಹತ್ತಿದರು. ಇಷ್ಟರಿಂದಲೂ ತುಷ್ಟ ರಾಗದೆ, ನಾಲ್ಕಾರು ಸಲ—ಹೆಂಡತಿಗೆ ಕಾಣದಂತೆ—ಚಂಪಿ ಎರಡೆರಡು ಕೋಳಿಯ ಶತ್ತಿಗಳನ್ನೂ ತಿನಿಸಿದರು.

ತಿಂಗಳುಗಳು ಉರುಳಿದುವು.

ಒಂದು ಆದಿತ್ಯವಾರ, ಪೇಟೆ ಮುಗಿಸಿಕೊಂಡು ಮನೆಗೆ ಬರ ಬರುತ್ತಲೇ 'ಚಂಪೀ' ಎಂದು ಒದರಿದರು.

ಬಾಲವನ್ನು ಮೇಲೆ ಎತ್ತಿ ಗುಂಡಾಡಿಸುತ್ತ, ನೆಗೆಯುತ್ತ ಮುಂ ಹೋಗಿ ಮುಂಗಾಲ್ಗಳನೆತ್ತಿ, ಅವರ ಎದೆಯ ವರೆಗೂ ಏರಲು ಕ ದಿನ ಚಂಪಿ ಅಲ್ಲಿ ಇರಲಿಲ್ಲ; ತನ್ನ ಮಾತಿನಲ್ಲಿ ಓ ಕೊಡಲ ದೂರದಲ್ಲಿಯೂ ಇರಲಿಲ್ಲ.

"ಚಂಪಿ ಎಲ್ಲಿ ಹೋಗೇದ?" ಎಂದರು ಒಳಗೆ ಬಂದು.

"ಅಂಧಾಂಗ ಕಾಣೋದಿಲ್ಲಲ್ಲ. ನಿಮ್ಮ ನಾದಿನಿ ಹೊವಿಳ್ಳಾಕ ಹೋಗ್ಯಾಳ. ಆಕೀ ಜೋಡಿ ಹೋಗಿರಬಹುದು. ನನಗೆ ಮಸಾ ಪುಡಿ ಮಾಡೋದಿತ್ತು. ಆಡಿಗೀ ಮನಿ ಬಿಟ್ಟು ಹೊರಗಽ ಬಂದಿಲ್ಲ ಅದೇನು ಚೀಲದಾಗಿಂದು?"

"ಅರಳಿ."

"ಅದನ್ಯಾಕ ತಂದೀರಿ?"

ನಾರಾಯಣರಾಯರು ಹೆಂಡತಿಯನ್ನೊಮ್ಮೆ ನೋಡಿ ನಕ್ಕರು. ಚೀಲದಲ್ಲಿ ಒತ್ತಿ ಒತ್ತಿ ತುಂಬಿದ ಅರಳಿಯನ್ನು ಹೊರಗೆ ತೆಗೆದು ಅವರೆಂದರು:

"ಪಾಟನ ಚೀಲದಾಗ ಇದನ್ನು ಹರವಿ ಹೊಲಿಮು, ಚಂಪಿಗೆ ಗಾದೀ ಮಾಡಬೇಕಾಗೇದ. ಚಂಪಿ ಈಯ್ತುಂವ್ಯ ಬೇಕಲ್ಲ ಮತ್ತ."

"ಬಾಣಂತಿತನ ಸುರುವು ಆತಲ್ಲ ಹಂಗಾರ!" ಎಂದು ಅವರ ಪೆಂಡತಿ ಹೊಟ್ಟೆ ಹಿಡಿಸಲಾರದಷ್ಟು ನಕ್ಕರು.

ಕತ್ತಲಾಯಿತು. ನಾರಾಯಣರಾಯರ ನಾದಿನಿಯು ಮರಳಿ ಮನೆಗೆ ಬಂದರು. ಚಂಪಿ ಅವರೊಡನೆ ಇರಲಿಲ್ಲ. ಅದು ತನ್ನೊಡನೆ ಬರಲಿಲ್ಲವಾಗಿಯೂ ಹೇಳಿದರವರು.

ನಾರಾಯಣರಾಯರು ವಿಹ್ವಲರಾದರು. ಅತ್ತಿತ್ತ ಓಡಾಡಿ ಬಂದರು. ಚಂಪಿ ಕಣ್ಣಿಗೆ ಬೀಳಲಿಲ್ಲ.

ಎಂಟಾಯಿತು. ಒಂಬತ್ತಾಯಿತು. ಆದರೂ ಚಂಪಿಯ ಸುಳಿವು ಹತ್ತಲಿಲ್ಲ. ನಾರಾಯಣನಾಯರು ಗಾಬರಿಯಾದರು. ಈಗಿದ್ದ ಮನೆಯ ಒಡತಿ ಒಮ್ಮೆ ಕೊಟ್ಟ ಎಚ್ಚರಿಕೆ ನೆನಪಿಗೆ ಬಂತು: ಕುನ್ನಿಗಳ ಆಶೆಗೆ ಚಂಪಿಯನ್ನು ಯಾರಾದರೂ ಕಟ್ಟಿ ಬಹುದೆಂದೂ ಆದ್ದರಿಂದ ಅದನ್ನು ಹೊರಗೆ ಬಿಡಬೇಡಿರೆಂದೂ, ಅವರು ಒಂದೆಲ್ಲ ನಾಲ್ಕು ಸಲ ಹೇಳಿದ್ದರು. ಅವರ ಮಾತನ್ನು ಲಕ್ಷಿಸದಿದ್ದುದಕ್ಕೆ ಈಗ ನಾರಾಯಣರಾಯರು ಪ ಶ್ಚಾ ತ್ತಾ ಪ ಪಡಹತ್ತಿದರು.

ಅಷ್ಟರಲ್ಲಿ ಹಾಲಿನಾಕೆ ಹಾಲು ತಂದಳು. ಅಕೆ ಒಳಗೆ ಬಂದು, ಸಾವಕಾಶವಾಗಿ ನಾರಾಯಣರಾಯರಿಗೆ ಒಂದು ಮಾತನ್ನು ಹೇಳಿದಳು:

"ಜನಾ ಏನು ಹರೇನು ಐತ್ರಿ ರಾಯಗಡ! ಕುಲಕರಣೀ ರಾಯರ ಮನೀಗೆ ಈಗ ಹಾಲು ಕೊಡಾಕ ಹೊಗಿದ್ದಿನ್ರಿ; ಅವರ ಹೇಣತಿ ನಿಮ್ಮ ಚಂಪೀನಾ ಕಟ್ಟಿ ಹಾಕಿಕೊಂಡಾರ ನೋಡ್ರಿ! ಗಬ್ಬದ ನಾಯಿ, ನಾಳೆ ಕುನ್ನಿ ಆದ್ರ ಅವನ್ನ ಮಾರಿಕೊಣ್ಣಾಕ ಬರತ್ತೈತೀ ಅಂತ! ಬಚ್ಚಲ ಮನಿಯಾಗ ಬಿಗದು ಬಿಟ್ಟಾರ; ಪಾಪ, ಒಂದs ಸನನs ಒದ್ರಾಕ ಹತ್ತೈತಿ ಚಂಪಿ. ಭಾಳ ಚುಡಾಳಿ ಜನಾನ್ರಿ ಅದು. ಹೈಲಾ ತಾರೀಖು ಬರೋದೊಂದs ತಡ, ಬಾಡ್ಗೀದಾರರ ಜೀವಾ ಹಿಂಡಿ ಬಾಡಿಗೀ ವಸೂಲು ಮಾಡತಾರ. ಕೊಡೋ ರೊಕ್ಕಾ ಮಾತ್ರ ಜುಪ್ ಅಂದ್ರೂ ಕೈ ಬಿಡೂದಿಲ್ಲ.... ಹಾಪ, ಚಂಪಿ ವಲನಲಾ ಅನ್ಯಾಕ ಹತ್ತೈತಿ ನೋಡ್ರಿ. ಅವಕ್ಕ ಕೂಳಾರs ಹಾಕತಾರೋ ಇಲ್ಲೋ!"

ನಾರಾಯಣರಾಯರು ಸಂತಪ್ತರಾದರು; ಸಿಡಿಮಿಡಿಗೊಂಡರು. ಪ್ರೊ. ಕುಲಕರಣಿಯವರನ್ನೊಮ್ಮೆ ಮಾತಾಡಿಸಿ ಬರುವುದಾಗಿ ಹೊರಡಲು ಸಿದ್ಧರಾದರು. ಆದರೆ ಆವರ ತಮ್ಮನು, ಹಾಗೆ ಮಾಡುವುದಕ್ಕಿಂತ ಮೊದಲು ಕುಲಕರಣಿಯವರಿಗೊಂದು ಚೀಟಿ ಬರೆದು ಕಳಿಸುವುದಾಗಿಯೂ ಅವರಿಂದ ಬಂದ ಉತ್ತರವನ್ನು ನೋಡಿಕೊಂಡು, ಬೇಕಾದರೆ ಪೋಲೀಸರಿಗೆ ವರದಿ ಕೊಡಬಹುದೆಂದೂ ಹೇಳಿದರು. ನಾರಾಯಣರಾಯರಿಗೆ ಇದು ಸಮಂಜಸವೂ ಎನಿಸಿತು. ಹಾಲಿನಾಕೆ ತನ್ನ ಹಾಲಿನ ತಪ್ಪೇಲಿಯನ್ನು ಒಂದು ಮೂಲೆಯಲ್ಲಿ ಇಟ್ಟು, ಅಳಿಯುವ ಮಾಪಿನ ಕೊಂಡಿಯನ್ನು ತಪ್ಪೇಲಿಯ ಅಂಚಿಗೆ ಜೋತುಬಿಟ್ಟು, ಮೇಲೆ ಅರಿವೆಯನ್ನು ಹೊಚ್ಚಿ ಪ್ರೊ. ಕುಲಕರಣಿಯವರ ಮನೆಗೆ ಚೀಟಿಯನ್ನು ಒಯ್ಯಲು ಸಿದ್ಧಳಾದಳು.

೪

ಮೊದಲು ಬರೆದು ಕಳುಹಿದ ಸಾಮಾನ್ಯ ಪತ್ರವನ್ನು ಓದಿಕೊಂಡು, ಪ್ರೊ. ಕುಲಕರ್ಣಿಯವರು, ಹಾಲಿನಾಕೆಯನ್ನು ಬೆದರಿಸಿ ಕಳುಹಿಬಿಟ್ಟರು. ನಿನಗೇಕೆ ಈ ಅಧಿಕಪ್ರಸಂಗ ಬೇಕೆಂದು ಬೈಗುಳನ್ನೂ ದಯೆಪಾಲಿಸಿದರು. ಆಕೆ ಮರಳಿ ಬಂದು, ನಡೆದ ಸಂಗತಿ ಹೇಳಿದ ಮೇಲೆ, ರಾಯರು ರೇಗಿದವರಾಗಿಯೇ ಹೀಗೆ ಕಾಗದ ಬರೆದರು:

"ಪ್ರಿಯ ಪ್ರೊ. ಕುಲಕರಣಿ,

ನೀವು ಚಂಪಿಯನ್ನು ಕಟ್ಟಿಹಾಕಿರುವುದಾಗಿ ನನಗೆ ತಿಳಿಯುತ್ತದೆ. ಹಾಗೆ ಮಾಡಿದ್ದುದರ ಉದ್ದೇಶ ತಿಳಿಯಲಿಲ್ಲ. ನೀವು ಅದರ ಕಾಲಿಗೆ ಗಾಯವಾಗುವಂತೆ ಹೊಡೆದ ದಿನದಿಂದಲೂ ಅದು ನನ್ನನ್ನು ನಂಬಿಕೊಂಡು ನನ್ನಲ್ಲಿಯೇ ಇದೆ. ನಾನೂ ಅದನ್ನು ಪ್ರೀತಿಯಿಂದ ಜೋಪಾನ ಮಾಡಿ ಬೆಳಸಿದ್ದೇನೆ; ಆರೈಕೆ ಮಾಡಿದ್ದೇನೆ; ಔಷಧೋಪಚಾರ ಮಾಡಿದ್ದೇನೆ; ಪೋಷಿಸಿದ್ದೇನೆ. ಅದನ್ನು ಜೋಪಾನ ಮಾಡುವ ಮನಸ್ಸು ನಿನಗೆ ಇದ್ದುದೇ ಆಗಿದ್ದರೆ, ಆ ದಿನ ಅದನ್ನು ನೀವು ಹಾಗೆ ಹೊಡೆದು ಹೊರಗೆ ಹಾಕುತ್ತಿರಲಿಲ್ಲ; ನಿಮ್ಮ ಕಂಪೌಂಡಿನಲ್ಲಿ ಉಪವಾಸ ಕೆಡಹುತ್ತಿರಲಿಲ್ಲ; ಇಂದಿನ ವರೆಗೆ ನಸ್ನಲ್ಲಿ ಬಿಡುತ್ತಿರಲೂ ಇಲ್ಲ. ಅದರ ಮರಿಗಳ ಸಲುವಾಗಿ ನೀವು ಅವನ್ನು ಕಟ್ಟಿಕೊಂಡಿರಬಹುದೇನೋ ಎಂದು ನನ್ನ ಒಂದು ತರ್ಕ. ಹಾಗಿದ್ದ ಪಕ್ಷದಲ್ಲಿ, ದಯಮಾಡಿ ಚಂಪಿಯನ್ನು ಬಿಟ್ಟು ಬಿಡಿರಿ. ಅದು ಈಯ್ದೊಡನೆ ಅದರ ಎಲ್ಲ ಮರಿಗಳನ್ನೂ ನಿಮ್ಮ ಮನೆಗೆ ತಂದು ಒಪ್ಪಿಸುವುದಾಗಿ ನಾನು ಆಶ್ವಾಸನ ಕೊಡುತ್ತೇನೆ. ನನ್ನ ಚಂಪಿ ನನಗೆ ತಿರುಗಿ ಸಿಕ್ಕರೆ ಸಾಕು. ಅದು ನನ್ನ ಕೂಸಿನಂತಿದೆ. ದಯಮಾಡಿ ನನ್ನಿಂದ ಅದನ್ನು ಅಗಲಿಸಬೇಡಿರಿ.

ನಿಮ್ಮ ಪ್ರೀತಿಯ
ನಾರಾಯಣರಾಯ"

ಈ ಚೀಟಿಗೆ ಅಂದೆಯೇ ಉತ್ತರ ಬಂತು:

"ಸಭ್ಯ ಗೃಹಸ್ಥರೆ,

ನಮ್ಮಿಬ್ಬರಿಗೂ ಪರಿಚಯ ಹೆಚ್ಚಿಗೆ ಇಲ್ಲ. ಆದರೂ ಇಂಥ ಅಡಚಣೆಯಲ್ಲಿ ಹೀಗೆ ಚೀಟಿ ಬರೆದು ಒಬ್ಬ ಹೆಣ್ಣುಮಗಳ ಮುಖಾಂತರ ಕಳಿಸಿ, ಈ ರೀತಿ ಮುಂದಿಗೆ ತೊಂದರೆ ಕೊಡುವ ಧೈರ್ಯ ನಿಮ್ಮಲ್ಲಿ ಹೇಗೆ ಬಂತೋ ಕಾಣೆ. ನಮ್ಮ ಗಮನಕ್ಕಿತ್ತಿಯೊಡನೆ ಅದನ್ನು ಕಳಿಸದೆ, ಮತ್ತೆ ಯಾರಾದರೂ ಬೇರೆಯವರೊಡನೆ ಕಳಿಸಿದ್ದರೆ, ಅವರನ್ನು ಮನೆಯಿಂದ ಹೊರಗೆ ಹಾಕಿ ಬಿಡುತ್ತಿದ್ದೆ.

Grams: BESTLUCK Motto: BEST SERVICE

Goodluck Automobiles

Fort Road, BELGAUM

While wishing all Patrons & Friends

HAPPY DIVALI

Assure them also the continuance of their

BEST SERVICES

during the

Current Prosperous Year.

ಐತಿಹಾಸಿಕ ಪುರುಷರ, ಸಾಧು—ಸಂತರ, ದೇಶಭಕ್ತರ
೧೨ ಬಣ್ಣಗಳಲ್ಲಿ ೧೪×೨೦ ಆಕಾರದ
ಪಪ್ಪ ಕಾಗದದ ಮೇಲೆ
ಅಚ್ಚಾದ ಚಿತ್ರಗಳು
ಪ್ರತಿ ೧ಕ್ಕೆ ೧ ರೂಪಾಯಿ.

ಲಕ್ಷ್ಮೀ ಮುದ್ರಣ
ಮಾಡಿ
ಕೊಡಲಾಗುತ್ತದೆ.

ಮಾನರ್ಸ್ ಪಿಕ್ಚರ್ಸ್ ಪಬ್ಲಿಶರ್ಸ್
ಆಫ್ ಇಂಡಿಯಾ, ಮುಂಬಯಿ ೪.

ಗವಳಿಗಿತ್ತಿಗೆ ಇಂಥ ಅಧಿಕ ಪ್ರಸಂಗತನವನ್ನು ಇನ್ನು ಮುಂದೆ ಮಾಡದಿರಲು ಎಚ್ಚರಿಕೆ ಕೊಟ್ಟಿದ್ದೇನೆ.

ಇನ್ನು ಚಂಪೆಯ ವಿಷಯ. ಅವನ್ನು ನನ್ನ ಕಂಪೌಂಡಿನಲ್ಲಿ ತಂದ ನಿದ್ಯಾರ್ಥಿಯು ನನ್ನ ಕಂಪೌಂಡಿನಲ್ಲಿಯೇ ಬಿಟ್ಟು ಹೋದನು. ಆದ್ದರಿಂದ ಚಂಪೆ ನನ್ನದು. ನನ್ನ ಕಂಪೌಂಡಿನಿಂದ ಅದನ್ನು ನೀವು ತೆಗೆದುಕೊಂಡು ಹೋಗಿದ್ದೀರಿ. ತಾನಾಗಿಯೇ ನಿಮ್ಮಲ್ಲಿಗೆ ಬಂದಿದೆಯೆಂಬುದರಲ್ಲಿ ಅರ್ಥವಿಲ್ಲ. ತಾನೇ ಬಂದಿದ್ದರೆ ಅದನ್ನು ನೀವು ಗುಂಡು ಹಾಕಿಸಿ ಕೊಲ್ಲಬೇಕಿತ್ತು. ಅದಕ್ಕೆ ಅನ್ನ ಹಾಕಿ ಜೋಪಾನ ಮಾಡಿರೆಂದು ನಾನೇನು ನಿಮಗೆ ಹೇಳಿರಲಿಲ್ಲ. ಚಂಪೆಯನ್ನು ನಾನು ಬಿಡುವುದಿಲ್ಲ.

ನಿಮ್ಮ ನಂಬಿಗೆಯ
ಕುಲಕರಣಿ

*

ನಾರಾಯಣರಾಯರು ಕೊಚ್ಚಿಗೆದ್ದರು; ಹತ್ತಿರದಲ್ಲಿಯೇ ಇದ್ದ ಪೋಲಿಸ್ ಸ್ಟೇಶನಿಗೆ ಹೋಗಿ, ಪೋಲಿಸ್ ಸಬ್ ಇನ್ಸ್‌ಪೆಕ್ಟರರಿಗೆ ಫೋನು ಮಾಡಿದರು. ಸಬ್ ಇನಸ್ಪೆಕ್ಟರರು ಮೊದಲಿನಿಂದಲೂ ನಾರಾಯಣರಾಯರ ಪರಿಚಿತರು

—ಹೆಲೋ, ಇನ್‌ಸ್ಪೆಕ್ಟರ ಸಾಹೇಬರೇನು ?

—ಹೌದು, ನೀವಾರು ?

—ನಾನು ನಾರಾಯಣರಾವ್. ಈ ಕೇಸು ನೋಡ್ರಿ ಇನ್‌ಸ್ಪೆಕ್ಟರ ಸಾಹೇಬ್ ! ಈಗ ಎಂಟು ತಿಂಗಳ ಕೆಳಗೆ ನಾನು ಪ್ರೊ. ಕುಲಕರಣಿ ಎಂಬವರ ಕಂಪೌಂಡಿನೊಳಗೆ ಇದ್ದೆ. ಅವರ ಕಂಪೌಂಡಿನ್ಯಾಗ ಬಾಡ್ಗಿ ಇದ್ದ ಒಂದು ಹುಡುಗ, ಅಲ್ಲಿ ಒಂದು ನಾಯೀಕುನ್ನಿ ಬಿಟ್ಟು ಹೋದ.

—ಎಲ್ಲಿ ಹೋದ ಆ ಹುಡುಗ ?

—ಅವನ ಪತ್ತೇ ಇಲ್ಲ.

—ಮುಂದ ?

—ಕುನ್ನಿ ಅಲ್ಲೇ ಉಪಾಸ ಓಡಾಡ ಹತ್ತಿತ್ತು. ಒಮ್ಮೆ ಕುಲಕರಣಿಯವರು ಅದನ್ನು ಕಾಲುಮುರಿಯೆ ಹೊಡೆದರು. ಅದು ನನ್ನಲ್ಲಿ ಬಂತು. ಸ್ವಲ್ಪ ದಿನದಾಗ ನಾನು ಬ್ಯಾರೇ ಕಡೆಗೆ ಮನಿ ಮಾಡಿದೆ. ನನ್ನಲ್ಲೇ ಅದು ಬೆಳೆದು ಈಗ ಗಬ್ಬ ಆಗೇದ. ಇಷ್ಟು ದಿನ ಸುಮ್ಮನೇ ಬಿಟ್ಟು, ಮರಿಗಳ ಆಶೆಗಾಗಿ ಈಗ ಅವರು ಆ ನಾಯೀ ಕಟ್ಟಿ ಹಾಕಿಕೊಂಡಾರ. ಅದು ತಮ್ಮದಂತ ಬಿಡೋದಿಲ್ಲ ಅಂತಾರ. ಈಗ ನಾನು ಫಿರ್ಯಾದಿ ಮಾಡಬೇಕು ಅಂತೇನಿ

—ಆ ನಾಯಿ ನಿಮ್ಮದs ಅಂತ ಪುರಾವೆ ಅವs ಏನು ?

—ಅಂಥಾ ಪುರಾವೆ-ಗಿರಾವೆ ಏನೂ ಇಲ್ಲ. ಅವರಿಗೂ ತಮ್ಮದು ಅಂತ ಸಿದ್ಧ ಮಾಡಲಿಕ್ಕೆ ಬರೋ ಹಾಂಗ ಇಲ್ಲ. ಈಗ ಏಳೆಂಟು ತಿಂಗಳು ನನ್ನಲ್ಲಿ ಇದ್ದದ್ದು ಮಾತ್ರ ಎಲ್ಲಾರಿಗೂ ಗೊತ್ತದ. ಬೇಕಾರ ಈಗ ನೀವು ಬರ್ರಿ. ನೀವs ಅದರ ಕೊರಳೊಳಗಿನ ಹಗ್ಗಾ ಉಚ್ಚಿರಿ; ಅದು ಅಲ್ಲೇ ಉಳಿದರ, ಅದು ಕುಲಕರಣಿಯವರದು ಅಂತಾ ತಿಳಿಯೋಣ—ನನ್ನ ಮನೀಗೆ ಓಡಿ ಬಂದ್ರ, ನನ್ನದು ಅಂತ ತಾನೇ ಸಿದ್ಧ ಆಗತದ.

—ಅದೆಲ್ಲ ಬರೋಬರಿ ಆಯ್ತು ರಾಯರ; ಆದರ ಈ ಸಿದ್ಧಾಂತ ಕೋರ್ಟನ್ಯಾಗ ಸ್ಟ್ಯಾಂಡು ಆಗೋದಿಲ್ಲ.....ನಾನು ಈ ಕೇಸು ಹಿಡೀತೇನಿ; ನಂದೇನೂ ತಕರಾರು ಇಲ್ಲ. ಈಗಿಂದೀಗ ಅಲ್ಲಿಗೆ ಬಂದು ಆ ನಾಯೀ ನನ್ನ ತಾಬಾಕ ತೊಗೋತೇನಿ....ಇನ್ನೊಂದು ಮಾತು ನಾರಾಯಣರಾವ್! ಮುನಸೀಪಾಲಿಟಿಗೆ ಆ ನಾಯೀ ರಜಿಸ್ಟರ್ ಮಾಡಿಸಿ ಬಿಲ್ಲಾ ಪಡೆದೀರಲ್ಲಕ ?

—ಇಲ್ಲ. ಅದೇನೂ ನನಗೆ ಗೊತ್ತಿಲ್ಲ.

—ಹಂಗಾರ, ರಾಯರ, ನಾನು ನಿಮಗೊಂದು ಮಾತು ಹೇಳಲಾ? ನೀವು ಫಿರ್ಯಾದಿ ಮಾಡೋ ಗೋಜಿಗೆ ಹೋಗಬ್ಯಾಡ್ರಿ. ಇಲ್ಲಿ ನಿಮ್ಮ ಕೈನೂ ಸಿಗೋ ಹಾಂಗ ಅದ. ಈ ಊರಾಗ ಮುನಸೀಪಾಲ್ಟಿಯೊಳಗ ರಜಿಸ್ಟ್ರೇಶನ್ ಇಲ್ಲದs ನಾಯೀ ಕಟ್ಟಲಿಕ್ಕೆ ಬರೋದಿಲ್ಲ. ಅಪ್ಪಾತಿನೊಳಗs ಬಗೀಹರಿಸಿಕೊಂಡು ಬಿಡಿರಿ. ಒಂದು ನಾಯೀ ಸಲುವಾಗಿ ಸುಮ್ಮನs ನೀವು ಯಾಕ ಪೇಚಿನಾಗ ಬೀಳತೀರಿ ? ನಾಯೀ ಜೋಪಾನ ಮಾಡಬೇಕು ಅಂತ ನಿಮ್ಮ ಪ್ರೀತಿ ಇದ್ರ, ನಮ್ಮಲ್ಲಿಗೆ ಬರ್ರಿ. ನಾನು ಬ್ಯಾರೇ ಒಂದು ಚೆಲೋ ಕುನ್ನಿ ಕೊಡತೀನಿ

ನಾರಾಯಣರಾಯರು ನಿರಾಶರಾಗಿ ಮಾತು ಮುಗಿಸಿ, ಅಸಹಾಯ್ಯರಾಗಿ ಮನೆಯ ಕಡೆಗೆ ಹೊರಟರು. ಹೋಗುವಾಗ ಪ್ರೊ. ಕುಲಕರಣಿಯವರು, ನೊದಲ ಸಲ ಪರಿಚಯವಾದಾಗ, ಮಾತಾಡಿದ ದೊಡ್ಡ ದೊಡ್ಡ ಮಾತಿನ ನೆನಪಾಯಿತು: ಸಂಸ್ಕೃತಿ ದೊಡ್ಡ ದೊಡ್ಡ ಪದವಿಗಳಲ್ಲಿಲ್ಲ; ದೊಡ್ಡ ದೊಡ್ಡ ಮಾತುಗಳಲ್ಲಿಲ್ಲ. ಆ ಗವಳಿಗಿತ್ತಿಯಲ್ಲಿ ಕಾಣುವ ತಿಳುವಳಿಕೆಯ ಒಂದು ಅಂಶವಾದರೂ ಈ ಪ್ರೊಫೆಸರನಲ್ಲಿ ಇಲ್ಲ— ಎಂದು ಅಂದುಕೊಂಡರು.

ಎಂಟು ಹತ್ತು ದಿನಗಳನಂತರ ಒಂದು ದಿನ ಬೆಳಗಿನ ಜಾವದಲ್ಲಿ, ಬಾಗಿಲಿನಲ್ಲಿ ಕರಬರ ಸಪ್ಪಳವಾಗಿ ನಾರಾಯಣರಾಯರಿಗೆ ಎಚ್ಚರವಾಯಿತು. ಇಲಿಗಳ ಕಾಟವೇನೋ ಎಂದು ಅತ್ತಿತ್ತ ನೋಡಿದರು. ಇಲಿಗಳಿರಲಿಲ್ಲ. ಮತ್ತೆ ಅದೇ ಸಪ್ಪಳವಾಯಿತು; ಬಾಗಿಲು ದೂಡಿದಂತಾಯಿತು. ಹೊರಗಿನಿಂದ ನಿಸ್ಸತ್ತ್ವವಾದ ಮಿದುವು ದನಿಯೂ ಬಂತು.

ನಾರಾಯಣರಾಯರು ಗಡಿಬಿಡಿಯಿಂದ ಬಾಗಿಲನ್ನು ತೆಗೆದರು. ಹೊಸತಿಲಕ್ಕೆ ತಲೆಯಾನಿಸಿ ಮೆಟ್ಟಿಲ ಮೇಲೆ ಚಂಪಿ ಮಲಗಿಕೊಂಡಿದ್ದಿತು. ಹೊಟ್ಟೆಯೆಲ್ಲ ಕರಗಿ ಅಸ್ಥಿಪಂಜರಕ್ಕೆ ತೊಗಲು ಜೋತುಬಿದ್ದಿದ್ದಿತು. ನಿಸ್ತೇಜವಾದ ಕೂದಲುಗಳು ಮಣ್ಣಿನಿಂದ ಗಂಟುಗಟ್ಟಿದ್ದುವು. ಚಳಿಯಿಂದ ಮೈಯೆಲ್ಲ ಕಂಪಿಸುತ್ತಿತ್ತು. ಗಟ್ಟಿಸಿ ನರಳಲು ಸಹ ಅದರಲ್ಲಿ ಶಕ್ತಿಯಿರಲಿಲ್ಲ.

ನಾರಾಯಣರಾಯರ ಎದೆ ಝಲ್ಲೆಂದಿತು. ಅವರು ಮುಂದೆ ನಿಂತೊಡನೆ ಕುತ್ತಿಗೆಯನ್ನು ಮೇಲೆ ಎತ್ತಿ, ಕಣ್ಣನ್ನರಳಿಸಿ ಅಚಲದೃಷ್ಟಿಯಿಂದ ಅವರನ್ನೊಮ್ಮೆ ನೋಡಿತು ಚಂಪಿ; ಬಾಲವನ್ನೊಮ್ಮೆ ಅಲುಗಾಡಿಸಿತು. ನಾರಾಯಣರಾಯರ ನಾದಿನಿ ಒಳಗೆ ಧಾವಿಸಿ, ಒಂದು ಬಟ್ಟಲು ಹಾಲು ತಂದರು. ನಾರಾಯಣರಾಯರೂ ಅವರ ತಮ್ಮನೂ ಚಂಪಿಗೆ ಹಾಲು ಕುಡಿಸಲು ಪ್ರಯತ್ನ ಮಾಡಿದರು. ಹಾಲು ದಕ್ಕಲಿಲ್ಲ.

ಚಂಪಿಯ ಅರೆದೆರೆದ ಕಣ್ಣು ಮುಂದೆ ಪೂರ್ಣ ಅರಳಲಿಲ್ಲ; ಮುಚ್ಚಲೂ ಇಲ್ಲ.

* * * *

ಚಂಪಿ ಆಂದನಾದ ಆರು ಕುನ್ನಿಗಳನ್ನು ಈಯ್ದಿದ್ದಿಕೆಂದೂ ಅದರ ಹೊಟ್ಟೆಗೆ ಆಹಾರವಿಲ್ಲದುದರಿಂದ, ಮೊಲೆಯಲ್ಲಿ ಹಾಲೇ ಹುಟ್ಟದೇ ಆರೂ ಮರಿಗಳೂ ತೀರಿಕೊಂಡುವೆಂದೂ ಹಾಲಿನಾಕೆ ಸುದ್ದಿತಂದಾಗ, ಓಣಿಯೆಲ್ಲ ಮರುಗಿತು.

ಅಂದು ಆಫೀಸಿಗೆ ಹೋಗುವ ಮುಂದೆ ನಾರಾಯಣರಾಯರು ಮನಸ್ಸಿಲ್ಲದೆ ಊಟಕ್ಕೆ ಕುಳಿತುಕೊಂಡರು. ಒಂದೆರಡು ತುತ್ತುಗಳನ್ನು ಬಾಯಿಯಲ್ಲಿ ಇಟ್ಟುಕೊಂಡಿದ್ದರೇನೋ; ಅಷ್ಟರಲ್ಲಿ ಅವರ ದೃಷ್ಟಿ ಅಡಿಗೆಯ ಮನೆಯಲ್ಲಿದ್ದ ಎದುರಿನ ಕಿಟಕಿಯ ಕಡೆಗೆ ಬಿತ್ತು. ಕಿಟಕಿ ಇಂದು ಹಾಲು ಹಾಲು ಸುರಿಯುತ್ತಿತ್ತು. ತಾವು ಊಟಕ್ಕೆ ಕೂತಾಗೆಲ್ಲ ಜಂಪಿ ಆ ಕಿಟಕಿಯ ಹೊರಗೆ ಬಂದು, ಹಿಂಗಾಲುಗಳ ಮೇಲೆ ನಿಂತು ಮುಂಗಾಲುಗಳನ್ನು ಆ ಕಿಟಕಿಯ ಸಳಿಗಳಿಗೆ ಆನಿಸಿ, ಪೋತಿಯನ್ನು ಒಳಗೆ ಹಾಕಿಕೊಂಡು ನಿಲ್ಲುತಿದ್ದುದು ಅವರಿಗೆ ನೆನಪಾಯಿತು. ಅವರ ಕಣ್ಣು ನೀರಿನಿಂದ ತೊಯ್ದುವು. ಮುಂದೆ ಊಟ ಹೋಗಲಿಲ್ಲ.

ನಾರಾಯಣರಾಯರ ಹೆಂಡತಿ ಅವರನ್ನೊಮ್ಮೆ, ಕಿಟಕಿಯನ್ನೊಮ್ಮೆ ನೋಡಿ, ಸೀರೆಯಿಂದ ತಮ್ಮ ಕಣ್ಣೊರಸಿಕೊಂಡರು.

The Deccan Photo Art Studio

Station Road, HUBLI

ನಿಮಗೆ ಉತ್ಕೃಷ್ಟವಾದ ಫೋಟೋ ತೆಗೆಯಿಸಬೇಕಾಗಿದ್ದರೆ ನಮ್ಮ ಸ್ಟುಡಿಯೋಕ್ಕೆ ಇಂದೇ ಬನ್ರಿ. ಬಗೆಬಗೆಯ **ಪೋರ್ಟ್ರೇಟ್, ಹಾಲಿವುಡ್ ಸ್ಟೈಲಿನ ಫೋಟೋಗ್ರಾಫಿ**, ಶ್ರೀಷ್ಮ ಕಲಾಯುಕ್ತವಾದ **ಕಾಂಪೋಜೀಶನ್ ಗ್ರೂಪ್ಸ್, ಆಯಿಲ್ ಪೇಂಟಿಂಗ್, ವಾಟರ್ ಕಲರ್, ಪೇಸ್ಟಲ್ ಪೇಂಟಿಂಗ್, ಬ್ರೋಮಾಯಿಡ್ ಎನ್‌ಲಾರ್ಜಮೆಂಟ್** ಮುಂತಾದ ಯಾವುದೇ ಕೆಲಸವನ್ನು ನಿಮಗೆ ತೃಪ್ತಿಕರವಾಗಿ ಮಾಡಿ ಕೊಡುತ್ತೇನೆ.

ದಿ ಡೆಕ್ಕನ್ ಫೋಟೋ ಆರ್ಟ್ ಸ್ಟುಡಿಯೋ,

ಸ್ಟೇಶನ್ ರೋಡ್, ಹುಬ್ಬಳ್ಳಿ.

ವಾಶಿಂಗ್ ಕಂಪನಿ

(ವ್ಯಂಗ್ಯಪ್ರಬಂಧ)

ಡಿ. ಎನ್. ಎಸ್. ಗದಗಕರ್, ಬಿ. ಎ., ಧಾರವಾಡ.

★

ವಾಶಿಂಗ್ ಕಂಪನಿಯ ಯಜಮಾನ ನಿರ್ಮಲೀಕರಣ ಬಾಬುವೆಂದರೆ, ಸಾಮಾನ್ಯ ಮನುಷ್ಯನಲ್ಲ. ಎಂತೆಂತಹ ಮಹಾ ಮಹಾ ವ್ಯಕ್ತಿಗಳನ್ನೂ ಅಂತಸ್ತಿಗೇರಿಸುವ ಹಳ್ಳಕ್ಕೆ ಇಳಿಸುವ ಯೋಗ್ಯತೆ ಅವನದು. ಅವನ ಮಾಹಾತ್ಮ್ಯ ಅವನ ಕಪಾಟು-ಇಸ್ತ್ರೀ ಪಾತ್ರೆಗಳಿಗೇ ಗೊತ್ತು!

★

ನೊನ್ನೆ ಹೊಸ ಪ್ಯಾಂಟು ಹಾಕಬೇಕೆಂಬ ವಿಚಾರ ಹೊಳೆಯಿತು. ಹೊಲಿಸಿಯೂ ಆಯಿತು. ಡಬಲ್‌ಭಟ್ಟೆಗೆಂದು ವಾಶಿಂಗ್‌ಕಂಪನಿಗೆ ಕೊಟ್ಟೆ. ಒಬ್ಬಿಬ್ಬರು ಗೆಳೆಯರಿಗೆ ಇದು ಅತಿ ನೋಜೆನಿಸಿತು. ಕೆಲವು ನಿಷ್ಕಾಮಂತ ಗೆಳೆಯರು '—ಎಂದಿಲ್ಲ ಇಂದೇಕೆ ಈ ಗೃಹಸ್ಥ. ನಿಗೆ ದುಬ್ಬುದ್ದಿ ಹುಟ್ಟಿತು? ಹರೆಯ ತಿರುಗಿತೆ?'—ಎಂದು ಉದ್ಗರಿಸಿದರು. ಬೇರೆ ಕೆಲವು ಪ್ರಗತಿಶೀಲ ಗೆಳೆಯರು ಪ್ಯಾಂಟಿನ ಮಹಿಮೆ, ಅದರಿಂದುಂಟಾಗುವ ಚಟುವಟಿಕೆ, ಹೊಸ ಠೀವಿ ಇವುಗಳ ಬಗೆಗೆ ವ್ಯಾಖ್ಯಾನ ಹೇಳುವಾಗ, ಅದೇ ವಾಶಿಂಗ್‌ಕಂಪನಿ ಸಮೀಪಿಸಿತು. ಒಳಗೆ ಹೋಗಿ ಕುಳಿತು ಪ್ಯಾಂಟು ಕೇಳಿದರೆ, ತಾಸಿನ ಅವಧಿ ಕಾಯಬೇಕೆಂದು ನಿಶ್ಚಿತವಾಯಿತು. ಇನ್ನೇನು ಎಂದು ನಿರಾಶೆಯ ನಿಟ್ಟುಸಿರಿನಿಂದ, ಅಂದಿನ ದಗ್ಧ ಮಂಗಳವಾರವನ್ನು ಮನಸೋಕ್ತ ಹಳಿಯುತ್ತ ಕುಳಿತೆ. ವಾರದ ಮೇಲೆ ಸಿಟ್ಟು ಹಾಕಿ ಭಾವಿಕತನದಿಂದ ಹಾಗೇ ಹೊರಡುವಷ್ಟು ಅಸಂಸ್ಕೃತ ಮನಸ್ಸಾಗಲಿಲ್ಲ! ಅಕ್ಷಯೇ ಹಾಗೇ ನಿಲ್ಲಬೇಕೆಂದರೆ ತಾಳ್ಮೆ ಕೈಕೊಟ್ಟಿತು. ಮಾಲಕನಂತೂ '—ರಾಯರs, ಸ್ವಲ್ಪ ಹೊತ್ತು ಕೂಡ್ರಿ! ಇಸ್ತ್ರೀಗೆ ಇದ್ದಿ ತರತೇನ್ರಿ' ಎಂದು ನವ ಚಾಚಿ, ಜಹಕ್ಕೆ ಗಚ್ಚ ಹೇಳಿಸಿಬಿಟ್ಟ. ನಾನೇ ನಾನಾದೆ ಇಡೀ ಭವ್ಯ ಕಾರ್ಯಾಲಯದಲ್ಲಿ.

ಎಷ್ಟು ಹೊತ್ತು ಹೀಗೇ ನಿರೀಕ್ಷೆಯಲ್ಲಿ ಕಾಲದೂಡುವುದೆಂದು ಚಿಂತೋದಧಿಯೊಳಗಿದ್ದಾಗ, ಮೌನಮುದ್ರೆ ಮೂಡಿಸುವಂತೆ, ಆ ವಾಶಿಂಗ್‌ಕಂಪನಿಯೊಳಗಿನ ಕಪಾಟೊಂದರಿಂದ ಇನಿದನಿ ಹೊರಹೊಮ್ಮಿತು. ಪುರಾತನ ವಸ್ತು ತಾನಾಗಿಯೇ ರಸವತ್ತಾದ ಕತೆ ಹೇಳುವಾಗ, ನಾನೇಕೆ ಬೇಡವೆನ್ನಲಿ—ಎಂಬಂತೆ ಬಿಮ್ಮನೆ ಬಿಗಿದು ಕುಳಿತುಕೊಳ್ಳದೆ ಸ್ವಲ್ಪ ಲಕ್ಷ್ಯಗೊಟ್ಟು ಆಲಿಸತೊಡಗಿದೆ. ಮೊದಲೇ ಖಗ್ರಾಸ ಮಂಗಳವಾರ. ಸಂಗಡ ಮಾತಾಡಲು ಯಾರೂ ಇ ಹೊಸ ಪ್ಯಾಂಟು ಒಯ್ಯದೇ ಗತ್ಯಂತರವಿಲ್ಲ. ಅಂಕೂ ಮಾಲಕ ಮಾಯವಾದಾಗ, ವಾಶಿಂಗ್‌ಕಂಪನಿ ತನ್ನ ಕರುಣಕತೆ ತೋ ಕೊಳ್ಳಹತ್ತಿದರೆ, ಕೇಳಲು ಯಾರಿಗೆ ಮೋಜೆನಿಸಲಿಕ್ಕಿಲ್ಲ! ಏ ಆಗಲಿ 'ಪುಕ್ಕಟೆ ಪುರಾಣವಾದರೆ ಬೆಳತನಕೆಲ್ಲ ಸಾಗಲಿ' ಎಂಬಂ ಆ ಕಾರ್ಯಾಲಯದ ಕತೆ ಕೇಳಲನುವಾದೆ. ಆಗ ಮೊದಲಿ ಆಕ್ಷೇಪತರಂಗವು ಹಳೆಯ ಕೆಚ್ಚಿನ ಕಪಾಟಿನಿಂದ ಹೊರಹೊ ಟಿತು, ಕಿವಿಗೊಟ್ಟು ಲಾಲಿಸಿದೆ:

'ಅಯ್ಯಾ, ನೀನು ಮಾಲಕನನ್ನು ನಂಬಿದಿ. ಅವನೇನು ನಿ ನುಡಿಯುವವನೇ? ನಿನ್ನ ಪ್ಯಾಂಟು ಸಿದ್ಧವಿದೆ ಎಂದಮಾತ್ರ ನಿನಗೆ ಸಿಗುವುದೆ?'

'ನನ್ನ ಗ್ರಹಿಕೆ ಹಾಗಿತ್ತು. ಆದರೂ ನಿನ್ನ ಮಾತಿನ ಮೇಲಿಂ ನಿನ್ನ ಒಡೆಯನು 'ಹೌದು' ಅಂದರೆ 'ಅಲ್ಲ' ಎಂಬ ಆರ್ಥದವ ಎಂಬ ಸಂಶಯ ಹೊಡೆಯಿತು' ಎಂದೆ.

'ರಾಯರೇ, ಸುಳ್ಳು ಹೇಳುವುದಷ್ಟೇ ಅವನ ಸದ್ಗುಣವಲ್ಲ ಸಮಾಜದ ಇನ್ನಿತರ ಘಟಕಗಳಲ್ಲೊಬ್ಬನಾದ ಶಿಂಪಿಗನ ಮೇ ಅವನ ಆಕ್ಷೇಪ, ಅಕ್ಕಸವೆಷ್ಟು ಗೊತ್ತಿದೆಯೆ?'

ನನಗೆ ಮೋಜೆನಿಸಿತು! ಹೀಗೇಕೆ ಇದರ ಮನಸ್ಥಿತಿ? ಮಾ ಕನು ನಿಜವಾಗಿ ಹೀಗಿರುವನೇ?—ಎಂಬ ಸಂಶಯ ಆವರಿಸಿತ ಏನು, ನಿನ್ನ ಉದ್ದೇಶ, ಸ್ಪಷ್ಟಗೊಳಿಸಬಾರದೆ? ಎಂದು ಕುತೂ ಹಲ ಕೆರಳುವಂತೆ ನುಡಿದೆ. ಗೆದ್ದಲಿ ಹತ್ತಿದ ಖುರ್ಚಿಯನ್ನು ಕಪಾಟಿನ ಸಮೀಪಕ್ಕೆ ಎಳೆದುಕೊಂಡು, ಶಂಬಾಕು ಬಾ ಮಾಡುತ್ತ ಕೇಳಹತ್ತಿದೆ.

'ಸ್ವಾಮಿ, ಶಿಂಪಿಗನು ನೆಟ್ಟಗೆ ಹೊಲಿಯದಿದ್ದರೆ, ಜನರ ಉತ್ತಮ ಅರಿವೆ ಕೊಂಡುಕೊಳ್ಳದಿದ್ದರೆ, ನಾನು ಹೇಗೆ ಒಳ್ಳೆ ರೀತಿಯಿಂದ ಇಸ್ತ್ರೀ ಮಾಡಲಿ?—ಎಂದು ಹೋದ ದೀಪಾವಳಿಯ ರಾತ್ರಿ ಒಬ್ಬ ದೊಡ್ಡ ಗಿರಾಕಿಗೆ ಮಾಲಕನು ಕೇಳಿದ. ಅವನು ಬುದ್ಧಿಯ ದೃಷ್ಟಿಯಿಂದ ಹುಚ್ಚು ಕುರಿಮರಿಯಂತೆ ಎಂದರು ಸಲ್ಲೀತು. ಅಂತೇ ಮಾಲಕನ ಮಾರ್ಮಿಕ ಮಾತಿಗೆ ಹೌದೆಂದ ಕೌಲೆತ್ತಿನಂತೆ ಗೋಣು ಹಾಕಿದ.'

'ತಂಗೀ, ನೀನೆನ್ನುವದು ಸರಿ' ಎಂದು ಆತ್ಮೀಯತೆಯಿಂದ ಅದಕ್ಕೆ ಹೇಳಬೇಕೆನಿಸಿತು. ಜಾಳೀಸು ಸರಿಪಡಿಸಿಕೊಂಡು ನಸುನಗೆಯ ಮುಖಮುದ್ರೆಯಿಂದ ನುಡಿದೆ: 'ಹೌದು ಕಲ್ಯಾಣಿ, ತನಗೆ ಕುಣಿಯಲಿಕ್ಕೆ ಬಾರದಿದ್ದರೆ ನೆಲ ಸೊಟ್ಟು ಇದೆ ಎಂದು ಹರಿಹಾಯುವ ನೃತ್ಯವಿಲಾಸಿನಿಯ ರೂಢಿ ಕೇಳಿಲ್ಲವೆ ನೀನು? ಹೀಗಿದೆ ನಿನ್ನ ಯಜಮಾನನ ಗತಿ. ಇಷ್ಟಿದ್ದರೂ ಅವನ ಕೆಲಸ ಮೇಲ್ತರಗತಿಯದು!' ಎಂದು ಶಂಕಾಹಾರಿದೆ.

ಅಣ್ಣಾ, ಒಟ್ಟು ನನ್ನ ಒಡೆಯನ ಕೆಲಸ ನೆಟ್ಟಗೆ. ಅಂತೇ ಎಂಥೆಂಥ ಗಿರಾಕಿಗಳೂ 'ಛೀಥೂ' ಅನಿಸಿಕೊಂಡಾದರೂ ಒನ್ಮೊಮ್ಮೆ

ನಗದು ಹಣಕೊಟ್ಟು ಅರಿವೆ ಒಯ್ಯುತ್ತಾರೆ. ನೀವು ಈಗ ದಾರಿ ಕಾಯುತ್ತಿರುವಿರೆಂದು ಈ ಮಾತು ನಿಮಗೆ ಅನ್ವಯಿಸಲಿಕ್ಕಿಲ್ಲ. ಶುದ್ಧ ತಿಗನುಗುಣವಾಗಿ — ಹಳೆ-ಹೊಸದರ ಪರಿವೆಯಿಲ್ಲದೆ — ಅರಿವೆಗಳನ್ನು ವಿಭಾಗಿಸಿ ಇಡುವ ಕಲೆ, ಮೇಲೆ ರಕ್ತರಂಜಿತ ಆಂಗ್ಲ ಅಕ್ಷರ ತಿದ್ದಿತೀಡಿ ಬರೆಯುವ ಗುಟ್ಟು, ಇದೆಲ್ಲ ಬೇರೆ ಯಾವ ಅಕ್ಷರ ಶತ್ರು ವ್ಯವಸಾಯಿಗೆ ಸಾಧಿಸೀತು?—ಎಂದು ಅದು ಒಡನುಡಿಯುವಾಗಲೇ.....ನಾನು ನಡುವೆ ಬಾಯಿಹಾಕಿದೆ—ಆ ಬಿಂಕದ ಸಿಂಗಾರಿಯನ್ನು ಕ್ಷಣಾರ್ಧ ನಿರುತ್ತರಕುಮಾರಿಯನ್ನಾಗಿ ಮಾಡುವ ಧ್ಯೇಯದಿಂದ ಪ್ರೇರಿತನಾಗಿ :

'ಗೌರಿ! ನಿನ್ನ ಯಜಮಾನನ ಕೀರ್ತಿಗೆ ಎಣೆ ಇಲ್ಲ. ಅವನದು ಇಂದ್ರಜಾಲ. ಹಣ ವೆಚ್ಚಮಾಡದೆ ವಿಲಾಸಿಯಂತೆ ನಟಿಸಬೇಕೆನ್ನುವನು! ಏನೋ ಜನಸಾಮಾನ್ಯರು ಆಡಿಕೊಳ್ಳುವಂತೆ ಜಾತ್ರೆ, ಉರುಸು, ನಾಟಕ, ಸಿನೇಮಾ, ಸರ್ಕಸ್ಸಿನಲ್ಲಿ, ಪೋಷಾಕಿನ ದೃಷ್ಟಿಯಿಂದ ಅವನು ಮಾಡದ ಸೋಗಿಲ್ಲ; ಉಡದ ತೊಡಿಗೆ ಇಲ್ಲ!

'ಅಣ್ಣಾ, ಅಷ್ಟು ಪ್ರಾಮಾಣಿಕತೆ ಯಾವ ವ್ಯವಸಾಯಿಗೆ ಹಸ್ತಗತವಾದೀತು? ಕ್ಷಮಿಸಬಾರದೆ ಅವನನ್ನು!? ಎಂದು ಬೇಡಿಕೊಳ್ಳುವಂತೆ ಕೆಚ್ಚಿನ ಕಪಾಟು ಮೋರೆ ಮುದುಡಿಸಿಕೊಂಡಂತೆ ಮಾಡಿ ದೈನ್ಯಭಾವ ತಳೆಯಿತು.

'ಸಹೋದರಿ, ಹೌದು ಕ್ಷಮಿಸುವ ಭರವಸೆ ಇತ್ತರೂ ನಿನ್ನ ಯಜಮಾನನು ಜನರ ಮೂಗಿಗೆ ತುಪ್ಪ ಹಚ್ಚಿ ಕೂಡಿಸುವ ಚಟ ಮೈಗೂಡಿಸಿಕೊಂಡಿರುವನಲ್ಲ. ಆ ಕಲಾತ್ಮಕ ಸರಣಿಗೆ ನಿನ್ನ ಪಕ್ಷಪಾತದ ಉತ್ತರವೇನು?'— ಎಂದು ಬೇಕೆಂತಲೇ ಮರುಸವಾಲು ಹಾಕಿದೆ.

ಗಾಳಿಯಲ್ಲಿ ಅದರ ಬಾಗಿಲು ಪಟ ಪಟ ಬಡಿಯುವಾಗ, ಧೂಳಿದ ಕಣದ ರೂಪದಿಂದ ಮತ್ತೊಂದು ಅಕ್ಷೇಪಶರಂಗವು ನನ್ನೆಡೆ ಬರುವಂತೆನಿಸಿತು—ಮಾರುತ್ತರವೆಂದೇನೋ ಎಂಬಂತೆ :

'ಅಹಾ, ಅವನ ಕಂಪನಿಯ ಸಾಮ್ರಾಜ್ಯ ನೋಡು; ಎಷ್ಟು ಬಿತ್ತರವಾದುದು! ಅತ್ತ ಇಸ್ತ್ರೀ ಸಂಸಾರ; ಉಣ್ಣೆಯ ಅರಿವೆಗಳ ಡ್ರಾಯ್‌ಕ್ಲೀನಿಂಗಿನ ಸುಖ. ಇತ್ತ ಹೊಸ ಅರಿವೆಯ ಡಬಲ್

ಎಂಥ ಋತುಮಾನ
ವಯೋಮಾನದಲ್ಲಿಯೂ
ಎಲ್ಲ
ಸ್ತ್ರೀ-ಪುರುಷರಿಗೂ
'ಕ್ಯಾಲ್‌ಕೆಮಿಕೊ' ದ
ಸುಗಂಧದ ತಯಾರಿಕೆಗಳು
ಅತ್ಯವಶ್ಯಕವಾದುವು.

★

ಮಲಾಯಾ ಸ್ಯಾಂಡಲ್ ಸೋಪು
ಕ್ಯಾಸ್ಪೊರಾಲ್ ಸುಗಂಧದ ಎಣ್ಣೆ
ಲ್ಯಾವೆಂಡರ್ ವಾಟರ್
ಯು-ಡಿ-ಕೊಲೋನ್
ಲಾ-ಇ-ಜು ಲೈಮ್ ಕ್ರೀಮ್ ಗ್ಲಿಸರಿನ್
ಸಚಿತ್ರ ಕ್ಯಾಟಲಾಗನ್ನು ತರಿಸಿಕೊಳ್ಳಿರಿ:—
ಕಲಕತ್ತಾ ಕೆಮಿಕಲ್ ಕಂ.
ಮುಂಬಯಿ ಆಫೀಸ್—ಪ್ರಿನ್ಸೆಪ್ ಸ್ಟ್ರೀಟ್.

ಭಟ್ಟಿಯ ಕಾರಖಾನೆ ಬೇರೆ. ಆ ಮೂಲೆಯಲ್ಲಿ ಡಾಯಿಂಗ್ ಕಲೆಯ ಉಪಕರಣಗಳ ದೈವೀ ಪ್ರದರ್ಶನ ಕಣ್ಣಿಗೆ ಹಬ್ಬ ಮಾಡುವುದು. ಎಲ್ಲಕ್ಕೂ ಹೆಚ್ಚಿನದೆಂದರೆ ಎಲ್ಲರ ಎಲ್ಲ ಅರಿವೆ, ನಿರ್ದಿಷ್ಟ ಅವಧಿಗೆ ಅಚ್ಚುಕಟ್ಟಾಗಿ ಗಿರಾಕಿಗೆ ದೊರೆಯಬೇಕೆಂದು ಅವನ ಹಿರಿಗುರಿ. ಹೀಗೆ ವಸ್ತುಸ್ಥಿತಿ ಇದ್ದು, ಒಂದೆರಡು ಚಿಕ್ಕಪುಟ್ಟ ದೋಷಗಳನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಬಾರದೆ?'

'ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತಿ' ಎಂಬ ದೇವವಾಣಿಯ ನಾಣ್ಣುಡಿ ನೆನಪಿಗೆ ಬಂದರೂ ನಾನು ಲೆಕ್ಕಿಸಲಿಲ್ಲ. ಸಿಟ್ಟು ತಡೆಯಲಿಲ್ಲ. 'ಹೌದು, ನೀಲಕಂಠನಂತೆ ನಾನಾಗದೇ ನಿನ್ನ ಮಾಲಕನ ವಿಷಯವಲ್ಲಿ ವಿಷದೇಹಿಯೇ ಆಗುವೆ. ತಿಳಿಯಿತಿಲ್ಲೊ!' ಎಂದು ಉತ್ತರಿಸಿದೆ. ಕೆಲಸ ಹೆಚ್ಚಾಗಿದ್ದರೆ 'ಸಾಹಾಯ್ಯಕ ನಲವನ್ನೇಕೆ ಇಟ್ಟುಕೊಳ್ಳಬಾರದು? ಎಂಥೆಂಥ ಸರ್ಕಸ್ಸಿನವರೂ ನೂರಾರು ಜನರನ್ನು ನಿಯಮಿಸಿಕೊಳ್ಳುತ್ತಾರೆ. ಈ ವಾಶಿಂಗ್ ಕಂಪನಿಗೆ ಒಬ್ಬನೇ ಹೇಗೇ ಸಾಕಾದೀತು? ಎರಡನೆಯವರ ಗೋಳು ಹೊಯಿಸಿಕೊಳ್ಳುವ ಬುದ್ಧಿ ಇರುವವರೆಗೆ ಈ ಹಾಡು ತಪ್ಪಿದ್ದಲ್ಲ!'—ಎಂದು ಸಿಡುಕಿನಿಂದ ಕಿಡಿಕಿಡಿಯಾದೆ.

ಆ ಕಪಾಟಿಗೂ ಉಳಿದ ಬಂಧುವರ್ಗಕ್ಕೂ ನನ್ನ ಸಿಟ್ಟಿನ ಕಲ್ಪನೆ ಈ ವರೆಗೆ ಬಂದಿರಲಿಲ್ಲ. ಸುಳಿಗಾಳಿಯಲ್ಲಿ ಗದಗದ ನಡುಗು ಹುಟ್ಟಿದಂತಾಯಿತು ಅದಕ್ಕೆ. ಆಂತಹದರಲ್ಲಿ ಸಾವರಿಸಿಕೊಂಡು, ಗದ್ಗದ ಸ್ವರದಲ್ಲಿ ಮರುನುಡಿಯಿತು:

'ಪಾಪ, ನನ್ನ ಯಜಮಾನನ ಪರ ಕೇಳುವರಾರು? ಕೆಟ್ಟು ದಿವಸಗಳಲ್ಲಿ ಕೊಡತಕ್ಕ ಹಣ ಮುಳುಗಿಸುವ ಮುಹಾತ್ಮರ ದೊಡ್ಡ ಊರಲ್ಲಿ ಎಷ್ಟು ಜನರು ಇದ್ದಿರಲಿಕ್ಕಿಲ್ಲ! ಹೀಗಿದ್ದರೂ ಅರಿವೆ ಹರಿದರೆ-ಕಳೆದರೆ, ಅರ್ಧಬೆಲೆ ತೆರುವೆವೆಂದು ರಸೀದಿಯಲ್ಲಿ ಬರೆಯಿಸಿರುವ. ಭದ್ರತಾಮಂಡಲದ ಕರ್ತವ್ಯ ಇನ್ನಾವ ರೀತಿಯಿಂದ ನೆರವೇರಿಸಲು ಸಾಧ್ಯ?'

ನನ್ನ ಸಂತಾಪಕ್ಕೂ ಎಲ್ಲೆ ಉಳಿಯುವುದೆಂತು? ಹೇಳಿದೆ: 'ಸಹೋದರಿ, ನಿನ್ನ ಒಡೆಯನನ್ನು ಸಂಗಟ್ಟುವೆ. ಪರವಾ ಇಲ್ಲ. ನಿನ್ನೆ ಕೃತಜ್ಞತಾ ಬುದ್ಧಿಗೆ ಮನಸೋತಿರುವೆ. ಕಾಗದ ಕಂಟ್ರೋಲಿನ ದಿನಗಳಲ್ಲಿಯೂ ನಿನ್ನ ಮಾಲಕನ ಅಂಗಡಿಯಲ್ಲಿ ಸಾಕಷ್ಟು ಅವ್ಯವಸ್ಥೆ ಇದೆ. ನಿಶ್ಚಿತ ರಸೀದಿ ಪುಸ್ತಕವಿಲ್ಲ. ಎಂದಾದರೂ ಎಣ್ಣೆಯ ಚೀಟಿಯಲ್ಲಿ ಪಾವತಿ ಮಾಡಿ ಹರಿದರೆ, ಒಂದು ವೇಳೆ ಅದನ್ನೇ ಮರೆತು ಬಂದಿದ್ದರೆ ಗಿರಾಕಿಗಳು ಒತ್ತಟ್ಟಿಗೆ—ಮಾಲಕನ ಪರಿವಾರ ಒತ್ತಟ್ಟಿಗೆ—ಆಗಿ, ಸುರಾಸುರರ ಯುದ್ಧವಾಗುವ ಖಂಡಿತ! ನ್ಯಾಯ ಕೊನೆಗಾಣಿಸಲು ಪೋಲೀಸ ಪಾರ್ಟಿ ಅತ್ಯಗತ್ಯ. ನಮ್ಮ ಖುಷಿ ಇಲ್ಲದವರ ಅರಿವೆ ತೆಗೆದುಕೊಳ್ಳಲಿಕ್ಕಿಲ್ಲವೆಂಬ ಉದ್ದಾಮತನವ ಬೋರ್ಡು ಸಹ ಹಚ್ಚಿರುವ! ನಿನ್ನ ಪ್ರಭುವಿನ ಲೀಲೆ! ಸುಮ್ಮನೆ ಅವನ ಒಣಜಂ ಪುರಾಣ ಬೇಡ.'

ಆಗ ಮೂಲೆಯಲ್ಲಿಯ ಬೇರೊಂದು ಕಪಾಟು ಕಿರ್ ಎಂದು ಸ ಮಾಡುತ್ತ ಒಡನುಡಿದಂತಾಯಿತು: 'ದೀಪಾವಳಿ, ಮೊಹ ರಂಜಾನ್, ಕ್ರಿಸ್‌ಮಸ್ ಹಬ್ಬ ಮೊದಲಾದ ಉತ್ಸವ ಕಾಲ ನನ್ನ ಯಜಮಾನನಿಗೆ ರಾತ್ರಿ ನಿದ್ರೆ ವರ್ಜ್ಯ; ಹಗಲಿನ ಮಾ ಎತ್ತುವಂತಿಲ್ಲ. ಉದ್ಯೋಗಪ್ರೀತಿಗೆ ಬೇರೆ ನಿದರ್ಶನ ಬೇಕೆ

'ಹೌದು ಹೌದು' ಎಂದು ವಿಡಂಬನೆ ಬೆರೆತ ಧ್ವನಿಯಿ ಗೋಣು ಹಾಕಿದೆ.'—ಅವ್ವಾ ಲೋಕಸುಂದರಿ, ನಿನ್ನ ಮಾಲಕ ಬಹಳ ದುಡಿದರೂ ಅವನ ದುಡಿಮೆಗೆ ಬೆಲೆ ಇಲ್ಲ. ಅರಿವೆ ಸ್ವ ಮಾಡುವ ಬದಲು ಬಣ್ಣ ಬದಲಿಸಿ ಬಿಡುವನು. ಗಟ್ಟಿ ಮು ಪಾಷಾಣದಂತಿದ್ದ ಹೊಸ ಅರಿವೆಗಳನ್ನು, ಬೀದಿಗೆ ಬಿಸಾಕ ಚಿಂದಿಯನ್ನಾಗಿಸುವ ಕಲೆ ಅವನಿಗೆ ಸಾಧಿಸಿದೆ'—ಎಂದೆ.

ತನ್ನ ಗೆಳತಿಯ ಸೋಲನ್ನು ಸಹಿಸಲಾರದೆ ಇಸ್ತ್ರಿ ಮಜಮಾನನ್ನ ಪರವಾಗಿ ಧ್ವನಿಎತ್ತಿತು: 'ಅಣ್ಣಾ, ಎಂ ದೋಷೈಕ ದೃಷ್ಟಿ ತಪ್ಪುದು! ಗುಣಗ್ರಾಹತೆಯ ಲವಲೇ ಝುಳುಕೂ ತಮ್ಮಲ್ಲಿಲ್ಲ. ಎಂತಹ ಬಿರುನುಡಿ?' ಎಂ ಮರುಗಿತು.

ನನಗೆ ಕರುಣೆ ಹುಟ್ಟಿತು. ತಾತ್ಕಾಲಿಕ ಬುದ್ಧಿಗಾಗಿ ನೋಬೆಲ್ ಬಾ ಮಾನ ನಿನ್ನ ಯಜಮಾನನಿಗೆ ದೊರೆಯಬೇಕಿದ್ದರೂ, ಕೊಡ ಭಾಗವನ್ನು ದೇವರು ದಯೆಪಾಲಿಸಲಿಲ್ಲ; ಏನು ಮಾಡಲಿ? ಎಂದು ಹೇಗೊ ಹೇಗೊ ಪ್ರಶಂಸಿಸಬೇಕೆನ್ನುವಾಗ, ಜರದ ಪಾ ಸುತ್ತಿಕೊಂಡು, ಬಾಯಲ್ಲಿ ತಂಬಾಕು ತುಂಬಿಕೊಂಡು, ಗೋ ಗಡಿಯಾರದ ಪಾರ್ಶ್ವದ ಅಂಗಡಿಯಿಂದ ಮಾಲಕನು ತ ಸಮೀಪಕ್ಕೆ ಬರುವ ಜರಿಮಿರಿ ಬೂಟಿನ ನಾದವು ಎಲ್ಲೆಡೆ ತುಂಬಿ ಇಸ್ತ್ರಿ, ಕಪಾಟುಗಳು ಹೌಹಾರಿ ಮೌನದ ಕಾರಂಜಿಯನ್ನಪ್ಪಿದು ನಾನು ವಾಶಿಂಗ್ ಕಂಪನಿಯ ಅಧಿನಾಯಕನಿಗೆ—ಪ್ಯಾಂ ಸಲುವಾಗಿ ಗಂಟುಬಿದ್ದೆ. ಬೀಳದಿದ್ದರೆ ಅಂದಿನ ನನ್ನ ಮಹತ್ತ ಪ್ರಯಾಸದ ಕಾರ್ಯಕಲಾಪದ ಗತಿ ಏನಾಗಬಹುದಿತ್ತು?

ಮರಳಿ ಮನೆಗೆ

(ಕಥೆ)

ಶ್ರೀ. ದೇವಳಿ ಕೃಷ್ಣರಾಯರು ಬಿ. ಎ ವಿಜಾಪುರ

★

ಮೋಹನ ದಾಸ್ಯದ ಬಲೆಯಿಂದ ಹೊರಬಿದ್ದು ಮನೆಗೆ ಮರಳಿದ. 'ಕರುಬರಿದ್ದ ಊರಿಂದ ಕಾಡೊಳ್ಳಿತು' ಎಂದು ನಮ್ಮ ಕವಿಯೊಬ್ಬ ಹೇಳಿದ್ದಾನೆ. ಕವಿಯು ಕ್ರೂರಕೊನನಾದರೆ ಮೋಹನನ ಗತಿಯೇ ಅವನಿಗೆ!

★

"ಟಕ್-ಟಕ್" ಎಂದು ಬಾಗಿಲ ಸಪ್ಪಳವಾಯಿತು.

"ಯಾರವರು?"

"ನಾನೇ—ಬಾಗಿಲು ತೆರೆ"

"ಅವ್ವಯ್ಯಾ! ಇವರೇ ಬಂದರು" ಎಂದು ರಾಧೆ ಧಾವಿಸಿ ಬಂದು ಬಾಗಿಲ ತೆರೆದಳು.

"ಎಷ್ಟು ತಡವಾಯಿತಲ್ಲ ನಿತ್ಯಕ್ಕಿಂತ!" ಎಂದಳು.

ಮೋಹನ ಮಾತನಾಡಲಿಲ್ಲ. ಕೈಯಲ್ಲಿ ಹಿಡಿದ ಕಚೇರಿಯ ಕಾಗದಗಳ ದಪ್ತರನ್ನು ರಾಧೆ ತೆಗೆದುಕೊಂಡಳು. ಮೋಹನನ ಮೌನವನ್ನು ಕಂಡು ಮಾತನಾಡಲಾರದೆ ಒಳಗೆ ಹೋದಳು. ಮೋಹನ ಸಮೀಪದಲ್ಲಿ ಪಲಂಗಿನ ಮೇಲೆ ಒರಗಿ, ಉಶ್ಶೆಂದು ಉಸಿರಿಟ್ಟ. ಆಗ ೯॥ ಗಂಟೆಯಾಗಿತ್ತು. ತಾಟು ಬಡಿಸಿಟ್ಟು ಎಷ್ಟೊ ಹೊತ್ತಾಗಿತ್ತು. ನಾಲ್ಕು ವರುಷದ ಮಗುವಾದ ನಾರಾಯಣ 'ಅಪ್ಪ ಬಲ್ಲಿ' ಎಂದು ಹಾದಿಯನ್ನು ನೋಡಿ ನೋಡಿ, ತಾನೂ ಉಣ್ಣಲಾರದೆ ತೂಕಡಿಸುತ್ತಿದ್ದ. ತಂದೆ ಬಂದುದನ್ನು ತಿಳಿದು ನಿತ್ಯದಂತೆ ಅವನೆಡೆಗೆ ಹೊರಟ "ಬೇಡಪ್ಪಾ ನಾನಿ, ದಣಿದು ಬಂದಿದ್ದಾರೆ, ಸ್ವಲ್ಪು ತಡಿ" ಎಂದು ರಾಧೆ ಮಗುವಿಗೆ ಮುದ್ದಿಟ್ಟು, ಹೊರಗೆ ಬಂದು "ತಾಟು ಬಡಿಸಿದೆ" ಎಂದಳು.

ಊಟವು ಮೊದಲು ೨-೩ ನಿಮಿಷಗಳವರೆಗೆ ಸದ್ದಿಲ್ಲದೆ ಸಾಗಿತು. ಮೋಹನ ಈ ದಿನ ಮೈಮೇಲೆ ಬಿದ್ದ ಹೊರಲಾರದ ಕೆಲಸವನ್ನು ಮಾಡಿ ಬಳಲಿ ಬೆಂಡಾಗಿದ್ದ. ರಾಧೆ ಸುಮ್ಮನೆ ಬಡಿಸುತ್ತಿದ್ದಳು.

ಮಗು ನಾರಾಯಣನು ಇಬ್ಬರ ಮೂಕವರ್ತನವನ್ನು ಕಂಡು, ತಾಯಿಯ ಮುಖವನ್ನೊಮ್ಮೆ ತಂದೆಯ ಮುಖವನ್ನೊಮ್ಮೆ ನಿರೀಕ್ಷಿಸ ಹತ್ತಿದ. ಆಗ ಅನ್ನದ ತುತ್ತನ್ನು ಬಾಯಲ್ಲಿ ಹಾಕಿಕೊಳ್ಳುವಾಗ ಅಗಳುಗಳೆಲ್ಲ ಮೈಮೇಲೆ ಬಿದ್ದುವು.

"ಎಷ್ಟು ಹೊಲಸೋ ನಾನೀ! ಸಣ್ಣ ಕೂಸಿನಂತೆ ಮೈಮೇಲೆಲ್ಲ ಅನ್ನವನ್ನು ಚೆಲ್ಲಿಕೊಂಡಿ....ಛೀ" ಎಂದು ಮೋಹನ ಮಾತಿಗೆ ಪ್ರಾರಂಭಿಸಿದ. ರಾಧೆಯ ಕಡೆಗೆ ಹೊರಳಿ ನೋಡಿದ; ಕರುಣೆ ತುಂಬಿದ ಮುಖವಾಗಿತ್ತು ಅವಳದು. ಆದರೂ ಮುಖವನ್ನು ಅರಳಿಸಲು ಪ್ರಯತ್ನ ಮಾಡಿ "ಇನ್ನಷ್ಟು ಸಾರು ಹಾಕಲೇನು?" ಎಂದು ಕೇಳಿದಳು.

ಮೋಹನನಿಗೆ ಅವಳ ನಟನೆ ತಿಳಿಯದಿರಲಿಲ್ಲ. ಬಟ್ಟಲಲ್ಲಿ ತುಂಬಿದ ಸಾರನ್ನು ಒಂದು ಉಸುರಿನಲ್ಲಿ ಕುಡಿದು,

"ಓಹೋ, ಒಳ್ಳೀ ಅಮೃತವಾಗಿದೆ ನೋಡು. ಇನ್ನಷ್ಟು ಹಾಕು" ಎಂದ. ಹಾಕಿದಳು, ಅದನ್ನೂ ಕುಡಿದ. ರಾಧೆಗೆ ನಗೆ ತಡೆಯಲಾರದೆ, ಹೊಳ್ಕೆಂದು ನಕ್ಕು ಬಿಟ್ಟಳು. ಅವಳ ನಗೆ ಕಂಡು ಮೋಹನನೂ ಮನಸೋಕ್ತವಾಗಿ ನಕ್ಕನು.

"ಏನು ಅಸಹ್ಯ ಮಾಡತಾ ಇದ್ದೀರಿ ನೀವು?" ಎಂದು ಕೇಳಿದಳಾಕೆ.

"ನೀನು ಅಸಹ್ಯ ಮೋರೆ ಮಾಡಿದಾಗ, ಅಸಹಾಯಕನಾದ ನಾನು ಮತ್ತೇನು ಮಾಡಬೇಕು!"

"ಅದಿರಲಿ. ಮತ್ತೇಕೆ ತಂದಿರಿ ಮನೆಗೆ ಕೆಲಸವನ್ನು?"

"ತರದಿದ್ದರೆ ನಿಮ್ಮಪ್ಪ ಬಂದು ಮಾಡುವನೇ!"

"ನಮ್ಮಪ್ಪನ ಹೆಸರು ಸದ್ಯೆವ ನಿಮ್ಮ ಬಾಯಲ್ಲಿ! ದೇವರ ನಾಮಸ್ಮರಣೆಯನ್ನಾದರೂ ಮಾಡಿದರೆ ಪುಣ್ಯ ಬಂದೀತು."

"ಓಹೋ, ಪುರಂದರ ನಿತಲನ ಭಕ್ತಳಲ್ಲವೇ ನೀನು!" ಎಂದು ಮೋಹನ ಹಾಸ್ಯ ಬೀರಿದ.

"ಹೌದು, ನಾನು ಬೇಗನೆ ಪಂಢರಪುರಕ್ಕೆ ಹೋಗುವವಳಿದ್ದೀನೆ. ತಂಬೂರಿಯೊಂದು ಕೊಡಿರಿ!"

"ಯಾಕೆ! ಈ ಹೊತ್ತು ಉದರವೈರಾಗ್ಯದ ಹಾಡನ್ನು ಕಲಿತಂತೆ ಕಾಣುತ್ತದೆ! ನಿನ್ನಿಲ್ಲ ಮೊನ್ನೆ ವೆಂಕಣ್ಣಾಚಾರ್ಯರು ಪರಿವಾರ ಸಮೇತರಾಗಿ ಬದರೀಯಾತ್ರೆಗೆ ಹೊರಟು ಹೋದರಂತೆ; ನನಗೇನು ಗೊತ್ತು ನಿನ್ನ ಇಚ್ಛೆಯೂ ಇತ್ತೆಂದು!"

"ನಿಮಗೆ ಈಗ ಮಾತಿನ ಲಹರು ಬಂದಿತು. ಇಲ್ಲಿ ನೋಡಿ. ನನ್ನನ್ನು ದಿಟ್ಟಿಸಿ ನೋಡುವ ಭರದಲ್ಲಿ ಸಾರಿನ ಬಟ್ಟಲನ್ನು ಉರುಳಿಸಿದಿರಿ. ಒಂದುದಿನವಾದರೂ ಸಾವಧಾನವಾಗಿ ಹೊಟ್ಟೆತುಂಬ ಊಟ ಮಾಡಿರಲ್ಲ! ಇರೋದಕ್ಕಾಗಿಯೇ ದುಡಿಯೋದು; ದುಡಿಯೋದಕ್ಕಾಗಿ ಇರುವುದಲ್ಲ."

"ಎಷ್ಟು ಜಾಣಳಾಗಿದ್ದೀಯೇ ನೀನು! ಇಷ್ಟರಲ್ಲಿ ಎಷ್ಟೊಂದು ನೈಪುಣ್ಯ ಗಳಿಸಿದೆಯಲ್ಲ? ಯಾವ ದೇವರನ್ನು ಆರಾಧಿಸುತ್ತಿರುವಿ!"

"ಇದಕ್ಕೇಕೆ ದೇವರನ್ನು ಆರಾಧಿಸಬೇಕು? ಕಾಣುತ್ತಿರುವುದನ್ನೇ ತೋಡಿಕೊಳ್ಳುವುದಕ್ಕೆ ಏನು ಸುಡುಗಾಡು ನಿಪುಣತೆ ಬೇಕಾಗಿದೆ?"

"ಹೀಗೆಯೇನು!"

"ಹೌದು, ಹೀಗೆಯೇ! ಏಕೆ ಇಷ್ಟು ತಾಪತ್ರಯ ಪಡುತ್ತಿರುವಿರಿ, ಏನಾಗಬೇಕಾಗಿದೆ ಇಂಥ ನೌಕರಿಯಿಂದ? ಈಗಂತೂ ನಿಮ್ಮ ದೇಹ ಬರಿ ಎಲುವಿನ ಹಂದರವಾಗಿದೆ. ಕಚೇರಿಯಲ್ಲಿ ದುಡಿದು

ಮುನಿಸು, ಮತ್ತೆ ಮನಸಿಗೆ ಬೇರೆ ಕಾರಣಗಳನ್ನು ತಂದಿರುವಿ. ನಿಮ್ಮ ಸಾಹೇಬರಿಗೇನು ಹುಚ್ಚುಗಿಚ್ಚು ಹಿಡಿದಿಲ್ಲವಷ್ಟೇ ?"

"ಸ್ವಲ್ಪ ತಡೆ. ಸ್ವಲ್ಪ ಸಡಿಲುಬಿಟ್ಟರೆ ಉಪನ್ಯಾಸವನ್ನೇ ಪ್ರಾರಂಭಿಸುತ್ತೀಯಲ್ಲ..... ಹೋಗಲಿ ಬಿಡು. ಈ ದಿನ ಆ ಕಛೇರಿಯ ಗಂಟನ್ನೇ ಬಿಚ್ಚುವುದಿಲ್ಲ. ಈಗಾದರೂ ಆಯಿತೇ..... ಎಲಾ. ಇದೇನು! ಮಾತಿನ ಭರದಲ್ಲಿ ಎಲ್ಲವನ್ನೂ ನಾನೇ ಉಂಡುಬಿಟ್ಟೆ. ನಿನಗುಳಿದಿದ್ದುನು ಬರೀ ತಳ ಕಾಣುತ್ತದೆ."

ರಾಧೆಗೆ ತುಂಬ ಸಂತೋಷವಾಯಿತು. ಎಷ್ಟೋ ದಿವಸಗಳಲ್ಲಿ ಈ ದಿನ ಮೋಹನ ಹೊಟ್ಟೆತುಂಬ ಉಂಡನೆಂದು ಅವಳಿಗೆ ಹರುಷವೇ ಹರುಷ.

* * * *

ಕೆಲಸಗಳನ್ನೆಲ್ಲ ತೀರಿಸಿಕೊಂಡು ರಾಧೆ ಕೋಣೆಗೆ ಬಂದಳು. ಮೋಹನ ಹಾಸಿಗೆಯ ಮೇಲೆ ಮಲಗಿದ್ದನೇನೋ! ಸರಿ ; ನಿದ್ರೆ ಹತ್ತಿರಲಿಲ್ಲ. ವಿಚಾರತರಂಗಗಳಲ್ಲಿದ್ದಂತೆ ತೋರಿತು ರಾಧೆಗೆ.

"ತಲೆ ನೋಯುತ್ತಿದೆಯೇನು?" ಎಂದು ಕೇಳಿದಳು.

"ಇಲ್ಲ.... ಆದರೆ ಏನಾಗುತ್ತಿದೆಯೋ ತಿಳಿಯದ ಹಾಗಾಗಿದೆ. ಮನಸ್ಸಿಗೆ ಸಮಾಧಾನವೆನಿಸುವುದಿಲ್ಲ."

"ನನಗೆ ತಿಳಿಯಿತು. ನುತ್ತೆ ನಿನ್ನ ತಲೆಯಲ್ಲಿ ಕಛೇರಿಯ ಕೆಲಸದ ಧ್ಯಾಸವೇ ಧ್ಯಾಸ! ಒಂದು ರಾತ್ರಿಯಾದರೂ ಸಮಾಧಾನದಿಂದ ಮಲಗಿರಲ್ಲ!"

"ರಾಧೆ, ನಿನ್ನ ಕೈಯನ್ನು ಎದೆಯ ಮೇಲಿಂದ ತೆಗೆಯಬೇಡ.... ಎಷ್ಟು ಸಮಾಧಾನವಾಗುತ್ತಿದೆಯೀಗ!"

"ನಿಜವಾಗಿ ಸಮಾಧಾನವಾಗುತ್ತಿದೆಯೇ?"

"ಹೌದು. ನಿನ್ನ ಸ್ಪರ್ಶಸುಖದಿಂದ ಎಲ್ಲ ವಿಚಾರದ ಭಾರವೂ ಮರೆತುಹೋಯಿತು. ನೀನು ಇಲ್ಲಿ ಬರುವುದಕ್ಕಿಂತ ಮೊದಲು, ಅಲ್ಲಿ ಕಾಣುತ್ತಿರುವ ಚಂದ್ರ ಕೂಡ ನನಗೆ ಉಗ್ರವಾಗಿ ಕಾಣುತ್ತಿದ್ದ. ಈಗೆಷ್ಟು ಶಾಂತಸಾದನಲ್ಲ! .... ಆದರೇನು! ಆ ಚಂದ್ರನ ಕಾಂತಿಗೂ ಈ ಚಂದ್ರನ ಕಾಂತಿಗೂ ...."

"ಎಷ್ಟೋ ವರ್ಷಗಳಿಂದ ಉಸಿರು ಕೂಡ ಆಡಿಸಲಿಕ್ಕೆ ವೇಳೆ ಸಿಕ್ಕದ ನಿಮಗೆ, ಕವಿಯಾಗಲಿಕ್ಕೆ ಎಂದು ವೇಳೆ ಸಿಕ್ಕೀತು?"

"ಕವಿ ಯಾತಕ್ಕೆ ಬೇಕು ಇದಕ್ಕೆ? ಎಂಥ ಮೂರ್ಖನಿಗೂ ಗೊತ್ತಾಗುವುದು."

"ಹಾಗಾದರೆ ಈಗ ನೀವು ಏನಾದಿರಿ?"

"ನೀನು ಮಹಾ ಮೂರ್ಖ ನೋಡು?"

"ಹಾಗಾದರೆ ನೀವು?"

ಇಬ್ಬರೂ ಒಕ್ಕೊರಲಿಂದ ನಕ್ಕರು. ಮುಖಕ್ಕೆ ಮುಖ ಹಚ್ಚಿ

ದೀಪಾವಳಿಯ ಮಂಗಲಸಮಯದಲ್ಲಿ

— ಕೂದಲುಗಳಿಗೆ —

ಕಾಮಿನಿಯಾ ಆಯಿಲ್

(ರಜಿಸ್ಟರ್ಡ್)

ಉಪಯೋಗಿಸಿ ನಿಮ್ಮ ಚಿತ್ತವನ್ನು ಸುಪ್ರಸನ್ನವಾಗಿಸಿರಿ.

ಬಟ್ಟೆಯನೇಲೆ ಒಂದು ಹನಿ ಸಿಮ್ಮಡಿಸಿದಲ್ಲಿ ಅಲ್ಲಿಯ ಹವೆಯೆಲ್ಲ
ಸುವಾಸನೆಯಿಂದ ಸೂಸಿಬಿಡುವ

ಒಟ್ಟೊ ದಿಲ್‌ಬಹಾರ

(ಅತ್ತರುಗಳರಾಜ) [ರಜಿಸ್ಟರ್ಡ್]

ಇದನ್ನೇ ಉಪಯೋಗಿಸಿರಿ. ಎಲ್ಲಕಡೆಯಲ್ಲಿ ದೊರೆಯುತ್ತದೆ.

ಆ್ಯಂಗ್ಲೊ ಇಂಡಿಯನ್ ಡ್ರಗ್ ಆ್ಯಂಡ್ ಕೆ. ಕಂ.

೨೮೫ ಜುಮ್ಮಾಮಸಿದ್, ಮುಂಬಯಿ ೨.

ಚಿಗೆ ನೋಡುತ್ತಾರೆ. ಚಂದ್ರನೂ ಇವರ ಜೊತೆಗೆ ಕುಲು-ಕುಲು ನಗೆ ಬೀರುತ್ತಿದ್ದ.

ರಾಧೆ ಎಂದಳು, "ನನಗೆಷ್ಟು ಸೌಖ್ಯವಾಗಿದೆ ಈ ರಾತ್ರಿ! ನಾಲ್ಕು ಹೀಗಿದ್ದರೆ!"

* * * *

ಇನ್ನೂ ಸೂರ್ಯೋದಯವಾಗಿರಲಿಲ್ಲ. ರಾಧೆ ನೊದಲೇ ಎದ್ದು ಕೆಲಸದಲ್ಲಿ ನಿರತಳಾಗಿದ್ದಳು. ಹೊರಗಿನಿಂದ ಕೇಳಬಂದಿತು ಒಂದು ಕೂಗು. ಹೊರಗೆ ಬಂದಳು. ಕಚೇರಿಯ ಆಳು ಆತ.

"ಏಕಪ್ಪಾ ಇಷ್ಟು ಬೇಗ ಬಂದೆ?" ಎಂದು ರಾಧೆ ಸ್ವಲ್ಪ ಬಿಟ್ಟನಿಂದಲೇ ಕೇಳಿದಳು.

"ರಾಯರು ಬೇಗ ಕರಕೊಂಡು ಬಾ ಅಂತ ಕಳಿಸ್ಯಾರರಿ!"

"ನಿನ್ನೆ ರಾತ್ರಿಯಿಂದ ಅವರಿಗೆ ತಲೆಶೂಲಿಯಾಗಿದೆ. ಪೂರ್ಣ ನಿದ್ರೆಯಾಗಿಲ್ಲ. 'ಅರ್ಜಂಟ್' ಕೆಲಸವಿದೆಯೇನೋ!—"

"ಮಲಗಿದ್ದರೆ ಮಲಗಲಿ. ಎದ್ದವ್ಯಾಲೆ ಇದ್ದೇ ಇರತಾದರಿ ಕೆಲಸ! ರಾಯರಿಗೆ ಏನಾದರೂ ಹೇಳಿ ಮುಗಸತೀನಿ ಬಾಯಿ."

ಆಳು ಹೊರಟು ಹೋದ.

"ಶಂಭೂನಿಗೆ ಎಷ್ಟು ತಿಳಿವಳಿಕೆಯಿದೆಯಲ್ಲ" ಎಂದುಕೊಂಡಳು ರಾಧೆ. ಕೋಣೆಗೆ ಬಂದಳು. ಮೋಹನ ಆದೇ ಏಳಬೇಕೆನ್ನುವುದರಲ್ಲಿದ್ದ. ರಾಧೆ ತಿರುಗಿ ಹೋಗುವುದನ್ನು ಕಂಡು, 'ಶ್ ಶ್' ಎಂದು ಕರೆದ.

"ಏಕೆ ಕರಿದಿರಿ? ಎಂದೆ...."

"ತಿರುಗಿ ಏಕೆ ಹೊರಟಿ?"

"ಇನ್ನೂ ಪೂರ್ಣ ಎಚ್ಚರವಾಗಿರಲಿಕ್ಕಿಲ್ಲ ಎಂದು ತಿಳಿದು, ಹಾಲುಕಾಯಿಸಲೆಂದು ಹೊರಟೆದ್ದೆ."

"ಜಗತ್ತೆಲ್ಲ ಎಚ್ಚರವಾದಾಗ ನಾನು ತೂಕಡಿಸುತ್ತ ಕೂಡಬೇಕೇ?"

ರಾಧೆ ತೀರ ಅವನ ಹತ್ತಿರ ಬಂದು ಅಂದಳು: "ಜಗತ್ತು ಮಲಗಿಕೊಂಡಾಗ ನೀವೂ ಮಲಗಿಕೊಳ್ಳುತ್ತಿದ್ದರಿ, ಈ ಪಾತಾಳಕ್ಕಿಳಿಯಬೇಕು- ತಿರುಗುತ್ತಿರುವ ಯಂತ್ರಕ್ಕೆ ಹಗಲೇನು, ರಾತ್ರಿಯೇನು! ರಾತ್ರಿ-ಹಗಲು ನಿಮಗೆ ಸಮವಾಗಿವೆ. ವಿಜ್ಞಾನಿಯಂತೆ ಸದೈವ ನೆತ್ತರು ಸಿಡಿದುಬೀಳುವಹಾಗೆ ವಿಚಾರ ಮಾಡಿ ಮಾಡಿ ತಲೆ ತುರಿಸಿಕೊಳ್ಳುತ್ತಿರುವ ನಿಮಗೆ ನಿದ್ರೆಯೆಲ್ಲಿ? ಏನೋ ನಿನ್ನೆಯ ರಾತ್ರಿಯನ್ನು ಮಾತ್ರ ಸಮಾಧಾನದಿಂದ ಕಳೆದಿರಿ.... .... ಹಾಲು ಇಲ್ಲಿಯೇ ತರಲೇನು?"

"ಅದಿರಲಿ, ಒಳ್ಳೆಯ ಮಾತುಗಾರ್ತಿಯಾದೆ ಬಿಡು." ಎನ್ನುತ್ತ ಮೋಹನ ಹಾಸಿಗೆಯ ಮೇಲೆ ಎದ್ದು ಕುಳಿತ.

"ಕತೆಗಾರರಾದ— ಅಲ್ಲ— ಕತೆಗಾರರಾಗಿದ್ದ ನಿನ್ಮುಂಥವರ ನೆರಳಿಗೆ ಬಿದ್ದಮೇಲೆ, ಹರಕು-ಮುರುಕು ತೊದಲ್ನುಡಿಗಳನ್ನು ಕೂಡ ಅಡಬಾರದೇನು? ಹೋಗಲಿ. ಈಗೆಲ್ಲಿಯ ಕತೆಗಾರರು! ಕಾರಕೂನರಾಗಿದ್ದೀರಿ..... ಈ ದಿನ ಕಚೇರಿಗೆ ಹನ್ನೊಂದಕ್ಕಿಂತ ಬೇಗನೆ ಹೋಗಬೇಕೆನ್ನುವಿರಾ?"

"ಬೇಗನೆ ಹೋಗಬೇಕೆಂದೇನೋ ಇಷ್ಟು ಮನಸ್ಸಿನಲ್ಲಿ; ಆದರೆ ಬೇಸರಿಕೆ ಬಂದಿದೆ. ಹನ್ನೊಂದಕ್ಕೇ ಹೋಗುತ್ತೇನೆ."

"ಸರಿಯಾಯಿತು. ಅಂತೆಯೇ ಆತನಿಗೆ ಹೇಳಿ ಕಳುಹಿದ್ದು ಯೋಗ್ಯವೇ ಆಯಿತು." ಎಂದೆನ್ನುತ್ತ ರಾಧೆ ಒಳಗೆ ಹೊರಟಳು.

ಮೋಹನ ಒಮ್ಮೆಲೆ ಗಡಬಡಿಸಿ ಎದ್ದ. ಗಾಬರಿಯಾಗಿ ಕೇಳಿದ:

"ಯಾರು ಬಂದಿದ್ದರು!..... ನನ್ನು ಹೇಳಿಕಳಿಸಿದಿ?"

"ಅಪೇ ಆ ನಿಮ್ಮ ಶಂಭೂ. ಬೆಳಗಾಗುವುದರಲ್ಲಿಯೇ ಹೆಡ್-ಕ್ಲಾರ್ಕ್ ಕರೀತಾರೆಂದು ಬಂದಿದ್ದ. ನಿನ್ನೆಯ ರಾತ್ರಿಯಿಂದ ತಲೆಶೂಲೆಯಾಗಿ ಬಳಲುತ್ತಿದ್ದೀರಿಯೆಂದು ಹೇಳಿ ತಿರುಗಿ ಕಳುಹಿದೆ."

"ಹಾಳುಮಾಡಿದಿ ರಾಧೆ. ಎಷ್ಟು ಕಾರಭಾರ ಮಾಡುತ್ತೀರಿ ಹೆಂಗಸರಾದ ನೀವು? ನಿನಗೆ ಗೊತ್ತಿಲ್ಲವೇ ಅವನೆಂಥ ಉದ್ದಾಮನಿರುವನೆಂದು.... ಸರಿ ಆಚೆಗೆ!"

ಮೋಹನ ಕೋಟು ಹಾಕಿಕೊಂಡ. ರಾಧೆ ಗಾಬರಿಯಾದಳು.

"ಮುಖ ಕೂಡ ತೊಳೆದುಕೊಳ್ಳುವುದಿಲ್ಲವೇ?....ಹಾಲು?...."

"ಈಗ ಬಂದೆ" ಎಂದವನೇ ಮೋಹನ ಸಾಯಕಲ್ ಹತ್ತಿ ಹೊರಟು ಹೋದ.

* * * *

ಕಚೇರಿಯಲ್ಲಿ ಜನರು ಹೋಗಿಬರುವ ಗದ್ದಲವೇ ಗದ್ದಲ.

ಪಾಯೋನಿಯರ್ ಪಿಕ್ಚರ್ಸ್‌ದವರ

ಚಂದ್ರಶೇಖರ

★

(ಬಂಕಿಮಚಂದ್ರರ ಅಮರ ಸಾಹಿತ್ಯ ಕೃತಿಯ ಚಿತ್ರೀಕರಣ)

ಬೇಗನೆ ಧಾರವಾಡದ **'ರಿಗಲ್'** ಚಿತ್ರಮಂದಿರದಲ್ಲಿ ಬರಲಿದೆ!

ಅಶೋಕಕುಮಾರ್, ಕಾನನದೇವಿ, ಭಾರತಿ ಇವರನ್ನು ನೋಡುವ ಈ ಅಪೂರ್ವ ಸಂಧಿಯನ್ನು ಕಳೆದುಕೊಳ್ಳಬೇಡಿರಿ. ನೀವು ನೋಡುವದಲ್ಲದೆ ನಿಮ್ಮ ಹೆಂಡತಿ, ಮಕ್ಕಳಿಗೆ ಅವಶ್ಯವಾಗಿ ತೋರಿಸಿರಿ.

ಕಾಲುಗಳ ಸದ್ದುಗಳಿಗೂ ಮಾತುಗಳ ಗದ್ದಲಗಳಿಗೂ ತಡೆಯೇ ಇಲ್ಲ. ಮೋಹನ ಒಂದುಕಡೆಗೆ ಒಂದು ಮೂಲೆಯಲ್ಲಿ, ಅತ್ತಿತ್ತ ಅಲುಗದೆ ಬರೆಯುವುದರಲ್ಲಿ ಮಗ್ನನಾಗಿದ್ದ. ಟೇಬಲ್ಲಿನ ಮೇಲೆ ಫೈಲುಗಳ ಹೊರೆ. ನೋಡುವವರಿಗೆ ಎದೆಯೊಡೆಯುವಂತಹ ನೋಟ.

ಮಧ್ಯಾಹ್ನ ಎರಡು ಹೊಡೆಯಿತು. ಮೋಹನ ಆಳನ್ನು ಕರೆದ:
"ಶಂಭೂ, ಸಾಹೇಬರು ಊಟಕ್ಕೆ ಹೋದವೇನೋ?"
"ದೊಡ್ಡ ಸಾಹೇಬರೀ....ಹೌದ್ರಿ... ಈಗಲೇ ಹೋದ್ರು."
"ಹೆಡ್‌ಕ್ಲಾರ್ಕ್ ಏನು ಮಾಡತಾ ಇದ್ದಾರೆ?"
"ಮತ್ತೀನ್ರಿ. ಚಂಚೀಬಿಚ್ಚಾರ್ರಿ...."
"ಏ!! ಒದರಬೇಡ....ಒಳ್ಳೇದು ಹೋಗು!"

ಮೋಹನ ಖುರ್ಚಿಯ ಹಿಂಬದಿಗೆ ತೂಗುಬಿಟ್ಟಿದ್ದ ಕೋಟು ಹಾಕಿಕೊಂಡು, ಹೆಡ್‌ಕ್ಲಾರ್ಕ್‌ರ ಕೋಣೆಗೆ ಹೋದ. ಅವರ ಹೆಸರು ಎಮ್. ಸಿ. ಎಂದು. ಮೂಗಿನ ಕೆಳಗೆ ನೊಣವೊಂದನ್ನು ಜಂಟಿಸಿಕೊಂಡಂತೆ ಶೋಭಿಸುತ್ತಿತ್ತು ನಾಟವಾದ ಮೀಸೆ. ಮಣ್ಣಿನ ಮುದ್ದೆಯಂತೆ ನೋಹಕವಾಗಿರುವ ಮುಖ. ದಶಮುಖನಂತೆ ದಾರುಣವಾದ ವೇಹ. ಟೇಬಲ್ಲಿನ ಮೇಲೆ ಜಂಜಿ, ತಂಬಾಕಿನ ಡಬ್ಬಿ ಇದ್ದೇ ಇದ್ದುವು. ಒಂದು ನಿಮಿಷ ಕೂಡ ಬಿಡದೆ ಗುಡುಗು-ಮಿಂಚುಗಳ ಹೊಡೆತದಂತೆ ಅವರ ಕೆಂಪಾದ ಬಾಯಿಯಿಂದ ಬೀಳುವುದು ಬೈಗುಳ ಭಾಂಡಾರ. ಸುತ್ತುಮುತ್ತಲೂ ಕುಳಿತಿದ್ದಾರೆ ನಾಲ್ಕೈದು ಜನ. ಕೆಲಸಕ್ಕಾಗಿ ಬಂದವರು ಕೆಲಸ ಮುಗಿದರೂ ಎದ್ದು ಹೋಗುವವರಲ್ಲ.

ಮೋಹನ ಟೇಬಲ್ಲಿನ ಎದುರಿಗೆ ಹೋಗಿ ನಿಂತು ಹೇಳಿದ:
"ಊಟಕ್ಕೆ ಹೋಗಿಬರುತ್ತೇನೆ."

"ಓಹೋ ಬಂಪೆಯಾ ಮುಖವನ್ನು ಸಪ್ಪಗೆ ಮಾಡಿಕೊಂಡು? ಮುಂಜಾನೆ ೮ ಕ್ಕೆ ಕರೆಸಿದರೆ ೯ ಕ್ಕೆ ಬಂದಿ. ನಿನ್ನೆ ಮನೆಗೆ ತೆಗೆದುಕೊಂಡ ಹೋದ ಕಾಗದಗಳನ್ನು ಹಾಗೆಯೇ ತಂದಿ. ನಿನ್ನೆ ಸಂಜೆಯ ಆರುಗಂಟೆಗೆ ನಾನು ಮನೆಗೆ ಹೊರಡುವಾಗ ಹೇಳಿ ಹೋಗಲಿಲ್ಲವೇ. ಹಿಡಿದ ಕೆಲಸ ಎತ್ತು ಹೊತ್ತಾದರೂ ಮುಗಿಸದೆ ಹೋಗಬೇಡವೆಂದು? ಇನ್ನೊಂದು ತಾಸು ಕುಳಿತಿದ್ದರೆ ಏನಾಗುತ್ತಿತ್ತು? ೯ ಕ್ಕೇ ಹೊರಟು ಹೋದಿಯಂತೆ ..... ಊಟಕ್ಕೆ—ಹೋಗಲು ನನ್ನದೇನೂ ಅಡ್ಡಿಯಿಲ್ಲ. ಈಗ ಕೊಟ್ಟ ೪–೫ ಕಾಗದಗಳ ಜವಾಬು ಬರೆದುಕೊಟ್ಟು ಹೋಗು!"

"ಉಳಿದ ಜನ ಕೇಳದೆಯೇ ಅನಾಯಾಸವಾಗಿ ಹೋಗಿ ಬರುತ್ತಾರೆ. ನಾನು ಮಾತ್ರ....."

"ಉಳಿದವರ ಗೊಡವೆ ನಿನಗೇಕೋ!"

ಸುತ್ತುಮುತ್ತಲೂ ಬಂದು ಕುಳಿತಿದ್ದ ಜನರು, ಜಂಭದಿಂದ 'ಹಿ! ಹಿ!' ಎಂದು ನಕ್ಕರು.

ಮೋಹನ ತಿರುಗಿ ಬಂದ. ಕೋಟು ತಾನೇ ಕಳಚಿ ಬಿತ್ತು. ತನ್ನ ಟೇಬಲ್ಲಿಗೆ ಹೋಗಿ ಕುಳಿತುಕೊಂಡ ವಿಚಾರಿಸ ಹತ್ತಿದ:
"ನಿತ್ಯವೂ ಇದೇ ಹಣೆಬರೆಹವೇ! ೪-೫ ಕಾಗದಗಳ ಜವಾಬು ಬರೆದು ಕೊಟ್ಟು ಹೋಗಬೇಕೇ! ಅದಕ್ಕೆ ಕನ್ನಿಷ್ಟ ಮೂರು ದಿನಗಳಾದರೂ ಬೇಕು.....ಮನೆಯಲ್ಲಿ ಎಷ್ಟು ಕಷ್ಟ ಪಡುತ್ತಿರಬಹುದು ಅವಳೀಗ! ಎಷ್ಟೊಂದು ಕನಿಕರದಿಂದ, ಹಾಲನ್ನಾದರೂ ಕುಡಿದು ಹೋಗಿರೆಂದಳು. ಮೂರ್ಖನಾದ ನಾನು ಸಂತಾಪದ ಭರದಲ್ಲಿ ಹಾಗೆಯೇ ಬಂದೆ. ತಾನೂ ಊಟಮಾಡದೆ ಹಾಗೆಯೇ ಕುಳಿತುಕೊಳ್ಳುತ್ತಾಳೆ.....ಮುದ್ದು ರಾಧೆ, ಏನಾಯಿತು ನಿನ್ನ ಗತಿ! ಸುಖಮಯವಾದ ಸಂಸಾರವನ್ನೆಲ್ಲ ಹಾಳುಮಾಡುತ್ತಿದ್ದೇನೆ! ಯಾವ ಆಕಾಂಕ್ಷೆಗಾಗಿ ಇಷ್ಟೊಂದು ಕಲಿತು, ಯಾವುದನ್ನೋ ಕೈಕೊಳ್ಳಲು ಹೋಗಿ ಎಲ್ಲಿಗೆ ಹೋಗಿ ಬಿದ್ದೆನಲ್ಲ! ... ಛೆ! .... ಹೇಯವಾದ ಕೆಲಸ ಇದು. .....ನನ್ನ ಕರ್ತವ್ಯವಿದಲ್ಲ—ಎಂದು ನನ್ನ ಮನೋದೇವತೆ ಹೇಳುತ್ತಿದ್ದರೂ, ಪರಿಸ್ಥಿತಿಯ ಅನಾನುಕೂಲತೆಯಿಂದು ಈ ಜಾಲದಲ್ಲಿ ಬಂದು ಬಿದ್ದೆ. ಈ ನೀಚನು ಸಿಕ್ಕ ಸಿಕ್ಕ ಜನರ ಮುಂದೆಯೇ ಬಿಚ್ಚುಗತ್ತಿಗಳನ್ನು ಬೀಸುತ್ತಿರುವನಲ್ಲ! ನಮ್ಮ ಮಾನ-ಮರ್ಯಾದೆಯನ್ನೆಲ್ಲ ಮಾರಿಕೊಂಡಿರುವೆಪೆ? ಇಷ್ಟು ದಿನಗಳ ವರೆಗೆ. ನನ್ನ ಮನೆಯ ಕೆಲಸವನ್ನೆಲ್ಲ ಬಿಟ್ಟು, ನನ್ನ ಸಾಹಿತ್ಯಾಭ್ಯಾಸವನ್ನೂ ಬಿಟ್ಟು, ಅವನ ಮನೆಯ ಅರ್ಧ ಕೆಲಸಗಳನ್ನೆಲ್ಲ ನಿರ್ವಹಿಸುತ್ತ ಬಂದರೂ, ಈ ದಿನ ಸ್ವಲ್ಪ ತಡವಾದದ್ದಕ್ಕೆ ಎಷ್ಟು ಹಾರಾಡಿದನಲ್ಲ! ಈ ದಿನ ಬೈಗಳು ದೊರೆತದ್ದು ಮೂರನೆಯ ಸಾರಿ.....ನಾನೇ ಮೂರ್ಖ..... ನನ್ನಲ್ಲಿಯ ಮನೋದೌರ್ಬಲ್ಯದ ಮೂಲಕವೇ ಕಷ್ಟಗಳಿಗೆ ಈಡಾಗುತ್ತಿದ್ದೇನೆ. ನನಗೆ ಸಿಕ್ಕುತ್ತಿರುವುದು ಸರಕಾರದ ಸಂಬಳ. ಇವನ ಕೋಟಿನೊಳಗಿನದಲ್ಲ. ಏಕನಿಷ್ಠೆಯಿಂದ, ಹಗಲು ರಾತ್ರಿಗಳೆನ್ನದೆ, ಬೀರುತ್ತಿದ್ದ ಬೈಗಳನ್ನು ಅಲಕ್ಷ್ಯಮಾಡಿಕೊಂಡು ದುಡಿದೆ. ನನ್ನ ಮನೆಯ ಸಂಸಾರಕ್ಕೇ ಹಣಸಾಲದಿರುವಾಗ, ಉಳಿದವರಂತೆ ನಾನು ಹೇಗೆ "ಇವನಿಗೆ "ಬೇಕು" ಗಳನ್ನೆಲ್ಲ ಪೂರೈಸುವುದು ಸಾಧ್ಯ? ಗೋಳಿನ ಬಾಳನ್ನು ಕರುಳು ಕಿತ್ತುವಂತೆ ಎಷ್ಟುಸಾರೆ ತೋಡಿಕೊಂಡರೂ, ನನ್ನ ಕೆಳಗಿನವರಿಗೇ ಮೇಲಿನ ಕೆಲಸ ಕೊಡಿಸಿದನಲ್ಲ! ರಾಧೆ ಎಂದಂತೆ 'ಏನಾಗ ಬೇಕಾಗಿದೆ ಇಂಥ ನೌಕರಿಯಿಂದ'! ಈ ದರಿದ್ರವಾದ ದಾಸ್ಯದ ದಾರಿಗೆ ಬರುವ ಮೊದಲು ಕೈಕೊಂಡಿದ್ದ ಆದರ್ಶವಿಚಾರಲಹರಿಗಳೆಲ್ಲ ಮನಸ್ಸಿನ ಮಂಡಿಗೆಗಳಾಗಿ ಹೋದುವಲ್ಲ! .....ಎಲಾ! ಸುಮ್ಮನೆ ಕೊರಗುತ್ತಿದ್ದೇನೆ. ಅರ್ಥವಿಹೀನವಾದ "ಜೀ ಜೀ" ಎಂಬುವ ಹವ್ಯಾಸವನ್ನು ಬದಿಗಿರಿಸಬೇಕು.....ಗಂಡುಸಾಗಿ ಬಾಳುವಾಗ ಎದುರಾಗಿ ಬರುವ ತೊಡರುಗಳೆಲ್ಲ ಸುಖದ ಸೋಪಾನಗಳೇ!"

ಮೋಹನನಲ್ಲಿ ಹೊಸ ಹುಮ್ಮಸು ಬಂತು. ಮನೆಗೆ ಹೊಗಲೇ ಬೇಕೆಂದು ಮತ್ತೆ ಕೋಟು ಹಾಕಿಕೊಂಡ.

"ರಾಯರಽ, ದೊಡ್ಡ ಸಾಹೇಬ್ರು ಕರೀತಾರ್ರಿ" ಆಳನಿಂದ ಕರೆಬಂದಿತು.

ಮೋಹನನ ಮೇಲೆ ವಿದ್ಯುತ್‌ಸಂಚಾರವಾದಂತಾಯಿತು.
"ಶಂಭೂ, ಹೆಡ್‌ಕ್ಲಾರ್ಕ್, ಎಲ್ಲಿದ್ದಾರೆ?"
"ಅವರೂ ಅಲ್ಲೇ ಇದ್ದಾರ್ರಿ."

"ಶಂಭೂ, ನನಗೆ ಊಟಕ್ಕೆ ಬರಲಿಕ್ಕಾಗುವುದಿಲ್ಲ ಎಂದು ಮನೆಯಲ್ಲಿ ತಿಳಿಸಿ ಬಾ ....ಬೇಗ ಬಾ ಮತ್ತೆ" ಎಂದು ಹೇಳಿ ಮೋಹನ ದೊಡ್ಡ ಸಾಹೇಬರ ಕಡೆಗೆ ಹೋದ.

ಒಳಗೆ ಕಾಲಿಡುವುದರಲ್ಲಿ ಸಾಹೇಬರ ಸ್ವರ ತಾರಸಪ್ತಕದಲ್ಲಿತ್ತು. "ಈ ಕಾಗದಗಳು ಇಷ್ಟು ತಡವಾಗಿಯೇಕೆ ತಯಾರಿಸಲ್ಪಟ್ಟವು? "I dont understand why there should be such an abnormal delay in disposing of such important cases. 'Office order' ಗೊತ್ತಿಲ್ಲವೇ ನಿನಗೆ? ಇಷ್ಟು ಮಹತ್ತ್ವದ ಕಾಗದಗಳನ್ನು ಮನಕ್ಕೆ ಬಂದಷ್ಟು ದಿನ ಇಟ್ಟುಕೊಳ್ಳುವುದಕ್ಕೆ ಮನೆಯ ಕೆಲಸವೆಂದು ತಿಳಿದುಕೊಂಡಿದ್ದಿಯೇನು?.... ಇಲ್ಲಿ ನೋಡಿ ಮಿಸ್ಟರ್ ಎಮ್. ಪಿ., ಇವನಿಂದ ಲೇಖೀ ಜವಾಬು ಬರಿಸಿಕೊಳ್ಳಿರೀ ಇವನ ಹತ್ತಿರ ಮತ್ತು ಏನಾದರೂ ಇಂಥ ಕಾಗದಗಳು ಕಂಡು ಬಂದಲ್ಲಿ ನೀವು ಹೊಣೆಗಾರರು. I wonder how my predecesors havewritten nicely about this fellow, Mr. M.-P.— ?." ಎಂ. ಪಿ. ಯವರು ತಮಗೂ ತಿಳಿಯದ ನಗೆಯೊಂದನ್ನು ನಕ್ಕರು.

ಯಾವ ಕಾಗದಗಳು? ತಡವೆಂದಾಯಿತು? ಮೋಹನನಿಗೆ ಸಂತಾಪ ಮತ್ತು ಆಶ್ಚರ್ಯ ಎರಡೂ ತುಂಬಿ ಬಂದುವು. ಸಾಹೇಬರ ಕಣ್ಣಿಗೆ ಇಂಗು ಹಚ್ಚಿ, ಒಂದಕ್ಕೆ ಎರಡು ಮಾಡಿ, ತನಗೆ ಬೇಡಾದವರ ಬಾಳನ್ನು ಬರಲು ಮಾಡುವ ಎಂ. ಪಿ. ಯವರದು ಈ ಬೂಟಾಟಿಕೆ—ಎಂದು ಮೋಹನನಿಗೆ ತಿಳಿಯದಿರಲಿಲ್ಲ. ಅದೂ ಹೊಸದಾಗಿ ಬಂದ ಈ ಸಾಹೇಬರಿಗೆ ತಿಳಿಸಿ ಹೇಳುವುದೆಂದರೆ ಅದೂ ಸಾಧ್ಯವಿಲ್ಲ. ಹೆಚ್ಚು ಮಾತಾಡಿದರೆ, Disceplinary action ಎಂದು ಹಿಂದೆ ನಾಲ್ಕೈದು ಜನರಿಗೆ ಆದಂತೆ, ಕಷ್ಟಕ್ಕೆ ಗುರಿಯಾಗ ಬೇಕಾಗುವುದು.

ಮೋಹನ ಪಿಟ್ಟೆನ್ನದೆ ಹೊರಗೆ ಬಂದ. "ಎಲ್ಲ ಕಛೇರಿಗಳಲ್ಲಿಯೂ ಹೀಗೇ ಉಂಟೇ? ಇಲ್ಲವೇ ನನ್ನ ಪಾಲಿಗಷ್ಟೇ ಪ್ರಾರಬ್ಧಕರ್ಮ ಭೋಗಿಸುವ ಯೋಗ ಬಂದಿದೆಯೇ? ಎಲ್ಲಿ ನೋಡಿದಲ್ಲಿ ವಿಷದ ಬಟ್ಟಲು. ಸಾಹೇಬರು ಸರಿಯಿದ್ದರೆ ನಡುವಿನವರ ರಂಭಾಟ. ನಡುವಿನವರು ಸರಿಯಿದ್ದರೆ ಸಾಹೇಬರ ಚೀರಾಟ. ನನ್ನ ಪಾಲಿಗೆ ಇಬ್ಬರೂ ನೂರ್ವಾಸರಾಗಿದ್ದಾರಲ್ಲ! ನನ್ನ ಮೊದಲಿನ ಬರೆವಣಿಗೆಯ ಜೀವನತೆಗೆ ಅವಮಾನಮಾಡಿ ಇಲ್ಲಿ ಹೊಕ್ಕೆನೆಂತಲೇ ಈ ಶಾಪ ದೊರೆತಿರಬಹುದೇ!.... ...." ಎಂದು ವಿಚಾರಗಳ ಜಡಿಮಳೆಯಲ್ಲಿ, ಹೇಗೋ ತೇಲುತ್ತ ತನ್ನ ಟೇಬಲ್ಲಿಗೆ ಬಂದ. ಸ್ವಲ್ಪ ವೇಳೆಯಲ್ಲಿ ಹೆಡ್‌ಕ್ಲಾರ್ಕ್ ಸವಾರಿಯು ಸಾಹೇಬರ ಕೋಣೆಯಿಂದ ಇವನೆಡೆಗೆ ಬಂದಿತು. ಮೋಹನ ಮುಖ ಮೇಲೆ ಮಾಡಿ ಅವನನ್ನು ಸ್ವಲ್ಪ ಜುಗುಪ್ಸೆಯಿಂದಲೇ ನೋಡುತ್ತಿರಲು, ಹೆಡ್‌ಕ್ಲಾರ್ಕ್‌ರು ತಾವೇ ಸುರುಮಾಡಿದರು: "ಸಾಹೇಬರು ಅತಿ ಸಂತಾಪಿಸಿದ್ದರು. "Dismiss" ಎನ್ನುವುದರಲ್ಲಿದ್ದರು. ನಾನೇ ಹೇಳಿದೆ. ಪಾಪ! ಸಂಸಾರಿಕ, ಸುಧಾರಿಸಿಕೊಳ್ಳಲಿಕ್ಕೆ ತಿಳಿಸುವೆನೆಂದು..... ಹೋಗಲಿ, ಇನ್ನಾದರೂ....."

ಮೋಹನ ಮಾತ್ರ ಈಗ ತಡೆಯಲಾರದೆ ನುಡಿದ:

"ನನ್ನಂಥ ಯಃಕಶ್ಚಿತ್ ಪಾಮರನ ಸಲುವಾಗಿ ಘೋರಯಾತನೆಗಳನ್ನು ಅನುಭವಿಸಿ ಬಂದ ನಿಮಗೆ ಅನಂತ ಧನ್ಯವಾದಗಳು. ನನ್ನನ್ನು ಕ್ಷಮಿಸಿ ಹೊರಡಿ!" ಎಂದವನೇ ಟೇಬಲ್ಲಿನ ಮೇಲೆ ಒಂದು ಕಾಗದ ತೆಗೆದುಕೊಂಡು ಏನೋ ಗೀಚಹತ್ತಿದ. ಹೆಡ್‌ಕ್ಲಾರ್ಕ್‌ರ ಹೇಸಿಮಾತು ಕೇಳಿ ಅಸಹ್ಯವೆನ್ನಿಸಿತ್ತು. ಬರೆಯುವದು ಮುಗಿದ ಮೇಲೆ ಅದನ್ನು ಮಡಿಸಿಕೊಂಡು ಕೆಸೆಯಲ್ಲಿಟ್ಟುಕೊಂಡ. ಹೆಡ್‌ಕ್ಲಾರ್ಕ್‌ರು ಕದಲದೇ ಇದ್ದುದನ್ನು ಕಂಡು, "ಯಾವ ಕಾಗದಗಳನ್ನೂ ಇಟ್ಟುಕೊಳ್ಳದಿರುವಾಗ, ಮತ್ತೊಬ್ಬರ ತಪ್ಪನ್ನು ನನ್ನ ಮೇಲೆ ಹೊರಿಸಿದಿರಿ. ತಪ್ಪಿಲ್ಲದವನಿಗೆ ತಪ್ಪುದಂಡನೆಯೇ? ನನಗೇ ಭಾರವಾದ ಕೆಲಸವನ್ನು ಒಪ್ಪಿಸಿದ್ದೀರಿ. ನನ್ನ ಎದೆಯ ಮೇಲೆ ಕತ್ತೆಭಾರವಾಗಿ ಬಿದ್ದಿರುವಾಗ, ಉಳಿದವರಿಗೆ ಬೇಡಿದಾಗ ರಜೆ ಕೊಡಿಸಿ, ಅವರ ಎಲೆಗಳಿಗಿನ ನೊಣಗಳನ್ನು ಝಾಡಿಸಲು ಹೇಳುತ್ತಿರುವಿರಿ! ನಿಮ್ಮ ನೌಕರಿಗೆ ಸಾಷ್ಟಾಂಗ ನಮಸ್ಕಾರ. ಭಯಂಕರವಾದ ಈ ಬಂಧನದಲ್ಲಿ ಸಿಕ್ಕಿ ಬಳಲುವುದಕ್ಕಿಂತ ಬೀದಿಯಲ್ಲಿ ಭಿಕಾರಿಯಾಗಿ ತಿರುಗುವುದೇ ಲೇಸು!" ಎಂದು ಆವೇಶಯುಕ್ತನಾಗಿ ಮಾತನಾಡಿದನು.

ಹೆಡ್‌ಕ್ಲಾರ್ಕ್‌ರು ಕಕ್ಕಾಬಿಕ್ಕಿಯಾದರು. ಬಾಯಲ್ಲಿಯ ತಂಬಾಕನ್ನು ಮತ್ತೊಮ್ಮೆ ಉಗುಳಿ ಬಂದರು. ಕ್ರೋಧ ಕುಣಿಯುತ್ತಿತ್ತು ಅವರ ಮುಖದ ಮೇಲೆ.

"ನನ್ನೆದುರಿಗೆ ಇಂಥ ಮಾತು! ಭಯಂಕರವಾದ ಅವಮಾನ! ಶಂಭೂ.... ಏ ಫ್ಯೂನ್ .... B. C. S. R. ತೆಗೆದುಕೊಂಡು ಬಾ, Discipline & Conduct Rules. ಅಷ್ಟೇ ಅಲ್ಲ. ಸಿಕ್ಕಿದ್ದನ್ನೆಲ್ಲ ತೆಗೆದುಕೊಂಡು ಬಾ. ಆರ, ಎಲ್ಲಿ ಹೋಗಿದ್ದಾನೆ ಶಂಭೂ— wretched fellow!"

ಹೆಡ್‌ಕ್ಲಾರ್ಕ್‌ರ ಮಾತು ಕೇಳಿ ಮೋಹನ ಜೇಸರಿಕೆಯಿಂದಲೇ ಮಾತನಾಡಿದ: "ಊಟಕ್ಕೆ ಬರುವುದಾಗುವುದಿಲ್ಲವೆಂದು ಮನೆಯಲ್ಲಿ ಹೇಳಿಬರಲು ಕಳಿಸಿಕೊಟ್ಟಿದ್ದೇನೆ."

"ಖಾಸಗೀ ಕೆಲಸಕ್ಕಾಗಿ ಅವನನ್ನು ಸಿಕ್ಕ ಸಿಕ್ಕಲ್ಲಿ ಕಳುಹುವ ನೀವು ಜನ, ಇದೇನು ಧರ್ಮಶಾಲೆಯೆಂದು ತಿಳಿದುಕೊಂಡಿದ್ದೀರೊ?"

ಮೋಹನ ಇನ್ನು ಮಾತನಾಡುವುದರಲ್ಲಿ ಅರ್ಥವಿಲ್ಲ ಎಂದು ಎದ್ದ. ಇಬ್ಬರು ಸರಕಾರೀ ಬಿಳುಗಳನ್ನು ಸದೈವ ಮನೆಯಲ್ಲಿ ದುಡಿಯಲಿಕ್ಕೆಂದು ಇಟ್ಟುಕೊಂಡಿರುವ ಈ ಮನುಷ್ಯ ಜಾತಿಯವನಿಗೆ, ಅನಿರ್ವಾಹಕ್ಕಾಗಿ ಐದು ನಿಮಿಷ ಈ ಆಳನ್ನು ಮನೆಗೆ ಕಳಿಸಿಕೊಟ್ಟದ್ದಕ್ಕೆ ಎಷ್ಟು ಮಾತ್ಸರ—ಎಂದು ಗುಣುಗುಣಿಸುತ್ತಲೇ ಹೊರಟ.

"ಏ! ಎಲ್ಲಿಗೆ ಹೊರಟೆ? ಕೇಳಿಸುವುದಿಲ್ಲವೇನು?...."

"ಇಲ್ಲಿ ನೋಡಿರಿ. ನಿಮ್ಮ ಮನೆಯ ನಾಯಿಗೂ 'ಏ' ಎನ್ನದೆ ಹೆಸರುಗೊಂಡು ಕರೆಯುತ್ತೀರಲ್ಲವೆ?.... ಆದರಲಿ! ನನಗೆ ಜ್ವರ ಬರುತ್ತಿದೆ. ತೆಗೆದುಕೊಳ್ಳಿರಿ ಇವನ್ನು" ಎಂದವನೇ, ಮೋಹನ ಗೀಚಿಟ್ಟುಕೊಂಡಿದ್ದ ಚೀಟಿಯನ್ನು ಮುಂದೆ ಒಗೆದು ಹೊರಟು

ಸಣ್ಣ ಕತೆಯಲ್ಲಿ ಸ್ವಾರಸ್ಯ!

ಇದನ್ನು ಬಯಸುವವರಿಗೆ ಹದಿನಾರು
ವರ್ಷಗಳಿಂದ ಪ್ರಿಯವಾಗಿರುವ
ಮಾಸಪತ್ರಿಕೆ

ಕತೆಗಾರ

ಪ್ರತಿ ಸಂಚಿಕೆಯಲ್ಲೂ
ಉತ್ತಮ ಸಣ್ಣಕತೆಗಳು,
ಕನ್ನಡ ಪತ್ರಿಕೆಗಳಲ್ಲಿ ಆಯಾ ತಿಂಗಳು ಪ್ರಕಟವಾದ
ಕತೆಗಳ ಪರಿಚಯ,
ಚಿತ್ರರಂಗವೀಕ್ಷಣ, ಇನ್ನೂ ಇತರ.....?
ಇವೆಲ್ಲ ಅಂದವಾದ ಅಚ್ಚುಕಟ್ಟಿನೊಳಗೆ.
ಬಿಡಿಪ್ರತಿ ನಾಲ್ಕಾಣೆಗೆ ದೊರೆಯುವುದು.
ವಾರ್ಷಿಕ ಚಂದಾ ಮೂರು ರೂಪಾಯಿ
(ಅಂಚೆ ಉಚಿತ.)

ಪ್ರಕಾಶಕರು

ಆರ್. ಎನ್. ನ್ಯೂಸ್ ಏಜನ್ಸಿ,
೬೬೫, ಚಿಕ್ಕಪೇಟೆ. ಬೆಂಗಳೂರು, ೨.

ಮೋಹನ. ಜೆಪ್ ಕ್ಲಾರ್ಕಿನ ತೆಗೆದು ನೋಡಿದರು:

"ವಾಜೀನಾಮೆ!!!" ಎಂದರು.

* * * *

ಮನೆಯಲ್ಲಿ ರಾಧೆಯು, ಹಿಂದಕ್ಕೆ ಮೋಹನನು ಬರೆದು ಒಗೆದ ಕಥೆ-ಕಾದಂಬರಿಗಳನ್ನು ಓದುತ್ತ ಕುಳಿತಿದ್ದಳು. ಮೋಹನನನ್ನು ಕಂಡು ಆಶ್ಚರ್ಯಪಟ್ಟಳು. ಊಟಕ್ಕೆ ಬರುವುದಾಗುವುದಿಲ್ಲವೆಂದು ಹೇಳಿ ಕಳಿಸಿ, ಅರ್ಧಗಂಟೆಯೊಳಗೇ ತಾವೇ ಬಂದು ಬಿಟ್ಟರಲ್ಲ! ಏನಾದರೂ ಹೇಳಿ ಜಗಳವು ಮಾಡಿಕೊಂಡು ಬಂದಿರಬಹುದು— ಎಂದು ತಿಳಿದಳು. ರಾಧೆಯ ಗಡಿಬಿಡಿಯನ್ನು ಕಂಡು ಮೋಹನ, ನಾನು ಊಟ ಮಾಡಲಾರೆನೆಂದು ಹೇಳಿ ಪಲಂಗಿನ ಮೇಲೆ ಉಶ್ಶೆಂದು ಒರಗಿದ. ರಾಧೆ ಗಾಬರಿಯಾದಳು. ನೈ ಹಿಡಿದು ನೋಡುತ್ತಾಳೆ, ಕುದಿಯುತ್ತಿತ್ತು.

"ಇದೇನಿದು! ಜ್ವರ ಬಂದಿದೆಯಲ್ಲ! ಡಾಕ್ಟರರನ್ನಾದರೂ ಕರೆಯಲೇ, ಹೀಗೇಕಾಯಿತು ನಿಮ್ಮ ಆರೋಗ್ಯ? ಈ ದಿನ ಊಟ ಕೂಡ ಮಾಡಲಿಲ್ಲ!"

"ಯಾರನ್ನೂ ಕರೆಯಬೇಡ. ನೀನೇ ನನಗೆ ವೈದ್ಯಳು. ಸ್ವಲ್ಪ ನಿಂಬೆಯ ರಸದ ಬಿಸಿ ಪಾನಕ ಮಾಡಿಕೊಂಡು ಬಾ.....ಇದೆಂಥ ಜ್ವರವೆಂದು ತಿಳಿದುಕೊಂಡಿರುವೆ? ಏರಿದಂತೆ ಕೂಡಲೇ ಇಳಿದು ಹೋಗುತ್ತದೆ!"

ರಾಧೆ ಓಡಿಹೋಗಿ ಪಾನಕವನ್ನು ಮಾಡಿಕೊಂಡು ತಂದಳು. ಮೋಹನ ಕುಡಿದ. ಕಣ್ಣು ಮುಚ್ಚಿದ. ಜಂಪು ಹತ್ತಿತು. ಅರ್ಧ ಗಂಟೆಯ ಮೇಲೆ ತಿರುಗಿ ಬಂದಳು. ಮೋಹನನ ಮೈಕುಂ ಬೆವರು ಸುರಿಯುತ್ತಿತ್ತು. ಒರಸಿದಳು. ಎಚ್ಚರಾದ.

"ಇದೀಗ ಸ್ವಲ್ಪ ಆರಾಮವೆನಿಸುತ್ತಿದೆ" ಎಂದ.

"ನಾನು ಗಾಬರಿಯಾಗಿದ್ದೆ.....ಎಲ್ಲಿ ಜ್ವರ ಏರುತ್ತದೆಯೊ ಎಂದು."

"ಛೀ, ಶೀತ-ಪಿತ್ತ ಜ್ವರ ಇದು—"

"ನನಗೆಲ್ಲ ತಿಳಿದು ಹೋಗಿದೆ, ಇದೇ ಈಗ ಮತ್ತೆ ಶಂಭು ಗಾಬರಿಯಾಗಿ ಬಂದು ಹೇಳಿದ.....ನೀವು ಮಾಡಿದ್ದು ಕಡೆಯ ನಿರ್ಧಾರವೇನು?"

"ಹೌದು"

"ಜನರು ಹುಚ್ಚು ಗಿಚ್ಚು ಹಿಡಿದಿದೆಯೇನು ಎಂದು ಕೇಳಿದರೆ?

"ಕೇಳಲಿ. ಏನೂ ಅಗತ್ಯವಿಲ್ಲ. — ಅದೇಕೆ ಹುಚ್ಚು ಹಿಡಿಯಬಾರದು? ನಿನ್ನ ಹುಚ್ಚು ಹಿಡಿದಿದೆ ನನಗೆ! ನಿ ಹೊರತು ನನಗೆ ಮಿಕ್ಕುದೆಲ್ಲ ಶೂನ್ಯವಾಗಿದೆ. ಇಷ್ಟುದಿನಗ ವರೆಗೆ ಮೃಗಜಲಂತಿರುವ ಈ ನೌಕರಿಯ ಸುಖದ ಆ ಬಲಿ ಬಿದ್ದು, ಈಗ ಬಯಲಿಗೆ ಬಂದೆ. ನಮ್ಮಂಥವರು ಆ ನಿರುಪಯೋಗಿಗಳು. ಅಲ್ಲಿ ಜೇಕು ವಿಚಿತ್ರಜನ. ಆದೆಲ್ಲ ಅವಣ ನೀಯವಾಗಿದೆ. —ನಿನ್ನನ್ನು ಕಷ್ಟಗಳ ಮೇಲೆ ಕಷ್ಟಕ್ಕೆ ಗು ಮಾಡಿದೆ. ನಿನ್ನ ಸೌಜನ್ಯ-ಸಹನಶೀಲತೆಗಳ ಪರೀಕ್ಷೆಯ ಪ ಮಾವಧಿಯಾಯಿತು. ಅರಾಜಕತೆಯಿಂದ ತುಂಬಿದ ಈ ವ್ಯೂಹವನ ಸೇರಿ ಏನು ಬಳೆದುಕೊಳ್ಳಬೇಕಾಗಿದೆ?"

"ಮುಂದೆ?"

"ಮುಂದೇನು! ಬುದ್ಧಿಯಿದ್ದವನು ಗುದ್ದಿ ತೆಗೆಯಬಹುದು ಹೊಟ್ಟೆಗಾಗಿ ವಿಚಾರವೇ! ದೇವರು ಈ ಜಗತ್ತನ್ನು ನಮಗಾಗಿಯೆ ನಿರ್ಮಿಸಿದ್ದಾನೆ. ಸುದೈವದಿಂದ ನನಗೆ ಮಾತಾಡಲು ಬಾಯನ್ನು ಬರೆಯಲು ಶಕ್ತಿಯನ್ನೂ ಕೊಟ್ಟಿದ್ದಾನೆ. ಮೇಲೆ ಈ ಸ್ತ್ರೀರತ್ನ ವನ್ನು ದಯಪಾಲಿಸಿದ್ದಾನೆ. ಇಂಥ ಸಂಪತ್ತಿಗಿಂತ ಮತ್ತಿನ್ನೇ ಬೇಡುವುದು! ..... ನಿನ್ನ ಊಟ ಆಯಿತಲ್ಲವೇ?....."

"ನನ್ನ ಹೊಟ್ಟೆ ತುಂಬಿತು" ಎಂದವಳೇ ರಾಧೆ ಮೋಹನನ್ನು ತಬ್ಬಿಕೊಂಡಳು.

* * * *

ಮುಂದೆ ಐದಾರು ವರುಷಗಳ ಮೇಲೆ, ಈ ಸಂಸಾರಿಗಳನ್ನು ನೋಡುವ ಭಾಗ್ಯ ಲಭಿಸಿತು. ಈಗ ಅವರಿಗೆ ಎರಡು ಗಂ ಮಕ್ಕಳು. ಒಂದು ಹೆಣ್ಣು ಕೂಸು. ರಾಧೆ-ಮೋಹನರ ಜೋ ಎಂದಿನಂತೇ ಕಂಡುವು. ಈಗ ಅವರು ಬಂದಿಗಳಾಗಿಲ್ಲ. ಮೋಹ ನೀಗ ದೊಡ್ಡ ಸಾಹಿತಿ. ರಾಧೆ ಅವನ ಸ್ಫೂರ್ತಿದೇವತೆ.

ಅಚ್ಚಿನಲ್ಲಿದ್ದ ಅವನ ಹನ್ನೆರಡನೆಯ ಕಾದಂಬರಿಗಾಗಿ ಜನ ಆ ಉತ್ಸಾಹದಿಂದ ಕಾಯ್ದುಕೊಂಡು ಕುಳಿತಿದ್ದಾರೆ. ಅದರ ಹೆಸ "ಮರಳಿ ಮನೆಗೆ."

* *

ಕನ್ನಡ ಹಳ್ಳಿಗರ ಹಟ್ಟಿಯ ಹಬ್ಬ

(ಪರಂಪರೆಯ ಪರಿಚಯ)

ಡಿ. ಬೆಟಗೇರಿ ಕೃಷ್ಣಶರ್ಮ

ವಿಂಧ್ಯದ ದಕ್ಷಿಣಪ್ರದೇಶದಲ್ಲಿ ದೀಪಾವಳಿಯು ಸಾರ್ವಜನಿಕ ಹಬ್ಬ. ನಮ್ಮ ನಾಗರಿಕ ಸಮಾಜವು ದೀಪಾವಳಿಯ ಒಂದೊಂದು ದಿನಗಳಿಗೂ ಒಂದೊಂದು ಪೌರಾಣಿಕ ಕಥಾಸಂದರ್ಭಗಳನ್ನು ಹೊಂದಿಸಿ, ಒಂದೊಂದು ಪೌರಾಣಿಕ ಮಹಾವ್ಯಕ್ತಿಯ ನೆನಪಿನ ದಿನವನ್ನಾಗಿ ಆಚರಿಸುತ್ತದೆ. ಆದರೆ ಜನಸಾಮಾನ್ಯರು ಈ ಹಬ್ಬ ಆಚರಿಸುವ ರೀತಿಯನ್ನು ನೋಡಿದರೆ, ಇದು ನಮ್ಮ ಮೊದಲಿಗರ ಗೋವರ್ಧನ ಪೂಜೆಯ ಪರಂಪರೆಯನ್ನು ಕಾಯ್ದುಕೊಂಡು ಬಂದುದು ವ್ಯಕ್ತವಾಗುವುದು. ಕೇವಲ ದನಗಾಹಿಗಳಾದ ಗವಳಿಗರಿಗೂ ಕುರುಬರಿಗೂ ಇದೊಂದು ಸಂಭ್ರಮದ ಹಬ್ಬ. ಎಂತಲೇ ನಮ್ಮ ಕನ್ನಡ ನಾಡಿನ ಹಳ್ಳಿಗರು, ದೀಪಾವಳಿಯನ್ನು 'ಹಟ್ಟಿಯ ಹಬ್ಬ' ಎಂದು ಕರೆಯುವರು. 'ಹಟ್ಟಿ' ಎಂದರೆ ದನಗಳ ವಸತಿ—ಅದರಂತೆಯೆ ದನಗಾಹಿಗಳ ವಸತಿ. 'ಹಟ್ಟಿ' ಎಂಬುದಕ್ಕೆ ಸಮಾನವಾದ ಸಂಸ್ಕೃತ ಶಬ್ದ 'ಗೋಕುಲ' ಎಂದು. ಗೋಕುಲಕ್ಕೆ ಸಂಬಂಧಿಕರಾದ ಚಂದ್ರವಂಶದ ಕ್ಷತ್ರಿಯರಿಂದ—ಆವರ ಅನುಯಾಯಿಗಳಿಂದ—ಈ ಹಬ್ಬ ನಡೆದುಕೊಂಡು ಬಂದಿರಬಹುದಾದುದರಿಂದಲೇ, ಯಾದವ ಕುಲದ ಕೃಷ್ಣನ ಮತ್ತು ಕುರುಕುಲದ ಪಾಂಡವರ ಸಂಬಂಧವನ್ನು ನಮ್ಮ ಸನಾತನಿಗರು ಈ ಹಬ್ಬಕ್ಕೆ ಹಚ್ಚುತ್ತಿರುವರು.

ನಮ್ಮ ನಾಗರಿಕರ ರೀತಿಯಂತೆ ಆಶ್ವಿನ ವದ್ಯ ದ್ವಾದಶಿಯಿಂದ ಈ ಹಬ್ಬ ಪ್ರಾರಂಭವಾಗುವುದು. ಇದನ್ನು 'ವಸುದ್ವಾದಶಿ' ಎಂದು ಹೇಳುವರು. 'ವಸು' ಎಂಬುದು ಸಂಪದ್ವಾಚಕ ಶಬ್ದವಾದರೂ, ಅಂದು ಅವರು ಪೂಜಿಸುವುದು ಆಕಳನ್ನು. ಮರುದಿನ 'ಧನತ್ರಯೋದಶಿ,' ಆದರ ಮರುದಿನ 'ನರಕ ಚತುರ್ದಶಿ.' ಅಮಾವಾಸ್ಯೆ-ಪ್ರತಿಪದೆಗಳಂತೂ ಸಂಪತ್ತಿನ ಪೂಜೆಯ ದಿನಗಳು. ಪ್ರತಿಪದೆಯನ್ನು 'ಬಲಿ ಪ್ರತಿಪದೆ' ಎಂದು ಕರೆದು, ಬಲಿಚಕ್ರವರ್ತಿಯ ಪೌರಾಣಿಕ ಕಥೆಯನ್ನು ಆ ದಿನಕ್ಕೆ ಅನ್ವಯಿಸುವರು. ದೀಪಾವಳಿಯ ಮುಖ್ಯ ದಿನಗಳಿವು.

ನಮ್ಮ ಕನ್ನಡನಾಡಿನ ಹಳ್ಳಿಗರು ಆಚರಿಸುವ ದೀಪಾವಳಿಯ ದಿನಗಳೆಂದರೆ ಚತುರ್ದಶಿ, ಅಮಾವಾಸ್ಯೆ, ಪ್ರತಿಪದೆ ಮೂರೇ ದಿನಗಳು. ಅದರಲ್ಲಿಯೂ ಪ್ರತಿಪದೆಯೆ ಮುಖ್ಯ ಸಮಾರಂಭದ ದಿನ. ಅಂದು ದನಗಳ ಪೂಜೆ-ಪ್ರದರ್ಶನಗಳು ಊರೂರಲ್ಲಿಯೂ ವಿಜೃಂಭಣೆಯಿಂದ ನಡೆಯುವವು. 'ಕುರಿ ಜೆದರಿಸುವುದು' ಎಂಬುದೊಂದು ಪದ್ಧತಿ ಎಲ್ಲ ಹಳ್ಳಿಗಳಲ್ಲಿಯೂ ನಡೆಯುವುದು. ಅಂದು ಹಳ್ಳಿಯ ಕುರುಬರು ತಂತಮ್ಮ ಕುರಿಗಳ ಹಿಂಡನ್ನೂ ದನಗಳನ್ನೂ ತುರುಮಂಡೆಯಲ್ಲಿ ತರುಬಿ, ಒಟ್ಟಾಗಿ ಪೂಜೆ ಮಾಡುವರು. ಹೊನ್ನವರೆ ಹೂ- ಅರಿಸಿಣ-ಕುಂಕುಮಗಳ ಭಂಡಾರ ಸೂರೆಯಾಗುವುವು. ಮನೆ-ಮನೆಯ ಮುತ್ತೈದೆಯರು ಆರತಿ ತೆಗೆದುಕೊಂಡು ಬಂದು ಪೂಜಾನೆಪದಗಳನ್ನು ಹಾಡುತ್ತಿರುವರು. ಆ ಪದಗಳನ್ನು ನೋಡಿದರೆ, ಹಳ್ಳಿಗರು ಆಚರಿಸುವ ದೀಪಾವಳಿಗೆ ನಾಗರಿಕರ ಪೌರಾಣಿಕ ಹಬ್ಬವಾಗಿರದೆ, ತಮ್ಮ ಜೀವಧನವಾಗಿರುವ ಹಟ್ಟಿಯ ಹಬ್ಬವೆಂಬುದೇ ಒಡೆದುಕಾಣುವಂತಿರುವುದು. ಅವರ ಹಾಡಿನಲ್ಲಿ 'ಬಲ್ಲಾಳ ಬಲೀಂದ್ರ' ಎಂಬುದೊಂದು ವ್ಯಕ್ತಿ ಕೊಂಡಾಡಿಸಿಕೊಳ್ಳುತ್ತದೆ. ಆದರೆ ಈ 'ಬಲ್ಲಾಳ ಬಲೀಂದ್ರ' ಪೌರಾಣಿಕ ಬಲಿಂದ್ರನಾಗಿರದೆ. ಯಾವನೋ ಒಬ್ಬ ದನಗಾಹಿಗಳ ಹಿರಿಯನಾಗಿರಬಹುದೆಂಬುವನ್ನು ನಾವಲ್ಲಿ ಕಾಣುವೆವು ನಮ್ಮ ನಾಡಿನಲ್ಲಿ ತಲೆತಲೆಯಿಂದ ನಡೆದುಕೊಂಡಬಂದು, ಹಳ್ಳಿ-ಹಳ್ಳಿಯಲ್ಲಿಯೂ ಹಬ್ಬಿಹರಡಿರುವ ಒಂದು ದೀಪಾವಳಿಯ ಹಾಡನ್ನು, ಶ್ರೀಯುತ ದೇವೇಂದ್ರ ಫುಕಾಳೆ, ಹಾನಗಲ್ಲ ಎಂಬವರು ಸಂಗ್ರಹಿಸಿ ಕಳುಹಿದ್ದಾರೆ. ಅದನ್ನು ಇಲ್ಲಿ ಪ್ರಕಟಿಸಲಾಗಿದೆ. ಇಂತಹ ಜಾನಪದ ಸಾಹಿತ್ಯದಿಂದ, ನಮ್ಮ ನಾಡಿಗರ ಇತಿಹಾಸವನ್ನೂ ಸಂಸ್ಕೃತಿ-ನೀತಿ-ರೀತಿಗಳನ್ನೂ ನಾವು ಕಂಡುಹಿಡಿಯಬಹುದಾಗಿದೆ:

ದೀಪಾವಳಿಯ ಹಾಡು

ಸಂಗ್ರಾಹಕರು: ದೇ. ಫುಕಾಳೆ ದೇವೇಂದ್ರ, ಹಾನಗಲ್ಲ

ಬಲ್ಲಾಳ ಬಲವಿಂದ್ರನ ರಾಜೀಕೆಲ್ಲಾರು ಸಿರಿವಂತರ* ‖ ಪ ‖
ಬಲ್ಲಾಳ ಬಂದು ಬಗಲಾಗ ನಿಂತರ
ಹುಲ್ಲ ಕಡ್ಡೆಲ್ಲಾಽ ದನವನನವ ‖

ಹುಲ್ಲಕಡ್ಡೆಲ್ಲಾ ದವನವ ನನ್ನೂರ
ಕಲ್ಲಾಗ ಎಲ್ಲಾಽ ತಿಳಿಯಽ ನೀರ ‖ ೧ ‖
ಹಾಲು ಬಾನಾವ ಉಂಡಾನಣ್ಣಯ್ಯ
ಹವಳದ ಕೊಡಲೀ ಹೆಗಲೀಗೆ ‖
ಹವಳದ ಕೊಡಲೀ ಹೆಗಲೀಗೆ ಹಿಡಕೊಂಡು
ಹೋದಾನ ಹೊನ್ನತ್ತೀ ಹಳಽವಾಕ ‖ ೨ ‖

* ಈ ಪಲ್ಲವಿಯನ್ನು ಹಿಮ್ಮೇಳದ ಹೆಣ್ಣುಮಕ್ಕಳು, ಪ್ರತಿಪದ್ಯಾರ್ಧವನ್ನು ಗಂಡಸರು ಅನಂತರ ಹೇಳಿ ಪೂರೈಸುವರು. —ಸಂ.

ಹೋ ದಾನ ಹೊನ್ನತ್ತೀ ಹಳವಾಕಣ್ಣಯ್ಯ
ಅವಿನ ಗೂಟಾ ಕಡದಾನ ॥

ಅವಿನ ಗೂಟಾ ಕಡದಾನಣ್ಣಯ್ಯ ತನ್ನ-
ಅವಿನ ಗೂಟಾ ನಿಲಸ್ಯಾನ ॥ ೩ ॥

ತುಪ್ಪಾಬಾನಾವs ಉಂಡಾನಣ್ಣಯ್ಯ
ಒಪ್ಪುಳ್ಳ ಕೊಡಲೀ ಹೆಗಲೀಗೆ ॥

ಒಪ್ಪುಳ್ಳ ಕೊಡಲೀ ಹೆಗಲೀಗೆ ಹಿಡಕೊಂಡು
ಹೋದಾನ ಹೊನ್ನತ್ತೀ ಹಳವಾಕ ॥ ೪ ॥

ಹೋದಾನ ಹೊನ್ನತ್ತೀ ಹಳವಾಕಣ್ಣಯ್ಯ
ಎತ್ತೀನ ಗೂಟಾ ಕಡದಾನ ॥

ಎತ್ತಿನ ಗೂಟಾ ಕಡದಾನಣ್ಣಯ್ಯ ತನ್ನ-
ಎತ್ತೀನ ಗೂಟಾ ನಿಲಸ್ಯಾನ ॥ ೫ ॥

ಹತ್ತs ಬಾರದ ಗುಡ್ಡಾ ಹತ್ತ್ಯಾವೊ ನಿನ್ನೆತ್ತು
ಹತ್ತಿ ಮತ್ತಿಳಯೋನವರಿಯವ ॥

ಹತ್ತಿ ಮತ್ತಿಳಯೋವರಿಯವ ಅಣ್ಣಯ್ಯ
ತೋಟೋ ನಿನ ಕೈಯಾನ ಶಕಿಯವ ॥ ೬ ॥

ಏರs ಬಾರದ ಗುಡ್ಡಾ ಏರ್ಯಾವ ನಿನ್ನೆತ್ತು
ಏರಿ ಮತ್ತಿಳಯೋದರಿಯಸವ ॥

ಏರಿ ಮತ್ತಿಳಯೋದರಿಯವ ಅಣ್ಣಯ್ಯ
ತೋಟೋ ನಿನ ಕೈಯಾನ ಕೊಳಲ್ಕವ ॥ ೭ ॥

ಮುತ್ತಿನ ಗ್ವಾದೂನಿ ಮುತ್ತೀನ ಡಾವೂಣಿ
ಮುತ್ತನಂಥೆತ್ತೊಂದ್ಹಂದಿನಾಕರ ॥

ಮುತ್ತೀನಂಥೆತ್ತೊಂದ್ಹದೀನಾರಣ್ಣಯ್ಯ ತನ್ನ-
ಎತ್ತು ಬಂದ ಹಟ್ಟೀ ನಿಲಸನಿಂತ ॥ ೮ ॥

ಹವಳದ ಗ್ವಾದೂನಿ ಹವಳವ ಡಾವೂಣಿ
ಹವಳದಂಥೆತ್ತೊಂದ್ಹಂದಿನಾಕರ ॥

ಹವಳದಂಥೆತ್ತೊಂದ್ಹದಿನಾರಣ್ಣಯ್ಯ ತನ್ನ-
ಎತ್ತು ಬಂದ ಹಟ್ಟೀ ನಿಲಸನಿಂತ ॥ ೯ ॥

ಹತ್ತೂ ಬೆರಳೀಗೆs ಹತ್ತು ಹೊನ್ನುಂಗರ
ಹಟ್ಟೀಗೆ ಕಾಯs ಒಡಿಯಸವನ ॥

ಹಟ್ಟೀಗೆ ಕಾಯs ಒಡದಾನಣ್ಣಯ್ಯ ತನ್ನ-
ರಟ್ಟೀ ನಿರಿ ಲಕುಮಿಾ ಒಲಿಯಾಕಲಿ ॥ ೧೦ ॥

ಆರು ಬೆರಳೀಗೆs ಆರು ಹೊನ್ನುಂಗುರ
ಗಾಲಿಗೆ ಕಾಯs ಒಡಿಯಸವನ ॥

ಗಾಲೀಗೆ ಕಾಯs ಒಡದಾನಣ್ಣಯ್ಯ ತನ್ನ-
ತೋಳ ಸಿರಿ ಲಕುಮಿಾ ಒಲಿಯಾಕಲಿ ॥ ೧೧ ॥

ಎತ್ತಿನ ಹಿಂಡ ಬರುವಾಗs ಉಪ್ಪರಿಗ್ಯಾಗ ನಾಯಿದ್ದೆ
ಮುತ್ತಿನ ಆರೂತೀ ಹಿಡಕದೀದ್ದೆ ॥
ಮುತ್ತೀನಾರೂತೀ ಹಿಡಿದಿದ್ದಣ್ಣಯ್ಯ ತನ್ನ-
ಎತ್ತು ಬಂದ ಹಟ್ಟೀ ನಿಲಸನಿಂತ ॥ ೧೨ ॥

ಅವಿನ ಹಿಂಡ ಬರುವಾಗs ಅವರಿಗ್ಯಾಗ ನಾಯಿದ್ದೆ
ಹೂವಿನಾರೂತೀ ಹಿಡಕದಿದ್ದೆ ॥
ಹೂವಿನಾರೂತೀ ಹಿಡದಿದ್ದೆ ಅಣ್ಣಯ್ಯ ತನ್ನ-
ಅವು ಬಂದ ಹಟ್ಟೀ ನಿಲಸ ನಿಂತ ॥ ೧೩ ॥

ಎಮ್ಮಾ ಹಿಂಡ ಬರವಾಗs ಚಿಮ್ಮಳಿಗ್ಯಾಗ ನಾಯಿದ್ದೆ
ಬಣ್ಣದಾರೂತೀ ಹಿಡಕದಿದ್ದೆ ॥
ಬಣ್ಣದಾರೂತೀ ಹಿಡಿದಿದ್ದಣ್ಣಯ್ಯ ತನ್ನ-
ಎಮ್ಮಾ ಬಂದ ಹಟ್ಟೀ ನಿಲಸನಿಂತ ॥ ೧೪ ॥

ಇಪ್ಪಿಯ ಹೂವಿನ ಇಪ್ಪತ್ತೊಂದಾರೂತೀ
ನಾರಿ ತಾಯವ್ವಾ ನಿನ ಮನಿಕಯಾಗ ॥
ನಾರಿ ತಾಯವ್ವಾ ನಿನ ಮನಿಯಾಗ ಆ ಲಕ್ಷ್ಮಿ
ಮುತ್ತಿನ ಸರ ಬೇಡೀಕ ಮುನಸದಾಳ ॥ ೧೫ ॥

ವರಸಕ ಬರಪೋದು ಆರಸಪ್ಪ ದೀವಳಿಗಿ
ಆರಸ ನಿನ ಮನೀಗೇ ಅಳಿಯ ಬಂದಾ ॥
ಆರಸ ನಿನ ಮನಿಗೇ ಅಳಿಯ ಬಂದಾ ತಂಗೆವ್ವಾ
ಅರಿಸಿಣದ ಸೆರಗs ಮರಿಯs ಮಾಡ ॥ ೧೬ ॥

ತಿಂಗಳಿಗೆ ಬರಪೋದು ನಂದಪ್ಪಾ ದೀವಳಿಗೆ
ತಂಗೀ ನಿನ ಮನಿಗೇ ಅಳಿಯ ಬಂದಾ ॥
ತಂಗೀ ನಿನ ಮನಿಗೇ ಅಳಿಯ ಬಂದಾ ತಂಗೆವ್ವಾ
ಗೊಂಡೇದ ಸೆರಗs ಮರಿಯs ಮಾಡ ॥ ೧೭ ॥

ಹಾದ್ಯಾಗ ಹುಟ್ಟೋದೊಂದು ಹಾಲಗುಂಬಳಕಾಯಿ
ಹಾಲಾಕೀ ಅದಕs ಮೆಣಸಾಕಿ
ಹಾಲಾಕೀ ಅದಕs ಮೆಣಸಾಕೀ ಪಾಂಡವರ
ತಾಯಿಾ ಅಟ್ಟಾಳೊಂದ ಅಡಗೀಯ ॥ ೧೮

ಹಟ್ಟೀಯ ಲಕ್ಕವ್ವಾ ಮತ್ತೇನೂ ಬೇಡ್ಯಾಳ
ಕೊಪ್ಪ ಮಾಡಿಸಿ ಕೋಡೋ ಹಿರಿಯಣ್ಣಾ ॥
ಕಂದನೂರಾಗಲೀ ಕರ ನೂರಾಗಲೀ ತಪ್ಪಿದ ಕರ
ಬಂದ ಹಟ್ಟೀ ಹೋಗಲಿ ಮತ್ತೊಂದ ಕರಾs ಒದಗಲೆ ॥

["ತೀರಿಗೆ ಕರ ಹೆಚ್ಚ ಮುರೀಗೆ ವಸೂರಿ ಹೆಚ್ಚ ವರಾಳೊಂದು ಹಿಡಿ ಹುಲ್ಲಾದರೂ ಕೊಂಡಾ ಹೋಯಿಸವೆ" ಎಂದೂ ಪ್ರತಿಜ್ಞೆ ಮಾಡಿ ಆರತಿ ಬೆಳಗಾಡರು.]

ಸತ್ತಿ!

(ಜಾನಪದ ಕತೆ)

ಶ್ರೀ. ವೀ.ಚ. ಹಿತ್ತಲಮನಿ, ಬಿ ಎಸ್‌ಸಿ., (ಆಗ್ರಿ) ಧಾರವಾಡ

★

ಕತೆಯ ಘಟನೆ ನಡೆದಿರಲಿ, ನಡೆಯದಿರಲಿ! ಸ್ಥಳ-ಕಾಲ-ವಾತಾವರಣಗಳನ್ನು ಅನುಲಕ್ಷಿಸಿ ಕಟ್ಟಿದ ಕನ್ನಡ ರಸಹೃದಯವೊಂದರ ನೈಪುಣ್ಯ, ಈ ಕತೆಯಲ್ಲಿ ಜೀವಕಳೆಯನ್ನು ತುಂಬಿಬಿಟ್ಟಿದೆ

★

'ಸತ್ತಿ' ಎಂಬುದು ಒಂದು ಹೆಣ್ಣಿನ ಹೆಸರಲ್ಲ; ನನ್ನ ಗೆಳೆಯರೊಬ್ಬರ ಊರ ಹೆಸರು. ಅದನ್ನು ಈಗ 'ಸತ್ತಿ'ಯೆಂದು ಕರೆಯುವವರು ತೀರ ಸ್ವಲ್ಪ ಜನರು ಮಾತ್ರ. ಸುಧಾರಿಸಿದವರು ಅದನ್ನು 'ಸತ್ತಿಯೂರು' ಎಂದು ಕರೆದರೆ, ಹಳ್ಳಿಯ ಇತರರೆಲ್ಲರೂ 'ಸಂತಿಯೂರು,' ಎಂದೇ ಕರೆಯುವ ವಾಡಿಕೆ. 'ಸತ್ತಿ' ಬೆಳಗಾಂವಿ ಜಿಲ್ಲೆಯಲ್ಲಿಯ ಒಂದು ಹಳ್ಳಿ. ಅಥಣಿ ತಾಲೂಕಿನಲ್ಲಿ, ಅಥಣಿಯಿಂದ ಹತ್ತು ಮೈಲುಗಳ ಮೇಲಿರುತ್ತದೆ. ಸತ್ತಿಗೆ ಹೋಗಲಿಕ್ಕೆ ಅಥಣಿಯಿಂದ ಲೈನುದಾರಿಯೂ ಇದೆ.

'ಸತ್ತಿ' ಹಳ್ಳಿಯಾದರೂ ತುಂಬಾ ಆಕರ್ಷಣೀಯವಾಗಿದೆ. ಬಯಲುಸೀಮೆಯಲ್ಲಿ, ಅನಿಶ್ಚಿತ ಮಳೆಯ ಪ್ರದೇಶದಲ್ಲಿ, ಸಾಹಸಿಗಳಾದ ಊರ ಮಕ್ಕಳೊಂದಿಗೆ, ಕೃಷ್ಣೆಯ 'ಎಡದಂಡೆಯ ಮೇಲೆ ನಿಂತಿದೆ. ಸುತ್ತಣ ಜನರು ತುಡುಗು, ದರೋಡೆ, ಕೊಲೆ-ಸುಲಿಗೆಗಳಿಗೆ ಕುಪ್ರಸಿದ್ಧರಾಗಿದ್ದಾರೆಂದು ಕೇಳಿದ್ದೇನೆ; ಆದರೂ ಆ ಹಳ್ಳಿಯಲ್ಲಿ ಅಂಥದೇನೂ ನಡೆಯುವುದಿಲ್ಲ. ಆ ದೃಷ್ಟಿಯಲ್ಲಿ ಆ ಹಳ್ಳಿಗರು ಸುಧಾರಿಸಿದವರೆಂದೇ ಹೇಳಬೇಕಲ್ಲವೇ? ಕನ್ನಡಶಾಲೆ, ಅಂಚೆಯಕಚೇರಿ, ಪೋಲೀಸ ಚೌಕಿ ಮೊದಲಾದುವುಗಳು ಆ ಹಳ್ಳಿಯಲ್ಲಿರುವ ಹೆಚ್ಚಿನ ಸವಲತ್ತುಗಳು.

ಮಳೆಗಾಲದಲ್ಲಿ ನೀರು ಏರಿ ಬರುವಷ್ಟು ಸ್ಥಳವನ್ನು ಬಿಟ್ಟು, ಒಂದಿನಿತು ದೂರದಲ್ಲಿಯೆ, ದಿನ್ನೆಯ ಮೇಲೆ ಊರನ್ನು ಕಟ್ಟಿದ್ದಾರೆ. ಸನಿಯಕ್ಕೆ ಹೋದ ಹೊರತು, ಮಂದಗಮನದಿಂದ ಹರಿದು ಹೋಗುವ ಕೃಷ್ಣೆಯು ಕಾಣಿಸುವುದಿಲ್ಲ. ಬೇಸಗೆಯ ದಿನಗಳಲ್ಲಿ ಹೊಳೆಯು ಒಂದಿನಿತು ದೂರವೆನಿಸುವುದು. ಗುಂಪುಗುಂಪುಗಳಾಗಿ ತಲೆಯ ಮೇಲೆ ನೀರಿನ ಕೊಡಗಳನ್ನೋ ಒಗೆಯುವ ಆರಿವೆಗಳನ್ನೋ ಇಟ್ಟುಕೊಂಡು, ಸೀರೆಯ ನಿರಿಗೆಗಳಿಂದ 'ಸರಬರ' ಸದ್ದುಗೈದು, ಕೈಯ ಬಳೆಗಳ ಮಂಜುಳ ಧ್ವನಿಯೊಂದಿಗೆ ನಕ್ಕು ಕೆಲಿದು ನಡೆದ ರಮಣೀಮಣಿಯಂದಕ್ಕೇನೂ ಅದು ಹೆಚ್ಚು ದೂರವಲ್ಲ! ಎತ್ತಿನ ಮೇಲೆ ಕಂಟಲಿ ಹಾಕಿ-- ಇಲ್ಲನೆ ಚಕ್ಕಡಿಯ ಮೇಲೆ ಹಂಡೆಗಳನ್ನಿರಿಸಿ ನೀರುತರುವವರಿಗಂತೂ ದೂರದ ಕಲ್ಪನೆಯೇ ಬಾರದು. ಮುಂಜಾನೆಯಿಂದ ಸಂಜೆಯವರೆಗೆ ಮೈಮೇಲೆ ವಸ್ತ್ರ, ಪಂಚೆ ಇಲ್ಲವೆ ಧೋತರಗಳನ್ನು ಹಾಕಿಕೊಂಡು ಸ್ನಾನಕ್ಕೆಂದು ಹೊಳೆಗೆ ಹೋಗುವ, ಮಕ್ಕಳನ್ನೊಳಗೊಂಡು ಮುದುಕರವರೆಗಿನವರಿಗೆ 'ಹೊಳೆಯು ಇಷ್ಟು ದೂರದಲ್ಲಿರದೆ ಸನಿಯದಲ್ಲಿದ್ದರೇನು ಚೆಂದ,' ಎನ್ನಿಸುತ್ತದೆ.

ನದಿಗೂ ಊರಿಗೂ ಮಧ್ಯದಲ್ಲಿ, ಒಂದರ ಪಕ್ಕದಲ್ಲಿ ಒಂದರಂತೆ ಕೆಲವೊಂದು ಅಂತರದ ಮೇಲೆ, ರಾಮದೇವರ ಗುಡಿ ಮತ್ತು ಬಸವಣ್ಣದೇವರ ಗುಡಿಗಳಿವೆ. ಗುಡಿಗಳ ಸುತ್ತಲೂ ಹತ್ತಾರು ಎತ್ತರವಾದ ಗಿಡಗಳು ಬೆಳೆದು ನಿಂತಿವೆ. ಮಳೆಗಾಲದಲ್ಲಿ ಆ ಗುಡಿಗಳೆಲ್ಲ ನೀರಿನಲ್ಲಿಯೇ ನಿಂತಿರುತ್ತವೆ. ಕೃಷ್ಣೆ ಪ್ರತಿವರುಷ ದೇವರಿಗೆ ಅಭಿಷೇಕಮಾಡಿಸುತ್ತಾಳೆ.

ಅದೆಷ್ಟೋ ಸಲ ಊರ ಹೆಸರು ಕೇಳಿದ್ದೆನಾದರೂ, ಆ ಊರ ಹೆಸರಿನ ಹಿಂದೆ ಇಷ್ಟೊಂದು ಸ್ವಾರಸ್ಯವಾದ ಕತೆಯಿರಬಹುದೆಂದು ನಾನು ತರ್ಕಿಸಿರಲಿಲ್ಲ. ಗೆಳೆಯರ ಒತ್ತಾಯಕ್ಕಾಗಿ ಮೊನ್ನೆ 'ಸತ್ತಿ'ಗೆ ಹೋಗಿದ್ದೆ. ಸಂಗಡ ಗೆಳೆಯರಿದ್ದರು. ಅಥಣಿಯಿಂದ ಸತ್ತಿಗೆ ಹೋಗಬೇಕಾಗಿತ್ತು. ಅಥಣಿಯಲ್ಲಿ ಗೆಳೆಯರ ನೂವಂದಿರ ಮನೆಯಲ್ಲಿ ಜೆನ್ನಾಗಿ ಊಟ ಹೊಡೆದು ಮಲಗಿದಾಗ, ನಾವು ಅಂದೇ ಸತ್ತಿಗೆ ಹೋಗಿ ಮರುದಿನ ಮರಳಿ ಬರಬೇಕೆಂಬುದೂ ಜ್ಞಾಪಕದಿಂದ ಹಾರಿಹೋಗಿತ್ತು. ನೋಟಾರುಗಳೆಲ್ಲ ಆಗಲೇ ಹೋಗಿಬಿಟ್ಟಿದ್ದುವು. ಸಂಜೆಯೂ ಆಗುತ್ತ ಬಂದಿತ್ತು. ಆದರೂ ಹೊರಡಲೇ ಬೇಕಾಗಿದ್ದುದರಿಂದ ಹೊರಟೆದ್ದಾಯಿತು.

ಗೆಳೆಯರು ಅಲ್ಲಿ ಇಲ್ಲಿ ನೋಡಿ ಒಂದು ಚಕ್ಕಡಿಯನ್ನು ಹುಡುಕಿದರು. ಅದು ಅವರ ಹೊಲವನ್ನು ಸಾಗುಮಾಡುವ ಒಬ್ಬ ಒಕ್ಕಲಿಗನದೇ ಆಗಿತ್ತು. ಆದರೂ ಆಗಲೇ ಅದರ ಭಾರ ಅದಕ್ಕೆ ಸಾಕಷ್ಟಾಗಿತ್ತು. ಚಕ್ಕಡಿತುಂಬ ಕಿರಾಣಿಯ ಅಂಗಡಿಯ ಸಾಮಾನುಗಳನ್ನು ಹೇರಿದ್ದರು. ಮೇಲೆ ನಾಲ್ಕು ಜನರು ಕುಳಿತಿದ್ದರು. ನಮ್ಮಿಬ್ಬರಿಗೂ ಅದರಲ್ಲಿಯೇ ಅವಕಾಶಮಾಡಿಕೊಡಲಾಯಿತು. ನಾನೊಂದು ಬೆಲ್ಲದ ಬಾನಿಯ ಮೇಲೆ ಕುಳಿತುದರ ನೆನಪು ಇನ್ನೂ ಇದೆ. ಗೆಳೆಯರು ಎತರ ಮೇಲೆ ಕುಳಿತಿದ್ದರೋ ನನಗೆ ತಿಳಿಯದು. ಅವರಿಗೆ ಅಂದು ತಲೆನೋಯಿಸುತ್ತಿದ್ದುದರಿಂದ ವಿಶೇಷವಾಗಿ ಮಾತನಾಡಲಿಲ್ಲ. ತಲೆಗೊಂದು ಕದನಸ್ತ್ರವನ್ನು ಕಟ್ಟಿಕೊಂಡು ತೂಕಡಿಸುತ್ತ ಕುಳಿತಿದ್ದರು. ಅಂತಹ ಒಗ್ಗಾಲಿಯಲ್ಲಿ ನಿದ್ರೆ ಹೇಗೆ ತಾನೇ ಬಂದೀತು? ಆಗಾಗ ಮಾತನಾಡುತ್ತಿದ್ದರು; ಆದರೆ ಮಾತಿನಲ್ಲಿ ಮನಸ್ಸೇ ಇರಲಿಲ್ಲ. ನಾನು ಸುಮ್ಮನೆ ಕೂಡ್ರಲಾರದೆ ಏತೇತರ ಬಗೆಗೋ ಮಾತನಾಡುತ್ತಿದ್ದೆ. ದೆವ್ವಗಳ ಕತೆ ಹೇಳಿದೆ. ನಾನು ಓದಿದ ಹಾಸ್ಯದ ಚುಟುಕುಗಳನ್ನು ಹೇಳಿ ಅಲ್ಲಿದ್ದವರನ್ನು ನಗಿಸಲಿಕ್ಕೆ ಯತ್ನಿಸುತ್ತಿದ್ದೆ. ಆದರೆ ನನ್ನ

ಯಾವನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯವರು ಅಲ್ಲಿ ಯಾರೂ ಇರಲಿಲ್ಲ. ಇವ್ವ ಗೆಳೆಯರೊಬ್ಬರು ತಲೆನೋವಿನಿಂದ ಬಳಲುತ್ತಿದ್ದರು. ಗಾಡಿಯು ಅಥಣಿಯನ್ನು ಬಿಟ್ಟಾಗಲೇ ಎಂಟು ಹೊಡೆದಿತ್ತು. 'ಕತ್ತಿ'ಯನ್ನು ಮುಟ್ಟಲಿಕ್ಕೆ ಮೂರು ಘಂಟೆಗಳಾದರೂ ಬೇಕಾಗಿತ್ತು.

ಬಂಡಿಯಲ್ಲಿದ್ದವರೆಲ್ಲ ನನ್ನನ್ನು 'ಸ್ವಾಮಿ'ಎಂದು ಸಂಬೋಧಿಸುತ್ತಿದ್ದರು. ಗೆಳೆಯರು ಅವರಿಗೆ ನನ್ನನ್ನು ಹಾಗೆಯೇ ಪರಿಚಯ ಮಾಡಿಕೊಟ್ಟಿದ್ದರು. ತಮ್ಮ ಉಪನಾಮವನ್ನು ನನ್ನ ಮೇಲೆ ತಿರುಗಿಸಿದ್ದರು. ದಾರಿಯುದ್ದಕ್ಕೂ ಸಿಕ್ಕುವ ಹಳ್ಳಿ, ಗಿಡಗಳಗುಂಪು, ದೀಪ ಇತ್ಯಾದಿಗಳ ಬಗೆಗೆ ವಿಚಾರಿಸಿ, ಗಾಡಿಯವರು ಹೇಳುವುದನ್ನೆಲ್ಲ ಕೇಳುತ್ತ ಕುಳಿತಿದ್ದೆ. ದೂರದಲ್ಲಿ ಕಂಡು ಮಾಯವಾಗುವ ದೀಪದ ಕಡೆಗೆ ಬೆರಳುಮಾಡಿ ಏನನ್ನೋ ಕೇಳುತ್ತಿದ್ದೆ. ಅವರಾರೂ ಸರಿಯಾಗಿ ಉತ್ತರ ಕೊಡುತ್ತಿರಲಿಲ್ಲ. ನಿತ್ಯ ನೋಡುತ್ತಿದ್ದರೂ ಅವುಗಳ ಬಗೆಗೆ ತಿಳಿದುಕೊಳ್ಳಲು ಅವರು ಯತ್ನಿಸುತ್ತಿದ್ದಿಲ್ಲವೆಂಬಂತೆ ಕಾಣುತ್ತಿತ್ತು. ಒಬ್ಬರು ಒಂದು ಬಗೆಯಾಗಿ ಹೇಳಿದರೆ, ಇನ್ನೊಬ್ಬರು ಅವನ್ನು ಅಲ್ಲಗಳೆಯುತ್ತಿದ್ದರು. ಗಾಡಿಹೊಡೆಯುವವನು ಎತ್ತುಗಳನ್ನು ಬೆದರಿಸುವುದರಲ್ಲಿಯೇ ಮಗ್ನನಾಗಿದ್ದನು. ಉಳಿದವರು ತಮ್ಮ ತಮ್ಮಲ್ಲಿಯೇ ಮಾತನಾಡುತ್ತಿದ್ದರು; ನಡುನಡುವೆ ನನ್ನೊಂದಿಗೂ ಮಾತನಾಡುತ್ತಿದ್ದರು.

ಕತ್ತಲೆಯು ಸುತ್ತಲೂ ಚೆಲ್ಲನರೆದಿತ್ತು. ಅಗಸನೇನೂ ಅಷ್ಟೊಂದು ನಿಚ್ಚಳವಾಗಿರಲಿಲ್ಲ. ಅಲ್ಲೊಂದು ಇಲ್ಲೊಂದು ಚಿಕ್ಕೆಗಳದ್ದುವು. ಸುತ್ತಲೂ ವಿಶೇಷ ಗಿಡಗಂಟಿಗಳಿರಲಿಲ್ಲ. ರಸ್ತೆಯ ಎಡಬಲಗಳಲ್ಲಿಯಂತೂ ಒಂದೂ ಗಿಡಮರಗಳ ಸುಳಿವಿರಲಿಲ್ಲ. ಸುಳಿಗಾಳಿಯು ಸುಳಿಯುತ್ತಿತ್ತು. ಒಂದಿನಿತು ಚಳಿಯೂ ಎನಿಸುತ್ತಿತ್ತು. ನಾನು ಕೆಳಗಿರುವ ಕಂಬಳಿಯನ್ನು ತೆಗೆದು ಹೊದೆದುಕೊಂಡಿದ್ದೆ. ಅರ್ಧದಲ್ಲಿ ಗೆಳೆಯರೂ ಆಸರೆಗೊಂಡಿದ್ದರು. ಸುತ್ತಲೂ ಪ್ರಶಾಂತವಾಗಿತ್ತು ವಾತಾವರಣ. ಎತ್ತುಗಳ ಕೊರಳಲ್ಲಿಯ ಗೆಜ್ಜೆಗಳ ಸದ್ದು, ಚಕ್ಕಡಿಯ ಚಕ್ರಗಳ ಸದ್ದು, ಧಡಿಕೆ ಮತ್ತು ನಮ್ಮ ಮಾತುಗಳನ್ನು ಬಿಟ್ಟರೆ ಯಾವ ಸದ್ದೂ ಇರಲಿಲ್ಲ. ಮಾರ್ಗದ ಪಕ್ಕದಲ್ಲಿ ಹಳ್ಳಿಗಳು ಬಂದಾಗ ಮಾತ್ರ ನಾಯಿಗಳು ಬೊಗಳುವ ಹಿಡಿಸದ್ದು ಕೇಳಿಸುತ್ತಿತ್ತು.

ನಾವು ನುಟ್ಟಬೇಕಾಗಿದ್ದ ಊರು ಇನ್ನೊಂದು ಮೈಲು ದೂರದಲ್ಲಿರಬೇಕು. ದೂರದಲ್ಲಿ ಒಂದು ಗಿಡಗಳ ಗುಂಪು ಕಾಣಿಸಿತು. ಅದಾವ ಹಳ್ಳಿಯೆಂದು ಕೇಳಿದೆ. ಗೆಳೆಯರು ಅರಿವಿನ್ಯೆಯಲ್ಲಿದ್ದುದರಿಂದ ನನ್ನ ಪ್ರಶ್ನೆಗೆ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಚಕ್ಕಡಿಯ ಹಿಂಬದಿಯಲ್ಲಿ ಕುಳಿತ ಯಜಮಾನರೊಬ್ಬರು, ಮೊದಲು ಅದೇ 'ಸಂತಿಯೂರು' ಇತ್ತೆಂದು ಹೇಳಿದರು. ಹಾಗಾದರೆ ಇಂಪೇಕೆ ಅಲ್ಲಿಂದ ಸ್ಥಳಾಂತರಿಸಿದ್ದಾರೆಂದು ಕೇಳಿದ್ದಕ್ಕೆ, ಅದೊಂದು ಕತೆಯನ್ನೇ ಪ್ರಾರಂಭಿಸಿಬಿಟ್ಟರು. ಅದು ದಂತಕತೆಯೇ ಆಗಿರಬೇಕು. ಆದರೂ ಆದೆಷ್ಟು ಮೋಜಿನ ಕತೆ! ಎಷ್ಟೊಂದು ಕರುಣಾಪೂರ್ಣವಾಗಿದೆಯಲ್ಲಾ—ಎಂದೆನಿಸಿತು. ನಮ್ಮಲ್ಲಿ ಅದೆಷ್ಟು ಹಳ್ಳಿಗಳಿಗೆ ಇಂತಹ ಕತೆಗಳಿವೆಯೋ ಯಾರು ಬಲ್ಲರು! ಅಂತೂ ಆ ಯಜಮಾನರು ಕತೆಯನ್ನು ಹೇಳಿದ್ದು ನನಗೆ ಪೂರ್ತಿಯಾಗಿ ಹಿಡಿಯಿತು. ಹಿಂದಿನಂತೆ ಮಗುವಾಗಿ, ಅವರು ಕತೆ ಮುಗಿಯಿಸುವವರೆಗೆ ಬಾಯಿತೆರೆದುಕೊಂಡು ಕುಳಿತಿದ್ದೆ. ಕತ್ತಲೆಯಾದುದರಿಂದ ಯಾರಿಗೂ ಅದು ಕಂಡುಬಂದಿರಲಿಕ್ಕಿಲ್ಲ. ಅದನ್ನೇ ನಾನು ನಿಮಗೆ ಹೇಳುತ್ತಿದ್ದೇನೆ. ಅವರಷ್ಟು ಸುಂದರವಾಗಿ ಸ್ವಾರಸ್ಯವಾಗಿ ಹೇಳದಿದ್ದರೂ, ಅದರ ಸಾರವನ್ನು ಖಂಡಿತವಾಗಿಯೂ ಕೊಡಬಲ್ಲೆ.

* * * *

"ಅದೋ, ಅಲ್ಲಿ ಕಾಣೋ ಗಿಡಗಳ ಗುಂಪು ನೋಡಿದಿರಾ?" ಬೆರಳು ಮಾಡಿ ಎಡಬದಿಗೆ ತೋರಿಸಿದರು. ನಾನು ಕತ್ತಿತ್ತಿ ನೋಡಿದೆ. ಕತ್ತಲೆಯಾಗಿತ್ತಾದುದರಿಂದ ಗಿಡಗಳ ಗುಂಪು ಕಪ್ಪಾಗಿ, ಭೀಕರವಾಗಿ ಕಾಣಿಸುತ್ತಿತ್ತು. ಅವರು ಮುಂದುವರೆಯಿಸಿದರು :

"ಅಲ್ಲಿಯೇ ನಮ್ಮ ಈಗಿನ 'ಸಂತಿಯೂರು' ಇತ್ತಂತ. ಮೊದಲುಹಳ್ಳಿಗೆ ಯಾವ ಹೆಸರಿತ್ತೋ ತಿಳಿಯದು,"

"ಹಾಗಾದರೆ ಈಗ ಇಲ್ಲವೇ ಅಲ್ಲಿ? ಆದರೂ ಊರಿದ್ದಂತೆಯೇ ಕಾಣಿಸುವುದಲ್ಲ?"

ನಾನು ನಡುವೆ ಬಾಯಿ ಹಾಕಿ ಕೇಳಿದೆ.

"ಅದನ್ನ ಹೇಳೋದು....ಅಂದಿನ ಗಿಡದ ಗುಂಪು ಇಂದಿಗೂ ಹಂಗs ನಿಂತೈತಿ. ಮನೆಯೆಲ್ಲಾ ಬಿದ್ದು ಹೋಗ್ಯಾವು. ಒಂದಾನೊಂದು ಕಾಲಕ್ಕ ಅಲ್ಲಿ ಮನೀ ಇದ್ದಿರಬೇಕೆಂಬ ಸುಳಿವು ಕೂಡಾ ಇಂದಲ್ಲಿ ಕಂಡು ಬರೋದಿಲ್ಲ. ಮನಿಮಾರುಗಳನ್ನೆಲ್ಲ ನೆಲಸಮ ಮಾಡಿ, ಒಂದು ತುಣುಕು ಕಲ್ಲು, ಒಂದ್ಹಿಡಿ ಮಣ್ಣು ಸಹ ಉಳಿಯದಂತೆ ತಂದು, ಈಗಿರೂ ಜಾಗಾದಾಗ ಮನೀ ಕಟಗೊಂಡು ಊರು ಮಾಡ್ಯಾರ"

ಬಲಕ್ಕೆ ಬೆರಳು ಮಾಡಿ ಆ ಕಡೆಗೆ ತೋರಿಸಿದರು. ಮೊದಲು ತೋರಿಸಿದ ದಿಕ್ಕಿನಲ್ಲಿಯೇ ನೋಡುತ್ತಿದ್ದ ನಾನು ಹೊರಳಿ ಎರಡನೆಯ ಕಡೆಗೆ ನೋಡಿದೆ. ಸಮೀಪದಲ್ಲಿ ಗಿಡಗಳ ಗುಂಪು ಕಾಣಿಸುತ್ತಿತ್ತು. ಮಧ್ಯೆಮೊಳಗಿಂದ ದೀಪದ ಚಿಮಣಿ ಕಾಣಬರುತ್ತಿತ್ತು.

"ಮೊದಲ ಊರಿದ್ದ ಸ್ಥಳಾ ನದೀಗೆ ದೂರಿತ್ತು. ಊರ ಸಮೀಪಕ್ಕೆ ಕೆರೆ-ಭಾವಿಗಳೂ ಇಗಲಿಲ್ಲ. ಊರವರು ನೀರಿಗೆ ಹೊಳೆಗೇನೇ ಹೋಗಬೇಕಾಗತಿತ್ತು. ನೀರು ತರೂದೊಂದು ದಗದನs ಆಗಿತ್ತು. ದಿನಾ ಹೊಲಕ್ಕ ಕೆಲಸಕ್ಕ ಹೋಗಬೇಕಾದವರು, ಬೆಳ್ಳಿ ಮೂಡಿದಾಗs ಎದ್ದು ನೀರು ಹೊರೂ ಕೆಲಸಾ ಮಾಡತಿದ್ರು. ಒಂದು ವ್ಯಾಳ್ಯೇ ಹಾಗs ಹೋದ್ರ, ರಾತ್ರಿ ಕಾವಳದಾಗ ನೀರು ಹೊರಬೇಕಾಗಿತ್ತು. ಮನ್ಯಾಗ ಎರಡು ಹೆಚ್ಚಿಗಿ ಆಳು ನೀರಿಗಾಗಿಯೇ ಇರಬೇಕಾಗಿತ್ತು.....

ಇನ್ನೂ ಬೆಳಗು 'ಜುಮು ಜುಮು' ಹರಿಯುತ್ತಿತ್ತು. ಬ್ಯಾಗ ಒಂದು ಕೊಡಾ ನೀರು ಹೊತ್ತು ತಂದರಾಯಿತೆಂದು **ತಾವರೆಕ್ಕ,** ಪುಣ್ಣಿನ **ಕೊಡಾ ಟೊಂಕದ** ಮ್ಯಾಲ ಇಟಗೊಂಡು, ಬಲಗೈಯಾಗ ಒಂಬೀ **ಹಿಡಕೊಂಡು ಮನಿಯಿಂದ** ಹೊರಡಬೇಕೆಂದಿದ್ದು. 'ಕೂಸು ಎಚ್ಚರಾದ್ರಽ ಹೆಂಗ' ಅಂತ ಅನಿಸ್ತು. ಒಳಗ ಹೋಗಿ ಬ್ಯಾಗ್ಯಾಗ **ಕಣಿಕಿ ನೋಡಿದಾಗ,** ಮಗು ಆಗಲೇ ಎದ್ದದ್ದು ಆಕೀ ನೋಟಕ್ಕ ಬಿತ್ತು. **ಪುಟ್ಟ ಕೈಕಾಲು** ಗಾಳಿಗೆ ಬಡಿದು, ಏನೇನೋ ಹಿಡಿಯಲಿಕೆ ಪ್ರಯತ್ನಿಸತಿತ್ತು. **ಮೈನೇಲೆ** ಒಂದು ತುಂಡು ಅರಿವೆಯಿರಲಿಲ್ಲ.

"ಕೂಸಿಗೆ ಇನ್ನೂ ಮೂರು ತಿಂಗಳಾಗಿರಲಿಲ್ಲ ಸುದ್ದಾ. ಎಳೆಯ ಬ್ಯಾಗ ರೇಷ್ಮಿಯಂತಾ ಕರೀ ಕೂದಲು ಎದ್ದು ಕಾಣತಿದ್ದು. ನಡಿಗೆಗಣ್ಣು ಮಾರೀನ್ಮಾಲ ಕಾಂತಿ ಬೀರುತ್ತ ನಿಂತಿದ್ದು"....

ತಾವರೆಕ್ಕ ಅಲ್ಲಿಯೇ **ಕೊಡಾ ಕೆಳಗ** ಇಳ್ಸಿ, ಮಗುವನ್ನು ಕೈಯಾಗ ತಗೊಂಡ್ಲು. ಮೈಗು ಅಕೀ ಕೂತಾ ಚಿತ್ಕಾಟ ಆಡತಿತ್ತು. ಬುಬು ಬುಬು' ತನ್ನ ತನ್ನ ಕೆಂಪು ಕೆಂಪ್ಗೆ ಕೆಂಪ್ಗೆ ಕೆಂಪ ಕೈಕೆನು ಪೆಕಲೆಯನ್ನು ಬಾಯಾಗ ಇರಿಸಿಕರೂ ಕೂಸು ತಿನ್ನಲಿಲ್ಲ **ಬರೇ** ತಾವರೆಕ್ಕನ ಮುಕಾನ ದಿಟ್ಟಿಸತಿತ್ತು. ಜೇಗ ಕಲೆಯುಣಿಸಲೆಂದು ತಾವರೆಕ್ಕ ಎಷ್ಟು ಪನಮಾಡಿ ಹಾಕಿದ್ರೂ, ಅಂದ ಅದು ಅದಕ್ಕ ಸಿದ್ಧನಾಗಲಿಲ್ಲ. ನೀರಿಗೆ ಹೊತ್ತಾಗತೈತೆಂತ ಮಗನ್ನ **ಕೆಳಗ** ಇಳಿಸಿ, **ನೀರ** ತರಾಕ ಹೊರಡಲನುವಾಪಳು. ಆದರ, **ಕೂಸು** ಆಕಿನ್ನ ಬಿಡಲೇ ಒಲ್ಲ ಗಟ್ಯಾಗಿ ತಕ್ಕೆಹಾಕಿತು. ಬ್ಯಾಗ **ನೀರು ತರತೇನಿ** ಅಂತ ಆ ಕೂಸಿನ್ನ ರಂಬಿಸಿ, ಜೋಲುಮೈಯಿಂದ **ಕೆಳಗ ಹಾಕಿದ್ಲು.** ಕೂಸು ಅಳಾಕ ಹತ್ತಿತು. ಬ್ಯಾಗ ಬಂದು **ಬಿಡಬೇಕೆಂದು,** ಕೊಡಾ ತಗೊಂಡು ಹೊರಟ್ಲು. ಜಾಗಿಲು ಎಳಕೊಂಡು **ನಡೆದ್ಲು.** ಕೂಸಿನ ಅಳೋ ದನಿ ಹೆಚ್ಚಾಗುತ್ತ. ಗಟ್ಯಾಗಿ **ಚೀರಿ** ಅಳಾಕ ಹತ್ತಿತು. ಮಗನ ಅಳೋದನಿ ಕೇಳಿ ತಾವರೆಕ್ಕನ **ಹೆತ್ತ ಕರಳೇ** ಕತ್ತರಿಸಿದಂತಾಗತಿತ್ತು. 'ಹಿಂಪಕ ತಿರಿಗಿ **ಮಗನ್ನ ರಮಿಸಲೇ'** ಎಂದೆನಿಸತಿತ್ತು! ಮನ್ಸಾಗ ಅಡಿಗಿಗೆ ಒಂದ್ನಾನಿ **ನೀರಿರಲಿಲ್ಲ.** ಬ್ಯಾಗ ಅಡಿಗೀ ಮಾಡಿಕೊಂಡು, ಅಪ್ಪನಿಗೆ **ಹೊತ್ತು ಏರೂದರಾಗ ರೊಟ್ಟೀ** ಒಯ್ಯಬೇಕಾಗಿತ್ತು. 'ಆತ್ತರ ಅಳಲಿ. **ಬ್ಯಾಗ ಓಡೋಡಿ ಹೋಗಿ ಕೊಡತುಂಬಿ ತರತೇನಿ'** ಅಂತ **ಮುಂದೆ ಮುಂದೆ ನಡೆದ್ಲು.** ಆದ್ರೂ ಮಗನ ಕೆರಚೋ ದನಿ ತಾವರೆಕ್ಕನ **ಕಿವಿಗೆ ಕೇಳಿಸುತ್ತಲೇ** ಇತ್ತು.

"**ಆಕಿ ಅವಸರದಿಂದ ಓಡೋಡಿ** ಹೋಗೋದನ್ನ, ಒಬ್ಬಿಬ್ಬರ್ನ ನೋಡಿ **ನಗೆಯಾಡಿದ್ರು.** ಆದ್ರೂ ಅವರ ಕಡಿಗೆ ಆಕಿ ಲಕ್ಷಾನ್ನ ಹಾಕಲಿಲ್ಲ. ಏಟು ಬ್ಯಾಗ ಓಡಿದ್ರೂ ಹೊಳೀ ಲಗೂನ ಬರೋಹಂಗ **ಆಕಿಗೆ** ಅನಿಸಲಿಲ್ಲ. 'ಏಟು ದೂರ ಹೊಳೆಯಿಂದ ಊರ **ಕಟ್ಟ್ಯಾರ! ಅದರಿಂದ ನನ್ನ** ಕಂಪಗ ಏಟ ಆಯಾಸ!' ಎಂದು ನಾಕಾರು **ಸಲ,** ಊರು ಕಟ್ಟಿದ ಹಿರೇರ್ನ ಶಪಿಸಿದ್ಲು ಮನದಾಗ. **ಕಡಿಗೆ** ದೂರ ಹೊಳೆ ಹರಿದು ಹೋಗೋದು ಕಾಣಿಸ್ತು. ಇನ್ನೇನು. ಆಕೀಗೆ ನೀರು ಸಿಕ್ಕಂತೇ ಅನಿಸಿತು. ಓಡಿ ಮರುಚಣ ದಾಗ ಹೊಳೆಗೇ ಹಾರಿದ್ಲು. ಕೊಡಾ ತುಂಬಿದ್ಲು. ಅದ್ರ. ಭಾರಾಗಿತ್ತು. ಎತ್ತಲಿಲ್ಲ.

"ಪುತ್ತಲೂ ನೋಡಿದ್ಲು. ಯಾರೂ ಕಾಣಲಿಲ್ಲ. ಮೂಡಣ ದಿಕ್ಕು ಬಣ್ಣ ಬಣ್ಣಾಗಿತ್ತು! ಕಾಗೀ ಸಾಲು ಹಾರಿ ನಡೆದಿತ್ತು."

"ಒಮ್ಮೆ ತನಗೆತ್ತುವಷ್ಟೇ ನೀರು ತುಂಬಿಕೊಂಡು ಹೋಗಬೇಕೆನಿಸಿತ್ತು. ಹಾಗೆ ಮಾಡಿದ್ಲು ಸಹ. ತುಂಬದ ಕೊಡ ತುಳುಕೋದು ಹೆಚ್ಚು. ಆಕೀ ತಲೀನ್ಮಾಲ ಅದು ನಿಲ್ಲಲಿಲ್ಲ ಜೋಲಿ ಹೋಗತಿತ್ತು. ಆದ್ರೂ ಮುಂದ ನಡೆದ್ಲು. ಅಲ್ಲಿಗೆ ಮಗನ ಆಳೋದನಿ ಕೇಳಸದಿದ್ದರೂ ಮನಸಿನ್ಯಾಗ ಪ್ರತಿದನಿಸಿ ಸಂಕಟ ಕೊಡತಿತ್ತು."

"ಮನೆಗೆ ಆರಗೊಡಾನ ಹೊತ್ತುಕೊಂಡು ಹೋಗೋದು ಸರಿ ಕಾಣಲಿಲ್ಲ. ಕಾಗೆಯೊಂದು ಬಲದಿಂದ ಬ್ಯಾರೇ ಹಾರಿ ಹೊಯ್ತು. ಬಲಗಣ್ಣೂ ಹಾರಿತು ಒಮ್ಮೆಗೇ ಆಕಿಯ ಕಣ್ಣಾಗ ನೀರು ತುಂಬಿದ್ವು.

"ಒಂದೊಂದು ಬಾರಿ. ಆಕೀ ಗಂಡ ಸಾಯೋ ಮುಂದೆ. ನೀರು ತರಾಕ ಬಂದಿದ್ಲು. ಅಂವ ಕಡೀ ಗುಟುಕು ಕೇಳಿದಾಗ, ಮನ್ಯಾಗ ನೀರಕ ಇರಲಿಲ್ಲ. ಪತಿದೇವಾದಾಗ ನೀರು ತರೋದನ್ನಕ ಮರೆತಿದ್ಲು. ಆಗ ಸರಿರಾತ್ರಿಯಾಪ್ಪರಿಂದ, ಮಗ್ಗಲ ಮನ್ಯಾಗೂ ನೀರು ಸಿಗಲಿಲ್ಲ. ಏಟೊಂದು ಒದರಿದ್ರೂ ಒಬ್ಬರೂ ಏಳಲೇ ಇಲ್ಲ. 'ನದೀಗೆ ಹೋಗಿ ತರತೇನಿ' ಅಂತ ಓಡೋಡಿ ಬಂದಿದ್ಲು. ಮನ್ಯಾಗ ಅದಕಿಂತ ಸಣ್ಣ ಕೊಡ ಇರದ್ದರಿಂದ, ಬಂಡಿಗೊಡಾನಕ ಪಲೀನ್ಯಾಗ ಇಟಗೊಂಡು ಬಂದಿದ್ಲು. ಮ್ಯಾಲ ತುಂಬಿದ ಬಸುರಿ! ಅಮವಾಸೀ ಕಾವಳ!! ದಾರ್ಯಾಗ ಆಂಜೆಕಿ ಬಂತು. **ಆಕಿಗೆ** ಚಿರಪರಿಚಿತ ದಾರಿ. ಪಕ್ಕದಾಗಿನ ಗಿಡಾ. ಮರಾ, ಕಂಟಿ, ಅಂದ ಆಕಿನ್ನ ಆಂಜಿಸಿದವು ಅದರೂ ಕಣ್ಮುಚ್ಚಿಗೊಂಡು ಒಮ್ಮೆ ಹೊಳ್ಗೆ ಹೋಪ್ಲು. ಹೊಳ್ಯಾಗ ಆಗ 'ಸಳಸಳ' ಸದ್ದು ಆಗಿದ್ದು ಕೇಳಿ ಚೀರಿಮ್ಲು. ಅವ್ರು ಮೊದರಿ ಹೌಹಾರಿ. ಬಸಳ ಹೊತ್ತು ನಿಲ್ಲೋ ಹಾಂಗ ಇರಲಿಲ್ಲ. ತುಸಾನಕ ನೀರು ತುಂಬಿಕೊಂಡು, ಜೋಲೀ ಪೊಡಿತಾನಕ, ಕೆಳಗ ಮಾರಿನಾಡಿಕೊಂಡು ಬರಾ ಬರಾ ನಡದ್ಲು. ದಾರ್ಯಾಗ ಎಷ್ಟು ಮುಳ್ಳು ಕಾಲಾಗ ಮುರುದ್ವೋ ದೇವರಿಗೆ ಗೊತ್ತು! ಮನೀ ನನ್ಯಾಕ ಹೋದಾಗ, ಹತ್ತಿರದ ಗಿಡದಿಂದ ಒಂದು ಗೂಗಿ 'ಗೂಕ್' ಅಂತ ಕೂಗಿತು. ಗಂಡ 'ನೀರೂ—,' ಅಂತ ವಿಕಾರ ದನಿಯಿಂದಾ ಒದರಿದ್ದೂ ಕೇಳಿಸಿತು. ತಾವರೆಕ್ಕನ ಜೀವ ನೆತ್ತಿಯಿಂದಾನಕ ಹಾರಿತು ಮೈಪ್ಯಾಗ ಎಚ್ಚರಾನಕ ಉಳೀಲಿಲ್ಲ. ಕೊಡಾ ಕೈಬಿಟ್ಟು. ಒಡದು ಹೋತು. ಪಂಗಡ ಒಳ್ಳ ಹೋದ್ಲು, ಗಂಡ ಮತ್ತ ನೀರು ಬೇಡಿದ. ಕಣ್ಣುಗುಡ್ಡಿ ಬೆಳ್ಳಗಾಗತಕ ನಡನಿದ್ವು. ಮತ್ತ ಹೊಳಗ ಬಂದ್ಲು. ಒಡದು, ಒಂದು ಬೊಗ್ಸ ಜೂನಿನಾಗ ನಿಂತ ನೀರನಕ ತಂದು, ಕಡೀ ಗುಟಕು ಕುಡಿಸಿದ್ಲು!

" ಆದಕಽ ಇಂದ ಮತ್ತ ಆರಗೊಡಾ ಮನಿಗೆ ಒಯ್ಯಬಾರದೆಂದೆ-ನಿಸ್ತು. ಮತ್ತ ನದೀ ಕಡೆ ನಡೆದ್ಲು. ಯಾರಾದ್ರೂ ಅಷ್ಟರಾಗಽ ಬಂದಾರೆಂದು ಪೂರಾ ಕೊಡಾ ತುಂಬಿನ್ನು. ಯಾರೋ ಬಂದ್ಹಾಂಗ ಆತು. ಆಗ ಆಕಿಗೆ ಅವ ಅನಂದ ನಿಟಂತ ಹೇಳೋದು! ಆದ್ರ, ಅವನ ಸುಳಿ ಹತ್ತಿದಾಗ, ಇಳಿಪಽ ಹೋಪ್ಲು. ಮ್ಯಾಲ ಹೆದರಿನ್ನು ಸಹ. ಗಂಡ ಜೀವಂತ ಇದ್ದಾಗನಽ 'ಆ ನೋಟ'ದಿಂದ ನೋಡಿದಾಂವ! ಆಕಿ 'ರಂಡಿನುಂಡಿ' ಅವ ಮ್ಯಾಲ, ಸಮಾಧಾನದ ಮಾತ ಹೇಳಿ, ಆಕೀ ಸಂಗ ಬಯಸಾಕ ಇಚ್ಛಿಸಿದವನೂ ಅವನೇ! ಹಲವು ಸಲ, ಬಲತ್ಕಾರಾನೂ ಮಾಡೋದಾಗಿ ಪೆಪರಕೇನೂ ಹಾಕಿದ್ದ. ಅಂವ, ತನ್ನ ಹುಡಿಕ್ಕೊಂಡು ಮುಡಾಂ ಬಂದಾನಂತ ಅನಿಸ್ತು ಆಕಿಗೆ. 'ಅಂವ, ಈಗ ನೆರವಿಗೆ ಕನನ್ಯಽ ಸಲಿಗಿ ಕೊಟ್ಟಾಂಗ ಆಗತ್ತೈತಿ— ಕೊಡನಾಗಿನ ನೀರು ಸುರವಿ ಬರಿಗೊಡಾ ಮನಿಗೆ ಒಯ್ದು ಮಗನ್ನ ರಂಬಿಸಿದರಾಯ್ತು' ಅಂತ ಸಪ್ಪಳಾ ಮಾಡದ ನೀರು ಸುರವಿದ್ಲು.

" ಅಂವ, ಅಲ್ಲಿಗೆ ಬಂದಽ ಬಿಟ. ಹೊಳ್ಯಾಗ ಒಬ್ಬಾಕೇ ಹೆಣ್ಣ ಮಗಳ ಇರೋನ್ನ ತಿಳದು, ಆಕ್ಯಾದು ಅನ್ನೋದ್ನ ನೋಡಾಕ ಮುದ್ದಾಂ ಅಂವ ಬಂದಿದ್ದ. ತಾವರೆಕ್ಕ್ಯಾನವೀ ಕಡೆ ಮುಕಾ ತಿರು-ವಿದ್ದರಿಂದ ಅಂವಗ ಮೊದ್ಲ ಕಾಣಿಸಲಿಲ್ಲ. ಅಂವ ಹತ್ತರ ಬಂದ್ಮೋ ಅಂತ ತಿಳ್ಕ್ಯಾಕ ತಾವರೆಕ್ಕ ನೊಳಿ, ನೋಡಿದ್ಲು. ಆಗ ಅಂವ್ನ ಆಕಿ ತಾವರೆಕ್ಕಾ ಅಂತ ತಿಳಿಮೋತು. ಆಕಿನ್ನ ಒಮ್ಮೆ ನೋಡಿ ನಕ್ಕ. ಆ ನಸಿ ಆಕೀ ಅಂಗಾಂಗಕ್ಕ ಕಿಚ್ಚಿಟ್ಟಂಗಾತು! ಅಲ್ಲಿಂದ ಜಾರಿ ಬಿಡಬೇಕೆಂದು ನದಿಂವ ಹೊರಗ ಬರೋದರಾಗ ಇದ್ಲು ಅಂವ್ನಽ ಮುಂದ ಬಂದು ಮಾತನಾಡ್ಸಿದ:

'ಏನಽ ತಾವ್ರೀ! ತೀರಾ ಹರ್ಯಾಗೆದ್ದು ಬಂದ್ಬಿಟ್ಟೀಽ!'

ಆಕಿ ಉತ್ತರಾ ಏನೂ ಕೊಡಲಿಲ್ಲ. ಅಂವಾ ಇನ್ನೂ ಅಽಟ ಮುಂದ ಬಂದು ಕೇಳದ:

'ಕೊಡಾ ಭಾರ ಆಗೇತ್ಕಾನು? ಹೊರಸಲ್ಕ್ಯಾನು ಒಂದೀಟ....?'

ಬ್ಯಾಡಾಂತ ಹೇಳಿಬಿಡಬೇಕೆಂದ್ರೂ ಅಂವ ಬಿಡೂಹಾಂಗ ಇರಲಿಲ್ಲ. ಒಮ್ಮೆ ಹೆಚ್ಚು ಮಾತನಾಡದಽ ಅಲ್ಲಿಂದ ಪಾರಾಗೋದು ಆಕಿಗೆ ಬೇಕಾಗಿತ್ತು. ಮತ್ತ ಕೊಡ ತುಂಬಿನ್ನು. ಅಂವ ನಗತಾ ಮುಂದ ಬಂದು ಕೊಡಕ್ಕ ಕೈ ಹಾಕಿದ. ಆಕಿ ಅವನ್ನ ಮುಟ್ಟ್ಯಾರದಂತ ಏಟು ಜಾಗರೂಕಳಾದರೂ, ಅಂವ ಆಕೀ ಕೈ ಮೈ ತಾಗೋಟು ಸಮೀಪಕ್ಕ ಬಂದು, ಕೊಡಾ ಹೊರಸಿದಾ. ಆಕಿಗೆ ತೀರಾ ತಿರಸ್ಕಾರ ಹುಟ್ಟ್ಸತು. ಘಸಾ ಸಿಟ್ಟೂಽ ಬಂತು. ಆದರ ಆಗ ಏನೂ ಮಾಡಬಾರದೆಂದು ಅವನೆಲ್ಲಾ ಸಹಿಸಿಕೊಂಡ್ಲು. ತಲೀ-ಮ್ಯಾಗಿನ ಸಿಂಬಿ ಕೆಳಗ ಜಾರಿಬಿತ್ತು; ನೀರಾಗ ತೊಯ್ದುಹೋತು.

'ಸಿಂಬಿ ಬಿತ್ತು; ಕೊಡ ಇಳಸು. ಮತ್ತ ಹೊರಿಸತೇನಿ.'

ಕೊಡ ಇಳಿಸಾಕ ಸಾಗಿಬಂದ.

'ಬ್ಯಾಡ; ಹೊತ್ತಾಗೇತಿ. ಹುಡುಗ ಅಳತೈತಿ....ಲ ಗೂ ಹೋಗತೇನಿ.'

ಸಿಂಬಿಯಿಲ್ಲದನ ಕೊಡಾ ಹೊತಗೊಂಡು ನಡೆದಳು. ಸಿಂ ಕೈಯಾಗ ಕೊಡಹೇಳಿದ್ಲು. ಅಂವ್ನ ಅದು ಸರಿ ಕಾಣಲಿಲ್ಲ ಮುಟ್ಟಿ ಸಿಂಬೀನ ಅಲ್ಲಿ ಇಡಬೇಕೆಂಬೂ ಆಶೆ. ಒಂದೀಟು ಸಾಧ ಮಾಡಿದ. ಯಾರೋ ಬರೋ ಸಪ್ಪಳಾತು. ಆಕಿ ಹೆದರಿ ಜನಾ ಆಗ್ಲೇ ಆಡಿಕೊಂತಿತ್ತು. ಡಾಂಗನ ಸಿಂಬೀ ಬಿಟ್ಟನ ನಡ ಅಂವ ಕೇಳಬೇಕಲ್ಲ! ಹಿಂದಿನಿಂದ ಬಂದು ಜುಲ್ಮಿಂದ ಕೈ ಎತ್ತಿ, ತಲಿಮುಟ್ಟಿ, ಸಿಂಬಿಯಿಟ್ಟು, ಒಂದೀಟು ನಕ್ಕ. ಆಕಿ ಹೋ ದಿಕ್ಕನ ನೋಡತಾ ನಿಂತಿದ್ಲ ಅಂವ ಆಕಿ ಒಮ್ಮೆನೂ ಆ ತಿರುಗಿ ನೋಡಲಿಲ್ಲ ಆದ್ರೂ ಬಲಿಯಿಂದ ಜಾರಿದ ಹಾರಿದ್ಹಾಂಗ ಹಾರಿದ್ಲು ಆಕಿ.

" ಊರ ಸಮೀಪಕ್ಕ ಬರೋ ತನಕಾ ಆಕೀ ಕಂದನ ನೆ ಬರಲಿಲ್ಲ. ಅಗಸಿಗೆ ಬಂದಾಗ ಕಂದನ ನೆನಪು ಬಂತು. ಅಲ್ಲೀತ ಬರೋ ಮುಂದೆ, ಕಂದನ ಅಳೋ ದನಿಕೇಳಸಿತ್ತು. ಈಗ ಕೇಳಸ ಸುಮ್ಮನಾಗಿರಬೇಕೆಂದು ಆಕಿಗೆ ಒಂದೀಟು ಸಮಾಧಾನ ಆ ಮನಸಿನಾಗಿನ ದುಗುದುಗು ಮಾಯಾಗಲಿಲ್ಲ. ನಾಕ ಹಾಕಿದ್ದಿಲ್ಲ. ಕಷ್ಟದವ ಎದುರಿಗೇ ಬಂದ. ಕತ್ತೆ ಒದರಿಕೆ ಓಡಿ ಬಂತು ಆಕಿ ಬದಿಗಾಗಿ ನಡೆದ್ಲು. ಮನೆ ಕಂಡಿತು. ಹೋಗಿ, ಕೊಡ ಇಳಿಸಿ, ಮಗನ ರಂಬಿಸಿ, ತೆಕ್ಕ್ಯಾಗ ಆಪ್ಸಿಕೊ ಮುಲಿ ಊಣಸಬೇಕಂತ ಮನಸಿನಾಗ ಮಂಡಿಗಿ ತಿನತಿದ್ಲು. ಅತ್ತತ್ತು ಕಂದಗ ಆಯಾಸ ಆಗಿದ್ದೀತು. ಈಗ ಸುಮ್ಮನಾ ಬರೋ ಮುಂದೆ ಮುಲೀನಽ ಕುಡೀಲಿಲ್ಲ. ಬಾಗಿಲಿಗೆ ಬಂ 'ಕಾಮಿ' ಆಡ್ಲ ಬಂತು. ಹರ್ಯಾಗಿಂದ ಆಕಿ ಮನಸು ಬ ತರಾನಽ ಆಗಿತ್ತು. ಗಂಡನ ನೆನಪು, ಆ ಪಾಪೀ ಬಿಟ್ಟು. ಬೇಕಾಗಿ ಮೈ ಕೈ ಮುಟ್ಟಿದ್ದು. ತನ್ನನ್ನು ನೋಡಿ ಮೂವತ್ತೆ ಸಲ್ಲು ತಗದು ನಕ್ಕಿದ್ದು. ಮತ್ತು ದಾರಿಮ್ಯಾಲಿನ ಅಪಶಕು ಎಲ್ಲಾ ಸೇರಿ, ಆಕಿ ಒಂದು ತರಾನಽ ಆಗಿದ್ದು. ಬಾಗಿಲ ಕೊಡಾ "ಇಳಿಸಿ ಟೊಂಕದಮ್ಯಾಲ ತಗೋಬೇಕೆಂಬೂದು ಮ ಹೋಯ್ತು. ಹಂಗನ ಒಳಗ ನಡದ್ಲು. ಬಾಗಿಲ ಚೌಕಟ್ಟಿಗೆ ಕೊಡ ಒಡೆದು, ಮೈ ಮ್ಯಾಲ ನೀರುಬಿದ್ದು ಸೀರೆ ಪು ತೊಯ್ದವು. ಆಕಿ ನೈಚೊಡ್ಲನ ತಣ್ಣಗಾಗಿತ್ತು. ಈಗ ತಣ್ಣೀರ ಮತ್ತೀಟು ತಣ್ಣಗಾತು. ಒಳಗ ಹೋಗಿ ಕೂಸನ್ನ ಎದಿಗೆ ಆ ಕೊಂಡ್ಲು. ಕಣ್ಣು ತಗೆದಿದ್ದು, ಕೈಕಾಲು ಕುಣೀತಿರಲಿಲ್ಲ. ಒಂದೆಲ್ಲು ಸಲ ಮುದ್ದು ಕೊಟ್ಲು. ಮುಕದ ಕಳೇ ವಿಕಾರ ಬಾಯಿ-ಮೂಗಿನ ಪೇಲೆ ಕೈಯಿಟ್ಟು ನೋಡಿದ್ಲು. ಮತ್ತ ಇಡೀ ಮೈ ಮುಟ್ಟಿ ನೋಡಿದ್ಲು. ಮೈ ಮಂಜಿನ ಗಡ್ಡೆಯಾಗಿ ಇನ್ನಽಟು ಹೆಚ್ಚು ಗಟ್ಟಿಯಾಗಿ ಅಪ್ಪಿದಳು ತಾವರೆಕ್ಕ."

ಒಂದು ನಿಟ್ಟುಸಿರನ್ನು ಬಿಟ್ಟರು ಯಜಮಾನರು!

ಇಷ್ಟು ಸಮಯದ ತನಕ ತಾವರೆಕ್ಕ ಯಾರೆಂಬುದು ನನಗೆ ತಿಳಿದಿರಲಿಲ್ಲ. ಕೇಳಬೇಕೆಂದಿದ್ದೆ. ಆದರೆ ನಡುವೆ ಕೇಳಲಾಗದ್ದಿಲ್ಲ. ಯಜಮಾನರು ನಡುವೇ ನಿಟ್ಟುಸುರುಬಿಟ್ಟು ಕುಳಿತದ್ದನ್ನು ನೋಡಿ ಕೇಳಿದೆ :

" ತಾವರೆಕ್ಕ ಯಾರು ? "

ಅವರು ಮತ್ತೆ ಪ್ರಾರಂಭಿಸಿದರು. ಈ ಸಲ ಧ್ವನಿಯು ಗಂಭೀರವಾಗಿತ್ತು :

" ಆಕೆ ಒಬ್ಬ ದುರ್ದೈವಿ ಹೆಣ್ಮಗಳು. ಸಣ್ಣಾಕೆ ಇದ್ದಾಗ ತಾಯಿ ತೀರಿದಳು. ಹರೇಕ ಬಂದಾಗ ತಾನೇ ತಾಯಾಗಿ ಬೆಳಿಸಿದ ತಂಗಿಗೆ ಅಗಲಲಾರದ, ತಂದಿ ಒಬ್ಬಗ ಅವಳನ್ನು ಕೊಟ್ಟು ವಿವಾಹಮಾಡಿ, ಅಳಿಯನನ್ನು ಮನ್ಯಾಗ ತಂದಿಟ್ಕೊಂಡ. ಚಿಕ್ಕ ಸಂಸಾರ ಸುಖದಿಂದ ಸಾಗಿದಾಗ ಆಕೆ ಬಸರಾದ್ಲು. ಇನ್ನೂ ತಿಂಗಳೂ ತುಂಬಿರಲಿಲ್ಲ. ಆಕೀ ಗಂಡ ಸತ್ತುಹೋದ. ಸಾಯುವ ಮುಂದ ಒಂದಿನೂ ಹತ್ತ ಇರಲಿಲ್ಲ. ಆಕೆಗೆ ತಂದೀನೇ ಮತ್ತ ಗತಿಯಾದ. ಹೆಡದು ಮೂರು ತಿಂಗಳಾಗಲಿಲ್ಲ. ಕೂಸೂ ಸತ್ತುಹೋತು. ಎದೆ ಬಿರಿಯೋ ಹಾಂಗ ಅತ್ತ ಕರದು ರಂಬಾಟಾ ಮಾಡಿದ್ರೂ ಯಾರು ಮರಳಲಿಲ್ಲ. ಆಕೀ ರಂಭಾಟಕ್ಕ ಊರೆಲ್ಲ ಸೇರಿದ್ರು. ಯಾರಿಗೂ ಕೂಸು ಯಾಕ ಸತ್ತತೆಂಬುದು ತಿಳಿಯಲಿಲ್ಲ. ಇಲ್ಲ. ಆಗ ಕಿ ಹಾಡಾಡಿಕೊಂಡು ಅಳತಾನ ಇದ್ಲು :

" ಅಯ್ಯೋ ! ಮಗನs ಸತ್ತಿ ಯಾಕs ? ನಿನ್ನ ಋಣ ತೀರ್ತು ಅತ ಸತ್ತೀs ? ನಾವೆಲ್ಲಾ ಬ್ಯಾಸರ ಆದ್ವಿ ಅಂತ ಸತ್ತೀs ? ಬ್ಲೇಕೆಂತ ಅಲ್ಲಿ ಹೆಚ್ಚು ಸುಕಾ ಅಂತ ಸತ್ತೀs ? ಹಲುಬೋ ಎಳೆ ಮಗನ್ನ ಬಿಟ್ಟು ನೀರಿಗ ಹೋದೆ ಅಂತ ಸತ್ತೀs ? ನೀರು ದೂರ್ಹಾ ಸೋದರಾಗs ಹಲುಬಿ, ಹಲುಬಿ ಉಸುರಂಗಟ್ಟಿ ಸತ್ತೀs ? ನೀರು ಬಿಟ್ಟು ಈಟ ದೂರ ಊರ ಕಟ್ಟಿದಕ್ಕ ನೀs ಸತ್ತೀs ?.....

" ತಾವರೆಕ್ಕನ ಕಳ್ಳಿನ ಆರ್ಬಾಟಾ ದಶದಿಕ್ಕೆನಾಗ ಪ್ರತಿಧ್ವನಿಸಿತು. ಬೂಮಿ ಬಿರಿಯಿತು. ದಿಕ್ಕೆಲ್ಲ ' ಸತ್ತಿ, ಸತ್ತಿ ' ಅಂತಾ ಪ್ರತಿಧ್ವನಿಸಿದ್ವು. ಆದರ ಆಗ ತಮ್ಮ ತಮ್ಮ ಗೂಡಿನ್ಯಾಗಿಂದ ಹೊರಬಿದ್ದು ಹಾರಿಹೋಗೋ ಗಿಳಿ-ಗೊರವಂಕ ತಾವರೆಕ್ಕನ ದೈವದ ತಳಮಳದ ದನಿ ಅಲಿಸಿದವು. ಅವು ಸುದಾ ' ಸತ್ತೀ, ಸತ್ತೀ ' ಅತ ಕೊರಳೆತ್ತಿ ಕೂಗಿ, ಆಕೀ ಕೂಡ ದನಿಗೂಡಿಸಿದವು. ಸುತ್ತಲಿನ ಹಸಂಟಿ ಸುದ್ದಾ ಗಾಳಿಗೆ ಅಲಗಾಡಿ ' ಸತ್ತೀ, ಸತ್ತೀ ' ಅಂತ ಪ್ರಲಾಪ ಮಾಡಿದ್ವು.

" ತಾವರೆಕ್ಕನ ಸ್ಥಿತಿ ಇನ್ನೂ ಕೆಟ್ಟಿತು. ಸತ್ತ ಮಗನ್ನ ಹಿಡಕೊಂಡು ಹೊಳೀ ಕಡಿಗೆ ನಡದ್ಲು ; ಆಗಿನ ಆಕೀ ಸ್ಥಿತಿ ನೋಡಿ ಯಾರಿಗೂ ಅಡ್ಡ ಬರೋ ಧೈರ್ಯ ಆಗಲಿಲ್ಲ. ದಾರೀ ಉದ್ದಕ ಹಾಡಾಡಿಕೊಂಡು ಅಳತಾನ ನಡೆದಿದ್ಲು. ಮಾತಿ-ಮಾತಿಗೂ "ಮಗನೇ ಸತ್ತಿ ಯಾಕ?" ಎನ್ನೋದು ಪಲ್ಲವಿಯಾತು. ದಾರ್ಯಾಗಿನ ಕಲ್ಲು, ಮಣ್ಣು, ಮುಳ್ಳು ' ಸತ್ತಿ — ಸತ್ತಿ ' ಅಂತ ಮಾರ್ನುಡಿದವು. ತಾವರೆಕ್ಕ ಸತ್ತ ಕಂದನ್ನ ಕೈಯಾಗ ಹಿಡಕೊಂಡು, ನದ್ಯಾಗ ಟೊಂಕಮಟ ನೀರಾಗ ಇಳಿದ್ಲು. ಕೂಸಿನೊಂದಿಗೆ ಮೂರು ಸಲ ಮುಳುಗಿ ಎದ್ಲು. ' ನೀರು ಗಳುಗುಳು ' ಸದ್ದು ಮಾಡಿತು. ತೆರೀ ದುಂಡಾಗಿ ಹೊಂಟು, ದಂಡೀ ಮುಟ್ಟಿದ್ವು. ದಂಡೀಮ್ಯಾಗಿನ ಜನಾ ಕೂಗಿಕೊಂಡ್ರೂ ಸಾಧ್ಯವಾಗಲಿಲ್ಲ. ಕೆಲವು ಗಟ್ಟಿಗರು ಜುಲ್ಮಿಂದ ಹಿಡದು ಹೊರಗ ತಗ್ಯಾಕ ಮುಂದಾದ್ರು. ತಾವರಿ, ಮಗನ್ನ ಅಪ್ಪಿಕೊಂಡು ' ಸತ್ತಿಯಾಕ ? ' ಎಂದು ಕೂಗಿ ನೀರಾಗ ಮುಳುಗಿದ್ಲು. ಕೊನೀ ಮಾತು ಪೂರ್ಣ ಕೇಳಿಸಲಿಲ್ಲ—ನೀರಾಗ ಮುಣಿಗೇ ಬಿಟ್ಲು. ಬರೀ ' ಸತ್ತಿ ' ಎಂಬ ನುಡಿ ಮಾತ್ರ ಸುತ್ತಲಿಂದ್ಲೂ ಸಾಗಿಬಂದು ಮಾರ್ನುಡೀತು. ಆದರ ಆಕೀ ಕೊನೀ ವಾಣಿ ಜುಳು ಜುಳು ಮಂಜುಳನಾದ ಮಾಡಿ ಹರೀತಿದ್ದ ನದೀ ಸಹಿತ ತಾವರಿನ್ನ ಗರ್ಭದಾಗ ಅಡಗಿಸಿಕೊಂಡು ' ಸತ್ತೀ ಸತ್ತಿ ' ಅಂತ ಸಪ್ಪಳಾ ಮಾಡಿ ಹರ್ಯಾಕ ಹತ್ತಿತು. ದಂಡೀಮ್ಯಾಲ ದಿನಾಹೋದ ಆಕೀ ಅಪ್ಪ ನಿಂತು, ಕಳವಳದ ದನ್ಯಾಗ ಕೂಗಿದಾ :

" ತಾವರೆಕ್ಕಾ, ನಿನ್ನ ತಾಯಿ ಸತ್ಲು.

ನಿನ ಗಂಡ ಸತ್ತ.

ನಿನ್ನ ಮಗಾ ಸತ್ತಿತು.

ನೀನೂ ಸತ್ತಿ ....."

" ಆಗಲೇ ನಿಚ್ಚಳಾಗಿ ಬೆಳಕಾಗಿತ್ತು. ಮೂಡಣ ದಿಕ್ಕಿನ್ಯಾಗ ಸೂರ್ಯ ಮೂಡಿ ಮೇಲೇರತಕ ನಡದಿದ್ದ. ಅವನ ಕಿರಣ ಹರಿಯೋ ನದಿ ನೀರ ಮ್ಯಾಲ ಬಿದ್ದಾಗ ಥಳಥಳಸತಿದ್ವು.

"ಊರ ಹಿರೇರಾಗ ಕೆಲವರಿಗಾದ್ರೂ, ಈ ಅನರ್ಥ ನೀರು ದೂರದಾಗ ಇದ್ದವರಿಂದಾ ಸಂಭವಿಸಿತೆಂದು ತಿಳಿದಿರಬೇಕು. ಮರುದಿನಾನ ಊಗಿನ ಜಾಗೆದಾಗ ಊರ ಕಟ್ಟಾಕ ಸುರುವು ಮಾಡಿದರಂತ. ಅವರಿಗೂ ದೂರದಿಂದ ನೀರು ಹೊರೋದು ಬ್ಯಾಸರ ಬಂದಿರಬೇಕು.

ಬೆನ್ನ ಮೂಳಿ ಮುರಿದಮ್ಯಾಗ ಬುದ್ಧಿ ಬೆಟ್ಟಿಯಾತು !

ಹೊಸ ಊರಿಗೆ ' ಸತ್ತಿ ' ಯೆಂಬೋ ಹೆಸರಾತು !!

ಇಂದಿಗೂ ಸುದಾ ಗಾಳಿ ಕೂಪ, ಹಕ್ಕಿಪಕ್ಷಿ ಕೊಳ್ಳದನಿ ಕೂಡ, ಕೃಷ್ಣಾ ನದಿಯ ಮಂಜುಳ ನಾದದ ಕೂಡ ' ಸತ್ತಿ, ಸತ್ತಿ ' ಎಂಬ ದನಿ ಕೇಳಿ ಬರತೈತೀ ಅಂತ ಕೆಲವರು ಹೇಳತಾರ."

ಕತೆ ಮುಗಿದಾಗ ಹಳ್ಳಿಯೂ ಬಂದಿತ್ತು.

ಸಾದರ ಸ್ವೀಕಾರ

೫೯. **ತಾಯಿ** (ಒಂದು ನೀಳ್ಗತೆ). **ಲೇಖಕರು** ಶ್ರೀ. ಕುಲಕರ್ಣಿ ಬಿಂದುಮಾಧವರು. ಶಿಗ್ಗಾಂವಿಯ ವಿಕಾಸ ಸಾಹಿತ್ಯಮಾಲೆಯ ಮೊದಲನೆಯ ಪುಷ್ಪ. ಪೂ. ಆ. ೬೪ ಪುಟಗಳು. ಬೆಲೆ ೦-೧೪-೦.

೬೦. **ಶ್ರೀ. ವಿಜಯ ಮಹಂತೇಶ ಲಾವಣಿ** (ಪದ್ಯ ಪುಸ್ತಕ). ಬರೆದವರು ಶ್ರೀ. ಜಿ. ಮಹಂತದೇವರು 'ತಿನಯೋಗ ಮಂದಿರ'. ಪ್ರಕಾಶಕರು ಶ್ರೀ. ಮಹಾಂತಯ್ಯಾ ಓತಗೇರಿ, ಶ್ರೀಮಹಂತೇಶ ಮಠದ ಕಾರಭಾರಿ, ಇಲಕಲ್ಲ. ಮೆ. ಆ. ೧೨ ಪುಟಗಳು. ಬೆಲೆ ೦-೧-೦.

೬೧. **ಹಿಂದುಸ್ತಾನಿ ಕನ್ನಡ ಬಾಲಬೋಧಿನಿ** (ಪಠ್ಯಪುಸ್ತಕ). ಬರೆದವರು ಶ್ರೀ. ಎಸ್. ವಿ. ಭಟ್ಟ ಬಿ.ಎ., ಎನ್.ಟಿ.ಸಿ., ಬಿ.ಟಿ. 'ವಿಶಾರದ' ಸನಮ. ಅಧ್ಯಾಪಕ ಬಾಸೆಲ್ ಮಿಶನ್ ಹೈಸ್ಕೂಲ್ ಮತ್ತು ಟ್ರೇನಿಂಗ್ ಕಾಲೇಜ್, ಧಾರವಾಡ. ಪ್ರಕಾಶಕರು ಆಕಳವಾಡಿ ಬುಕ್‌ಡಿಪೊ, ಧಾರವಾಡ. ಡೆ. ಆ. ೨೬ ಪುಟಗಳು. ಬೆಲೆ ೦-೬-೦.

ಹಿಂದುಸ್ತಾನಿಯನ್ನು ಕಲಿಯಬಯಸುವ ಪ್ರಾರಂಭ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾದ ಪ್ರಾಥಮಿಕ ಪುಸ್ತಕವಿದು. ಸಚಿತ್ರವಾದ ಅಕ್ಷರ ಶಿಕ್ಷಣದಿಂದ ನೊದಲು ಮಾಡಿ, ಬಳ್ಳಿಗಳನ್ನೂ ಬಳ್ಳಿಗಳನ್ನು ರಚಿಸುವ ಕ್ರಮವನ್ನೂ ಒತ್ತಕ್ಷರಗಳನ್ನೂ ವಿವರಿಸಲಾಗಿದೆ. ಮುಂದೆ ಶಬ್ದ ಸಂಗ್ರಹಗಳನ್ನೂ, ಸುಲಭ ಭಾಷೆಯಲ್ಲಿ ಬರೆದ ಸಚಿತ್ರ ಪಾಠಗಳನ್ನೂ ಕೊಡಲಾಗಿದೆ. ಮುದ್ರಣ-ಬಂಧನಗಳು ಅಚ್ಚುಕಟ್ಟಾಗಿವೆ.

೬೨. **ಕವಲಕೊಪ್ಪದ ಗಜಾನನ ವಾಚನಾಲಯದ ಒನೆಯ ವರ್ಷದ ವರದಿ.** ಗೌರವ ಕಾರ್ಯದರ್ಶಿಗಳು. ಶ್ರೀ. ಮಹಾಬಲೇಶ್ವರ ಗಣಪತಿಭಟ್ಟ ಅಗ್ಗೆರೆ. ಈ ವರ್ಷದ ಆದಾಯ ವೆಚ್ಚಗಳು ಕ್ರಮವಾಗಿ ೬೬-೬-೦ ಮತ್ತು ೬೫-೧೫-೬ ಹೀಗಿವೆ. ಅಭಿನಂದನೆಗಳು.



ಹುಬ್ಬಳ್ಳಿ ಶಾಖೆ :
ಕೊಪ್ಪೀಕರ್ ರೋಡು.

೬೩. **ಹಿಂದುಸ್ತಾನದ ಬುಕರ್ ವಾಸಿಂಗ್ಟನ್** (ಡಾ. ಅಂಬೇಡಕರ ಚರಿತ್ರ). **ಮೂಲ ಮರಾಠೀ ಲೇಖಕರು ಮೋ. ವಾ. ದೊಂದೆಯವರು.** ಅನುವಾದಕರು ಶ್ರೀ. ಗುರಪ್ಪ ಮಲಕಪ್ಪ ಗೌರ ಮಾಸ್ತರ—ಬಾಗಿಲುಕೋಟಿ. **ಲೇಖಕರೇ ಪ್ರಕಾಶಕರು. ಕ್ರೌ. ಅ. ೨೯** ಪುಟಗಳು ಬೆಲೆ ೦-೫-೦.

೬೪. **ಭಾರತದ ಮೂರ್ತಿಭಂಜಕರ** (ಡಾ. ಅಂಬೇಡಕರರ ಸ್ವಭಾವಚಿತ್ರ). ಮೂಲ ಮರಾಠೀ ಲೇಖಕರು **ಆಚಾರ್ಯ** ಪ್ರ. ಕೇ. ಅತ್ರೆ ಅವರು, **ಅನುವಾದಕರು** ಶ್ರೀ. ಗು. ಮ. ಗೌರ ಮಾಸ್ತರು. ಪ್ರಕಾಶಕರು ಶ್ರೀ. ಜಿ. ಎಚ್. ಜಿನ್ನಪ್ಪ, ಬುಕ್ ಸೇಲರ್, ಬಾಗಲಕೋಟೆ. ಕ್ರೌ. ಅ. ೫೦ ಪುಟಗಳು. ಬೆಲೆ ೦-೪-೦.

೬೫. **ಗೆಣಸು ಮತ್ತು ಗೊಬ್ಬರ ಮಿಶ್ರಣ** (ಮುಂಬಯಿ ಸರಕಾರದ ಪ್ರಚಾರ ಪುಸ್ತಿಕೆಗಳು). ಮೊದಲನೆಯದು ಡೆ. ಸ್ಥ ದ ೧೨ ಪುಟಗಳು. ಎರಡನೆಯದ ರೊಯಲ್ ೧/೨ ದ ೬ ಪುಟ.

೬೬. **ಆತ್ಮಶೋಧೆ** (ಆಧ್ಯಾತ್ಮ ಪ್ರಬಂಧ). **ಲೇಖಕರು** ಶ್ರೀ. ಜಿ. ಎಸ್ ಈಶ್ವರಪ್ಪ ಅವರು. **ಪರಿಶೋಧಕರು** ಶ್ರೀ ಎಂ. ಜಿ. ಶ್ರೀನಿವಾಸರಾವ್ ಬಿ. ಎ, ಬಿ. ಎಲ್. ಮತ್ತು ಶ್ರೀ. ಎಸ್. ಶಂಕರಪ್ಪ ಬಿ.ಎ., ಬಿ.ಟಿ. **ಪ್ರಕಾಶಕರು** ಶ್ರೀ. ಲಕ್ಷ್ಮಿ ಸುಖವಾಸಿನೀ ವರ್ಕ್ಸ್, ೧೫೫೧ ರಂಗಸ್ವಾಮಿ ಟೆಂಪಲ್ ಸ್ಟ್ರೀಟ್, ಬೆಂಗಳೂರು ೨.

೬೭. **ನಮ್ಮ ಭೂಧಾರಣ ಸಮಸ್** (ಪರಿಚಯಾತ್ಮಕ). ಬರೆದವರು ಶ್ರೀಮಾನ್ ಕೆ. ಎಫ್. ಪಾಟೀಲ, ಪಾರ್ಲಿಮೆಂಟ್ ಸೆಕ್ರೆಟರಿ ಮುಂಬಯಿ ಲೆ. ಅಸೆಂಬ್ಲಿ. **ಬ್ಯಾಡಗಿ ಸೇವಾ ಕುಸುಮಮಾಲೆಯ** ಪ್ರಕಟನೆ. ಕ್ರೌ. ಅ. ೭೦ ಪುಟಗಳು. ಬೆಲೆ ೦-೧೨-೦.

(ಮೊದಲಿನ ಪುಟ ೨ ನೋಡಿ.)

ಮಣ್ಣಿನ ನೀರಿನಪುರ್ಕಕೆ ಗೊಸ್ಕರ ಕಿಲೋಸ್ಕರ

ಸೆಂಟ್ರಿಫ್ಯೂಗಲ್ ಪಂಪನ್ನು

ಉಪಯೋಗಿಸಿರಿ



ಕೇತಕಿ, ಬಾಗಾಯುತ, ಕಾರ್ಯಾನೆ

ಮತ್ತು ಬೇರೆ ಯಾವತ್ತು

ಜಮೀನುಗಳಿಗೆ ನೀರಿನ ಪ್ರಕ್ರಿಯೆ ಒದ಼ಗಿಸಲು

ವಿಶೇಷವಾಗಿ ಉಪಯುಕ್ತವಾಗಿದೆ

ಕಿರ್ಲೋಸ್ಕರ ಬಂಧುಗಳು ಲಿ ಕಿರ್ಲೋಸ್ಕರವಾಡಿ

JAYANTI, October 1949 R. No. B. 4116

ಜಯಂತಿ

ಕೌಟುಂಬಿಕ ಮಾಸಪತ್ರಿಕೆ

[ವರ್ಷದಲ್ಲಿ ಎರಡು ವಿಶೇಷ ಸಂಚಿಕೆಗಳು] [ಡೆಮ್ಮಿ ೭ ಪೌಂಡ ೬೦೦ ರಷ್ಟು ಪುಟಗಳ ವಿಷಯ

ಕುಟುಂಬದಲ್ಲಿಯ ಕಿರಿಯರು, ತರುಣರು, ಹಿರಿಯರು, ನುಡಿಳೆಯರು ಪ್ರತಿಯೊಬ್ಬರೂ
ಓದಿ, ಜ್ಞಾನವನ್ನೂ ರಸಾನಂದವನ್ನೂ ಪಡೆಯಬಹುದಾದ ಕನ್ನಡ ಮಾಸಪತ್ರಿಕೆ
ಯೆಂದರೆ **ಜಯಂತಿಯೇ** ಎಂದು ಎಲ್ಲರೂ ಹೇಳುವರು.

ಜಯಂತಿಗೆ ಈದಿನವೇ ಚಂದಾದಾರರಾಗಿರಿ !

ಒಂದು ವರ್ಷದ ಈ ಪತ್ರಿಕೆಯ ವಾಚನದಿಂದ ನಿಮ್ಮ ನಿಮ್ಮ ಮನೆಯಲ್ಲಿ
ಬಹುಶ್ರುತತ್ವ ಎಷ್ಟು ಹೆಚ್ಚುವುದೆಂಬುದನ್ನು ಪರೀಕ್ಷಿಸಿರಿ.

— ಕನ್ನಡ ನಾಡಿನಲ್ಲಿಯ ಎಲ್ಲಕ್ಕೂ ದೊಡ್ಡಪತ್ರಿಕೆಯಾದ ಜಯಂತಿಗೆ —
ವಾರ್ಷಿಕ ವರ್ಗಣಿ ೪-೮-೦ ಮಾತ್ರ.

ಕನ್ನಡಿಗರ ಪ್ರತಿಯೊಂದು ಮನೆಯಲ್ಲೂ ಜಯಂತಿ ನಲಿದಾಡಲಿ !

ಜಯಂತಿಯ ಚಂದಾದಾರರಿಗೂ ನಿಜಂಟರಿಗೂ ಜಾಹೀರಾತುಗಾರರಿಗೂ ಬೇರೆ
ಅಭಿಮಾನಿವರ್ಗಕ್ಕೂ ದೀಪಾವಳಿಯ ಶುಭಾಶಯಗಳು.

ಭದ್ರಂ ! ಶುಭಂ ! ಮಂಗಲಂ !

Printed by V. Y. Jathar at the Karnatak Printing Works, Dharwar,
and Published for the Proprietors Jayanti Publications, by M. V. Melligatti
at the Jayanti-Office, Dharwar—2000-10-1360

ಜಯಂತಿ

ನವೆಂಬರ್
೧೯೪೯

ANTI

★

)VEMBER

1949

★

ಸಮ್ಮ ಚಂದಾದಾರರಲ್ಲಿ :

ದೇಶದಲ್ಲಿಯ ಆರ್ಥಿಕ ದುರವಸ್ಥೆಯ ಮೂಲಕ **ಜಯಂತಿಯ** ವೆಚ್ಚ ಎಲ್ಲ ಬಗೆಯಿಂದಲೂ ಬೆಳೆಯುತ್ತಲಿದೆ. ಅಲ್ಲದೆ ವರ್ಷದಲ್ಲಿ ಎರಡು ವಿಶೇಷ ಸಂಚಿಕೆಗಳನ್ನು ಚಂದಾದಾರರಿಗೆ ಉಚಿತವಾಗಿ ಸಲ್ಲಿಸುವ ವ್ಯವಸ್ಥೆ ಮಾಡಿದೆ. ಇವೆಲ್ಲವುಗಳ ಮೂಲಕ ಹೊರಬೇಕಾಗುವ ಆರ್ಥಿಕ-ಹೊಣೆಯಲ್ಲಿ ಸ್ವಲ್ಪವನ್ನಾದರೂ ಕಡಿಮೆಯಾದೀತೆಂಬ ನಿರೀಕ್ಷೆಯಿಂದ, ಬರುವ ಜನವರಿಯಿಂದ **ಜಯಂತಿಯ** ವಾರ್ಷಿಕ ವರ್ಗಣೆಯನ್ನು ಬರೀ ೪ ಆಣೆ ಹೆಚ್ಚಿಸಿ, ೫ ರೂ. ಮಾಡಲಾಗುವದು. ಎಲ್ಲ ಚಂದಾದಾರರೂ ಎಂದಿನಂತೆ ಸಹಕರಿಸಬೇಕು.

ಬೆಲೆ ಎಂಟು ಆಣೆ

ಜಯಂತಿ

JAYANTI

ಅಕ್ಟೋಬರ್ ೧೯೪೪

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ

ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜೆ. ಬೇಂದ್ರೆ

ಪ್ರಕಾಶಕರು— ಶ್ರೀ ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ಏನೆಯ ನವಂಬರ್ ೧೯೪೪ | ಸಂಚಿಕೆ ೬

ಈ ಸಂಚಿಕೆಯಲ್ಲಿ:

ಶರದಲಕ್ಷ್ಮಿಯ ಆಗಮನ (ಕವನ)
ಶ್ರೀ. ನರೇಗಲ್ಲ ಪ್ರಲ್ಹಾದರಾಯರು ಎಂ.ಎ , ಬಿ.ಟಿ. ೨೭೭

ಭಾರತಕುಲಾವತಂಸ ಜವಾಹರರು (ಸಂಪಾದಕೀಯ)
ಸಂಪಾದಕರು ೨೭೮

ಪ್ರಶ್ನೆಗೆ ಉತ್ತರ
ಸಂಪಾದಕ ಸಮಿತಿ ೨೭೯

ನಗೀಗೆ ನೇವಿದ್ಯ
'ನಕಲೀ ನಾರಾಯಣಾಚಾರಿ' ೨೮೦

ಮಾತು-ಕತೆ (ಜೀವನಕತೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೨೮೧

ವಿಗ್ರಹಾರಾಧನೆ (ವಿವೇಚನೆ)
ಶ್ರೀ. ಬಿ. ಎಚ್. ಶ್ರೀಧರ ಎಂ.ಎ., ಹುಬ್ಬಳ್ಳಿ ೨೮೪

ಕಂಬನಿ (ಕವನ)
ಶ್ರೀ. ಯರ್ಮುಂಜ ರಾಮಚಂದ್ರ, ಪುಕ್ಕೂರು ೨೯೨

ಉಡುಗೊರೆ (ಕವನ)
ಶ್ರೀ. ಸಿ. ಕೆ. ತಿರುಮಲೇಶ, ಮದ್ರಾಸ ೨೯೨

ಹೊಗಳಿಕೆ (ಹರಟೆ)
'ನವಗಿರಿನಂದ' ೨೯೩

ಹೊಸೆ (ಅನುವಾದಿತ ಕಥೆ)
ಶ್ರೀ. ನಾಗೇಶ, ಶಾನಭಾಗ, ಮುಂಡಗೋಡ ೨೯೫

ಇತಿಹಾಸ ಶಿಕ್ಷಣ (ವಿಚಾರಪ್ರಚೋದಕ ಪ್ರಬಂಧ)
ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ ೩೦೦

ಮೊರೆ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಬಿ.ಎ (ಆನರ್ಸ್) ೩೦೪

ಅಗ್ನಿಜಲ (ಕವನ)
ಶ್ರೀ. ವೀರೇಶ್ವರ, ಶಿಗ್ಗಾಂವಿ ೩೦೪

ನೆರೆ-ಹೊರೆ (ಹುಚ್ಚಾಟ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೩೦೫

ಬೆಲೆಗಳ ಏರಿಳಿತ (ಅರ್ಥವಿಚಾರ ಲೇಖನ)
ಶ್ರೀ. ಮೋಹನ ಜಾಲಿಹಾಳ ಬಿ.ಕಾಮ್., ಜಿ.ಡಿ.ಸಿ.ಎ. ೩೦೪

ಅಂದು ಅವರಮ್ಮ ಕಾಫಿ ಮಾಡಿದ್ದು (ವಿನೋದ ಕಥೆ)
ಶ್ರೀ. ಎ. ಎಸ್. ರಾಮಕೃಷ್ಣ, ಬೆಂಗಳೂರು ೩೧೧

ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯ
ಶ್ರೀ. ಉಪೇಂದ್ರ ನಾಯಕ, ಕಾರವಾರ ೩೧೪

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಪ. ಸು. ಭಟ್ಟ, ಶಿವಮೊಗ್ಗಾ ೩೧೫

ಪುಸ್ತಕ ವಿಮರ್ಶೆ
'ವಿ. ಎಸ್. ಎಚ್.' ೩೧೮

ಸಾದರ ಸ್ವೀಕಾರ ೩೨೦



ಶರದ ಲಕ್ಷ್ಮಿಯ ಆಗಮನ

ಶ್ರೀ. ನರೇಗಲ್ಲ ಪ್ರಲ್ಹಾದರಾಯರು, ಹುಬ್ಬಳ್ಳಿ.

★

[ಶ್ರೀರವೀಂದ್ರ ಗುರುದೇವನ ವಂಗ-ಗೀತಾಂಜಲಿಯಲ್ಲಿ " ಆಮಾರ್ ನಯನ್ ಭುಲಾನೋ ಏಲೇ " ಎಂಬುದಾಗಿ ಮೊದಲಾಗುವ ೧೩ ನೆಯ ಗೀತದ ಕನ್ನಡ ರೂಪಾಂತರವು.]

ನನ್ನ ಕಣ್ಗಳ ಮರುಳುಗೊಳಿಸುವ ಮಾಟಗಾತಿಯೆ ಬಂದೆಯೌ !
ಇನ್ನು ಏನಿದು ಎದೆಯು ತೆರೆಯಿತು; ಏನನೋ ನಾ ಕಂಡೆನೌ !

ಪಾರಿಜಾತದ ವೃಕ್ಷತಲದಲಿ
ಹೂವ ರಾಶಿಯು ಹಾಸಿದೆ,
ಮೇರೆ ಮೀರಿದ ಶಿಶಿರ ಜಲದಲಿ
ಚಿಲ್ವ ಹುಲ್ಲದು ಈಸಿದೆ !
ಮೆರೆವ ಈ ಹೂ-ಹುಲ್ಲ ಹಾಸಿಗೆ
ಮೆಲ್ಲ ಮೆಲ್ಲನೆ ತುಳಿದೆಯೌ
ಅರುಣ ವರ್ಣದ ಚರಣ ಚಿಲ್ಲುತ
ಶರದ ಲಕ್ಷ್ಮಿಯೆ ಸುಳಿದೆಯೌ

ಬಿಸಿಲು ನೆರಳಿನ ಸೆರಗು ಸುಳಿಯುತ
ಸಾಗಿಹುದು ಬನ-ಬನದಲಿ—
ಕುಸುಮಗಳು ಇದ ಕಂಡು ಏನನೊ
ನುಡಿವುವೋ ಮನ-ಮನದಲಿ !
ಬೇಡಿಕೊಳ್ಳುವೆ ಓಸರಿಸು ಆ
ಮೊಗದ ತೆರೆಯನು ಒಯ್ಯನೆ !
ಮೋಡ ಮುಸಕನು ಎರಡು ಕೈಯಲಿ
ಇನಿಸು ತೆರೆಯೌ ರಯ್ಯನೆ !

ಶಂಖರವ ಗಂಭೀರವೋ ಬನದೇವಿ ದ್ವಾರದ ಸನಿಯದಿ !
ಝೇಂಕರಿಸುತಿನೆ ಮುಗಿಲ ಬೀಣೆಯ ಕಂತಿ ತವ ಆಗಮನದಿ !
ಉಲಿಯುತಿನೆ ಹೊಂಗೆಜ್ಜೆ ಎಲ್ಲಿಯೊ ? ನನ್ನ ಹೃದಯಾಂತರ್ಯದಿ !
ಶಿಲೆಯ ದ್ರವಿಸುವ ಸುಧೆಯು ಹರಿವುದು ಸಕಲ ಭಾವದಿ ಕಾರ್ಯದಿ !

'ಭಾರತಕುಲಾವತಂಸ' ಬಿರುದಾಂಕಿತರು

ಈಗ ಮೂರು ವರ್ಷಗಳ ಹಿಂದೆ, ಜಗತ್ತಿನ ಬೇರೆ ಬೇರೆ ರಾಷ್ಟ್ರಗಳ ಜನರು ಭಾರತವನ್ನು ನೋಡುತ್ತಿದ್ದ ದೃಷ್ಟಿಗೂ ಇಂದು ನೋಡುತ್ತಿರುವ ದೃಷ್ಟಿಗೂ ಎಷ್ಟೊಂದು ವಿಸ್ಮಯಕಾರಕ ವ್ಯತ್ಯಾಸ? ಅಂದು ಅವರ ದೃಷ್ಟಿಯಲ್ಲಿ ಭಾರತದ ವಿಷಯಕ್ಕೆ ಬರೀ ತಿರಸ್ಕಾರ, ಉಪೇಕ್ಷೆ ತುಂಬಿ ಸೂಸುತ್ತಿದ್ದುವು. ಸ್ವಾತಂತ್ರ್ಯಾಪೇಕ್ಷೆಯಿಂದ ಹೋರಾಟ ನಡೆಯಿಸಿದ ಭಾರತೀಯರನ್ನು ಕ್ರೋಧ ದ್ವೇಷಗಳಿಂದ ಅವರು ನೋಡುತ್ತಿದ್ದರು. ಬ್ರಿಟಿಷರ ಪ್ರೇರಣೆಯಿಂದ ಪರದೇಶದಲ್ಲಿ ನಡೆಯುತ್ತಿದ್ದ ಅಪಪ್ರಚಾರ, ಭಾರತದ ಜನತೆಯನ್ನು ಕಾಡುಜನಜಂಗುಳಿಯೆಂದು ಗಣಿಸಲು ಹಚ್ಚಿದ್ದಿತು. ಇಂದು? ಇಂದು ಅದೇ ಜನರು ಭಾರತದತ್ತ ನೋಡುವ ದೃಷ್ಟಿಯಲ್ಲಿ, ಗೌರವ-ಸ್ನೇಹಾಪೇಕ್ಷೆಗಳು ತುಂಬಿ ತುಳುಕುತ್ತಲಿವೆ. ಹಿಂದೆ ಉಪೇಕ್ಷೆ, ಔದಾಸೀನ್ಯ, ತಿರಸ್ಕಾರಗಳಿಂದ ಕಂಡ ಅದೇ ಭಾರತೀಯ ಧುರೀಣರನ್ನು ದೇವದೂತರಂತೆ ಗೌರವಿಸುತ್ತಿದ್ದಾವೆ. ಸಾರ್ವಭೌಮ ಪ್ರತಿನಿಧಿಗಳಿಗೂ ಸಿಕ್ಕದಂತಹ ಮಾನ-ಸನ್ಮಾನಗಳನ್ನು ನಲ್ಲಿಸುತ್ತಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಮೆಚ್ಚಿ ಕೊನೆದು ಕೊಂಡಾಡುತ್ತಿದ್ದಾರೆ. ಇದಕ್ಕೆಲ್ಲ ಕಾರಣ—ನಮ್ಮ ಯೋಗೇಶ್ವರನಾದ ಮಹಾತ್ಮಾಜಿಯ ಮಂತ್ರಶಕ್ತಿ; ಅಹಿಂಸಾ ಧನುರ್ಧಾರಿಗಳಾದ ನಮ್ಮ ಮುಂದಾಳುಗಳ ಕಾರ್ಯಶಕ್ತಿ.

ಇಂದು ಭಾರತದ ಯೋಗಶಕ್ತಿ-ಕಾರ್ಯಶಕ್ತಿಗಳ ನಿಜವಾದ ಪ್ರತಿನಿಧ್ಯವನ್ನು ಮಾಡುವವರೆಂದರೆ, ನಮ್ಮ ನಾಯಕ ಜವಾಹರ ನೇಹರು ಅವರು. ಮಹಾತ್ಮಾಜಿಯವರು ಜೀವಿಸಿರುವಾಗಲೇ ತಮ್ಮ ಅಮರಜ್ಯೋತಿ ಸ್ಥಾಪನೆಗೆ ತಕ್ಕ ಅಧಿಷ್ಠಾನವನ್ನು ಜವಾಹರ ಲಾಲರಲ್ಲಿ ಕಂಡು, ಅವರ ಹೃದಯದಲ್ಲಿ ಇರಿಸಿ ಬಿಟ್ಟಿರುವರು. ಇಂದು ಜವಾಹರಲಾಲರಿಗೆ ಪರದೇಶಗಳಲ್ಲಿ ಸಲ್ಲುತ್ತಿರುವ ವಿಜೃಂಭಣೆಯ ಪೂಜೆ-ಪುರಸ್ಕಾರಗಳಿಗೆ ಎರಡು ಕಾರಣಗಳಿರುವುವು: ಮೊದಲನೆಯದು, ದಿವ್ಯಭವಿಷ್ಯವು ಖಂಡಿತವಾಗಿ ಇರುವ ಭಾರತ ಮಹಾರಾಷ್ಟ್ರದ ಪ್ರತಿನಿಧಿಯೆಂಬುದು. ಎರಡನೆಯದೆಂದರೆ, ಜವಾಹರ್‌ಲಾಲರ ಸಹಜೋಜ್ವಲವಾದ ವ್ಯಕ್ತಿತ್ವ. ಭಾರತರಾಷ್ಟ್ರದ ಪ್ರತಿನಿಧಿಯಾಗಿ ಒಬ್ಬ ಸಾಮಾನ್ಯ ಅತಿಥಿಯಾಗಿ ಹೋದರೂ, ನೇಹರು ಅವರಲ್ಲಿ ಅರಳಿನಿಂತ ಪರಿಪೂರ್ಣ ಮಾನವಭಾವ, ಜಗತ್ತಿನ ಜನರಿಂದ ಮನ್ನಣೆಯ ಕಾಣಿಕೆಯನ್ನು ಪಡೆಯಬಲ್ಲದು.

ನಮ್ಮಲ್ಲಿಯ ಒಡಕುಮನದ ರಾಜಕೀಯ ಪಕ್ಷಗಳ ಕೆಲವು ಧುರೀಣರೂ, ಅವರಿಂದ ಪ್ರೇರಿತರಾದ ಕೆಲವು ಜನಸಾಮಾನ್ಯರೂ ಇಂದು ನೆಹರು ಅವರನ್ನು ಬೇಕಾದಷ್ಟು ತೆಗಳುತ್ತಿರಲಿ. ಅದು ಸೂರ್ಯನ ಮೇಲೆ ಹುಡಿಯೆರಚಿದಂತಹ ಆತ್ಮಘಾತಕವೃತ್ತಿಯೆಂಬುದು ಅವರಿಗೇ ಪರಿಣಾಮದಲ್ಲಿ ಕಂಡುಬಾರದಿರದು. ಆ ಅಸಂತುಷ್ಟ ಜನರ ವಿಘಾತಗಳನ್ನು ವಾದಕ್ಕಾಗಿ ಕ್ಷಣಕಾಲ ಒಪ್ಪೋಣ. ಅಮೇರಿಕೆಯ ಕುಟಿಲತಂತ್ರದ ಸರಕಾರ, ಸತ್ಯಾರ್ಥದ ಮುಂಕುಬೂದಿಯಿಂದ ಅವರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಬೇಕೆಂದಿದೆಯೆಂದರೆ— ಆ ಮಾತೂ ಇರಲಿ ಅನ್ನೋಣ. ಆದರೆ ಅಮೇರಿಕೆಯಲ್ಲಿ ಸರಕಾರದಿಂದ ಅಲಿಪ್ತವಾಗಿದ್ದ ಸಂಘ, ಸಂಸ್ಥೆ, ವಿಭೂತಿಗಳಿಂದಲೂ ನೆಹರೂ ಅವರ ವ್ಯಕ್ತಿತ್ವಕ್ಕೆ ಅಭೂತಪೂರ್ವ-ಮನ್ನಣೆ ಸಿಕ್ಕಿದೆಯಲ್ಲ! ಸದ್ಯದ ಸರಕಾರದ ವಿರೋಧಿಗಳೂ ಅಲ್ಲಿ ಇದ್ದಾರೆ. ಜಗತ್ತನ್ನೆ ಬೆರಗುಪಡಿಸಿದ ಪ್ರಾಮಾಣಿಕರಾದ ಸಾಹಿತ್ಯಕರೂ ತತ್ತ್ವಜ್ಞಾನಿಗಳೂ ವಿಜ್ಞಾನಿಗಳೂ ಬುದ್ಧಿಶಾಲಿಗಳೂ ಬೇಕಾದಷ್ಟು ಜನರಿದ್ದಾರೆ. ಅವರೆಲ್ಲರೂ ನೆಹರು ಅವರ ಮಹತಿಯನ್ನು ಒಪ್ಪಿ ಕೊನೆದು ಕೊಂಡಾಡಿದ್ದಾರಲ್ಲವೇ? ತನ್ನ ದೇಶದ ಗತಿಸಿದ ದಿವ್ಯವಿಭೂತಿಗೆ ವರ್ತಮಾನಕಾಲದ ವಿದೇಶೀಯ ವ್ಯಕ್ತಿಯೊಂದನ್ನು ಸರಿಗಟ್ಟಿ ಹೇಳುವುವಕ್ಕೆ, ಎಂತಹರಿಗೂ ಅಭಿಮಾನ ಅಹಂಕಾರಗಳು ಅಡ್ಡ ಬರುವುದು ಸಹಜ; ಆದರೆ ಇಂತಹ ಅಭಿಮಾನ ಅಹಂಕಾರಗಳನ್ನೂ ವಿಚಾರಿಸಿಂತು, ಅಮೇರಿಕೆಯ ಬುದ್ಧಿಶಾಲಿಗಳು, ತಮ್ಮ ರಾಷ್ಟ್ರಕಟ್ಟಿದ ಹಿರಿಯ ವಿಭೂತಿಗಳ ಮಾಲಿಕೆಯಲ್ಲಿ ಜವಾಹರರನ್ನು ನಿಲ್ಲಿಸಲು ಸಿದ್ಧರಾಗಿದ್ದಾರೆ.

ಯಾಕೆ ಸಿದ್ಧರಾಗಬಾರದು? ನೇಹರು ಅವರಿಗೆ ದೊಡ್ಡ ಮನೆತನದಲ್ಲಿ ಜನ್ಮಿಸಿದ ಸದ್ವಂಶದ ಬಲವಿದೆ. ಅತುಲವಾದ ಸಂಪತ್ತಿನ ಸಾಂಗತ್ಯವಿದೆ. ಲೌಕಿಕರು ಬೆಲೆಕೊಡುವಂತಹ ಸುಶಿಕ್ಷಣದ ಬಲವಿರುವುದಲ್ಲದೆ, ಸ್ವಭಾವಸಿದ್ಧವಾದ ಸುಸಂಸ್ಕೃತತೆಯ ಶಕ್ತಿಯಿದೆ. ಇಷ್ಟಿದ್ದು ವಿಶಾಲವಾದ ಹೃದಯವಿದೆ. ಋಷಿಸದೃಶವಾದ ತಪಸ್ಸಿದೆ, ತ್ಯಾಗವಿದೆ. ಲೇಖನಿಯಲ್ಲಿ ಸತ್ತ್ವವಿದೆ. ವಾಣಿಯಲ್ಲಿ ಗಾಂಭೀರ್ಯ-ಔಚಿತ್ಯಗಳಿವೆ. ನೋಟ ಪ್ರಪಂಚವನ್ನೆಲ್ಲ ನೋಡುತ್ತಲಿದೆ. ಮನಸ್ಸು ಭಾರತದ ಹಿತದೊಂದಿಗೆ ಮಾನವಕುಲದ ಕಲ್ಯಾಣವನ್ನೇ ಚಿಂತಿಸುತ್ತಲಿದೆ. ಎಂತಲೆ ಅಸೇತು-ಹಿಮಾಚಲ ಭಾರತದ ಜನತೆಯೆಲ್ಲ 'ಜವಾಹರ ನಮ್ಮವ' ಎಂಬ ಅಭಿಮಾನದಿಂದ ಜುಮ್ಮೇರಿ ನುಡಿಯುತ್ತಲಿದೆ.

ಭಾರತದ ಇತಿಹಾಸಕಾಲದಲ್ಲಿ, "ರಜಪೂತಕುಲಾವತಂಸರೂ ಮಹಾರಾಷ್ಟ್ರ ಕುಲಾವತಂಸರೂ ಕರ್ನಾಟಕ ಕುಲಾವತಂಸರೂ ಆಂಧ್ರಕುಲಾವತಂಸರೂ ದ್ರಾವಿಡಕುಲಾವತಂಸರೂ ಹಲವಾರು ಜನರು ಆಗಿ, ಆ ಆ ಪ್ರದೇಶದ ಜನರ ಅಭಿಮಾನಕ್ಕೆ ಮಾತ್ರ ಕಾರಣರಾಗಿ ಮೆರೆದಿರಬಹುದು; ಆದರೆ ಜವಾಹರರಂತೆ 'ಭಾರತ ಕುಲಾವತಂಸ'ರಾಗಿ ಭಾರತೀಯರೆಲ್ಲರ ಅಭಿಮಾನಕ್ಕೂ ಪಾತ್ರರಾಗಿ ನಿಂತಂತಹ ದಿವ್ಯವ್ಯಕ್ತಿ, ಇತಿಹಾಸಕಾಲದಲ್ಲಿ ಕಾಣುವುದೇ

ಇಲ್ಲವೆಂದು ಹೇಳಿ - ಯಾರೂ ಅಲ್ಲವೆನ್ನಲಾರರು.

ನಾವೆಲ್ಲ ಭಾರತೀಯರು, ಯಾವ ರಾಜಕೀಯ ಸ್ವಾರ್ಥದ ಬುದ್ಧಿಭೇದದ ಮಾತಿಗೂ ಬಲಿಬೀಳದೆ, ಭಾರತೀಯರ ಕಲ್ಯಾಣದ ಭುರವನ್ನೇ ಹೊತ್ತು ನಿಂತಿರುವ ನಮ್ಮ ನಾಯಕ ಜವಾಹರರಿಗೆ, ಒಬ್ಬೊಬ್ಬರೂ—ಅವರು ಅಪೇಕ್ಷಿಸುವ—ನೆರವನ್ನು ಸಲ್ಲಿಸೋಣ. ಅವರ ಒಳನೋಟದೆದುರಿರುವ ಸಮೃದ್ಧಿ-ಸುಖ-ಶಾಂತಿಯಿಂದ ಕೂಡಿದ ಭಾರತನಿರ್ಮಾಣದ ಗುರಿಯನ್ನು ಸಾಧಿಸಲು ಅವಕಾಶ ಕಲ್ಪಿಸಿಕೊಡೋಣ. ಭಾರತ ಭಾಗ್ಯವಿಧಾತನು ಜವಹರರಿಗೆ ಆಯುರಾರೋಗ್ಯ ಕೊಡಲಿ; ಜನತೆಗೆ ಸಹಕಾರದ ಬುದ್ಧಿ, ಸೌಹಾರ್ದಗಳನ್ನು ಕೊಡಲಿ.

ಪ್ರಶ್ನೆಗೆ ಉತ್ತರ

೭

ಶ್ರೀ. ಆರ್. ವಿಟ್ಠಲರಾವ್, ಧಾರವಾಡ

(ಮೊದಲಿನ ೨ ಪ್ರಶ್ನೆಗಳ ಉತ್ತರ ಸಪ್ಟೆಂಬರ್ ಸಂಚಿಕೆಯಲ್ಲಿ ಬಂದಿದೆ.)

೩. ಯಾವುದರ ಆಧಾರದಿಂದ ಮನುಷ್ಯನಿಗೆ ಮನುಷ್ಯತ್ವವು ಬರಕುವುದು?

ಉತ್ತರ:— ಎರಡು ಕಾಲುಗಳ ಆಧಾರದಿಂದ ಮನುಷ್ಯತ್ವ ಬರಕಿದೆ. ನಾಲ್ಕು ಕಾಲುಗಳ ಆಧಾರದಿಂದ ಇರುವಾಗ ಮನುಷ್ಯ ಮಂಗನೆನಿಸಿಕೊಳ್ಳುತ್ತಿದ್ದ.

೪. ಎತ್ತರವಾದ ಪರ್ವತದಿಂದ ನಾವು ಭುಮುಕಿದರೆ ಭೂಮಿಯ ನೇಲಾಗಲಿ, ಇಲ್ಲವೆ ನೀರಿನ ನೇಲಾಗಲಿ ಬೀಳುವೆ ನೆಂಬುದು ಎಲ್ಲರಿಗೂ ಗೊತ್ತುಂಟು; ಅದರಂತೆಯೆ ಈ ಪೃಥ್ವಿಯ ಕೊನೆಯ ದಡದ ಮೇಲೆ ನಿಂತು ಪೃಥ್ವಿಯ ಆಚೆಗೆ ಭುಮುಕಿದರೆ, ನಾವು ಯಾವ ಪ್ರದೇಶದಲ್ಲಿ ಬೀಳುವೆವು?

ಉತ್ತರ:— ಹೇ ವತ್ಸಾ, ಕೆಲವು ವಿಷಯಗಳನ್ನು ಅನುಭವದಿಂದಲೇ ತಿಳಿದುಕೊಳ್ಳಬೇಕಾಗುತ್ತದೆ. ಮೊದಲು ಪೃಥ್ವಿಯ ಕೊನೆಯ ಅಂಚನ್ನು ಕಂಡು ಹಿಡಿ; ಅದರ ಮೇಲೆ ನಿಲ್ಲು; ಆಚೆಗೆ ಭುಮುಕು. ನಿನಗೇನೇನು ಆಯಿತೆಂಬುದನ್ನು ಎಲ್ಲರಿಗೂ ಹೇಳು!

೫. ಸಾಹಿತ್ಯವು ಸಾಹಿತಿಯ ಉದರಪೋಷಣೆಯನ್ನು ಮಾಡಬಲ್ಲದೆ?

ಉತ್ತರ:— ಈ ಪ್ರಶ್ನೆಗೆ ಉತ್ತರವನ್ನು ಈ ಮೊದಲೇ ಕೊಡಲಾಗಿದೆ. ಓದಿನೋಡಿರಿ.

೬. ಆಧುನಿಕ ಯುಗದ ಹಲವು ತರುಣರು ಈ ಪ್ರಪಂಚದ ವಿಷಯದಲ್ಲಿ ಜುಗುಪ್ಸಾ ಭಾವನೆಯನ್ನು ತಳೆಯುತ್ತಿರುವರು. ಈ ಜುಗುಪ್ಸೆಯ ಮೂಲ ಯಾವುದು?

ಉತ್ತರ:— ಕೈಕಾಲು ಅಲ್ಲಾಡಿಸದೆ ಬೇಡಿದ ಭೋಗ ಸಿಕ್ಕಬೇಕೆಂಬ ಆವರ ಆಶೆಗೆ, ಕರ್ಮಪ್ರಧಾನವಾದ ಪ್ರಪಂಚ ಎಟುಕೊಡುತ್ತ ಹೋಗುವುದು. ಆಗ ಅವರಿಗುಂಟಾದ ನಿರಾಶೆ ಪ್ರಪಂಚದ ವಿಷಯದಲ್ಲಿ ಜುಗುಪ್ಸೆ ಹುಟ್ಟಿಸುವುದು.

೮

ಶ್ರೀ. ಕೆ. ಎಚ್. ಉಮರ್ಜಿ, ವಡಾಲಾ-ಮುಂಬಯಿ

೧. ನಿಮ್ಮ ಹೊಸ ವರುಷದ ಸಂಪಾದಕೀಯ ನೋಡಿದೆನು. ಅದರಲ್ಲಿ 'ಮಾಸಿಕಗಳನ್ನು ಓದುವವರು ಕಡಿಮೆ' ಎಂದು ಅಭಿಪ್ರಾಯವಿರುತ್ತದೆ. ಆದರೆ ಕೆಲವು ಕಟು ಅನುಭವಗಳು ಓದುಗರಿಗೆ ಬಂದಿರುತ್ತವೆ. ''ತಮ್ಮ ಪತ್ರಿಕೆಯು ಉತ್ತಮೋತ್ತರಗತಿಯದು'' ಎಂದೂ ''ಉತ್ತಮೋತ್ತಮ ಲೇಖಕರ ಲೇಖನಿಯಿಂದ ಕೂಡಿರುವುದು'' ಎಂದೂ, ಒಬ್ಬ ಪತ್ರಿಕೆಯ ಸಂಪಾದಕರು ಇನ್ನೊಂದು ಪತ್ರಿಕೆಯ ಸಂಪಾದಕರನ್ನು ಹೊಗಳುತ್ತಾರೆ. ಅವನ್ನು ತರಿಸಿ ನೋಡಿದರೆ ಅವರಲ್ಲಿ ಏನೂ ಹುರುಳಿರುವುದಿಲ್ಲ. ಎರಡನೆಯದೆಂದರೆ ಪತ್ರ ಹಾಕಿದರೆ ಕೆಲವರು ಪ್ರತಿ ಕಳಿಸುವುದಿಲ್ಲ. ಬೆಂಗಳೂರಿನ "×××" ದಂಥ ಸಂಪಾದಕರು ಮನಿಯಾರ್ಡರ್ ತೊಗೊಂಡು ತಣ್ಣಗೆ ಕೂಡುತ್ತಾರೆ. ಪೇಟೆಯಲ್ಲಿ ವಿಪುಲವಾಗಿ ಕಾಣುವ ಪತ್ರಿಕೆಗಳನ್ನು ತಕ್ಕೊಂಡು ಓದಿದರೆ ಅರ್ಥವಿಲ್ಲದಾಗಿರುತ್ತವೆ. ಹೀಗಾಗಿ ಓದುಗರಲ್ಲಿ ಅಭಿರುಚಿಯು ಕನ್ಮಿಯಾಗುತ್ತದೆ; ಮತ್ತು ಇವನ್ನು ಓದುವುದರಿಂದ ದ್ರವ್ಯ ಮತ್ತು ವೇಳೆಯ ವ್ಯಯವೆಂದು ದಿನ ಮತ್ತು ವಾರಪತ್ರಿಕೆಗಳ ಬೆನ್ನುಹತ್ತುತ್ತಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಉತ್ತರ:— ಪಾಪ, ನಿಮಗೆ ಬಂದಿರುವ ಅನುಭವಗಳು ಒಳ್ಳೆಯವಾಗಿ ಇಲ್ಲವೆಂದು ತೋರುವುದು. ಒಬ್ಬೊಬ್ಬರ ಅಭಿರುಚಿಯೇ ಇಷ್ಟೊಂದು ವಿಕ್ಷಿಪ್ತ ರೀತಿಯದಿರುವುದು: ಅವರಿಗೆ ಯಾವುದರಲ್ಲಿಯೂ ತಮಗೆ ಬೇಕಾದ ಗುಣವೇ ಕಾಣುವುದಿಲ್ಲ. ಪೇಟೆಯಲ್ಲಿ ವಿಪುಲವಾಗಿ ಸಿಕ್ಕುವ ಪತ್ರಿಕೆಗಳನ್ನು ಮೆಚ್ಚುವ ಜನರು ಇಲ್ಲದೆ ಹೋಗಿದ್ದರೆ, ಆ ಪತ್ರಿಕೆಗಳು ಪೇಟೆಯಲ್ಲಿ 'ವಿಪುಲವಾಗಿ' ಇರಲು ಸಾಧ್ಯವೇ ಇರುತ್ತಿರಲಿಲ್ಲ. ಬೆಂಗಳೂರಿನ '×××'ದಂಥ ಸಂಪಾದಕರು ಯಾವ ದೊಡ್ಡ ಮನುಷ್ಯರೆಂಬುದನ್ನು ತಾವು ಮೊದಲೇ ಆರಿತಿದ್ದಿರೇನು? ಲೋಕದಲ್ಲಿ ಧನ ಮುಳುಗಿಸುವ ತುಂಟ ಗಂಟುಗಳ್ಳರೂ ಇರುತ್ತಾರೆ. ಅಂಥವರು ಒಬ್ಬಿಬ್ಬರು ಇರಬಹುದಾದರೆ, ಪತ್ತುಗಾರಿಕೆಯಿಂದ ವ್ಯವಹಾರ ನಡೆಯಿಸುವ ಹಲವಾರು ಪತ್ರಿಕಾ ಸಂಚಾಲಕರೂ ಗಂಟುಗಳ್ಳರ ಮಾಲಿಕೆಯಲ್ಲಿಯೇ ಬರಬೇಕೆ? ದ್ರವ್ಯನಿಲ್ಲದೆ ದೊರೆತರೆ, ವೇಳೆಯನ್ನು ವ್ಯಯಮಾಡಿ ಎಲ್ಲ ಮಾಸಪತ್ರಿಕೆಗಳನ್ನೂ ಓದುವವರಿದ್ದಾರೆ ಎಂಬುದು ನಮ್ಮ ಅನುಭವ.

(೧)

ಸೈನ್ಯದಲ್ಲಿ ಅಡೇ ನೇಪ್ಪಡೆಯಾದ ಸೈನಿಕನಿಗೆ, ಅವನ ಧೈರ್ಯ ಪರೀಕ್ಷಿಸಬೇಕೆಂದು, ಕೇಳಿದನು:— 'ಯಾವನಾದರೂ ನಿನ್ನ ಮೇಲೆ ರಿವಾಲ್ವರಿನ ಗುರಿಯಿಟ್ಟರೆ ನೀನೇನು ಮಾಡುವಿ?'

"ಆ ಗುರಿಯಿಡುವ ವ್ಯಕ್ತಿ ಹೆಣ್ಣೊ ಗಂಡೊ?"

"ಅದೇಕೆ ಬೇಕು?"

"ಆ ವ್ಯಕ್ತಿ ಗಂಡಾಗಿದ್ದರೆ, ಕಾಲು ಹಿಡಕೋತೀನಿ."

"ಒಳ್ಳೇದು, ಹೆಂಗಸಿದ್ದರೆ?"

"ಕೈಹಿಡೀತೀನಿ."

(೨)

ಹೆಂಡತಿ— ನನ್ನ ಬದಲಾಗಿ ಇನ್ನೊಬ್ಬ ಯಾವಳಾದರೂ ಹೆಂಗುಸಿದ್ದರ, ನಿಮ್ಮ ಸಂಗತಿ ಸಂಸಾರಮಾಡಲಾರದಕ್ಕೆ ಜೀವಾನ ಕೊಡತಿದ್ದಳು!

ಗಂಡ— ನನ್ನ ಬದಲಾಗಿ ಇನ್ನೊಬ್ಬ ಯಾವನಾದರೂ ಗಂಡಸು ಇದ್ದರ, ನಿನ್ನ ಸಂಗತಿ ಸಂಸಾರಮಾಡಲಾರದ್ದಕ್ಕ, ನಿನ್ನ ಜೀವಾನ ತೊಗೋತಿದ್ದ!

(೩)

ನಾಲ್ಕುಜನ ಮುದಿ ಜೆಂಟ್ಲಮೆನ್‌ಗಳಾರು ಕ್ಲಬ್ಬಿನಲ್ಲಿ ಬ್ರಿಜ್ ಆಡಲು ಕುಳಿತಿದ್ದರು. ಒಬ್ಬರಿಗಿಂತ ಒಬ್ಬರು ಕಿವುಡರು! ಮೊದಲನೆಯವ ಅಂದ:— 'ನಾಲ್ಕು ಇಸ್ಪೀಟು' ಎರಡನೆಯವ ಅಂದ:— 'ಮೂರು ಕುಂಬಳ' ಮೂರನೆಯವ ಅಂದ:— 'ಎರಡು ಚೌಕು' ನಾಲ್ಕನೆಯವ ಅಂದ:— 'ಯಾರೂ ಹೇಳದಿ ಇದ್ದರ ನಾ ಒಂದು ಕಳವರ!' !!

(೪)

'ಸರಕಾರವವರು ಮಂತ್ರಿಗಳ ಹಾಗು ಅಸೆಂಬ್ಲಿ ಸಭಾಸದರ ಭಾಷಣಗಳನ್ನು ಅಚ್ಚುಹಾಕಿಸಿ, ಯಾವ ಲಾಭದ ಆಶೆಯಿಲ್ಲದೆ ಜನರಿಗೆ ಪುಕ್ಕಟೆಯಾಗಿ ಹಂಚುತ್ತಾರೆ.'

'ಜನರಾದರೂ ಅವನ್ನು ಅಡೇ ದೃಷ್ಟಿಯಿಂದಲೇ ಓದುತ್ತಾರೆ!

(೫)

ಒಬ್ಬ ಲೇಖಕನನ್ನು ಹೀನಾಯಗೊಳಿಸಬೇಕೆಂದು ಕೊಂಕುಬುದ್ಧಿಯವರೊಬ್ಬರು — 'ನಿಮ್ಮ ಹೊಸ ಕಾದಂಬರಿ ಓದಿದೆ; ಅದನ್ನು ಯಾರು ನಿಮಗ ಬರೆದುಕೊಟ್ಟರು?

ಲೇಖಕರು ತಟ್ಟನೆ ಮರುಸವಾಲು ಹಾಕಿದರು— 'ಯಾರು ನಿಮಗ ಓದಿತೋರಿಸಿದರು....ಅದನ್ನ ಮೊದಲು ಹೇಳಿರಿ!'

(೬)

ಊರೂರು ತಿರುಗುವ ಕಂಪನಿ ವಿಜಯಟನಿಗೆ ಒಮ್ಮೆಲೇ ಮನೆಗೆ ಹೋಗುವ ಆಶೆಯಾಯಿತು. ಹೆಂಡತಿಗೆ ತಾರ ಮಾಡಿ ತಿಳಿಸಿದ: 'ಕೂಡಲೆ ಬರುವೆ' ಎಂದು.

ಮನೆಯನ್ನು ಪ್ರವೇಶಿಸಿದ ಮೇಲೆ ನೋಡುತ್ತಾನೆ: ತನ್ನ ಹೆಂಡತಿ ಇನ್ನೊಬ್ಬ ಪುರುಷನ ತೋಳ್ತೆಕ್ಕೆಯಲ್ಲಿ. ಸಂತಾಪಗೊಂಡು ಹೊರಬಿದ್ದವನೆ, ಊರಲ್ಲಿಯೇ ಒಂದು ಹೋಟೆಲ್ಲಿನಲ್ಲಿ ಕೋಣೆ ಹಿಡಿದು. ಅವನು ಹೆಂಡತಿಗೆ ತಿಳಿಸಿದ:— ತಾನು ಘಟಸ್ಫೋಟ ಮಾಡಿಕೊಳ್ಳುವವ ಎಂದು.

ಮರುದಿನ, ಮಾವ ರಾಜೀಮಾಡಿಸಲು ಬಂದ: 'ಇದು ನೋಡಿರಿ! ನಿಮ್ಮ ಹೆಂಡತಿಗೆ ಒಂದೇ ದಿನ ಅವಕಾಶ ಕೊಡಿರಿ ಇದಕ್ಕೆ ಸಮಾಧಾನಕರವಾದ ಉತ್ತರ ನಾಳೆ ಆಕೆ ಖಂಡಿತವಾಗಿ ಕೊಡುತ್ತಾಳೆ. ಆ ಮೇಲೆ ನಿಮಗೆ ತಿಳಿದಂತೆ ನೀವು ಮಾಡಬಹುದು' ಹೇಳಿದ ಮಾವ.

ಮಾವನ ಮಾತನ್ನು ಮೀರಲಾರದೆ ಅಳಿಯ ಒಂದು ದಿನ ತಡೆಯಲು ಸಮ್ಮತಿಸಿದ.

ಮಾರನೆಯ ದಿನ ಮಾವನವರು ಅಳಿಯ-ದೇವರ ಬೆನ್ನು ತಟ್ಟುತ್ತ ಹೇಳಿದರು: 'ನನ್ನ ಮಗಳು ಕೊಟ್ಟ ಕಾರಣ ನಿಜವಾಗಿ ಸಯುಕ್ತಿಕವಾಗಿದೆ.'

'ಅದೇನು?'

'ನಿಮ್ಮ ತಾರು ಅವಳಿಗೆ ಮುಟ್ಟಲೇ ಇಲ್ಲವಂತೆ!'

(೭)

ರೋಗಿಯ ಅಪ್ತ—'ಡಾಕ್ಟರ್, ಇದು ನೈಜವೊನಿಯಾ ಎಂದು ನಿಮಗೆ ವಿಶ್ವಾಸ ಇದೆಯಲ್ಲ? ಯಾಕಂದರೆ, ಎಷ್ಟೋ ಸಲ ಡಾಕ್ಟರರು ಔಷಧ ಕೊಡುವದು ಒಂದು ರೋಗಕ್ಕೆ, ರೋಗಿ ಸಾಯುವದು ಇನ್ನೊಂದು ರೋಗದಿಂದ!'

ಡಾ— 'ಆದರೆ ನನ್ನ ವಿಷಯದಲ್ಲಿ ಹೀಗೆಂದೂ ಆಗಿಲ್ಲ. ಒಂದು ರೋಗಕ್ಕೆ ಎಂದು ನಾನು ಔಷಧ ಕೊಟ್ಟೆನೆಂದರೆ, ರೋಗಿ ಸತ್ತರೆ ಅದೇ ರೋಗದಿಂದಲೇ ಸಾಯಬೇಕು!'

ಮಾತು—ಕತೆ

(ಒಂದು ಜೀವನಕತೆ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ.

★

ಸ್ವಾತಂತ್ರ್ಯವೆಂಬುದನ್ನು ನಮ್ಮ ತಿಳಿಗೇಡಿ ಜನರು ಸ್ವೈರವೃತ್ತಿಗೆ ಇಳಿಸುತ್ತಿದ್ದಾರೆ. ಸ್ವಾತಂತ್ರ್ಯವೆಂಬುದಕ್ಕೆ ಕರ್ತವ್ಯಜೀವನದ ಮೇರೆಗಳು ಇದ್ದೇ ಇರುವುವು. ಇಂತಹ ಮೇರೆಗಳನ್ನು ಒಲ್ಲದ ಬಾಳು ದುಸ್ಸಂತಾನ ನಿರ್ಮಾಣಕ್ಕೆ ಕಾರಣವಾಗುತ್ತದೆ.

★

ನಾಡಿಗೆ ಸ್ವಾತಂತ್ರ್ಯ ಬಂದಿದೆ. ಎಲ್ಲೆಲ್ಲೂ ಸ್ವೈರಾಚಾರ ಹೆಚ್ಚಿದೆ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರ ಎನ್ನುವಂತೆ ನಾಡಿನ ಜನ ವರ್ತಿಸುತ್ತಿದೆ; ಬಹುದಿನದ ಸಾಧನೆಯಿಂದ ಪಡೆದ ಸಿದ್ಧಿಯನ್ನು ಮಣ್ಣುಗೂಡಿಸುತ್ತಲಿದೆ. ಇದನ್ನು ತಡೆಯಲಿಕ್ಕೆ ಭಾರತದ ಪಳ್ಳಿ-ಪಳ್ಳಿಗಳಲ್ಲಿಯೂ ಗ್ರಾಮ ಸಂರಕ್ಷಕದಳಗಳನ್ನು ಕಟ್ಟಲಾಗುತ್ತಿದೆ. ಈ ದಳದ ಸೈನಿಕನಾಗಿ ನಮ್ಮೂರನ್ನು ಕಾಯುವಾಗ ಕೇಳಿದ ಕೆಲವು ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದೇನೆ. ಓದುಗರಿಗೆ ಇದೂ ಒಂದು ಕತೆ ಎನಿಸೀತೆಂದು ಭಾವಿಸಿದ್ದೇನೆ.

೧

" ನೋಡು ! ನಾಲ್ಕೂ ಮಕ್ಕಳಸ್ಥ ಸಂಬಾಳಿಸಿಕೊಂಡು, ನಾಲ್ಕು ದಿನ ಮರ್ಯಾದಿಯಿಂದ ಸಂಸಾರ ಮಾಡಿ ಹೋಗೋದಕ್ಕೂ ಒಂಚೂರು ಬುದ್ಧಿವಂತಿಕಿ ಬೇಕಾಗ್ತದ. ಮನೆಗೆ ಹಿರಿಯಳಾದ ನೀನೂ ದಿನಾ ಬೆಳಗಾದರೆ ಜಗಳಾಡತ ಕೂತರ, ನಾ ಯಾವ ಗಿಡಕ್ಕ ಜೋತಾಡಲಿ ? "

" ನಿಮ್ಮ ಮುಂದ ಮಾತನಾಡುವ ಮಾತಕ ಉಳಿಯಲಿಲ್ಲ. ಸಂಸಾರದೊಳಗ ಬರುವ ತೊಡಕು-ತೊಂದರೆಗಳನ್ನು ಹೇಳಿದರ, ನೀವು ಹಗ್ಗಾ ತಕ್ಕೊಂಡು ಗಿಡಕ್ಕ ಹೋಗತೇನು ಅಂತೀರಿ. ನಾ ಏನೂ ಹೇಳಕಬಾರದೂ ಅಂತೀರೋ ಹ್ಯಾಂಗ ? "

" ಹೇಳಲ್ಲ; ಹೇಳಲಿಕ್ಕೆ ಯಾರ ಬ್ಯಾಡ ಅಂತಾರ? ಮನಿಯೊಳಗ ನಾಲ್ಕು ಮಂದಿ ತಿನ್ನವರಿದ್ದಾರ, ಹೆಂಗಸರು ನಾಲ್ಕು ಮಂದಿ ಮಾಡವರಿದ್ದಾರ. ಇಷ್ಟಕ್ಕ ದಿನಾ ಬೆಳಗಾದರ ಜಗಳ. ನಗ-ನಗತ ಹೇಳಿ, ಸೊಸೆಯಂದಿರಿಂದ ಕೆಲಸಾ ಮಾಡಿಸೋದ ಅವ. ಹೌದು ಅನ್ನಿಸಿಕೊಂಡು ನಾಲ್ಕ ದಿನಾ ಸಂಸಾರ ಮಾಡಿ ಹೋಗೋದ ಅದ. ಹತ್ತ ಸಲ ಹೇಳಿದರೂ ಇಷ್ಟು ತಿಳಿವೊಲ್ದು ನಿನಗ. ಹ್ಯಾಂಗ ಮೂರಿಪ್ಪತ್ತು ವರ್ಷದ ಮುದಿಕಿಯಾದಿಯೋ ಏನೋ ! "

" ನಿಮ್ಮ ಕೂಡ ದಿನಾ ಬೆಳಗಾದರ ನಾನೂ ಹೊಲಕ್ಕಽ ಬರತೇನಿ ನಡಿಯಿರಿ ! ಅವರಽ ಏನಮಾಡಿಕೊಳ್ಳತಾರ ಮಾಡಿಕೊಳ್ಳಲಿ. ಹ್ಯಾಂಗೂ ಹಿರಿಯರು ತೋಡಿದ ಭಾವಿ ಅದ. ಅಲ್ಲೇ ನಂದೂ ಒಂದು ಸೀರೀ ಒರಸಿ, ಒಣಗಿಸಿಕೊಳ್ಳತೇನಿ. ಏನ ಮನಿಯಿಂದ ಪಲ್ಲೇ ರೊಟ್ಟಿ ತಂದು ಕೊಟ್ಟಾರು, ಅದನ್ನ ತಿಂದು ಕೂಡತೇನಿ. ಕುಸುಮಾನ ಕೂಡ ಇನ್ನ ನಾಲ್ಕ ದಿನಾನೂ ಕೂಡಿ ಇರೋದಕ್ಕ ನನಗ ಆಗದು. ಮನಿಗೆ ಬಂದು ಇನ್ನೂ ಆರು ತಿಂಗಳು ಆಗಿಲ್ಲ, ಇಷ್ಟರಲ್ಲೇ ಮನಿಯವರೊಳಗ ಎರಡ ಎಣಿಸಿದರ ಹ್ಯಾಂಗ ನಡೆಯಬೇಕು ಸಂಸಾರ ? ಈಕಿಯ ಗಂಡ ಒಬ್ಬನಽ ಮನಿಯೊಳಗ ಉಣ್ಣುವವ ಇರತಾನಽ ? ಬೆಳಿಗ್ಗೆದ್ದು, ನಿನ್ನ ಗಂಡನಿಗೆ ರೊಟ್ಟೀ ಕಟ್ಟಿಕೊಡೂ ಅಂತ ಹೇಳಿ ಕಳಿಸಿದರ, ಗಡಿಗಿಯೊಳಗಿನ ಕೆನೆಮೊಸರನ್ನೆಲ್ಲಾ ಒಬ್ಬನಿಗೇ ಹಾಕಿ ಕಟ್ಟಿ ಕೊಡುವುದಾ ? ಉಳಿದ ಮೂರು ಮಂದಿ ಮಕ್ಕಳಿಗೆ ನಾ ಏನ ಬುತ್ತೀ ತುಂಬಿ ಕೊಡಬೇಕು ? ನೀನಽ ಹೇಳರಿ ! ಉಳಿದ ಸೊಸೆಯಂದಿರೂ ಹಾಲಿಗೆ ಹೆಪ್ಪು ಹಾಕಿದಂಗ ಮುಖ ಮಾಡಿಕೊಂಡು ಇರತಾರ. ಅವರೂ ನೆರಿ-ಮನೀ ಹೆಂಗಸರ ಮಾತ ಕೇಳಿ, ಜಗಳಕ್ಕ ನಿಲ್ಲತಾರ. ಹಿಂಗs ಏನಾನರೂ ಕಾರಣ ಆಗಿ, ದಿನಾ ಮನಿಯೊಳಗ ಜಗಳಽ ಜಗಳ ! ಅಪಕ್ಕೆಲ್ಲಾ ನಿನ್ನ ಸಣ್ಣ ಸೊಸಿ ಕುಸುಮಾನಽ ಕಾರಣ. ನೊನ್ನೇ ಬಚ್ಚಲದೊಳಗಿನ ನನ್ನ ಸೀರಿನಽ ಒಂದು ಮರತು ಹ್ಯಾಂಗ ಒಗೆಯಲಿಕ್ಕೆ ಹೋಗತಾಳ ಅಕಿ ? ಅಲ್ಲೇ ಗೂಟದ ಮ್ಯಾಲ ಇವ್ವ ನನ್ನ ಗಂಡನ ದೋತರಾ ಮರಿಯಲಿಲ್ಲಾ ? ಎಲ್ಲಾ ಇದ್ದದ್ದು ಅಕಿಯ ಕಡೆ ಕಾಣಿ ನೋಡು ! "

" ಹೀಂಗಿದ್ದರ ವೇಟೆಯೊಳಗಿನ ಮನಿ ಹ್ಯಾಂಗೂ ತೆರವಽ ಆದ. ಅಲ್ಲಿ ಆ ಗಂಡ-ಹೆಂತರನ್ನು ಇಟ್ಟು ಬಿಡೋಣ. ಏನು ಎರಡು ಚೀಲ ಜೋಳಾ ಕಾಳೂ ಒಯ್ದು ಒಗದರ ಆಯ್ತು. ಕುದಿಸಿ ತಿನ್ನತಾರ....ತೋಟಕ್ಕ ದುಡಿಯಲಿಕ್ಕೆ ಬರತಾರ ದಿನಾ ಬೆಳಗಾದರ ಈ ಕಟಕಟೇ ಬೇಡ. "

" ಉಳಿದವರೂ ಹಾಂಗೇ ಬೇಡವರಲ್ಲ ? "

" ಅವರೇನ ಬೇಡತಾರ ? ಇವನ ಮದಿವಿ ಮೊನ್ನೇ ಆಗೇದ. ಈಗಿನ ಹುಡುಗರು ! ಕೂಡಿ ನಗಬೇಕೂ ಕೆಲೀಬೇಕೂ ಅಂತಾವ. ಮನಿಯೊಳಗ ನಾಲ್ಕು ಮುಂದಿಯೊಳಗ ಸಾಧಿನೂದಿಲ್ಲ. ಅದಕ್ಕs ಇದೆಲ್ಲಾ ತಂಟೆ. ಆ ಮನಿಯೊಳಗ ನಾಲ್ಕುದಿನಾ ಇರಲಿ. ನಮ್ಮ ಬಾಬೂಗs ಬೇಕಾನಂಗ ಕಾಣ್ತಾನದ. ಮೊನ್ನೆ ಮನಿಗೆ ಮುಲಗಲಿಕ್ಕೆ ಬರುವನದರ ಸಲುವಾಗಿ, ತೋಟದೊಳಗ ತನ್ನ ಅಣ್ಣನ ಕೂಡಾ ನ್ಯಾಯ ಹೂಡಿದ್ದ. "

" ಅದೆಲ್ಲಾ ಆಯ್ತು ; ಈಗಿನ ಹುಡುಗರು ! ಮನೀ ಬೇರೆ ಮಾಡಿ ಕೊಟ್ಟರ ತೀರೇ ಹೋಯ್ತು. ನಾಳೆ ತೋಟದ ಕಡೆಗೆ ಹಾಯ್ದರ ನನ್ನ ಕೇಳು ! "



ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

"ಮನಿಯೊಳಗ ಕೂತು ಹೊಟ್ಟಗೇನ ಮಾಡತಾರ ?"

"ಬಂದು ನಲ್ಲಾ ನಿನ್ನ ಮಗಾ ಒಬ್ಬ! ಸೊಸೀ ಏನೂ ಬರೂದಿಲ್ಲ ಬಿಡೂದಿಲ್ಲ."

"ಮನಿಯೊಳಗs ಇರಲಿ. ಒಂದು ಎಮ್ಮಾ ಸಂಬಾಳಿಸಿದರ ಸಾಕು. ಅವರ ಬಾಗಿಲೊಳಗ ಒಯ್ದು ಕಟ್ಟ ಬಿಡತೀನ ಎಮ್ಮಾನ. ಎಲ್ಲಿಯಾದರೂ ದುಡದs ತಿನ್ನೋದ ಅಲ್ಲ?"

"ನೋಡರಿ; ನಿಮಗ ತಿಳಿದಂತೆ ಮಾಡಿರಿ. ಬೇರೆ ಇಟ್ಟರ, ಅವರೇನೂ ನಮ್ಮ ಹಿಡಿತದೊಳಗ ಉಳಿಯೂದಿಲ್ಲ...."

"ಎರಡೂ ಮನಿಯ ಕಡೆ ನಿನ್ನ ಲಕ್ಷ ಇರಬೇಕಲ್ಲ ಮತ್ತ! ನಾನೂ ಮಧ್ಯಾಹ್ನ ಆಲ್ಲೇ ಹೋಗಿ ಕೂಡಬೇಕು. ಹೀಂಗs ಏನಾದರೂ ಮಾಡಿ,ಮನೆತನದೊಳಗಿನ ತೊಡಕು ಬಿಡಿಸಿದರ ಆಯ್ತು...."

"ಆ ಮನಿಯೊಳಗ ಇಡುವದಕ್ಕಿಂತಾ ತೋಟದೊಳಗs ಒಯ್ದು ಇಟ್ಟರ ನೆಟ್ಟಗಲ್ಲ?"

ಅಲ್ಲಿಯೂ ಬೇರೆ ಇಬ್ಬರನ್ನು ಇಡತೇನಿ. ಇನ್ನ ಎಲ್ಲಾರೂ ಒತ್ತಟ್ಟಿಗೇ ಇದ್ದೇವು ಅಂದರ ನಡೆಯೋದಿಲ್ಲ ಮನಿತನ. ಹತ್ತು ಮನಿತನ ಕೂಡಿ ಒತ್ತಟ್ಟಿಗೆ ಇದ್ದರ, ನೇಳೆ ಹೊತ್ತಿನೊಳಗ ಉಪಯೋಗ ಆಗ್ತದಂತ. ನಮ್ಮ ಹಿರಿಯರು ಹಳ್ಳೀ,ಊರೂ ಅಂತ ಕಟ್ಟಿ ಕೊಂಡರು. ಅದs ಹಳ್ಳಿಯೊಳಗ, ನಾಲ್ಕು ಜನರ್ಕೆ ಒಂದು ಸಂಸಾರಾನ ಒಂದಾಗಿ ಇರಲಿಕ್ಕೆ ಕೊಡೂದಿಲ್ಲಾ ಈ ಜನ. ಇಂಥವರೊಳಗ ತಿಳಿಯದ ಹುಡುಗರನ್ನ ಕಟ್ಟಕೊಂಡು ಮರ್ಯಾದಿಯಿಂದ ಜಗದೊಳಗ ಬಾಳಬೇಕಾಗೇದ. 'ಈಸಬೇಕು ಇದ್ದು ಜೈಸಬೇಕು' ಅಂತ ದಾಸರ ಹಾಡು ಇಲ್ಲs? ನಮ್ಮಂಥವರ ಪಾಡ ನೋಡೇ ಹಾಡಿದ್ದದು!"

ಮಾತಿನ ಮುಡಿಯೊಡನೆ ನಿಟ್ಟುಸಿರೊಂದು ಕೇಳಬಂದಿತು. ಏನೋ ಮನೆಯ ಹಿರಿಯರು—ಸಿದ್ದಪ್ಪ, ಸಾತವ್ವ,—ಮಾತನಾಡುತ್ತಿದ್ದಾರೆ. ಮನೆತನ ಹೋಳಾಗಿರಬಾರದು, ಹೋಳಾದಂತೆ ಜನರಿಗೂ ಕಂಡಿರಬಾರದು, ಮಕ್ಕಳು ಮಾತ್ರ ಬೇರೆಬೇರೆಯಾಗಿ ನಿಂತು, ಜಗಳವಿಲ್ಲದೆ ಬಾಳಿರಬೇಕು—ಎನ್ನುವ ಯೋಜನೆಯನ್ನು ಹೂಡುತ್ತಲಿದ್ದಾರೆ. ಮಕ್ಕಳಿಗೆ ಹೊಸ ವ್ಯವಸ್ಥೆಗಳನ್ನು ಮಾಡಿಕೊಡುವಾಗ, ಹಿರಿಯರಿಗೆ ಇರುಳು ಎರಡು ಹೊಡದರೂ ಕಣ್ಣಿಗೆ ನಿದ್ರೆ ಎಲ್ಲಿಂದ ಬಂದೀತು? 'ಒಂದು ಮನೆತನದ ಹೊಣೆ ಹೊತ್ತ ಹೆತ್ತವರಿಗೇ ಈ ಸಮಸ್ಯೆಯಾದರೆ, ದೇಶದ ಹೊಣೆ ಹೊತ್ತಿರುವ ಹಿರಿಯರ ಗತಿ ಏನು?' ಎಂದು ವಿಚಾರಿಸುತ್ತ, ಕತ್ತಲೆಯಲ್ಲಿ ನಾನು ಮುಂದಿನ ಓಣಿಗೆ ಸಾಗಿದೆ. ನಾಯಿಗಳು ದೂರದಲ್ಲಿ 'ಒವ್' ಎಂದು ಬೊಗಳುವ ಸದ್ದು ಕೇಳಿಸುತ್ತಿತ್ತು.

೨

ವಾರದಲ್ಲಿ ಒಂದು ದಿನ ನಾನು ಊರಲ್ಲಿ ಕಾವಲಿಗೆ ತಿರುಗಬೇಕಾಗುತ್ತಿತ್ತು. ಈ ವಾರ ಪೇಟೆಯ ಓಣಿಯನ್ನು ಕಾಯುವ ಹೊಣೆಯು ನನ್ನ ಮೇಲೆ ಬಿದ್ದಿತು. ಕೊತವಾಲನ ಆಜ್ಞೆಯಾದತ್ತ ನಾವು ಹೋಗಬೇಕಾಗುವುದು.

ಈಗಾಗಲೇ ಹನ್ನೆರಡು ಹೊಡೆದು ಹೋಗಿದ್ದಿತು. ಆದರೂ ಒಂದು ಕೆರುಮನೆಯ ಕಿಟಕಿಯಿಂದ ಬೆಳಕು ಹರಿದು ಹೊರಗೆ ಬರಲು ಯತ್ನಿಸುತ್ತಿದ್ದಿತು. 'ಇಂಥ ಕಂಟ್ರೋಲಿನ ದಿನದಲ್ಲಿ ಇನ್ನೂ ಯಾರು ದೀಪ ಉರಿಸುತ್ತಿದ್ದಾರಪ್ಪ!' ಎಂದುಕೊಂಡು, ಆ ಮನೆಯ ಸಮೀಪಕ್ಕೆ ಸಾಗಿದೆ. ಒಳಗೆ ಹೊಸ ದಂಪತಿಗಳ ಸರಸ-ವಿರಸ ಸಾಗಿದೆ.

"ನಾಳೆ ಒಂದು ದಿನ ನೀವು ತೋಟಕ್ಕ ಹೋಗದಿದ್ದರ ನಡೆಯೂದಿಲ್ಲಾ?"

"ಮನಿಯೊಳಗ ಏನು ಕೆಲಸ?"

"ಕೆಲಸ ಇದ್ದರನs ಇರಬೇಕೇನು?" ಸ್ವಲ್ಪ ತಡೆದು "ದಿನಾ ಬೆಳಗಾದರ ನೀವು ತೋಟದೊಳಗ, ನಾ ಮನಿಯೊಳಗ! ನನಗ ಹೊತ್ತರೆ ಹ್ಯಾಂಗ ಹೋಗಬೇಕು? ಎಮ್ಮಾ— ನಾನು, ನಾನು— ಎಮ್ಮಾ ಜೋಡೀ ಆಗಿದೇವಿ...."

"ನೀನೂ ತೋಟಕ್ಕ ಬರತs ಇರಲ್ಲ!"

"ನಾ ಮತ್ತ ಅವರೊಳಗs ಬರಲಿ ಏನ ಮೂಗ ತಿಕ್ಕತ?"

"ನೀ ಹೀಂಗ ತಿಳಕೊಂಡರ ನಾ ಏನ ಮಾಡಲಿ?"

"ಒಂದು ದಿನಾ ತೋಟಕ್ಕ ಹೋಗಬೇಕು, ಎರಡು ದಿನಾ ಮನಿಯೊಳಗ ಇರಬೇಕು. ಇರೂದಿಲ್ಲೇನ ಮಂದೀ ಗಂಡಸ ಸೆಲ್ಲಾ...?"

"ತೋಟದ ಕೆಲಸ ಹತ್ನೆರಡು ತಿಂಗಳೂ ಇರತಕದ. ಅಣ್ಣಂದಿ ಕೆಲ್ಲಾ ಮುಡಿಯುವಾಗ, ನಾ ಮನಿಯೊಳಗ ಹ್ಯಾಂಗ ಕೂಡಲಿ?"

"ಅವಂಗೇನ ಮನಿಯೊಳಗ ಇರಲಿಕ್ಕೆ ಬ್ಯಾಡಾ ಅಂತೀರೇನು ನೀವು?"

"ಹಾಂಗ ಹ್ಯಾಂಗ ಆದೀತು?"

"ನನಗೇನ ಜೀವ ಗಮಿಸೂದಿಲ್ಲ ಹೋಗರಿ!"

ಸ್ವಲ್ಪ ಹೊತ್ತು ನೀರವ, ನಿಶ್ಯಬ್ದ.

"ಯಾಕ ಮಾತನಾಡಪ್ಪೊಲ್ಲಿರಿ?"

ಸಣ್ಣ ಗೊರಿಕೆಯ ಸದ್ದು.

"ಕಣ್ಣ ಮುಚ್ಚಿದಿರೇನು?"

"ಆಂ?"

"ಹಗಲೀ ತೋಟ, ರಾತ್ರೀ ನಿದ್ದಿ...."

"ಇಂದ ಕೆಲಸ ಬಹಳ ಇತ್ತು ತೋಟದೊಳಗ...."

"ಎಂದ ಇರೂದಿಲ್ಲ? ನನ್ನ ನಾಳೆ ತವರು ಮನಿಗೆ ಕಳಸಿ, ನೀವು ತೋಟದೊಳಗs ಇರು ಹೋಗರಿ!"

"ಯಾಕ?"

"ಎಷ್ಟು ಸಾರೆ ಹೇಳಲಿ, 'ನನಗ ಹೊತ್ತs ಹೋಗದು' ಅಂತ...."

"ಮಧ್ಯಾನ್ನ ಅವ್ವನ ಹತ್ತರ ಹೋಗಿ ಕೂಡಬೇಕು...."

"ನೀವು ನೀವು ತೋಟದೊಳಗs...."

ಈ ದಂಪತಿಗಳ ತೊಡಕನ್ನು ಬಿಡಿಸುವುದು ನನ್ನಂಥವನಿಗಂತೂ ಸಾಧ್ಯವಿಲ್ಲವೆಂದು ತೋರಿತು. ಬಾಬುರಾಜನೊಡನೆ ಬೇರೆ ಮನೆಯಲ್ಲಿ ನಿಂತು ಸುಖವಾಗಿ ಬಾಳಬಯಸಿದ ಕುಸುಮಳ ಮುಗ್ಧಜೀವ, ಈಗ ಮತ್ತೆ ಪತಿಯ ಸತತ ಸಹವಾಸಕ್ಕಾಗಿ ಕಾತರಿಸುತ್ತಿದೆ. ನಾಲ್ಕು ಜನರೊಡನೆ ಇದ್ದಾಗ ಸಿಕ್ಕದ ಸುಖ, ಒಬ್ಬಳೇ ಇದ್ದರೂ ದೊರಕದಾಗಿದೆ. ಪತಿಯ ಜೊತೆಯಲ್ಲಿ ದುಡಿಯುವ ವಿಚಾರಕ್ಕೆ ಅವಳ ಮನಸ್ಸು ಒಪ್ಪದಾಗಿದೆ. ತನ್ನೊಡನೆ ಪತಿಯೂ ಕೆಲಸವಿಲ್ಲದೆ ಕಾಲಕಳೆಯಲಿ— ಎನ್ನುವ ಬಯಕೆಯೇ ಪ್ರಬಲವಾಗಿದೆ. ಬಾಬುರಾಜನು ಅಣ್ಣಂದಿರೊಡನೆ ಅಡವಿಯಲ್ಲಿ ದುಡಿಯದೆ ಬದುಕಲಾರ. ಎಂದ ಮೇಲೆ, ಈ ತೊಡಕು ಬಿಡುವುದೆಂತು?

ದೇಶದ ಬಾಳಿನಲ್ಲೂ ಅನೇಕ ತೊಡಕುಗಳುಂಟು. ನಾಡು ಹೋಳಾಯಿತು. ಹೋಳಾಗಿಯೂ ಸುಖದಲ್ಲಿ ಬಾಳದಾಯಿತು. ಬೇರೆಯಾಗಿ ನಿಂತು ಸುಖ ಪಡೆಯುವೆವೆನ್ನುವ ಪಾಕಿಸ್ತಾನಿಗಳು, ತಿರುಗಿ ಹಿಂದುಸ್ತಾನದ ರಾಜಕೀಯರಂಗದಲ್ಲಿ ಕೈಹಾಕುವರು. ಒಕ್ಕೈಯ ರೀತಿಯಿಂದಲ್ಲಬಾಳಬೇಕೆನ್ನುವ ದೇಶಕ್ಕೂ ಅಡ್ಡಿಯನ್ನು ಒಡ್ಡುವರು. ದೇಶದ ಮುಂದಿರುವ ಇಂಥ ಸಮಸ್ಯೆಗಳನ್ನೇ ಇಲ್ಲಿ ಮನೆ-ಮನೆಯಲ್ಲಿಯೂ ಕಾಣುತ್ತೇವಲ್ಲ!

ಒಂದಾಗಿ ಬಾಳುವ ಭಾರತೀಯ ಸಂಸ್ಕೃತಿಯೆ ನಷ್ಟವಾಯಿತೆ? ಪ್ರಶ್ನೆ ಪ್ರಶ್ನೆಯಾಗಿಯೇ ನನ್ನ ಮುಂದೆ ಉಳಿಯಿತು. ಮೆಲ್ಲನೆ ಅಲ್ಲಿಂದ ನಡೆದೆ. ನನ್ನ ಹೆಜ್ಜೆಯ ಸದ್ದಿಗೆ ಕೈಯೊಳಗಿನ ಬಡಿಗೆಯ ಸಪ್ಪಳ ತಾಳಹಾಕುತ್ತಲಿತ್ತು. ಕತ್ತಲೆಯಲ್ಲಿ ಎಡವಿ ಮುಗ್ಗರಿಸಿದಾಗ ಆ ತಾಳ ತಪ್ಪುವುದು. ಏಳುತ್ತ ಬೀಳುತ್ತ ಕತ್ತಲೆಯ ದಾರಿಯಲ್ಲಿ ಮುಂದೆ ಸಾಗಿದೆ.

೩

"ಯಾಕ, ಸಿಟ್ಟೇನ ನನ್ನ ಮ್ಯಾಲ?"

"ಸಿಟ್ಟಮಾಡಲಿಕ್ಕೆ ನನ್ನಬೇನು ಅಧಿಕಾರ ನಡೀತದ ನಿಮ್ಮ ಮ್ಯಾಲ?"

"ನಿನ್ನಮ್ಯಾಲ ನಂದು, ನನ್ನ ಮ್ಯಾಲ ನಿಂದು ಅಧಿಕಾರ ನಡದs ನಡೀತsದ. ಎಂದ ಮದಿವಿ ಆಗಿದೇವೋ ಅಂದೇ ಆ ಅಧಿಕಾರ ಇಬ್ಬರಿಗೂ ಬಂದsದ."

"ನಿಮಗಷ್ಟs ಬಂದsದ, ಸಿಕ್ಕಸಿಕ್ಕಾಗ ಮನಿಗೆ ಬರಲಿಕ್ಕೆ! ಸಣ್ಣವರಾಗಿ ನೋಡರಿ.... ಅವರು ಜೇಟಿಯೊಳಗಿನ ಮನಿ ಹಿಡಪಕೊಂಡು ಕೂತರು! ಹತ್ತೆಂಟು ವರ್ಷ ಜನ್ಮಾ ಮಾಡಿದೇವು;

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಯ್ತಾಗಿವೆ)

ಬೆಲೆ ಹತ್ತು ರೂಪಾಯಿ ಮಾತ್ರ

ಪ್ರಪಂಚದ ಎಲ್ಲಿಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮನಸ್ಸನ್ನು ಕದಿದ ಸ್ವಾರಸ್ಯವಾಯ್ತು ಕಾದಂಬರಿ. ಕೆಲವೇ ಪ್ರತಿಗಳಿವೆ. ೧೦ ರೂ. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಚಂದ್ರಕಾದಂಬರಿಗಳು

ದೇವದಾಸ (ಅಂಚೆವೆಚ್ಚ ಸೇರಿ)		೧—೧೨—೦
ವಿಜಯಾ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಹೋಡಶಿ	,,	೨— ೬—೦
ಚಿತ್ರ	,,	೧— ೦—೦

(ಪ್ರೇಮಸಥ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಳಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆಯಿರಿ :—

ಸಮಾಜ ಪುಸ್ತಕಾಲಯ, ಧಾರವಾಡ.

ಇನ್ನೂ ನಮಗ ಸ್ವತಂತ್ರ ಹಾಸಿಗಿ-ಹೊದಿಕೆನೂ ಇಲ್ಲ. ನೀವೂ ಒಬ್ಬರು ಗಂಡಸರಃ !"

"ಇಲ್ಲಃ; ತೋಟದೊಳಗ ಗುಡಿಸಲಾ ಕಟ್ಟಿ ಆಯಿತಂದರ ಹೋಗೋಣಲ್ಲ, ಅಲ್ಲೇ ಇರಲಿಕ್ಕೆ."

"ನಾವ್ಯಾಕ ಗುಡಿಸಲಿನೊಳಗ ಇರಬೇಕು ?"

"ಉಳಿದವರು ಹೋಗಲಿ; ನಾವು ಮನಿಯೊಳಗ ಇರೋಣ ಬಾ."

"ಮುದುಕಿಯೊಬ್ಬಾಕಿ ಇರುವಾಕೇ ಅಲ್ಲಾ, ನಮ್ಮ ಸುತ್ತಃ."

"ಊರೊಳಗಃ ಸಣ್ಣ ಮಗನ ಮನೀ ಆದ. ಅಲ್ಲೂ ಹೋಗ್ತಾಳು, ಇಲ್ಲೂ ಇರತಾಳು. ಆಕೇದು ಏನ ಹೇಳತಿ ?"

"ಆ ಕಟಕಟಿ ನನ್ನಿಂದ ತಾಳೋದಃ ಆಗದು."

"ಈಗೇನ ಬ್ಯಾರೇನಃ ಆಗಲಿಕ್ಕೆ ನಿಂತೇವೇನ ಇಷ್ಟೆಲ್ಲಾ ವಿಚಾರ ಮಾಡಲಿಕ್ಕೆ ? ನಮ್ಮ ಅವ್ವ ಅಪ್ಪ ಇರುವ ತನಕಾ ಇಂಥಾದ ಏನೂ ನಡೆಯೂದಿಲ್ಲ ನೋಡು. ಎಲ್ಲಾದರೂ ನಾಲ್ಕು ರೊಟ್ಟೀಸುಟ್ಟು ತಿನ್ನೋದು ಆದ; ದುಡಿಯೋದು ಆದ. ಈಗ ಒಂದೆರಡು ವರ್ಷದೊಳಗ ನಮ್ಮ ಮನಿತನಾ ಒಂದು ರೂಪಕ್ಕ ಬಂದಃದ. ನಮ್ಮ ಮನಿತನದ ಸ್ಥಿತಿಗತಿ ನೋಡೋದು ಬಿಟ್ಟು, ನಮ್ಮ ನಮ್ಮ ಸುಖಾನಃ ನೋಡಿದರ ಹ್ಯಾಂಗ ? ಅಪ್ಪ ಎಲ್ಲಿ ಇರೂ ಅಂತ ಹೇಳತಾನು ಅಲ್ಲಿ ಇರತೇನ ನಾ. ಅಂವ ಮನಿತನದ ಸಲುವಾಗಿ ಏನ ಮಾಡ ಅನ್ನತಾನು ಅದನ್ನ ಮಾಡತೇನು. ನಾವಃ ನಾಲ್ಕು ಮಂದಿ ಅಡ್ಡಾತಿಡ್ಡಾ ನಡದ ಮ್ಯಾಲ, ಹಿರೇರ ಆಗಿ ಅವರೇ ಮಾಡತಾರು ? ನಿನ್ನ ಮಾತ ಕೇಳಿ ನಾನೂ ಇನ್ನ ಜಗಳಾ ಹೂಡ ಅಪ್ಪನಿಗೆ ಎಲ್ಲಾ ತಿಳಿತಃದ. ತಿಂಗಳೊಪ್ಪತ್ತಿನೊಳಗಃ ಎಲ್ಲರಿಗ ವ್ಯವಸ್ಥಾ ಮಾಡಿಕೊಡತಾನ."

"ನಿಮ್ಮ ಹಡಿವವರಃ ಹೇಳಿದ್ದಂಗ ಕೇಳ್ತ ಇರೋದು ಆತ ನನ್ನ ಯಾಕ ಮದಿವೀ ಮಾಡಿಕೋಬೇಕು ?"

"ಯಾಕಃ ಮೈ ಗುದು ಗುದು ಅನ್ನಲಿಕ್ಕೆ ಹತ್ತೀದ ಏನ ?"

ಈ ಸಂವಾದವನ್ನು ಕೇಳಿದಾಗ, ನನ್ನ ಕಣ್ಣಿದುರಿಗೆ ಕುಸುಮಳ ಬಾಬುರಾಜರ ಚಿತ್ರ ಸುಳಿಯಿತು. ಕಳೆದ ಕೆಲವು ವಾರಗಳ ಹಿಂ ಅವರ ಮಾತು-ಕತೆಗಳೂ ಕಿವಿಯ ಮೇಲೆ ಬಿದ್ದಿದ್ದುವು. ಇದ ಅಣ್ಣನ ದಾಂಪತ್ಯಜೀವನ, ಆದು ತಮ್ಮನ ದಾಂಪತ್ಯಜೀವನ ಎರಡರಲ್ಲೂ ನೆಲ-ಮುಗಿಲುಗಳಷ್ಟು ಅಂತರ. ಆದರೂ ಎರಡೂ ಜೋಡಿಗಳ ಎದುರಿಗೆ ಇರುವ ಸಮಸ್ಯೆ ಮಾತ್ರ ಒಂದೇ ಆಗಿದೆ ಯಾರು ಯಾರ ಒಲವಿನಂತೆ ಬಾಳಬೇಕು ? ಪತಿಯು ಪತಿಯೇ ಪರದೈವವೆನ್ನಬೇಕೋ ! ಪತಿಯು ಪತಿಯೇ ಪರದೈವವೆಂದ ಬಾಳಬೇಕೋ ? ಇಬ್ಬರೂ ನಡುವಿನ ದಾರಿಯೊಂದನ್ನು ಹಿಡಿದ ಸಂಸಾರ ಸುಖಕರವಾದೀತಲ್ಲ !

ಇದೇ ವಿಚಾರದ ಗಾಳಿಯಲ್ಲಿ ಸಿಕ್ಕು, ಅದಾವಾಗಲೋ ನಾನ ಸೇಟಿಯ ಓಣಿಗೆ ಬಂದಿದ್ದೆ. ಅಲ್ಲಿ ಕುಸುಮಳ ಮಾತನ್ನು ಕೇ ತಡೆದು ನಿಲ್ಲುವಂತಾಯಿತು. ಮುಂದಿನ ಮಾತುಗಳನ್ನು ಕೇಳಿಯೆ ಹೋಗಬೇಕೆಂದು ಕುತೂಹಲ ಕೆರಳಿತು. ಮತ್ತೆರಡು ಹೆಜ್ಜೆ ಮುಂ ಹೋಗಿ ಕಿವಿಗೊಟ್ಟು ಕೇಳತೊಡಗಿದೆ :

" ಎಷ್ಟ ಆದರೂ ಆ ಅಂಗಡೀ ರಾಮುನಕಿಂತ ಈ ದೀಪಚಂ ಸಾವುಕಾರ ಒಳ್ಳೆಯವ ನೋಡರಿ !"

" ರಾಮಪ್ಪಗ ವ್ಯಾಪಾರ ಮಾಡಿ ಏನು ಗೊತ್ತು ? ದೀಪಚಂ ಸಾವುಕಾರ ಅದರೊಳಗ ನುರಿತವ...."

" ಮೊನ್ನೆ ರಾಮೂನಲ್ಲೆ ಎರಡು ದುಡ್ಡಿನ ಜೀರಿಗೀ ತಂದರ ನಾಲ್ಕಃ ಕಾಳ ಕೊಟ್ಟ. ಇಂದ ದೀಪಚಂದರ ಅಂಗಡಿಗೆ ಹೋದರ ಒಂದು ದುಡ್ಡಿಗೇ ಆದಕ್ಕಿಂತಾ ಹೆಚ್ಚಿಗೆ ಕೊಟ್ಟರು! ಎಲ್ಲಾ ಗಿರಾಕಿ ಬಿಟ್ಟು, ನನ್ನ ನೋಡಿದ ಕೂಡಲೆ, ಪೊದಲ ' ಏನ ಬೇಕು ? ಅಂತ ಕೇಳತಾರ. ಮನಿಯೊಳಗ ನೀವು ಇರುವದಿಲ್ಲ. ಆದಕ್ಕ ನಾನಃ ಅಂಗಡಿಗೆ ಹೋಗಬೇಕಾಗ್ತಃದ ಆಂಬೂದೆಲ್ಲ ಅವರಿಗೆ ಗೊತ್ತ ನೋಡರಿ ! "

ಮುಂದೆ ಬಾಬುರಾಜನ ಬಾಯಿಂದ ಮಾತುಗಳೇನೂ ಹೊರಡ ಲಿಲ್ಲ. ಹಗಲೆಲ್ಲ ಹೊಲದಲ್ಲಿ ದುಡಿದ ಅವನಿಗೆ ನಿದ್ರೆ ಆವರಿಸಿರ ಬೇಕು. ಕುಸುಮಳೂ ಸುಮ್ಮನಾದಳು.

ಸ್ವಲ್ಪ ಹೊತ್ತಿನ ಮೇಲೆ ' ಉಫ್ ' ಎಂದು ಊದಿದ ಸದ್ದೊಂದು ಕೇಳಬಂತು, ದೀಪ ಆರಿತು ಆ ಕಿರುಮನೆಯ ಕಿಟಕಿಯೊಳಗಿಂದ ಕತ್ತಲೆಯು ಹರಿದು ಬಂದು, ಹೊರಗಿನ ಕತ್ತಲೆಯೊಡನೆ ಸೇರಿ ಒಂದಾಯಿತು !

ಕೆಲವು ದಿನಗಳು ಉರುಳಿದವು. ಈಗ ನಮ್ಮೂರಿಗೆ ಕಳ್ಳರ ಕಾಟವಿಲ್ಲ. ಗ್ರಾಮಸಂರಕ್ಷಕ ದಳದ ಫಲವಿದು. ಊರ ಜನರೆಲ್ಲ ಚಿಂತೆಯಿಲ್ಲದೆ ನಿದ್ರೆ ಮಾಡುತ್ತಿರುವರು. ಅವರೂ ನಮ್ಮ ಕಾರ್ಯವನ್ನು ನಾವು ನಿಲ್ಲಿಸಿಲ್ಲ. ಹಾಗೇ ಊರಲ್ಲಿ ಇರುಳು ತಿರಗುವೆವು.

ಇಂದು ಹುಣ್ಣಿವೆ. ಎಲ್ಲಿಡೆಗೂ ಹಿಟ್ಟು ಜಿಲ್ಲಿದಂತೆ ಬೆಳದಿಂಗಳು. ಸ್ವಲ್ಪ ತಡಮಾಡಿ, ಒಂದು ಸುತ್ತು ಊರಲ್ಲಿ ತಿರುಗಿ ಬಂದಂಯಿತೆಂದು ಯೋಚಿಸಿ, ಒಂದು ಗಂಟೆಯಾವ ಮೇಲೆ ಚಾವಡಿಯಿಂದ ಹೊರಟೆವು.

ಒಬ್ಬೊಬ್ಬರು ಒಂದೊಂದು ಓಣಿಯನ್ನು ಸೇರಿದೆವು.

ಆ ದಿನ ನಾನು ಕೇಳಿದ ಮಾತುಗಳಿವು :

"ಮೂರೂ ಮುಂದಿ ಸೊಸೆಂದಿರಕಿಂತಾ ಕುಸುಮಾನ ಕೈಯ ಅಡಿಗೆಗೆ ಸ್ವಾದ ಹೆಚ್ಚ ನೋಡು !"

ಸಿದ್ದ ಹೆಂಡತಿಗೆ ಹೇಳಿದ.

"ಹೂಂ! ಅಂತಾ ಸಾವಾನೆ ಹಾಕ್ತಾಳು, ಅಗದ ಏನ ಮಾಡ್ತಾಳದ ?"

"ಇಲ್ಲಾ ; ಆಡಗಿ ಮಾಡುವ ಹದಾ ಸಿಕ್ಕಾದ ಏಳ ಪೋರಿಗೆ...."

"ಹೋದಾಗ ಸವಿ ಸವಿ ಇಷ್ಟ ತಿನಲಿಕ್ಕೆ ಮಾಡಿ ಹಾಕ್ತಾಳ ಕಾಣ್ತದ, ಹೊಗಳತೀ ಅಯ್ತು ಸಣ್ಣ ಸೊಸಿನ್ನ. ಅದೂ ತಿಳಿಯೂದಿಲ್ಲ, ಇದೂ ತಿಳಿಯೂದಿಲ್ಲ...."

"ತಿಳದಾಕಿ ಬಹಾಳ ನೀ! ನೋಡು ಹೋಗಿ ಅಕಿಯ ಮನಿ ಎಸ್ಟು ಶಿಸ್ತ ಆವ. ಈ ತಿಂಗಳದೊಳಗ ಅತ್ತ ಹೋಗೀದಿ ಏನ ಅ ?" ಮತ್ತೂ ಸಿದ್ದ ಸೊಸೆಯನ್ನು ಹೊಗಳಿದ.

"ನಾ ಯಾತಕ್ಕ ಹೋಗಲಿಕ್ಕೆ ಹೋಗಲಿ ? ನಮ್ಮಂಥ ಮುದಿಕೀರು ಅವಂಗೆ ಕಾಲ್ತೊಡಕ ಆಗ್ಬೇನಿ" ತುಸು ತಡೆದು "ಕಸಬಿಣೇರ ಮನೀಹಾಂಗ ಎದುರಿಗೆ ಕನ್ನಡೀ ಏನ ಹಚ್ಚಿದಾಳ, ಇದ್ದಿ ತೀಡಿ ಕೂದಲಾ ಏನ ಹಿಕ್ಕತಾಳ! ಹಣೇವ್ಯಾಲಿನ ಕುಂಕುಮ ಏಂತ, ನನ್ನ ಮುಂದ ದಿಟ್ಟಿಗಿ ಕಾಣೂವಂಗ ಇಲ್ಲಂತ. ನಾ ಯಾತಕ್ಕ ಇದನೆಲ್ಲಾ ನೋಡ್ಲಾಕ ಹೋಗಲಿ ? ನೆರಮನಿಯವರು ಬಂದು ಹೇಳೋದ್ನ ಕೇಳತೇನು....ಈಗ ನಿನ್ನ ಮನೀ ಕಾರಬಾರ ಎಲ್ಲಾ ಈಪಚಂದ ಸಾವುಕಾರ ಮಾಡುವವ ಆಗಿದಾನ. ಮೊನ್ನೆ ರಾತ್ರಿ ನಿಮ್ಮ ಬಾಬೂನ ಕರಕೊಂಡ, ಯಾವ ಊರಿಗೋ ಸಿನಿಮಾಕ್ಕ ಹೋಗಿದ್ದಂತ. ಸಾವಕಾರ್ರ ಮೈತರಕಿ ಅದ ಮ್ಯಾಲ, ಅವರಿಗೆ ಮಾನ ಕೊರತಿ ? ಅವರ ಮನಿಗೆ ಇವರು ಹೋಗತಾರ, ಇವರ ಮನಿಗೆ ಅವರು ಬರತಾರ.....ನಿನ್ನ ಸೊಸೀ ಜೊಚ್ಚಿಲ ಬಸಿರು ಇದ್ದಾಳಂತ; ಸಾವಕಾರ ಮನ್ಯಾವರು ಊಟಕ್ಕ ಮಾಡಪರು ಇದ್ದಾರಂತ !"

"ನಿನ್ನ ಸೊಸೇದ ನೆಟ್ಟಗ ಆದರ ನಿನಗೇನ ಕೆಟ್ಟೀನು ?"

"ನೆಟ್ಟಗ ಆಗೋದಿದ್ದರ ಜೆಲೋನಂ ಆಯ್ತಲ್ಲ! ಹಾದೀ ಬೀದಿಯೊಳಗ, ಗಂಡಸು ಆಗಿ ಹೆಂಗಸರನ್ನ ಏನ ಮಾತಾಡಿಸೋದ ಅದು ?"

"ಯಾರು ?"

"ನಿನ್ನ ಸೊಸೀನ್ನ ಮಾತಾಡಸತಾನ ದೀಪಚಂದ ಸಾವಕಾರ.... ತಿಳೀತೂ? ಮೈತರಕಿ ಇವ್ವರ ಗಂಡಸರ ಪೂರ್ತಿ ಇರಬೇಕು. ಅದೂ ಹೊರಗಿನ ಹೊರಗಂ....ಮನಿಯೊಳಗ ಉಗಯೋಗ ಇಲ್ಲ .... ನಿನ್ನ ಮಗಾ ಆದರೂ ಏನ ? ಸಾವಕಾರನ್ನ ಕರದು ಮೆನ್ಯಾಗ ಚಹಾ ಕುಡಿಸೋದೇನ, ನಗೋದೇನ ಕೆಲಿಯೋದೇನ. ಎಲ್ಲಾ ನಿಮಗಂ ಜೆಂಡ ಕಾಣ್ತದ. ಮತ್ತ ಅನ್ನುವರು ನಾವಂ ಕೆಟ್ಟ...."

"ಕೂಡಿ ಸಾಲೀ ಕಲಿತವರು, ಈಗಿನ ಹುಡುಗರು....ಅವರದು ಬ್ಯಾರೇನಂ ಆಗ್ತದ. ನಮ್ಮದು ಬ್ಯಾರೆ ಇತ್ತು. ನಮ್ಮಂತನಂ ಇರೂ ಅಂದರ ಇರೂದಿಲ್ಲ ಅವರು....ಅದೆಲ್ಲಾ ಮಾಡಿಕೊಂಡು, ತೋಟದೊಳಗ ಬಂದ ಕೆಲಸಾನೂ ಮಾಡತಾನೋ ಇಲ್ಲೋ ? ಸಾಕು! ಹ್ಯಾಂಗ ಯಾಕ ಇರವೊಲ್ಲರವರು !"

"ನಮ್ಮ ಹುಡುಗ ಮಳ್ಳ; ನಾಲ್ಕು ಮುಂದಿ ಕೂಡಿ ನಮ್ಮ ತಲಿಗೆ ಏನಾದರೂ ತಂದಾರೂ ಅನ್ನತೇನು. ಅಬರೂ ಅನ್ನೋದು ಎಷ್ಟ ಇರತದ ?"

"ಹಾಗೇನ ಆಗ್ತದ ಬಿಡು !"

"ಆವ ಮ್ಯಾಲಕ ನೀವೆಲ್ಲಾ ಜೀವಾ ಕೊಡಲಿಕ್ಕೆ ಓಡಾಡವರು. ಮೊವಲಕ ಎಚ್ಚರಕೆಯಿಂದ ಇದ್ದರ ಹ್ಯಾಂಗ ?"

ಗರ್ಭ ನಿರೋಧದ ಸಾಧನಗಳು

ಗಂಡಸರ ಮರ್ಮಚೀಲ ಬಹಳ ತಾಳಿಕೆಯುಳ್ಳದ್ದು ೧ ಕ್ಕೆ ೧-೪-೦
,, ,, ಸಾಧಾರಣ ,, ೧ ಕ್ಕೆ ೧-೦-೦
,, ,, ಸಾದಾ ,, ೧ಕ್ಕೆ ೦-೮-೦
,, ಮಣಿ ಕಂಚುಕ ,, ೧ಕ್ಕೆ ೦-೮-೦
ಪುರುಷೇಂದ್ರಿಯ ಬೆಳೆಯಿಸುವ, ಉದ್ರೇಕಿಸುವ ವ್ಹಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ } ೧ಕ್ಕೆ ೨೫-೦-೦
ಬೀಜಾಂತಕ ತೈಲ ಬಾ. ೧ ಕ್ಕೆ ೧-೦-೦
ಹೆಂಗಸರಿಗೆ ಚಿಕ್ಕಪೆಸರಿ ನಂ. ೧ ೧-೮-೦
,, ,, ನಂ. ೨ ೧-೪-೦
,, ,, ನಂ. ೩ ೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ ೧-೦-೦

ಬೆಲೆಯನ್ನೂ ಆಂಜಿ ವೆಚ್ಚನನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಚಿತ್ಯರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ಮೆಸರ್ಸ್ : ಮಿರ್ಜಾನಕರ ಮತ್ತು ಕಂಪನಿ

"ಈಗ ಏನ ಆಗೇದ? ಅವರವರು ಶಿಸ್ತs ಇದ್ದಾರ. ಹಿಂಗs ಇರುವಾಗ ದೇವರು ನಮ್ಮ ಕಣ್ಣ ಮುಚ್ಚಿದರ ಆಯ್ತು. ಬರುವಾಗ ಸಂಗಡ ಏನ ತಂದಿಲ್ಲ, ಹೋಗುವಾಗ ಏನ ಒಯ್ಯೂದಿಲ್ಲ. ನೀನs ಒಯ್ಯೂವಾಕಿ ಇದ್ದರ ಏನೋ ಮತ್ತ!"

"ನಾನs ನಾಡಹೊರತ ಆಗೇನಿ, ನಿಮ್ಮೆಲ್ಲರಿಗೂ!"

"ಸಾಕು, ಮಲಗಿನ್ನ; ಮೂಡಲ ಹರೀತs ಬಂತು."

ಸಿದ್ದಪ್ಪ ಸಾತವ್ವನಿಗೆ ಕಣ್ಣುಮುಚ್ಚಲಿಕ್ಕೆ ಹೇಳಿದ. ತಾನೂ ಕಣ್ಣುಮುಚ್ಚಿದ.

ಊರು ಕಾಯುವ ಹೊಣೆ ಹೊತ್ತ ನನಗೆಲ್ಲಿ ನಿದ್ರೆ? ಬೆಳದಿಂಗಳಲ್ಲಿ ಮುಂದೆ ಸಾಗಿದೆ. ಹಾಗೆಯೇ ನನ್ನ ನುನಸ್ಸು— ಅಂದಿನ ಕುಸುಮಳ ಮಾತು, ಇಂದಿನ ಸಾತವ್ವನ ಮಾತಿನ ಹಿಂದಿರುವ ಭಾವಗಳನ್ನು ಹೊಂದಿಸಿಟ್ಟು, ಏನೇನೋ ಕಲ್ಪಿಸಹತ್ತಿತು.

ಸುತ್ತಲೂ ಬೆಳದಿಂಗಳು ಬೆಳ್ಳಗೆ ಬಿದ್ದಿತ್ತು! ಬಹು ದೂರದಲ್ಲಿ ಆಗಸದ ಗರ್ಭದಲ್ಲೊಂದು ಕಪ್ಪುಮೋಡ ಬೆಳೆದು ದೊಡ್ಡದಾಗುತ್ತಲಿತ್ತು!

*

ನಾಲ್ಕೆಂಟು ತಿಂಗಳುಗಳು ಜಾರಿದುವು. ಸುಗ್ಗಿಯ ಸಮಯ ಬಂತು. ಈಗ ಹಗಲು ಹೊತ್ತಿನಲ್ಲೂ ಊರಲ್ಲಿ ಜನ ಇರದು. ಆದರಿಂದ ಹಗಲಿರುಳೂ ಊರ ಕಡೆಗೆ ನಾವು ಲಕ್ಷ್ಯಹಾಕಬೇಕಾಯಿತು. ಈಗೀಗ ಹೊರಗಿನ ಕಳ್ಳರಿಗಿಂತ ಊರೊಳಗಿನ ಕಳ್ಳರ ಕಾಟವೇ ಹೆಚ್ಚಾಗಿದ್ದಿತು. ನೆರೆಮನೆಯ ಕಳ್ಳನನ್ನು ಹಿಡಿಯುವುದು— ಶಿಕ್ಷೆಯುವುದು— ಬಹಳ ಕಷ್ಟಕರ. ಹಗಲಿನಲ್ಲಿಯೂ ಚಿಕ್ಕ ಪುಟ್ಟ ಕಳವುಗಳಿಗೆ ಆರಂಭವಾಗಿದ್ದಿತು. ಅದಕ್ಕಾಗಿ ಗ್ರಾಮ ಸಂರಕ್ಷಕ ದಳದವರು, ಇಳಿಹೊತ್ತಿನಲ್ಲಿಯೂ ಒಮ್ಮೊಮ್ಮೆ ಊರಲ್ಲಿ ಸುತ್ತಾಡಿ ಬರಬೇಕಾಗುತ್ತಿದ್ದಿತು. ಸಣ್ಣ ಸಣ್ಣ ಓಣಿಗಳಲ್ಲಿಯೇ ಹೆಚ್ಚಾಗಿ ಹಾಯಬೇಕಾಗುತ್ತಿದ್ದಿತು. ಕಳವುಗಳಾಗುವುದು ಅಲ್ಲಿಯೇ ಹೆಚ್ಚು.

ಇಂದು ಮಧ್ಯಾಹ್ನದ ಮೂರು ಗಂಟೆಗೆ ಊರೆಲ್ಲ ತಿರುಗಿ ಪೇಟೆಯ ಓಣಿಗೆ ಬಂದೆ. ಬಾಬುರಾಜನ ಮನೆಯಲ್ಲಿ ನಾಲ್ಕು ಮನೆಯ ಜನರು ಕೂಡಿದಂತೆ ಕಂಡಿತು. ಅಲ್ಲಿಯೇ ಹೋಗುತ್ತಿರುವ ದೀಪಚಂದ ನನ್ನನ್ನೂ ಕರೆದ. ಅವನ ಕೈಯಲ್ಲಿ 'ರಾಜೇಛಾಪಿ'ನ ಚಹದ ಪುಡಿಯೊಂದಿತ್ತು. ನನಗೂ ಚಹದ ಆಸೆಯಾಯಿತು. ಹಿಂಬಾಲಿಸಿದೆ

ಪಡಸಾಲೆಯಲ್ಲಿ ಕಂಬಳಿ ಹಾಸಿತ್ತು. ಅದರ ಮೇಲೆ ಸಿದ್ದಪ್ಪ ಕುಳಿತಿದ್ದ. ನೆರೆಮನೆಯ ಹೆಂಗಸರೂ ಇದ್ದರು. ಒಳಗೆ ಕುಸುಮಳ ತವರುಮನೆಯ ಹೆಂಗುಸರಿರಬೇಕು. ಅವರು ತಮ್ಮತಮ್ಮಲ್ಲಿ ಸಾವಕಾಶವಾಗಿ ನಗುತ್ತಿದ್ದರು, ಮಾತಾಡುತ್ತಿದ್ದರು. ಕುಸುಮಾ ತನ್ನವರಿಗೆ ಹೇಳುತ್ತಿದ್ದಳು:

"ನೇಳೆ ಹೊತ್ತಿನೊಳಗ ಆಗುವವರಿಂದರೆ ಇವರೊಬ್ಬರs ತಾಯಿ ಊರಾಗ. ಇಷ್ಟ ಸಾವಕಾರಿಕಿ ಇದ್ದರೂ ಎಳ್ಳಷ್ಟೂ ಗರ್ವಿಕಿ ಇಲ್ಲ ನೋಡು. ಒಮ್ಮೊಮ್ಮೆ ಅಂಗಡಿಯಿಂದ ಸಾಮಾನೂ ಮನಿಗೆ ತಂದು ಮುಟ್ಟಿಸತಾರ."

"ಸಿದ್ದಪ್ಪನ ಸ್ವಾರಿ, ಯಾಕೋ ಊರಕಡೆ ಬಂದsದಲ್ಲ?" ಎಂದು ಕೇಳುತ್ತ ನಾನು ಕಂಬಳಿಯ ಮೇಲೆ ಹೋಗಿ ಕುಳಿತೆ.

"ಮೊಮ್ಮಗನ್ನ ನೋಡಿ ಹೋಗಬೇಕಂತ ಬಂದಾನ. ಇಲ್ಲಾದರ ಅವನಿಗೆಲ್ಲಿ ಸವಡು?"

"ಅದs ಅಂತೇನಿ."

"ಎಲ್ಲಾ ಅಡವೀ ಜನಾ ಇದು. ಊರಂದರ ಇವರಿಗೆ ಬೇಸರು ನೋಡು. ಬಾಬುನೂ ಹೀಂಗs! ತನ್ನ ತೋಟ ಆಯ್ತು, ತಾ ಆಯ್ತು. ಮನಿಯ ಕಡೆಗೆ ವ್ಯವಸ್ಥಾ ನೋಡೋದs ಇಲ್ಲಂದರ ಏನದು? ಇಷ್ಟು ಗಳಿಸಿ ಎಲ್ಲಿ ಇಡತಾರ ಅಂತೇನಿ ನಾ." ಆಪ್ಯತೆಯಿಂದ ದೀಪಚಂದ ಹೇಳತೊಡಗಿದ.

"ಹಗಲೀ ರಾತ್ರಿ ದುಡದರೂ ಹೊಟ್ಟೆ ತುಂಬವೊಲ್ದು. ಗಳಿಸೋದ ಹೇಳತಾನ ಸಾವುಕಾರ!" ಸಿದ್ದಪ್ಪ ಕೆಮ್ಮುತ್ತ ನುಡಿದ.

ಇಷ್ಟರಲ್ಲಿ ಒಳಗಿನಿಂದ ಚಹ ತಂದು ಬಾಬುರಾಜ ಕೊಟ್ಟ. ಎಲ್ಲರೂ ಕುಡಿದೆವು. ಜೊತೆಗೆ ಕುಸುಮಾ ತನ್ನ ಮಗನನ್ನು ತಂದು ಮಾವನ ತೊಡೆಯ ಮೇಲೆ ಹಾಕಿ ಹೋದಳು.

"ಹಿಂದ ತೊಟ್ಟಿಲೊಳಗ ಹಾಕುವ ದಿನ ನೋಡಿದ್ದೆ; ಕತ್ತಲಿಯೊಳಗ ನೆಟ್ಟಗ ಕಾಣಿಸರಲಿಲ್ಲ."

ಸಿದ್ದ ಮೊಮ್ಮಗನ ಮುಖವನ್ನು ನೋಡುತ್ತ ಹೇಳಿದ.

" ಇಂದಕರ ಬೆಳಕಿನೊಳಗ ನೋಡಲ್ಲ ! "

ನೆರೆಮನೆಯವಳೊಬ್ಬಳು ಅಂದಳು

" ಸಣ್ಣ ಮಗಾ ಸಣ್ಣ ಮಗಾ ಅಂತಿದ್ದಿ. ಅವನ ಜನ್ಮಾನೂ ಕಂಡಿಗೆ ಹಚ್ಚಿದಿಲ್ಲೋ ? ಇನ್ನ ನೀ ಸಾಯಲಿಕ್ಕೇನೂ ಹರಕತ್ತ ಇಲ್ಲ ಸಿದ್ದಪ್ಪಾ ! "

ಇನ್ನೊಬ್ಬ ಮುದುಕಿಯ ಪ್ರಮಾಣಪತ್ರವಿದು.

" ಮೊಮ್ಮಗ ಹುಟ್ಟಿದ ಕೂಡಲೆ ಕೊಲ್ಲಲಿಕ್ಕೇ ನಿಂತಿಲ್ಲ ನೀ ? "

ದೀಪಚಂದ ನಡುವೇ ಮಾತು ಸೇರಿಸಿದ.

" ಕೂಸನ್ನ ಮೊದಲ ನೋಡತೀರೋ, ಏನ ಮಾತಾಡತೀರ್ಯೋ ? ಯಾವುದರೇ ಒಂದ ಮಾಡಿರಿ ಮೊದಲ ! "

ಕುಸುಮಳ ತಾಯಿ ಒಳಗಿನಿಂದ ಸ್ವಲ್ಪ ಬಿರುಸಾಗಿ ನುಡಿದಳು

" ನೋಡಿ ಆಯ್ತಲ್ಲ ! "

ಸಿದ್ದಪ್ಪ ಎರಡೇ ಶಬ್ದ ಉಚ್ಚರಿಸಿದ. ದೀಪಚಂದನ ಮುಖದ ಕಡೆಗೊಮ್ಮೆ, ಕೂಸಿನ ಮುಖದ ಕಡೆಗೊಮ್ಮೆ ನೋಡಿದ.

" ಅವ್ವಾ-ಅಪ್ಪನಸ್ನೆನ ಹೊತ್ತಿಲ್ಲಿಷ್ಟಾ ಹುಡುಗ ! " ಒಬ್ಬಳ ಅಂದಳು.

" ಇವರ ಮನಿತನದೊಳಗ ಯಾರ ಮುಖವನ್ನೂ ತರಲಿಲ್ಲ ಹುಡುಗ. "

" ಎಲ್ಲೀದೋ ಹೊಸ ಮುಖಾನs ಹೊತ್ತಾನ. "

" ಯಾರ ಮೊಕಾ ಯಾಕ ತರವಲ್ದು, ಚೆಲುವ ಅದ ಇಲ್ಲೋ ಹುಡುಗ ? ಸಾಕು. ಎಂಥಾದರ ಮಂಗ್ಯಾನ ಮೋತೀದು ಹುಟ್ಟಿದ್ದರ ಏನು ಮಾಡೋದು ತಾಯಿ ! "

ಒಬ್ಬೊಬ್ಬರು ಒಂದೊಂದು ತೆರನಾಡಿದರು. ಸಿದ್ದಪ್ಪ ತುಟಿ ಎರಡು ಮಾಡಲಿಲ್ಲ. ಮೊಮ್ಮಗನನ್ನು ನೋಡಿದಾಗ, ಅವನ ಮುಖ ಅರಳುವ ಬದಲು ಬಾಡಿಹೋಯಿತು. ಎಲ್ಲರೂ ತನಗೇ ಚುಚ್ಚಿ ಚುಚ್ಚಿ ಮಾತಾಡಿದಂತೆ ಭಾಸವಾಯಿತವನಿಗೆ. ಮುಖ ಕೆಳಗೆ ಹಾಕಿದ.

೬

ಅಂದಿನ ಇರುಳು. ಅಮವಾಸ್ಯೆಯ ಕಗ್ಗತ್ತಲು ಊರನ್ನೆಲ್ಲ ಮುತ್ತಿದೆ. ನಾವು ಓಣಿ-ಓಣಿಗಳಲ್ಲಿಲ್ಲ ಸುತ್ತಿ, ಒಳ್ಳೆ ಎಚ್ಚರದಿಂದ ಊರನ್ನು ಕಾಯುತ್ತಿದ್ದೇವೆ. ನನ್ನ ಮುಂದೆ ಹಿಂದೆ ಯಾರೋ ಇಬ್ಬರು ಮಾತಾಡುತ್ತ ನಡೆದಂತೆ ತೋರಿತು. ಸ್ವಲ್ಪ ಆವೇಶದಿಂದ ಸಾಗಿ ಅವರ ಬೆನ್ನು ಹತ್ತಿದೆ. ಅವರಲ್ಲಿ ನಡೆದ ಮಾತುಗಳು ಹೀಗಿದ್ದುವು :

" ಹುಡುಗ ಹುಟ್ಟಿದ ವೇಳೆಯೇ ಕೆಟ್ಟ ! "

" ಆದೆಲ್ಲಾ ಸುಳ್ಳು ; ಸಿದ್ದಪ್ಪ ಅಬರೂದಾರ ಮನುಷ್ಯ. ಮಧ್ಯಾಹ್ನ ಮೊಮ್ಮಗನ ಮುಖಾ ನೋಡಿದ ಕೂಡಲೇ ಅವನಿಗೇ ಅನಿಸಿರಬೇಕು...."

" ದೀಪಚಂದನೂ ಆಗ ಅಲ್ಲೇ ಇದ್ದಂತಲ್ಲ...."

" ಯಾವಾಗ ಇರೂದಿಲ್ಲ ಅಂವ ? "

" ಅದಕ್ಯಕ ನೋಡೋ, ಮುಂದಿಗೆ ಮುಖ ತೋರಿಸಬಾರದಂತ ಮುದುಕ ತೋಟದೊಳಗ ಹೋದವನಕ, ಗಿಡಕ್ಕ ಉರುಲು ಹಾಕಿಕೊಂಡಿದಾನ...."

" ಮರ್ಯಾದಿವಂತರ ಮಾತಕ ಹೀಂಗ ! "

" ಎಂಥಾ ಕತೆ ಆಗಿ ಹೋಯ್ತು ಪ್ಪಾ ಊರೊಳಗ ? "

ಇವರ ಮಾತು ಆಯ್ತು. ಅವರ ಕತೆಯಾಯಿತು. ಗ್ರಾಮ ಸಂರಕ್ಷಕ ದಳದವರಿಗೆ ಇದೂ ಗೊತ್ತಿತ್ತು ! ಮುಂದೇನು ?

ಪ್ರಶ್ನೆ ಪ್ರಶ್ನೆಯಾಗಿಯೇ ಇನ್ನೂ ನನ್ನ ತಲೆಯಲ್ಲಿ ಉಳಿದಿದೆ ! ಮುದುಕ ಸತ್ತು ಹೋದರೂ ಮೊಮ್ಮಗ ಅವನ ಮೊಮ್ಮಗನಾಗಿಯೇ, ಅವನ ವಂಶವೃದ್ಧಿಗಾಗಿಯೆ ಬೆಳೆಯುತ್ತಲಿದೆ.

ನೂತನ ಗಣಿತ

(ಪುನರ್ಮುದ್ರಣಗಳು ಸಿದ್ಧವಾಗುತ್ತಿವೆ)

ಶೂ, ಟ, ಒ ನೆಯ ವರ್ಗಗಳ ಗಣಿತಗಳು

ಶೀ. ಗಲಗಲಿ ಬರೆದುವು.

ಮಾರಾಟಗಾರರು :

ಆಕಳವಾಡಿ ಬುಕ್ ಡಿಪೋ,

ವಿಜಯ ರೋಡ್, ಧಾರವಾಡ

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕರು : ಬಸವರಾಜ ಕಟ್ಟೀಮನಿ

ವರ್ಷಕ್ಕೆ ಆರುನೂರು ಪುಟಗಳಷ್ಟು ಸಾಹಿತ್ಯ. ಕತೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ.

ವಾ. ಚಂದಾ ೫ ರೂಪಾಯಿ (ರಜಿಸ್ಟರ್ ಅಂಚೆವೆಚ್ಚ ಸೇರಿ)

ಮೊದಲನೆಯ ಪ್ರಕಟನೆ :

ಸೆರೆಯಿಂದ ಹೊರಗೆ

(ಸಣ್ಣಕತೆಗಳ ಸಂಕಲನ)

ಈಗ ತಾನೆ ಹೊರಟಿದೆ. ಕೂಡಲೆ ಚಂದಾದಾರರಾಗಿರಿ.

ವಿಗ್ರಹಾರಾಧನೆ

ಶ್ರೀ. ಬಿ. ಎಚ್. ಶ್ರೀಧರ

★

ಸ್ಪೃಶ್ಯ-ದೃಶ್ಯವಾದ ಪದಾರ್ಥವು ಇದ್ದರೇನೇ ಆ ಪದಾರ್ಥದ ಅದೃಶ್ಯ-ಅಸ್ಪೃಶ್ಯವಾದ ಚಿತ್ರ ಮನೋಭಿತ್ತಿಯಲ್ಲಿ ನಿಲ್ಲುವುದು. ಕಲ್ಪನಾತ್ಮಕವಾಗಿ ವಸ್ತು-ಸಾಕ್ಷಾತ್ಕಾರವಾಗುವುದು. ಆದುದರಿಂದ ವಿಗ್ರಹದ ಆವಶ್ಯಕತೆಯುಂಟಾಯಿತು.

★

ದೃಶ್ಯಪ್ರಪಂಚದ ಸಾಕಾರಕಲ್ಪನೆ ಇಲ್ಲದೆ ಸ್ಪಷ್ಟವಾದ ಆಲೋಚನೆಯನ್ನು ಮಾಡುವುದು ಅಸಾಧ್ಯವಾದುದರಿಂದಲೇ, ಸಾಕ್ಷಾತ್ ಮೂರ್ತಿಯನ್ನಲ್ಲದಿದ್ದರೂ ಶಿಲುಬೆಯನ್ನು, ಚಂದ್ರನಕ್ಷತ್ರಗಳನ್ನು—ಕ್ರೈಸ್ತನನ್ನಾಗಲೀ ಮುಸಲ್ಮಾನರೂ—ಪ್ರತೀಕಗಳನ್ನಾಗಿ ಆರಿಸಿಕೊಂಡಿದ್ದಾರೆ. ಆ ಪ್ರತೀಕಗಳು ಆಯಾ ಧರ್ಮಸ್ಥಾಪಕರು ಅನುಭವಿಸಿದ ಅಥವಾ ಹೇಳಿದ ತತ್ತ್ವಸಾರವನ್ನು ಅವರಿಗೆ ನೆನಪು ಮಾಡಿ ಕೊಡಲು ಶಕ್ತವಾಗುತ್ತವೆ. ಆದರೆ ಆ ಪ್ರತೀಕಗಳು ವಿಗ್ರಹಕ್ಕಿಂತ ಸೂಕ್ಷ್ಮತರವಾದುವೆಂಬುದನ್ನು ಮಾತ್ರ ಒಪ್ಪಿಕೊಳ್ಳಬೇಕು. ಹಾಗೆಂದ ಮೇಲೆ, ಅವರು ವಿಗ್ರಹಾರಾಧಕರಿಗಿಂತ ಉತ್ತಮರು, ಹೆಚ್ಚು ಕಲ್ಪನಾಶಕ್ತಿವಂತರು ಎನ್ನಲಾದೀತೇ? ಆದೆಂದಿಗೂ ಆಗದು. ಇಂದಿನ ವರೆಗೆ ಮಾನವನ ಬುದ್ಧಿಗೆ, ಕಲ್ಪನಾಶಕ್ತಿಗೆ, ಇಡೀ ಜಗತ್ತಿನ ಪ್ರಾಣಿಗಳಲ್ಲಿ—ತನ್ನ ರೂಪಕ್ಕಿಂತ ಶರೀರ ರಚನೆಗಿಂತ ಹೆಚ್ಚು ಸುಂದರವೂ ಸುವ್ಯವಸ್ಥಿತವೂ ಆದ ಶರೀರ ಅಥವಾ ಆಕೃತಿ ಗೋಚರವಾಗಿಲ್ಲ. ಆ ಕಾರಣದಿಂದಲೇ ಜಗತ್ತಿನ ಸರ್ವಧರ್ಮದವರೂ ಮಾನವನ ವಿಶಿಷ್ಟ ಗುಣಗಳನ್ನು ಅನಂತ ಸಂಖ್ಯೆಯಿಂದ ಗುಣಿಸಿ, ಅತಿಶಯೋಕ್ತಿ ಅತ್ಯುಕ್ತಿಗಳಿಂದ ವಿಸ್ತರಿಸಿ, ದೇವರೆಂಬ ಅಸ್ಪಷ್ಟ ಕಲ್ಪನೆಯನ್ನು ಮಾಡಿಕೊಂಡು ಆರಾಧಿಸುತ್ತ ಬಂದಿದ್ದಾರೆ. ಇದೇ Anthropomorphism ಮನುಷ್ಯಾಕೃತಿಯ ಆಧಾರದ ಮೇಲೆ ಕಟ್ಟಿದ ದೇವರ ಕಲ್ಪನೆ. ವಿಗ್ರಹಾರಾಧನೆಗೆ ವಿರೋಧಿಗಳಾದ ಕ್ರೈಸ್ತ ಮತ್ತು ಮಹಮ್ಮದೀಯ ಧರ್ಮದವರು ಕೂಡ ವಿಗ್ರಹವನ್ನು ಸ್ಥೂಲರೂಪದಿಂದ ಪೂಜಿಸದಿದ್ದರೂ, ಮಾನಸಿಕ ಕಲ್ಪನೆಯಲ್ಲಿ ಅಡಕವಾದ ಸೂಕ್ಷ್ಮರೂಪದಲ್ಲಿ ಅಥವಾ ಮನೋಭಿತ್ತಿ ಚಿತ್ರರೂಪದಲ್ಲಿ ಪೂಜಿಸದೆ ಇರಲಾರದು. ಮಹಮ್ಮದ ಮತ್ತು ಕ್ರಿಸ್ತರಂಕೂ ಮನುಷ್ಯರೆಂದು ಎಲ್ಲರಿಗೂ ಗೊತ್ತಿದೆ. ಅವರ ಮಾನವ್ಯ ಕಲ್ಪನೆ ಅಷ್ಟೇನೂ ಅಶ್ಚರ್ಯದ ಸಂಗತಿಯಲ್ಲ. ಅವರನ್ನು (ಅವರ ಚಿತ್ರವನ್ನು ಕೂಡ) ಕಾಣದವರೂ ಮಾನವ ಮೂರ್ತಿಯ ಲಕ್ಷಣಗಳನ್ನು ಬಳಸಿಕೊಂಡು, ತಮ್ಮದೇ ಆದ ಆವರ ಮನೋಮಯ ಮೂರ್ತಿಗಳನ್ನು ರಚಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ಅವರಿಗೆ ಮಹಮ್ಮದ ಅಥವಾ ಕ್ರಿಸ್ತ ಎಂಬ ಶಬ್ದಕ್ಕೆ ಅರ್ಥವಾಗುವುದು ಅಸಾಧ್ಯ; ಮಹಮ್ಮದ-ಕ್ರಿಸ್ತರು ಅವರಿಗೆ ಅರ್ಥವಿಲ್ಲದವರಾದಾರು, ಕಲ್ಪನಾತೀತರಾದಾರು! ಆದೇ ಮೇರೆಗೆ ಅವರು ದೇವರೆಂದರೂ ಮಾನವನ ಆಕೃತಿಯನ್ನು ತಳೆದ ಅಮಿತ ಶಕ್ತಿಸಂಪನ್ನನಾದ ಒಬ್ಬ ಪುಲ್ಲಿಂಗಾವಚ್ಛಿನ್ನನೆಂದೇ ಭಾವಿಸುತ್ತಾರೆ. ಇದೇ ಸಾಮಾನ್ಯ ಜನರಿಗಾಗುವ ದೇವರ ಕಲ್ಪನೆ. ವಾದಮಾಡಲು ಹೋದರೆ, ಹಾಗಲ್ಲವೆಂದು ಅವರು ಏಳು ಹಗಲು ಏಳು ರಾತ್ರಿಗಳ ವರೆಗೆ ಕಂಠಶೋಷಣ ಮಾಡಬಹುದು; ಆದರೆ ಮನಃಶಾಸ್ತ್ರವನ್ನು ಬಲ್ಲವರು, ಮನಸ್ಸಿನ ಸ್ವಭಾವವನ್ನೂ ಇತಿಮಿತಿಗಳನ್ನೂ ಅರಿತವರು, ಸಾಮಾನ್ಯಜನರು (ಅವರು ಯಾವ ಜಾತಿ, ಧರ್ಮ, ಸಂಘಗಳಿಗೇ ಸೇರಿರಲಿ) ವಿಗ್ರಹಾರಾಧಕರಿದ್ದರೂ ಸರಿ, ವಿಗ್ರಹಭೇದಕರಿದ್ದರೂ ಸರಿ—ದೇವರಲ್ಲಿ ನಂಬಿಗೆಯುಳ್ಳವರಾಗಿದ್ದೇ ಆದರೆ, ಅವರೆಲ್ಲರೂ ಸಗುಣಬ್ರಹ್ಮೋಪಾಸಕರು, ವಿಗ್ರಹಾರಾಧಕರು, ಅಮೂರ್ತ ಸ್ವರೂಪವನ್ನು ಗ್ರಹಿಸಲಾರದವರು, ವಿಭುತ್ವವನ್ನು ಅರ್ಥಮಾಡಿಕೊಳ್ಳಲಾರದವರು ಎಂಬುದು ಖಂಡಿತ!

ಪಂಚೇಂದ್ರಿಯಗಳಿಂದ ಉಂಟಾಗುವ ಪ್ರತ್ಯಕ್ಷ ಜ್ಞಾನಗಳಲ್ಲಿ, ಮನದಲ್ಲಿ ಚಿರಸ್ಥಾಯಿಯಾದ—ಹೆಚ್ಚು ಸ್ಪಷ್ಟವೆನಿಸುವ— ವಸ್ತು ಕಲ್ಪನೆಯನ್ನು ಮಾಡಿಕೊಡುವುದು ಕಣ್ಣು. ಆದರಿಂದ ಅದು ಸರ್ವೇಂದ್ರಿಯಗಳಲ್ಲಿ ಅಗ್ರಗಣ್ಯವೆನಿಸಿದೆ. ಆದ್ದರಿಂದ 'ಚಕ್ಷುರ್ಮಾತ್ರಗ್ರಾಹ್ಯೋ ಗುಣೋ ರೂಪಂ' ಎಂಬುದು ಮುಂದೆ ತಾನಾಗಿಯೇ ಬಂದುಬಿಡುತ್ತದೆ. ರೂಪ ಅಥವಾ ಆಕಾರ ಜ್ಞಾನವನ್ನು ಮನಸ್ಸಿಗೆ ಕಣ್ಣು ಕೊಡುತ್ತದೆ. ಸ್ಪೃಶ್ಯ-ದೃಶ್ಯವಾದ ಪದಾರ್ಥವು ಇದ್ದರೇನೇ ಆ ಪದಾರ್ಥದ ಅದೃಶ್ಯ-ಅಸ್ಪೃಶ್ಯವಾದ ಚಿತ್ರ ಮನೋಭಿತ್ತಿಯಲ್ಲಿ ನಿಲ್ಲುವುದು; ಕಲ್ಪನಾತ್ಮಕವಾಗಿ ವಸ್ತು ಸಾಕ್ಷಾತ್ಕಾರವಾಗುವುದು. ಆದುದರಿಂದ ವಿಗ್ರಹದ ಆವಶ್ಯಕತೆಯುಂಟಾಯಿತು. ಸೃಷ್ಟಿಯಲ್ಲಿ ಮಾನವ ವಿಗ್ರಹವೇ ಅತ್ಯಂತ ಸುಧಾರಿಸಿದ ಮಾದರಿಯೆಂದು ಮಾನವನು ತಿಳಿದುದರಿಂದ, ದೇವರ ಕಲ್ಪನೆಯನ್ನೂ ಅವನು ತನ್ನ ಮಾನದ ತಳಹದಿಯ ಮೇಲೆ ರೂಪಿಸಿಕೊಳ್ಳಬೇಕಾಯಿತು. ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿದರೂ ಮೂಲ ಸ್ಥೂಲ ಮಾನವ್ಯ ಮಾನದಂಡದ ಅಳತೆಯನ್ನು ದೇವರ ಯಾವ ವಿಗ್ರಹವೂ ಮೀರಿಲ್ಲ. ವಿಷ್ಣುವು ದಶಾವತಾರ ಮಾಡಿದನೆಂದರೂ ಮೂಲರೂಪದಲ್ಲಿ ಅವನು (ಚತುರ್ಭುಜನಿದ್ದರೂ) ಮನುಷ್ಯಾಕಾರವುಳ್ಳವನೇ! ಮನುಷ್ಯಶರೀರದ ಸುಧಾರಿಸಿದ ಆವೃತ್ತಿಯನ್ನು ಕಲ್ಪಿಸಹೋದ ಮಾನವರು, ಮನುಷ್ಯನ ಕೆಲ ಅಂಗಗಳ ಸಂಖ್ಯೆಯನ್ನು ಬದಲಾಯಿಸಿ ನೋಡಿದರು. (ಉದಾ: ಶಿವನಲ್ಲಿ ಕಣ್ಣು, ಬ್ರಹ್ಮನಲ್ಲಿ ತಲೆ, ವಿಷ್ಣುವಿನಲ್ಲಿ ಕೈ); ಆದರೆ ಎಂಥ ವಿಕಟ ಕಲ್ಪನೆಮಾಡಿದರೂ ಸತ್ತ್ವರಜಸ್ತಮೋಮಯವಾದ ಮಾನವ

ಪ್ರವೃತ್ತಿಗಳಿಂದ ಮುಕ್ತವಾದ, ಮಾನವನ ಮಾನವತೆಯ ಆಕಾರ-ಗುಣಾದಿಗಳಿಗೆ ಸಂಬಂಧಿಸದ ಒಂದು ವಿಗ್ರಹವನ್ನು ಕಲ್ಪಿಸಲು ಎಂಥ ಭಕ್ತರಿಗೂ ಸಾಧ್ಯವಾಗಿಲ್ಲ.

ಲಿಪಿಶಾಸ್ತ್ರದತ್ತ ಗಮನಿಸಿದರೆ, ವಿಗ್ರಹಗಳ ಪ್ರತೀಕಪ್ರಕಾರಗಳು ಹುಟ್ಟಿದ ಬಗೆಯ ಮೇಲೆ ಬೆಳಕು ಬೀಳುತ್ತದೆ. ಈಜಿಪ್ಟ್ ಮೊದಲಾದ ದೇಶಗಳ ಹಳೆಯ ನಾಗರಿಕತೆಯಲ್ಲಿ, ಮಾನವ ಮೊದಲು ಕಂಡ ಲಿಪಿ Pictography— ಚಿತ್ರಲಿಪಿ. ಅನೆಯೆಂದು ಬರೆಯಬೇಕಾದರೆ, ಮೊದಲು ಆನೆಯ ಇಡಿ ಚಿತ್ರವನ್ನು ಬರೆಯಬೇಕಾಯಿತು. ಅನಂತರ ಸೊಂಡಿಲೊಂದನ್ನು ಬರೆದರೆ 'ಆನೆ' ಎಂದು ಓದುವುದು ಜನರಿಗೆ ಗೊತ್ತಾಯಿತು. ಇದಕ್ಕೆ Symbolism ಪ್ರತೀಕತತ್ತ್ವ ಎನ್ನಲಾಗುವುದು. ರೋಮನ್ ಅಕ್ಷರಗಳ ಬೆಳವಣಿಗೆಯಲ್ಲಿ ಈ ತತ್ತ್ವ ಅಡಗಿದೆಯೆಂದು ಹೇಳುತ್ತಾರೆ. ಚೀನೀ ಭಾಷೆಯಲ್ಲಿ ಈಗಲೂ ಇದರ ನಿದರ್ಶನಗಳನ್ನು ಆ ಅಕ್ಷರಗಳಲ್ಲಿ ಕಾಣಬಹುದು. ಅರ್ಧಚಂದ್ರ ಚಿಹ್ನೆ, ಶಿಲುಬೆ, ಲಿಂಗ ಮುಂತಾದುವುಗಳನ್ನು ದೇವರ ಪ್ರತೀಕಗಳೆಂದು ತಿಳಿದು ಪೂಜಿಸುವ ಪ್ರವೃತ್ತಿ ಬೆಳೆದುಬರಲು, ಮಾನವನ ಕಲ್ಪನಾಶಕ್ತಿ ಹರಿತವಾಗುತ್ತ, ಸೂಕ್ಷ್ಮತರವಾಗುತ್ತ ಹೋದುದೇ ಕಾರಣ. ನಿರ್ಗುಣ ನಿರಾಕಾರ ಬ್ರಹ್ಮನ ಕಲ್ಪನೆಯಲ್ಲಿ ಸ್ಥೂಲಬುದ್ಧಿಗೆ ಸಹಾಯಕವಾಗಿ ನಿರ್ಮಿತವಾದ ಸಂಪೂರ್ಣವಿಗ್ರಹ ಕ್ರಮೇಣ ಕಡಿಮೆಯಾಗುತ್ತ ಹೋಗಿ, ಅತಿ ಸೂಕ್ಷ್ಮರೂಪದ ವಿವಿಧ ಪ್ರತೀಕ, ಚಿಹ್ನೆ, ಗುರುತು ಎನಿಸಿಕೊಂಡಿತು. ಈ ಪ್ರತೀಕತತ್ತ್ವ ವಿಗ್ರಹಾರಾಧನೆಯದೇ ಸೂಕ್ಷ್ಮವಾದ, ಸುಧಾರಿಸಿದ ಬಗೆ. ಇದು ಚಿತ್ರಕಲೆಯಲ್ಲಿ ರೇಖಾದಿರೂಪದಲ್ಲಿ, ನಾಟ್ಯದಲ್ಲಿ ಮುದ್ರಾದಿರೂಪದಲ್ಲಿ, ಸಂಗೀತದಲ್ಲಿ ಸ್ವರವ್ಯವಸ್ಥೆಯ ರೂಪದಲ್ಲಿ, ಸಾಹಿತ್ಯದಲ್ಲಿ ಶಬ್ದಾರ್ಥ ರೂಪದಲ್ಲಿ— ಎಲ್ಲೆಲ್ಲೂ ಇಂದಿಗೂ ಪ್ರಚುರವಾಗಿದೆ.

ಯಾವ ಪದಾರ್ಥವೂ ಮೂಲತಃ ವಂದ್ಯವೂ ಅಲ್ಲ, ನಿಂದ್ಯವೂ ಅಲ್ಲ; ಸಾಧಕವೂ ಅಲ್ಲ, ಬಾಧಕವೂ ಅಲ್ಲ. ನಾವು ಅದನ್ನು ಹೇಗೆ ಬಳಸಿಕೊಳ್ಳುವೆವೋ ಅದು ಹಾಗೇ ಫಲ ಕೊಡುತ್ತದೆ. ವಿಗ್ರಹವಾದರೂ ಈ ನಿಯಮಕ್ಕೆ ಅಪವಾದನಾಗಿಲ್ಲ. ಮೊದಲು ವಿಗ್ರಹಾರಾಧನೆಗೆ ಪುರಸ್ಕಾರ ಸಿಕ್ಕಿದುದು, ಮಾನವನಿಗೆ ಅದು ದೇವರ ಕಲ್ಪನೆಯನ್ನು ಮಾಡಿಕೊಳ್ಳಲು ಸಹಕಾರಿಯಾಗುವುದೆಂದು ಕಂಡು ಬಂದುದರಿಂದ. ಅದರಿಂದಲೇ 'ಮಾನಸಾರ' ಶಿಲ್ಪದಲ್ಲಿ 'ಸಾಧಕನ ಹಿತಾರ್ಥವಾಗಿ, ಅವನ ಸುಖಬೋಧಕ್ಕಾಗಿ ವಿಗ್ರಹರಚನೆಯನ್ನು ಹೇಳಲಾಗುವುದು' ಎಂದಿದೆ. ಆದರೆ ಐರೋಪ್ಯರಲ್ಲಿ ಮತ್ತು ಮಹಮ್ಮದೀಯರಲ್ಲಿ ವಿಗ್ರಹಾರಾಧನೆ ನಿಂದ್ಯವಾದ ಕಾಲದಲ್ಲಿ, ಅವರ ಕಲ್ಪನೆ ವಿಗ್ರಹದ ಸ್ಥೂಲತ್ವದ ಕೇಳ್ಮೆಯನ್ನು ಅಥವಾ ದೇವರ

ಗದುಗಿನಲ್ಲಿ

ಮೇಲ್ತರಗತಿಯ ಊಟ ಹಾಗೂ ವಸತಿಗೃಹ

ದುರ್ಗಾ ಲಾಜ್

ಗದುಗಿಗೆ ಬರುವ ಪ್ರವಾಸಿಕರಿಗೆ ಇನ್ನು ಮೇಲೆ
ಯಾವ ತೊಂದರೆಯೂ ಇಲ್ಲ.

ಉತ್ತಮ ಊಟ, ಹೊಸಮಾದರಿಯ ಸ್ನಾನಗೃಹ, ಬೆಳಕು—ಹವೆಯುಳ್ಳ
ಕೋಣೆಗಳು. ಸಹಕುಟುಂಬ ಬಂದವರಿಗೆ ಪ್ರತ್ಯೇಕ ವ್ಯವಸ್ಥೆ.

ನಾವು ನೀಡುವ ಸೌಕರ್ಯಕ್ಕೆ ನೀವು ಕೊಡುವ ಬೆಲೆ ಅತ್ಯಲ್ಪ!
ಅವಶ್ಯ ಸಂದರ್ಶಿಸಿರಿ.

ಶುಚಿರುಚಿಯಾದ ವಸತಿ ! .... ರುಚಿಕರವಾದ ಊಟ !

ಇನ್ನಾವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಷನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, ' ಶಕ್ತಿ ಟಾಕೀಜ್ ' ಹತ್ತಿರ

ಒಡೆಯರು—ಎಲ್. ಪಿ. ಮೂರಕೋಡ

ವಿಶ್ವವ್ಯಾಪಿತ್ವದ ಬಗ್ಗೆ ಇರುವ ಅಲ್ಪಜ್ಞತೆಯನ್ನು ಆಧರಿಸಿತು. ಆಮೂಡರಿಂದ ಕ್ರೈಸ್ತರೂ ಮುಹಮ್ಮದೀಯರೂ ವಿಗ್ರಹಾರಾಧನೆಯನ್ನು ಹೀಗಳೆದರು; ಎಂದರೆ ಸ್ಥೂಲ ವಿಗ್ರಹವನ್ನು ಬಿಟ್ಟು ಪ್ರತೀಕಗಳನ್ನು ಮೊರೆಹೊಕ್ಕರು. ಮಾನವ್ಯ ವ್ಯವಹಾರದಲ್ಲಿ ವಸ್ತುಗಳ ಸಾಪೇಕ್ಷತಾರತಮ್ಯಜ್ಞಾನ ಪ್ರಧಾನವಾಗಿರುವುದರಿಂದ, ವಿಶಿಷ್ಟಾರ್ಥ ಸೂಚಕತ್ವ ಮೌಲಿಕವಾಗಿರುವುದರಿಂದ, ಆಯ್ದ ವಿಶಿಷ್ಟಾಕೃತಿಗಳು ಮಾತ್ರ ದೇವರ ಪ್ರತೀಕಗಳಾದುವಲ್ಲದೆ, ಜಗತ್ತಿನ ಎಲ್ಲ ವಸ್ತುಗಳೂ ಪ್ರತೀಕಗಳಾಗಲಿಲ್ಲ; ಪೂಜ್ಯವಸ್ತುಗಳಾಗಲಿಲ್ಲ.

ದೇಶ-ಕಾಲ-ಕಾರ್ಯವ್ಯಪೇಕ್ಷೆಯಿಂದ ಪರಿವರ್ತನಶೀಲವುಳ್ಳ ಮಾನವ್ಯ ಬುದ್ಧಿಗೆ ಮೊದಲು ಸಹಕಾರಿಯೆನಿಸಿದ ವಿಗ್ರಹ, ಕೆಲವೆಡೆ ವಿಘ್ನಕಾರಿಯಾಗಿ ಕಂಡಿತು; ಆಗ ಅದು ತ್ಯಾಜ್ಯವಾಯಿತು. ಪ್ರತಿಯೊಂದು ತತ್ತ್ವ ಅಥವಾ ಪದಾರ್ಥವೂ ದುರ್ಬಲಮನಸ್ಕರ, ಅಸೂಕ್ಷ್ಮಮತಿಗಳ ಕೈಯಲ್ಲಿ ಸಿಕ್ಕಾಗ ಮೂಲಾರ್ಥವನ್ನು, ಮೂಲ ಪ್ರಯೋಜನವನ್ನು ಕಳೆದುಕೊಳ್ಳುತ್ತದೆ. ಅದೇ ರೀತಿಗೆ ಸ್ಥೂಲವಿಗ್ರಹವೇ ಸಾಕ್ಷಾತ್ ದೇವರೆಂದು ಕೆಲವರು ಭಾವಿಸಿದುದೂ ವಿಗ್ರಹಾರಾಧನೆಯ ಕೀಳ್ಮೆಗೆ ಕಾರಣವಾಯಿತು. ಬುದ್ಧಿ-ಭಾವನೆಗಳ ಸಂಯುಕ್ತಪ್ರಯತ್ನದ ಫಲವಾದ ಕಲ್ಪನೆಯು ಮಾತ್ರ ಸಹಜವೂ ಪ್ರಯೋಜಕವೂ ಸುಂದರವೂ ಆಗುವುದಲ್ಲದೆ ಮಾನವ ಒಂದೇ ಒಂದನ್ನು ಅವಲಂಬಿಸಿದ ಕಲ್ಪನೆಯೂ ಸಂಸ್ಕೃತ,

ಹಿತಕರ ಎನಿಸದು. ವಿಗ್ರಹವೇ ದೇವರೆಂಬುದು ಕುರುಡುಭಾವನೆಯಿಂದ ಬಂದ ಕಲ್ಪನೆ. ದೇವರಿಗೆ ಕಲ್ಪನೀಯ ಆಕಾರವಿಲ್ಲವೆಂಬುದನ್ನು ಹೃದಯದಲ್ಲಿ ಅರಗಿಸಿಕೊಳ್ಳದೆ, ವಿಗ್ರಹಪೂಜಾ ತ್ಯಾಗ ಮಾಡುವುದು ಕೇವಲ ಬುದ್ಧಿಜನ್ಯ ಕಲ್ಪನೆಯ ವೈತಂಡಿಕ ಪ್ರವೃತ್ತಿ ಅತಿಯಾದ ಭಾವಿಕತೆಯಿಂದ ಭಕ್ತಿಯೋಗ ಅಧಃಪತಿತವಾದಂತೆ ಅತಿಬೌದ್ಧಿಕತೆಯಿಂದ ಜ್ಞಾನಯೋಗ ಕೆಲವೊಮ್ಮೆ ಅಧಃಪಾತ ಹೊಂದಿತು; ಚಾರ್ವಾಕತೆ ಅಥವಾ ವಂಚಕ ಸ್ವಾರಮಾರ್ಥಿಕತೆ ಇಳಿದಿತು; ಭೌತವಾದಕ್ಕೆ ಬಂದು ಮುಟ್ಟಿತು. ಹಾಗೇ ವಿಗ್ರಹಾರಾಧನೆಯಲ್ಲಿಯೂ ಇಂಥ ವಿಪರೀತ ದೃಷ್ಟಿಗಳು ತಲೆದೋರಿದುವು. ವ್ಯವಹಾರ ಯೋಗ್ಯವಲ್ಲದ ಅತ್ಯಾರಾಧನೆ, ಅನಾರಾಧನೆಗಳು ತಲೆದೋರಿ, ಮಾನವನ ಆತ್ಮೋನ್ನತಿಯ ಹಾದಿಯಲ್ಲಿ ಕಂಟಕಗಳಾಗಿ ನಿಂತುವು. ಒಂದುಕಡೆ Hero-worship—ವ್ಯಕ್ತಿಪೂಜೆಯಿಂದ ಇಂದು ಕೆಲವೆಡೆ ಹಾನಿಯಾದರೆ, ಅಪೂಜ್ಯಪೂಜೆಯಿಂದ ಕೇಡೊದಗಿದರೆ, ಮತ್ತೊಂದೆಡೆ ವ್ಯಕ್ತಿತಿರಸ್ಕಾರದಿಂದ, ಪೂಜ್ಯಪೂಜಾವ್ಯತಿಕ್ರಮದಿಂದ ಸಮಾಜ ಕಷ್ಟ-ನಷ್ಟಗಳಿಗೊಳಗಾಗುವಂತಾಗಿದೆ. ಇವೇ ವಿಗ್ರಹಾರಾಧನೆಯನ್ನು ಅವಲಂಬಿಸಿ ಬೆಳೆದು ಬಂದ ಮಾನವ ಬುದ್ಧಿಯ ವಿಕಾರಗಳು.

ಹಿಂದುಸ್ತಾನದಲ್ಲಿ ಬಹುಸಂಖ್ಯ ವಿಗ್ರಹಾರಾಧಕರಿರುವುದರಿಂದ, ಆ ವಿಗ್ರಹಾರಾಧನೆಗೆ ಸಂಬಂಧಿಸಿದ ವಿವಿಧ ಶೈಕ್ಷಣಿಕ, ವ್ಯಾಯಾಮಿಕ, ರಾಸಾಯನಿಕ, ಭೈಷಜ್ಯಕ, ಭೌತಶಾಸ್ತ್ರೀಯ ಸತ್ಫಲವನ್ನು ಕಳೆದುಕೊಂಡು, ಮುಂದುವರಿದ ನಾಗರಿಕರೆನಿಸಿಕೊಳ್ಳಲು ಹವಣಿಸಿ, ವಿಗ್ರಹಾರಾಧನೆಯನ್ನು ಬಿಡುವುದು ಲಾಭಕರವಲ್ಲ. ನಿಜವಾಗಿ ಮುಂದುವರಿದ ನಾಗರಿಕ ' ದೇವರು ಎಲ್ಲೆಲ್ಲೂ ಇದ್ದಾನೆ, ವಿಗ್ರಹದಲ್ಲಿಯೂ ಇದ್ದಾನೆ ' ಎಂಬ ಅರಿವಿನ ಮೂಲಕ ವಿಗ್ರಹವನ್ನು ಕಾಣಬಹುದು. ಅಲ್ಲದೆ, ವಿಗ್ರಹ ಇಡುವ ಸ್ಥಳ, ಅದರ ಆರಾಧನೆಯ ಕ್ರಮ ಇವುಗಳು ವ್ಯವಹಾರನಿರತನಾದ ಮಾನವನಿಗೆ, ಸ್ಮೃತಿಶಕ್ತಿಯ ನ್ಯೂನತೆಯಿಂದ ಸದಾ ದಿವ್ಯತತ್ತ್ವವನ್ನು ನೆನೆದು ಕಾರ್ಯಾಸಕ್ತನಾಗಲು ಬರದ ಮಾನವನಿಗೆ, ವ್ಯವಹಾರಗತ ದೋಷದಿಂದ ಮೇಲೆ ತಲೆಯಿತ್ತಿ ನಿಲ್ಲುವ ದಿವ್ಯತ್ವದ ಆದರ್ಶವನ್ನು ನೆನಪಿಗೆ ತಂದುಕೊಡಲು ಕಾಲಕಾಲಕ್ಕೆ, ದೈನಂದಿನ ಅವಧಿಗಳಲ್ಲಿ ವಿಗ್ರಹಾದಿ ವಿಶಿಷ್ಟ ಪ್ರತೀಕಗಳು ನೆರವಾಗಬಲ್ಲವು. ಆರಾಧನೆಯ ವಾತಾವರಣವು ನೈರ್ಮಲ್ಯ, ಪಾವಿತ್ರ್ಯಗಳನ್ನು ಅವನಲ್ಲಿ ಉಂಟುಮಾಡುವುವು, ಜಾಗೃತಗೊಳಿಸುವುವು. ಅದರ ಬಳಕೆಯ ಸಾಮಗ್ರಿಗಳು, ಯಮ-ನಿಯಮಾದಿಗಳು, ಉಪವಾಸ-ವ್ರತಾದಿಗಳು ದೈಹಿಕ ಮತ್ತು ಮಾನಸಿಕ ಪುಷ್ಟಿ-ತುಷ್ಟಿಗಳಿಗೆ, ಶಾಂತಿ-ಸಮಾಧಾನಗಳಿಗೆ ಕಾರಣವಾಗುವುವು. ದೇವತ್ವದ ಆರಾಧನೆ ಅಂಜಿಕೆಯ ದೆಸೆಯಿಂದ ಅಜ್ಞರಿಗೆ ಅಗತ್ಯವೆನಿಸಿದರೆ, ಶಾಂತಿ-ಸಮಾಧಾನಗಳಿಗಾಗಿ ಸುಜ್ಞರಿಗೆ ಅವಶ್ಯಕವೆನಿಸಿದ್ದು ಅನುಭವವೇದ್ಯವಾಗಿದೆ. ಮಾನವನ ಮೂಲಗುಣಗಳು ಮೂಲಶಕ್ತಿಗಳು, ಶರೀರ ಮತ್ತು ಮನಸ್ಸಿನ ವಿವಿಧಧರ್ಮಗಳು ಸ್ವಭಾವತಃ ಕೆಟ್ಟವೂ

ಲ್ಲ, ಒಳ್ಳೆಯವೂ ಅಲ್ಲ; ಬುದ್ಧಿಸಂಸ್ಕಾರಗಳು ಸಾಮಾಜಿಕ-ದೃಷ್ಟಿಯಿಂದ ಅವನ್ನು, ಕಾರಣಸಾಮಗ್ರಿಭೇದದಿಂದ ಒಳ್ಳೆಯವನ್ನಾಗಿ ಇಲ್ಲವೆ ಕೆಟ್ಟವನ್ನಾಗಿಮಾಡುವುವು. ಆದುದರಿಂದ ಹುಟ್ಟಿದ ಮನುಷ್ಯನಿಗೆ ಬುದ್ಧಿಸಂಸ್ಕಾರ ಅಗತ್ಯ. ಇದಕ್ಕೆ ವಿಗ್ರಹ ಪ್ರತೀಕಾದಿಸಾಧನಗಳ ಮೂಲಕ ಉದಾತ್ತತೆಯತ್ತ ಪ್ರವೃತ್ತಿ-ಯುಂಟಾಗುವಂತೆ, ದಿವ್ಯತೆಯತ್ತ ಒಲವುಂಟಾಗುವಂತೆ ಪ್ರೇರಣೆ ಪಡೆಯಲು ಅನುಕೂಲವಾಗುವ ದೇವತಾರಾಧನೆ ಆವಶ್ಯಕವಲ್ಲವೆ? ಆವಶ್ಯಕವೆಂಬುದನ್ನು ಇಲ್ಲಿಯ ವರೆಗೆ ಆಗಿಹೋದ, ಈಗಲೂ ಬದುಕಿರುವ ಎಷ್ಟೋ ಜನಾದರಣೀಯ ಮಹಾತ್ಮರು ತಮ್ಮ ಜೀವನದಿಂದ ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ. ದೈಹಿಕ ಪಶುತ್ವದ ಸೆಳೆತ-ಸೆಳೆತಗಳನ್ನು ಹಿಡಿತದಲ್ಲಿಟ್ಟು ಸುಖವಾಗಿರಬಯಸುವ ಪ್ರತಿಯೊಬ್ಬ ಮಾನವನಿಗೂ ಕಾಲಗತಿಯನ್ನು ಜ್ಞಾಪಿಸಿ ಎಚ್ಚರಿಸುವ 'ಅಲಾರಂ' ಗಡಿಯಾರದಂತೆ ದೇವತಾರಾಧನೆ ಕಾರ್ಯಾಕಾರ್ಯವಿವೇಕವನ್ನು ಸೂಚಿಸಲು ಸಹಕಾರಿಯಾಗುವುದು ಎಂಬುದಕ್ಕೆ ಆವಶ್ಯಕ.

ಇನ್ನು ಕಾಪಟ್ಯ, ದಂಭಗಳ ವಿಚಾರ: ಮೂರ್ತಿಪೂಜೆಯಲ್ಲಿ ಮಾತ್ರ ಕಾಪಟ್ಯ, ದಂಭಾಚಾರಗಳು ಹುಟ್ಟುವೆಯೆಂಬುದು ಸುಳ್ಳು; ಮಾನವ್ಯವೆನಿಸುವ ಎಲ್ಲ ವ್ಯವಹಾರದಲ್ಲೂ ಆಯಾ ವರ್ಗದ ಮನುಷ್ಯರ ಹೃದಯಧರ್ಮಾನುಸಾರವಾಗಿ ವಂಚಕತೆ ತಲೆಹೋರಿದ್ದುಂಟು. ಅಂಥ ವಂಚಕತೆ ಕೆಲ ದೇವತಾರಾಧಕರಲ್ಲಿ ಉಂಟಾಗಿದ್ದರೆ ಅದಕ್ಕೆ ಮೂರ್ತಿ ಹೊಣೆಯಲ್ಲ; ದೇವತಾರ್ಚನವಿಧಿ ಹೊಣೆಯಲ್ಲ; ಆ ಜೀವಿಗಳ ಮನೋದೌರ್ಬಲ್ಯವಷ್ಟೇ ಕಾರಣ ಈ ಕಾರಣದಿಂದ, ಎಂದರೆ ಕೆಲ ಮೂರ್ತಿಪೂಜಕರ ಅಜ್ಞಾನ,ಕುಜ್ಞಾನ, ದಂಭ, ದುರ್ವೃತ್ತಗಳಿಂದ ಮೂರ್ತಿಪೂಜೆಯನ್ನು ತ್ಯಾಜ್ಯವೆನ್ನಲಾಗದು. ಆದರೆ ಇಷ್ಟು ಮಾತ್ರವನ್ನು ಹೇಳಬಹುದು: ದೇವತಾಸ್ಥಲಗಳು ಸಾರ್ವಜನಿಕವಾಗಿರುವಲ್ಲಿ, ಸಮಾಜದ ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಆ ಸ್ಥಳಾಧಿಕಾರಿಗಳು ಸಾಕಷ್ಟು ಯೋಗ್ಯತಾಸಂಪನ್ನರಿರಬೇಕು ಮತ್ತು ಸಮಾಜವಾದರೂ ಅಂಥ ಯೋಗ್ಯತಾಸಂಪನ್ನರಿಗೆ ಮಾತ್ರ ಅಲ್ಲಿ ಸ್ಥಾನ ಕೊಡಬೇಕು. ಈ ಜಾಗ್ರತೆಯನ್ನು ಸಮಾಜನೇತೃಗಳು ವಹಿಸದಿದ್ದಲ್ಲಿ, ಅಲ್ಲಿ ಪೂಜ್ಯಗುಣ ಪ್ರತೀಕಗಳ ಆರಾಧನೆ ನಡೆಯದೆ—ಇತರ ಸ್ಥಳಗಳಲ್ಲಿ ಒನ್ಮೊಮ್ಮೆ ಆಗುವಂತೆ—ಅಪೂಜ್ಯಗುಣ ಪ್ರತೀಕಗಳ ಪೂಜೆ ನಡೆದು, ಸಮಾಜ ಹೀನ ಸ್ಥಿತಿಗೆ ಅಜ್ಞಾನಾಂಧಕಾರಕ್ಕೆ ಬೀಳುವಂತಾಗುವ್ರದು. ಪೂಜ್ಯಪೂಜಾವ್ಯತಿಕ್ರಮ, ಅಪೂಜ್ಯಪೂಜೆ ಮತ್ತು ಅಪೂಜೆ ಈ ಮೂರೂ ಸಮಾಜ ಕಂಟಕಗಳು, ಮಾನವನನ್ನು ಇದ್ದ ಸ್ಥಿತಿಯಿಂದ ಮೇಲಕ್ಕೆ ಎತ್ತದ, ಕೆಳಕ್ಕೆ ಬೀಳಿಸುವ ಶತ್ರುಗಳು. ಈ ಶತ್ರುಗಳಿಂದ ತಪ್ಪಿಸಿಕೊಳ್ಳಲು ದೇವಸ್ಥಾನಗಳು ಸಹಕಾರಿಯಾದಾಗ ಮಾತ್ರ ಅವು ಸಾರ್ಥಕವೆನಿಸುವುವು.

ದೇಶದ ಸ್ವಾತಂತ್ರ್ಯವನ್ನು ಉಳಿಸಬೇಕಿದ್ದರೆ ಮೊದಲು ಆರ್ಥಿಕ ಸ್ವಾತಂತ್ರ್ಯವನ್ನು

ಗಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ

ಅದಕ್ಕಾಗಿ

★ ತಮ್ಮ ಆದಾಯವನ್ನು ಬೆಳೆಯಿಸಿಕೊಳ್ಳುವವರೂ

★ ತಮ್ಮ ಹಣವನ್ನು ಸರಿಯಾದ ರೀತಿಯಲ್ಲಿ ತೊಡಗಿಸಬೇಕೆನ್ನುವವರೂ

★ ತಾರುಣ್ಯದಲ್ಲಿರುವಾಗಲೇ, ತಮ್ಮ ವೃದ್ಧಾಪ್ಯಕಾಲವು ನಿಶ್ಚಿಂತೆಯಿಂದ ಕಳೆಯಲು ಕೂಡಿಡಬೇಕೆನ್ನುವವರೂ

ಶ್ರೀ. ಶೇಟ್ ಬಿ. ಎಮ್. ಬಿಲ್ಡಾ

ಇವರ ನೇತೃತ್ವದಲ್ಲಿ ನಡೆದ

ರುಬಿ ಜನರಲ್ ಏಮಾ ಕಂಪನಿ ಲಿಮಿಟೆಡ್

ಗಣಿತ, ಮಾರುತಿಗಲ್ಲಿ, ಬೆಳಗಾಂವಿ

ಇವರಿಂದ ವಿವರಗಳನ್ನು ತಿಳಿದುಕೊಳ್ಳಬೇಕು.

ವಿ. ಸೂ.— ಕಮಿಷನ್ ಇಲ್ಲವೆ ಕಂಬಳದ ಮೇಲೆ ಬೇರೆ ಊರುಗಳಲ್ಲಿ ಸ್ತ್ರೀ ಹಾಗೂ ಪುರುಷ ಪ್ರತಿನಿಧಿಗಳನ್ನು ನಿಯಮಿಸಬೇಕಾಗಿದೆ. ಕೆಲಸ ಮಾಡಬಯಸುವವರು ಕಾಣಬೇಕು.

ಕಂಬನಿ

ಶ್ರೀ. ಯಮ್ಮುಂಜ ರಾಮಚಂದ್ರ, ಪುತ್ತೂರು

೧

ಹೊಸ ಬೆಳಕಿನೆದುರಿಟ್ಟ ಬದುಕಿನಾಧಾರಗಳೆ,
ನಾ ನಿನ್ನ್ನು ಮರೆಯಲಾರೆ !
ಆವ ಸುಖ ಸ್ವಪ್ನಸಾಗರದಲ್ಲಿ ತೇಲಿದರು
ನಾ ನಿಮ್ಮ ತೊರೆಯಲಾರೆ !

೨

ನಿನ್ನೊಳೊಂದಾಗಿದ್ದ ಎನ್ನೆದುರು ಏತಕೀ
ದೀನ ಮುಖಮುದ್ರೆ ತರುವೆ ?
ಹೃದಯದೊಡನಾಟದೊಳಗಿದ್ದ ಲತೆಯೇ, ಏಕೆ
ಪಾದಮೂಲದಿ ಸುಳಿಯುತಿರುವೆ ?

೩

ಎತ್ತೆತ್ತ ತಿರುಗಿದರು ಕತ್ತಲೇ ಕಾಣಿಸಲು
ಬೆಳಕಾಗಿ ಉರಿದಿರುವಿರಿ;
ಮರುಭೂಮಿ, ಉರಿಯುತಿಹೆ....ಆಹ ತೃಷೆ! ಎಂದೊರಲೆ
ಸೊದೆಯಾಗಿ ಸುರಿದಿರುವಿರಿ.

೪

ನೊಂದು ಬಿಸುಸುಯ್ಯುತಿರಲೆತ್ತಿ ಮೈದಡವಿದಿರಿ
ಮಮತೆಯಲಿ ಮಾತೆಯಾಗಿ.
ಸೋತು ಹಿಂದುಳಿಯುತಿರೆ ಕೈಹಿಡಿದು ನಡೆಸಿದಿರಿ
ಉತ್ಸಾಹ ಗಾಳಿಯಾಗಿ.

೫

ಇಂಪೇಕೆ ಈ ಮೌನ ? ಆರ ಕುರಿತೀ ಧ್ಯಾನ ?
ಆರಿಗೀ ಭಕ್ತಿಯುತ ನಮನ ?
ನೀರು ತುಂಬಿದ ಕಣ್ಣು ದೈನ್ಯದಲಿ ಕೇಳುತಿವೆ—
ಎಂದು ನಿಮ್ಮೀ ಋಣವ ಶಮನ ?

೬

ಬನ್ನಿ ಓ ಬಂಧುಗಳೆ, ತೊರೆದು ಹೋಗದಿರೆನ್ನ,
ನಾ ನಿಮ್ಮ ಮರೆಯಲಾರೆ !
ಬಳ್ಳಿಬಳ್ಳಿಗಳಾಗಿ ಎನ್ನನಪ್ಪುವ ತನಕ
ಕಂಬನಿಯನೊರಸಲಾರೆ !

ಉಡುಗೊರೆ

ಶ್ರೀ. ಸಿ. ಕೆ. ತಿರುಮಲೇಶ, ಮದ್ರಾಸು

೧

ಸಂಸಾರನೌಕೆಯಲಿ ಕರ್ಣಧಾರಿಣಿಯಾಗಿ,
ಸುಖ-ದುಃಖಸಾಗರದೆ ಪಯಣ ಬೆಳಸು;
ಅಲೆಗಳಾಟೋಪಕ್ಕೆ ವಿಾನುಗಳ ಬಡಿತಕ್ಕೆ,
ಅಲುಗದೆಯೆ ನಡೆ ಮುಂದಕಿಹುದು ಸೊಗಸು.

೨

ಜೀವನವು ಶೋಕಮಯವಲ್ಲ ಸುಖಮಯವೆಂದು,
ತೋರಿಸಲಿ ನಿನ್ನ ಚೆಲು ನಡೆನುಡಿಗಳನಿತು;
ಸಾರಸಂಸಾರ ನಿಸ್ಸಾರವೆನಿಸದೆ ನಿನಗ-
ಪಾರ ಸುಖ-ಸೌಭಾಗ್ಯ ದೊರೆಯಲಿನಿತು.

೩

ಮನಸು ಮನಸೊಂದಾಗಿ ಜೇನು-ಸಕ್ಕರೆಯಂತೆ,
ನೆನಸು ಕನಸುಗಳೆಲ್ಲು ಬೆಸುಗೆಯಾಗಿರಲಿ;
ಹರಿಸದಾಡುಂಬೊಲದಿ ಸಂಸ್ಕೃತಿಯ ಮೇಳದಲಿ,
ಇರಲಿ ಹೃದಯವು ಸತತ ಸುಖ-ಶಾಂತಿ ತರಲಿ.

೪

ಬಾಳಗಾಳಿಗೆ ಸಿಲುಕಿ ಕಳವಳವ ಮನದೆ ನೀ
ತಾಳಲೆಡೆಯಿರದು ನಗೆಗಡಲ ಸೀಮೆಯಲಿ;
ಬಾಳ ಚೆಲುತೋಂಟದಲಿ ನಿನ್ನ ಕುಲತರು ಚಿರಂ,
ಬಾಳಿರಲಿ ! ಫಲಿಸಿರಲಿ ! ಸಂತಸವ ತರಲಿ !

೫

ಸಾಗಿದರು ನೀ ದೂರ ಸೊಗವನರಸುತ ಮುಂದೆ,
ಬಾಗಿರಲಿ ನಿನ್ನ ಮನ ನಾಡು-ನುಡಿಗಳಲಿ;
ಕರ್ಮಯೋಗಿನಿಯಾಗಿ ಧರ್ಮ-ನೀತಿಯನರಿತು,
ನಿರ್ಮಲದ ನೃದುಹೃದಯ ನಲುಮೆ ತುಂಬಿರಲಿ;

೬

ನಿನ್ನ ಜೀವನದ ಜಯಮಂಗಲದ ಶುಭದಿನಕೆ,
ಜೊನ್ನದೆಳೆಗಳ ತಂದು ತೊಯ್ದು ನಲುಮೆಯಲಿ;
ಚೆನ್ನ ನುಡಿಮುತ್ತುಗಳ ಕೋದು ಗೆಯ್ದೀ ಹಾರ,
ನಿನ್ನ ಕೊರಳಲಿ ಚೆಲುವು ಚೆಲುವಾಗುತಿರಲಿ !

ಹೊಗಳಿಕೆ

(ಹಂಟಿ)

"ನನಗಿರಿನಂದ"

★

ಹೊಗಳಿಕೆ ಯಾರಿಗೆ ಬೇಡ? ಬೇಡವೆಂದು ಹೇಳುವುದು ಹೊರಗಿನ ಶಿಷ್ಟಾಚಾರ. ಹೊಗಳಿಕೆಯೆಂಬುದು ಮನುಷ್ಯನಿಗೆ ಹೋಳಿಗೆಯೂಟಕ್ಕಿಂತ ಸಿಹಿಯೆನಿಸುವಂತಹದು.

★

ಒಬ್ಬರು ದೊಡ್ಡ ಮನುಷ್ಯರು ನನಗೆ ಬರೆದ ಪತ್ರದಲ್ಲಿ, ನನ್ನನ್ನು ಕಾಯಿ ತುಂಬ ಹೊಗಳಿ ಹೊಗಳಿ ಬರೆದಿದ್ದರು. ನನಗೆ ಎಷ್ಟು ಸಂತೋಷವಾಯಿತೆಂದರೆ, ನಾನು ಪರಂಪರೆಯಾಗಿ ಮಾಡಿದ ಆ ಪತ್ರಪಾರಾಯಣನನ್ನು ಕೇಳಿಕೇಳಿಯೇ, ನನ್ನ ಹೆಂಡತಿಗೆ ಆ ಇಡೀ ಪತ್ರವು ಬಾಯಿಪಾಠವಾಗಿ ಹೋಯಿತು. ಅನಂತರ ನಾನು ಆ ದೊಡ್ಡ ಮನುಷ್ಯರಿಗೆ ಒಂದು ಪ್ರತ್ಯುತ್ತರವನ್ನೂ ತಯಾರಿಸಿದೆ. ಅದರಲ್ಲಿ, ಅವರು ಬರೆದ ಹೊಗಳಿಕೆಯನ್ನು ಕೇಳಿ ನಾನು ಎಷ್ಟು ಸಂತೋಷಪಟ್ಟೆನೋ ಅದಷ್ಟನ್ನೂ ನಿರೂಪಿಸಿದ್ದೆ. ಇದನ್ನು ನನ್ನ ಹೆಂಡತಿಗೆ ಓದಿ ತೋರಿಸುತ್ತಲೆ ಅವಳು ಮುಖವನ್ನು ಸಿಂಡರಿಸಿಕೊಂಡು "ಅಯ್ಯೋ ನಿನ್ಮೈ ಚಿಂದವೆ! ಹೊಗಳಿದ್ದಕ್ಕೆ ಸಂತೋಷಪಟ್ಟೆನೆಂದು ಬಾಯಿಬಿಟ್ಟು ಹೇಳಿಕೊಳ್ಳುವುದುಂಟೆ? ನಾಚಿಕೆಗೇಡು!" ಎಂದು ಮೂದಲಿಸಿ, ಸಂತೋಷದಿಂದ ಕುರುಡಾದ ನನ ಬುದ್ಧಿಯನ್ನು ಎಚ್ಚರಿಸಿದಳು.

ನಿಜ. ತನ್ನ ಹೊಗಳಿಕೆಯನ್ನು ತಾನೇ ಕೇಳುವ ಸಂದರ್ಭ ಬಂದರೆ "ಇಲ್ಲವಯ್ಯಾ, ನಾನು ಇಷ್ಟು ಹೊಗಳಿಕೆಗೆ ಪಾತ್ರನೇ ಅಲ್ಲ ಸ್ವಾಮಿ" ಎಂದು ಕೈಮುಗಿದು ಹಲ್ಲುಕಿರಿಯುತ್ತಾ ಹೇಳಬೇಕು. ಇದು ಮರ್ಯಾದೆ; ಶಿಷ್ಟಾಚಾರ. ಮನಸ್ಸಿನಲ್ಲಿ ಮಾತ್ರ ಅವರು ಇನ್ನೂ ತನ್ನನ್ನು ಹೊಗಳಬೇಕೆಂದೇ ಇರುತ್ತದೆ. ಈ ಗುಟ್ಟು ನನಗೆ ಗೊತ್ತಾದುದು ಹೇಗೆಂದರೆ: ನನಗೇ ಹಾಗಾಗಿದೆ, ಆಗುತ್ತದೆ! ಹಾಗೆಯೇ ಸಾಮಾನ್ಯವಾಗಿ ಇತರರಿಗೂ ಎಂದು ಊಹಿಸಬಹುದಷ್ಟೆ?

ಯಾರಾದರೂ ನನ್ನ ವಿಷಯ ಮಾತಾಡಿಕೊಳ್ಳುತ್ತಿರುವಾಗ, ಅದರಲ್ಲಿ ನನ್ನನ್ನು ಕುರಿತು ಏನಾದರೂ ಹೊಗಳುತ್ತಾರೋ ಎಂಬುದನ್ನೆ ನಾನು ಮುಖ್ಯವಾಗಿ ಲಕ್ಷ್ಯಗೊಟ್ಟು ಅಡಗಿಕೊಂಡು ಕೇಳುವುದು. ಹೌದು—ಅಡಗಿಕೊಂಡೇ. ಏಕೆಂದರೆ, ಬಹಿರಂಗವಾಗಿ ಅದನ್ನಾಲಿಸುವುದು ನಾಚಿಗೆಗೇಡಲ್ಲವೆ? ಹಾಗೆ ನನ್ನ ಹೊಗಳಿಕೆಯ ಚೂರುಗಳು ಎಷ್ಟೆಷ್ಟು ಹೊರಡುವುವೋ ಅಷ್ಟಷ್ಟನ್ನೂ ನಾನು ಹರ್ಷಭರದಿಂದ ಉಬ್ಬುತ್ತೇನೆ. ಅದೇ ಸಮಯದಲ್ಲಿ ನಾನು ಅವರ ಇದಿರಿಗೆ ಹೋಗುವ ಪ್ರಸಂಗವೇ ಬಂದುಬಿಟ್ಟರೆ, ಫಕ್ಕನೆ ಹೋಗಿ, ಆ ಹೊಗಳಿಕೆಯ ಕಡೆಗೆ ಲಕ್ಷ್ಯವೇ ಇಲ್ಲದವನಂತೆ ನಟಿಸುತ್ತ, ಹೋದ ಕಾರ್ಯವಾಗುತ್ತಲೇ ಹಿಂದಿರುಗಿಬಿಡುವೆನು. ಎಂದರೆ ಹೊಗಳಿಕೆಯ ಮೇಲೆ ನನಗೇನೂ ಕುತೂಹಲವಿಲ್ಲವೆಂಬುದೇ ಆ ನಟನೆಯ ಅರ್ಥ. ಹೀಗೆ ಬಹಿರಂಗದಲ್ಲೊಂದು ನಟನೆ, ಅಂತರಂಗದಲ್ಲೊಂದು ರಹಸ್ಯ, ಇದು ಆತ್ಮವಂಚನೆ ಎನಿಸುವುದಿಲ್ಲವೆ? ಹೊಗಳಿಕೆಯ ಸಂಬಂಧವಾಗಿ ಇದೊಂದು ಕಣ್ಣುಕಟ್ಟುತನವೇಕೊ! ಅದೇನು ಸಭ್ಯತೆಯೋ! ಅದೆಂತಹ ಸಂಭಾವಿತವೊ!

ಇನ್ನು ತೆಗಳಿಕೆ; ಇದು ಅಂತರಂಗದಲ್ಲಿ ಯಾರಿಗೂ ಬೇಡದ್ದು. ಬಹಿರಂಗದಲ್ಲಿ ಆ ಭಾವವನ್ನು ತೋರಗೊಡದೆ "ತಾವು ನನ್ನ ತಪ್ಪುಗಳನ್ನು ತೆಗಳಿ ತೋರಿಸಿಕೊಟ್ಟುದಕ್ಕಾಗಿ ತುಂಬಾ ಕೃತಜ್ಞನು" ಎನ್ನುವ ಪ್ರಸಂಗಗಳು ಎಷ್ಟೋ ಬರುತ್ತವೆ. ನಾನು ಹೊರಗಿನಿಂದ ಹಾಗೆಂದರೂ, ಒಳಗಿನಿಂದ ನನ್ನನ್ನು ತೆಗಳಿದವರ ಮೇಲೆ ಒಂದು 'ಥರಾ' ಕೋಪದ ಹೊಗೆ ಆಡಿಕೊಂಡೇ ಇರುತ್ತದೆ. ಆ ತೆಗಳಿಕೆಗೆ ನಿಜವಾಗಿಯೂ ನಾನು ಪಾತ್ರನಿದ್ದರೂ ಉಕ್ಕುವುದೇನೋ ನಿಜ. ಹಾಗೆಯೇ ಹೊಗಳಿಕೆಗೆ ನಾನು ನಿಜವಾಗಿಯೂ ಪಾತ್ರನಲ್ಲದಿದ್ದರೂ, ಹೊಗಳಿದರೇನೋ ಸಂತೋಷವೇ. ಇಂತಹ ಒಳಗೊಂದು ಹೊರಗೊಂದು ಬಗೆಗಳು. ಮನುಷ್ಯರು ದೊಡ್ಡವರಾದ ಮೇಲೆಯೇ ಊಂಟಾಗುವಂಥಾದ್ದು ನೋಡಿ. ನಿಷ್ಕಲ್ಮಷರಾದ ಸಣ್ಣ ಮಕ್ಕಳಲ್ಲಿ ಒಳಗೂ ಹೊರಗೂ ಒಂದೇ ಸತ್ಯಸ್ವರೂಪವನ್ನೆ ಕಾಣಬಹುದು. ಒಂದು ಮಗುವನ್ನು ಕುರಿತು, "ಮಗು, ನೀನು ಒಳ್ಳೆಯವನೋ ಕೆಟ್ಟವನೊ?" ಎಂದು ಕೇಳಿದರೆ, "ನಾನು ತುಂಬ ಒಳ್ಳೆಯವ" ಎಂದು ವ್ಯವಹಾರದ ಮರ್ಯಾದೆಯನ್ನರಿಯದೆ ಆ ತರಳನು ಹೇಳುತ್ತಾನೆ. ಆಗ ನಾವೇ ಅವನಿಗೆ ಕಣ್ಣುಕಟ್ಟಿನ ಮರ್ಯಾದೆಯ ಮಾತನ್ನು ಕಲಿಸುತ್ತೇವೆ: "ಹಾಗೆ ಹೇಳಬಾರದೊ. ತುಂಬಾ ನಾಚಿಕೆ! 'ನೀನು ಒಳ್ಳೆಯವನೋ' ಎಂದು ಕೇಳಿದರೆ 'ಅಲ್ಲ' ಎನ್ನಬೇಕು. 'ಅವನು ಒಳ್ಳೆಯವನೊ?' ಎಂದು ಕೇಳಿದರೆ 'ಹೌದು. ಅವನು ಒಳ್ಳೆಯವ' ಎನ್ನಬೇಕು" ಹೀಗೆಲ್ಲಾ ನಾವು ಚಿಕ್ಕವರಿಗೆ ಮಾತಾಡಲು ಕಲಿಸುತ್ತೇವೆ. ಮೇಲಿನ ಮಾತು ಹೇಗಿದ್ದರೂ, ಅಂತರಂಗದಲ್ಲಿ ಮನುಷ್ಯನು ತಾನು ಕೆಟ್ಟವನೆಂಬುದನ್ನು ಒಪ್ಪುವುದಿಲ್ಲ. ಹೊಗಳಿಕೆಯ ಮೇಲೆಯೇ ಅವನ ಆತುರ. ಯಾವ ಕೆಲಸ ಮಾಡುವಾಗಲೂ ಅದು ಹೊಗಳಿಕೆಗೆ ಪಾತ್ರವಾಗಬೇಕೆಂಬುದೇ ಅನೇಕರ ಬಯಕೆ. ಕೃತಿಕರ್ತನ ಕಿವಿಗಳು ಹೊಗಳಿಕೆಯನ್ನೇ ಹೊಂಚುಹಾಕುತ್ತವೆ. ಹೊಗಳಿಕೆಯ ಮೇಲೆ ಇಚ್ಛೆಯಿಲ್ಲದವರು ತಮ್ಮ ಹೆಸರನ್ನೆ ಮರೆಯಿಸಿಡಬೇಕಿತ್ತು. ಈಗ ಕೃತಿಕರ್ತರನೇಕರು ಸಂಕೇತಾಂಕಿತಗಳನ್ನಿಟ್ಟುಕೊಳ್ಳುವುದರ ಗುಟ್ಟು ಏನೆಂದರೆ, ಮರೆಯಲ್ಲಿ ತಮ್ಮ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!
ಡಾ. ವಾಮನ ಗೋಪಾಳ
ಇವರ
ಸಾಸಾ ಪರಿಲ್ಲಾ

ಹೊಗಳಿಕೆಯನ್ನು ಕೇಳುವುದೊಂದು, ತೆಗಳಿಕೆಯನ್ನು ಇದಿರಿಸಲು ಧೈರ್ಯವಿಲ್ಲದಿರುವುದು ಇನ್ನೊಂದು. ಹೌದು. ನಾನು ಕೂಡ!

ಇಂತಹ ವಿಚಿತ್ರತನವಿರುವ ಹೊಗಳಿಕೆಯಲ್ಲಿ ಗುಣವೇನೂ ಇಲ್ಲವೆಂದಲ್ಲ; ಬಹಳ ಮುಖ್ಯವಾದ ಗುಣವೇ ಅದಕ್ಕುಂಟು. ಈ ಹೊಗಳಿಕೆಯೂ ಹೊಗಳಿಕೆಯ ಬಯಕೆಯೂ ಒಂದಾಗಿ ಸೇರಿಯೇ ಮನುಷ್ಯರಿಂದ ಉತ್ತಮೋತ್ತಮವಾದ ಕಾರ್ಯಗಳನ್ನು ಉತ್ಸಾಹದಿಂದ ಮಾಡಿಸಿಬಿಡುತ್ತವೆ ನೋಡಿ ಆದರೆ ತನ್ನ ಹೊಗಳಿಕೆಯನ್ನು ತಾನೇ ಮಾಡಿಕೊಳ್ಳಬಾರದಂತೆ; ಅನ್ಯರು ಮಾಡುವಾಗ ನಾವು ಇದಿರೇ ಇದ್ದು ಕೇಳಲೂ ಬಾರದಂತೆ. 'ಗುಪ್ತದಾನ' ಮೊದಲಾದ ರಹಸ್ಯವಾದ ಸತ್ಕಾರ್ಯಗಳನ್ನು ಮಾಡಿದರೆ, ಎಂದರೆ ಹೊಗಳಿಕೆಯ ಬಯಕೆಯನ್ನು ಬಿಟ್ಟೇ ಕೆಲಸಗಳನ್ನು ಮಾಡಿದರೆ ಬಹಳ ಉತ್ತಮವಂತೆ. ಈ ನೀತಿಯಂತೆ ಮಾಡುವವರು ಯಾವ ಮಹಾತ್ಮರೋ! ಅರ್ಥಾತ್ ಕೀರ್ತಿಯನ್ನು ಬಯಸದ ನಾಮಧಾರಿ ಯಾರಯ್ಯಾ? ನಾನಂತೂ ಕೀರ್ತಿಶಾಲಿಯಾಗಬೇಕೆಂದೇ ಏದುತಿದ್ದೇನೆ. ಅಂತೆಯೇ ಮುಚ್ಚಾಗಿ ಮರೆಯಾಗಿ ಅದಷ್ಟು ಹೆಣಗುತ್ತಿದ್ದೇನೆ. ಹಾಗೆ ಹೆಣಗಿ ಗಳಿಸಿಕೊಂಡಿದ್ದೇ ನೋಡಿ ನಾನು ಪ್ರಾರಂಭದಲ್ಲಿ ಪ್ರಸ್ತಾಪಿಸಿದ ಆ ಪದ್ಯ.

ಇಂತಹ ಹೊಗಳಿಕೆಯ ಸ್ವರಂಸಾ ಪತ್ರಗಳಿಂದ, ವ್ಯವಹಾರದಲ್ಲಿ ಎಷ್ಟು ಪ್ರಯೋಜನವಿದೆಯೆಂದು ನಿನಗೆ ಗೊತ್ತಿಲ್ಲವೆ? ಈ ಹೊಗಳಿಕೆಯ ದಬ್ಬಾಳಿಕೆಯಿಂದಲ್ಲನೇ ಸುಲಭವಾಗಿ ಉದ್ಯೋಗದ ಬೇಟೆಯಾಗುವುದು? "ಸರ್ಟಿಫಿಕೆಟು" "ಶಿಫಾರಸು" ಮೊದಲಾದ ಹೊಗಳಿಕೆಯು ನಾವಾಂತರ---ರೂಪಾಂತರಗಳು, ಸ್ವಾರ್ಥ ಸಾಧಕವಾದ ಉಪಕಾರಿಗಳು ಸುಳ್ಳು-ಮರೆ-ಮಾಯೆ ಮೊದಲಾದ ಬಣ್ಣಗಳು ಅವುಗಳಿಗೆ ಭೂಷಣವೆನಿಸುತ್ತವೆ. ಅದುದರಿಂದ ಅಂತಹವುಗಳಿಗೆ ಬಹಳ ಬೆಲೆ ಕೊಟ್ಟೇ ಪಡೆಯಬೇಕಾದ ಪ್ರಸಂಗಗಳೂ ಬರುತ್ತವೆ. ಅಂತಹ ಬೆಲೆಬಾಳುವ ನನ್ನ ಹೊಗಳಿಕೆಗಳಿಗೆ ನಾನು ಸುಂದರವಾದ ಫ್ರೇಮುಹಾಕಿಸಿ ಇಟ್ಟುಕೊಂಡಿದ್ದೇನೆ.

"ಹೀಗೆ ಮಾಡುವುದು ಮಾತ್ರ ಜಂಬದ ಗುರುತಲ್ಲವೇ!" ಎಂಬ ಸಂದೇಹವೂ ನನಗೆ ಉಂಟಾಗಿ, ಅದಕ್ಕೆ ತಕ್ಕ ಸಮಾಧಾನವೂ ಹೊರಟಿತ್ತು. ಅವುಗಳನ್ನು ನಾನು ನನ್ನ ಮನೆಯಲ್ಲಿ ಅಲಂಕರಿಸಿ ಇಟ್ಟಿರುವೆನೇ ಹೊರತು, ಜನರನ್ನು ಕರೆಕರೆದು ನಾನು ಅವುಗಳನ್ನು ತೋರಿಸುವುದಿಲ್ಲಪ್ಪೆ? ಅಲ್ಲದೆ ದೊಡ್ಡ ದೊಡ್ಡ ರಾಜರೆಲ್ಲ ಹೊಗಳುಬಂಟರನ್ನಿಟ್ಟುಕೊಂಡು, ತಮ್ಮ ತಮ್ಮ ಬಿರುದಾವಳಿಗಳನ್ನು ತಾನೇ ಕೇಳಿ ಕೇಳಿ ಹಿಗ್ಗುತ್ತಾರಲ್ಲ? ಅದು ಮಾತ್ರ ನಾಚಿಕೆಯಲ್ಲವೆ? ದೊಡ್ಡ ದೊಡ್ಡ ಅರಸರು ಏನು ಮಾಡಿದರೂ ಯಾರೂ ಕೇಳುವವರಿಲ್ಲ. ಹಾಗೆಯೆ ದೇವರನ್ನು ನೋಡಿ! ಅವನೂ ಪ್ರಶಂಸಾಪ್ರಿಯನಲ್ಲವೆ? ಅವನು ಸ್ತುತಿಗೆ ಮೆಚ್ಚುವನು—ಎಂಬ ನಂಬುಗೆ ಸರ್ವಸಾಧಾರಣವಾಗಿದೆಯಲ್ಲ?.....

ತಾಳಿ ತಾಳಿ! ಇಲ್ಲಿ ನಾನು ರಾಜರ ಪ್ರಸ್ತಾಪದಿಂದ ದೇವರ ಗುಣತನ್ನು ಕೆಣಕುತ್ತಲೇ, ನನ್ನ ಹೃದಯದಲ್ಲಿದ್ದ ದೇವರ ಪಕ್ಷದ 'ಭಾವ'ನು ಹೀಗೆಂದು ಉತ್ತರ ಕೊಡಲಾರಂಭಿಸಿದ್ದಾನೆ:—

"ಎಲ್ಲೆ ಮಂಕು ಮಾನವ! ಅರಸನ ಬಿರುದಾವಳಿಗಳನ್ನು ಅರಸನಿದಿರೇ ಹೊಗಳುಭಟರು ಹೊಗಳುವುದರಿಂದ. ಅರಸನು ಜಂಬಗಾರನೆಂದಾಗುವುದಿಲ್ಲ. ಆ ಅರಸನು ಅದುವರೆಗೆ ಎಂತೆಂತಹ ಮಹತ್ಕಾರ್ಯಗಳನ್ನು ಸಾಧಿಸಿರುತ್ತಾನೋ ಅವನ್ನೆಲ್ಲಾ ಅವನಿಗೆ ಜ್ಞಾಪಕಬರಿಸಿ, ಆ ಬಿರುದುಗಳಿಗೆ ಅನುಗುಣವಾದ ಕರ್ತವ್ಯದ ಎಚ್ಚರಿಕೆಯನ್ನು ಹುಟ್ಟಿಸುವುದೂ, ಹನುಮಂತನಿಗೆ ಅವನ ಸ್ವಪೌರುಷವನ್ನು ಜಾಂಬವಂತನು ನೆನಪುಬರಿಸಿ ನವೋತ್ಸಾಹವನ್ನು ಕೆರಳಿಸಿದಂತೆ ಉತ್ಸಾಹಗೊಳಿಸುವುದೂ, ಆ ಹೊಗಳಿಕೆಯ ಒಳತತ್ತ್ವವೆಂದು ತಿಳಿ. ಈ ತತ್ತ್ವವನ್ನರಿಯದೆ, ತಾನೊಬ್ಬ 'ದೊಡ್ಡ ಮೇಧಾವಿ' ಎಂದಷ್ಟೇ ತಿಳಿದು ಉಬ್ಬುವ ಮನುಜನು ಅಥವಾ ಅರಸನು ಜಂಬಗಾರನೇ ಹೌದು. ಹೊಗಳಿಕೆಯನ್ನು ಮುಂದಿನ ಕರ್ತವ್ಯದ ಕೈದೀವಿಗೆಯನ್ನಾಗಿಸಿ ಉಪಯೋಗಿಸು. ಇನ್ನು ದೇವರ ವಿಷಯ: 'ನನ್ನನ್ನೆ ಹೊಗಳು, ನನ್ನನ್ನೆ ನಂಬು, ನನ್ನನ್ನೆ ಪೂಜಿಸು' ಎಂದು ದೇವರು ಹೇಳಿದ್ದರೆ 'ನಾನೇ ನಿನ್ಮೆಲ್ಲರ ಜವಾಬುದಾರನು, ಸಂರಕ್ಷಕನು' ಎಂದು ಅದರ ಅರ್ಥ. ಅದರಿಂದ ದೇವರು ಎಷ್ಟು ದೊಡ್ಡ ಹೊಣೆಯನ್ನು ಹೊತ್ತಿರುವನೆಂದು ಗೊತ್ತಾಗುವುದಷ್ಟೆ? 'ಅನಾಥರಕ್ಷಕ' 'ಕರುಣಾಕರ' 'ಆಪದ್ಬಂಧು' ಇತ್ಯಾದಿ ಅವನ ಗುಣಗಳನ್ನು ಹೊಗಳಿ ಕರೆದರೆ, ಆ ಹೊಗಳಿಕೆಯ ಗುಣಗಳನ್ನು ಕಾಪಾಡಿಕೊಳ್ಳಲಿಕ್ಕಾಗಿ ಅವನು ಧಾವಿಸಿ ಬರುವನೆಂಬ ನಂಬುಗೆಯಿಂದಲೇ ಅವನನ್ನು ಹಾಗೆ ಹೊಗಳುವುದು—ಸ್ತುತಿಸುವುದು—ಕೀರ್ತಿಸುವುದು—ಕರೆಯುವುದು. ಹೀಗೆ ಅವನನ್ನು ಹೊಗಳಿಯೇ ಕರೆಯಬೇಕೆಂದು ಅವನ ಒತ್ತಾಯವೇನೂ ಇಲ್ಲ. ಅಜಾಮಿಳನಂತೆ ಅತನ ಭಕ್ತನಾಗಿ ಒಮ್ಮೆ ಕೂಗಿದರೂ ಸಾಕು. ದೇವರಿಗೆ ಬೇಕಾದ್ದು ನಿನ್ನ ನಂಬುಗೆಯೂ ಭಕ್ತಿಯೂ. ಭಕ್ತಿಯೆಂದರೆ ಗೊತ್ತಿದೆಯಷ್ಟೇ! ಅವನ ಮೇಲಿರುವ ಒಂದು ವಿಶೇಷವಾದ ಆಸಕ್ತಿ.

"ದೇವಾ! ಕ್ಷಮಿಸು!" ಎಂದು ನಾನು ಬೇಡಿಕೊಂಡು, ನನಗೆ ಎಚ್ಚರಿಕೆಯನ್ನಿತ್ತ ನನ್ನ ಆ 'ಭಾವ'ನನ್ನು ಮನಸ್ಸಿನಲ್ಲಿಯೇ ಹೊಗಳಿದೆ. ಅವನು ಆನಂದದಿಂದ ಉಬ್ಬಿದ. ಇದನ್ನೆಲ್ಲ ಓದಿದ ನೀವು ನನ್ನನ್ನೂ ಒಂದಿಷ್ಟು ಹೊಗಳಿದರೆ, ನಾನದನ್ನು ನನ್ನ ಮುಂದಿನ್ನಷ್ಟು ಬೆಳಕಾಗಿ ಉಪಯೋಗಿಸಿಕೊಂಡೇನು.

ಹೊಣೆ

(ಸಣ್ಣ ಕತೆ) *

ಶ್ರೀ. ನಾಗೇಶ ಶಾನಭಾಗ, ಮುಂಡಗೋಡ

★

ಕೂಲಿಕಾರರ ಕಷ್ಟ-ನಷ್ಟಗಳಿಗೆ ಬಣ್ಣ ಕೊಟ್ಟು ಪ್ರಚಾರಮಾಡುವ ಕತೆಗಳಂತೆಯೆ, ಬಂಡವಾಳಗಾರರ ಹೊಣೆಗಾರಿಕೆಯ ಕಷ್ಟ-ನಷ್ಟಗಳನ್ನು ಕುರಿತೂ ಪ್ರಚಾರಕ್ಕಾಗಿ ಹೊರಟ ಕತೆಗಳಿವೆ. ಇದರಲ್ಲಿಯ ಕೂಲಿಕಾರ ಆಂದ್ರೆ, ಬಂಡವಾಳಗಾರರ ಪಕ್ಷವನ್ನೇಕೆ-ಹಿಡಿಯುತ್ತಾನೆಂಬುದನ್ನು ನೋಡಿರಿ.

★

ಆಗಲೇ ಸಂಧ್ಯಾಕಾಲವಾಗಿತ್ತು. ಕಾರಖಾನೆ ಮುಚ್ಚಿತ್ತು. ಎಲ್ಲರೂ ತಮ್ಮ ತಮ್ಮ ಮನೆಗೆ ಹೊರಟು ಹೋಗಿದ್ದರು.

ಆಂದ್ರೆ ಕೆಲಸಗಾರರ ಮುಖಂಡ. ಅವನಿಗೆ ಕೆಲಸವೆಂದರಾಯಿತು; ಯಾವ ಕೆಲಸದಲ್ಲಿಯೂ ಎಂದಿಗೂ ಒಡೆಯನಿಗೆ ಕೆಡುಕು ಮಾಡಿದವನಲ್ಲ. ದಿನದ ಕೆಲಸ ಮುಗಿಸಿ, ಎಲ್ಲರ ನಂತರ ಮನೆಗೆ ಮರಳುವ. ದಾರಿಯಲ್ಲಿ ಜನರು ಭೆಟ್ಟಿಯಾಗುವರು. ಕೆಲವರು 'ಕಾರಖಾನೆಯಲ್ಲಿ ತಮಗೆ ಕೆಲಸ ಕೊಡಿಸು' ಎಂದು ಕೇಳಿಕೊಂಡರೆ, ಕೆಲವರು ತಮ್ಮ ಮಕ್ಕಳಿಗೆ 'ಬಢತಿ' ಸಿಗುವಂತೆ ಸಿಫಾರಸು ಮಾಡಲು ಕೇಳಿಕೊಳ್ಳುವರು.

ಆಂದ್ರೆ ಎಂದಿಗೂ ಸುಳ್ಳಾಡಿದವನಲ್ಲ. ಒಡೆಯ ಅವನನ್ನು ಅತಿಯಾಗಿ ಪ್ರೀತಿಸುತ್ತಿದ್ದ. ಒಡೆಯನಿಗೆ ಇವನ ಮೇಲೆ ತುಂಬಾ ವಿಶ್ವಾಸ.

ಅವನ ಮನೆಯಲ್ಲಿ ಆಪ್ತರೆಂದರೆ ಹೆಂಡತಿ ಮತ್ತು ಮಕ್ಕಳು. ಅವನ ದುಡಿಮೆಯಿಂದ ಹೇಗೂ ದಿನಗಳೆಯಬಹುದಾಗಿತ್ತು. ಆದರೆ ರೋಗ-ರುಜಿನಗಳು ಬಂದುವೆಂದರೆ ತುಸು ಕಷ್ಟವಾಗುತ್ತಿತ್ತು. ಡಾಕ್ಟರರ ಫೀ, ಔಷಧಿಯ ರೊಕ್ಕ ಮತ್ತು ಪಥ್ಯ ಮೊದಲಾಗಿ, ದಿನದ ಸಂಸಾರದಲ್ಲಿ ತೊಂದರೆಯಾಗುತ್ತಿತ್ತು. ಆದರೆ ಬೇರೊಂದು ದಾರಿಯಿದ್ದರಲ್ಲವೆ ?

ಮನೆಯಲ್ಲಿ ವಾಡಾಟವೂ ಇಲ್ಲ; ಜಗಳವೂ ಇಲ್ಲ.

ಅಂದು ದಾರಿಯಲ್ಲಿ ಗೆಳೆಯರಿಬ್ಬರು ಸಂಧಿಸಿದ್ದರು. ಮಾತಿಗೆ ಮೊದಲಾಯಿತು : "ನಿನ್ನಿಂದಲೇ ಕಾರಖಾನೆ ನಡೆದಿದೆ. ಒಡೆಯನ ಸ್ಥಿತಿ ನೋಡು ! ಎಷ್ಟು ಜೆನ್ನಾಗಿದೆ ! ಜೈನಿಯಿಂದ ಅವರು ದಿನ-ಗಳೆಯುತ್ತಾರೆ. ನೀನು ಹುಟ್ಟಾ ಬಡವ. ಈಗಲೂ ಬಡವ ದುಡಿದು ದುಡಿದು ನಿನ್ನ ಪ್ರಾಣಹೋಗ್ತಾ ಇದೆ" ಎಂದರು.

ಹಣಕಾಸಿನ ಅಡಚಣೆಯಾದಾಗ, ಯಾವುದಾದರೂ ಅಗತ್ಯದ ಕೆಲಸಕ್ಕೆ ಕೈಯಲ್ಲಿ ಕಾಸಿಲ್ಲದಾಗ, ಈ ಮಾತುಗಳೆಲ್ಲ ಅವನ ಚಿತ್ತ-ದಲ್ಲಿ ಉದಯಿಸುವುವು.

ಇಂದು ಮಿತ್ರರಾಡಿದ ಮಾತುಗಳಿಂದ ಅವನ ಚಿತ್ತದ ವೇದನೆ ಜಾಗೃತವಾಯಿತು. ದುಃಖದಿಂದ ಹೃದಯ ತುಂಬಿ ಬಂತು.

ಮನೆಯಲ್ಲಿ ಅವನ ಹೆಂಡತಿ **ಮೆಗ್ದಾಲೇನಾ** ತನ್ನ ಮಕ್ಕಳಿಗೆ ಪಾಠ ಹೇಳಿ ಕೊಡುತ್ತಿದ್ದಳು. **ಆಂದ್ರೆ** ನುನೆಗೆ ಮರಳಿದ. ಅವನ ನಿಸ್ತೇಜಮುಖದ ಕಡೆ ನೋಡಿ ಆಕೆ "ಮೈಯಲ್ಲಿ ಜೆನ್ನಾಗಿಲ್ಲವೆ ! ಮುಖವೇನು ಹಾಗೆ ? " ಎಂದು ಕೇಳಿದಳು.

" ಏನಿಲ್ಲ. ಜೆನ್ನಾಗಿದ್ದೇನೆ."

" ಹಾಗಾದರೆ ? "

" ದುಃಖ ಮತ್ತು ಅಡಚಣೆಯಿಂದ ಒಂದು ದಿನವೂ ಬಿಡುಗಡೆ ಇಲ್ಲ.

ಮೆಗ್ದೆಲೇನಾ ಈ ಮಾತು ಕೇಳಿ ಚಕಿತಳಾದಳು.

" ಅಂದರೆ ? ನನಗೆ ತಿಳಿಯಲಿಲ್ಲ ! " ಎಂದು ಏನೂ ತೋಚದೆ ಕೇಳಿದಳು.

" ಅದರಲ್ಲೇನಿದೆ ತಿಳಿಯಲು ? ನಾನು ರಾತ್ರಿ ೯ ಗಂಟೆಯ ತನಕ ದುಡಿದು ಬರುತ್ತಿದ್ದೇನೆ. ಯಾರಾದರೂ ಆಪತ್ಕೆ ಪ್ರತಿಫಲ ಕೊಡುವರೆ ? ನಾನೇಕೆ ಕಷ್ಟಪಡಬೇಕು ? ನಾನು ಜಗತ್ತಿನಲ್ಲಿ ಯಾವ ಆಶೆಯನ್ನೂ ಮಾಡದೆ, ನನ್ನ ಎಲುಬು-ಮಾಂಸಗಳನ್ನು ಕೊಟ್ಟು ಬೇರೆಯವರ ಕಾರಖಾನೆ ಕಟ್ಟುತ್ತಿದ್ದೇನೆ " ಎಂದ.

ಮೆಗ್ದೆಲೇನಾಗೆ ಸಮಾಧಾನವಾಗಲಿಲ್ಲ.

" ಕೈಕಾಲು ತೊಳೆದು ಊಟಕ್ಕೆ ಬನ್ನಿ...." ಎಂದಳು.

" ಇಂದು ನಾನು ಉಣ್ಣುವದಿಲ್ಲ. ಉಂಡರೆ ಏನು ಬಂದೀತು ? ಶಕ್ತಿ ! ಆ ಶಕ್ತಿಯ ಪ್ರಯೋಜನ ಒಡೆಯನಿಗೆ ! " ಎಂದ. ಮೆಗ್ದೆಲೇನಾಗೆ ನಗೆಬಂತು.

" ನಿಮ್ಮ ತಲೆಯಲ್ಲಿ ಇದನ್ನೆಲ್ಲ ಯಾರು ತುಂಬಿದರೋ ! ಕೈಕಾಲು ತೊಳೆದುಕೊಳ್ಳಿ. ಊಟ ಮಾಡುವಾ " ಎಂದಳು.

* * * *

ಊಟವಾದ ಮೇಲೆ, ಗಂಡ-ಹೆಂಡಿರು ಇಬ್ಬರೇ ವರಾಂಡದಲ್ಲಿ ಕೂತಿದ್ದರು. ಆಗ ಮೆಗ್ದೆಲೇನಾ " ಮಕ್ಕಳೆಲ್ಲ ಮಲಗಿದ್ದಾರೆ. ಈಗ, ನಿಮ್ಮ ಮನದಲ್ಲಿ ಏನಿದೆ—ಹೇಳಿಬಿಡಿ " ಎಂದಳು.

"ಮೆಗ್ದೆಲೇನಾ, ನೀನೇ ಹೇಳು. ನಾನಿಷ್ಟೆಲ್ಲ ಮೈಮುರಿಯೆ ದುಡಿಯುವುದು ಯಾಕೆ ? ಯಾರಿಗಾಗಿ ?" ಎಂದು ಆಂದ್ರೆ ಪ್ರಶ್ನಿಸಿದ.

ಮೆಗ್ದೆಲೇನಾ ಉತ್ತರಿಸದಾದಳು. ಗಂಡನನ್ನು ನೋಡಿದಳಷ್ಟೆ. ಆಂದ್ರೆ ವಿವರಿಸತೊಡಗಿದ. "ನಾನು ನನ್ನ ಇಡೀ ಜೀವನವನ್ನೇ

---

* ಪೋರ್ತುಗೀಜ ಕತೆಗಾರನಾದ ಎಡರಿಗೋ ಫೈಗಾನಿನೋ ಎಂಬಾತನ ಕತೆಯೊಂದರ ಭಾವಾಂತರ. ಲೇ.

ದಿ ನೂತನ ಆಯುರ್ವೇದ ಕಾರ್ಯಾಲಯ ಲಿ., ವಿಜಾಪೂರ

ಎಲ್ಲ ಬಗೆಯ ಆಯುರ್ವೇದ ಔಷಧಗಳನ್ನು ಶಾಸ್ತ್ರಶುದ್ಧವಾಗಿ ಸಿದ್ಧಗೊಳಿಸುವ ಕರ್ನಾಟಕದ ಸರ್ವಾಂಗ ಪರಿಪೂರ್ಣವಾದ ಕಾರಖಾನೆ. ಅನೇಕ ವೈದ್ಯ-ಡಾಕ್ಟರರು ನಮ್ಮ ಔಷಧಗಳನ್ನು ಪ್ರಯೋಗಿಸಿ ಒಳ್ಳೇ ಗುಣಕಾರಿಯೆಂದು ಪ್ರಶಂಸಿಸಿದ್ದಾರೆ. ಎಲ್ಲ ಪ್ರಕಾರದ ಭಸ್ಮ-ರಸಾಯನ-ಮಾತ್ರೆ-ಆಸವಾರಿಷ್ಟ ಕಷಾಯಗಳು — ಅವಲೇಹ-ತೈಲ ಮೊದಲಾದ ಔಷಧಗಳಿಗೆಲ್ಲ ಇಂದೇ ಬರೆಯಿರಿ.

ಕರ್ನಾಟಕದಲ್ಲೆಲ್ಲ ಸ್ಟಾಕಿಸ್ಟರು ಬೇಕಾಗಿದ್ದಾರೆ.

ತೆಸ್ತು ಒಡೆಯನ ಕಾರಖಾನೆಯನ್ನು ಕಟ್ಟಿದೆ. ಒಡೆಯನನ್ನು ಬಂಗಾರದ ಮಂಚದ ಮೇಲೆ ಮಲಗಿಸಿರುವೆ. ಆದರೆ ಇದಕ್ಕೆಲ್ಲ ಅವನೇನು ಪ್ರತಿಫಲವಿತ್ತಿದ್ದಾನೆ? ಏನೋ ಹೊಟ್ಟೆ-ಬಟ್ಟೆಗೆ ಸಾಲುತ್ತದೆ! ಇಂದು ನಾನು ಸತ್ತರೆ, ನೀನು ಮತ್ತು ಮಕ್ಕಳು ಉಪವಾಸಬಿದ್ದು ಸಾಯಬೇಕಾದೀತು. ನಾ ಏನು ದುಡ್ಡು ದುಂದುಮಾಡುವುದಿಲ್ಲ; ಯಾವ ತರದ ವ್ಯಸನದಲ್ಲೂ ಹಾಳು-ಮಾಡುವುದಿಲ್ಲ. ಐದು ಜನ ಮಕ್ಕಳಿದ್ದಾರೆ. ಅವರನ್ನು ಸಾಕಬೇಕು; ಕಲಿಸಬೇಕು. ನಾನು ಒಡೆಯನಿಗಾಗಿ ಸತ್ತರೂ, ಒಡೆಯ ಈ ಕಡೆ ಲಕ್ಷವೀಯುವುದಿಲ್ಲ.''

"ಮಾಡುವುದಾದರೂ ಏನು? ನಾವಂತೂ ಬಡವರಾಗಿಯೇ ಹುಟ್ಟಿದ್ದೇವಲ್ಲ! ನಮ್ಮ ಸಹಾಯಕ್ಕೆ ದೇವರು ನಮಗೆ ನಮ್ಮ ಕೈಕಾಲುಗಳನ್ನಿತ್ತಿದ್ದಾನೆ ದುಡಿದು ತಿನ್ನಲು ...." ಎಂದಳು ಮೆಗ್ಡೆಲೇನಾ.

"ನೀನು ಹೆಂಗಸು. ನಿನಗೆ ಇದೆಲ್ಲ ಸರಿಯಾಗಿ-ತಿಳಿಯುವುದಿಲ್ಲ.''

ಆಂದ್ರೆ ಹೆಂಡತಿಗೆ ತಿಳಿಸಿ ಹೇಳಹತ್ತಿದಃ—"ಯಾರು ದುಡಿಯು-ವರೋ ಅವರಿಗೇ ಅವರ ದುಡಿತದ ಲಾಭ ಸಿಗಬೇಕು. ಕಾರಖಾನೆ ತೆರೆದಿದ್ದಾನೆ ಎಂದಮಾತ್ರಕ್ಕೆ, ಲಾಭಪಡೆಯಲು ಅವನಿಗೆಲ್ಲಿಂದ ಅಧಿಕಾರ ಬರಬೇಕು!''

ಹೀಗೆ ಹೇಳುತ್ತಿದ್ದ ಆಂದ್ರೆಗೆ ಒಂದು ತರದ ಆವೇಶ ಬಂದಂತಾಯ್ತು. ದನಿ ಏರಿತು. ಆದೇಹೊತ್ತಿಗೆ, ಅವನ ಕಾರಖಾನೆಯೊಳಗಿಂದ ಕೆಲಸದಿಂದ ತೆಗೆದುಹಾಕಲ್ಪಟ್ಟ ಕೆಲಸಗಾರರಿಬ್ಬರು ಬಂದರು. ಅವರು, ತಮ್ಮ ಬಗ್ಗೆ ಆಂದ್ರೆ, ಒಡೆಯನೆದುರು ಶಿಫಾರಸ್ಸು ಮಾಡಿ ತಮಗೆ ಕೆಲಸ ಕೊಡಿಸಬೇಕು—ಎಂದು ಹೇಳಿಕೊಳ್ಳಲು ಬಂದಿದ್ದರು.

ಅವರು ಅವನ ಮಾತಿಗೆ ಅನುಮೋದನೆಕೊಡುತ್ತಾ "ನಾವೆಲ್ಲ ಒಕ್ಕಟ್ಟಾಗಿ ಕಾರಖಾನೆಯ ಕೆಲಸ ನಿಲ್ಲಿಸಿಬಿಟ್ಟರೆ ಏನಾದೀತು?'' ಎಂದರು.

ಮುಂದೇನಾದೀತು—ಎಂಬುದಕ್ಕೆ ಉತ್ತರವಿಲ್ಲ.

ಅವರಿಬ್ಬರೂ ಹೋಗಿ, ಒಡೆಯನಿಗೆ ಆಂದ್ರೆ ಆಡಿದ ಎಲ್ಲ ಮಾತುಗಳನ್ನೂ ಹೇಳಿಬಿಟ್ಟರು.

ಬೆಳಿಗ್ಗೆ ಎದ್ದವನೆ ಆಂದ್ರೆ ಸುಮ್ಮನೆ ಕೂತು ಬಿಟ್ಟ ಪ್ರಸಂಗ ಹೊತ್ತೇರುತ್ತಿತ್ತು. ಮೆಗ್ಡೆಲೇನಾ "ಏಳಿ, ಉಪಹಾರಮಾಡಿ ಕೆಲಸಕ್ಕೆ ಹೋಗಿ. ಹೊತ್ತಾಯಿತಲ್ಲ!'' ಎಂದು ಎಚ್ಚರಿಸಿದಳು.

"ಹೊತ್ತಾಗಲಿ. ಇಂದು ಒಡೆಯನೇ ಕೆಲಸಮಾಡಲಿ. ನಾವಿ ನಾವಿರದ ಗಂಟು ವೆಟ್ಟಿಗೆಯಲ್ಲಿಟ್ಟುಕೊಂಡು ನೋಜುಮಾಡುವುದಿ ಇನ್ನಿಲ್ಲ. ನಾನಿಂದು ಕಾರಖಾನೆಗೆ ಹೋಗುವುದಿಲ್ಲ. ಖಂಡಿ ಹೋಗುವುದಿಲ್ಲ."

ಮೆಗ್ಡೆಲೇನಾ ಇದನ್ನು ಕೇಳಿ ನಡುಗಿದಳು. "ಇದೆಲ್ಲ ಏನು ಹುಚ್ಚುಚ್ಚಾರ! ಇದೇನು ಹಾಳು ನಿನ್ನ ತಲೆಯಲ್ಲಿ ತುಂಬಿದರು? ಎಂದಳು ಖಿನ್ನಳಾಗಿ.

ಹೊರಗೆ ಒಡೆಯನ ದನಿ! ಒಡೆಯ ಕರೆದ : ''ಆಂದ್ರೆ....!''

ಆಂದ್ರೆ ಹೊರಗೆ ಹೋದ.

''ನಾನೊಂದು ಜರೂರಿನ ಕೆಲಸದ ಮೇಲೆ ಬಂದಿದ್ದೇನೆ ಎಂದು ಒಡೆಯನೇ ಪ್ರಾರಂಭಿಸಿದ.

"ಅಪ್ಪಣೆಯಾಗಲಿ.''

"ನೆರೆಯೂರಿನಲ್ಲಿ ನಾನೊಂದು ಆಸ್ತಿ ಕೊಂಡಿದ್ದೇನೆ. ಅ ಹೋಗಿ ನಾನು ಕನಿಷ್ಠ ಎರಡು ತಿಂಗಳು ನಿಂತು ಅಲ್ಲಿಯ ವ್ಯವಸ್ಥೆ ಮಾಡಿ ಬರಬೇಕು. ಇಲ್ಲಿಯ ಈ ಕಾರಖಾನೆಯ ಹೊಣೆಯನ್ನು ನಿನಗೊಪ್ಪಿಸಿ ಹೋಗಬೇಕೆಂದಿದ್ದೇನೆ. ಯಾಕೆಂದರೆ ನೀನೊಬ್ಬನೆ ನನ್ನ ಕೆಲಸಗಾರರಲ್ಲಿ ಸಭ್ಯ. ನೀನು ನಿನ್ನ ಆಯುಷ್ಯವನ್ನೇ ಸವೆದ ಈ ಕಾರಖಾನೆಯ ಉನ್ನತಿಗೆ ಕಾರಣನಾಗಿರುವಿ. ನಾನಿಲ್ಲದಾ ನೀನೇ ನನ್ನ ಪ್ರತಿನಿಧಿಯಾಗಿ ಕಾರಖಾನೆಯ ಕೆಲಸ ನೋಡಿ ಕೊಂಡಿರು. ನಾನು ನಿನಗೆ ಎಲ್ಲಾ ಅಧಿಕಾರ ಕೊಟ್ಟು ಹೋಗುವೆ ಮತ್ತಾರಿಗೂ ನಾನು ಈ ಕೆಲಸ ಹೇಳಲಾರೆ.''

ಮುಖ ಗಂಭೀರ ಮಾಡಿ ಆಂದ್ರೆ ಕೇಳುತ್ತಲಿದ್ದ :

"ಆಗುವದಿಲ್ಲವೆನ್ನಬೇಡ. ನಾನು ಇಂದೇ ಹೋಗುವೆ. ನೀನು ಈಗಲೇ ಆಫೀಸಿಗೆ ಬಂದರೆ, ಎಲ್ಲ ಒಪ್ಪಿಸಿ ಹೋಗುವೆ. ಆ ಹೋಗಿಯೇ ನಿನ್ನ ಸಂಬಳವನ್ನು ಹೇಳುವೆ" ಎಂದ.

ಒಡೆಯ ಹೊರಟು ಹೋದ.

ಆಂದ್ರೆ ಒಮ್ಮೆ ಮೆಗ್ದೆಲೇನಾಳ ಮುಖ ನೋಡಿದ.

"ಯಾರೋ ನಿನ್ನೆ ರಾತ್ರಿ ನೀವಾಡಿದ ಮಾತುಗಳನ್ನು ನಿಮ್ಮ ಒಡೆಯರಿಗೆ ಹೇಳಿದ್ದಾರೆ. ನೀವು ನೌಕರಿ ಕಳೆದುಕೊಳ್ಳುತ್ತೀರಿ.... ನೀವೇಕೆ ಹೀಗೆ ಬಡಬಡಿಸುತ್ತೀರಿ?" ಎಂದಳು ಮೆಗ್ದೆಲೇನಾ.

"ಹಾಗಾದರೆ, ಹೆಂಡತಿಯ ಹತ್ತಿರ ಗಂಡ ತನ್ನ ಹೃದಯದ ಮಾತು ಕೂಡಾ ಹೇಳಬಾರದೇನು? ಈ ನೌಕರಿ ಮಾಡುವುದಕ್ಕಿಂತ ಬಿಕ್ಕೆ ಬೇಡುವದು ಲೇಸು."

ಆಂದ್ರೆ ಕಾರಖಾನೆಯ ಕಡೆಗೆ ನಡೆದ. ಗಲ್ಲಿನ ಶಿಕ್ಷೆಗೆ ಹೊರಟವನಂತೆ ಅವನ ಸ್ಥಿತಿಯಾಗಿತ್ತು.

ಕಾರಖಾನೆಯಲ್ಲಿ ಒಡೆಯ ಭೆಟ್ಟಿಯಾದರು. "ನಿನಗೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿ ಸಂಬಳ. ನೀನೇನೇನೂ ಶಾರೀರಿಕ ಶ್ರಮ ಮಾಡಬೇಕಾಗಿಲ್ಲ. ಬರೇ ಬೇರೆಯವರ ಕೈಯಿಂದ ಕೆಲಸ ಮಾಡಿಸಿಕೊಂಡರಾಯಿತು. ನೀನು ಸನ್ಯ ಇರುವ ಮನೆ ಬಿಟ್ಟು, ಈ ನನ್ನ ಬಂಗಲೆ ಇದೆಯಲ್ಲ!—ಇದರಲ್ಲಿಯೇ ಇದ್ದು ಬಿಡು....ಇನ್ನು ನಿನ್ನ ಕಷ್ಟ ದೂರಾದವೆಂತ ತಿಳಿ. ನಿಜವಾಗಿಯೂ ನೀನೂ ಚೆನ್ನಾಗಿ ಕೆಲಸ ಮಾಡಿದರೆ, ಈ ಕಾರಖಾನೆಯನ್ನು ನಿನ್ನ ವಶಕ್ಕೆ ನಡೆಸಲೂ ಕೊಟ್ಟು ಬಿಡುತ್ತೇನೆ" ಎಂದರು.

ಒಡೆಯ ಎಲ್ಲರನ್ನೂ ಕರೆದು ಈ ಹೊಸ ಏರ್ಪಾಡನ್ನು ತಿಳಿಸಿ ಹೇಳಿದ: "ಇಂದಿನಿಂದ ಆಂದ್ರೆ ಈ ಕಾರಖಾನೆಯ ಮೇನೇಜರು. ಇಷ್ಟು ದಿನ ನನ್ನ ಆಜ್ಞೆ ಕೇಳಿದ ಹಾಗೆ, ಇಂದಿನಿಂದ ಆಂದ್ರೆ ಹೇಳಿದ ಹಾಗೆ ಕೇಳಬೇಕು. ಇಂದಿನಿಂದ ಆಂದ್ರೆ ನಿಮ್ಮ ಮುಖಂಡನಲ್ಲ; ನನ್ನ ಪ್ರತಿನಿಧಿ" ಎಂದರು.

ಆಂದ್ರೆ ಮನೆಗೆ ಮರಳಿ, ಹೆಂಡತಿಗೆ ನಡೆದ ಸಂಗತಿ ಹೇಳಿದ.

ಮೆಗ್ದೆಲೇನಾ ಮತ್ತು ಮಕ್ಕಳು ಆನಂದಪಟ್ಟರು. ಇರಲು ಸುಂದರ ಮನೆ, ನೌಕರ-ಚಾಕರರು, ಮೋಟಾರು. ಇನ್ನು ಜೀವನ ಎಷ್ಟು ಸುಖ ಮತ್ತು ಮೋಜಿನದು!

ಆದರೆ ಆಂದ್ರೆಯ ಮನಸ್ಸಿಗೆ ಸಮಾಧಾನವೇ ಇಲ್ಲ. "ಇಷ್ಟು ದೊಡ್ಡ ಹೊಣೆ.... ಎಲ್ಲರ ಹತ್ತಿರ ಕೆಲಸವಾಡಿಸಿಕೊಳ್ಳಬೇಕು. ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗಬೇಕು. ಇದರ ಹೊರತು ಹೊರಗಿನವರ ತಾಪತ್ರಯ ಬೇರೆ. ಒಬ್ಬನ ಹಣದ ತಗಾದೆ.... ಒಬ್ಬನ ಫಿರ್ಯಾದು...." ಹೀಗೆ ಎಲ್ಲಾ ಕಡೆಯಿಂದ ಕಡಿಯಲು ಹಾತೊರೆಯುವ ನೊಣಗಳ ಹಾಗಿತ್ತು.

ಇಷ್ಟು ಹೊಣೆ!.... ಒಡೆಯನ ವಿಶ್ವಾಸ! ಕಾರಖಾನೆಯ ಕೆಲಸ ಅನಾಯಾಸ ನಡೆದಿದೆ. ಏನೂ ಗೊಂದಲವಾಗದಿದ್ದರೆ ಸಾಕು—ಎನ್ನುವ.

ಮುಂಜೆ ಸಾಯಂಕಾಲ ಮನೆಗೆ ಮರಳಿದ ಮೇಲೆ ಬಿಡುವು ಸಿಗುತ್ತಿತ್ತು. ಈಗ ಕಾರಖಾನೆ ಮುಚ್ಚಿ ನಾಲ್ಕು ತಾಸಾದರೂ ಬಿಡುವೆಂಬುದಿಲ್ಲ. ನಾಳೆ ಏನಾಗಬೇಕು, ಯಾರಿಗೆ ಹಣ ಕೊಡಬೇಕು, ಯಾರು ಒಳಸಂಚಿನ ಯೋಚನೆ ನಡೆಸಿರಬಹುದು ಇನ್ನೆಲ್ಲ ವಿಚಾರಗಳು ಅವನ ತಲೆಯಲ್ಲಿ ಹಗಲಿರುಳು ಇದ್ದೇ ಇರುತ್ತವ. ಸುಖವೂ ಇಲ್ಲ; ಶಾಂತಿಯೂ ಇಲ್ಲ. ತುಸುವೂ ಅವಕಾಶವಿಲ್ಲ.

ಅವನ ಹೆಂಡತಿ ಮೆಗ್ದೆಲೇನಾ! ಅವಳು ಪೂರ್ಣ ಬದಲಾಗಿ ಬಿಟ್ಟಿದ್ದಾಳೆ. ಮುಂಚಿನಂತಿಲ್ಲ. ಅವಳ ಭೆಟ್ಟಿಯಾಗುವುದೇ ಇಲ್ಲ. ಎಲ್ಲಾದರೂ ಭೆಟ್ಟಿಯಾದರೂ, "ಇಷ್ಟೆಲ್ಲ ಜಿಪುಣತನ ಯಾಕೆ? ಇದರಲ್ಲಿ ಸಂಸಾರ ಹೇಗೆ ಸಾಗಬೇಕು? ದೇವರು ಈಗೇನು ಕಡಿಮೆಮಾಡಿದ್ದಾನೆ?" ಎನ್ನುವಳು.

"ಜುಡ್ಡಿಲ್ಲಿಂದ ತರಲಿ?"

"ಹಾಗಾದರೆ ಹೆಂಡಿರು-ಮಕ್ಕಳ ಕಾಳಜಿ ಇಲ್ಲವೆ ನಿನಗೆ? ಮಕ್ಕಳಿಗಂತೂ ದಿನಾಲೂ ಏನಾದರೊಂದು ಬೇಕೇಬೇಕು. ಮೆಗ್ದೆಲೇನಾ ಕೇಳುವಳು. "ನನಗೊಂದು ಚೆಲೋ ಲಾಕೆಟ್ ಬೇಕು. ಬಹಳ ಅಗ್ಗದಲ್ಲಿ ಸಿಗುತ್ತದೆ."

ಎರಡು ತಿಂಗಳ ಅವಧಿಯಲ್ಲಿ ಆಂದ್ರೆ ಹುಚ್ಚನಂತಾದ.

ಒಂದುದಿನ ಆಂದ್ರೆ ಹೇಳಿದ: "ಇದೆಲ್ಲ ಸಿರಿವಂತಿಕೆಯನ್ನ ನಾವಿನ್ನು ಬಿಡಬೇಕು. ನಾನು ಇಂದೇ ಒಡೆಯನಿದ್ದಲ್ಲಿ ಹೋಗುವೆ— ಈ ಮನೆ ಮಾತ್ರ ಬಿಡಬೇಕು. ನನಗೆ ಈ ಗೊಂದಲದಲ್ಲಿ ಇರಲು-

೫೦-೫೫ ವರ್ಷಗಳಿಂದಲೂ ಸಾವಿರಾರು ಜನರನ್ನು ಕೋಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಇವನಿಂದ ನಪುಂಸಕತ್ವದಿಂದಿಗೆ—ಸ್ವಪ್ನಸ್ಖಲನ—ವೀರ್ಯಸ್ಖಲನ ಆಗುವುದು, ಸ್ವಲತೆಯ ದುರ್ಬಲತೆಯಿಂದ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆಹಾಕಿ, ವೀರ್ಯವನ್ನು ಶಕ್ತಿಯುಕ್ತವಾಗಿಸುವುದು. ಪುಲಹಾದ್ದಿಯಾಗಿ ತುಂಬ ಹಸಿವೆಯಾಗುವುದು. ಶರೀರದ ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೭೦-೭೦ ವಯಸ್ಸಿನ ವಯಸ್ಕರೂ ಇದರ ಸೇವನೆಯಿಂದ ನವಚೈತನ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ ಹೆಣ್ಣುಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಮಕ್ಕಳಾಗಿ ಸಾಯುವುದು, ಹೊಟ್ಟೆ-ಮುಖದ ಮೇಲೆ ಇಷ್ಟಿಷ್ಟು ಬಾಣಂತನದ ಪಾಯ. ಇದರಲ್ಲಿ ಹಾವು ಗಿಡಮೂಲಿಕೆ, ಭಸ್ಮ, ಸಿಂಧೂರ, ಮಾಲಿಸೇವಂತಿ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ ಡಬ್ಬಿಯ ಬೆಲೆ ೫ ರೂ. ೬ ದಿನಗಳಲ್ಲಿ ಗುಣ. ೩ ಡಬ್ಬಿ ಬೆಲೆ ೧೫ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟು-ಸಾವಿರಾರು ಸಲುವಾಗಿ ಸ್ಪೆಶಲ್ ಡಬ್ಬಿಗೆ ೨೫ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೂ ರೂ. ಯಂತೆ ಅಡ್ವಾನ್ಸು ಕಳುಹಿಸಬೇಕು. ಅದನ್ನು ಪಡೆದಾದಮೇಲೆ ಉಳಿದ ಹಣಕ್ಕೆ ವಿ. ಪಿ. ಮಾಡುತ್ತೇವೆ. ಕಳ್ಳವೇನೂ ಇಲ್ಲ. ೧ ಡಬ್ಬಿ ೨೦ ದಿನಕ್ಕೆ ಸಾಲುವುದು. ೨ ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚವಿಲ್ಲ. ೪ ಡಬ್ಬಿ ತೆಗೆದುಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದಬಗ್ಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. ಮಿರಜ (ಎಸ್. ಎಂ. ಸಿ.)

ಆಗುವುದಿಲ್ಲ. ಇದಕ್ಕಿಂತ ಕೆಲಸಗಾರನ ಕೆಲಸಬೇಕು. ನಾನು ಮತ್ತೆ ಕೆಲಸಗಾರನಾಗುವೆ. ''

" ನಿನಗೇನು ಹುಚ್ಚಿ ? " ಕೇಳಿದಳು ಮೆಗ್ಡೆಲೇನಾ.

" ಆಪ್ಪ ಹೀಗೇಕೆ ?'' ಎಂದವು ಮಕ್ಕಳು.

ಆಂದ್ರೆ ಒಡೆಯನಿದ್ದಲ್ಲಿಗೆ ಹೋಗಿ ಅವನ ಕಾಲಿಗೆ ಬಿದ್ದ.

" ನೀವು ನನ್ನನ್ನು ನಿಜಕ್ಕೂ ಪ್ರೀತಿಸುತ್ತೀರಾ ? ಹಾಗಾದರೆ ನನ್ನ ಮೇಲೆ ಇದ್ದ ಈ ಹೊಣೆ ಕಡಮೆ ಮಾಡಿ. ಈ ಭಾರ ಕಡಿಮೆ ಮಾಡಿ ! " ಎಂದ.

ಒಡೆಯ ಕೇಳಿದ : '' ಏನಾಯಿತು ? .... ''

" ಕೃಪೆಯಾಗಲಿ, ಕೃಪೆ. ಈ ಹೊಣೆ ಹೊರುವದು ನನ್ನಿಂದ ಅಸಾಧ್ಯ.''

" ನೀನು ಸತ್ತರೆ ನಿನ್ನ ಹೆಂಡಿರು ಮಕ್ಕಳು ಉಪವಾಸ ಬಿದ್ದು ಸತ್ತಾರಲ್ಲ. ನೀನು ನಿನ್ನ ಎಲುಬು-ಮಾಂಸವನಿತ್ತು ಈ ಕಾರಖಾನೆ ಕಟ್ಟಿರುವೆ. ನಾನು ಲಾಭದ ರೂಪಾಯಿಯಲ್ಲಿ ೧೫ ಆಣೆ ಇಟ್ಟು ಕೊಳ್ಳುವವ ! ''

ಆಂದ್ರೆ ಅತ್ತು ಬಿಟ್ಟ.

" ನನ್ನನ್ನು ಕ್ಷಮಿಸಬೇಕು. ನಾನು ಕುರುಡನಾಗಿದ್ದೆ. ಈಗ ಕಣ್ಣು ತೆರೆಯಿತು. ಹೆಂಡಿರ—ಮಕ್ಕಳ ದುಃಖ ಈಗಲೂ ಕಡಿಮೆಯಾಗಿಲ್ಲ. ಆ ಕರಕರೆ ಹಾಗೇ; ದಿನವೂ ರಗಳೆ. ನನಗೆ ತಡೆಯಲಾಗುವುದಿಲ್ಲ. ಎಷ್ಟಿದ್ದರೂ, ಏನಿದ್ದರೂ ಶಾಂತಿ ಎಂಬುದಿಲ್ಲ.''

'' ಮುಂಚಿನ ಹಾಗೆ ಆದರೆ ಮತ್ತೆ ಕಷ್ಟವಾದೀತಲ್ಲ!"

" ಮುಂಚೆ ಶಾಂತಿಯಿತ್ತು, ಅದು ಈಗಿಲ್ಲ. ಅದೇ ಪುರಸ್ಕಾರ ಕೊಡಿರಿ. ''

ಆಂದ್ರೆ ಒಡೆಯನ ಅನುಮತಿ ಪಡೆದು, ತನ್ನ ಹಳೆಯ ಮನೆ ಸೇರಿದ ಹೆಂಡಿರುಮಕ್ಕಳ ಸಂಗಾತ.

ಈಗ ಒಡೆಯನೂ ಅವನ ಸುಖ-ದುಃಖದ ಕಡೆಗೆ ಲಕ್ಷವೀಯ ಹತ್ತಿದ. ಆಂದ್ರೆಯ ಸಂಬಳ ಹೆಚ್ಚಿಸಿದ. ಮೇಗ್ಡೆಲೇನಾ ಮಿತವ್ಯಯ ಕಲಿತಳು.

ಕೆಲಸಗಾರರು ಬೆವರಿಳಿಸುತ್ತ " ನಾವೆಲ್ಲ ದುಡಿಯುತ್ತಿದ್ದರೆ, ಒಡೆಯ ಮಾತ್ರ ಮೋಜಿನಿಂದ ಇರಬೇಕು '' ಎಂದು ಗೊಣಗುಟ್ಟುವರು.

ಆಂದ್ರೆ ಅವರನ್ನು ತಡೆದು ಹೇಳುವ :

'' ಸುಮ್ಮನಿರಿ. ನನಗೆಲ್ಲ ಗೊತ್ತು. ನಿಮಗೇನು ಗೊತ್ತು ? ಒಡೆಯ ಕೆಲಸಗಾರರು ಸುಖಿಯೆಂದು ತಿಳಿಯುತ್ತಾನೆ. ನೀವು ಒಡೆಯ ಸುಖಿಯೆಂದು ತಿಳಿಯುತ್ತೀರಿ. ಅವರಿಗೇನು ನಮ್ಮ ಹಾಗೆ ತಾಪತ್ರಯವಿಲ್ಲವೆಂದು ತಿಳಿದಿರೊ ? ನಮಗೆ ದುಡಿದು ದಣಿದಾಗ ಶಾಂತಿಯಾದರೂ ಇದೆ. ಅದೂ ಅವರ ಪಾಲಿಗಿಲ್ಲ. ನಿನಗೇನು ತಿಳಿಯಬೇಕು ಅವರ ಹೊಣೆ ?'' ಎಂದೆನ್ನುವ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಕಡಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಪಚನ, ಶೂಲೆ, ಮೈನೋವು, ಹಲ್ಲುನೋವು, ಸುಸ್ತಿನ ತಾಪ ಏಕಾ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸರಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಸ್ಸಂಶಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಶಿಗಳಂಥ ಭಾಷುತವಾಕ ಪೊಂಕು ರೋಗಗಳ ಮೇರೆ ಹಾದೂದಂತೆ ಇದರ ಉಪಯೋಗವಾಗುತ್ತದೆ. ಡಾಕ್ಟರಿಲ್ಲದಾಗ ಯಾವಾಗಲೂ ಇದರ ಉಪಯೋಗವಾಗುವದರಿಂದ ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಪತ್ರಿಯೂ ಇಟ್ಟುಕೊಳ್ಳುವದು (ಉಕ್ಕಿಸ್ಸ ಮುಂಜಾಗ್ರತೆಯ ಉಪಾಯವಾಗಿದೆ) ಕೂಡದೆ ಕ್ಷೀಣಿಸಿದ ಲಕ್ಷಣವಾಗಿದೆ. ಕಮಿಸ್ಸಕ್ಕಲ್ಲಿಯೂ (ವಿಷಮ ವ್ಯಾಪಾರಗಳಲ್ಲಿಯೂ) ಹೈಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಜವೇರಿಯನ್ ಮೆಡಿಸಿನ್ ಕಂಪನಿ
ಪ್ರೈವೇಟ್ ಲಿಮಿಟೆಡ್ ಮುಂಬಾಯಿ ೩

ಮಕ್ಕಳು ಶಕ್ತಿವಂತರು ತೇಜಸ್ವಿಗಳಾಗಬೇಕಿದ್ದರೆ ಬಾಯೋ ಟೋನ್ ಅವಶ್ಯ ಕೊಡಿರಿ

ಫಾಸ್ಫೋರಾ
ಏಕಮೇವ ಟಾನಿಕ್



'' ಯಾವುದೇ ಕಾರಣದಿಂದ ಉಂಟಾದ ದೌರ್ಬಲ್ಯವನ್ನು ರೋಗದ ನಿಯಂತ್ರಣ ನಿದಾನದಿಂದಲೆ ಗುಣಪಡಿಸಬಹುದು.

ಫಾಸ್ಫೋರಾದಿಂದ ಈ ಅನುಭವ ಬರುವುದು.

ರಾಯ್, ಮತ್ತು ಕಂ.
ಮುಂಬಯಿ

ಇತಿಹಾಸ ಶಿಕ್ಷಣ

ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ

★

ಪಂಡಿತ ಜವಾಹರಲಾಲರು ತಮ್ಮ ಜೀವನವನ್ನು ರಾಜಕೀಯ ಹೋರಾಟದಲ್ಲಿ ಕಳೆದರು. ಆದರೆ ಸೆರೆಮನೆಯಲ್ಲಿ ಕಳೆದ ನಿಕಾಂತ ವರ್ಷಗಳಲ್ಲಿ ಏನು ಮಾಡಿದರು? ಮಗಳಿಗೆ ಇತಿಹಾಸ ಕಲಿಸಲು ಸುಂದರವಾದ ಪತ್ರಗಳನ್ನು ಬರೆಯುವುದರಲ್ಲಿ ಸುಖಿಯಾದರು. ಏಕೆ?

★

'ಭಾಷಾಶಿಕ್ಷಕರು ಬ್ರಾಮ್ಹಣರು; ಗಣಿತ ಕಲಿಸುವ ಕಲಿಗಳು ಕ್ಷತ್ರಿಯರು; ಇತಿಹಾಸ-ಭೂಗೋಲ (ಭೂಚರಿತ್ರೆ) ಗಳ ಪಾಠ ಹೇಳುವವರು ವೈಶ್ಯರು– ಮತ್ತು ಡ್ರಿಲ್–ಡ್ಯಾಯಿಂಗ್ ಮಾಡಿಸುವವರು ಶೂದ್ರರು– ಹೀಗೆ "ಗುಣಕರ್ಮವಿಭಾಗ" ದಿಂದ ಶಾಲಾಪ್ರಪಂಚದಲ್ಲಿಯೂ ಚಾತುರ್ವರ್ಣ್ಯವಿದೆ' ಎಂದು ಒಮ್ಮೆ "ಪ್ರಚಂಡ" ವಿನೋದೀ ವ್ಯಕ್ತಿಗಳಾದ ಪ್ರಲ್ಹಾದ ಕೇಶವ ಅತ್ರೆಯವರು ಎಂದಿದ್ದರು! ಆದರೆ, ಅನಂತರ ಹೊರಪ್ರಪಂಚದಲ್ಲಿ ಹೇಗೋ ಶಾಲೆಯ ಪ್ರಪಂಚದಲ್ಲಿಯೂ ಹಾಗೆಯೇ "ವರ್ಣಸಂಕರ" ನಾಗಿಬಿಟ್ಟಿದೆ. ಗಣಿತಶಿಕ್ಷಕರು ಕಡ್ಡಾಯದಿಂದ ಭಾಷಾವಿಷಯವನ್ನು ಕಲಿಸುತ್ತಿದ್ದರೆ, ಡ್ರಿಲ್-ಡಂಬೆಲ್ಲುಗಳ ಮಟ್ಟಿಗೆ ಸದ್ಯ ಮಿಗಿಲಾದ ಮಹತ್ತ್ವ ಬಂದಿದೆ. ಅದಕ್ಕಾಗಿ ವಿಶೇಷತಜ್ಞರನ್ನೇ ನೇಮಿಸಿಕೊಳ್ಳುತ್ತಿದ್ದು, ಅವರು ಮಿಕ್ಕ ಮೂರು ವರ್ಣದವರೊಳಗಿಂದಲೇ ಆಯ್ದು ಕಳಿಸಿ ತಜ್ಞರಾಗಿ ಮೂರ್ಪಟ್ಟು ಬಂದು ಶಾಲೆಯ ಶರೀರಸಂಪತ್ತನ್ನೂ ತಮ್ಮ ಬಡತಿ-ಭತ್ತೆಗಳ ಸಂಪತ್ತನ್ನೂ ಕೂಡಿಯೇ ವೃದ್ಧಿಗೊಳಿಸುತಿದ್ದಾರೆ. ಎಂದರೆ "ಅತ್ರೇ ಉವಾಚ" ವಾಗಿದ್ದ ವರ್ಣವ್ಯವಸ್ಥೆಯು, ವಾಸ್ತವವಾಗಿ ಇನ್ನು ಉಳಿದಿಲ್ಲ.

ಆದರೆ ಈ ನಡುವೆ ಇನ್ನೊಂದು ಅನವಸ್ಥೆಯೂ ಉಂಟಾಗಿದೆ ನಮ್ಮ ಶಾಲೆಗಳಲ್ಲಿ: ಅದು ವೈಶ್ಯವರ್ಣದ ಕುರಿತು ಅನಾಸ್ಥೆ, ಭೂಗೋಲೇತಿಹಾಸ ಶಿಕ್ಷಣದ ಅವಸ್ಥೆ! ನಿಜವಾಗಿ ನೋಡಿದರೆ ಆಶ್ರಮಗಳಲ್ಲಿ ಗೃಹಸ್ಥಾಶ್ರಮವಿದ್ದಂತೆ, ವರ್ಣಗಳಲ್ಲಿ ವೈಶ್ಯವರ್ಗವು ಉಳಿದೆಲ್ಲರಿಗೂ ಆಧಾರ-ಅಭಿವೃದ್ಧಿಯ ಅಸ್ತಿವಾರ! ಆದರೆ ಸದ್ಯಕ್ಕೆ ಪ್ರಪಂಚದಲ್ಲಿ ಬಂಡವಾಳಗಾರರು ನಿಂದಾಸ್ಪದರಾದಂತೆಯೇ, ಶಾಲೆಯಲ್ಲಿ ಈ ವೈಶ್ಯವರ್ಗವೂ ಉಪೇಕ್ಷೆಗೆ ಎಡೆಯಾಗಿದೆ; ಎಂದರೆ ಇದರ ಅರ್ಥ, ಇತಿಹಾಸ ಭೂಗೋಲಗಳ ಶಿಕ್ಷಕರಿಗೇ ಗೌರವ ಉಳಿದಿಲ್ಲವೆಂತಲ್ಲ. ಅವೆರಡು ವಿಷಯಗಳ ಶಿಕ್ಷಣದ ಕುರಿತು ಬೇಕಷ್ಟು (ಅಂದರೆ ಬೇಡವಾಗುವಷ್ಟು!) ಔದಾಸೀನ್ಯವಿದೆ. ಮಿಕ್ಕ ವಿಷಯಗಳ ಔದಾರ್ಯದಿಂದಲೇ ಇವೆರಡು ವಿಷಯಗಳಿಗೆ ಪಾಠ್ಯಕ್ರಮದಲ್ಲಿಯೂ ವೇಳಾಪತ್ರಿಕೆಯಲ್ಲಿಯೂ ಸ್ಥಾನ-ಮಾನಗಳು ದೊರೆತಂತಿದೆ. "ಮುಖ್ಯ" ವಿಷಯಗಳೆಂಬ ಮನ್ನಣೆಯು ಇವೆರಡು ಬಡಪಾಯಿಗಳಿಗೆ ಲಭಿಸುವುದು ಕಡಿಮೆ. ಇವೆರಡರಲ್ಲಿ ಉತ್ತೀರ್ಣನಾಗದವನೂ ಮಿಕ್ಕ ವಿಷಯಗಳಲ್ಲಿ—ಅದೂ ಭಾಷೆ ಮತ್ತು ಗಣಿತ ವಿಜ್ಞಾನಗಳಲ್ಲಿ—ಮೇಲೆಬಂದರೆ, ನಿರಾತಂಕವಾಗಿ ಪರೀಕ್ಷೆಯ ಅಗ್ನಿರೇಖೆಯನ್ನು ದಾಟಬಲ್ಲನು.

ಇಂದಿನದು ವಿಜ್ಞಾನಯುಗ! ಆದ್ದರಿಂದ ವಿಜ್ಞಾನಕ್ಕೆ—ಶಾಸ್ತ್ರೀಯ ವಿಷಯಕ್ಕೆ—ಮಹತ್ತ್ವಬಂದಿತು. ಇದು ಯೋಗ್ಯವೇ ಸರಿ. ಆದಾಗ್ಯೂ ಯೋಗ್ಯಕ್ಕೂ ಒಂದು ಯೋಗ್ಯತೆ ಬೇಡವೆ? ಈಗಿತ್ತಲಾಗಿ ವಿಜ್ಞಾನದ ವರ್ಗಗಳಿಗೆ, ಕಾಲೇಜು ಕಲಿಯುವವರು ಕಿಕ್ಕಿರಿದು ಸೇರುವ ರಭಸವನ್ನು ನೋಡಿದರೆ, ಅಜ್ಞಾನ-ವಿಜ್ಞಾನಗಳ ನಡುವಿನ ಸೀಮಾರೇಖೆಯು ತೀರ ಸೂಕ್ಷ್ಮವಾಯಿತೆ...ಎಂದೆನಿಸುವುದು. ಯಾವ ಪ್ರಮಾಣವಲ್ಲಿ ನಮ್ಮ ವಿದ್ಯಾರ್ಥಿಗಳು ವಿಜ್ಞಾನವನ್ನು ಐಚ್ಛಿಕ ವಿಷಯವಾಗಿರಿಸಿಕೊಂಡು ಕಲಿಯುವರೋ ಆ ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ವಿಜ್ಞಾನಿಗಳಾಗಲೀ ವಿಶೇಷತಜ್ಞರಾಗಲೀ ತುಂಬಿತುಳುಕುವುದು ಕಾಣುವುದಿಲ್ಲ. ಅಷ್ಟೇ ಅಲ್ಲ, ವಿಜ್ಞಾನಪದವೀಧರನು ಕೂಡ ಮುಂದೆ ಕೈಗೆಸಿಕ್ಕ ಚಾಕರಿಯನ್ನೂ ವ್ಯವಸಾಯವನ್ನೂ– ವಿಮಾ ಏಜನ್ಸಿಯಿಂದ ಮೊದಲಾಗಿ ವಿವಿಧೋದ್ದೇಶ ಸಂಘಗಳ ಅಂಗಡಿಗಳ ವ್ಯವಸ್ಥಾಪಕತನದ ತನಕವೂ!— ಹಿಂಬಾಲಿಸಿ ಸಂಸಾರ ಹೊಡುವುದನ್ನು ನಾವು ನೋಡುತ್ತೇವೆ. ಇನ್ನು ಇದಕ್ಕೂ ಉತ್ತರವಿರಬಹುದು. ವಿಜ್ಞಾನವನ್ನು ಕಲಿಯುವುದು ವಿಜ್ಞಾನಿಯೇ ಆಗಬೇಕೆಂದಲ್ಲ; ಮುಖ್ಯವಾಗಿ ವಿದ್ಯಾರ್ಥಿಗೆ ವೈಜ್ಞಾನಿಕದೃಷ್ಟಿ, ತರ್ಕಶುದ್ಧ ಚಿಕಿತ್ಸಕ ವಿಮರ್ಶಕ ವೃತ್ತಿ ಮೈಗೊಂಡರಾಯಿತು. ಈ ಮಾತು ಬಂಗಾರದಂತಹದು. ಆದರೆ ನಮ್ಮ ನೂರುಗಟ್ಟಲೆ ವಿಜ್ಞಾನ ಪದವೀಧರರಲ್ಲಿ ಅದೆಷ್ಟು ಜನ ಈ ಬುದ್ಧಿ ಈ ವೃತ್ತಿಗಳನ್ನು ಬೆಳಸಿಕೊಂಡಿದ್ದಾರೆ? ಈ ಮಾತನ್ನು ಬೆಳಸಿದರೆ, ನಮ್ಮ ಮೇಲೆ ಅಂಗಾರಕನ ದೃಷ್ಟಿ ಬಿದ್ದಂತೆಯೇ! ತಾತ್ಪರ್ಯವೇನೆಂದರೆ, ಈಗಿತ್ತಲಾಗಿ ವಿಜ್ಞಾನವನ್ನೋದುವುದೂ ಒಂದು ವಿದ್ವತ್ತೆಯ 'ಫ್ಯಾಶನ್' ಆಗಿಬಿಟ್ಟಿದೆ. ಇರಲಿ.

ಹಾಗೆಯೇ ಇಂದಿನದು ಬಲೋಪಾಸನೆಯ ಯುಗ. ಶರೀರವೇ ಸರ್ವ ಧರ್ಮಸಾಧನ ನಮ್ಮ ರಾಷ್ಟ್ರಕ್ಕೆ ಶರೀರಸಂಪತ್ತು ಅತ್ಯಗತ್ಯ. ಇದಕ್ಕಾಗಿ ಶಾರೀರಿಕ ಶಿಕ್ಷಣ— ಪಂದ್ಯಾಟಗಳಿಗೆ ಎಂದೂ ಇಲ್ಲದ ಪ್ರಾಶಸ್ತ್ಯ. ಇದೂ ಯೋಗ್ಯವೆ ಸರಿ. ಜರ್ಮನಿಯೂ ಹೀಗೆ ಕೇವಲ ಬಲೋಪಾಸನೆಯ ಜಿನ್ನಿಗೆ ಬಿದ್ದಿತ್ತು. "When people talk of culture, I reach for my gun." (ಜನ ಸಂಸ್ಕೃತಿಯ ಮಾತನೆತ್ತಿದೊಡನೆ, ನನಗೆ ನನ್ನ ತುಪಾಕಿಯನ್ನೇ ಎತ್ತಬೇಕೆನಿಸುತ್ತದೆ!) ಎಂದು ಜರ್ಮನಿಯ ಶ್ರೇಷ್ಠಿಗಳು ಅಭಿಮಾನದಿಂದ ಅಂದುಕೊಳ್ಳುವ ಮಟ್ಟಿಗೂ ಈ ವೀರ ಸಂವ-

'ಬಗನ' ಬಾಲಾಮೃತ

ಒಂದೆಳೆ ಸಪ್ಯಶತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯುಕ್ತ ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ರ್ಧನೆಯು ಬೆಳೆಯಿತು. ನಾವೂ ಈ ದಾರಿಯನ್ನು ತುಳಿಯುವೆಕೇನೋ !

ಆದರೆ ಈ ನಡುವೆ ಆಧುನಿಕ ಯುಗದ ಇನ್ನೊಂದು ಜೀವಾಳದ ಧರ್ಮವನ್ನು ನಾವು ಮರೆತಂತಿದೆ. ಇಂದಿನ ಯುಗ ವ್ಯವಹಾರದ್ದು. ಅಂತರ್ ಪ್ರಾಂತೀಯ—ಅಂತರ್ ರಾಷ್ಟ್ರೀಯ ವ್ಯವಹಾರ-ವ್ಯಾಪಾರದ್ದು. ಕರ್ನಾಟಕದ ಮಲೆನಾಡ ಮೂಲೆಯಲ್ಲಿಯು ಒಬ್ಬ ಮಂಕುತಿಮ್ಮನಿಗೂ, ಜಗತ್ತಿನ ಹಲವಾರು ದೇಶಗಳ ಹಲವು ಬಗೆಯ ವಸ್ತು-ವ್ಯವಹಾರಗಳ ಫಲವನ್ನು ಉಣ್ಣಬೇಕಾಗುತ್ತದೆ. ಇದಕ್ಕಾಗಿ ಭೂಗೋಲದ, "ನಮ್ಮ ಜಗತ್ತಿನ" ಪರಿಜ್ಞಾನವು ಅತ್ಯಂತ ಆಗತ್ಯವು. ಭೂಚರಿತ್ರೆ, ಲೋಕ ಚರಿತ್ರೆಯ ಹಿನ್ನೆಲೆ, ತಳಪಾಯ, ಒಳಮೈ-ಆಧಾರ, ಆವರಣ, ಜನಜೀವನದ ಮೇಲಿನ ಜಲ ವಾಯು ಭೂಮಿ ಗುಣದ ಪ್ರಭಾವವನ್ನರಿಯದೇ ಒಂದು ರಾಷ್ಟ್ರದ ಮನೋವೃತ್ತಿಯನ್ನಾಗಲೀ, ಜಗತ್ತಿನ ಆಗು-ಹೋಗುಗಳ ಮರ್ಮವನ್ನಾಗಲೀ ತಿಳಿದುಕೊಳ್ಳುವಂತಿಲ್ಲ. ಇಷ್ಟೆಲ್ಲ ತಿಳಿದುಕೊಳ್ಳುವುದಾದರೂ ಏಕೆ ?—ಎಂದರೆ, ಅದಕ್ಕೆ ಏನೂ ಹೇಳುವಂತಿಲ್ಲ ! ಜಗತ್ತಿನ ಆಗು-ಹೋಗುಗಳನ್ನು ತಿಳಿದುಕೊಳ್ಳಲು ನಾವು ಯತ್ನಿಸಿದೆ ಹೋದರೆ, ಅವುಗಳ ತಿಕ್ಕೆಯಲ್ಲಿ ತೊಳಲಾಡುವುದೇನೂ ನಮಗೆ ತಪ್ಪಿದ್ದಲ್ಲ.

ಅದಕ್ಕಾಗಿಯೇ ಇತಿಹಾಸಜ್ಞಾನ ಅವಶ್ಯ. ಭೂಗೋಲದ ಅಭ್ಯಾಸವು ಒಂದೆಡೆಗೆ ಎಲ್ಲ ವಿಜ್ಞಾನ ಶಾಸ್ತ್ರಗಳ "ಸಂಯೋಗ ಭೂಮಿ"; ಇನ್ನೊಂದೆಡೆಗೆ ಜನಜೀವನದ ಇತಿವೃತ್ತವನ್ನು ಇತಿಹಾಸದ ನಡುನೀರಿನಲ್ಲಿ ಒಯ್ದು ನಿಲ್ಲಿಸುವ "ಭೂಶಿರ"! ಭೂಗೋಲದ ಮುಖ್ಯಾಂಶಗಳನ್ನು ಮೀರುವುದೆ ಇತಿಹಾಸ. ಆಧುನಿಕ ಜಗತ್ತಿನ ಅನೇಕ ಸಮಸ್ಯೆಗಳನ್ನು ಅರಿತುಕೊಳ್ಳಲು, ಸಮಕಾಲೀನ ಭೌಗೋಲಿಕ ಪರಿಸ್ಥಿತಿಯ ತಿಳಿವಳಿಕೆಯು, ಪ್ರಾಕೃತಿಕ ವಿಭಾಗ, ಹುಟ್ಟುವಳಿಗಳ ಸ್ವರೂಪ, ಉದ್ಯೋಗ-ವ್ಯವಸಾಯಗಳ ಅನುಕೂಲ ಇವೆಲ್ಲವುಗಳ ಮನನವರಿಕೆಯು ಹೇಗೆ ಅವಶ್ಯವೋ ಹಾಗೆಯೇ, ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಅವುಗಳ ಐತಿಹಾಸಿಕ ಹಿನ್ನೆಲೆಯು ತೀರ ಅಪರಿಹಾರ್ಯ. ಜಾತೀಯ ಸಮಸ್ಯೆ, ಸಂಸ್ಥಾನಗಳ ವಿಲೀನೀಕರಣ. ಅಂತರ್ ರಾಷ್ಟ್ರೀಯ ಸಹಕಾರ, ಯಹೂದಿ-ಅರಬರ ತಿಕ್ಕಾಟ, ಆಫ್ರಿಕೆಯ ಭವಿತವ್ಯ, ಏಶಿಯಾದ ರಾಜಕಾರಣ, ಮಹಾಯುದ್ಧಗಳ ಮೂಲ ಇವೆಲ್ಲ ಪ್ರಶ್ನೆಗಳನ್ನು ಬಿಡಿಸಬೇಕಾದರೆ— ಬಿದ್ದಿಬಲ್ಲನನಿಗೆ ಇವುಗಳನ್ನು ಬಿಡಿಸದೆ ಬೇರೆ ವಿಧಿಯಿಲ್ಲ—ಇತಿಹಾಸದ ಜ್ಞಾನ ಅನಿವಾರ್ಯ.

ಆದರೆ ನಾವು ನೋಡುವುದೇನು ? ಮೆಟ್ರಿಕ್ ಪರೀಕ್ಷೆ ಮುಟ್ಟಿಗೂ ಭೂಗೋಲ-ಇತಿಹಾಸಗಳಲ್ಲಿ ಕೂಡಿಯೇ ಉತ್ತೀರ್ಣರಾದರೆ ಸಾಕಾಗುತ್ತದೆ. (ಇದೀಗ ಹೊಸ ಪಠ್ಯಕ್ರಮದಲ್ಲಿ ಇನ್ನೆರಡೂ ಬೇರೆಯಾಗಿವೆ. ಆದರೂ ಐಚ್ಛಿಕವಾಗಿವೆ.) ಮುಂದೆ ಕಾಲೇಜಿನಲ್ಲಿ—ಉಚ್ಚಶಿಕ್ಷಣದಲ್ಲಿ— ಭೂಗೋಲವಿದ್ಯೆಗೆ ಸರಿಯಾದ ಸ್ಥಾನವಿಲ್ಲ.

ಇದು ತೀರ ಅನುಚಿತ. ಭೂಗೋಲದ ವಿಚಾರ ಹೇಗೂ ಇರಲಿ, ಇತಿಹಾಸ ಶಿಕ್ಷಣದ ಕುರಿತು ನಮ್ಮ ಕೊರತೆಯೇನು ? ಬೇಡಿಕೆಗಳೇನು ? ಅದನ್ನಿಷ್ಟು ನೋಡೋಣ.

ಈಗ ಪಠ್ಯಕ್ರಮದಲ್ಲಿ ಇತಿಹಾಸದ ಅಂಶವೆಷ್ಟು ? ಈಗ ೧೦ ವರ್ಷಗಳ ಹಿಂದೆ, ಮಾಧ್ಯಮಿಕ ಶಿಕ್ಷಣದಲ್ಲಿ ಇಂಗ್ಲೆಂಡು ಮತ್ತು ಹಿಂದುಸ್ತಾನ ಹೀಗೆ ಎರಡೂ ಇತಿಹಾಸಗಳನ್ನು ಕಲಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಇಂಗ್ಲೆಂಡದ ಇತಿಹಾಸವು ೧೭ನೆಯ ಶತಮಾನದಿಂದ ೨೦ನೆಯ ಶತಮಾನದ ಆರಂಭದ ತನಕ ಮೆಟ್ರಿಕ್ ಪರೀಕ್ಷೆಗಾಗಿ ಓದಿಸಲಾಗುತ್ತದೆ; ಅದರ ಜೊತೆಗೆ ಹಿಂದುಸ್ತಾನದ ಇತಿಹಾಸದಲ್ಲಿ ಯಾವುದಾದರೊಂದು ಕಾಲಖಂಡವನ್ನು ಓದಿಸಲಾಗುತ್ತದೆ ಓದಿಸಲಾಗುವುದೆಂಬುದರ ಅರ್ಥ:ಇಂಗ್ಲೆಂಡದ ಇತಿಹಾಸದ ಪಾಠಗಳನ್ನು ಮುಗಿಸಲು ಅವಕಾಶವಿಟ್ಟು, ಈ ಬಿಡಿಪಾಠಗಳನ್ನು ಭರದಿಂದ ಸಾಗಿಸಲಾಗುತ್ತದೆ. (ಒಂದೇ ವರ್ಗದಲ್ಲಿ ಬೇರೆ ಬೇರೆ ಗುಂಪುಗಳು ಬೇರೆ ಬೇರೆ ಕಾಲಖಂಡಗಳನ್ನು ಅಯ್ದುಕೊಂಡಿದ್ದರೆ, ಅವಂಗೆ ಪ್ರತ್ಯೇಕ ಕಲಿಸುವ ಕಷ್ಟ ಯಾರು ವಹಿಸುವರು ? 'ಪ್ರಶ್ನೋತ್ತರ' ಪುಸ್ತಕಗಳನ್ನು ಉರು ಹಾಕುವದೇ ಅವರ ಗುರುಮಂತ್ರ !)

ಆದರೆ ಈಗ ಪಠ್ಯಕ್ರಮದಲ್ಲಿ ವ್ಯತ್ಯಾಸವಾಗಿದೆ. ಎಂದರೆ, ಒಂದು ರೀತಿ ಭಾರತೀಯ ಇತಿಹಾಸಕ್ಕೆ ಮಹತ್ವ ಬಂದಿದೆ. ವಿದ್ಯಾರ್ಥಿಯು

ನ್ನು ಮುಂದೆ, ಭಾರತೀಯ ಇತಿಹಾಸವನ್ನು ಮಹಮ್ಮದೀಯರ ಆಗಮನ-ಆಳಿಕೆಗಳ ಆರಂಭದಿಂದ ೨ೀನೆಯ ಶತಮಾನದ ತನಕ ಕಲಿಯಬೇಕು; ಜತೆಗೆ ಇಂಗ್ಲಂಡವ—ಮೇಲೆ ಹೇಳಿದ ಕಾಲಖಂಡವನ್ನೇ ಓದಬೇಕು, ಅಥವಾ ಮಹಮ್ಮದೀಯರಿಗೂ ಮೊದಲಿನ ಹಿಂದೂ ಧರ್ಮ ಇತಿಹಾಸಖಂಡವನ್ನು ಅಭ್ಯಸಿಸಬೇಕು. ಈ "ಅಥವಾ" ನುಕೂಲದಿಂದ, ವಿದ್ಯಾರ್ಥಿಗಳಿಗೆ ಸಮಗ್ರ ಭಾರತೀಯ ಇತಿಹಾಸವನ್ನೊಂದೇ ಓದುವುದು ಸುಗಮವಾಗುವುದು.

ಆದರೆ ಇಷ್ಟೆಲ್ಲ ವ್ಯತ್ಯಾಸವಾದರೂ ಇತಿಹಾಸದ ವಿಷಯಕ್ಕೆ ಯೋಗ್ಯ ನ್ಯಾಯವಾಗಿಯೇ ಇಲ್ಲ. ಯಾವುದೇ ಶಿಕ್ಷಣವೂ ಜೀವನಕ್ಕೆ ಪ್ರತ್ಯಕ್ಷವಾಗಿ ಇಲ್ಲವೇ ಪರ್ಯಾಯವಾಗಿ ಸಂಬಂಧವುಳ್ಳದ್ದಿರಬೇಕು. ಆ ದೃಷ್ಟಿಯಿಂದ, ಮೇಲೆ ಕಾಣಿಸಿದ ಇತಿಹಾಸ ಪಠ್ಯಕ್ರಮ ಏನೂ ಸಲ್ಲದು—ಸಾಲದು. ಈ ಬಗೆಯ ವರ್ಗೀಕರಣವೇ ನಿರುಪಯೋಗಿ. ಇಂಗ್ಲಂಡ್-ಹಿಂದುಸ್ತಾನ ಇವೆರಡು ದೇಶಗಳ ಆರ್ಥಿಕ ರಾಜಕೀಯ ಸಂಬಂಧಗಳು ಕೆಲವು ಶತಮಾನಗಳಿಂದ ಕೂಡಿ ಬಂದ ಮಾತ್ರಕ್ಕೆ, ಇಂಗ್ಲಂಡದ ಇತಿಹಾಸವನ್ನೊಂದೇ ನಮ್ಮ ಮಕ್ಕಳಿಗೆ ಒತ್ತಾಯದಿಂದ ಓದಿಸುವುದರಲ್ಲಿ ಯಾವ ಪುರುಷಾರ್ಥ? ಕೇವಲ ಬ್ರಿಟಿಶರ ಕಣ್ಣಿನಿಂದಲೇ ಜಗತ್ತನ್ನು ನೋಡುವುದರಿಂದ ಯಾವ ಸ್ವಾರ್ಥ ಸಾಧಿಸುವುದು? ಮೇಲಾಗಿ ಕಾಲಖಂಡಗಳ ದೃಷ್ಟಿಯಿಂದಲೂ ಪ್ರಚಲಿತ ಪ್ರಪಂಚಕ್ಕೆ ತೀರ ದೂರವಿದ್ದ ಶತಮಾನಗಳ ವಿವರ-ವಿದ್ಯಮಾನಗಳನ್ನು ಕಲಿಸುವುದರಲ್ಲಿ ಯಾವ ತಥ್ಯರ್ಥವೂ ಇಲ್ಲ.

ಯಾವ ಪಠ್ಯಕ್ರಮವನ್ನೇ ಕೊಂಡರೂ, ಅದು ಮುಗಿಯುವುದು ವಿಕ್ಟೋರಿಯಾ ಮಹಾರಾಣಿಯ (ಅವಳ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ!) ಮರಣದಲ್ಲಿಯೇ! ಆಕೆಯ ಮರಣದಿಂದ ಮಾನವಕೋಟಿಯ ಚರಿತ್ರವೇ ಮುಗಿದು ಹೋಯಿತೇ? ನಿಜವಾಗಿಯೂ, ಹಿಂದಿನ ಎಲ್ಲ ಜೀವಾಳದ ಜ್ವಲಂತ ಸಮಸ್ಯೆಗಳ ಮೂಲಗಳು ೨೦ನೆಯ ಶತಮಾನದಿಂದಲೇ ಮೊಳಕೆಯೊಡೆದಿವೆ. ಎರಡು ಮಹಾಯುದ್ಧಗಳ ನಡುವಿನ ಯುಗದ ಅಳವಾದ ವಿಶಾಲವಾದ ಅಭ್ಯಾಸ ಎಂದಿಗೆ ಆಗಬೇಕು; ಅಂದರೇನೇ ಆಧುನಿಕ ಜಗತ್ತಿನ ಅನೇಕ ಪ್ರಶ್ನೆಗಳ ಬಗೆಹರಿಕೆಗೆ ತಕ್ಕ ಸಂದರ್ಭವೂ ಸಮರ್ಪಕ ಉತ್ತರಗಳೂ ಹೊಳೆಯುವ ಆಕೆಯಿದೆ. ಕೇವಲ ಸಿಪಾಯರ ಬಂಡಾಯವನ್ನೇ ಸಂಶೋಧಿಸಿ ಆಧುನಿಕ ಕ್ರಾಂತಿಯ ವ್ಯೂಹವನ್ನು ರಚಿಸುವುದು ಹಾಸ್ಯಾಸ್ಪದವಾಗುವುದು. ಕಂಪನೀ ಸರಕಾರದ ಕುಟಿಲನೀತಿಯನ್ನು ಎಷ್ಟೇ ಓದಿದರೂ, ಇಂದಿನ ಅಂತರ್‌ರಾಷ್ಟ್ರೀಯ ಕೂಟನೀತಿಯ ಬೋಧವಾಗದು. ಹಿಟ್ಲರನನ್ನು ನೆಪೋಲಿಯನ್ನನಿಗೆ ಹೋಲಿಸಿದ ಮಾತ್ರಕ್ಕೆ ಅಂದಿನ ಯುರೋಪದ ರೂಪದಲ್ಲಿ ಇಂದಿನ ಯುರೋಪವನ್ನು ರೂಪಿಸಲು ಬರುವಂತಿಲ್ಲ.

ಇನ್ನೂ ಒಂದು ದೋಷವೇನೆಂದರೆ— ಇದು ಎಲ್ಲಕ್ಕೂ ಮಿಗಿಲಾದ ದೋಷ— ಇಂದಿನ ಯುಗವು ಜಾಗತಿಕ ಸಂಘಟನೆಯ ಅಂತರ್‌ರಾಷ್ಟ್ರೀಯ ವ್ಯವಸ್ಥೆಯ ಯುಗವೆಂಬುದನ್ನು ಇತಿಹಾಸ ಶಿಕ್ಷಣವು ಗಮನಿಸಿಯೇ ಇಲ್ಲ. ಇಂದು ಇತಿಹಾಸದ ಒಂದು ವಿಶ್ವವ್ಯಾಪಿಯಾದ ಹಿನ್ನೆಲೆಯನ್ನು, ನಮ್ಮ ಪ್ರಾಂತೀಯ—ರಾಷ್ಟ್ರೀಯ ಜೀವನದ ಬೆನ್ನಿಗೆ ಜೀನ್ಸಾಗಿ ಮನದಟ್ಟಾಗುವಂತೆ ಕಲ್ಪಿಸಿಕೊಳ್ಳಬೇಕು. ನಮ್ಮ ದೇಶವೇ ದೇವರ ಅವತಾರಭೂಮಿ, ಪುಣ್ಯಭೂಮಿ, ಪರಮೇಶ್ವರನೂ ಭಾರತೀಯನೇ—ಎಂದು ಒಂದು ಬುಡಗೆಟ್ಟ ಹೆಮ್ಮೆಯನ್ನು ಕಟ್ಟಿಕೊಂಡು ನಾವು ಬದುಕಲಾರೆವು. ಭಾರತವು ಸ್ವತಂತ್ರವಾಗಿದೆ. ಜಗತ್ತು ಇನ್ನೂ ಅಕಂತ್ರವಿದೆ ನಮ್ಮ ಕನ್ನಡ ನಾಡು (ಅಥವಾ ಕರ್ನಾಡು?) ಏಕತಂತ್ರವಾಗಲಿದೆ. ಧನಿಕವರ್ಗವೇ ಪ್ರಪಂಚದಲ್ಲಿ ಸರ್ವತಂತ್ರವಿದೆ. ನಮ್ಮ ಜನತೆ ಬಡತನಕ್ಕೆ ತಿಳಿಗೇಡಿತನಕ್ಕೆ ಪೂರ್ತಿ ವರತಂತ್ರವೇ ಉಳಿದಿದೆ. ಇವೆಲ್ಲ "ತಾಂತ್ರಿಕ" ಸಮಸ್ಯೆ-ಸಂಬಂಧಗಳ ಆಕಲನೆಯನ್ನು ಸಾಕಲ್ಯವಾಗಿ ಮಾಡಿಕೊಂಡ ಹೊರತು ನಮಗೆ ಉಳಿಗಾಲವಿಲ್ಲ ಪ್ರಪಂಚ-ಪ್ರವಾಹದಲ್ಲಿ ಒಮ್ಮೆಲೇ ಹರಿಯುವ ಬಗೆಹರಿಯುವ ಹುಡುಗನು ತನ್ನ ಬಾಳಿನ ಹಡಗವನ್ನು ತೇಲಬಿಡುತ್ತಾನೆ. ಆಗ ಅವನಿಗೆ ಆ ಪ್ರವಾಹದ ಗತಿ, ದಿಕ್ಕು, ಪೂರ್ವಾಪರ- ತನ್ನ ಸಂದರ್ಭ-ಸಂಪರ್ಕಗಳ ಪರಿಜ್ಞಾನ ಇವೆಲ್ಲ ಆವಶ್ಯ. ಇತಿಹಾಸ ಶಿಕ್ಷಣ ಈ ದೃಷ್ಟಿಯಿಂದ ಸಂಸ್ಕೃತಿಯ ವಾಹನ. ವ್ಯಕ್ತಿಗೆ ಅವನ ಇಲ್ಲವೇ ಅನಳ ಸಮಾಜ, ಸ್ವದೇಶ, ಸ್ವಧರ್ಮ ಮತ್ತು ಸ್ವಾಭಿಮಾನಗಳ ಜಾಗೃತಿಯನ್ನು ಕೊಟ್ಟು, ಮಾನವ್ಯ-ಬಾಂಧವ್ಯದ ಪ್ರಗತಿಗೆ ಅಣಿಗೊಳಿಸಲು ಇತಿಹಾಸಜ್ಞಾನವೊಂದೇ ದಿವ್ಯ ಉಪಾಯ, ಜೀವನಯಾತ್ರೆಯ ಪಾಥೇಯ.

ಆದರೆ ಈ ದೃಷ್ಟಿಯು ಇತಿಹಾಸದ ಪಠ್ಯಕ್ರಮವಲ್ಲಿಯೂ ಶಿಕ್ಷಣತಂತ್ರದಲ್ಲಿಯೂ ಬೆಳಕು ಬೀರಿಲ್ಲ. ನಮ್ಮ ಕನ್ನಡ ಜನಕ್ಕೆ ಈ ನಿಟ್ಟಿನಲ್ಲಿ ಹೊಸ ಹೆಜ್ಜೆಯನ್ನು ಇಡಲು ಒಳ್ಳೇ ದೈವದ ಇಂಬು ದೊರೆತಿಪ್ಪೆನಮ್ಮದೇ ವಿಶ್ವವಿದ್ಯಾಲಯವಾಗಲಿವೆ ಇತಿಹಾಸಜ್ಞಾನವು



ನಮ್ಮ ಗದುಗಿನ ಏಜಂಟರು:

ಶ್ರೀನಿವಾಸ ಸ್ಟೋರ್ಸ್; ಗದಗ

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಪ್ರತಿವರ್ಷ ೬೦೦ ಪುಟಗಳಲ್ಲಿ ನಾಲ್ಕು ಗ್ರಂಥಗಳು
ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚ ಕೇರಿ

ಸಂಪಾದಕರು— **ಕಲಮದಾನಿ ಗುರುರಾಯರು**

೩ನೆಯ ವರ್ಷದ ಮೊದಲನೆಯ ಗ್ರಂಥ

ಉತ್ಕಲಾ ಭಾಗ ೨

ಇದೀಗ ಹೊರಟ್ಟಿದೆ. ಬೇಗ ಚಂದಾದಾರರಾಗಿರಿ.

ನಿಜವಾಗಿಯೂ ವಿಶ್ವವಿದ್ಯೆ. ವ್ಯಕ್ತಿವ್ಯಕ್ತಿಯನ್ನೂ ವಿಶ್ವವಿನಯದ ಮನೋವೃತ್ತಿಯ ನವನಾಗರಿಕನನ್ನಾಗಿ ಮಾರ್ಪಡಿಸುವ ವಿದ್ಯೆ. "ಬಹಳ ಓದಿದ್ದರೂ ಮಗನೇ ವ್ಯಾಕರಣವನ್ನಾದರೂ ಉರು-ಹಾಕು" ಎಂದು ನಮ್ಮ ಹಳೇ ಶಾಸ್ತ್ರಿಗಳು ಹೇಳುತ್ತಿದ್ದರು. ಇತಿಹಾಸವು ಜಾಗತಿಕಜೀವನದ ವ್ಯಾಕರಣ. ನಮಗೆ ಇಂದು ಜಗತ್ತಿನ ಇತಿಹಾಸ ಸಂಕ್ಷೇಪವಾಗಿ ತಿಳಿದಿರಬೇಕು. ನಮ್ಮ ಖಂಡದ ಗತಜೀವನ ಸಂಗ್ರಹವಾಗಿ ಗೊತ್ತಿರಬೇಕು. ಅನಂತರ ನಮ್ಮ ದೇಶ ನಮ್ಮ ಜನದ ಇತಿಹಾಸ ವಿವರವಾಗಿ ಮನದಟ್ಟಾಗ-ಬೇಕು. ಜಾಗತಿಕ ಇತಿಹಾಸದಲ್ಲಿ ಪಾಶ್ಚಾತ್ಯರ ಪ್ರಾಧಾನ್ಯ, ಪಾಶ್ಚಾತ್ಯಜೀವನದ ಮೇಲೆ ಪೌರ್ವಾತ್ಯಜನಾಂಗಗಳ ಪ್ರಭಾವ, ಪೂರ್ವದ ದೇಶಗಳ ಇತಿಹಾಸದಲ್ಲಿ ನಮ್ಮ ಭಾರತದ ಭೂತ-ಭವಿಷ್ಯಗಳ ಭೂಮಿಕೆ—ಆ ಭೂಮಿಕೆಯಲ್ಲಿ ಕರ್ನಾಟಕದ ಭಾಗ—ಈ ರೀತಿಯಾಗಿ ಸುಳಿಯೊಳಗೆ ಸುಳಿಯಾಗಿ ನಮ್ಮ ವಿಶ್ವವಿದ್ಯೆಯ ಪದ್ಮವ್ಯೂಹವು ಅರಳಬೇಕು.

ಅಮೇರಿಕಾ, ಆಸ್ಟ್ರೇಲಿಯಾ ಇವು ಒಂದು ರೀತಿ ಭಾಗ್ಯವಂತ ದೇಶಗಳು. ಅವುಗಳಿಗೆ "ಆಬ್ರಮ್ಹಸ್ತಂಭನರ್ಯಂತ" ಇತಿಹಾಸ-ವಿಲ್ಲ. ಒಮ್ಮೆಲೇ ಕಾಲನ ಹೊತ್ತಿಗೆಯ ಹೊಸ ಹಾಳೆಯ ಮೇಲೆ ಹಿರಿದಾದ ಹೊಸ ಬಾಳನ್ನು ಅವರು ಬಿನರು-ನೆತ್ತರುಗಳಿಂದ ಬರೆಯುತೊಡಗಿದರು. ಆದರೆ ನಮಗೆ ಹಾಗಿಲ್ಲ. ನಮ್ಮ "ಪ್ರಾಚೀನ ಕರ್ಮ" ನಮ್ಮ ಬೆನ್ನ ಬಿಡದು. ನಮ್ಮ ವಿಕ್ರಮದ ಹೆಗಲನ್ನು ಈ ಪುಣ್ಯ-ಪುರುಷನು ಬೇತಾಳನಂತೆ ಏರಿ ಕೂತಿದ್ದಾನೆ. ಕೂಟ-ಪ್ರಶ್ನೆಗಳನ್ನು ಪ್ರತಿಯುತ್ತರಕ್ಕೂ ಕೇಳುತ್ತಾನೆ. ಒಂದೊಂದು ಪ್ರಶ್ನೆಯ ಹಿಂದೆ ಒಂದೊಂದು ಕರ್ಮಕಥೆ! ಅವುಗಳ ಉತ್ತರ-ಗಳನ್ನು ಕೊಟ್ಟೇ ಮುಂದರಿಯಬೇಕಾಗಿದೆ. ಆದ್ದರಿಂದ ನಮಗೆ ಇತಿ-ಹಾಸದ ಪರಿಜ್ಞಾನದ ಆವಶ್ಯಕತೆ ವಿಶೇಷ. ನಾವು ಇತಿಹಾಸವನ್ನು ಓದುವುದು ಹಿಂದಿನವರನ್ನು ಹಿಂಬಾಲಿಸಲಿಕ್ಕಲ್ಲ. ಅವರ ತಪ್ಪುಗಳನ್ನು ತಪ್ಪಿಸಿಕೊಳ್ಳಲಿಕ್ಕೆ! ಹಳೆಯದೆಲ್ಲ ಹೊನ್ನೆಂದು ಹಾಡಲಿಕ್ಕೆ ಅಲ್ಲ. ಈ ವಿವೇಕವನ್ನು ಇಟ್ಟುಕೊಂಡೇ—ಯಾವ ಅಭಿನಿವೇಶ-ಆವೇಶ ಗಳನ್ನು ತಾಳದೇ-ನಿಶ್ಚಲವಾದ ನೋಟದಿಂದ ಇತಿಹಾಸದ ಚಲ-ಚ್ಚಿತ್ರವನ್ನು ನಾವು ಅವಲೋಕಿಸಬೇಕು. ಇತಿಹಾಸ ಶಿಕ್ಷಣಕ್ಕೆ ಉಳಿದ ಯಾವುದೇ ವಿಷಯಶಿಕ್ಷಣದಂತೆಯೇ ಎರಡು ಮಗ್ಗಲು: ಒಂದು: ಏನು ಕಲಿಸುವುದು? ಇನ್ನೊಂದು: ಹೇಗೆ ಕಲಿಸುವುದು?- ಇವೆರಡರ ಕುರಿತು ಆದಷ್ಟು ಸಂಕ್ಷೇಪವಾಗಿ ಕೆಲವು ಸೂಚನೆಗಳನ್ನು ಕೆಳಗೆ ಕೊಟ್ಟು ಹೊರತು ಈ ಬರಿಹ ಪೂರ್ತಿಯಾಗುವುದಿಲ್ಲ.

೧. ಇತಿಹಾಸಶಿಕ್ಷಣದಲ್ಲಿ ಏಕಕೇಂದ್ರ ಪದ್ಧತಿಯನ್ನು ಅವ-ಲಂಬಿಸಬೇಕು. ಎಂದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ಕಲಿಸುವ ವಿಷಯದ ಹಂದರವು ಒಂದೇ ಇರತಕ್ಕದ್ದು. ಆದರೆ ಕಲಿಸುವ ವಿವರಗಳೂ ವಿಷಯದ ವಿವೇಚನೆಯೂ ಹೆಚ್ಚು ವಿವಿಧವೂ ವಿಪುಲವೂ ಆಗತಕ್ಕದ್ದು.

೨. ಈ ಹಂದರ (Plan)ವು ಇಂತಿರಬಹುದು: ಸಂಕ್ಷೇಪವಾದ ಜಾಗತಿಕ ಇತಿಹಾಸ; ಮತ್ತು ಸಂಗ್ರಹವಾದ ಭಾರತೀಯ ಇತಿ-ಹಾಸ. ಇವುಗಳಲ್ಲಿ ಪ್ರಾಥಮಿಕ ಶಿಕ್ಷಣದ ಕ್ರಮದಲ್ಲಿ, ಕೆಳಗಿನ ಈಯತ್ತೆಗಳಿಗೆ ಭಾರತೀಯ ಇತಿಹಾಸದ ರೂಪರೇಷೆಗಳೊಂದಿಗೆ ಕರ್ನಾಟಕ ಇತಿಹಾಸವನ್ನು ತಿಳಿಯಾಗಿ ಕಲಿಸಬೇಕು. ಮೇಲಿನ ಈಯತ್ತೆಗಳಿಗೆ ಜಾಗತಿಕ ಇತಿಹಾಸದ ರೂಪರೇಷೆಯೊಡನೆ (ಈ ರೂಪರೇಷೆಯಲ್ಲಿ ಸಾಮಾನ್ಯವಾಗಿ ಇಂಗ್ಲಂಡ-ಭಾರತಗಳ ಸಂಬಂಧ ಗಳು ಹೇಗೆ ಕೂಡಿಬಂದುವು ಎಂಬ ಬಗ್ಗೆ. ಬೇರೆ ಬೇರೆ ರಾಷ್ಟ್ರಗಳ ಮನೋಧರ್ಮ-ಸಂಸ್ಕೃತಿಗಳ ಹಿಂದು-ಮುಂದು, ಇತಿಹಾಸದಲ್ಲಿಯ ಮಹತ್ತ್ವದ ಯುಗಗಳ ಲಕ್ಷಣಗಳು, ಅಲ್ಲದೆ ಸನ್-ಶಕ ಮುಂತಾದ ಗಣನೆಯ ಸರಿಯಾದ ಮನನದರಿಕೆ—ಇವೆಲ್ಲ ಅಂಶಗಳಿಗೆ ಹೆಚ್ಚು ಗಮನವಿರಬೇಕು.) ಭಾರತದ ಇತಿಹಾಸವನ್ನು ಮೂರು ಭಾಗ ವಾಗಿ—ವೇದಕಾಲದಿಂದ ವಿಕ್ಟೋರಿಯಾ ಕಾಲ ಪೂರ್ಣ—ಸಂಗ್ರಹ ವಾಗಿ ಕಲಿಸಬೇಕು.

೩. ಹಾಗೆಯೇ ಮಾಧ್ಯಮಿಕ ಶಿಕ್ಷಣದಲ್ಲಿ, ಜಾಗತಿಕ ಇತಿಹಾಸ ವನ್ನು ಹೆಚ್ಚು ವಿವರವಾಗಿ—ಪ್ರಾಥಮಿಕ ಕ್ರಮದಲ್ಲಿ ಹಾಕಿಕೊಟ್ಟ ಯೋಜನೆಯಲ್ಲಿಯೇ ವಿಶೇಷ ಮತ್ತು ವಿಪುಲ ಚರಿತ್ರಾಂಶಗಳನ್ನು ತುಂಬಿ—ಕಲಿಸಬೇಕು. ಜತೆಗೆ ಅಧುನಿಕ ಇತಿಹಾಸವನ್ನು ೨೦ನೆಯ ಶತಮಾನದ ಭಾರತೀಯ ಮತ್ತು ಭಾರತೇತರ ಇತಿಹಾಸ ವನ್ನು ಒಳ್ಳೇ ಸ್ವಾರಸ್ಯವಾಗಿ ಕಲಿಸಬೇಕು. ಜಗತ್ತಿನ ಇತಿಹಾಸ ವನ್ನು ಕಲಿಸುವಾಗ ಗ್ರೀಕರ ಸಂಸ್ಕೃತಿ, ರೋಮನ್ನರ ಸಾಮ್ರಾಜ್ಯ, ಪ್ರಾಚೀನ ಭಾರತೀಯ ಸಂಸ್ಕೃತಿ ಇವೆಲ್ಲ ಒಂದು ಅಖಂಡ ಪರಂಪರೆ ಯಾಗಿಯೇ ಕಲಿಸಬೇಕು. ಅಷ್ಟೇ ಅಲ್ಲ. ರಾಜರ ಅನುಕ್ರಮ, ಮಂತ್ರಿಮಂಡಳ, ಗವ್ವರ್ನರ ಜನರಲ್ಲರ ಕ್ರಮ, ಈ ಪದ್ಧತಿಗಿಂತಲೂ ಶತಮಾನಗಳನ್ನು ಮುಂದಿಟ್ಟುಕೊಂಡು, ಒಂದು ಶತಮಾನದ ಸಮಗ್ರಜೀವನವನ್ನು ಬೀಸುನೋಟದಿಂದ ಬಣ್ಣಿಸುತ್ತ, ಆವಶ್ಯ ವಿದ್ದಲ್ಲಿ ವಿವರಗಳನ್ನು ತುಂಬುತ್ತ ಪಾಠ ಸಾಗಬೇಕು. ಈ ಸಮ-ಗ್ರತೆಯ ಅಭಾವವು, ವಿದ್ಯಾರ್ಥಿಗಳ ಜ್ಞಾನದಲ್ಲಿ ಒಂದು ದೊಡ್ಡ ಕಂದಕದಂತೆ ಕಂಡುಬರುತ್ತದೆ.

ಳ. ಇತಿಹಾಸವನ್ನು ಮಾನವಚರಿತ್ರೆಯಲ್ಲಿ ಘಟಿಸಿಹೋದ ಆಂದೋಲನಗಳ ದೃಷ್ಟಿಯಿಂದ **ವಿಶಾಲ ಪರಿವರ್ತನೆ**ಗಳ ರೂಪ ದಲ್ಲಿ ಹೆಚ್ಚು ಬಿಂಬಿಸಬೇಕು. ಇದೂ ಒಂದು ಬಗೆಯ ಸಮಗ್ರ ದೃಷ್ಟಿಯೇ. ಯುರೋಪದಲ್ಲಿಯ ಪುನರುಜ್ಜೀವನ, ಕ್ಯಾಥೋ-ಲಿಕ್ ಧರ್ಮ ಸಾಮ್ರಾಜ್ಯ, ಧರ್ಮ-ಸುಧಾರಣೆ, ಸರಂಜಾಮೀ ಪದ್ಧತಿಯ ವಿಕಾಸ, ಇಂಗ್ಲಂಡದಲ್ಲಿಯ ಪ್ರಜಾಪ್ರಭುತ್ವದ ಸಂಘರ್ಷ ಮತ್ತು ಉತ್ಕರ್ಷ, ಫ್ರೆಂಚರ ರಾಜ್ಯಕ್ರಾಂತಿ, ಔದ್ಯೋ-ಗಿಕ ಕ್ರಾಂತಿ, ಅಮೇರಿಕೆಯ ಉದಯ-ವಿಕಾಸ, ಬ್ರಿಟಿಶ್ ಸಾಮ್ರಾ ಜ್ಯದ ಸಿಂಹಾವಲೋಕನ (ಇಂದಿನ ಆ ಬ್ರಿಟಿಶ್ ಸಿಂಹದ ಜರಾ ಜರ್ಜರ ಸ್ವರೂಪವನ್ನೂ ತಿಳಿಸಬೇಕು)—ಹೀಗೆ ಕೆಲವೊಂದು ಘಟ್ಟಗಳ ಸನುಸ್ಯೆಗಳ, ಮತ್ತೂ ಸಂಸ್ಥೆಗಳ ಬೆಳೆವಣಿಗೆ-ಬಗೆಹರಿಕೆಗಳ ರೂಪದಲ್ಲಿಯೇ ಆದಷ್ಟು ಇತಿಹಾಸವನ್ನು ಮಂಡಿಸಬೇಕು. ಹಾಗೆ ಮಾಡಿದರೆ, ಒಟ್ಟು ಜ್ಞಾನ ನಿಶ್ಚಿತವಾಗಿ ನಿಲ್ಲುತ್ತದೆ. ಅಡನಿಯ ಸ್ವರೂಪವನ್ನು ಅರಿತುಕೊಳ್ಳಲು ಮರಗಳನ್ನು ಎಣಿಸುತ್ತಹೋದರೆ ಗ್ಯಾಡಿನಲ್ಲಿ ಕಂಗೆಡುವುದೇ ಸರಿ—ಎಂಬುದನ್ನು ಮರೆಯಬಾರದು.

ನಮ್ಮಲ್ಲಿ ಐತಿಹಾಸಿಕ ವಾಙ್ಮಯದ ಅಭಾವವಿದೆ. ಒಳ್ಳೆಯ ಪಠ್ಯ ಪುಸ್ತಕಗಳೂ ಇಲ್ಲ. ಪ್ರಾಥಮಿಕ ಶಿಕ್ಷಣದ ಕೆಲವು ಮಟ್ಟದಲ್ಲಿ ಮಕ್ಕಳಿಗೆ ಸುಬೋಧವಾಗುವಂತೆ ಬರೆದ ಕೃತಿಗಳೇ ಇಲ್ಲ. ಹಾಗೆಯೇ ಮೇಲೆ ಕಾಣಿಸಿದ ಯೋಜನೆಗೆ ಸರಿ ಹೋಗುವಂತೆ ಬರೆದ ಮೇಲ್ತರ-ಗತಿಯ ಪುಸ್ತಕಗಳೂ ಕಡಿಮೆ. ಸಂಕ್ಷಿಪ್ತ ಜಾಗತಿಕ ಇತಿಹಾಸದ ಮಟ್ಟಿಗೆ ಎಚ್. ಜಿ. ವೆಲ್ಸ್‌ರ ಚಿಕ್ಕ ಹೊತ್ತಿಗೆಯನ್ನು ಜೆನ್ನಾಗಿ ಉಪಯೋಗಿಸಿಕೊಳ್ಳಬಹುದು. ಆ ಮಾದರಿಯ ಸ್ವತಂತ್ರ ಕೃತಿಯು ಕನ್ನಡದಲ್ಲಿ ಹುಟ್ಟುವನಕ, ಅದನ್ನೇ ಕನ್ನಡಿಸಿ ಬಳಸು-ವುದು ಕ್ಷೇಮವು.

ಪಠ್ಯಪುಸ್ತಕಗಳಂತೆಯೇ ಪುರವಣಿ ವಾಚನಕ್ಕೆ ಕೂಡ ಯೋಗ್ಯ ಪುಸ್ತಕಗಳಿಲ್ಲ. ನಮ್ಮಲ್ಲಿ ಇತಿಹಾಸ ತಜ್ಞರು ಇಲ್ಲವೆಂದಲ್ಲ. ಆದರೆ ಅವರು ಜನಸಾಮಾನ್ಯರನ್ನು ಕುರಿತು ತಮ್ಮ ಹೊಣೆಯನ್ನು ಮರೆ-ತಂತಿದೆ. ಮರಾಠಿಯಲ್ಲಿ ಈ ದೃಷ್ಟಿಯಿಂದ ವಿದ್ಯಾರ್ಥಿಗಳು ಹೆಚ್ಚು ಭಾಗ್ಯವಂತರು. ಶ್ರೀ. ಸರದೇಸಾಯಿಯಂಥವರು ಪಂಡಿತರಿಗಾಗಿ ಸಂಶೋಧನಯುಕ್ತವಾದ ಉದ್ದ್ರಂಥಗಳನ್ನು ಬರೆಯುವಂತೆ, ಅಧಿ-ಕೃತ ಕ್ರಮಿಕ ಪುಸ್ತಕಗಳನ್ನೂ ಬರೆಯುವುದು ತಮ್ಮ ಪ್ರತಿಭೆಗೆ ಕುಂದೆಂದು ಭಾವಿಸಲಿಲ್ಲ. ಹಾಗೆಯೇ ಭಾವೆ, ಜೋಶಿ, ಓತುರಕರ್ ಮುಂತಾದವರು ಶಿಕ್ಷಣಕ್ಕೆ ಮಹದುಪಕಾರಮಾಡಿದ್ದಾರೆ. ಪ್ರಾಥ-ಮಿಕ ಮಾಧ್ಯಮಿಕ ಮಟ್ಟಗಳಿಗೆ ಸರಿಯಾಗಿಯೇ ಜ್ಞಾನಗುಣವುಳ್ಳ ಗ್ರಂಥಗಳನ್ನು ಅವರು ಪ್ರಕಟಿಸಿದ್ದಾರೆ. ನಮ್ಮಲ್ಲಿ ಹಾಗಿಲ್ಲ!—ಹೇಗೂ ಇಲ್ಲ! ಇಷ್ಟೊಂದು ತೀವ್ರ ಕೊರತೆ ಐತಿಹಾಸಿಕ ಲಲಿತ ವಾಙ್ಮಯದ್ದು. ಮರಾಠಿಯಲ್ಲಿ (ಉದಾಹರಣೆಗಾಗಿ) ಶಿವಛತ್ರ ಪತಿಯ ಕುರಿತು ಅನೇಕ ಕಾದಂಬರಿಗಳಿವೆ. ಮರಾಠರ ಇತಿ-ಹಾಸದ ಮೇಲೆ ಅನೇಕ ಪ್ರಸಿದ್ಧ ನಾಟಕಗಳಿವೆ. ನಾಥ-ಮಾಧವರು ಸ್ವರಾಜ್ಯದ ಕುರಿತೇ ಹಲವು ಕಾದಂಬರಿಗಳನ್ನು ಬರೆದರು; ಹಡಪದರು ವೇಶ್ಯಾಯಿಯ ಮೇಲೆಯೇ ಮತ್ತೊಂದು ಕಾದಂಬರೀ ಮಾಲೆಯನ್ನು ಪೋಣಿಸಿದರು. ಹಾಗೆಯೇ ಸ್ಫೂರ್ತಿ-ದಾಯಕ ಪೋವಾಡೆಗಳೂ ಸಾಕಷ್ಟು ಇವೆ. ಆದರೆ ನಮ್ಮಲ್ಲಿ ಶ್ರೀ. ಗಳಗನಾಥರ ಕೆಲವೇ ಕೃತಿಗಳು; ಬೆಟಗೇರಿಯವರ ಎರಡು ಕಾದಂಬರಿಗಳು. ದೇವಡು ಅವರ 'ಮಯೂರ,' ಮುಗಳಿಯವರ 'ವಿಜಯಸಾಮ್ರಾಜ್ಯ'—ಮುಂದೆ? ಮುಂದೆ ಮುಕ್ತಾಯ! ಐತಿಹಾಸಿಕ ಕವನಗಳನ್ನು ನಮ್ಮ ವರಕವಿ-ನರಕವಿಗಳು ರಚಿಸುವಷ್ಟು ಸ್ಫೂರ್ತಿಯನ್ನೋ ಸಮಯವನ್ನೋ ಪಡೆದಿಲ್ಲ. ಇನ್ನಾದರೂ ಈ ಅನಾಸ್ಥೆ ದೂರವಾಗಲಿ. ಕನ್ನಡ ಮಕ್ಕಳ ಕೌತುಕದ ಕಣ್ಣುಗಳಿಗೆ ಗತೇತಿಹಾಸವು ಸಜೀವ ಆವರಣವಾಗಿ, ಉಜ್ವಲ ಚಲಚ್ಚಿತ್ರವಾಗಿ ನಿಂತು ನಲಿದಾಡಿ ಬೆಳಕನ್ನು ಕೊಡಲಿ. ಕಾರಂತರು ಏಕಾಕಿಯಾಗಿ ಅಸಹಾಯಶೂರರಾಗಿ ಮಾನವ ಸಂಸ್ಕೃತಿಯ ಚಿತ್ರಗಳನ್ನು ಛಾಯೆಯಲ್ಲಿಯೋ, ನಾಟ್ಯದಲ್ಲಿಯೋ, ಗೀತರೂಪಕಗಳಲ್ಲಿಯೋ ಕೆಲವೊಂದು ರಚಿಸಿದಂತೆಯೇ, ಅಂಥ ಧನ್ಯ ಸಾಹಸವು ಅಖಿಲ ಕರ್ನಾಟಕದಲ್ಲಿ ಅನೇಕ ಶಿಕ್ಷಣ ಸಂಸ್ಥೆ-ಗಳಿಂದ ಅನಂತವಾಗಿ ಸಾಗಲಿ.

ಇತಿಹಾಸಜ್ಞಾನವು ಒಂದು ಒಣ ಸಂಭಾರವಾಗಿ ಬರದೇ ಜೀವಂತ ಸಂಸ್ಕಾರವಾಗಿ ಬೆಳೆಯಬೇಕು. ಅಂದರೇನೇ ಅದು ಇಂದಿನ ಸಂಸ್ಕೃತಿಗೂ ನುಂದಿನ ಪ್ರಗತಿಗೂ, ಸದಾಕಾಲದ ಕರ್ತವ್ಯಜಾಗೃತಿಗೂ ಕೈದೀಪವಾಗುವುದು. ಅನುಭವವನ್ನು ಹೊರತಾಗಿ ಎಲ್ಲ ಜ್ಞಾನವೂ ಐತಿಹಾಸಿಕವೇ. ಇತಿಹಾಸದೊಂದಿಗೆ ಎಲ್ಲ ಜ್ಞಾನದ **ಅನುಬಂಧ** (Correlation) ಹೊಂದಿಸು ವಂತಿದೆ. ತನ್ನ ಇತಿಹಾಸವನ್ನು ತಾನು ಅರಿಯದ ಜನ, ಬರೇ ಜನ. ಆದ್ದರಿಂದ ಕನ್ನಡ ಶಿಕ್ಷಣದ ನವಸಂಘಟನೆಯಲ್ಲಿ ಇತಿಹಾಸಕ್ಕೆ ತಕ್ಕ ಗೌರವವು ದೊರೆಯಲಿ.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಮೊರೆ

ಶ್ರೀ. ಎಸ್. ಎಸ್. ಬಸುಪಟ್ಟದ ಬಿ. ಎ (ಆನರ್ಸ್) ಸೊಲ್ಲಾಪುರ

★

ಅಣತಿಯ ಕೊಡು ತಾಯೆ
ಬರುವೆ ನಿನ್ನೆಡೆಗೆ—
ಮುಡಿಸಿಡುವೆ ನಲ್ವಾಯೆ
ಹರಣ ನಿನ್ನಡಿಗೆ— ॥ ೧ ॥

ಕಳುಹಿಸಿತು ಜಗಕಂದು
ನಿನ್ನ ನುಡಿ ಹರಸಿ—
ತಿಳುಹಿಸಿತು ಜಗದಿಂದು
ಎಲ್ಲವನು ನುರೆಸಿ— ॥ ೨ ॥

ಬಿರುಗಾಳಿ ಬೀಸುತಿದೆ
ಭೀಕರತೆ ತಾಳಿ—
ಕಾಳ ಕಗ್ಗತ್ತಲೆಯೆ
ಬಂತು ಮೈತಾಳಿ—. ॥ ೩ ॥

ಹಾದಿಗಾಣದ ಕುರುಡ-
ನಾಗಿಹೆನು ಇಂದು—
ಭೀಕರತೆಗೆದೆಗೊಡದ
ಭೀರು ನಾನಿಂದು—. ॥ ೪ ॥

ಬದುಕುವುದು ಇನ್ನೆಂತು
ಈ ಜಗದಿ ನಾನು ?
ಹೇಳು ನಿಲ್ಲಲಿ ಎಂತು
ಕೈಬಿಡಲು ನೀನು—. ॥ ೫ ॥

ನನ್ನ ಕಜ್ಜಕೆ ನಾನು
ತಪ್ಪಿ ನಡೆದಿಲ್ಲ....
ನಿನ್ನ ಮಾತಿಗೆ ನಾನು
ಎದುರು ನುಡಿದಿಲ್ಲ—. ॥ ೬ ॥

ಇಳೆಯ ಇರವಿನ ಭೀತಿ
ಕಂಗೆಡಿಸಿತೆನ್ನ—
ಇಳೆಯ ಡಾಂಭಿಕ ರೀತಿ
ಮತಿಗೆಡಿಸಿತೆನ್ನ—. ॥ ೭ ॥

"ತನ್ನವರು ನನ್ನವರು
ಎಂಬವರು ಮಿಥ್ಯ"—
ಎಂಬ ನುಡಿಯನು ಇಂದು
ತೋರಿಸಿತು ಸತ್ಯ. ॥ ೮ ॥

ಎತ್ತಿ ನಾ ತೆಗೆದುಕೊಳೆ
ಹೂವೆ ಹಾವಾಯ್ತು ;
ದೈವ ಮುನಿದಿರಲಿಂತು
ಬೆಲ್ಲ ಬೇವಾಯ್ತು. ॥ ೯ ॥

ಈ ಜಗದಿ ಬಂಡೆಲ್ಲ
ಭೋಗಿಸಿದುದಾಯ್ತು ;
ಒಲ್ಲೆನೊಲ್ಲೆನು ತಾಯೆ
ಬಾಳು ಸಾಕಾಯ್ತು. ॥ ೧೦ ॥

ಬರುವೆ ನಿನ್ನೆಡೆ ತಾಯಿ
ಎತ್ತಿಕೊಳು ಬಂದು ;
ತಪ್ಪ ಮನ್ನಿಸಿ ಕಾಯಿ
ಮೈದಡಹಿ ಇಂದು— ॥ ೧೧ ॥

ಬಗೆದೊಡೆಲ್ಲಿಯು ನೀನೆ
ಕಾಣುತಿಹೆ ಸತ್ಯ—
ಹೊರಗಣ್ಣಿಗೇಕೊ ನೀ
ಕಾಣದಿಹೆ ನಿತ್ಯ ! ॥ ೧೨ ॥

ಅಗ್ನಿಜಲ!

ಶ್ರೀ. ವಿರೇಶ್ವರ, ಶಿಗ್ಗಾಂವಿ

ನನ್ನ ಕಣ್ಣೀರಿನೊಳೆ ಮುಳುಗಿ ಸಾಯುವೆ ನಾನು !
ಇದುವೆ ಸುಖ,—ಇನ್ನಿಲ್ಲ ನನಗೆ ಯಾವ ಭಯ !!
ಇಚ್ಛೆಯಂತಾದುದಕ್ಕೇಕೆ ಚಿಂತಿಸಬೇಕು ?
ನನ್ನ ಮರಣಕೆ ಮರುಗ ಬೇಡ ಗೆಳೆಯ ! ॥ ೧ ॥

ಸೇವೆಯೇ ಜೀವನವ ಧ್ಯೇಯವೆನ್ನವವಂಗೆ
ಸುಖ-ದುಃಖ, ಸಾವುಗಳ ಪರಿವೆಯೇಕೆ ?
ತನ್ನ ಸೇವೆಯ ಫಲವು ತನ್ನವರ ಸುಖಕಾಗಿ
ಮೀಸಲೆನುವನ ದುಃಖಕರ್ಥ ಬೇಕೆ ? ॥ ೨ ॥

ಆ ಕಾಲವೊಂದಿತ್ತು, ಚೈತನ್ಯ ತುಂಬಿತ್ತು
ಜನ-ಜೀವನೋನ್ನತಿಗೆ ಹೋರಾಡಿದೆ !
ಹೋರಾಡಿ ಜಯಿಸಿದರೆ ಸುಖವೆಂದು ತಿಳಿಯದಲೆ
ಹೋರಾಟವೇ ಸುಖವು ಎಂದು ತಿಳಿದೆ ! ॥ ೩ ॥

ಇದುವೆ ಸೇವೆಯ ಸತ್ಯ, ಉಳಿದುದೆಲ್ಲವು ಮಿಥ್ಯ
ತನ್ನರಿವೆ ಗುರುವೆಂಬುದೆಂದಿಗೂ ಸತ್ಯ ;
ತನ್ನ ತಿಳಿವಿನ ದಾರಿಯೊಳು ಮುಳ್ಳು ಬೆಳೆದಿರಲಿ,
ವಿಶ್ವಾಸವಿಡಲದುವೆ 'ಹೂದಾರಿ' ಸತ್ಯ ! ॥ ೪ ॥

ನನ್ನ ಕಣ್ಣೀರಿನಲೆ ಮುಳುಗಿ ಸಾಯುವೆ ನಾನು !
ಇದುವೆ ಸುಖ, ಇನ್ನಿಲ್ಲ ನನಗೆ ಯಾವ ಭಯ !!
ಇಚ್ಛೆಯಂತಾದುದಕ್ಕೇಕೆ ಚಿಂತಿಸಬೇಕು ?
ನನ್ನ ಮರಣಕೆ ಮರುಗಬೇಡ ಗೆಳೆಯ ! ॥ ೫ ॥

ನನ್ನ ಈ ಕಣ್ಣೀರು ತಣ್ಣನೆಯ ನೀರಲ್ಲ !
ನೋವು-ನಲಿವಿನ ಕುಲುಮೆಯೊಳು ಕಾಯ್ದು ಜಲವು !
ಸುಖ-ಸಮತೆಯುದಯಕ್ಕೆ ದುಃಖ, ದಾರಿದ್ರ್ಯ, ಮೇಣ್
ಕಷ್ಟ, ಕ್ಲೇಶಗಳ ಸುಡುವಾ 'ಅಗ್ನಿಜಲವು !' ॥ ೬ ॥

ನೆರೆ-ಹೊರೆ

(ಎಲ್ಲಯೂ ನಡೆಯುವ ಹುಚ್ಚಾಟ)

ಶ್ರೀ-ಲಕ್ಷ್ಮಣಾಚಾರ್ಯ

★

ಪಾತ್ರಗಳು

೧. ಶ್ಯಾಮಣ್ಣ ೨. ಇಂದ್ರಾಬಾಯಿ (ಶ್ಯಾಮಣ್ಣನ ಹೆಂಡತಿ)
೩. ರಾಮಣ್ಣ ೪. ಚಂದ್ರಾಬಾಯಿ (ರಾಮಣ್ಣನ ಹೆಂಡತಿ)
೫ ವಿಟ್ಠಲ(ಶ್ಯಾಮಣ್ಣನ ಮಗ) ೬. ಅಂಬು(ರಾಮಣ್ಣನ ಮಗಳು)
೭. ಗೋಪಾಳರಾಯರು (ಇಬ್ಬರಿಗೂ ಸ್ನೇಹಿತ)

★

[ರಾಮಣ್ಣನ ಮನೆಯಲ್ಲಿ ಶ್ಯಾಮಣ್ಣ ಬಾಡಿಗೆಯಿರುತ್ತಾನೆ.—ಇಬ್ಬರೂ ನೆರೆಕೊರೆಯುವರು. ವಿಟ್ಠಲ ಮತ್ತು ಅಂಬು—ಇಬ್ಬರ ವಯಸ್ಸನ್ನು ಸುಮಾರಾಗಿ ೭-೮ ವರ್ಷ. ಗಂಡ-ಹೆಂಡತಿ ಆಗಿ ಆಡುತ್ತಿರುತ್ತಾರೆ. ಅಂಬು ತೋಳದ ಅರಳಿನ ಕಡಿಗಡಬು, ಬೆಲ್ಲದ ಚೂರಿನ ತಾಯಿಗೆ ಸಾಯುವ ಪಾಡಿ, ವಿಟ್ಠಲನಿಗೆ ಊಟಕ್ಕೆ ಬಡಿಸಿರುತ್ತಾಳೆ-ಅವನು ತೀರ ಬೇಡುತ್ತಾನೆ. ಅಂಬು ತೀರುತರಲು ದಾಸಿಗೆ ಹೋಗ ತ್ತಾಳೆ. ಆಗ ವಿಟ್ಠಲನು, ಅಂಬು ತನಗಾಗಿ ಇಟ್ಟುಕೊಂಡದ್ದನ್ನೆಲ್ಲ—ಅಳಿ ಬಾಳದದರೊಳಗಾಗಿ—ತಿಂದು ತೀರಿಸಿ-ಬಿಡುತ್ತಾನೆ. ವಿಟ್ಠಲ ಮಾಡಿದ್ದನ್ನು ನೋಡಿ, ಅಂಬುವಿಗೆ ತೀರ ಸಿಟ್ಟು-ಬಂದು, ಅತನನ್ನು ಚಿತ್ತರಿಸಿಕೊಳ್ಳುತ್ತಾಳೆ- ವಿಟ್ಠಲ ಅವಳ ಕೂದಲನ್ನು ಬಿಡಿದು ಜಗ್ಗುತ್ತಾನೆ- ಅಂಬು ವಿಟ್ಠಲನ ಕೈ ಕಚ್ಚುತ್ತಾಳೆ; 'ಅಕ್ಕಾ,' 'ಬೋಳ್ಳಾ,' 'ಬಕ್ಕಾ,' 'ರಂಡೆಗಂಡಾ' ಎಂದು ಬೈಯುತ್ತಾಳೆ-ಬಡಿದಾಟ ಪ್ರಾರಂಭವಾಗುತ್ತದೆ. ಆಗ ವಿಟ್ಠಲನ ಮನೆಯಲ್ಲಿ ಅವನ ತಂದೆ ಶ್ಯಾಮಣ್ಣ ಪತ್ರ ಬರೆಯುತ್ತ ಕೂತಿರುತ್ತಾರೆ. ಅವರ ಹೆಂಡತಿ ಇಂದ್ರಾಬಾಯಿ, ಸ್ನಾನದ ಸಿದ್ಧತೆಯಲ್ಲಿರುತ್ತಾಳೆ. ವಿಟ್ಠಲನ ಅಳುವ ದನಿ ಕೇಳಬರುತ್ತದೆ.]

ಶ್ಯಾಮಣ್ಣ :—ವಿಠ್ಯಾನ ಅಳೋ ದನಿ ಕೇಳಸ್ತದ! ಏನಾತ್ಯು ನೋಡು. ಕೇಳಿಸತೇನು? ಏನು? ಏನ್ಮಾಡ್ತೀ ಒಳಗ? ನೋಡಬಾರದ ಸ್ವಲ್ಪು!

ಇಂದ್ರಾ :— ನಾ ಈಗ ಹೊರಗ ಬರೋಹಾಂಗಿಲ್ಲ, ಅಡ್ಡ-ಹಚಿಗೊಂಡೀನಿ! ನೀವs ಹೋಗಿ ನೋಡಿರಪ್ಪು.

ಶ್ಯಾಮು :— ನೀ ಅಡ್ಡ ಹಚಿಗೊಂಡೀದೀ; ನಾ ಇಲ್ಲೆ ಒಂದು ಉದ್ದ ಪತ್ರಾ ಬರೀಲಿಕ್ಕೆ ಕೂತೇನಿ! ಈಗ ಬಿಟ್ಟರ ಅಲ್ಲಿಗೇ ಉಳದುಬಿಡ್ತsದ; ನೀನs ಬ್ಯಾರೇ ಹಚಿಗೊಂಡು ಹೋಗು.

ಇಂದ್ರಾ :— ನಾವು ಅಡ್ಡಾಉದ್ದಾ ಅಂತ ಕೂತರ, ಅಲ್ಲೆ ಕೂಸಿನ ಪ್ರಾಣಾ ತೊಗೋತಾಳ ಆ ಸುಟ್ಟ ಹುಡಿಗಿ! ಹೋಗ-ಬಾರದಿರ್ಯಾ? ನಿಮ್ಮ ಪತ್ರಕ್ಕ ಬೆಂಕೀಹಚ್ಚಿತು! ಅಲ್ಲೆ ಕೂಸಿನ ಪ್ರಾಣಹೋಗ್ತದ!

[ಅಷ್ಟರಲ್ಲಿ ವಿಟ್ಠಲ ಅಳುತ್ತ, ಚೀರುತ್ತ ಇರುತ್ತಾನೆ. ಇಂದ್ರಾಬಾಯಿ ಅವನನ್ನು ಸಮಾಧಾನಪಡಿಸಿ, ಬೇರೆ ಉಟ್ಟುಕೊಂಡು, ತೆರೆಮರೆಯ ಚಂದ್ರಾಬಾಯಿಯಮನೆಗೆ ಬರುತ್ತಾಳೆ. ಚಂದ್ರಾಬಾಯಿ ಬಾಗಿಲದಲ್ಲಿ ನಿಂತು, ಅಂಬುವನ್ನೆ ಸಮಾಧಾನ ಮಾಡುತ್ತಿರುತ್ತಾಳೆ. ಇಬ್ಬರೂ ತಾಗ್ಯುದ್ದ ಪ್ರಾರಂಭವಾಗುತ್ತದೆ.]

ಇಂದ್ರಾ:— ಏನ್ರೆವಾ ನಿಮ್ಮ ಹುಡಿಗಿ! ಬ್ರಮ್ಹೇತಿ! ಇದು ನೋಡ್ರಿ, ಹುಡುಗನ ಕೈ ರಾಮಾ-ರಗತಾಗೇದ!

ಚಂದ್ರಾ:— ಮತ್ತ ನಿಮ್ಮ ಹುಡುಗೇನು ಒಳ್ಳೆಯವನ್ರೆವಾ? ಕೂದಲಾ ಹಿಡದು, ನೊದಲ ನಿಮ್ಮ ಯಿಠ್ಯಾನs ಜಗ್ಗಿದನಂತ! ಒಮ್ಮಿಲ್ಲೊಮ್ಮೆ ಆಕೀ ಪ್ರಾಣಾ ತೊಗೋತಾನ! ನಮ್ಮದು ಹೇಳಕೇಳಿ ಸಣ್ಣ ಹುಡಿಗಿ....ಅದೇನು ಹೊಡದೀತು!

ಇಂದ್ರಾ:—ಸಾಕು, ಹೇಳಬ್ಯಾಡ ಬಿಡ್ರಿ! ಎಲ್ಲಾ ಸತ್ತು ದೇವರs ಅಂತ ಇದೊಂದು ಉಳದsದ! ಅದು ಸಹ ನಿಮಗ ಸಹನ ಇಲ್ಲ. ನಮ್ಹಾಂಗs ನಿಮ್ಮವೂ ನಾಲ್ಕು ಹೋಗಿದ್ದರ.....

ಚಂದ್ರಾ:—ನಿಮಗ ಹುಡುಗರು ದಕ್ಕದಿದ್ದರ ನಮ್ಮನ್ಯಾಕ ಶ್ರಾಪಸ್ತೀರಿ? ಮಂದೀ ಮಕ್ಕಳು ಸಾಯಲಿ ಅಂದರ, ನಿಮ್ಮ ಮಕ್ಕಳಿಗೆ ಆಯುಷ್ಯ ಬರ್ತsದೇನು? ಇನ್ನ ಮ್ಯಾಲ, ನಮ್ಮ ಹುಡಿಗ್ಗ ಕೈ ಒಂದs ಹಚ್ಚಲಿ ಆ ರಂಡೇಗಂಡ; ಅವನ ಕೈ ಕಡದು ಬಂಬಿನ್ಯಾಗಿಡ್ತೀನಿ!

ಇಂದ್ರಾ:—ಯಾರ ಕೈ ಕಡತೀರೇ? ನಿಮ್ಮ ಅಂಬೀ ಬಾಯೀನs ಸೇದಿಹೋಗಲಿ! ಕೈ ಕಳಚಿ ಬೀಳಲಿ! ತಲಿ ಸಿಡದು ಹೋಗಲಿ! ಮೈಯಾಗ ಸೆಟಬ್ಯಾನಿ ಹಾಯಲಿ!

(ಅಷ್ಟರಲ್ಲಿ ಚಂದ್ರಾಬಾಯಿಯು ಗಂಡ ರಾಮಣ್ಣ ಹೊರಗಿಂದ ಬರುತ್ತಾನೆ. ಅವನ ತಿಂಡಿಗೆ ಇಂದ್ರಾಬಾಯಿಯು ಪೂರಸು ಇಕ್ಕುತ್ತಾಳೆ.)

ರಾಮಣ್ಣ:—ಏನದು? ಏನು ಒದರ್ಯಾಟ?

ಚಂದ್ರಾ:—ಅಂಬು ಯಿಟ್ಯಾ ಜಗಳಾಡಿದವಂತ. ಮಗನ ಬೆನ್ನ ಕಟಗೊಂಡು ಬಡದಾಟಕ್ಕ ಬಂದಾರ. ಮತ್ತ ಮ್ಯಾಲ ನಮ್ಮ ಕೂಸಿನ್ನ ಸುಟ್ಟ ಸುಟ್ಟ ಶ್ರಾಪಸ್ತಾರ! ಯಿಟ್ಯಾ ಕೂದಲಾ ಹರಕೊಂಡರ ಕೂಸು ವಿಲಿವಿಲಿ ಒದ್ದಾಡ್ತುತ್ಯೆ!

ಇಂದ್ರಾ:—ಒದ್ದಾಡಲಿಕ್ಕೆ ಅದಕ್ಕೇನು ಧಾಡಿ ಆಗೇದ! ಹುಡಿಗೇ ಅದು! ಮನಸ್ಯಾರ್ನ ಹರಕೊಂಡು ತಿಂಬೋ ರಕ್ಕಸಿ! ಇನ್ನೊಮ್ಮೆ ನಮ್ಮನ್ಯಾಗ ಕಾಲೊಂದs ಇಡಲಿ, ಹುಚ್ಚಮುಂಡಿ! ಎತ್ತಿ ಭಾವ್ಯಾಗ ಹಾಕ್ತೇನಿ!

ಚಂದ್ರಾ:—ನಿಮ್ಮಗನ್ನs ಹಾಕರಿ ಒಯಿದು! ಮುಂಚೀವು ನಾಕು ಹೋದ್ಮಾಂಗ ಇದೂ ಹೋಗಲಿ! ಹಿಂದಿನ ಜನ್ಮದಾಗ ಮಾಡಿದ್ದರ ಫಲಭೋಗ, ಈಗ ನಿಸ್ಸಂತಾನ ಆಗಿ ಉಣ್ತೀರಲ್ಲ! ಸಾಕಾಗಲಿಲ್ಲೇನೋ!

ಇಂದ್ರಾ:— ನಮಗೇನು ಕಡಿಮ್ಯಾಗೇದ ಪಾಪಾಮಾಡಿ ಹುಟ್ಟಲಿಕ್ಕೆ? ನೀವs ಅಂಥಾ ಪಾಪಾ ಮಾಡಿದ್ದೀರಿ! ಅಂತs

ಕೈಸೋಶಿನ್

●

ಎಂಥ

ಕೆಮ್ಮಿದ್ದರೂ

ಕೂಡಲೆ ಗುಣ-

ಪಡಿಸುವುದು.

●

ಏಜೆಂಟರು,

ಸ್ಟಾಕಿಸ್ಟರು

ಬೇಕು.

ಕೂತೀರಿ ಕಟಬೋ ಅಂತ! ನೆತ್ತಿಗಿದ್ದರ ಹೊಟ್ಟೆಗಿಲ್ಲ, ಹೊಟ್ಟೆಗಿದ್ದರ ನೆತ್ತಿಗಿಲ್ಲ!

ರಾಮಣ್ಣ :— ಯಾಕ, ನಿಮ್ಮ ಗಂಡ ಕಜೇರ್ಯಾಗ ದೊಡ್ಡ ನೋಕರೇ ಮಾಡ್ತಾನಕ ಅಂತ ನಮ್ಮೆದುರಿಗೆ ದಿಮಾಕ ತೋರಸ್ತೀರೇನು? ಅಧಿಕಾರ ಇದ್ದರ ಕೈಕೆಳಗಿನ ಗುಮಾಸ್ತರ ಮ್ಯಾಲ ಜಬರು ತೋರಸರಿ! ನಮಗೇನು ಮಾಡ್ತೀರಿ! ನಾಲ್ಕೀ ಬಿಗಿಹಿಡಿದು ಮಾತಾಡ್ರಿ. ಮನೀ ಬಾಡಿಗಿ ಕೊಡಲಿಕ್ಕೆ ಅಳತೀರಿ! ಮೂರು ತಿಂಗಳ ಬಾಡಿಗಿ ನಿಂತಕದ. ನಾಚಿಗಿ ಬರೂದಿಲ್ಲ? ನಾಳೇ ಹೊರಗ ಹಾಕೇನು! ನಿಮ್ಮ ಜರಬು ನಮ್ಮುಂದ ತೋರಸಬ್ಯಾಡ್ರಿ!

[ಈ ಮಾತು ಕೇಳಿ ಶ್ಯಾಮಣ್ಣ ರೇಗಿಕೊಂಡೇ ಹೊರಗೆ ಬರುತ್ತಾನೆ.]

ಶ್ಯಾಮಣ್ಣ :— ಯಾಕರೀ? ಯಾರ ನಾಚಿಗೀ ತಗೀತಿರಿ? ಮನೀ ಮಾಲಕರು ಅಂತ ಮಾತಾಡ್ತಿರೇನು? ಐದು ರೂಪಾಯಿ ಬಾಡಿಗೀ ಮನೀಗ ಇಪ್ಪತ್ತೈದು ರೂಪಾಯಿ ಬಾಡಿಗಿ ಕೊಗೋತೀರಿ! ಸುಣ್ಣಾ ಹೆಚ್ಚಿಕೊಟ್ಟಲ್ಲಾ ಅಂತ ಬಾಡಿಗಿ ಹಿಡದಿಟ್ಟೀನಿ! ಹಣಿಗೆ ತೂತು ಬೀಳೋಹಾಂಗ ಒಗದೇನು! ಬಾಯಿ ಬಿಗಿಹಿಡಿಯ ಮಾತಾಡ್ರಿ!

ರಾಮಣ್ಣ :— ತೂತು ಬಿದ್ದರೂ ಅಡ್ಡಿಯಿಲ್ಲ, ಒಗದವರs ಒಗಸಿ ನೋಡೋಣು! ನಿಮ್ಮ ಕೈಯಾಗೇನದ! ಹೇಣ್ತೀ ಕೈಯಾಗಿನ ಗುಳಾಮು!

ಶ್ಯಾಮಣ್ಣ :— ಏ, ಬಾಯಿ ಬಿಗಿ ಹಿಡಿದು ಮಾತಾಡ ಅಂದೆ! ಮಗ್ಗಲಾನs ಮುರದೇನು, ಹೆಚ್ಚು ಮಾತಾಡೀ ಅಂದರ!

ರಾಮಣ್ಣ :— ಅದಕ್ಕ ಪರವಾನಗೀ ತೊಗೊಂಡೀರೇ ಮನಿಯವರದು?

ಇಂದ್ರಾ :— ನಮಗ್ಯಾಕಂತೀರೀ? ನಿಮ್ಮ ಹೆಣ್ತೀನ್ನ ಕೈಯಾಗಿಟ್ಟುಗೊಳ್ರಿ, ಸಾಕು! ಊರ ಕಳ್ಳಿ! ಒಣಹಾಕಿದ ಕೂಸಿನ ಆಂಗಸಹ ಬಿಡೂದಿಲ್ಲ! ಬಟ್ಟಾ, ಚಮಚೆ ಅಂತೂ ಎಷ್ಟು ನಿಮ್ಮ ಮನೀ ಸೇರ್ಯಾವೋ ಯಾರು ಬಲ್ಲರು!

ಚಂದ್ರಾ :— ನಾ ಕಳ್ಳಿ? ಕಡಾ ಅಂತ ಉಳ್ಳಾಗಡ್ಡಿ ಇಸಗೊಂಡು ಹೋದದ್ದು ಇನ್ನೂ ಅದರೂ ತಂದುಕೊಟ್ಟೀರೇನು! ಗಂಡಗ ತಿಳೀದಾಂಗ ಅಕ್ಕೀ-ಬ್ಯಾಳಿ ಮಾರಿಕೋತೀರಲ್ಲ! ಭಂಗಾ ಕಲಾಯಿ ಮಾಡಿಸಿದ ಬಿಲ್ವರ ಹಾಕ್ಕೊಂಡು, ಶ್ರೀಮಂತಿಕೀ ಜಂಭ ತೋರಸಬ್ಯಾಡರಿ! ನಿಮ್ಹಾಂಗ ನಾನು ಗಂಡನ ಕಣ್ಣು ತಪ್ಪಿ ತವರಮನೀ ತುಂಬೂದಿಲ್ಲ! ಇಮನೀ ಗಂಡನ ಹೇಣ್ತಿ ಅಂತ ಐಟ ನೋಡ್ರಿ! ಹಾಂಗ ಹರೇದ ಗಂಡ ಸಿಕ್ಕಿದ್ದರ ಎಷ್ಟು ಉರೀತಿದ್ರೋ ಏನೋ!

ಶ್ಯಾಮಣ್ಣ :— ನನ್ನ ಮುಪ್ಪು-ಹರೆ ತೊಗೊಂಡು ನಿಮಗೇನ ಮಾಡೋದದ! ನಿಮ್ಮ ಗಂಡ ಎಷ್ಟು ಹರೇದವ ಇದ್ದಾನ? ತಂ ಅಂಬೋದು ಜುಬ್ರ ತಗದ ಟಿಂಗಿನ ಚಿಪ್ಪಾಗೇದ! ಉಲು ಹಾಕ್ಕೋ ಬೇಕಂದ್ರೂ ಒಂದು ಕೂದಲೆಳಿ ಇಲ್ಲ ತಲೀಮ್ಯಾಲ!

ರಾಮಣ್ಣ :— ನನ್ನ ಮ್ಯಾಲ ಹಲ್ಲುಕಡಿಯೋ ಗಂಡಸು, ನಿಮ್ಮ ಬಾಯಾಗಸರs ಖರೇ ಹಲ್ಲವಯೇನು? ಹಾಕಿಸಿದ ಹಲ್ಲು ಸಹಿತ ಬೀಳೋ ದಿವಸಾಗ್ಯಾವ! ಇನ್ನೊಂದು ನಾಕು ದಿವಸ ಇರಲಿ ಬಾಯಾಗ! ನನ್ನ ತಡವಿ ಈಗs ಉದುರಿಸಿಗೋಬ್ಯಾಡಿರಿ! ಮನಿ ಕೊಟ್ಟದ್ದಕ್ಕ ಉಪಕಾರ ತೀರಸ್ತೀರೇನು?

ಶ್ಯಾಮಣ್ಣ :— ನೀವೇನು ಧರ್ಮಕ್ಕ ಕೊಟ್ಟಲ್ಲ. ಮನೀನs ಇದು! ಬಾವಾಜಿಗಳ ಧರ್ಮಸಾಲಿ ಸಹಿತ ಇದಕ್ಕೂ ಚೆಲೆ ಇರ್ತಾವ!

ರಾಮಣ್ಣ :— ಅಂಥಾದರಾಗ ಬಂದು ಇರಬಾರದು ನೀವಂಥಾ ಬಾವಾಗಳು! ನಮ್ಮ ಧರ್ಮಸಾಲ್ಯಾಗ ಇರೋ ಕಾರಣಿಲ್ಲ. ನಾಳೆ ಮನೀ ಬಿಟ್ಟು ಎರಡನೇ ಕೆಲಸಾ ಮಾಡ್ರಿ. ಹುಡುಗಾಟಕಿ ಅಲ್ಲ.

ಶ್ಯಾಮಣ್ಣ :— ಬಿಡದಿದ್ದರ ಏನು ಮಾಡವರು ನೀವು?

ರಾಮಣ್ಣ :— ಫಿರ್ಯಾದೀ ಮಾಡಿ ಕೋರ್ಟಗೆಳದೇನು!

ಶ್ಯಾಮಣ್ಣ :— ಅಲಲಲಲಲಲ! ಕೋರ್ಟಗೆಳೆಯೂವರ ಮಾ ನೋಡ್ರಿ! ಕಾಯದೆ ನಿಮಗs ಗೊತ್ತದಯೇನು? ಇತ್ತಾ ನವರೇನು ಹಮಾಲೀ ಮಾಡವರೂ ಅಂತ ತಿಳಿದೀರೇನು?

ರಾಮಣ್ಣ :— ಮತ್ತ ಮಾಡ್ತೀರಲ್ಲ ಹೇಣ್ತೀ ಹಮಾಲೀನ

ಶ್ಯಾಮಣ್ಣ :— ನಾ ಹೇಣ್ತೀದಾದರೂ ಮಾಡ್ತೀನಿ! ನೀವು? ಸ್ಲೇ ಮಾರವನ ಬೂಟು ಒರಸ್ತೀರಲ್ಲ!

[ಅಷ್ಟರಲ್ಲಿ ಇಬ್ಬರಿಗೂ ಸ್ನೇಹಿತರಾದ ಗೋಪಾಳರಾಯರು ಬರುತ್ತಾರೆ]

ಗೋಪಾಳರಾಯ :— ಇದೇನ್ರೆಪಾ ಇದು? ಚಪ್ಪಲೀ ಟ್ಟನತನಕಾ ಯಾಕ ಬಂದಽದ ಪ್ರಸಂಗ? ಆಂ, ಏನ್ನಡದಽನ ?

ಶ್ಯಾಮಣ್ಣ :— ಇಲ್ರಿ, ಇತ್ತೀಚಿಗೆ ಮನೀ ಮಾಲಕರಿಂಗೆ ಕ್ಕು ಬಹಳ ಬಂದಽದ.

ರಾಮು :— ಸರಕಾರದವರ ಪುಸಲತ್ತಿನಿಂದ ಬಾಡಿಗಿಯವರೂ ಹಾಳ ತಲಿಗೇರ್ಯಾರ!

ಗೋಪಾಳ :— ಏನಾಗೇದೇನೀಗೆ? ಬರೆ ಬಾಡಿಗೀ ಬಡದಾಟ ಾದಲ್ಲೊ!

ಶ್ಯಾಮಣ್ಣ :— ಬಾಡಗೀ ಬಡದಾಟ ಯಾಕಾದೀತು? ಖರೇ ಬಡದಾಟನಽ!

ಗೋಪಾಳ :—ಆದದ್ದೇನು ಹೇಳ್ರಿಲಾ!

ರಾಮು :— ನಮ್ಮ ಅಂಬು, ಅವರ ವಿಟ್ಟಲ ಆಟದಾಗ ಬಡದಾಡಿದರು.

ಚಂದ್ರಾ :— ಹುಡುಗರು ಬಡದಾಡಿದರ ಇಂದ್ರಾಬಾಯೀರು ಮಗನ ಬೆನ್ನ ಕಟಗೊಂಡು ಬಡದಾಟಕ್ಕ ಯಾಕ ಬರಬೇಕು?

ಗೋಪಾಳ :— ತಿಳಧಾಂಗಾತ್ಯ! ಮುಕ್ಕಳ ಜಗಳಾ ನೀವು ನೈಮ್ಯಾಲ ಹಾಕ್ಕೊಂಡ್ರಿ; ನಿಮ್ಮದನ್ನಽ ನಿಮ್ಮ ಗಂಡಂದ್ರು ಎತ್ತಿದರು. ಇದು ಬಾಡಿಗೀ ಬಡದಾಟನಽ ಖರೆ! ನಾವೂ ಬೀಗ ಬೀಗರೂ ಈಗ ಲಗ್ಗೆಲಗ್ಗೆ ಜಗಳಾಡಿ ಬಂದಿವಿ; ಮದಿವಿಯೊಳಗಿನ ಬಡದಾಟ ಅಷ್ಟಽ ಅದು! ಈಗ ಎಲ್ಲಾರಿಗೂ ಊಟಕ್ಕರದೀನಿ; ಹಾಂಗಽ ನಿಮಗೂ ಕರೀಲಿಕ್ಕೆ ಬಂದೀನಿ! ಹುಡುಗರೆಲ್ಲವ? ಅಲ್ಲಾ, ಅದು ನೋಡ್ರಿ—ನೀವು ಇಲ್ಲೆ ಬಡದಾಡತೀರಿ, ನಿಮ್ಮ ವಿಟ್ಟಲ ಅಲ್ಲೆ ಭಗರಿ ಆಡಸ್ತಾನ, ಅಂಬು ಅದನ್ನೆತ್ತಿಕೊಡ್ತಾಳ!

[ಯಾರಿಗೂ ಪುನಂದೆ ಮಾತನಾಡಲು ಅವಕಾಶವಿಲ್ಲದೆ, ಗೋಪಾಳರಾಯರನ್ನು ಬರಮಾಡಿಕೊಂಡು, ತಮ್ಮ ತಮ್ಮ ಮನೆಯೊಳಗೆ ಹೋಗುವರು.]

ಬಹುಮಾನ ೫೦೦ ರೂ.

— ಅದ್ಭುತ ಸಂಶೋಧನ —

ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರವು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦

೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಸ್ಟು ಖರ್ಚು ಬೇರೆ.

MAHAKALI ASHRAM
NO. 247, KANPUR.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾಧವ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಬೆಲೆಗಳ ಏರಿಳಿತ

ಶ್ರೀ. ಜಾಲೀಹಾಳ ಮೋಹನರಾಯರು, ಜ.ಡಿ.ಸಿ. ಆ್ಯಂಡ್ ಎ.
ಕಲ್ಲೋಳ್ಳಕರವಾಡಿ

★

ಪೇಟೆಯಲ್ಲಿ ವಸ್ತುಗಳಿಗೆ ಒಮ್ಮೊಮ್ಮೆ ಬೆಲೆ ವಿಪರೀತ ಏರುತ್ತವೆ; ಒಮ್ಮೊಮ್ಮೆ ನಿಪರೀತ ಇಳಿಯುತ್ತವೆ. ದೇಶದಲ್ಲಿಯ ಬಹುಜನರು ಇದರ ದುಷ್ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಆದರೂ ಬೆಲೆಯ ಏರಿಳಿತಗಳ ಕಾರಣವನ್ನು ಯಾರೂ ನಿರ್ಧಾರಿಸರು!

★

ಸರಕುಗಳ (ಸಾಮಾನುಗಳ) ಬೆಲೆ ಒಮ್ಮೆಲೆ ಏರುತ್ತಿರುವುದು ನಮಗೆ ಚಿರಪರಿಚಿತವಾದ ವಿಷಯವಾಗಿದೆ. ಈಗ ಸಕ್ಕರೆಯ-ಕೊರತೆಯಾಗಿದ್ದರಿಂದ ಸಕ್ಕರೆಯ ಬೆಲೆ ಮಿತಿಮೀರಿ ಏರಿದೆ. ಮೊದಲನೆಯ ಮಹಾಯುದ್ಧ ಹಾಗು ಆ ಯುದ್ಧೋತ್ತರದ ಕಾಲದಲ್ಲಿಯೂ (೧೯೧೪ ರಿಂದ-೨೨-೨೩ರ ವರೆಗೆ) ಬೆಲೆಗಳು ಏರಿದ್ದುವು; ಆದರೆ ಈಗ ಏರಿದಷ್ಟು ಮಾತ್ರ ಏರಿದ್ದಿಲ್ಲ. ಆಗ ಏರಿದ ಬೆಲೆಗಳು ಇಳಿಯ ಹತ್ತಿ ೧೯೩೦-೩೨ರ ಸುಮಾರಿಗೆ ತೀರ ಕೆಳಗೆ ಇಳಿದುವು. ಆಗ ಆರ್ಥಿಕ ಮುರಸನ್ನೆಯಿಂದ, ನಿರುದ್ಯೋಗದ ಭೀಕರಸಮಸ್ಯೆಯಿಂದ ಜಗತ್ತೇ ತಲ್ಲಣಗೊಂಡು ಕತ್ತರಿಸಿತು. ಬೆಳೆಗಳ ಬೆಲೆ ಹೆಚ್ಚಬೇಕೆಂದು ಅನೇಕರಿಕೆಯು ಧಾನ್ಯದ ಉಗ್ರಾಣಗಳಿಗೇ ಬೆಂಕಿಹಚ್ಚಿತು. ಆಗ ಕುಸಿದುಬಿದ್ದ ಬೆಲೆಗಳು ಮೆಲ್ಲಮೆಲ್ಲನೆ ಚೇತರಿಸಿಕೊಂಡು, ೧೯೩೯ರಲ್ಲಿ ಸುರುವಾದ ಯುದ್ಧದ ಜಾಗತಿಕ ಸಿದ್ಧತೆಯಿಂದ ಚಿಗುರಿದುವು. ಎರಡನೆಯ ಮಹಾಯುದ್ಧ ಹಾಗು ಯುದ್ಧೋತ್ತರದ ಈ ಕಾಲದಲ್ಲಿ ಬೆಲೆಗಳು ಇನ್ನೂ ಏರುವುದರಲ್ಲಿಯೇ ಇವೆ. ನಿಯಂತ್ರಣಗಳ ಸಂಕೋಲೆಗಳು ಅವುಗಳನ್ನು ತಡೆಗಟ್ಟಿದಿದ್ದರೆ, ಅವು ಯಾವ ಮಟ್ಟವನ್ನು ಮುಟ್ಟುತ್ತಿದ್ದುವೆಂಬುದನ್ನೂ ನಾವು, ನಿನಿಯಂತ್ರಣದ (ನಿಯಂತ್ರಣಗಳನ್ನು ತೆಗೆದ ಇಲ್ಲವೆ ಸಡಿಲಿಸಿದ ಕಾಲದಲ್ಲಿ) ಮನ್ವಂತರದಲ್ಲಿ ಮನಗಂಡಿದ್ದೇವೆ. ಕೆಳಗೆ ಕಾಣಿಸಿದ ಅಂಕೆಗಳು ಕಳೆದ ಒಂದು ವರುಷದಲ್ಲಿಯ ಎಲ್ಲ ವಸ್ತುಗಳ ರೋಖು ಬೆಲೆಗಳಿಂದ ತೆಗೆದ ಸರಾಸರಿ ಬೆಲೆಗಳ ಏರಿಳಿತವನ್ನು (General Index. No. of Wholesale Prices] Published by the Economic Adviser to the Govt. of India.) ತೋರಿಸುತ್ತವೆ:

೧೯೪೪	ಆಕ್ಟೋಬರ್	೩೮೧.೭
	ನವೆಂಬರ್	೩೮೨.೨
	ಡಿಸೆಂಬರ್	೩೮೩.೬
೧೯೪೫	ಜನೇವರಿ	೩೭೬.೧
	ಫೆಬ್ರುವರಿ	೩೭೨.
	ಮಾರ್ಚ್	೩೭೦.೨
	ಎಪ್ರಿಲ್	೩೭೬.೧
	ಮೇ	೩೭೭.
	ಜೂನ್	೩೭೪.೪
	ಜುಲೈ	೩೪೦.೬
	ಆಗಸ್ಟ್	೩೪೪.೪

ಸುಖ, ದುಃಖ, ನೆಳಲು ಬಿಸಿಲು, ಭರತಿ, ಓಹಟ, ತಗ್ಗು, ದಿನ್ನೆ ಈ ದ್ವಂದ್ವಗಳಂತೆ ಹಣದ ಉಬ್ಬರ (ಅತಿಪ್ರಸರಣ), ಇಳಿತ ಎಂದರೆ ಆರ್ಥಿಕ ವಿಪ್ಲವ ಆರ್ಥಿಕ ಮುಗ್ಗಟ್ಟು (Depression) ಇವೂ ಒಂದನ್ನೊಂದು ಹಿಂಬಾಲಿಸುತ್ತವೆ. ಹಣವ ಹೊನಲಿಗೂ (ಪ್ರವಾಹ) ನೀರಿನ ಹೊನಲಿಗೂ ಬಹಳ ಸಾಮ್ಯವಿದೆ. ಬೇಸಗೆಯಲ್ಲಿ ನೀರಿನ ಪ್ರವಾಹ ತೀರ ಕಿರಿದಾಗುತ್ತದೆ. ಮಳೆಗಾಲದಲ್ಲಿ ಮಹಾಪೂರ ಬಂದು ನೀರು ಹೊರಸೂಸುತ್ತದೆ. ಉಳಿದ ಕಾಲಗಳಲ್ಲಿ ಪ್ರವಾಹ ಒಂದೇ ಮಟ್ಟದಲ್ಲಿ ಹರಿಯುತ್ತದೆ. ಬೇಸಗೆಯಲ್ಲಿ ಬತ್ತಿಹೋದ ನೀರಿನ ಪ್ರವಾಹವೇ ಆರ್ಥಿಕ ಮುಗ್ಗಟ್ಟು. ಆಗ ವಿಪುಲವಸ್ತುಗಳು (ಸರಕುಗಳು) ಇದ್ದರೂ, ಅವುಗಳನ್ನು ಕೊಳ್ಳಲಿಕ್ಕೆ ಬೇಕಾಗುವ ದುಡ್ಡಿನ ಬರ. ಹಣದ ಹಣತೆ ಸಣ್ಣದಾದ ಕಾಲ. ಮಳೆಗಾಲದ ಮಹಾಪೂರವೇ ಆರ್ಥಿಕ ಪ್ರಳಯ [ವಿಪ್ಲವ]. ಮಳೆಗಾಲದಲ್ಲಿ ಪ್ರವಾಹ ಏರುತ್ತ ಏರುತ್ತ ಮೇಲಿನ ಮಟ್ಟವನ್ನು ಮುಟ್ಟುವಂತೆ, ಬೆಲೆಗಳು ಪರಮಾವಧಿಯ ಮಟ್ಟವನ್ನು ಮುಟ್ಟುತ್ತವೆ. ಒಂದೊಂದು ಸಲ ನೆರೆಯ ನೀರು ಕಟ್ಟೆಗಳನ್ನೂ, ಆಣೆಕಟ್ಟುಗಳನ್ನೂ ಒಡೆದು ಹೊಲ-ಮನೆಗಳನ್ನು ನೀರಲ್ಲಿ ಮುಳುಗಿಸುವಂತೆ, ಏರಿದ ಬೆಲೆಗಳೂ ಹಣಸ್ಪಪಂಚದ ಕಟ್ಟೆಕಟ್ಟೆಗಳನ್ನೆಲ್ಲ ಒಡೆದು ಆಲ್ಲೋಲ ಕಲ್ಲೋಲವನ್ನು ಮಾಡುತ್ತವೆ.

ಬೆಲೆಗಳ ಉಗಮವೆಲ್ಲಿದೆ? ಬೆಲೆಗಳ ಏರಿಳಿತಗಳಿಗೆ ಕಾರಣಗಳೇನು? ಏರಿಳಿತಗಳ ಪರಿಣಾಮವೇನು?

ಹಿಟ್ಟು, ಬಟ್ಟೆ, ವಸತಿಸೌಕರ್ಯ ಇವು ಮಾನವನಿಗೆ ಅತ್ಯವಶ್ಯ. ಇವಲ್ಲದೆ ವ್ಯಾವಹಾರಿಕವಾದ ಇನ್ನೂ ಅನೇಕ ವಸ್ತುಗಳು ಬೇಕಾಗುತ್ತವೆ. ಈ ವಸ್ತುಗಳ ಬೇಡಿಕೆಗಳು ದಿನ ದಿನ ಹೆಚ್ಚುತ್ತಲೇ ಇವೆ ಈ ಬೇಡಿಕೆಗಳಿಂದಲೇ ಕಾರ್ಯತತ್ಪರತೆ (ದುಡಿತ, Economic Activity) ಹುಟ್ಟಿದೆ. 'ದುಡಿತವೇ ದುಡ್ಡಿನ ತಾಯಿ' ಎಂದು ಹೇಳುವುದಾದರೆ, 'ಬೇಡಿಕೆಯೇ ದುಡಿತದ ತಾಯಿ' ಎಂದೂ ಹೇಳಬಹುದು. "ಎಲ್ಲ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂದು ದಾಸರೂ ಸಾರಿದ್ದಾರೆ. "ಆಳಾಗಿ ದುಡಿ ಅರಸಾಗಿ ಉಣ್ಣು," "ರಟ್ಟಿ ಮುರಿದು ದುಡಿದರೆಯೇ ಹೊಟ್ಟೆತುಂಬ ಊಟ" ಈ ನಾಣ್ನುಡಿಗಳೂ ದುಡಿಮೆಯು ಹುಟ್ಟಿದ ಪರಿಯನ್ನೇ ತಿಳಿಸುತ್ತವೆ.

ಎಲ್ಲರೂ ಅದೆಷ್ಟು ದುಡಿದರೂ ತನ್ನ ಅಗಣಿತ ಬೇಡಿಕೆಗಳಲ್ಲಿ ಒಂದನ್ನೂ ತನ್ನೊಬ್ಬನ ದುಡಿಮೆಯಿಂದಲೇ ಪಡೆಯುವುದು ಮಾನವನಿಗೆ ಅಸಾಧ್ಯವಾಗಿದೆ. ಆದುದರಿಂದ ಅವನು ತನ್ನ ದುಡಿಮೆಯ ಫಲದ ಭಾಗವನ್ನು ಉಳಿದವರಿಗೆ ಹಂಚಿಕೊಟ್ಟು, ಅವಕ್ಕೆ ಪ್ರತಿಯಾಗಿ ಅವರ ದುಡಿಮೆಯ ಫಲದಲ್ಲಿ ಪಾಲನ್ನು ಪಡೆಯುತ್ತಾನೆ. ಈ ವಿನಿಮಯ ಹಣದ ರೂಪದಲ್ಲಿ ನಡೆಯುವುದರಿಂದ, ಬೆಲೆಯ ಅವತಾರವಾಗಿದೆ. ಬೇಡಿಕೆ, ಪೂರಯಿಕೆಗಳೇ ಬೆಲೆಯ ತಳಹದಿ.

ಉಪಯುಕ್ತ ವಸ್ತುಗಳು ಹೇರಳವಾಗಿರದೆ ಅವುಗಳ ಕೊರತೆ ಇದ್ದರೆ, ಅವುಗಳಿಗೆ ಬೇಡಿಕೆ ಹುಟ್ಟಿ, ಬೆಲೆ ಬರುತ್ತದೆ. ಹವೆ, ಸೂರ್ಯಪ್ರಕಾಶದಂತಹ ಅತ್ಯುಪಯುಕ್ತ ವಸ್ತುಗಳ ಪೂರಯಿಕೆ ನಿಸರ್ಗದ ಕೃಪೆಯಿಂದ ಎಲ್ಲರಿಗೂ ಸಾಕಷ್ಟು ಆಗುವುದರಿಂದ, ಅವುಗಳಿಗೆ ಬೇಡಿಕೆಯೂ ಇಲ್ಲ, ಬೆಲೆಯೂ ಇಲ್ಲ.

ಕೊಡುವ, ತಕ್ಕೊಳ್ಳುವ ವ್ಯಾಪಾರ ನಿರಾತಂಕವಾಗಿ ಕಡೆತಡೆಗಳಿಲ್ಲದೆ (Free Trade) ಸಾಗಿದಾಗ, ಬೇಡಿಕೆ ಪೂರಯಿಕೆಗಳ ಪ್ರಮಾಣದಿಂದ ಬೆಲೆಯ ಏರಿಳಿತಗಳಾಗುತ್ತವೆ. ಪೂರಯಿಕೆ ಹೆಚ್ಚಿದ್ದು ಬೇಡಿಕೆ ಕಡಿಮೆಯಿದ್ದರೆ, ಬೆಲೆಗಳು ಇಳಿಯುತ್ತವೆ. ಪೂರಯಿಕೆ ಕಡಿಮೆಯಾಗಿ ಬೇಡಿಕೆ ಹೆಚ್ಚಾದರೆ ಬೆಲೆಗಳು ಏರುತ್ತವೆ. ಇದು ಅರ್ಥಶಾಸ್ತ್ರಜ್ಞರು ಹೆಸರಿಟ್ಟ "ಬೇಡಿಕೆ-ಪೂರಯಿಕೆಗಳ ನಿಯಮ" (The law of Demand and Supply) ದಂತೆ ಜರುಗುತ್ತದೆ.

ಆದರೆ ಈ ನಿರಾತಂಕ ವ್ಯಾಪಾರಕ್ಕೆ ತಡೆಯಾಗಿ, ಸರಕುಗಳ ಹುಟ್ಟುವಳಿ ಇಲ್ಲವೆ ಹಂಚಿಕೆಯು ಕೆಲವರಿಗೆ ಮೀಸಲಾದರೆ (Monopoly), ಆ ಗುತ್ತಿಗೆದಾರರು ಬೆಲೆಯನ್ನು ಏರಿಸಬಹುದು. ಈಗ ಸಣಬು, ಪಾಕಿಸ್ತಾನ-ಹಿಂದುಸ್ತಾನಗಳಲ್ಲಿಯಷ್ಟೇ ಹುಟ್ಟುತ್ತದೆ. ಆದುದರಿಂದ ಸಣಬಿನ ಬೆಲೆ ಏರಿದರೂ ಅದರ ನಿರ್ಯಾತ (ಪರದೇಶದ ಪೇಟೆಗಳಲ್ಲಿ ಆಗುವ ಅದರ ವ್ಯಾಪಾರ) ಕಡಿಮೆಯಾಗುವುದಿಲ್ಲ. ಅಂತೆಯೇ ಸ್ಟರ್ಲಿಂಗ್ ಕ್ಷೇತ್ರದೊಳಿನ ಉಳಿದ ರಾಷ್ಟ್ರಗಳಂತೆ ಸಾಣ್ಯದ (ರೂಪಾಯಿಯ) ಬೆಲೆಯನ್ನು ತಗ್ಗಿಸಿ, ತನ್ನ ಸರಕುಗಳ ಬೆಲೆಗಳನ್ನು ಇಳಿಸುವುದು ಪಾಕಿಸ್ತಾನಕ್ಕೆ ಅವಶ್ಯವೆನಿಸಲಿಲ್ಲ.

ಈ ಗುತ್ತಿಗೆಯ ಪದ್ಧತಿಯಲ್ಲಿಯೂ ಕೆಲವು ಸಲ ಬೆಲೆಗಳು ಏರುತ್ತ ಹೋಗದೆ, ಇಳಿಯಬಹುದು. ಬೆಲೆಗಳು ಏರುತ್ತ ಹೋದರೆ ಜನರಿಗೆ ಹೆಚ್ಚು ಬೆಲೆಕೊಟ್ಟು ಕೊಳ್ಳುವುದು ಅಸಾಧ್ಯವಾಗಿ, ಆ ಸರಕುಗಳಿಗೆ ಬೇಡಿಕೆಯೇ ಕಡಿಮೆಯಾಗಬಹುದು. ಹಿಂದುಸ್ತಾನದ ಸಣಬಿನ ಉದ್ಯಮಗಳಿಗೆ ಬೇಕಾಗುವ ಕಚ್ಚಾಸಣಬನ್ನು ಪಾಕಿಸ್ತಾನದಿಂದಲೂ ತರಿಸಬೇಕಾಗುತ್ತದೆ. ನಮ್ಮ ನಾಡಿನ ಹುಟ್ಟುವಳಿ ನಮಗೆ ಸಾಕಷ್ಟಿಲ್ಲ. ಆದರೆ ಪಾಕಿಸ್ತಾನದ ಕಚ್ಚಾಸಣಬಿನ ಬೆಲೆ ಮಿತಿಮೀರಿ ಏರಿರುವುದರಿಂದ, ಹಿಂದೀ ಉದ್ಯಮದಾರರು, ಆ ಸಣಬನ್ನು ತರಿಸಬಾರದೆಂದೂ ನಮ್ಮ ಹುಟ್ಟುವಳಿಯನ್ನೇ ಹೆಚ್ಚಿಸಬೇಕೆಂದೂ ನಿರ್ಧರಿಸಿದ್ದಾರೆ. ಇದರಂತೆ ಸಕ್ಕರೆಯ ಬೆಲೆ ಹೆಚ್ಚಿದಾಗ, ಬಡವರು ಸಕ್ಕರೆಯನ್ನೇ ಬಿಟ್ಟು ಬೆಲ್ಲದ ಜಹವನ್ನೇ ಕುಡಿಯಹತ್ತಿದ್ದೂ ನಮಗೆ ಗೊತ್ತಿದೆ. ಹೀಗೆ ಬೆಲೆಗಳು ಮಿತಿಮೀರಿ ಏರಿದರೆ, ಜನರು ಆ ತುಟ್ಟಿಯಾದ ಸರಕುಗಳನ್ನು ಕೊಳ್ಳದೆ ಅಗ್ಗವಿರುವ ಬೇರೆ ಸರಕುಗಳನ್ನು ಕೊಳ್ಳಬಹುದು.

ಬೆಲೆ ಇಳಿಸಿದರೆ ಬೇಡಿಕೆ ಹೆಚ್ಚಿ. ಉತ್ಪಾದನೆ (ಹುಟ್ಟುವಳಿ) ಬೆಳೆದು ಉತ್ಪಾದನೆಯ ವೆಚ್ಚ ಕಡಿಮೆಯಾಗಿ, ಗುತ್ತಿಗೆದಾರನಿಗೆ ಮೊದಲಿಗಿಂತ ಹೆಚ್ಚು ಲಾಭವಾಗುತ್ತದೆ.

ನಾಡಿನ ಉದ್ದಿಮೆಗಳು ಬೆಳೆಯಬೇಕೆಂದು ಪರದೇಶದ ಸರಕುಗಳ ಮೇಲೆ ಭಾರವಾದ ಕರಗಳನ್ನು ಹೇರಿಯಾಗಲಿ, ಇಲ್ಲವೆ ಅವುಗಳ ಆಯಾತವನ್ನು ಪೂರ್ಣವಾಗಿ ಕಟ್ಟುಮಾಡಿಯಾಗಲಿ, ಸರಕಾರ ಸ್ವದೇಶೀ ಉದ್ಯಮಗಳಿಗೆ ಸಂರಕ್ಷಣೆಕೊಡುವುದರಿಂದ ಅವುಗಳಿಗೆ ಪೇಟೆಯ ಗುತ್ತಿಗೆ ಸಿಗುತ್ತದೆ ಈ ಗುತ್ತಿಗೆಯ ಪದ್ಧತಿಗೆ ಸಂರಕ್ಷಣೆಯ ಪದ್ಧತಿ ಎಂದೂ ಹೆಸರು. ನಮ್ಮ ಸಕ್ಕರೆಯ ಉದ್ಯಮಕ್ಕೆ ಸಂರಕ್ಷಣೆ ಸಿಕ್ಕಿತ್ತು; ಆದರೆ ಸಂರಕ್ಷಣೆ ಪಡೆದ ಉದ್ಯಮಗಳು ಲಾಭಬಡಕತನದಿಂದ ಬೆಲೆ ಏರಿಸಿದರೆ, ಜನರು ರೊಚ್ಚಿಗೆದ್ದು ಆ ಉದ್ಯಮಕ್ಕೆ ಸಂರಕ್ಷಣೆಯನ್ನೇ ಕೊಡಕೂಡದೆಂದು ಸರಕಾರಕ್ಕೆ ವಿನ್ನವಿಸಬಹುದು. ಈಗ ಸಕ್ಕರೆಯ ಬೆಲೆ ಬಹಳ ಏರಿರುವುದರಿಂದ, ಸಕ್ಕರೆಯ ಉದ್ಯಮಕ್ಕೆ ಇನ್ನು ಮೇಲೆ ಸಂರಕ್ಷಣೆಯನ್ನು ಕೊಡಕೂಡದೆಂದು ಈಗಾಗಲೇ ಪತ್ರಿಕೆಗಳಲ್ಲಿ ಪ್ರಚಾರನಡೆದಿದೆ.

ಖಿನಗ್ನಸ್ಥ ಆಯುರ್ವೇದ ನಿಧಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು, ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ
ಪ್ರಚಾರವಾಗಬೇಕಾಗಿದ್ದರೆ ನನಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ
ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮೂರನೆಯದೆಂದರೆ ನಿಯಂತ್ರಣ ಪದ್ಧತಿ. (Controlled or Planned Economic System) ವಿಪರೀತವಾದ ಬೆಲೆಗಳನ್ನು ತಡೆಗಟ್ಟಲು ಈಗ ನಾಡಿನಲ್ಲಿ ಬಳಕೆಯಲ್ಲಿರುವ ನಿಯಂತ್ರಣ ಪದ್ಧತಿ, ಸೀದಾವನ್ನದಿ, ಸರಕಾರನ ಹುಟ್ಟುವಳಿಯನ್ನೂ ಹಂಚಿಕೆಯನ್ನೂ ನಿಯಂತ್ರಿಸುವಂತೆ ಬೆಲೆಯನ್ನೂ ನಿಯಂತ್ರಿಸುತ್ತದೆ. ಬೆಲೆಗಳ ಈ ನಿಯಂತ್ರಣ, ವಸ್ತುಗಳ ಕೊರತೆಯಾಗಿ ಬೆಲೆಗಳು ವಿಪರೀತವಾಗಿ ಏರಿದ ಈ ಕಾಲದಲ್ಲಿಯಷ್ಟೇ ಉಪಯುಕ್ತವಿರದೆ, ಹುಟ್ಟುವಳಿ ತೀರ ಹೆಚ್ಚಿ ಹಣದ ಹಣತಿ ಸಣ್ಣದಾದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಬೆಲೆಗಳು ತೀರ ಕೆಳಗೆ ಇಳಿಯುವುದನ್ನು ತಡೆಯಲಿಕ್ಕೂ ಉಪಯೋಗವಾಗುತ್ತದೆ.

ಹಣದ ಹೊನಲಿಗೂ ಸೀರಿನ ಹೊನಲಿಗೂ ಇರುವ ಹೋಲಿಕೆಯನ್ನೇ ಮುಂದುವರಿಸುವುದಾದರೆ, ನಿಯಂತ್ರಣಗಳೆಂದರೆ ಹಣದ ಹೊನಲಿಗೆ ಕಟ್ಟುವ ಆಣೆಕಟ್ಟುಗಳೆಂದು ಹೇಳಬಹುದು.

ಭರತಿ, ಓಹಟಗಳಂತೆ ಬೆಲೆಗಳ ಏರಿಳಿತಗಳೂ ನಿಸರ್ಗದ ನಿಯಮ. ಭರತಿ-ಓಹಟಗಳಂತೆ ಈ ಏರಿಳಿತಗಳೂ ಒಂದು ಕ್ರಮದಿಂದ ಸಾಗಿದರೆ, ಆರ್ಥಿಕವ್ಯವಹಾರದ ಮೇಲೆ ವಿಶೇಷ ಪರಿಣಾಮವಾಗುವುದಿಲ್ಲ ಆದರೆ ಬೆಲೆಗಳು ಒಮ್ಮೆಲೇ ಏರಿದರೆ ಇಲ್ಲವೆ ಒಮ್ಮೆಲೇ ಇಳಿದರೆ, ಘೋರಪರಿಣಾಮವಾಗುತ್ತದೆ.

ಬೆಲೆ ಏರುವುದರಿಂದ ಉದ್ಯಮದಾರರಿಗೆ, ವ್ಯಾಪಾರಿಗೆ ಮೊದಲು ಲಾಭವಾಗುವುದು. ದುಡಿಮೆಗಾರರಿಗೂ ಕೆಲಸ ಸಿಗುವುದು. ನಿರುದ್ಯೋಗದ ಸಮಸ್ಯೆ ಅಳಿಯುವುದು. ಸರಕಾರದ ಬೊಕ್ಕಸ, ಕರಗಳ ರೂಪದಿಂದ ಬರುವ ಹಣದಿಂದ ತುಂಬುವುದು. ನಿರ್ಯಾತಗಳಿಗೆ ಹೆಚ್ಚು ಹಣ ಬರುವುದು. ವಿದೇಶವ್ಯಾಪಾರ ಉಳಿತಾಯದ್ದಾಗುವುದು. ಬೆಲೆಗಳು ಏರುತ್ತ ಹೋದಂತೆ ಜೀವಸನೆಚ್ಚ ಹೆಚ್ಚಾಗುತ್ತದೆ. ದುಡಿಮೆಗಾರರಿಗೆ (ಕೂಲಿಕಾರರಿಗೆ) ಹಾಗೂ ಮಧ್ಯಮವರ್ಗದವರಿಗೆ ಬರುವ ಸಂಪಾದನೆ ಇವರಿಗೆ ಸಾಲುವುದಿಲ್ಲ. ತಮ್ಮ ಸಂಬಳ, ಕೂಲಿ ಹೆಚ್ಚಬೇಕೆಂದು ಅವರು ಯತ್ನಿಸುತ್ತಾರೆ. ಪ್ರಸಂಗಬಂದರೆ ಮುಷ್ಕರಗಳನ್ನೂ (ಸಂಪು) ಕೈಕೊಳ್ಳುತ್ತಾರೆ. ಭಾರತದಲ್ಲಿ ೧೯೪೨ರಿಂದ ೪೭ ರ ವರೆಗೆ ಇಂತಹ ಪರಿಸ್ಥಿತಿ ಇತ್ತೆಂದು ಸಾಮಾನ್ಯವಾಗಿ ಹೇಳಬಹುದು.

ಕೂಲಿ, ಸಂಬಳ ಮೇಲ್ಮಟ್ಟವನ್ನು ಮುಟ್ಟುತ್ತವೆ. ಇದರಿಂದ ಉತ್ಪಾದನೆಯ ವೆಚ್ಚ ಮಿತಿಮೀರಿ ಬೆಳೆದು ಬೆಲೆಗಳು ಮತ್ತಿನ್ನು ಏರುತ್ತವೆ. ನಿರ್ಯಾತಗಳ ಬೆಲೆ ಮಿತಿಮೀರಿದುದರಿಂದ, ಅವುಗಳಿಗೆ ಬೇಡಿಕೆ ತಗ್ಗುತ್ತದೆ. ನಿರ್ಯಾತಗಳು ಕಡಿಮೆಯಾಗಿ ಆಯಾತಗಳು ಬೆಳೆದು, ವಿದೇಶ ವ್ಯಾಪಾರ ಕೊರತೆಯದ್ದಾಗುತ್ತದೆ. ಜೀವನ ವೆಚ್ಚ ಹೆಚ್ಚಾಗಿ ಉಳಿತಾಯ ಶೂನ್ಯವಾಗಿ ಬಂಡವಲದ ಬರ ಬೀಳುತ್ತದೆ. ಸರಕುಗಳ ಬೇಡಿಕೆ ಕಡಿಮೆಯಾಗಿ, ಸರಕುಗಳ ಸಂಗ್ರಹ ಬೆಳೆದು, ಉತ್ಪಾದನೆಯೇ ನಿಂತು ನಿರುದ್ಯೋಗದ ಸಮಸ್ಯೆ ತಲೆದೋರುವ ಚಿಹ್ನೆಗಳು ಕಾಣುತ್ತವೆ ಈಗ ನಮ್ಮ ನಾಡಿನಲ್ಲಿ ಇಂತಹ ಪರಿಸ್ಥಿತಿ ಇದೆ.

ಆಯಾತಗಳು ಬೆಳೆದು, ಸರಕುಗಳ ಸಂಗ್ರಹವೂ ಬೆಳೆದು, ಬೇಡಿಕೆ ತಗ್ಗಿದುದರಿಂದ ಉದ್ಯಮಗಳು ಮುಗ್ಗರಿಸಿ ಬೀಳಬಹುದೆಂದು ಅಂಜಿ, ಉದ್ಯಮದಾರರು ಬೆಲೆಗಳನ್ನು ಇಳಿಸಬಹುದು.

ಬೆಲೆಗಳು ಇಳಿದಂತೆ ಉಳಿತಾಯ ಬೆಳೆದು, ಹೊಸ ಹೊಸ ಉದ್ಯಮಗಳಲ್ಲಿ ತೊಡಗಿಸಲ್ಪಟ್ಟು, ಕೆಲವು ಸಮಯದವರೆಗೆ ಹುಟ್ಟುವಳಿ ಹೆಚ್ಚುತ್ತ ಹೋಗುತ್ತದೆ. ಬೆಲೆಗಳು ಇಳಿಯತ್ತಲೇ ಬರುತ್ತವೆ. ೧೯೩೪ರಿಂದ ೧೯೩೮–೩೯ರ ವರೆಗೆ ಭಾರತದಲ್ಲಿ ಈ ಪರಿಸ್ಥಿತಿ ಇತ್ತೆಂದು ಸಾಧಾರಣವಾಗಿ ಹೇಳಬಹುದು.

ಬೆಲೆಗಳು ತೀರ ಕೆಳಗೆ ಇಳಿದರೆ, ಉತ್ಪಾದನೆಯ ವೆಚ್ಚಕ್ಕಿಂತ ಆದರಿಂದ ಬರುವ ವರಮಾನ ಕಡಿಮೆಯಾಗುತ್ತದೆ. ಉದ್ಯಮಗಳು ಮುಗ್ಗರಿಸಿ, ಉದ್ಯಮಗಳ ದಿವಾಳಿಯಿಂದ ನಿರುದ್ಯೋಗ ಬೆಳೆಯುತ್ತದೆ. ಸರಕಾರಕ್ಕೆ ಬರುವ ಕರಗಳೂ ಕಡಿಮೆಯಾಗಿ ಸರಕಾರದ ಬೊಕ್ಕಸ ಬರಿದಾಗುತ್ತದೆ. ಕೈತರ ಸಾಲ ಬೆಳೆಯುತ್ತದೆ. ಆರ್ಥಿಕ ಮುಗ್ಗಟ್ಟು ಒದಗುತ್ತದೆ. ಭೂಮಿಯ ಕಣಜ ಕಿಕ್ಕಿರಿ ತುಂಬಿದರೂ, ಕೊಳ್ಳುವ ತ್ರಾಣವಿಲ್ಲದುದರಿಂದ ಬಡವರ ಬಗ್ಗರ ತುತ್ತಿನ ಚೀಲಗಳು ಬರಿದಾಗಿಯೇ ಉಳಿಯುತ್ತವೆ. ೧೯೩೦–೩೨ರಲ್ಲಿ ಇಂತಹ ಜಾಗತಿಕ ಮುಗ್ಗಟ್ಟು ಮುಸುಕಿತ್ತು.

ಈ ಮುಗ್ಗಟ್ಟನ್ನು ತಡೆಯುವುದಕ್ಕಾಗಿ ಸರಕಾರ, ನೀರಾವರಿಯ ಯೋಜನೆ ಆಣೆಕಟ್ಟುಗಳ ಕೆಲಸ ಮೊದಲಾದ ಪರಿಹಾರದ ಕೆಲಸಗಳನ್ನು ಕೈಕೊಳ್ಳುತ್ತದೆ. ಬೆಲೆಗಳ ಕೆಳಗಿನ ಮಯರ್ಾದೆಯನ್ನು ನಿಯಂತ್ರಿಸುತ್ತದೆ. ಆಯಾತಗಳನ್ನು ತಡೆದು ನಾಡಿನ ಉದ್ಯಮಗಳಿಗೆ ಸಂರಕ್ಷಣೆಯನ್ನು ಒದಗಿಸುತ್ತದೆ. ಸರಕಾರದ ವಿವಿಧ ಯೋಜನೆಗಳಿಂದ ನಿರುದ್ಯೋಗವು ದೂರವಾಗಿ, ಜನರಿಗೆ ಸರಕುಗಳನ್ನು ಕೊಳ್ಳುವ ತ್ರಾಣ ಬಂದು, ಸರಕುಗಳಿಗೆ ಬೇಡಿಕೆ ಹೆಚ್ಚಿ, ಇಳಿವ ಬೆಲೆಗಳು ಮತ್ತೆ ಏರಹತ್ತುತ್ತವೆ. ಹೀಗೆ ಬೆಲೆಗಳ ಏರಿಳಿತಗಳು ಒಂದನ್ನೊಂದು ಹಿಂಬಾಲಿಸಿವೆ. ಸರಕಾರ ಕಾಲಕಾಲಕ್ಕೆ ತಕ್ಕ ಕ್ರಮಗಳನ್ನು ಕೈಕೊಂಡು, ಈ ಏರಿಳಿತಗಳ ಪರಿಣಾಮದ ತೀವ್ರತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

⊙ ಅಂದು ಅವರಮ್ಮ ಕಾಫಿ ಮಾಡಿದ್ದು ⊙

(ಒಂದು ವಿಕೋದಕತೆ)

ಲೇ. ಎ. ಎಸ್. ರಾಮಕೃಷ್ಣ, ಬೆಂಗಳೂರು

★

ಪರಮೇಶ್ವರ ನನ್ನ ಬಾಲ್ಯದ ಗೆಳೆಯ. ಮದರಾಸಿನಲ್ಲಿ ವಕೀಲಿ ಪರೀಕ್ಷೆ ಮುಗಿಸಿದ್ದ. ಊರಿಗೆ ಬಂದು ಮೊನ್ನೆ ಮೊನ್ನೆ ಪ್ರಾಕ್ಟೀಸ್ ಪ್ರಾರಂಭಿಸಿದ್ದ. 'ಒಮ್ಮೆ ಈ ಕಡೆ ಬಂದು ಹೋಗಯ್ಯ'— ಎಂದು ಅವನ ಕಾಗದ ಬಂತು. ಪರಮು ಕರೀಕೋಟು ಹಾಕಿದರೆ ಹೇಗಿರುತ್ತದೆಯೆಂದು ಕಂಡ ಪಾಗಾಯಿತು—ಎಂದುಕೊಂಡು, ನಾನು ಅವನೂರಿಗೆ ಹೊರಟೆ.

ಜರೀ ಮುಂಡಾಸು ಕಟ್ಟುತ್ತಿದ್ದ ಹಿರಿ ವಕೀಲರಷ್ಟು ಜರುಬಾಗಿ ಕಾಣಿಸದಿದ್ದರೂ, ಕರೀಕೋಟಿನ ನಮ್ಮ ಕಿರಿ ವಕೀಲ ಲಕ್ಷಣವಾಗಿ ಕಾಣಿಸುತ್ತಿದ್ದ. ಜಬರದಸ್ತು ತಿಳಿಯದಿದ್ದರೂ ಕಕ್ಷಿಗಾರರಿಂದ ಸಾಕಷ್ಟು ಗೌರವ ಪಡೆಯುತ್ತಿದ್ದ. ಕ್ರಮೇಣ ಬಿಮ್ಮಗಾದಾನು— ಎಂದುಕೊಂಡೆ. ಅವರ ತಂದೆಯಂತೆ ಪೌರೋಹಿತ್ಯ ಕಲಿತಿದ್ದರೆ ಪರಮು ಹೇಗಿರುತ್ತಿದ್ದ ಎಂದು ಮನಸ್ಸಿನಲ್ಲಿಯೇ ಚಿತ್ರಿಸಿಕೊಂಡೆ.

ರಾತ್ರಿ ಬಹಳ ಹೊತ್ತಿನ ತನಕ ಹರಟೆ ನಡೆಯಿತು. ಮಾರನೆಯ ದಿನ ಭಾನುವಾರ ಬೆಳಗಾಗಿತ್ತು, ಪರಮನ ತಂದೆ ದೇವರ ಮನೆಯಲ್ಲಿ '' ಅಪವಿತ್ರಃ ಪವಿತ್ರೋವಾ '' ಎನ್ನುವ ಹೊತ್ತಿಗೆ, ನಾವಿಬ್ಬರೂ ಹೊರಗಿನ ಕೋಣೆಯಲ್ಲಿ ಕುಳಿತು ಕಾಫಿ ಹೀರುತ್ತ ಪವಿತ್ರರಾಗುತ್ತಿದ್ದೆವು.

ಪರಮನ ಹೆಂಡತಿ ಮುಗುಳುನಗೆ ಸಗುತ್ತಾ '' ಕಾಫಿ ನಿಮಗೆ ಸರಿಯಾಗಿದೆಯೆ ? '' ಎಂದು ಅವನನ್ನು ಕೇಳಿದರು. '' ನನ್ನ opinion ತೆಗೆದುಕೊಂಡು ಏನು ಮಾಡುತ್ತೀಯ ? ''—ಎಂದು ಪರಮು ನನ್ನನ್ನು ನೋಡಿ '' ಹೇಗಿದೆ ರಾಮು ಕಾಫಿ ? '' ಎಂದು ಕೇಳಿದ. ನಾನು ಚೆನ್ನಾಗಿದೆ ಎಂದು ಹೇಳಿದೆ. ಕಾಫಿ ನಿಜವಾಗಿಯೂ ಹದವಾಗಿತ್ತು. '' ಸತ್ಯ ಹೇಳಯ್ಯ, ಸಕ್ಕರೆ ಕಡಿಮೆಯಾಗಿಲ್ಲವೆ ? '' ಎಂದ ಪರಮು. ಅವನ ಹೆಂಡತಿ ನಗುತ್ತಾ ಒಳಗೆ ಹೋಗಿ ಸಕ್ಕರೆಯ ಪಾತ್ರೆಯನ್ನು ತಂದು, ಎರಡು ಚಮಚ ಸಕ್ಕರೆಯನ್ನು ಪರಮುವಿನ ಪಾತ್ರೆಗೆ ಸುರುವಿದರು. ನನಗೆ ದಿಗಿಲಾಗಿ '' ಅಯ್ಯೋ, ಪಾನಕ ಆಗ್ತಾ ಇದೆಯಲ್ಲೋ '' ಎಂದೆ. '' ಇಷ್ಟು ಸಕ್ಕರೆ ಹಾಕಿದ್ದರೆ ಕಾಫಿಯಾದರೂ ಯಾಕೆ ಕುಡಿಯಬೇಕು ''—ಎಂದು ಹೀಯಾಳಿಸಿದ ಪರಮು. '' ನಮ್ಮಮ್ಮ ಮಾಡಿದರೆ ಮಾತ್ರ ಕಾಫೀ ನನಗೆ ಸರಿಹೋಗುತ್ತದೆ. ಇವಳು ಮಾಡುವ ಕಾಫಿಯಿಂದ ಇವಳಿಗೇ ತೃಪ್ತಿಯಾಗಬೇಕು ''—ಎಂದು ಬಾಣಬಿಟ್ಟ.

ಅಷ್ಟರಲ್ಲಿ ಮನೆಯ ಹೊರಗೆ ತಟ್ಟಿ ಕಟ್ಟುತ್ತಿದ್ದ ಕಾಳ ಆ ಕಡೆ ಸುಳಿದ. ಪರಮು ಅವನನ್ನು ಕರೆದು ಒಂದು ಲೋಟ ಕಾಫಿ ಕೊಡಿಸಿದ. ಕಾಳ ಹೊಸ್ತಿಲ ಬಳಿ ಕುಳಿತು 'ಪಸಂದಾಗಿದೆ' ಎನ್ನುತ್ತಾ ಕಾಫಿಯನ್ನು ಹೀರಿ ಮುಗಿಸಿದ. ಕುಡಿದಾದ ಮೇಲೆ "ಆದರೆ ದೊಡ್ಡ ಒಡತಿ ಕಾಫಿ ಮಾಡಿದ ಹಾಗೆ ಯಾರು ಮಾಡಿದರೂ ಆಗುವುದಿಲ್ಲ" ಎಂದು ರಾಗ ಎಳೆದ.

"ಹೌದು, ಉಂಡೆಬೆಲ್ಲವನ್ನು ಜೋನಿಬೆಲ್ಲದಲ್ಲಿ ಅದ್ದಿ ತಿನ್ನುವ ನಿನಗೆ, ಸಿಹಿ ಸಾಕಾಗಬೇಕಾದರೆ ಅತ್ತೆಯೇ ಕಾಫಿ ಮಾಡಬೇಕು! " ಎಂದು ಮೂದಲಿಸಿದರು ಪರಮನ ಹೆಂಡತಿ.

''ಗೊತ್ತು, ನೀನೇ ಪ್ರವೀಣೆ ಕಾಫಿ ಮಾಡುವುದರಲ್ಲಿ ಅಂತ ''— ಎಂದು ಹೆಂಡತಿಯ ಬಾಯಿ ಮುಚ್ಚಿಸಿ ಪರಮು ನನ್ನನ್ನು ಕುರಿತು '' ನೋಡಯ್ಯಾ ರಾಮು, : ಮೂವತ್ತು ವರ್ಷಗಳ ಹಿಂದೆಯೆ ನಮ್ಮಮ್ಮ ಹೇಗೆ ಕಾಫಿಮಾಡುತ್ತಿದ್ದರು ಗೊತ್ತೇನು ? ''

ಪರಮನ ಹೆಂಡತಿ '' ಬೇಡ, ಅವರಿಗೆ ಹೇಳಬೇಡಿ ''— ಎಂದು ನಗು ತಡೆಯಲಾರದೆ ಒಳಗೆ ಹೊರಟು ಹೋದರು. ಪರಮು ಕತೆಯನ್ನು ಮುಂದುವರಿಸಿಯೇ ಬಿಟ್ಟ :

* * * *

ಪರಮು ಹೇಳಿದಂತೆ ಮೂವತ್ತು ವರ್ಷಗಳ ಹಿಂದೆ ಆ ತಾಲ್ಲೂಕಿನಲ್ಲಿ ಕಾಫಿಯ ಹೆಸರನ್ನು ಕೇಳಿದವರೇ ಅಪರೂಪ. ಮಹಾಶ್ರೋತ್ರಿಯರಾಗಿದ್ದ ಪರಮುವಿನ ತಾತಂದಿರು 'ಕಾಫಿ' ಎಂಬ ಶಬ್ದ ಕಿವಿಗೆ ಬಿದ್ದರೆ 'ಸಾಂಬಶಿವ' ಎಂದುಕೊಳ್ಳುತ್ತಿದ್ದರಂತೆ. ಇಂತಹ ಕಾಲದಲ್ಲಿ ಅವರ ಮನೆಯಲ್ಲಿಯೇ ಅವರ ಸೊಸೆ— ಪರಮನ ತಾಯಿ— ಕಾಫಿ ಮಾಡಿದ ಕತೆ ಬಹಳ ಸ್ವಾರಸ್ಯವಾದದ್ದು.

ಅದು ನಡೆದಂದು ಹೀಗೆ : ಉಡುಪಿಯಲ್ಲಿದ್ದ ಪರಮನ ತಂದೆಯ ವಕೀಲರು ಒಂದು ಸಲ, ಯಾವುದೋ ಕಾರ್ಯನಿಮಿತ್ತ ಇವರೂರಿಗೆ ಬಂದರು. ಪರಮನ ತಂದೆ ಅಪರೂಪವಾಗಿ ತಮ್ಮೂರಿಗೆ ಬಂದ ವಕೀಲರನ್ನು ತಮ್ಮ ಮನೆಗೆ ಆಹ್ವಾನಿಸಿದರು. 'ಕಕ್ಷಿಗಾರ CUM ಪುರೋಹಿತರು ಆಹ್ವಾನಿಸಿದ ಮೇಲೆ ಹೋಗದಿರುವುದಕ್ಕಾಗುತ್ತದೆಯೇ ? ' ಎಂದು ವಕೀಲರು, ಇದು ನಿಮಿಷ ಬಿಡುವ ಮಾಡಿಕೊಂಡು ಛೇಟಿಕೊಟ್ಟರು. ಅವರಿಗೆ ಊಟಕ್ಕೆ ನಿಲ್ಲುವಷ್ಟು ಅವಕಾಶವಿಲ್ಲ. ಉಪಹಾರಕೊಟ್ಟು ಉಪಚರಿಸಬೇಕು. ಈ ಮಾನ್ಯ

೧೦೦೦ ರೂಪಾಯಿ ಬಹುಮಾನ

೭೦ ವರ್ಷಗಳಿಂದ ಅನುಭವಸಿದ್ಧವಾದ— ವಿದ್ವಜ್ಜನ ಮೆಚ್ಚಿ
ವಿ. ಎಸ್. ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ವಜಿಸ್ವರ್ಣ]

ಮೂತ್ರದಲ್ಲಿ ಸ್ಪಷ್ಟವಾದ ವೀರ್ಯಸ್ಖಲನ, ಸ್ಮರಶಕ್ತಿಯಿಂದಾಗುವ ಜಾಡ್ಯತೆ, ನಿರ್ಜೀವ ಬೇನೆ ಬೇನೆ ಮೊಣಕಾಲುಗಳು, ಪಿತ್ತಾಂಶ, ಬಿಸ್ಪ, ನೋವುನೋವು, ಉಬ್ಬಡಂಭವೇಹೆಚ್ಚೋಗಗಳಿಂದಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಸುಖಸ್ವಪ್ನಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತಾಕತ್ತು ಹೆಚ್ಚುವುದು. ಹೊಸ ತಾರುಣ್ಯವು ಬಂದಂತಾಗಿ ವೀರ್ಯವೃದ್ಧಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ಜಿಂಕೆ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ವಾಜಾಮಿಶ್ರಿ, ಸಫೇದಮುಸ್ರಿ, ವಂಜಾಬು ಮಿಶ್ರಿಗಳಿಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಶ್ವವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೫೦ ದಿನಗಳಿಗೆ ಸಾಲುವಷ್ಟಾದ ಆಳ ತೊಲೆಯ ಒಂದು ಡಬ್ಬಿಗೆ ೫-೮-೦: ಅಂಚೆಯ ಖರ್ಚು ೧-೬-೦. ಶೀಘ್ರಗುಣಕಾರಿಯಾದ ವೈವಲ್ಯಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ಖರ್ಚು ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯ ಖರ್ಚು ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವಿ.ಎಸ್. ಕಾಪಸೇ** ಮು. ಪೋ. ಮಿರಜ

ಅತಿಥಿಯು ಸತ್ಕಾರಕ್ಕಾಗಿ ವಾಡಿಕೆಯಂತೆ ಹೆಸರುಬೇಳೆಯ ಗಂಜಿಯನ್ನು ಕೊಡದೆ, ಕಾಫಿ ಕೊಡಬೇಕೆಂದು ಪರಮನ ತಂದೆ ಏರ್ಪಡಿಸಿದ್ದರು. ಅದಕ್ಕಾಗಿ ಆರ್ಧಸೇರು ಕಾಫಿ ಬೀಜವನ್ನು ಪೇಟೆಯಿಂದ ತಂದಿದ್ದರು. ಎಲ್ಲ ಕೆಲಸಗಳನ್ನೂ ಹಂಚಿರಿಯದೆ ನಿರ್ವಹಣೆಯಂದ ಮಾಡಬಲ್ಲ ಅವರ ಹೆಂಡತಿ, ಮೊದಲಬಾರಿ ಕಾಫಿ ತಯಾರಿಸಲು ಧೈರ್ಯದಿಂದ ಒಪ್ಪಿಕೊಂಡಿದ್ದರು.

ಹೊರಗೆ ಚಾವಡಿಯಲ್ಲಿ ವಕೀಲರೊಡನೆ ಮಾತುಕತೆ ನಡೆಯುತ್ತಲೇ ಇದೆ; ಆದರೆ ಪರಮನ ತಂದೆಗೆ ಮನಸ್ಸೆಲ್ಲ ಅಡಿಗೆಮನೆಯಲ್ಲಿದೆ. 'ಉಪಹಾರದ ತಂಗಾರಿಕೆ ಇಷ್ಟು ಹೊತ್ತಾದರೂ ಮುಗಿಯಲಿಲ್ಲವಲ್ಲ!' ಎಂದು ಅವರಿಗೆ ಕಳವಳ. ಅವಲಕ್ಕಿ ಒಗ್ಗರಿಸಿಯಾಗಿದೆ; ಹಪ್ಪಳ ಕರಿದಾಗಿದೆ; ಕಾಫಿಯ ನೀರು ಆಗಲೆ ಮರಳುತ್ತಿತ್ತು.— ಎಂದೆಲ್ಲ ಗುಣಾಕಾರ ಹಾಕುತ್ತಿದ್ದರು.

ವಕೀಲರು ಹೊರಡುವ ಸೂಚನೆ ತೋರಿಸಿದರು. "ಒಂದು ಕ್ಷಣ ತಡೆಯಿರಿ" ಎಂದು ಪರಮನ ತಂದೆ ಅಡಿಗೆಮನೆಗೆ ಧಾವಿಸಿದರು. ಅಲ್ಲಿ ಸ್ವಲ್ಪ ಚಡಪಡಿಸಿ ಗದರಿಸಿ ಹೊರಗೆ ಬಂದರು.

"ನನಗಾಗಿ ಏನೂ ತಯಾರಿಸಬೇಕಾಗಿಲ್ಲ ಸ್ವಾಮಿ; ಈಗ ತಾನೇ ಟಫೀನು ಮುಗಿಸಿ ಬಂದಿದ್ದೇನೆ" ಎಂದರು ವಕೀಲರು.

"ಛೆ, ಹಾಗೇನಿಲ್ಲ; ಒಂದಿಷ್ಟು ಗಂಗಾಮೃತ ಮಾತ್ರ" ಎಂದರು ಪರಮನ ತಂದೆ.

ಇಬ್ಬರೂ ನಸ್ಯ ಏರಿಸಿದ್ದಾಯಿತು. ನಸ್ಯದ ಗುಣಕಥನವಾಯಿತು. ಕಾಲುಗಂಟೆ ಕಳೆಯಿತು. ಪರಮನ ತಂದೆಯ ಮುಖ ನೆಚ್ಚಾಗತೊಡಗಿತು. ಹತ್ತಾರು ಸಲ ಅವರು ಅಡುಗೆಮನೆಗೂ ಚಾವಡಿಗೂ ಓಡಾಡಿದರು.

ವಕೀಲರು ಕಿರುನಗೆ ಬೀರಿ "ಸುಮ್ಮನೆ ಯಾಕೆ ತೊಂದರೆ ತೆಗೆದುಕೊಳ್ಳುತ್ತೀರಿ?" ಎಂದರು.

ಈ ಸಾರಿ ಪರಮನ ತಂದೆ ಒಳಗೆ ಹೋದವರು ತಿಂಡಿ ತಟ್ಟೆಗಳನ್ನು ತೆಗೆದುಕೊಂಡೇ ಬಂದರು. "ಇದೇನೆಲ್ಲ ಹವ್ಯಾಸ್ವಾಮಿ" ಎಂದರು. ವಕೀಲರು ನಮ್ಮ ಈಗಿನ ಹೋಟಲ್ ಎಂಟು ಕಪ್ಪು ಕಾಫಿ ಹಿಡಿಯುವ ಎರಡು ಲೋಟಾಗಳಲ್ಲಿ ಕಾಫಿಯ ಬಂದಿತು. ವಕೀಲರು ಅದನ್ನು ನೋಡಿ ಹೌಹಾರಿ ಹೋ "ಒಂದು ಸಣ್ಣ ಲೋಟಾ ಕೊಡಿ" ಎಂದು ತರಿಸಿಕೊಂಡರು ವಕೀಲರು ತಿನ್ನುವಷ್ಟು ತಿಂಡಿ ತಿಂದು, ಚಿಕ್ಕ ಲೋಟಾದಲ್ಲಿ ಕಾ ತೆಗೆದುಕೊಂಡರು. ಕಣ್ಣು ಮುಚ್ಚಿ ಅದನ್ನು ಕುಡಿದರು. ಉ ದಿರುವ ಕಾಫಿಯ ಕಡೆ ನೋಡಿ ಪರಮುವಿನ ತಂದೆ "ಏನ ಕಾಫಿ ಚೆನ್ನಾಗಿರಲಿಲ್ಲವೆ?" ಎಂದು ಕೇಳಿದರು. ಬೆಲ್ಲ ಕಡಿವೆ ಯಾಯಿತೆಂದು ತಮ್ಮ ಅಭಿಪ್ರಾಯವನ್ನೂ ಸೂಚಿಸಿದರ "ಸರಿಯಾಗದೆ ಏನು, ಬಹಳ ಚೆನ್ನಾಗಿದೆ" ಎಂದರು ವಕೀಲರ

"ನಮ್ಮ ಯಜಮಾನತಿಗೆ ಕಾಫಿ ಮಾಡಿ ಗೊತ್ತಿಲ್ಲ. ಆದ ಸರಿಯಾಗಿ, ಬೀಜವೂ ಒಳ್ಳೆಯದಲ್ಲ. ಅದಕ್ಕೆ ಬಿಸಿಯೇ ತಾಗುವ ದಿಲ್ಲ" ಎಂದರು ಪರಮನ ತಂದೆ.

ಕೊನೆಗೆ ವಕೀಲರು ಅವರನ್ನು ಬೀಳ್ಕೊಂಡು ಹೊರಟರು.

ವಕೀಲರು ಹೋದ ಮೇಲೆ, ರುಚಿ ನೋಡೋಣವೆಂದು ಪರಮ ತಂದೆ ಒಂದು ಕೊಳಗದಷ್ಟು ಕಾಫಿಯನ್ನು ತಂದುಕೊಂ ಕುಡಿಯತೊಡಗಿದರು. ಸ್ವಲ್ಪ ಕುಡಿದು "ಈ ಜನಕ್ಕೆ ಮರುಳ ಇಲ್ಲದಿದ್ದರೆ ಕಾಫಿ ಕಾಫಿ ಎಂತ ಇಷ್ಟು ಪ್ರಾಣಬಿಡುತ್ತವೆಯೇ ಎಂದು ಉದ್ಗಾರ ತೆಗೆದರು. 'ಇದಕ್ಕಿಂತ ಒಂದಿಷ್ಟು ಹಾಲ ನೀರಿಗೆ ಬೆಲ್ಲ ಹಾಕಿ ಕುಡಿಯುವುದೇ ವಾಸಿ!' ಎಂದು ಅವರ ತಕ

ಆಗ ಅವರ ಹೆಂಡತಿ "ಚೆನ್ನಾಗಿ ಬೆಂದಿದ್ದರಿ ರುಚಿಯಾಗಿರ ತ್ತೋ ಏನೋ"— ಎಂದರು, ತಾವೂ ಒಂದು ಲೋಟ ರು ನೋಡುತ್ತ.

"ಆನಲಕ್ಕೆ ಒಗ್ಗರಿಸುವ ಮೊದಲೇ ಬೇಯುವುದಕ್ಕೆ ಹಾಕು ಬಹುದು, ಹೆಸರು ಬೇಯಿಸಿದ ಹಾಗೆ ಕಾಫಿ ಬೀಜ ಬೇಯಿಸಿದ ಸಾಲುತ್ತದೆಯೇ"—ಎಂದರು ಯಜಮಾನರು.

"ಆದರೆ ನೀವು ತಂದ ಬೀಜ ಎಂಥದೋ! ಸೌಟಿನಿಂದ ಮೇ ತೆಗೆದು ತೆಗೆದು ನೋಡಿ ಸಾಕಾಯಿತು ನನಗೆ"— ಎಂದರು

ನಿರೀಕ್ಷಕ

(ಸಕ್ಷಾತೀತ ವಾರಪತ್ರಿಕೆ) ಧಾರವಾಡ

ಸಂಪಾದಕರು : **ಮಳಯಿ ಗೋವರ್ಧನರಾಯರು**

ವಾರ್ಷಿಕ ಚಂದಾ ೭ ರೂ. ಸ್ಥಳಿಕರಿಗೆ ೬-೪-೦

ಇಂದೇ ಚಂದಾದಾರರಾಗಿರಿ.

ಜಮಾನನಿತಿ. " ನೀರು ಬಹ್ಮತ್ತ ಬಂದರೂ ಬೀಜ ಬೇಯಲಿಲ್ಲ; ಕೊನೆಗೆ ಅವರೆಲ್ಲಿ ಹೋಟು ಹೋಗಿ ಬಿಡುವರೋ ಎಂದುಕೊಂಡು ಬೇಗನೆ ಕೆಳಗಿಳಿಸಿದೆ. ಬೇಯುವಷ್ಟು ಬೆಂದಿತು."

ಕಾಫಿ ಮಾಡುವುದರಲ್ಲಿ ಕಂಗಾಲಾಗಿದ್ದ ಹೆಂಡತಿಯನ್ನು ಕಂಡು ಯಜಮಾನರಿಗೆ ಪಂಚಾಪ ಉಂಟಾಗಿರಬೇಕು—" ಇನ್ನೊಂದು ಸಲ ಅವರು ಬಂದಾಗ ಒಳ್ಳೆಯ ಬೀಜ ತಂದು ಪರಮಾಯಿಷಿ ಕಾಫಿ ಮಾಡುವ "— ಎಂದು ಸಮಾಧಾನ ಹೇಳಿದರು.

ಕೆಲವು ದಿನಗಳು ಕಳೆದುವು. ಯಜಮಾನರು ಉಡುಪಿಯ ವಕೀಲರ ಮನೆಗೆ ಶ್ರಾದ್ಧ ಮಾಡಿಸಲು ಹೋಗಿದ್ದರು. ಸಾಯಂಕಾಲ ಕಾಫಿ ಕುಡಿಯಬೇಕೆಂದು ಸ್ವತಃ ವಕೀಲರೇ ಒತ್ತಾಯ ಪಡಿಸಿದರು. ಮನೆಯಲ್ಲಿ ಮಾಡಿಸಿದವನಿಗೆ ಇಲ್ಲಿ ಕುಡಿಯುವುದರಲ್ಲಿ ಏನು ಕೇಡು, ಅಲ್ಲದೆ ವಕೀಲರ ಮನೆಯ ಕಾಫಿ ಹೇಗಿದೆ ನೋಡೋಣ ಎಂದು— ಯಜಮಾನರು ರುಚಿ ನೋಡಿದರು. ಕುಡಿದು ಬೆಕ್ಕಸ ಬೆರಗಾದರು. " ಹೇಗಿದೆ ಸ್ವಾಮಿ ?" ಎಂದರು ವಕೀಲರು.

" ನಮ್ಮಲ್ಲಿಗೆ ನೀವು ಬಂದಾಗ ಕಾಫಿ ಮಾಡಿದ್ದೆವಲ್ಲ; ಆಗ ಎಷ್ಟು ಬೇಯಿಸಿದರೂ ಬೇಯಲೇ ಇಲ್ಲ ಬೀಜ ನೀವು ತಂದ ಕಾಫಿ ಬೀಜ ಬಹಳ ಒಳ್ಳೆಯದಿರಬೇಕು; ಆದೇ ಕಾಫಿ ಬಹಳ ಕೋಷಾಗಿದೆ."— ಎಂದರು ಯಜಮಾನರು.

ಸುತ್ತ ಕುಳಿತವರೆಲ್ಲ ಹೊಳ್ಳೆಂದು ನಕ್ಕರು. ಕಾಫಿ ಕುಡಿಯುತ್ತಿದ್ದ ಕೆಲವರಿಗೆ ಕಾಫಿ ಮೂಗಿನಲ್ಲಿ ಬಂತು. ಅಷ್ಟರ ಮಟ್ಟಿಗೆ ಕಡೆಯಲಾರದ ನಗು.

ಯಜಮಾನರು ಪೆಚ್ಚಾದರು. ಕಾಫಿ ಬೀಜವನ್ನು ಹುರಿದು ಪುಡಿಮಾಡಿ ಕಾಫಿ ತಯಾರಿಸಬೇಕೆಂಬ ವಿಚಾರ ತಿಳಿದಾಗ ಅವರಿಗೆ ಸಂಭ್ರಮ ರೇಗಿತು. ಅಪಮಾನವನ್ನೆಲ್ಲ ಮನೆಗೆ ಬಂದು ಹೆಂಡತಿಯ ಮೇಲೆ ತೀರಿಸಿದರು. ಆಗ ಪರಮು ಇನ್ನೂ ಹುಟ್ಟಿರಲಿಲ್ಲವಾದ್ದರಿಂದ, ಆ ತಾಯಿಗೆ ಒಂದು ಗುದ್ದು ಬೇರೆ ಬಿತ್ತಂತೆ. ಗೊತ್ತಿಲ್ಲದಿದ್ದರೂ ಯಾರನ್ನೂ ವಿಚಾರಿಸಿಕೊಳ್ಳದೆ ಕಾಫಿ ಮಾಡಲು ಹೊರಟ ಅವಿವೇಕಕ್ಕಾಗಿ ಅವರು ಆ ದಿನವೆಲ್ಲ ಅತ್ತು ಅತ್ತು ಉಪವಾಸ ಮಾಡಿದ್ದರಂತೆ.

* * * *

ಪರಮನ ತಾಯಿ ಕಾಫಿ ಮಾಡಿದ ಕತೆಯನ್ನು ಕೇಳಿ ನಾವೆಲ್ಲ ಹೊಟ್ಟೆ ಹುಣ್ಣಾಗುವಂತೆ ನಕ್ಕೆವು. ಪರಮನ ತಾಯಿ ಸಹ ಅಲ್ಲಿದ್ದವರು ನಗುವಿನಲ್ಲಿ ಸೇರಿಕೊಂಡರು. ಪರಮನ ಹೆಂಡತಿ ಬಾಗಿಲ ಮರೆಯಿಂದಲೇ ಬಾಯಿಗೆ ಸೆರಗು ಒತ್ತಿ ಹಿಡಿದು ನಕ್ಕರು. ಕಾಳ ಮಾತ್ರ ತನ್ನ ಒಡತಿಯ ಪೂಕ ಹೆಚ್ಚಿಸಲಿಕ್ಕೊ ಎಂಬಂತೆ " ಈಗ ನೋಡಿ ದೊಡ್ಡ ಒಡತಿ ಕಾಫಿ ಮಾಡಿದರು ಎಂದರೆ.... " ಎಂದು ಏನೋ ಹೇಳುವುದರಲ್ಲಿದ್ದ.

ಅಷ್ಟರಲ್ಲಿ ನಿರ್ಮಾಲ್ಯ ವಿಸರ್ಜನೆಯ ಹೂ-ತುಳಸಿಗಳನ್ನು ಹೊರಗೆ ತರುವ ನೆಪದಿಂದ ಹೊರಗೆ ಬಂದ ಪರಮನ ತಂದೆ ಕಾಳನನ್ನು ದುರುಗುಟ್ಟಿ ನೋಡಿ " ಹೌದು ನಿನ್ನಂಥ ಒಕ್ಕಲು ಮಕ್ಕಳು ಗಂಜಿ ಉಣ್ಣುವ ಬದಲು ಬೆಳಗ್ಗೆ ಎದ್ದು ಕಾಫಿ ಕುಡಿಯುವ ಶೋಕಿ ಕಲಿತ ಈ ಕಾಲದಲ್ಲಿ, ಅವಳು ಕಾಫಿ ಮಾಡಲು ಕಲಿಯದಿದ್ದರೆ ಆಗುತ್ತದೆಯೇ ?"— ಎಂದು ಚುರ್ರೆನ್ನುವಂತೆ ಹೇಳಿ ಹೊರಟು ಹೋದರು.

ಕಾಳ ಸದ್ದಿಲ್ಲದೆ ತನ್ನ ಕಾಫಿಯ ಲೋಟ ಹಿಡಿದುಕೊಂಡು ಹೊರಗೆ ನುಸುಳಿದ.

ಎರಡು ಅತ್ಯಂತ ಶ್ರೇಷ್ಠ ಚಿತ್ರಗಳು ! . . . ಒಂದು ಹಿರಿದೋ ಇನ್ನೊಂದು ಕನ್ನಡ !

ಧಾರವಾಡದ

ರೀಗಲ್ ಚಿತ್ರಮಂದಿರದಲ್ಲಿ

ಈ ವರ್ಷದ ಚಿತ್ರಗಳಲ್ಲಿಯೇ ಅತ್ಯುತ್ತಮ ಎಂದು ಗಣಿಸಲಾದ

ಸಾವನ — ಆಯಾ — ರೆ

ಭೂ— ಕಿಶೋರ ಸಾಹು, ರಮೋಲಾ.

ಕಲಾಪೂರ್ಣವಾದ ಕನ್ನಡ ಚಿತ್ರ

ಭಾರತಿ

ಭೂ— ಟಿ. ಸೂರ್ಯಕುಮಾರಿ, ರಾಜಕುಮಾರಿ, ಸಂಪತ್ತು, ಮುರಾರಿರಾವ ಇತ್ಯಾದಿ.

ಈ ಎರಡು ಹಿರಿದಾದ ಚಿತ್ರಗಳು ಬೇಗನೆ ಪ್ರದರ್ಶಿಸಲ್ಪಡುವವು. ತಪ್ಪದೇ ನೋಡಿರಿ !

ಉತ್ತರಕನ್ನಡ ಜಿಲ್ಲೆಯ ಜನಪದ ಸಾಹಿತ್ಯ

ಸಂಗ್ರಾಹಕರು : ಶ್ರೀ ಉಪೇಂದ್ರ ನಾಯಕ, ಕಾರವಾರ

ಮದುವೆಯ ಹಾಡುಗಳು

ಬಾಗಿ ಮಳಿಗೆಯ ಒಳಗೆ ಹೋಗಿ ನೋಡುವ ಬನ್ನಿ
ಈಗಿನವ ಬರೆದ ಹಸೆಗಾರಿ

ಈಗಿನವ ಬರೆದ ಹಸೆಗೆರೆಯ ಬುಡಪಲ್ಲಿ
ಕಾಣ ಕನ್ನಡಿ ಮೊಳೆಸ್ಯೋವು.

ಕಳಸ ಮೊಳೆವುದು ಅಲ್ಲ ಕನಡಿ ಹೊಳೆವುದು ಅಲ್ಲ
ತಮ್ಮ ಮುಡಿದ್ದೂವು ಹೊಳಿಸ್ಯೋವು ! ॥ ೧ ॥

ಹಸೆಯಾನು ಪಾನ್ಯವರೆ ಹಸೆಗೆರೆಯು ಬರೆದವರೆ,
ಮೇಲೆ ಪೊಪ್ಪಡನು ಬಿಡಿಸವರೆ;

ಮೇಲೆ ಪೊಪ್ಪಡವ ಬಿಡಿಸವರೆ ಪಾಂಡವರೆ
ಶಿಸುವ ಸಿಂಗರಿಸಿ ಕಳ್ಸವರ ॥ ೨ ॥

ದೊಡ್ಡ ಹರಿವಾಣದಲ್ಲಿ ದೊಡ್ಡಕ್ಕಿ ದೊಡ್ಡಕಾಯಿ
ದೊಡ್ಡ ಸಿಂಗಾರವ ನಡುವಿಟ್ಟು

ದೊಡ್ಡ ಸಿಂಗಾರವ ನಡುವಿಟ್ಟು ತಮ್ಮಯ್ಯ
ಒಂದೆ ಮನಸಿನಿಂದ ನಗ್ದ ಕೂಡುವ

ನೆಗ್ದಕ ಕೋಡೋ ನನ್ನ ಬಲದಲ್ಲಿ ನಾನಿನ್ನ
ಎನವಂದಕ್ಕೋಗಿಲೆ ಬಮತೀನೆ ॥ ೩ ॥

ಕೈವಿಳ್ಕಕ ಹೋಗುವಾಗ ಒಳ್ಳೆ ಮೂರುತ ಜೇಕು
ಗೋಡೀ ಮೇಲಿನ ಸಳಬತ್ತ

ಗೋಡೀ ಮೇಲಿನ ಸಳೆಬೆತ್ತ ನಾಗಬೆತ್ತ
ಒಳ್ಳೆ ಮೂಹೂರ್ತಕ್ಕೆ ಬಂಬೇಕು ॥ ೪ ॥

ಬಣ್ಣದ ಎಲವನ್ನ ಬೆಳ್ಳೀ ಸುಣ್ಣದ ಕಾಯಿ
ಕನ್ನಡಿ ಮುಕದಕ ಕುದರಿ ಏರಿ।

ಕನ್ನಡಿ ಮುಕದಕ ಕುದರಿಯೇರಿ ಮಗನಿಗೆ
ಹೆಣ್ಣ ಕೇಳ್ವಲ್ಲಿ ಹೋಟನ್ರೆ ॥ ೫ ॥

ಮುತ್ತಿನ್ಹಾವುಗೆ ಮೆಟ್ಟ ಅಪ್ಪಯ್ಯ ಒಳಗೆ ಬಾರೊ,
ಮುತ್ತ ಬೀರಾಡೋ ಒಳಗೆಲ್ಲ।

ಮುತ್ತಕ ಬೀರಾಡೋ ಒಳಗೆಲ್ಲಾ — ಮಗನಿಗೆ
ಮುತ್ತಿನ ಸೇಸೇ ಇಡಬಾರೊ! ॥ ೬ ॥

ಸಾಸಿ ತುಂಬಿದ ಅಕ್ಕಿ ರಾಶಿಗೊಂಡೊಯ್ದಾವೆ
ಒಕಸೂ ತಮ್ಮಯ್ಯನ ಬಳಗವು

ಒಕಸೂ ತಮ್ಮಯ್ಯನ ಬಳಗ ತುಂಬಿದ ಅಕ್ಕಿ
ರಾಶಿಗೊಂಡಿದೆಯೆ ಮುಡಿ ಮೇಲೆ ॥ ೭ ॥

ತಾರಿಯ ದೀಪಕ್ಕೆ ತಾನೆಣ್ಣೆಯೆದಾನೆ
ತಾಯಿಗ್ಹೀಳವನೆ ಹಡನವ

ತಾಯಿಗ್ಹೀಳವನೆ ಹಡನವ ಏನಂದಿ
ತಾರಿಯು ದೀಪಕ ಜತನವೆ ॥ ೮ ॥

ಹತ್ತು ಮಾಳಿಗೆಯೊಳಗೆ ತುಪ್ಪದಲ್ಹೋಮಾ ಹಾಕಿ
ಹತ್ತುವರಕೆ ತಂದ ಸಿರಿಕವಿಲೆ

ಹತ್ತು ವರಕೆ ತಂದ ಸಿರಿಕವಿಲೆ ದಾನ ಕೊಟ್ಟು
ತಮ್ಮ ಮದಿವೀಗಿ ಸೌನವನೆ ! ॥ ೯ ॥

ಮಂಜ್ಜನಿ ಉದ್ದುವಾಗೆ ಮಂಜ್‌ಕುದರಿ ಮೆಯ್ವಾಗೆ
ತಕ್ಕೈಸಿಕೊಂಡಿದ್ದೆ ಮಗನಿಗೆ।

ತಕ್ಕೈಸಿಕೊಂಡಿದ್ದೆ ಮಗನಿಗೆ ಏನಂದೆ—
ನಿನ್ನ ಬಿಟ್ಟರಗಳಿಗಿ ಇರಲಾರೆ ! ॥ ೧೦ ॥

ಹಾಲು ಕುಡಿಯೆ ತಾಯೆ ಹಣ್ಣು ಮೆಲಿಯೆ ತಾಯೆ !
ಸೂಸಕದ ದಂಡ ಮುಡಿ ತಾಯೇ !

ಸೂಸಕದ ದಂಡೆ ಮುಡಿ ತಾಯೇ ಸೋದರದ
ಸೀತೀ ಗೆದ್ದು ಮನಿಗೆ ಬರುವನಕ ॥ ೧೧ ॥

ಉಪ್ಪರಿಗೀ ಮಳಿಗೇಲಿ ಅಪ್ಪಯ್ಯನೋಲಗ
ಅಲ್ಹೋಗಿ ಶ್ರೀಪಾದ ಒರಗ್ಯಾನೆ।

ಅಲ್ಹೋಗಿ ಶ್ರೀಪಾದ ಒರಗಿ ಏನ್ ಹೇಳ್ಯಾನೆ
ಸಂಗಡಿನ್ಯಾರಕ ಕಳೀಸುವಿ ? ॥ ೧೨ ॥

ಈಗೀನ ಮದುವಿಗೆ ಈಗ್ಯಾರಿಗೆ ಹೇಳಾಲಿ
ಈಗ್ಯಾರಿಗೆ ಓಲೇ ಬರಿಯಾಲಿ ?

ಈಗ್ಯಾರಿಗ ಓಲೇ ಬರೆಯಾಲಿ ಮಗ ಕೇಳೊ
ಕೂಡೆ ಹುಟ್ಟಿರುವೀ ಹಿರಿಯಕ್ಕಾ !

ಕೂಡೇ ಹುಟ್ಟಿರುವೀ ಹಿರಿಯಕ್ಕ ಹಿರಿಭಾವ
ಅವರಿಬ್ಬರ ಸಂಗಡ ಕರಡೊಯ್ಯೊ ॥ ೧೩ ॥

ನೆಲೆಮನೆಯೊಳಗೆಲ್ಲಾ ಹಲವು ಜಾತಿಯ ಕೇಲ
'ಕಲ ಕಲ' ಅಂದಾವು ಗಿಳಿಗಳು

ಕಲಕಲ ಎಂಬುವ ಗಿಳಿಗೆ ಬುದ್ಧಿಯ ಹೇಳಿ
ತಮ್ಮಯ್ಯ ಮದಿವಿಗೆ ಹೊರಟನ್ನೆ ॥ ೧೪ ॥

ಹರಿವಾಣದೊಳು ಹೊನ್ನ ದಾಳವಾಡುತ ಬಂದಾ
ಕಾಮಕಸ್ತೂರಿಯ ಕಮಲನೆ।

ಕಾಮಕಸ್ತೂರಿಯ ಕಮಲನೆ ತಮ್ಮಯ್ಯ
ಶ್ರೀರಾಮರ ಪುರಕೆ ಬರುವಕನೆ ॥ ೧೫ ॥

ಹೊನ್ನಾರ ಹೊಳೆಗೆ ಹನ್ನೆರಡು ದಂಡುಗಿ ಹಾಕಿ
ಪನ್ನಗ ಬಿಡ್ಸವರೆ ಅಳಿಯಗೆ।

ಪನ್ನಗ ಬಿಡ್ಸವರೆ ಅಳಿಯಗೆ ಪಟ್ಟಣದ
ಅರಸು ಲಗ್ನನಕ ಬರುವನೆಂದು ॥ ೧೬ ॥

---

೧ ಚಿತ್ರಕಾರ, ೨ ಚಿತ್ರಿಸುವ ಚಿತ್ರ, ೩ ಎತ್ತಿಕೊಡ, ೪ ಹೆಣ್ಣಿಗೆ ಹೂವಮುಡಿಸಲು, ೫ ದೇವರು ಮೈಮೇಲೆ ಬರುವಾಗ ಬಡಿವ ಚಿತ್ರ, ೬ ವರಷ = ನಾಲ್ಕು ರೂಪಾಯಿ, ೭ ಅಳಿಯ, ೮ ಹೊಡೆದ್ದಾವೆ, ೯ ಸೇರುವೆ.

ಒಕ್ಕಲುತನದ ಕೆಲವು ಪುಸ್ತಕಗಳು

೧. **ನಮ್ಮ ಭೂಧಾರಣ ಸಮಸ್ಯೆ**
(Our Land Tenure System)

೨. **ತುಂಡು ಹೊಲಗಳ ಸಂಯೋಜನೆ** ೧–೦–೦
(Consolidation of small Holdings)

೩. **ನಮ್ಮ ಒಕ್ಕಲಿಗ** ೧–೪–೦
(Our Farmer)

ಈ ಮೂರೂ ಪುಸ್ತಕಗಳನ್ನು ಬರೆದು ಬೆಳಕಿಗೆ ತಂದವರು, ಮುಂಬಯಿ ಸರಕಾರದ ಕಂದಾಯ ಖಾತೆಯ ಉಪಮಂತ್ರಿಗಳಾದ ಶ್ರೀಮಾನ್ ಕೆ. ಎಫ್. ಪಾಟೀಲ ಬಿ. ಎ. ಅವರು.

ಒಕ್ಕಲುತನದ ಕಡೆಗೆ ಇಂದು ಜಗತ್ತಿನ ಲಕ್ಷ್ಯವೇ ಎಳೆಯಲ್ಪಟ್ಟಿದೆ. ಒಕ್ಕಲುತನವನ್ನು ಸುಧಾರಿಸಿಕೊಂಡು ಅನ್ನದ ವಿಷಯದಲ್ಲಿ ಸ್ವಾವಲಂಬಿಗಳಾಗಬೇಕೆಂದು ಎಲ್ಲರೂ ಯತ್ನಿಸುತ್ತಿದ್ದಾರೆ. ನಮ್ಮ ದೇಶದಲ್ಲಿಯಂತೂ ಅನ್ನರಂಗವು, ಯುದ್ಧರಂಗದಷ್ಟು ಮಹತ್ತ್ವ ಪಡೆದಿದೆ. ಆದುದರಿಂದ ಇಂಥ ಸಂಧಿಕಾಲದಲ್ಲಿ ಪ್ರತಿಯೊಬ್ಬರೂ ಒಕ್ಕಲುತನದ ಬಗೆಗೆ ತಿಳಿದಿರಬೇಕಾದುದು ತುಂಬಾ ಅವಶ್ಯವಾದ ಮಾತು; ಪ್ರತಿಯೊಬ್ಬರು ಈಗ ಹೆಚ್ಚಿಗೆ ಆಹಾರ ಬೆಳೆಯುವಲ್ಲಿ ನೆರವಾಗಬೇಕಾಗಿದೆ.

"ನಮ್ಮ ಭೂಧಾರಣ ಸಮಸ್ಯೆ"— ಭೂಧಾರಣ ಸಮಸ್ಯೆ ಒಕ್ಕಲುತನದ ಎಲ್ಲ ಸಮಸ್ಯೆಗಳಿಗೂ ಅಡಿಗಲ್ಲು. ಒಕ್ಕಲುತನದಲ್ಲಿ ಅಸ್ಥಿತಿ, ಸುಸ್ಥಿತಿ, ದುರ್ಗತಿ, ಪ್ರಗತಿಗಳು ಭೂಮಿಯ ಒಡೆತನವನ್ನೇ ಅವಲಂಬಿಸಿವೆಯೆಂದರೆ ಸಲ್ಲುವುದು. ಇಂಥ ಮಹತ್ತ್ವದ ಪ್ರಶ್ನೆಯ ಕೂಲಂಕಷ ಚರ್ಚೆ ಈ ಚಿಕ್ಕ ಪುಸ್ತಕದಲ್ಲಿದೆ. ನಮ್ಮ ಒಕ್ಕಲುತನದ ಸ್ಪಷ್ಟಚಿತ್ರವನ್ನು ಕೊಟ್ಟು, ಭೂಧಾರಣಪದ್ಧತಿಯ ಇತಿಹಾಸವನ್ನು ಹೇಳಿ, ಇತರ ದೇಶಗಳಲ್ಲಿ ಈ ವಿಷಯದಲ್ಲಿ ಏನೇನು ನಡೆದಿದೆಯೆಂಬುದನ್ನು ವಿವರಿಸಿ, ಸದ್ಯದ ಭೂಧಾರಣ ಪದ್ಧತಿಯಿಂದ ಒಕ್ಕಲುತನದ ಮೇಲಾದ ಪರಿಣಾಮದಿಂದ ಭಾರತದ ಆರ್ಥಿಕಸ್ಥಿತಿಗೆ ಬಲವಾದ ಪೆಟ್ಟುಬಿದ್ದುದನ್ನು ಮನಗಾಣಿಸಿ, ಇಂದು ಭಾರತಕ್ಕೆ ಯಾವ ಭೂಧಾರಣಪದ್ಧತಿಯು ಬೇಕೆಂಬುದರ ಬಗೆಗೆ ಸುದೀರ್ಘ ಚರ್ಚೆನಡೆಯಿಸಿ, ದೇಶದಲ್ಲಿ ಇಂದು ಪ್ರಚಾರದಲ್ಲಿರುವ ಎಲ್ಲ ಪದ್ಧತಿಗಳ ವಿವರಣೆ ಕೊಟ್ಟು, ನಮಗಿಂದು ಕಾಟುಂಬಿಕ ಒಕ್ಕಲುತನಕ್ಕಿಂತ ಹೆಚ್ಚು ಹಿತಕಾರಿ ಯಾವುದೂ ಇಲ್ಲವೆಂದು ಒತ್ತಿ ಹೇಳಿ, ಕೊನೆಯಲ್ಲಿ ಒಕ್ಕಲುತನದ ಕೆಲವು ಸುಧಾರಣೆಗಳ ಬಗೆಗೆ ಚರ್ಚಿಸಿದ್ದಾರೆ.

ತುಂಡುಹೊಲಗಳ ಸಂಯೋಜನೆ:— ಹೊಲಗಳು ಹೀಗೆ ತುಂಡಾದುದು, ಇಂದು ತುಂಡಾಗುತ್ತ ಬಂದಿರುವುದು ಒಕ್ಕಲುತನದ ಪ್ರಗತಿಗೆ ಅಡ್ಡಗಾಲುಹಾಕಿದಂತೆ. ತುಂಡಾದ ಭೂಮಿ ಇಂದು ನಮ್ಮೆಲ್ಲ ಕಂಗೆಡಿಸುವಷ್ಟು ತೀರ ಸಣ್ಣವಾಗಿವೆ. ಎತ್ತೋ ಕಡೆಯಲ್ಲಿ ಸಾಗುವಳಿಮಾಡಲಿಕ್ಕೆ ಬಾರದಷ್ಟು ಚಿಕ್ಕವುಗಳಿವೆ. ಆದರಿಂದ ಯಾವ ಸುಧಾರಣೆಗೂ ಅವಕಾಶವಿಲ್ಲ. ಇಂದು ಒಕ್ಕಲುತನವನ್ನು ಸುಧಾರಿಸುವವರು, ಮೊದಲು ತುಂಡುಹೊಲಗಳನ್ನು—ಆರ್ಥಿಕದೃಷ್ಟಿಯಲ್ಲಿ ಲಾಭದಾಯಕವಾಗುವಷ್ಟು—ದೊಡ್ಡ ಭಾಗಗಳಾಗಿ ಕೂಡಿಸಿದ ಹೊರತು ಸಾಧ್ಯವಿಲ್ಲ. ಈ ಕೆಲಸವೇನೂ ಸಾಮಾನ್ಯವಲ್ಲ— ಅಧಿಕ ಧನ ಬೇಕು. ಪರಿಹಾರಕೊಡಬೇಕಾಗುತ್ತದೆ. ಸಾರ್ವಜನಿಕರ ನೆರವು ಅವಶ್ಯ. ಸರಕಾರದ ಒತ್ತಾಯ ಬೇಕು. ಕಾಯಿದೆ-ಕಾನೂನುಗಳ ಸಹಾಯವಂತೂ ಸರಿಯೇ. ಈ ಪುಸ್ತಕದಲ್ಲಿಯೂ ಮೇಲಿನ ಎಲ್ಲ ವಿಷಯಗಳನ್ನು, ಪರದೇಶಗಳಲ್ಲಿಯ ತುಂಡುಹೊಲಗಳ ತುಲನೆಯೊಂದಿಗೆ ಬಗೆಮುಟ್ಟುವಂತೆ ಚಿತ್ರಿಸಿದ್ದಾರೆ.

"ನಮ್ಮ ಒಕ್ಕಲಿಗ" ಈ ಪುಸ್ತಕವನ್ನು ಒಕ್ಕಲುತನದ ಅರ್ಥಶಾಸ್ತ್ರದಲ್ಲಿ ವಿಶೇಷ ತಜ್ಞತೆಪಡೆದಿರುವ ಶ್ರೀ. ಬಿ. ಎಸ್. ಮಾವಿನಕುರ್ವೆಯವರು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಶ್ರೀ. ಪಾಟೀಲರು ಅದನ್ನು ಕನ್ನಡದಲ್ಲಿ ನಿರರ್ಗಳ, ಸುಂದರ ನುಡಿಯಲ್ಲಿ, ಸುಲಭ ಶೈಲಿಯಲ್ಲಿ ಅನುವಾದಿಸಿದ್ದಾರೆ. ಆರಂಭದ ಚಿಕ್ಕ ಪುಸ್ತಕದಲ್ಲಿ ಒಕ್ಕಲಿಗನ ಮತ್ತು ಒಕ್ಕಲುತನಗಳೆರಡರ ಸ್ಪಷ್ಟಚಿತ್ರವಿದೆ. ಒಕ್ಕಲುತನದಲ್ಲಿ ತೀರ ಅಜ್ಞರಾಗಿರುವವರಿಗೂ ಅಸಕ್ತಿಹುಟ್ಟುವಂತೆ ಪುಸ್ತಕ ಬರೆದಿದ್ದಾರೆ. ಅಂಕೆ-ಸಂಖ್ಯೆಗಳಿದ್ದರೂ ಕಲೆಬೇಸರು ಬರುವುದಿಲ್ಲ. ಪುಸ್ತಕ ಸಚಿತ್ರವಾಗಿದ್ದುದರಿಂದ ತುಂಬಾ ಪರಿಣಾಮಕಾರಿಯಾಗಿದೆ. ಒಕ್ಕಲುತನದ ವಿಷಯವನ್ನು ಕಲಿಯುವ ಚಿಕ್ಕ ಮಕ್ಕಳಿಗೂ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ. ಯಾವತ್ತು ವಯಸ್ಸಿನ, ಎಲ್ಲ ಬುದ್ಧಿಮಟ್ಟದ ಜನರು ಓದುವ ಪುಸ್ತಕವು.

ಶ್ರೀ. ಪಾಟೀಲರು ಒಕ್ಕಲುತನದ ಅರ್ಥಶಾಸ್ತ್ರವನ್ನು ತುಂಬಾ ಅಸಕ್ತಿಯಿಂದಲೂ ಆದರದಿಂದಲೂ ಅಭ್ಯಸಿಸಿದ್ದಾರೆ. ಮೇಲಾಗಿ ಸರಕಾರದ ಒಂದು ಉಚ್ಚ ಹುದ್ದೆಯಲ್ಲಿರುವುದರಿಂದ, ಆ ವಿಷಯದಲ್ಲಿ ಸರಕಾರದವರು ಕೈಕೊಳ್ಳುವ ಧೋರಣೆಯ ಸ್ಪಷ್ಟ ತಿಳಿವಳಿಕೆಯಿದೆ; ಪ್ರತಿ ಪುಸ್ತಕವನ್ನು ಬರೆಯುವಾಗ, ಇತರ ದೇಶಗಳಲ್ಲಿ ನಡೆದುದರ ವಿವರಣೆಯನ್ನು ಕೊಟ್ಟು ತುಲನೆ ಮಾಡಿ, ಅಂಕೆ-ಸಂಖ್ಯೆಗಳಿಂದ ನಮ್ಮ ಮುಂದಿಡುತ್ತಾರೆ. ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳು ಕಡಿಮೆ. ಅದರಲ್ಲಿ ಒಕ್ಕಲುತನದ ಪುಸ್ತಕಗಳಂತೂ ಇಲ್ಲವೇ ಇಲ್ಲ. ಈ ದಿಶೆಯಲ್ಲಿ ಧೈರ್ಯಯುತವಾದ ಹೆಜ್ಜೆಯಿಟ್ಟುದು ನಮ್ಮೆಲ್ಲರ ಭಾಗ್ಯವೇ ಸರಿ. ಅದಕ್ಕಾಗಿ ಲೇಖಕರಿಗೆ ಕನ್ನಡಿಗರು ಕೃತಜ್ಞರಾಗಿದ್ದಾರೆ.

—ಪಿ. ಎಸ್. ಎಚ್.


ದಮ್ಮು
ಕೆಟ್ಟಗಾದೀತು
ಆದರೆ
ಪುರೋಹಿತ ಕ್ಷಯಹಾರಿಯಿಂದಲೇ
ಸರ್ವ ವಿಧದಲ್ಲಿಯೂ ಕಫವನ್ನು ಕಡಿಮೆ ಮಾಡಿ ದಮ್ಮಿನ ಕೆಮ್ಮನ್ನು ಕಡಿಮೆ ಮಾಡಿ ಕಫವನ್ನು ಕರಗಿಸಿ ಹೊರಗೆ ತಳ್ಳಿ ಶ್ವಾಸಕೋಶಗಳಿಗೆ ಶಕ್ತಿಯನ್ನು ಕೊಟ್ಟು ಕೆಮ್ಮು ದಮ್ಮು ಕಫ ಇವುಗಳಿಂದ ಬಿಡುಗಡೆ ಮಾಡಿಸಿ ಪೂರ್ಣ ಗುಣ ಮಾಡಿಸಿ ಕೊಡುವುದು.
ಸಿ-ಕೆ-೩ ಮತ್ತು ಸಿ-ಡಿ-೩ ಸ್ಯಾಕೆಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ ಕೊಲ್ಹಾಪುರ, ಇವರಿಂದ ಕರೀದಿಸಿಕೊಳ್ಳಬೇಕು.
ಮೋಸವನ್ನು ಮತ್ತು ನಿರ್ಲಕ್ಷವನ್ನು
ಕಾಪೆರೋಷವನ್ನು ಗುಣವಿಸಲು
ಇದುವೇ ನೆಮ್ಮಲ ಔಷಧ
DR. PUROHIT PHARMACY, KOLHAPUR

ಶಿವನ ಬುಟ್ಟಿ

(ಪ್ರಬಂಧ ಸಂಕಲನ)

ಹಿರೇಮಲ್ಲೂರ ಈಶ್ವರನ್‌ರ ೩೬ ಪುಟ್ಟ ಪ್ರಬಂಧಗಳ ಅಚ್ಚುಕಟ್ಟಾದ ಸಂಗ್ರಹವಿದು. ಪ್ರೊ. ಕೆ. ಜಿ. ಕುಂದಣಗಾರರ ಮುನ್ನುಡಿ, ಉರವಕೊಂಡದ ಶ್ರೀಜಗದ್ಗುರುಗಳ ಹರಕೆಯಿಂದೊಡಗೂಡಿದೆ.

ಮುನ್ನುಡಿಕಾರರೇ ಪುಟ್ಟ ಪ್ರಬಂಧದ ಲಕ್ಷಣ ಹೇಳಿರುವರು : 'ಅದಕ್ಕೆ ಸುಸ್ಪಷ್ಟ ತಂತ್ರವಿಲ್ಲ. ಆದರೆ ವಿಷಯ ಹಿಡಿತದಲ್ಲಿರಬೇಕು. ಭಾಷೆ ಅಲಂಕಾರವಾಗಿರಬೇಕು. ಭಾವಾವೇಶಕ್ಕೆ ಒಳಗಾಗದೆ ತಾಳ್ಮೆಯನ್ನಿರಿಸಿಕೊಳ್ಳಬೇಕು. ವಿವೇಚನೆಯಲ್ಲಿ ಸಮತೂಕ ವಿರಬೇಕು.'

ಪರಿವಿಡಿಯಲ್ಲಿ ಸೂಚಿಸಿದಂತೆ ಇಲ್ಲಿಯ ವಿಷಯಗಳ ಆಯ್ಕೆಯಲ್ಲಿ ಸಾಕಷ್ಟು ವೈವಿಧ್ಯವಿದೆ. ಎಲ್ಲವನ್ನೂ ಓದಿಯೇ ತೀರಬೇಕೆಂದು ಮೊದಲು ಕೂತೂಹಲ ಹುಟ್ಟುವದು; ಆದರೆ ಸರಸರ ಪುಟ ತಿರುವುತ್ತ ಹೋದಂತೆ— ನಿಜವಾಗಿಯೂ ಇವು ಪುಟ್ಟ ಪ್ರಬಂಧಗಳಿರುವದರಿಂದ— ವಿವೇಚನೆಯಲ್ಲಿ ಹೊಸತನವೇ ಕಾಣಿಸದ ಗಾಂಭೀರ್ಯವು ಇಲ್ಲಿಯ ಎಲ್ಲ ಪ್ರಬಂಧಗಳಲ್ಲಿ ಹಾಸುಹೊಕ್ಕಾಗಿರುವದೇನೋ ನಿಜ. ಆದರೆ ಅದು ವಿಶಿಷ್ಟ ವಾಕ್ಯರಚನೆಯ ಮೂಲಕ ಇಂತಹ ಸೂತ್ರಬದ್ಧ ಸರಣಿ (epigrammatical style) ಯೇ ನಾಟಕೀಯತೆ ತಲೆ ಎತ್ತಿದರೂ, ಎಷ್ಟೋ ಸಲ ಓದುಗನಿಗೆ ನಂಬಿಡಿವಂತಾಗಿ ಮುಂದಕ್ಕೆ ಸಾಗುವದೇ ಕಠಿಣವಾಗುವದು. ಎಷ್ಟೇ ಕ್ಷಣಕಾಲ ತರ್ಕದ ಎಳೆ ಹರಿದಂತಾಗಿ, ಆದರೆ 'ರಿಪೇರು' ಆ ನಂತರವೇ ಬೇರೊಂದು ಪ್ರಬಂಧ ಓದಲು ಮನಸ್ಸು ಹರಿಯುವದು. ಬೇಂದ್ರೆಯವರ ನಿರಾಶಾವಾದದ (pessimism) ಛಾಯೆ ಅಲ್ಲಲ್ಲಿ ಜಿನುಗಿ ರೀಕ್ಷಿತವಾಗಿ ಏರಿಬಂದು ಓದುಗನನ್ನು ವಿಚಾರಪರನನ್ನಾಗಿಸುವದು.

ಸಿರಿವಂತಿಕೆ, ಸೌಂದರ್ಯ, ಅಧಿಕಾರ, ಕೀರ್ತಿ, ಪ್ರೇಮ ಪ್ರಾರ್ಥನೆ, ಸ್ತುತಿ, ಪ್ರವಾಸ, ಯೌವನ— ಎಂಬ ಪ್ರಬಂಧಗಳ ಉತ್ತಮವಾಗಿವೆ. ಉಳಿದುವು ಪೂರ್ಣ ಅರರಳುವ ಮೊದಲೆ ಮುಗಿದು ಹೋಗಿವೆ. ಕೆಲವಂತೂ— ಉಪದೇಶಪರ ಸರಣಿ ಭಿನ್ನಭಾಷೆಗಳ ಅನುವಾದದ ಝುಳುಕು, ಅನಶರಣಿಕೆಯ ಬಾಹುಲ್ಯ, ಕಲ್ಪನೆಯ ಕುಸುರಿನ ಅಭಾವದ ಮೂಲಕ ಪರಿಣಾಮಕಾರಿ ಎನಿಸವು. ಆದರೆ ಪ್ರಬಂಧಗಳನ್ನು ಹೇಗೆ ಪ್ರಾರಂಭಿಸಬೇಕು ಹೇಗೆ ಮುಕ್ತಾಯಗೊಳಿಸಬೇಕು—ಎಂಬುದರ ಬಗೆಗೆ ಲೇಖಕರು ಮಾದರಿಗಳನ್ನು ಮುಂದಿಟ್ಟು ಅಭ್ಯಾಸಿಗಳನ್ನು ಋಣಬದ್ಧರನ್ನಾಗಿರಿಸಿರುವರು. ಎಷ್ಟೋ ಸಲ ಈಶ್ವರನ್‌ರು, ಓದುಗರೆದುರು ವಿಷಯಗಳ ಎಲ್ಲ ಸ್ವರೂಪ ಬಣ್ಣಿಸುವಾಗ, ತಮ್ಮ ಸೂಕ್ಷ್ಮ ನಿರೀಕ್ಷಣ ಶಕ್ತಿ, ವಿದ್ವತ್ತೆ, ತೂಕದ ವಾಕ್ಯರಚನೆಯ ಸೊಗಸು ತೋರ್ಪಡಿಸಿರುವರು.

ಈಶ್ವರನ್‌ರಲ್ಲಿದ್ದ ಕಾವ್ಯಶಕ್ತಿ, ಆ ಆ ಪ್ರಬಂಧಗಳಲ್ಲಿ ಒಡಮೂಡುತ್ತ ಬಂದಿದೆ. ಅಲ್ಲಲ್ಲಿ ನಾಟಕಾಂಗಗಳು ತೊರುತ್ತಿವೆ. ವಿಮರ್ಶಾಶಕ್ತಿ ತುಂಬಿ ತುಳುಕುತ್ತಿದೆ. ಇದೇ ಗುಣತ್ರಯ ಅವರ ಇನ್ನು ಮುಂದಿನ ಸಾಹಿತ್ಯ ಸೇವೆಯ ತ್ರಿಮುಖಗಳಾಗಲಿ. ಅವರ ಸಾಹಿತ್ಯ ಹೀಗೇ ಎಲ್ಲರಿಗೂ ಬೇಕಾಗಲಿ ಎಂದು ನನ್ನ ಕೊನೆಯ ಕೋರಿಕೆ.

—ಎನ್. ಎಸ್. ಗದಗಕರ.

ಓದಲೇ ಬೇಕಾದ ಉಪಯುಕ್ತ ಪುಸ್ತಕ
ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು
ಲೇ—ಯಂ. ವಾಸುದೇವರಾವ, ಎಂ.ಎ., ಬಿ.ಟಿ
ಸುರತ್ಕಲ್ ದ. ಕ.
೫ ವಿಶಿಷ್ಟ ಭೂಪಟಗಳು — ೧೫ ಚಿತ್ರಗಳು
ಮದ್ರಾಸು ವಿಶ್ವವಿದ್ಯಾನಿಲಯದ ಬಹುಮಾನಿತ ಪುಸ್ತಕ.
ಬೆಲೆ ೨-೮-೦
(೧) ಪ್ರತಿಗಳನ್ನು ಗ್ರಂಥಕರ್ತರಿಂದಾಗಲಿ (೨) ಮನೋಹರ ಗ್ರಂಥ ಭಾಂಡಾರ, ಧಾರವಾಡ (೩) ಕರ್ನಾಟಕ ಪುಸ್ತಕ ಭಾಂಡಾರಂಗಳಿಂದ (೪) ಇಂಡಿಯನ ಇಂಕ್ಟಿಯುಲ್ಸ್ ಮತ್ತು ವಿಜಯವಾಣಿ ಮುಂಗಳವಾರ ಇವರಿಂದಾಗಲಿ ಪಡೆಯಬಹುದು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಸಪ್ಟಂಬರ್ ಜಯಂತಿ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ **'ನನ್ನ ಮೆಚ್ಚಿನ ಕನ್ನಡ ಮಾಸಪತ್ರಿಕೆ'** ಎಂಬುದಾಗಿ **ಬೇರೆ ಬೇರೆ** ೧೫ ಜನರಿಂದ ವಿಮರ್ಶಾತ್ಮಕ ಲೇಖನಗಳು ಬಂದಿವೆ. ಕಳುಹಿಸಿದವರ ವಿವರ ಹೀಗಿದೆ:

'ಜಯಂತಿ'ಯನ್ನು ಮೆಚ್ಚಿ ಬರೆದವರು: ೧ ಶ್ರೀ. ಪ. ಸು ಭಟ್ಟ ಇಂ. ವಿ. ಕಾಲೇಜ್, ಶಿವಮೊಗ್ಗ. ೨. ಶ್ರೀ ವಿ. ಆರ್. ಮುತಾಲಿಕ ದೇಸಾಯಿ, ಧಾರವಾಡ. ೩ ಶ್ರೀ. ವಿ. ಸಿ. ಇನಾಮದಾರ 'ವಿ ಭಾ. ಕೋವಿದ' ಮುದುರ್ಗ. ೪. ಶ್ರೀ ಎಂ. ಅನಂತಾಚಾರ್ಯ ಬಿ. ಎ (ಆನರ್ಸ್), ತಾಲ್ಲೂಕಾ ಆಫೀಸ್, ನರಸಿಂಹರಾಜಪುರ ೫. ಶ್ರೀಮತಿ ವಿದ್ಯಾ, ಶಾರದಾ ಸ್ತ್ರೀಸಮಾಜ, ಬೆಂಗಳೂರು. ೬. ಶ್ರೀ. ವ. ನಾ. ಸರದೇಸಾಯಿ, ಬಾದಾಮಿ ೭. ಶ್ರೀ ವೀರೇಶ್ವರ ಅಗಡಿ, ಬೆಳಗಾಂವಿ. ೮. ಶ್ರೀ. ಅನ್ನದಾನಿ ಸುಬ್ಬನಗೌಡಾ ಸಿ. ಬಿ. ಎ., ಲಿಂಗರಾಜ ಕಾಲೇಜ್, ಬೆಳಗಾಂವಿ ೯. ಶ್ರೀ. ಬಿ. ಎಸ್. ಮಠಕರ್ ಎಂ. ಎ. ಬಿ. ಟಿ ಪುಣೆ.

'ಕತೆಗಾರ' ನನ್ನು ಮೆಚ್ಚಿ ಬರೆದವರು: ಶ್ರೀಮತಿ ಕ. ಶಾ. ಶಕುಂತಲಾ, ಬೆಂಗಳೂರು ನಗರ. ೨. ಸೌ ಸರೋಜ, ಬಸವನ ಗುಡಿ – ಬೆಂಗಳೂರು ೪.

'ಕೊರವಂಜಿ' ಯನ್ನು ಕುರಿತು ಶ್ರೀ. ಜಿ. ಆರ್. ಸುಬ್ಬರಾವ್ ಶಿವಮೊಗ್ಗ ಅವರೂ, **'ಕಥಾವಳಿ'** ಯನ್ನು ಕುರಿತು ಸೌ. ಲೀಲಾವತಿ ಕೆ. ಸಿ. ಬೆಂಗಳೂರು ಅವರೂ, **'ಒಕ್ಕಲಿಗ'** ಪತ್ರಿಕೆಯನ್ನು ಕುರಿತು ಶ್ರೀ. ಜೀವಪ್ಪ ಲ ಬಿಜಾಪುರ, ಬಾಗಲಕೋಟಿ ಅವರೂ ಮೆಚ್ಚಿ ಬರೆದಿದ್ದಾರೆ.

ಸಂಪಾದಕ ಮಂಡಲಿಯೆ ಬಂದ ವಿಮರ್ಶೆಗಳನ್ನೆಲ್ಲ ಓದಿ ವಿಮರ್ಶಿಸಿತು. ಬಂದುವುಗಳಲ್ಲಿ ಜಯಂತಿಯನ್ನು **ಮೆಚ್ಚಿದ** ಬರೆಹಗಳೇ ಹೆಚ್ಚು ಸಂಖ್ಯೆಯಲ್ಲಿನೆಯಲ್ಲದೆ ಹೆಚ್ಚಾಗಿ ಒಳ್ಳೆಯವಿವೆ. **ಶ್ರೀ. ಪ. ಸು. ಭಟ್ಟ,** ಶಿವಮೊಗ್ಗ ಅವರು, ಪರೀಕ್ಷಕರ **ತೀರ್ಮಾನದಲ್ಲಿ ಮೊದಲಿಗರಾಗಿ** ನಿಂತಿದ್ದಾರೆ **ಶ್ರೀ. ಜಿ. ಎಸ್. ಮಠಕರರು** ಜಯಂತಿಯ ೧೨ ವರ್ಷದ ಸಂಚಿಕೆಗಳನ್ನೆಲ್ಲ ಚೆನ್ನಾಗಿ **ಪರಿಶೀಲಿಸಿ,** ವಿಸ್ತಾರವಾದ ಲೇಖನವನ್ನು ಬರೆದಿದ್ದಾರೆ. **ಶ್ರೀಮತಿ ಪದ್ಮಾ,** ಶ್ರೀ ವೀರೇಶ್ವರ ಅಗಡಿ, ಶ್ರೀ. ವ. ನಾ. ಸರದೇಸಾಯಿ ಅವರ ಲೇಖನಗಳೂ ಉತ್ತಮವಾಗಿವೆ. ಶ್ರೀ. ಸೌ. ಸರೋಜಾ, ಶ್ರೀ. ಜಿ. ಆರ್. ಸುಬ್ಬರಾವ ಅವರ ಲೇಖನಗಳು ಒಳ್ಳೆಯವಾಗಿವೆ.

'ಜಯಂತಿ' ಯನ್ನು ಮೆಚ್ಚಿದ ಕೆಲವರು, ಅದರ ಸುಧಾರಣೆಗಳನ್ನು ಕುರಿತು ವಿಧಾಯಕ ಸೂಚನೆಗಳನ್ನು ಮಾಡಿದ್ದಾರೆ. **ಅವರ** ಸೂಚನೆಗಳು ಯೋಗ್ಯವಾದವುಗಳೆಂದು ನಮ್ಮ ಸಂಪಾದಕ ಸಮಿತಿ ತನ್ನ ಬೈಠಕ್ಕುಗಳಲ್ಲಿ ನಿರ್ಣಯಿಸಿದೆ. ಅವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಕಾರ್ಯಗತಗೊಳಿಸಲಾಗುವುದು.

ಮುಂದಿನ ತಿಂಗಳಿಗಾಗಿ ಈ ಸಂಚಿಕೆಯಲ್ಲಿಯ **'ಮಾತು-ಕತೆ'** ಎಂಬ ಶ್ರೀ ಮಿರ್ಜಿ ಅಣ್ಣಾರಾಯರ ಕತೆಯನ್ನು ವಿಮರ್ಶಿಸಿ ಬರೆಯಬೇಕು.

— **ಸಂಪಾದಕರು**

ನನ್ನ ಮೆಚ್ಚಿನ ಕನ್ನಡ ಮಾಸಪತ್ರಿಕೆ
ಜಯಂತಿ

ಶ್ರೀ. ಪ. ಸು. ಭಟ್ಟ ಇಂ. ವಿ. ಕಾಲೇಜ್, ಶಿವಮೊಗ್ಗ.

ಇಂದು ಕನ್ನಡ ನಾಡಿನಲ್ಲಿ ಹಲವು ಹದಿನೆಂಟು ಪತ್ರಿಕೆಗಳು **ನಾಡನ್ನು ಬೆಳಗುವ** ಕಾರ್ಯದಲ್ಲಿ ತೊಡಗಿವೆ. ದಿನದಿನಕ್ಕೂ **ಹೊಸ ಹೊಸ** ಮಾಸಪತ್ರಿಕೆಗಳು ಹುಟ್ಟುತ್ತವೆ — ನಾಯಿಕೊಪ್ಪೆಯಂತೆ— ಒಂದೆರಡು ತಿಂಗಳು ಬಾಳಿ ಸಾಯುತ್ತವೆ. ಮೊದಲಿದ್ದ ಉತ್ಸಾಹ, ಶ್ರದ್ಧೆ ಎಲ್ಲ ಒಂದೆರಡು ಸಂಚಿಕೆ ಹೊರಡಿಸುವುದರೊಳಗೇ ಮಾಯವಾಗಿಬಿಡುತ್ತದೆ. ಹೀಗಾಗಿ ಜನರಿಗೂ ಪತ್ರಿಕೆಗಳ ಮೇಲೆ ನಿರಾಸಕ್ತಿ ಉತ್ಪನ್ನವಾಗಿ ಹೋಯಿತು. ಆದರೆ ಅಖಂಡ ಹನ್ನೆರಡು ವರುಷಗಳ ವರೆಗೆ ಅವ್ಯಾಹತವಾಗಿ ಎಡರು-ತೊಡರುಗಳನ್ನು ಲೆಕ್ಕಿಸದೆ, ಜನತೆಯ ಜಾಗೃತಿಯನ್ನುಂಟು ಮಾಡುತ್ತ ಸಾಹಿತಿಗಳನ್ನು ತಂಡತಂಡವಾಗಿ ಬೆಳೆಸುತ್ತ, ಕರ್ನಾಡಿನ **ಕೀರ್ತಿ,** ಬಾವುಟವನ್ನು ಎತ್ತಿಹಿಡಿದ ಒಂದು ಮಾಸಪತ್ರಿಕೆ ಇದೆ. ಆ ಹೆಸರು ಕನ್ನಡಿಗರ ಉಸುರಿನಂತಾಗಿದೆ. ತಿಂಗಳ ಮೊದಲನೆಯ ತಾರೀಖಿಗೆ ಆ ಪತ್ರಿಕೆಯ ಬರವಿಗಾಗಿ ಸಾವಿರಾರು ಜನ ವಾಚಕರು ಹಾರೈಸುತ್ತಿದ್ದಾರೆ. ಒಳ್ಳೆಯ ಮಾಸಪತ್ರಿಕೆಯಿಲ್ಲದ ಕನ್ನಡಿಗರಿಗೆ ಅದೊಂದು ಸಂಜೀವಿನಿ ಮರುಳುಗಾಡಿನಲ್ಲಿ ಒಂದು ಹನಿ ನೀರು ಸಿಕ್ಕರೆ, ಅದೆಷ್ಟು ಆನಂದವಾಗುವುದೋ ಹಾಗೆ, ಆ ಪತ್ರಿಕೆ ಅನ್ಯಾದೃತದ

ಹನಿಯಂತೆ ಇವೆ. ಆದರೆ ಹೆಸರು 'ಜಯಂತಿ'. ಇಂದು ಒಂದು ಪತ್ರಿಕೆಯನ್ನು ಹೊರಡಿಸಿ ಅದನ್ನು ನಡೆಯಿಸುವುದು ಎಷ್ಟು ಕಷ್ಟ ಎಂಬುದು 'ಬಲ್ಲವನೆ ಬಲ್ಲ ಬಿಲ್ಲನ ಕಿಸಿಯ' ಎನ್ನುವಂತೆ, ಅದನ್ನು ಬಲ್ಲವನೆ ಬಲ್ಲ. ಹೀಗಿದ್ದರೂ 'ಜಯಂತಿ' ಎಂಬ ತೊಡಕು ತೊಂದರೆಗಳನ್ನೂ ಲೆಕ್ಕಿಸದೆ ಯುವಕರ ಬಾಳಿಕರವಾಳಿಗಾಗಿ, ಮುದುಕರ ಕೈಗೋಲಾಗಿ, ಸರ್ವಜನ ಪ್ರೀತಿಯಿಂದ ಕನ್ನಡಿಗರ ಪ್ರೀತಿ ಆದರಗಳಿಗೆ ಪಾತ್ರವಾಗಿದೆ ಅಂತೆಯೆ ನಾನು ನೆಚ್ಚಿ ಕೊಂಡ ಕನ್ನಡ ನಾಡಿನತ್ಯಕ್ಕೆ 'ಜಯಂತಿ'.

ಒಂದು ಪತ್ರಿಕೆಯಿಂದರೆ ಅದರಲ್ಲಿ ವಿವಿಧ ವಿಷಯಗಳು ಅಡಕವಾಗಿರಬೇಕು. ಧಾರ್ಮಿಕ, ರಾಜಕೀಯ, ಸಾಹಿತ್ಯ, ಹೊಸಬಾಡ ಸರ್ವರಿಗಾಗಿ ಇರಬೇಕು ಯಾವುದಾವರೊಂದು ನನ್ನ ಕನ್ನಡ ನಾಡಿಗೆ ಕೆಸೆಮನೋಡಿದರೆ, ಒನ್ಮೊನ್ಮೆ. ಕೇವಲ ಸಣ್ಣಕತೆಗಳಿಂದ ತುಂಬಿಬಿಡುತ್ತಾರೆ ಇನ್ನೊಮ್ಮೆ ಮತ್ತಾವು ಮಾಸವೂ ವಿಷಯವಿಲ್ಲ. ತರುಣ ಬರೆಹಗಾರರಿಗೆ ಪ್ರೋತ್ಸಾಹನೆ ಕೊಡುವ ಬುದ್ಧಿಪೂರ್ವಕವಾದ ಆಸಕ್ತಿ. ಅನನುಭವಿಕ ಕೃತಿಗಳಿಂದ ತುಂಬುವುದೂ ಉಂಟು. ಇನ್ನು ಕೆಲವು ಮಾಸಪತ್ರಿಕೆಗಳು ಕೇವಲ 'ಹಣ' ಗಳಿಸುವ ಉದ್ದೇಶದಿಂದ ಹೊರಬೀಳೆಯೆಂದರೂ ತಪ್ಪಾಗಲಿಕ್ಕಿಲ್ಲ. ಜನರ ಮನಸ್ಸು ಸೆಳೆಯಲು **ಸುರಯ್ಯಾ, ಜಯಶ್ರೀ** ಮೊದಲಾದವರ **ವರ್ಣರಂಜಿತ ಚಿತ್ರಗಳನ್ನೇ** ಹಾಕಿಸಿ ಒಳಗೆ ವರ್ಷಭವಿಷ್ಯದಿಂದ ಅರ್ಧಕ್ಕರ್ಧ ತುಂಬಿರುತ್ತಾರೆ. ಇದರಿಂದ ಯಾವ ಉದ್ದೇಶವೂ ಸಾಧಿಸುವಂತಿಲ್ಲ 'ಪತ್ರಿಕೆಗಳಿಂದರೆ ಬೇಸವ ಸಂಪತ್ತು' ಎಂದು ಹೇಳಲಾಗುತ್ತದೆ. ಇಂದಿನ ಕಾಲದಲ್ಲಿ ಪತ್ರಿಕೆಗಳ ಹೊಣೆ ಅತ್ಯಂತ ಜವಾಬ್ದಾರಿಯುಕ್ತವಾದುದು. ಏನೋ ಎರಡಕ್ಷರ ಬರುತ್ತದೆ ಎಂದು ಒಂದು ಪತ್ರಿಕೆಯ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಪತ್ರಿಕೆ ಪಂಡಿತ-ಪಾಮರರಿಬ್ಬರ ಮನಸ್ಸನ್ನು ರಂಜಿಸುವಂತಹದಿರಬೇಕು. ಈ ದಿಸೆಯಲ್ಲಿ ಕನ್ನಡ ಮಾಸಪತ್ರಿಕೆಗಳನ್ನು ತಿರುಗಿ ನೋಡಿದರೆ ತೀನ್ನ ನಿರಾಶೆಪೂರಾಗದಿರದು. ಇಂತಹ ನಿರಾಶಾಕತ್ತಲೆಯಲ್ಲೂ ಒಂದೇ ಒಂದು ಆಶಾಜ್ಯೋತಿ ಮಿನುಗುತ್ತಿದೆ. ಅದೇ 'ಜಯಂತಿ'. ಹಿಂದಿನ ಜಯಂತಿಯ ಸಂಚಿಕೆಗಳನ್ನು ತಿರುಗಿ ನೋಡಿದಾಗ, ಅದು ಕಾಯಿದುಕೊಂಡು ಬಂದಿರುವ ಕನ್ನಡಪತಪವನ್ನು ನೋಡಿ ಎದೆ ಉಬ್ಬಿ ಬರದಿರದು. ನಾನು ಉಳಿದೆಲ್ಲ ಪತ್ರಿಕೆಗಳಿಗಿಂತ ಜಯಂತಿಯನ್ನೇ ನೆಚ್ಚಿಕೊಳ್ಳಲು ಹಲವು ಕಾರಣಗಳಿವೆ. ನನ್ನ ದೃಷ್ಟಿಯಲ್ಲಿ ಅದು ನನಗೆ ಆದರ್ಶ ಮಾಸಪತ್ರಿಕೆಯಾಗಿ ಕಾಣುತ್ತಿದೆ.

ಮಾಸಪತ್ರಿಕೆಯಲ್ಲಿ ಕೇವಲ ಕತೆ, ಅಥವಾ ಕವನಗಳನ್ನೇ ಸೇರಿಸಬಾರದು. ಪ್ರತಿ ಸಂಚಿಕೆಯಲ್ಲಿ ಒಂದೆರಡು ಕತೆ, ಎರಡು ಮೂರು ಕವನ ಹಾಕಲೇಬೇಕು. ಏಕೆಂದರೆ ಜನರು ಯಾವುದಾದರೂ ಪತ್ರಿಕೆಯನ್ನು ನೋಡಿದೊಡನೆ, ಸಣ್ಣಕತೆ ಇದೆಯೇ ಎಂದು ನೋಡುತ್ತಾರೆ. ಸಣ್ಣಕತೆ ಇಂದು ಆಷ್ಟು ಜನಪ್ರಿಯವಾಗಿದೆ. ಹಾಗೆಯೇ ಸಂತೋಷವಾಗಿ ಹಾಡಿಕೊಳ್ಳಲು ಕವಿತೆಗಳೂ ಬೇಕು. ಇನ್ನು ಪ್ರತಿ ಸಂಚಿಕೆಯಲ್ಲಿ ಒಂದು ಸಾಹಿತ್ಯಿಕ ಪ್ರಬ ರಾಜಕೀಯ ಲೇಖನವೊಂದು, ಯಾವುದಾದರೂ ಪ್ರವಾಸ ವ್ಯಕ್ತಿಪರಿಚಯ, ಇನ್ನೂ ಜನರಿಗೆ ಉಪಯುಕ್ತವಿರುವ ವಿಷಯ ಪೇಟಿ ಲೇಖನ ಇವು ಇರಬೇಕು. ಪ್ರತಿ ಸಂಚಿಕೆಯಲ್ಲೂ ಆ ಪರಿಸ್ಥಿತಿಗನುಗುಣವಾಗಿ 'ಸಂಪಾದಕೀಯ'ವೊಂದು ಇ ಬೇಕು. ಪ್ರತಿ ಸಂಚಿಕೆಯಲ್ಲಲ್ಲದಿದ್ದರೂ ಆಗಾಗ್ಗೆ ಬಿಸಿಬಿಸಿ ಹ ಚಿಕ್ಕ ನಾಟಕ ಇಂತಹವೇನಾದರೂ ಇರಬೇಕು. ಹೀಗೆ ಮಾ ಪತ್ರಿಕೆಯಲ್ಲಿ ಕತೆ, ಕವನ, ನಾಟಕ, ರಾಜಕೀಯ ಲೇ ಸಾಹಿತ್ಯಿಕ ಪ್ರಬಂಧ, ವಿಮರ್ಶೆ, ಐತಿಹಾಸ ಸಂಶೋಧನ, ಜಚ ತ್ಮಕ ವಿಷಯ ಇವೆಲ್ಲ ಬರಬೇಕು. ಸಾಮಾನ್ಯ ಜನರ ಮನರಂ ಗಾಗಿ ಚುರುಕು ಹಾಸ್ಯಗಳೂ ಅವಶ್ಯ. ಅಲ್ಲದೆ ಆಗಾಗ್ಗೆ ಜನ ಸಾಹಿತ್ಯದ ಒಳ್ಳೊಳ್ಳೆಯ ಹಾಡುಗಳನ್ನು ಕೂಡಿಸಿಕೊಡಬೇ ಈ ರೀತಿ ಪತ್ರಿಕೆಗಳಲ್ಲಿ ವಿವಿಧ ವಿಷಯಗಳು ಅಡಕವಾಗಿದ್ದರೇ ಅದೊಂದು ಒಳ್ಳೆಯ ಪತ್ರಿಕೆ ಎನಿಸೀತು. ಜಯಂತಿಯ ಹಿಂದಿ ಇಂದಿನ ಸಂಪುಟಗಳನ್ನು ತೆರೆದು ನೋಡಿದಾಗ, ಇವೆಲ್ಲ ಇವ್ಯ ನಮಗೆ ಗೋಚರವಾಗದಿರದು. ಜಯಂತಿಯಲ್ಲಿ ಏನಿದೆ ಏ ಎಂದು ಕೇಳುವುದೇ ತಪ್ಪುದೀತು. ಅದೊಂದು ರಾಮಾಯಣ ಮಹಾಕಾವ್ಯವಿದ್ದಂತೆ ಇಂದಿನ ಜಯಂತಿಯನ್ನು ತೆಗೆ ನೋಡಿದರೂ ನಮಗೆ ಗೋಚರವಾಗದಿರದು. ಮೊದಲನೆಯ ಸಂಪಾದಕೀಯ. ತುಂಬುಪಾಂಡಿತ್ಯದ ಆ ಸಂಪಾದಕೀ ಒಳ್ಳೆಯ ಪರಿಣಾಮಕಾರಿಯಾಗಿರುತ್ತದೆ. ಅನಂತರ ಪ್ರತಿ ಸಂಚಿ ಯಲ್ಲಿ ಒಂದೊಂದು ಸಣ್ಣಕತೆ, ಮೂರು ನಾಲ್ಕು ಕವನಗ ಇದ್ದಿರುತ್ತವೆ. ಹಳ್ಳಿಯ ಹಾಡುಗಳನ್ನು ಈಗ ಪ್ರತಿ ಸಂಚಿಕೆಯ ಸಂಗ್ರಹಿಸಿ ಕೊಡಲಾಗುತ್ತಿದೆ. 'ಕಲೆ-ಸಾಹಿತ್ಯ' ಮೊದಲಾ ಸಾಹಿತ್ಯಿಕ ವಿಷಯದ ಬಗ್ಗೆ ಒಂದಲ್ಲ ಒಂದು ಒಳ್ಳೆಯ ಲೇಖನ ವಿದ್ದೇ ಇರುತ್ತದೆ. ಆಗಾಗ್ಗೆ ವ್ಯಕ್ತಿಪರಿಚಯ, ಒಂದೊಂದು ಚಿ ನಾಟಕ ಬರುತ್ತಲಿರುತ್ತವೆ. ಹಲವು ಪ್ರವಾಸ ಪ್ರಬಂಧಗಳ ಆಚ್ಚಾದುದು ಜಯಂತಿಯಲ್ಲಿ. ಕನ್ನಡನಾಡಿನ ಒಳ್ಳೆಯ ಹರಟೆ ಗಾರರ ಹರಟೆ ಬರುವದು ಇವರಲ್ಲೇ! ಪ್ರತಿ ಸಂಚಿಕೆಯ ಪುಸ್ತಕ ವಿಮರ್ಶೆ ಇರುತ್ತದೆ. ಅಲ್ಲದೆ 'ನಗೀಗೆ ನೇವಿದ್ಯ' ಎನ್ನು ನಗೆಯ ವಿಭಾಗವೂ ಇದೆ. ಬಹಳ ದಿವಸದ ವರೆಗೆ ಬರುತ್ತಿದ್ದ "ನಾಲ್ಕೂ ನಿಟ್ಟಿನ ನೋಟ" ಏಕೋ ಈಗ ಬರುತ್ತಿಲ್ಲ. ಆದ ಅಂತಹ ಒಂದು ಲೇಖನ ಅನಿವಾರ್ಯ. ಬೇಂದ್ರೆ, ಮುಗಳ ಅಡಿಗ, ಪುರಾಣಿಕ, ನಿ. ಜಿ. ಭಟ್ಟ, ಮೊದಲಾದವರ ಕವಿತೆಗಳ ಗದಗಕರ, ಎನ್ಸೆ., ಎನ್. ಎಂ. ಕುಲಕರ್ಣಿ ಮೊದಲಾದವ ಹರಟೆಗಳು, ಬಳ್ಳಾರಿ ಬೀಚಿ, ಬೇಂದ್ರೆ ಲಕ್ಷ್ಮಣರಾಯ, ಶ್ರೀರಂ ಮೊದಲಾದವರ ಏಕಾಂಕಗಳು, ಖಾನೋಳಕರ ಶ್ರೀಧರರಾಯ ಆಲೂರ ವೆಂಕಟರಾಯ, ಸಂ. ಬಾ. ಜೋಶಿ, ಶಿವರಾಮ ಕಾರಂತ ಇನಾಮದಾರ ಮೊದಲಾದ ಹಲವು ಪ್ರಸಿದ್ಧ ಬರೆಹಗಾರರ ಲೇಖನ ಇವುಗಳಿಂದ ಜಯಂತಿಯ ಸಂಚಿಕೆಗಳು ಸುಂದರವಾಗಿದ್ದುದನ್ನು

ಗಬಹುದು. ಆಲ್ಲದ ತರುಣ ಬರೆಹಗಾರರಿಗೆ ಹೆಚ್ಚಿನ ಪ್ರೋತ್ಸಾಹ ಸ್ಟದ್ದು ಎಂದರೆ 'ಜಯಂತಿ' ಯೇ ಎನ್ನಬಹುದು. ಹೊಸ ಹಗಾರರಿಗೆ ಪ್ರೋತ್ಸಾಹ ಕೊಡುವ ಉದ್ದೇಶದಲ್ಲಿ, ಉಳಿದ ಕೆಗಳಂತೆ ಅವರ ಅಪಕ್ವಕೃತಿಗಳನ್ನು ಪ್ರಸಿದ್ಧಿಸಿಲ್ಲ. ಸತ್ತ್ವಯುಕ್ತ ಣ ಬರೆಹಗಾರರನ್ನು ಮುಂದೆ ತಂದುದರ ಪ್ರಥಮ ಯಶಸ್ಸು ಯಂತಿಯದು. ಪ್ರತಿವರ್ಷ ಸಣ್ಣಕತೆಗಳ ಸ್ಪರ್ಧೆಯನ್ನೇರ್ಪಡಿಸಿ ಸಾಹಿತ್ಯರಂಗದಲ್ಲಿ ಬೆಳಕು ಬೀರಿದೆ. ಅಲ್ಲದೆ ಪ್ರತಿವರ್ಷದ ಹತ್ಯದ ಸಿಂಹಾವಲೋಕನ ಮಾಡಿ ಆ ವರ್ಷದ ಸಾಹಿತ್ಯಕ್ಕೆ ಿ ಒಡಿಯುತ್ತಿದೆ. ಹೀಗೆ ಎಲ್ಲ ತರದ ಸಾಹಿತ್ಯದ ನವರಸ ನ್ನ ಜಯಂತಿ ಬಿಡಿಸಿದೆ ಎನ್ನಬಹುದು. ಮತ್ತೊಂದು ಆದರ ನ ಗುಣವೆಂದರೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ರಡುವದು. ಇದು ಅತ್ಯಂತ ಮಹತ್ತ್ವದ್ದು. ಸಕಾಲಕ್ಕೆ ಕೆ ಹೊರಟರೇನೇ ಒಂದು ಚೆಂದ. ಅಲ್ಲದಿದ್ದರೆ ಈ ತಿಂಗಳದ್ದು ಂದಿನ ತಿಂಗಳು ಅಥವಾ ತಿಂಗಳ ಕೊನೆಗೆ ಈ ರೀತಿ ಹೊರಟರೆ ಪಕನ ತಾಳ್ಮೆ ಕೆಡುತ್ತದೆ. ಸ್ವಂತ ಪ್ರೆಸ್ಸು ಇದ್ದರೂ ಸಕಾಲಕ್ಕೆ ಕೆ ಹೊರಡಿಸದೆ ಒದ್ದಾಡುತ್ತಿರುವ ಕಾಲದಲ್ಲಿ, ಬೇರೆ ಪ್ರೆಸ್ಸಿನಿಂದಲೂ ಸರಿಯಾಗಿ ಜಯಂತಿ ಹೊರಡುತ್ತಿದೆ. ಪತ್ರಿಕೆಯ ಮೇಲೆ ಜನಮನ ಸೆಳೆಯುವ ಉದ್ದೇಶದಿಂದ ಸಿನಿಮಾ ನಟಿಯರ ತ್ರಿವರ್ಣರಂಜಿತ ಚಿತ್ರ ಹಾಕದಿದ್ದರೂ, ನಮ್ಮ ಜನಕ್ಕೆ ಬೇಕಾಗುವ ಒಳ್ಳೆಯ ಚಿತ್ರವನ್ನು ಕೊಡುವುದರಲ್ಲಿಯೇ ಸಾಧ್ಯವಿದೆ ಎಂದು ದೃಢಮನಸ್ಸಿನಿಂದ 'ಜಯಂತಿ' ಹೊರಟಿದೆ. ಉದಾಹರಣೆಗಾಗಿ ಜಯಂತಿಯ ಈ ವರ್ಷದ ಆಗಸ್ಟ್ ಸಂಚಿಕೆಯ ಮುಖಚಿತ್ರವನ್ನು ನೋಡಬಹುದು. "ನನ್ನ ಜನಕ್ಕೆ ಅನ್ನ ಬೇಕಾಗೇತಿ; ಅದಕಾಗೇ ನಾ ಹಗಲು ರಾತ್ರಿ ದುಡಿತೇನಿ." ಯಾವ ಪ್ರಗತಿಶೀಲ ಪತ್ರಿಕೆ-ಗಿಂತ ಇದು ಕಡಿಮೆ? ಪ್ರಗತಿಶೀಲ ಎಂದು ಜೋಡ್ಸು ಬರೆದು ಹಚ್ಚಿಕೊಂಡಿರದಿದ್ದರೂ ನಿಜವಾಗಿ 'ಜಯಂತಿ' ಒಂದು ಪ್ರಗತಿ-ಶೀಲ ಮಾಸಪತ್ರಿಕೆ. ಕನ್ನಡತನವನ್ನು ಕಾಪಾಡಿಕೊಳ್ಳಲು ಹೆಣ-ಗಾಡಿದ ಮಾಸಪತ್ರಿಕೆ. ಕನ್ನಡಿಗರಿಗೆ ಸತ್ತ್ವಯುಕ್ತ ಬರೆಪಣಿಗೆ-ಯನ್ನು ನೀಡಿದ ಪತ್ರಿಕೆ. ತರುಣರಿಗೆ ಪ್ರೋತ್ಸಾಹಕೊಟ್ಟ ಪತ್ರಿಕೆ. ಒಳ್ಳೊಳ್ಳೆಯ ಕತೆ ಕವನ ನೀಡಿ ಜನಮನವನ್ನು ತಣಿಸಿದ ಒಂದೇ ಒಂದು ಪತ್ರಿಕೆ ಜಯಂತಿ. ನನ್ನ ಮೆಚ್ಚಿನ ಮಾಸಪತ್ರಿಕೆ 'ಜಯಂತಿ!'

ಸಂಚಿಕೆಯ ಪುಟದಿಂದ ಮುಂದೆ ಸಾಗಿದ್ದು)

೭೭. **ಕಿರ್ಲೋಸ್ಕರ** (ಮರಾಠಿ ಮಾಸ ಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆ). ಪ್ರಕಾಶಕರು ಶ್ರೀಮಾನ್ ಶಂ. ವಾ. ಕಿರ್ಲೋಸ್ಕರ, ಕಿರ್ಲೋಸ್ಕರವಾಡಿ, ಜಿ. ಸತಾರಾ.

ಮಹಾರಾಷ್ಟ್ರದಲ್ಲೆಲ್ಲ ಲೋಕಪ್ರಿಯವಾದ ಈ ಮಾಸಪತ್ರಿಕೆಯ ಈ ದೀಪಾವಳಿ ಸಂಚಿಕೆಯ ಪ್ರತಿಗಳು ೨೬೦೦೦ದಷ್ಟು ಹೊರಟಿವೆ. ನಾಡಿನ ಸುಪ್ರಸಿದ್ಧ ಕತೆಗಾರರ ಕತೆಗಳೂ ಲೇಖಕರ ವಿಚಾರ ಪ್ರಚೋದಕ ಲೇಖನಗಳೂ ಸಂಚಿಕೆಯನ್ನು ಅಲಂಕರಿಸಿವೆ. ಮುಖಪತ್ರದ ಬಹುರೂಬಣ್ಣದ ಚಿತ್ರ ಚಿತ್ತಾಕರ್ಷಕವಾಗಿದೆ.

೭೭. **ಮನೋಹರ** (ಮರಾಠಿ ಮಾಸಪತ್ರಿಕೆಯ ದೀಪಾವಳಿ ಸಂಚಿಕೆ). ಇದೂ ಕಿರ್ಲೋಸ್ಕರವಾಡಿಯಿಂದಲೆ ಹೊರಡುವುದು.

ಮಹಾರಾಷ್ಟ್ರ ಸಾಹಿತ್ಯಕಲಾ ಪ್ರಪಂಚವನ್ನು ಪ್ರತಿ ತಿಂಗಳೂ ತನ್ನ ವಾಚಕರಿಗೆ ಪರಿಚಯಮಾಡಿಕೊಡುತ್ತಿರುವ ಈ ಪತ್ರಿಕೆಯ ದೀಪಾವಳಿ ಸಂಚಿಕೆಯೂ ಗುರಿಯನ್ನು ಸಾಧಿಸುವಂತಹದಾಗಿದೆ.

೮೮. **ಆಶಾ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು 'ರಾಜ'. ಹುಬ್ಬಳ್ಳಿಯ ಸಂಜೀವಿನಿ ಪ್ರಕಾಶನದ ೩ನೆಯ ವರ್ಷದ ೨ನೆಯ ಗ್ರಂಥ. ಕ್ರೌ. ಅ. ೧೧೦ ಪುಟಗಳು. ಬೆಲೆ ೧-೪-೦.

೮೯. **ಹೊನ್ನಾಡು** (ಪುಣೆಯ ಕರ್ನಾಟಕ ಸಂಘದ ಕೈಬರೆಹದ ಸಚಿತ್ರ ತ್ರೈಮಾಸಿಕ). ಸಂಪಾದಕ ಮಂಡಲಿಯಲ್ಲಿ ಶ್ರೀ. ಜಿ. ಎಸ್. ಮಕರ್ M. A., B. T., ಶ್ರೀ. ಡಿ.ಕೆ. ವೈದ್ಯ ಮತ್ತು ಶ್ರೀ. ಕೆ. ಆರ್. ಕುಲಕರ್ಣಿ ಇವರು ಇರುವರು. ಬರೆಹಗಾರರು ಶ್ರೀ. ಎಸ್. ಜಿ. ಕುಲಕರ್ಣಿಯವರು.

ಮೂರು ಸಂಚಿಕೆಗಳು ನಮ್ಮ ನೋಟಕ್ಕಾಗಿ ಬಂದಿವೆ. ಸಂಘದ ಸದಸ್ಯ ಲೇಖಕರು ಬರೆದ ಕತೆ, ಕವನ, ಪ್ರಬಂಧ, ನಾಟಕಗಳು ಇವುಗಳಲ್ಲಿ ಅಡಕವಾಗಿವೆ. ಒಂದಕ್ಕಿಂತ ಇನ್ನೊಂದು ಅಂತರಂಗ-ಬಹಿರಂಗ ಸೌಂದರ್ಯದಲ್ಲಿ ಮುಂದುವರಿಯುತ್ತ ಹೋಗಿರುವುದು ಸಂತೋಷದ ಸಂಗತಿ. ಕನ್ನಡ ವಿದ್ಯಾರ್ಥಿ ಚಿತ್ರಕಾರರ ಚಿತ್ರಗಳೂ ಲೇಖನಾಲಂಕಾರಗಳೂ ಸಂಚಿಕೆಗಳ ಸೌಂದರ್ಯವನ್ನು ಹೆಚ್ಚಿಸಿವೆ. ಪುಣೆಯ ಕನ್ನಡ ಲೇಖಕರಿಗೆ 'ಹೊನ್ನಾಡು' ಪ್ರಾರಂಭ ರಂಗಭೂಮಿಯಾಗಲು ಜೆನ್ನಾಗಿದೆ. ಈ 'ಹೊನ್ನಾಡು' ಹಲವು ಜನ ಲೇಖಕರನ್ನು ಕನ್ನಡಕ್ಕೆ ಒದಗಿಸಿಕೊಡಲಿ.

೯೦. **ಕಲಂಕ** (ಕಥಾಗುಚ್ಛ) ಬರೆದವರು 'ಅಜಲಾ' ಪ್ರಕಾಶಕರು ಶ್ರೀ. ಹು. ಮು. ವೆಂಕಟಾಚಾರ್ಯ, ಮುಳಬಾಗಿಲು. ಕ್ರೌ. ಅ. ೯೪ ಪುಟಗಳು. ಬೆಲೆ ೧-೦-೦.

೯೧. **ಕುಲವಿಲ್ಲದ ಹೆಣ್ಣು** (ಅನುವಾದಿತ ಕಾದಂಬರಿ) ಮೂಲ ಆಂಧ್ರ ಲೇಖಕರು ಶ್ರೀ. ಕೊಡವಟಿಗಂಟಿ ಕುಟುಂಬರಾಯರು ಎಂ. ಎಸ್ಸಿ. ಅವರು ಬರೆದುದನ್ನು, ಶ್ರೀಮಾನ್ ಪಿ. ವೆಂಕೋಬಾಚಾರ್ಯ ಬಿ.ಎ., ಬಿ.ಟಿ. ಅವರು ಕನ್ನಡಕ್ಕೆ ಇಳಿಸಿದ್ದಾರೆ. ಪ್ರಕಾಶಕರು ಅಂತರಂಗ ಕಾರ್ಯಾಲಯ, ಉಡುಪಿ. ಕ್ರೌ. ಅ. ೧೩೪ ಪುಟಗಳು. ಬೆಲೆ ೧-೦-೦.

೯೭. **ಉಡುಪಿ ಕ್ಷೇತ್ರ** (ಸ್ಥಳ ಪರಿಚಯ ಪುಸ್ತಕ) ಬರೆದವರು ಶ್ರೀ. ಬಿ. ರಾಮಕೃಷ್ಣ ಚಾರ್ಯ ಬಿ. ಎ. 'ವಿದ್ವಾನ್' ಪ್ರಕಾಶಕರು: ಹಿಂದೀ ಪುಸ್ತಕ ಭಾಂಡಾರ, ಶ್ರೀ ರಾಮಾಂಜನೇಯ ಬಿಲ್ಡಿಂಗ್ಸ್, ಉಡುಪಿ. ಕ್ರೌ. ಅ. ೬೨ ಪುಟಗಳು. ಬೆಲೆ ೦-೪-೦.

ಸಾದರ ಸ್ವೀಕಾರ

೭೬. **ಕವಿ-ಕಾವ್ಯ ಪರಿಚಯ** (ಸಾಹಿತ್ಯ ಚರಿತ್ರ ವಿಷಯಕ). ಲೇಖಕರು ಶ್ರೀ. ಆರ್. ಎಸ್. ರಾಮರಾವ್ ಎಂ.ಎ. ಅವರು. ಪ್ರಕಾಶಕರು : ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ೨. ಕ್ರೌ. ಅ. ೩೨ ಪುಟ. ಬೆಲೆ ೦-೮-೦.

೭೭. **ಸಂಗೀತ ವಿದ್ಯಾಪ್ರಕಾಶ** (ಸಂಗೀತ ಶಿಕ್ಷಕ.) ಬರೆದವರು 'ಸಂಗೀತ ರತ್ನ' ಶಂಕರ ಜೋಷಿ, ಬೇವಿಗಿರಿ, ಬತ್ತ ಮಂದಿರಂ ರೋಡು, ಜೋರ್ ನಂ. ೧೧. ಬಸವನಗುಡಿ, ಬೆಂಗಳೂರು ಸಿಟಿ. ಕ್ರೌ.ಅ. ೪೧ ಪುಟ. ಬೆಲೆ ೦-೧೪-೦.

೭೮. **ಜಾಳಿನ ಕೈಗನ್ನಡಿ** (ವಿವೇಚನಾತ್ಮಕ ಗ್ರಂಥ) ಬರೆದವರು ಶ್ರೀ. ಪಂಡಿತ ಸುಧಾಕರಜಿ 'ಆರ್ಯಸೇವಕ' ಪ್ರಕಾಶಕರು : ಆರ್ಯಾವರ್ತ ಪ್ರಕಾಶನ, ೯೯೨ ಶ್ರೀರಾಮಪುರ, ಬೆಂಗಳೂರು ೩. ಕ್ರೌ.ಅ. ೭೦ ಪುಟ. ಬೆಲೆ ೦-೧೦-೦.

೭೯. **ದಯಾನಂದ ದಿಗ್ವಿಜಯ** (ವ್ಯಕ್ತಿಪರಿಚಯ). ಲೇಖಕರು ಶ್ರೀ. ಪಂಡಿತ ಮಂಜುನಾಥಶಾಸ್ತ್ರಿ, ಪ್ರಕಾಶಕರು ಮೇಲೆ ಹೇಳಿದ ಆರ್ಯಾವರ್ತ ಪ್ರಕಾಶನದವರೆ. ಕ್ರೌ. ಸೈಜ್ ೧೫೦ ಪುಟಗಳು. ಬೆಲೆ ೦-೩-೦.

೮೦. **ಮುಂಬಯಿ ಕರ್ನಾಟಕ ಸಂಘದ** ೧೬ನೆಯ ವಾರ್ಷಿಕ ವರದಿ ಹಾಗೂ ತಪಾಸಿಸಲ್ಪಟ್ಟ ಲೆಕ್ಕ ಪತ್ರಿಕೆಗಳು.

ಗೌ. ಕಾರ್ಯದರ್ಶಿಗಳು ಶ್ರೀಯುತರುಗಳಾದ ಲ. ಗೋ. ಜಾವೂರ ಮತ್ತು ಬಿ. ಆರ್. ಕಟ್ಟಿ, ಸಂಯುಗಿರಿಸದನ, ಗಿರಗಾಂವ— ಮುಂಬಯಿ. ಡೆ. ಅ. ೧೪ ಪುಟಗಳು.

ಮುಂಬಯಿಯ ಅಖಿಲ ಕನ್ನಡಿಗರನ್ನೂ ತನ್ನ ವಿವಿಧಮುಖವಾದ ಚಟುವಟಿಕೆಗಳಿಂದ ಸಂಘಟಿಸಲು ಪಣಗುತ್ತಿರುವ ಈ ಸಂಸ್ಥೆ, ಯಶಸ್ವಿಯಾಗಿ ಬಾಳಲಿ.

೮೧. **ಮಹಾಶ್ವೇತೆ** (ನಾಟಕ) ಬರೆದವರು ಶ್ರೀ. ಸನ್ಮೇತನಹಳ್ಳಿ ರಾಮರಾಯರು. ಪ್ರಕಾಶಕರು ಮೆ. ಎಚ್.


ಜವನ ಪ್ರಾಸ
ಪೂರ್ವದಲ್ಲಿ ಒಬ್ಬ ವೈದ್ಯನು ಚನವನ್ನು ಕಂಡು ಹಿಡಿದನು. ಸಾಂಡೂಸ್‌ರವರೂ ಅದೇ ಚನವನ್ನು ಪ್ರಾಸನನ್ನು ಜಯಗಳಿಸುತ್ತಿರುವರು. ಸುತ್ತು ಇತರ ಎಳನೂರು ಔಷಧಗಳನ್ನು ಆಯುರ್ವೇದದ ಪ್ರಕಾರ ತಯಾರಿಸುತ್ತಿದ್ದಾರೆ. ಕಳೆದ ಏನತ್ತು ವರ್ಷಗಳಿಂದ ಅವರ ಔಷಧಗಳು ಒಳ್ಳೆಯ ಹೆಸರು ಪಾಪಿದಾಗಿವೆ.
ಸಾಂಡುಸ್‌ರವರ ಔಷಧಗಳೇ ಶ್ರೇಷ್ಠ.
ಡಿ. ಕೆ. ಸಾಂಡು ಬ್ರದರ್ಸ್,
ಕಾರ್ಖಾನೆ ಲಿಮಿಟೆಡ್, ಧಾರವಾಡ, ಬೊಂಬಾಯಿ, ಬಾಳಾಘಾಟ್, ಕಾಲಘಾಡಗಿ, ಪರೇಲ್, ದಾದರ್ ಸ್ಟೇಷನ್ ಸಿ. ಪಿ. ಆಕೋಲ, ಅಮರಾವತಿ, ಸುಲ್ತಾನ್, ಹೈದರಾಬಾದ್ ಮತ್ತು ಅಹಮದಾಬಾದ್.

೮೨. **ಮಹಾತ್ಮೆ** (ನಾಟಕ) ಬರೆದವರು ಶ್ರೀ. ಎನ್. ರಾವ್ ಬ್ರದರ್ಸ್, ಚಕ್ಕಪೇಟೆ, ಬೆಂಗಳೂರು ನಗರ. ಕ್ರೌ. ಅ. ೬೪ ಪುಟ. ಬೆಲೆ ೦-೧೪-೦.

೮೩. **ಒಲವಿನ ಉಪವನ** (ನಾಟಕ) ಲೇಖಕರು ಶ್ರೀ. ವಸುದೇವ ಭೂಪಾಲ ಅವರು. ಪ್ರಕಾಶಕರು ಮೇಲೆ ಬರೆದವರೆ. ಫುಲ್‌ಸ್ಕ್ಯಾಪ್ ಅ. ೫೮ ಪುಟಗಳು. ಬೆಲೆ ೦-೮-೦.

೮೪. **ಜಡಭರತನ ಕನಸುಗಳು** (ಕನಸಿನ ಕಥೆಗಳು) ಬರೆದವರು ಶ್ರೀ. ಜಡಭರತ. ಧಾರವಾಡದ ಮನೋಹರ ಗ್ರಂಥಮಾಲೆಯ ೯೩ನೆಯ ಕುಸುಮ. ಕ್ರೌ. ಅ. ೧೩+೧೨೪ ಪುಟಗಳು. ಬೆಲೆ ೧-೮-೦.

೮೫. **ವಿ. ಸಿ. ವರ್ಮನ ಸಿದ್ಧೌಷಧಿಗಳು.** ೧ ಫ್ಲುಟೋವಿಸುಕಾಲ್, ೨ ಕಫ್ ಸಾಯರಪ್, ೩ ವಿಟಾಕ್ರೈಮಾ,

ಕನ್ನಡನಾಡಿನಲ್ಲಿಯೆ ಕನ್ನಡ ವಿಜ್ಞಾನಿಯ ಸಂಶೋಧನದಿಂದ ಸಿದ್ಧವಾದ ಈ ಔಷಧಿಗಳು ತುಂಬ ಗುಣಕಾರಿಯಾಗಿದ್ದು, ಅನೇಕ ಜನ ಡಾಕ್ಟರ್-ವೈದ್ಯರ ಪ್ರಶಸ್ತಿಗೆ ಪಾತ್ರವಾಗಿವೆ. ೧ನೆಯದು ಶಕ್ತಿವರ್ಧಕ ಔಷಧಿ; ೨ನೆಯದು ಕೆಮ್ಮಿನ ಮೇಲೆ; ೩ನೆಯದು ಹೊಟ್ಟೆಯ ಹುಳುವಿನ ಮೇಲೆ. ಎಲ್ಲರೂ ಈ ಔಷಧಿಯನ್ನು ಉಪಯೋಗಿಸಿ ಪ್ರಯೋಜನ ಪಡೆಯಬೇಕು.

೮೬. **ಪ್ರಗತಿ** (ವಾರಪತ್ರಿಕೆಯ ಗಾಂಧಿ ಸಂಚಿಕೆ). ಹುಬ್ಬಳ್ಳಿಯ ಯುವಕರ ಕೂಟದಿಂದ ಸಂಪಾದಿತವಾಗಿ ಶ್ರೀ. ಎಸ್. ಪಿ. ಪೆಟ್ಟರ ಅವರಿಂದ ಪ್ರಕಾಶಿತವಾದುದು. ಕ್ರೌ. ಫ್ಲಿದ ೨೦ ಪುಟಗಳು. ಬೆಲೆ ೦-೧-೦.

ಮಹಾತ್ಮಾಜಿಯವರನ್ನು ಉದ್ದೇಶಿಸಿ ಬರೆದ ವಿವಿಧ ಲೇಖನಗಳು ಇದರಲ್ಲಿ ಅಡಕವಾಗಿವೆ. ಮೂರು ಒಳ್ಳೆಯ ಕವನಗಳೂ ಉಂಟು. 'ಪ್ರಗತಿ' ದಿನದಿನಕ್ಕೂ ಪ್ರಗತಿಯತ್ತ ನಡೆದಿರುವುದು ಸಂತೋಷದ ಸಂಗತಿ.

(೩೧೯ನೇ ಪುಟ ನೋಡಿರಿ)



ಬಾಳಪ್ಪ ಹುಕ್ಕೇರಿ, ಮುರಗೋಡ

N. 25933 { ಶಿಟ್ಟಯೆಂಬಿನೆ ಶಿರಿಯಾಳನ — ಶ್ರೀ ಬಸವೇಶ್ವರ ವಚನ
ಕೋಟ್ಯನು ಕೋಟ ಜಪವ ಮಾಡಿ " "

ಬಸಪ್ಪ ಮಾಸ್ಟರ ಕುಳಕುಂದ ಮತ್ತು ಪಾರ್ಟಿ

N. 25934 { ವೀರರಾಣಿ ಚೆನ್ನಮ್ಮ—ಭೀಮ ಕವಿ ಕುಳಕುಂದ ಕೃತ
ಭಾಗ ೧ ಮತ್ತು ೨

ಕು. ವಿಜಯಾ ದೇಸಾಯಿ

N. 25935 { ಆಕಾಶ ತಾರೆ—ಪ್ರೊ. ಎನ್ಕೆ ಕುಲಕರ್ಣಿ ಕೃತ
ಓರಿ ನೋಟದಿ ಬೇಟೆಯಾಡಿದೆ

ಮಾಣಿಕರಾವ್ ರಾಯಚೂರಕರ್

N. 25928 { ಅಹುದಾದರೆ ಅಹುದೆನ್ನಿ — ಕನಕದಾಸ
ಕಷ್ಟ ಪಟ್ಟರೂ ಇಲ್ಲ

ಹಿಜ್ ಮಾಸ್ಟರ್ಸ್ ವಾಯಿಸ್ ಕನ್ನಡ ನಾಟ್ಯಸಂಘ

N. 25929 TO N. 25932 { ನಾಟಕ :—ಭಕ್ತ ಪುರಂದರದಾಸ—
ಪ್ರೊ. ಎನ್ಕೆ. ಕುಲಕರ್ಣಿ ಕೃತ

" ಹಿಜ್ ಮಾಸ್ಟರ್ಸ್ ವಾಯಿಸ್ "

THE GRAMOPHONE COMPANY LIMITED
CALCUTTA : BOMBAY : MADRAS : DELHI



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar—2044-49.

ಜಯಂತಿ

ಡಿಸೆಂಬರ್
೧೯೪೯

ನಮ್ಮ ಚಂದಾದಾರರಲ್ಲಿ :

ದೇಶದಲ್ಲಿಯ ಆರ್ಥಿಕ ದುರವಸ್ಥೆಯ ಮೂಲಕ **ಜಯಂತಿಯ** ವೆಚ್ಚ ಎಲ್ಲ ಬಗೆಯಿಂದಲೂ ಬೆಳೆಯುತ್ತಲಿದೆ. ಆಲ್ಲವೆ ವರ್ಷದಲ್ಲಿ ಎರಡು ವಿಶೇಷ ಸಂಚಿಕೆಗಳನ್ನು ಚಂದಾದಾರರಿಗೆ ಉಚಿತವಾಗಿ ಸಲ್ಲಿಸುವ ಏರ್ಪಾಡಿದೆ. ಇವೆಲ್ಲವುಗಳ ಮೂಲಕ ಹೊರಬೇಕಾಗುವ ಆರ್ಥಿಕ-ಜೋಡಣೆಯಲ್ಲಿ ಸ್ವಲ್ಪಮಟ್ಟಿಗಾದರೂ ಕಡಿಮೆಯಾದೀತೆಂಬ ನಿರೀಕ್ಷೆಯಿಂದ, ಬರುವ ಜನವರಿಯಿಂದ **ಜಯಂತಿಯ** ವಾರ್ಷಿಕ-ವರ್ಗಣೆಯನ್ನು ಬರೀ **೪ ಆಣೆ** ಹೆಚ್ಚಿಸಿ, **೫ ರೂ.** ಮಾಡಲಾಗುವದು. ಎಲ್ಲ ಚಂದಾದಾರರೂ ಎಂದಿನಂತೆ ಸಹಕರಿಸಬೇಕು.

ಬೆಲೆ ಎಂಟು ಆಣೆ

ಜಯಂತಿ

JAYANTI

ಡಿಸೆಂಬರ್ ೧೯೪೯

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ

ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾಶಕರು— ಶ್ರೀ. ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ಪೂ.	೪೦	ಒಂದು ಸಲ
೧/೨	,,	,,	೨೫	,,
೧/೪	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧ನೆಯ ಡಿಸೆಂಬರ್ ೧೯೪೯ | ಸಂಚಿ

ಈ ಸಂಚಿಕೆಯಲ್ಲಿ:

ಶಾಂತಿ(ಕವನ)
ಶ್ರೀ.ಕೆ. ಮಂಜುನಾಥ, ಹೋಸಪೇಟೆ ....

ಕನ್ನಡಿಗರೇ, ಎಚ್ಚರಿಕೆ! (ಸಂಪಾದಕೀಯ)
ಸಂಪಾದಕರು ....

ಪ್ರಶ್ನೆಗೆ ಉತ್ತರಗಳು
ಸಂಪಾದಕ ಸಮಿತಿ ....

ತಾಯ್ತನ (ಒಂದು ಕತೆ)
ಶ್ರೀ. ಐರಣಿ ಶ್ರೀನಿವಾಸ ಬಿ. ಎ.(ಆನರ್ಸ್) ಮುಂಬಯಿ ೬

ಭಾವಜೀವಿ (ಒಂದು ನಿಡುಗವನ)
ಶ್ರೀ. ಚನ್ನವೀರ ಕಣವಿ, ಕಾವ್ಯಾನುಭವ ಮಂಟನ, ೮

ಪ್ರೊ. ಆರ್. ಎಸ್. ಇನಾಮದಾರರು (ವ್ಯಕ್ತಿಪರಿಚಯ)
ಶ್ರೀ, ಡಿ. ಕೆ. ನಾಡಿಗೇರ, ಮುಂಬಯಿ ೨

ಹುಚ್ಚು ಮುದುಕಿ (ಸಣ್ಣಕತೆ.)
ಶ್ರೀ. ಬಾಗ್ಲೋಡಿ ದೇವರಾಯ ಎಂ ಎ. ಮಂಗಳೂರು ೨

ಶಿಕ್ಷಣದಲ್ಲಿ ಹೊಸದೃಷ್ಟಿ (ಚರ್ಚಾತ್ಮಕ ಲೇಖನ)
ಶ್ರೀ. ರಾ. ರಂ. ದೇಶಪಾಂಡೆ ಬಿ.ಎ., ಬಿ.ಟಿ. ಧಾರವಾಡ ೩

ಮಗಳ ಮದುವೆ (ಏಕಾಂಕ ನಾಟಕ)
ಶ್ರೀ. ಬಿ. ಆರ್. ಪಾಡಸ್ಪಿ ಎಂ. ಎ , ಬಿ. ಟಿ. ಧಾರವಾಡ ೩

ರಾಷ್ಟ್ರೀಯ ದೃಷ್ಟಿಕೋನ (ವಿಚಾರಲಹರಿ)
ಶ್ರೀ. ವರಗಿರಿ ಮೂರ್ತಾಂಡರಾಯರು ಎಂ. ಎ., ಬಿ. ಟಿ. ೩

ಧಾರವಾಡದಿಂದ ಉತ್ತರಕ್ಕೆ (ಪ್ರವಾಸಿಕನ ದಿನಚರಿ)
ಶ್ರೀ. ಬಸವಣ್ಣೆಪ್ಪ ದೊಡ್ಡಜ್ಜಪ್ಪನವರ,
ಒಕ್ಕಲತನ ಕಾಲೇಜ್, ಧಾರವಾಡ ೩೫

ಪುಸ್ತಕ ವಿಮರ್ಶೆ (೧ ಅಮೃತಬಿಂದು, ೨ ಮೇವಾಡ ಪತನ)
ಶ್ರೀ. ಬಿ. ಪಿ. ಎಸ್. ರಾವ್ ಮತ್ತು ಸಂಪಾದಕರು ೩೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ ೩೬

ನಗೀಗೆ ನೇವೀದ್ಯ
' ನಕಲೀ ನಾರಾಯಣಾಚಾರ್ರು ' ೩೬

ಸಾದರ ಸ್ವೀಕಾರ ೩೬

ವರ್ಷ ೧೨
ಸಂಚಿಕೆ ೭
ಡಿಸೆಂಬರ್
೧೯೪೯



ಕನ್ನಡಿಗರೆ, ಎಚ್ಚರಿಕೆ!

(ಸಂಪಾದಕೀಯ)

ಸ್ವತಂತ್ರಭಾರತದ ರಾಜ್ಯಘಟನೆ ಸಿದ್ಧವಾಗಿ ಸ್ವೀಕೃತವಾಯಿತು. ದರೆ ಕರ್ನಾಟಕ ಪ್ರಾಂತದ ನಿರ್ಮಿತಿ-ಅಸ್ತಿತ್ವಗಳ ಮಾತಿಗೆ ೂನೆಗೂ ಅದರಲ್ಲಿ ಅವಕಾಶ ಸಿಕ್ಕಲೇ ಇಲ್ಲ ನಮ್ಮ ಜೊತೆಯವರೇ ವ ಆಂಧ್ರರು ಹಟದಿಂದ ದುಡಿದು, ಪ್ರತ್ಯೇಕಪ್ರಾಂತದ ತಮ್ಮ ಿಯನ್ನು ಸಾಧಿಸಿಕೊಂಡು ಬಿಟ್ಟರು ಆದರೆ ನಮ್ಮ ಜನರ ೂಜೆಗೇಡಿತನ-ಕೆಲಸಗೇಡಿತನಗಳೂ ಹೊರಗಿನ ಜನರು ತಂದೊ-ುತ್ತಿರುವ ಅಡ್ಡಿ-ಆಡಚಣೆಗಳೂ, ವಿಶ್ವಾಸವಿಟ್ಟು ನಡೆದ ಹಿರಿಯರ ೀಕ್ಷೆ-ಔದಾಸೀನ್ಯಗಳೂ ಕರ್ನಾಟಕ ಏಕೀಕೃತಪ್ರಾಂತದ ಗುರಿ-ನ್ನು ಮುಂದೆ ಮುಂದೆ ನೂಕುತ್ತಲಿವೆಯಿಷ್ಟೇ ಅಲ್ಲ; ಅದರ ೇಲೆ ಕತ್ತಲೆಯ ತೆರೆಯನ್ನೂ ಪಸರಿಸುತ್ತಲಿವೆ.

'ಸ್ವತಂತ್ರಭಾರತದಲ್ಲಿ, ಕನ್ನಡಿಗರು— ಹೇಗಿದ್ದರೂ — ತಂತ್ರ್ಯಸುಖವನ್ನು ಅನುಭವಿಸಿಯೇ ಅನುಭವಿಸುವರು' ಬ ಭಾವನೆ ಯಾರಲ್ಲಾದರೂ ಇದ್ದರೆ, ದಯೆಯಿಟ್ಟು ಅದನ್ನು ರುಸಹಿತ ಕಿತ್ತೊಗೆಯಬೇಕು. ಮಹಾತ್ಮಾಜಿಯವರು ೀದರು; ಅವರ ಜೊತೆಗೆ ಭಾರತ ಜನತೆಯ ಆದರ್ಶವಾದ— ೀಯವಾದಗಳೂ ಹೊರಟು ಹೋದುವು. ಇಂದು ಭಾರತ ರಾಜ-ಯ ಪ್ರಪಂಚದಲ್ಲಿ ಕೇವಲ ರಾಜಕಾರಣವೇ ತಲೆಯೆತ್ತಿ ನಿಂತಿರು-ಲ್ಲದೆ, ಮಾನವತೆ-ಧ್ಯೇಯವಾದಗಳಿಗೆ ಇನ್ನು ಎಡೆಯೇ ಸಿಕ್ಕದು. ಸ ರಾಜ್ಯಘಟನೆಯಂತೆ ನಡೆಯುವ ಚುನಾವಣೆಗಳಲ್ಲಿ ಜಯ-ರಿಗಳಾಗಿ, ಅಧಿಕಾರಸೂತ್ರವನ್ನು ತನ್ನ ಕಡೆಗೆ–ಇಲ್ಲವೆ ತನ್ನ ಪಿನ ಕಡೆಗೆ–ಇರಿಸಿಕೊಳ್ಳಬೇಕೆಂಬ ಹೋರಾಟವೇ ಇನ್ನುಮೇಲೆ ಕ್ತಿಯ—ಇಲ್ಲವೆ ಗುಂಪು-ಗುಂಪುಗಳ ಧ್ಯೇಯವಾಗುವುದು. ತಹ ಕಾಲದಲ್ಲಿ ಕನ್ನಡಿಗರು ಅಖಂಡವಾದ ಒಂದು ಗುಂಪಾಗಿ ರ ಬಲದಿಂದ ಹೋರಾಡುತ್ತಲಿದ್ದರೆ, ಕನ್ನಡಿಗರಿಗೆ ಸಿಕ್ಕಬೇಕಾದ ಸ್ಥಾನ-ಮಾನಗಳೂ ಸುಖ-ಸೌಕರ್ಯಗಳೂ ಸಿಕ್ಕಬಹುದು. ಹಾಗಾ-ಗದೆ ಹೋದರೆ, ಕನ್ನಡಿಗರು ಕನ್ನಡತನವನ್ನು ಕಳೆದುಕೊಂಡು, ಇನ್ನೊಂದು ಗುಂಪಿನವರೊಂದಿಗೆ ವಿಲೀನವಾಗಿ ಹೋಗಬೇಕಾಗು-ವುದು ಖಂಡಿತವಾದ ಮಾತು.

'ಭಾರತೀಯ' 'ರಾಷ್ಟ್ರೀಯ' ಎಂಬ ವಿಶಾಲಹೃದಯದಿಂದ ಕಾಣುವ ಪರಿಸ್ಥಿತಿ ಭಾರತದಲ್ಲಿ ಇದ್ದರೆ, ನಾವೇನು ಚಿಂತೆ ಮಾಡುವ ಕಾರಣವಿರಲಿಲ್ಲ. ಅದು ಇಲ್ಲವೆಂಬುದು ಅಡಿಗಡಿಗೂ ಒಡೆದು ಕಾಣುತ್ತಿದೆ. ಇದೆಯೆಂದರೆ ಆಂಧ್ರಕ್ಕೆ ಪ್ರತ್ಯೇಕ ಪ್ರಾಂತವನ್ನಾ-ದರೂ ಏಕೆ ಕೊಡಬೇಕಾಗಿತ್ತು ? ಆಂಧ್ರಕ್ಕೆ ಕೊಟ್ಟು ಕರ್ನಾಟಕಕ್ಕೆ ಏಕೆ ಬಿಡಬೇಕಾಗಿತ್ತು ? ಈ ಕೊಡು-ಬಿಡುಗಳೇ ಭಾರತದಲ್ಲಿಯ ಸಂಕುಚಿತ ಹೃದಯ, ಸ್ವಾರ್ಥಸಾಧಕವೃತ್ತಿಗಳಿಗೆ ನಿದರ್ಶನವಾಗಿವೆ.

ರಾಷ್ಟ್ರದ ಹಿರಿಯರೆಂದು ಮನ್ನಣೆಯ ಗದ್ದುಗೆಯನ್ನೇರಿ ನಿಂತ ಆಂಧ್ರದ ಪಟ್ಟಾಭಿಸೀತಾರಾಮಯ್ಯನವರು— ಕನ್ನಡಿಗರಿಗಿರುವ ಅಡ್ಡಿ-ಆಡಚಣೆಗಳೆಲ್ಲ ಆಂಧ್ರಕ್ಕೂ ಇದ್ದರೂ—ಆಂಧ್ರರಿಗೆ ಪ್ರತ್ಯೇಕ ಪ್ರಾಂತವನ್ನು ತಮ್ಮ ಸ್ಥಾನಬಲದಿಂದ ಕೊಡಿಸಿದರಲ್ಲದೆ, ಕನ್ನಡಿ-ಗರ ಪ್ರದೇಶವನ್ನು ಆಂಧ್ರದಲ್ಲಿ ಸೇರಿಸಿಕೊಳ್ಳುವ ಮಾತನ್ನೂ ಅದೇ ಬಲದಿಂದ ಗುಡುಗುತ್ತಿದ್ದಾರೆ. ಇಷ್ಟೇ ಅಲ್ಲ, ಕರ್ನಾಟಕ ಪ್ರಾಂತ-ರಚನೆಯ ವಿಚಾರದಲ್ಲಿ ಇಲ್ಲಿಯ ಅಡ್ಡಿ-ಆತಂಕಗಳನ್ನೂ ಇನೆಯೆಂದು ಬಣ್ಣಿಸಿಕೊಟ್ಟು ಹೇಳಿ, ಹಿರಿಯರ ಜನರನ್ನು ಕಂಗೆಡಿಸುತ್ತಲಿದ್ದಾರೆ. ತಮ್ಮ ನಾಡಾದ ಗುಜರಾತದಲ್ಲಿ ಬರಗಾಲಬಿದ್ದು ಜನರಿಗೆ ತೊಂದರೆಯಾದಾಗ, ವಲ್ಲಭಭಾಯಿಯವರು ಎಂತಹ ಪಣತೊಟ್ಟರು— ಎಷ್ಟೆಂದು ನೆರವು ಕೊಟ್ಟರು— ಗೊತ್ತಿದೆಯೆ ? ಅಂತಹ ನೆರವು ಕನ್ನಡ ಬರಗಾಲದ ನಾಡುಗಳಿಗೆ ಎಂದಾದರೂ ಸಿಕ್ಕಿದೆಯೆ ?

ಶಾರದಾ ಪ್ರಕಟನಾಲಯದ ಮುನ್ನಡೆ

ಶ್ರೀ ಜಿಬಿಜಿ ರವರ

ಹುಡುಗಾಟ

ಬೆಲೆ : ೧ ರೂ. ೪ ಆ.

★

ಶ್ರೀ ಅನಂತನಾರಾಯಣ ಅವರ ಕಾದಂಬರಿ

ಅಲದ ಹೂ

ಬೆಲೆ : ೧ ರೂ. ೧೨ ಆ.

★

'ಸ್ವಪ್ನಸುಂದರಿ' ಯನ್ನು ನಿಮಗಿತ್ತ ಶ್ರೀ 'ಚದುರಂಗ'ರ

ಶವದ ಮನೆ

(ಡಿಸೆಂಬರ್ ತಿಂಗಳ ೨ನೇ ವಾರದಲ್ಲಿ ಪ್ರಕಟವಾಗುವುದು)

ನಿಮ್ಮೂರಿನಲ್ಲಿ ಪ್ರತಿಗಳು ದೊರೆಯದಿದ್ದಲ್ಲಿ,
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಪ್ರಕಟನಾಲಯ

ಅರಳೇಪೇಟೆ, ಬೆಂಗಳೂರು ೨

ಇನ್ನು ಮೇಲೆ ಏಳ್ಗೆಲು ಸಾಧ್ಯವಿದೆಯೆ? ಮುಂಬಯಿಯಿಂದ ಉಹಮ್ಮದಾಬಾದಿನ ತನಕ ಎಂತೆಂತಹ ಯೋಜನೆಗಳೂ ಸುಧಾರಣೆಗಳೂ ನಡೆದಿವೆಯೆಂಬುದು ಗೊತ್ತೇ? ಕರ್ನಾಟಕದಲ್ಲಿ ಯಾವ ಯೋಜನೆ ಯಶಸ್ವಿಯಾಗಿ ನಡೆದಿದೆ? ಮಹಾರಾಷ್ಟ್ರದವರಂತೂ ಕನ್ನಡಿಗರನ್ನು ಯಾವಾಗಲೂ ದಾಯಾದಭಾವದಿಂದ ನೋಡುತ್ತಲಿರುವರು. ಕನ್ನಡಿಗರಿಗೆ ಯಾವಾಗಲೂ ದೊರೆಯುತ್ತಿರುವುದೆಂದರೆ ಹೊರಜಿಲ್ಲೆಯವರಿಂದ ಔದಾಸೀನ್ಯ; ಸುಸಂಘಟಿತರಾದ ನೆರೆಯ ನಾಡಿಗರಿಂದ ದ್ವೇಷ-ಮತ್ಸರ-ಒತ್ತಾಯಗಳು. ಪ್ರತ್ಯೇಕ ಸಂಘಟನೆಮಾಡಿಕೊಳ್ಳಬೇಕೆಂದರೆ, ಸ್ವತಂತ್ರ ಭಾರತದಲ್ಲಿಯೂ ಕನ್ನಡಿಗರು ಅತಂತ್ರಪರಿಸ್ಥಿತಿಯಲ್ಲಿಯೇ ಉಳಿಯಬೇಕಾಗುವುದೆಂಬುದರ ಉತ್ಕಟಭಾವ ಕನ್ನಡಿಗರಲ್ಲಿ ಇನ್ನೂ ಉಂಟಾಗಿಲ್ಲವೆಂಬುದು, ಇಂದಿನ ನಮ್ಮ ನಿಷ್ಕ್ರಿಯವೃತ್ತಿ–ಔದಾಸೀನ್ಯಗಳಿಂದ ವ್ಯಕ್ತವಾಗುತ್ತದೆ.

ಸ್ವತಂತ್ರಭಾರತದಲ್ಲಿ ಕನ್ನಡಿಗರು ಹೇಗೂ ಬದುಕಿಕೊಂಡು ಇರಬಹುದು— ಎಂಬ ಅಲ್ಪಸಂತುಷ್ಟರೂ ನಮ್ಮಲ್ಲಿ ಕೆಲವು ಜನರು ಇದ್ದಂತಿದೆ. ಹೇಗೂ ಬದುಕಿಕೊಂಡಿರಬಹುದು, ನಿಜ! ಆದರೆ ನಮ್ಮ ಕಾಲ ಮೇಲೆ ನಾವೇ ನಿಲ್ಲುವಂತಹ ಸಾಮರ್ಥ್ಯವನ್ನು ನಾವೆಂದೂ ಪಡೆಯೆವು. ಯಾವಾಗಲೂ ಕನ್ನಡಿಗರು ಪಲ್ಲಕ್ಕಿ ಹೊರುವ ಆಳಾಗಬೇಕಾಗುವುದು; ಕಾಲುದಳದ ಸೀಪಾಯಿಗಳಾಗಿ ಬಹುದು—ಇಷ್ಟೆ. ಈಗ ನೋಡಿ; ದೊಡ್ಡ ದೊಡ್ಡ ಅಧಿಕಾರಸ್ಥಾನದಲ್ಲಿ ಕುಳಿತ ಸುಸಂಘಟಿತ ಪ್ರಾಂತದ ಮುಂದಾಳುಗಳು, ತಮ್ಮ ಪ್ರಾಂತದ ಹಿತದ ಪ್ರಶ್ನೆಗಳು ಬಂದಾಗ; ವೈಯಕ್ತಿಕವಾಗಿ ಬೇಕಾದಹಾಗೆ ನಿರ್ದಾಕ್ಷಿಣ್ಯದಿಂದ ಗಟ್ಟಿಮುಟ್ಟಾಗಿ ಗುಡುಗುಹಾಕುತ್ತಾರೆ. ಅದೇ ಅಧಿಕಾರಸ್ಥಾನದಲ್ಲಿರುವ ಕನ್ನಡ ಮುಂದಾಳುಗಳನ್ನು ನೋಡಿರಿ: ಸುಸಂಘಟಿತಪ್ರಾಂತದ ಬೆಂಬಲವಿಲ್ಲದ ಮೂಲಕ ಎಂತೆಂತಹವೊ ದಾಕ್ಷಿಣ್ಯಗಳ ನೆರವಿನಿಂದ ಇವರಿಗೆ ಆ ಸ್ಥಾನ ಸಿಕ್ಕಿರುವುದು, ಸಿಕ್ಕ ಆ ಫಲಗಳನ್ನು ದಕ್ಕಿಸಿಕೊಳ್ಳಬೇಕೆಂಬ ವೈಯಕ್ತಿಕಸ್ವಾರ್ಥದಿಂದ ಕೂಡಿದ ನಮ್ಮ ಮುಂದಾಳುಗಳು ಎಂತಹ ಸಂದರ್ಭದಲ್ಲಿಯೂ ತುಟಿಯನ್ನು ಎರಡು ಮಾಡಲಾರರು. ಮೇಲಿನವರ ಅಸ್ಪ್ರೀತಿ ತಮ್ಮ ಸ್ಥಾನಗಳನ್ನು ಕಿತ್ತುಕೊಂಡಾ ಮಾಡಬೇಕೇನೆಂಬ ಭೀತಿ ಅವರ ಕನ್ನಡತನ, ಸಾಮಾಜಿಕಬುದ್ಧಿ ಸ್ವಜನಹಿತ ಇವೆಲ್ಲವನ್ನೂ ಮರೆಯಿಸಿಬಿಟ್ಟಿದೆ.

ಕನ್ನಡಿಗರೆ, ಭವಿಷ್ಯದ ರಾಜಕೀಯ ಪರಿಸ್ಥಿತಿ ಹೀಗಿದೆ. ನಾವು ನಮ್ಮವರೆಂದು ನಂಬಿದ ಮುಂದಾಳುಗಳು ಹೀಗಿದ್ದಾರೆ. ಇಂತಹ ಪೇಳೆಯಲ್ಲಿ ನಾವೂ ಕೈಮುಚ್ಚಿ ಕುಳಿತುಕೊಂಡು, ಕೊನೆಯವರೆಗೂ ಆಳಾಗಿಯೇ ಬಾಳೋಣವೆ? ಕರ್ನಾಟಕದ ಅಸ್ತಿತ್ವಕ್ಕೆ ಎಂದೂ ಅವಕಾಶವೆ ಸಿಕ್ಕದಂತೆ ಇದ್ದುಬಿಡೋಣವೆ?

ನಮ್ಮಲ್ಲಿ ದೊರೆಯುವ ಪುಸ್ತಕಗಳು

★

ಕಾಮಶಾಸ್ತ್ರ (ವಾತ್ಸ್ಯಾಯನ ಸೂತ್ರಸಾರ)	....	೧– ೬–೦
ಸೌಂದರ್ಯ ವಿಚಾರ	....	೦– ೪–೦
ಲೈಂಗಿಕ ಸಮಸ್ಯೆಗಳು (ಸಚಿತ್ರ ಭಾಗ ೧)	....	೨– ೦–೦
ಸುಲಭ ಚಿಕಿತ್ಸೆ	....	೨– ೦–೦
ಬಾಳಿನ ಹುಟ್ಟು	....	೧–೧೨–೦

ಹಣ ಮುಂಗಡ ಕಳಿಸಬೇಕು.

ಏಕಾಂತ ಮತ್ತು ಕಂಪನಿ, ಧಾರವಾಡ .

ಪ್ರಶ್ನೆಗೆ ಉತ್ತರ

★

೯

ಶ್ರೀ. 'ಲಕ್ಷ್ಮೀಪತಿ' ಕಳಸಾಪುರ

೧. ಜೀವನದ ಗುರಿಯನ್ನು ಸಾಧಿಸಬೇಕಾದರೆ ಏನು ಮಾಡಬೇಕು ?

ಉತ್ತರ:— ಗುರಿ ಯಾವುದೆಂಬುದರ ಖಂಡಿತ ನಿರ್ಣಯವಾಗಿದ್ದರೆ, ಅದನ್ನು ಸಾಧಿಸಲು ಅಖಂಡವಾಗಿ ಉತ್ಕಟಪ್ರಯತ್ನವನ್ನು ಮಾಡಬೇಕು. ಕಾಲುಗಳು ನಡೆಯದೆ, ಹೋಗಬೇಕಾದ ಊರನ್ನು ಮುಟ್ಟುವುದು ಸಾಧ್ಯವೇ ಇಲ್ಲ.

೨. ನನಗೆ ೨೧ ವರ್ಷ. ತಂದೆಗೆ ನಾನೊಬ್ಬನೇ ಮಗ. ಆಸ್ತಿ ಒಪಳವಿವೆ. ನನ್ನ 'ಅಮ್ಮ' ನಾನನ್ನು ಸಮಾಪಿಸಿರುವಳು, ಅವಕ್ಕಾಗಿ ನನ್ನ ಲಗ್ನವನ್ನು ನೋಡಿ ಸಾಯಬೇಕೆನ್ನುವಳು. ಆದ್ದರಿಂದಲೆ ಇದಕ್ಕಾಗಿ ನನ್ನ ತಂದೆಯ ಒತ್ತಾಯವುಂಟು. ನಾನು ಈಗ ಲಗ್ನವಾದರೆ ಸುಖವಾದೀತೆ ?

ಉತ್ತರ:— ನಿಮ್ಮ ಸಲಹೆಯ ವಿಷಯವಾಗಿ ನೀವಿಷ್ಟು ವಿಶ್ವಾಸ ತೋರಿಸುತ್ತಿರುವುದು ಹೆಮ್ಮೆಯ ಸಂಗತಿ. ನಮ್ಮ ಸಂಪ್ರದಾಯವಂತರಲ್ಲಿಯ ಮದುವೆಗಳೆಂದರೆ ಲಾಟ್ರಿ ಇದ್ದಂತೆ. ಸುದೈವಿಗಳ ದಾಂಪತ್ಯ ಒಳ್ಳೆಯದಾದುದೂ ಉಂಟು; ದುರ್ದೈವಿಗಳ ದಾಂಪತ್ಯ ನಿಷ್ಠುರವಾದುದೂ ಉಂಟು. ನೀವು ಸುದೈವಿಗಳಿದ್ದರೆ, ಈಗಲೆ ನಿಮಗಾಗುವ ಮದುವೆಯಿಂದ ಸುಖವಾಗದೆಂದು ಹೇಗೆ ಹೇಳಬೇಕು? ೨೧ರ ವಯಸ್ಸೆಂದರೆ ಮದುವೆ ಬೇಡವೆಂದು ಹೇಳುವ ಕಾಲವೇನೂ ಅಲ್ಲ. ನಿಮಗೂ ಬೇಕಾದ ಮಾತು; ಮೇಲೆ ತಂದೆಯ ಒತ್ತಾಯ— ರೋಗಿ ಬಯಸುವ ಹಾಲೋಗರವನ್ನೇ ವೈದ್ಯ ಪಥ್ಯ ಹೇಳಿದಂತಲ್ಲವೆ? ಮದುವೆಯು ಹೋಳಿಗೆಗೆ ನಮ್ಮನ್ನು ಮರೆಯಬೇಡಿ, ಮತ್ತೆ !

೧೦

ಸೌ. ಸರೋಜಾ, ಬಸವನಗುಡಿ-ಬೆಂಗಳೂರು

೧. ಕನ್ನಡ ಸಾಹಿತ್ಯದಲ್ಲಿ ಕೈ ಕುದುರಿ ಮುಂದುವರೆಯಬೇಕಾದರೆ, ಶಾಸ್ತ್ರೀಯವಾದ ಅಭ್ಯಾಸ ಆವಶ್ಯಕವೆ ? ಆ ರೀತಿಯ ಪುಸ್ತಕ ಕನ್ನಡದಲ್ಲಿದೆಯೆ ?

ಉತ್ತರ:— ಶಾಸ್ತ್ರೀಯವಾದ ಅಭ್ಯಾಸವೂ ಒಂದು ಆವಶ್ಯಕ ಸಾಧನ ಆಹುದು. ಅಂತಹ ಅಭ್ಯಾಸಕ್ಕೆ ತಕ್ಕುದಾದ ಒಂದೆ ಒಂದು ಪುಸ್ತಕ ಇರಲಿಕ್ಕೆ ಸಾಧ್ಯವಿಲ್ಲ. ಸಾಹಿತ್ಯವು ಸತ್ಯದರ್ಶನದ ಪ್ರತಿಬಿಂಬ. ಸತ್ಯವು ಅನಂತಪ್ರಕಾರವಾದುದು. ಒಬ್ಬೊಬ್ಬರ ಸತ್ಯದರ್ಶನದ ರೀತಿಯೂ ಪ್ರತಿಬಿಂಬಿಸುವ ರೀತಿಯೂ ಒಂದೊಂದು ಬಗೆಯ ಸೌಂದರ್ಯದಿಂದ ಕೂಡಿರುವುದು. ಆದುದರಿಂದ ಹಲವರ ಹಲವು ಪುಸ್ತಕಗಳನ್ನೂ, ಜೀವನದ ಪುಸ್ತಕದಲ್ಲಿಯ ಕಣ್ಣಿಗೆ ಕಂಡ ಹಾಳೆಗಳನ್ನೂ ಓದುತ್ತ ಹೋಗುತ್ತಿರಲೇ ಬೇಕು. ಎಂದರೆ, ಸಾಹಿತ್ಯಿಕ ನಿತ್ಯಾಭ್ಯಾಸಿಯಾಗಿರಬೇಕು,

೨. ಕೇವಲ ಮಹಿಳೆಯರು ಮಾತ್ರ ಬರೆದ ಗ್ರಂಥಗಳನ್ನು ಪ್ರಕಟಿಸುವ, ಯಾವುದಾದರೂ ಪ್ರಕಾಶನ ಕಾರ್ಯಾಲಯ ಕರ್ನಾಟಕದಲ್ಲಿ ಇವೆಯೆ ?

ಉತ್ತರ:— ಕರ್ನಾಟಕದಲ್ಲಿ ಗ್ರಂಥಗಳನ್ನು ಬರೆಯುವ ಮಹಿಳೆಯರು ಎಷ್ಟು ಜನರಿದ್ದಾರೆಂಬುದನ್ನು ಮೊದಲು ಹೇಳಿ. ಪ್ರಕಟನಕ್ಕೆ ತಕ್ಕ ಗ್ರಂಥಗಳನ್ನು ಬರೆಯಬಲ್ಲ ಮಹಿಳೆಯರು ಹೆಚ್ಚಿದಲ್ಲಿ, ಕೇವಲ ಮಹಿಳೆಯರ ಪುಸ್ತಕ ಪ್ರಕಟಿಸುವ ಪ್ರಕಟನಾಲಯಗಳೂ ಹುಟ್ಟಬಹುದು. ಹೊಗಳೇ ಇರದಿರುವ ಪ್ರದೇಶದಲ್ಲಿ ಮಾಲೆಗಾರನದೇನು ಕೆಲಸ ?

೩. ಕನ್ನಡದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಕಾದಂಬರಿಗಳನ್ನು (ಪತ್ತೇದಾರಿ ಕಾದಂಬರಿಗಳನ್ನು ಬಿಟ್ಟು) ಬರೆದು ಪ್ರಕಟಿಸಿರುವ ಕಾದಂಬರಿಕಾರರಾರು ?

ಉತ್ತರ:— ತಾವು ಸ್ವತಂತ್ರ ಕಾದಂಬರೀಕಾರರನ್ನು ಕುರಿತೇ ಕೇಳುತ್ತಿರಬಹುದು. ಸದ್ಯದ ಸ್ವತಂತ್ರ ಕಾದಂಬರೀಕಾರರಲ್ಲಿ ಹೆಚ್ಚು ಸಂಖ್ಯೆಯ ಕಾದಂಬರಿಗಳನ್ನು ಬರೆದು ಪ್ರಕಟಿಸಿದವರು ಶ್ರೀ. ಶಿವರಾಮ ಕಾರಂತರೆ. ಹಿಂದಿನ ಕಾಲದ ಭಾಷಾಂತರ ಕಾದಂಬರೀಕಾರರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ದಿನಂಗತ ಬಿ. ವೆಂಕಟಾಚಾರ್ಯರ ಕಾದಂಬರಿಗಳ ಸಂಖ್ಯೆ ಹೆಚ್ಚಾಗಿ ನಿಲ್ಲಬಲ್ಲದು.

೪. ಶ್ರೀ. ಕಾರಂತರ ಅಥವಾ ಅ. ನ. ಕೃ. ಅವರ ಕಾದಂಬರಿಗಳಲ್ಲಿ ಯಾವುದಾದರೂ ಬೇರೆ ಭಾಷೆಗೆ ಅನುವಾದಿತವಾಗಿದೆಯೆ ? ಯಾವುದು ?

ಉತ್ತರ:— ಇದುವರೆಗಂತೂ ಯಾವುದೂ ಯಾವ ಭಾಷೆಯಲ್ಲಿಯೂ ಅನುವಾದಿತವಾಗಿಲ್ಲ.

೫. ಕನ್ನಡದಲ್ಲಿ ಸ್ತ್ರೀಯರು ಯಾರಾದರೂ ಸಾಮಾಜಿಕ ಕಾದಂಬರಿಯನ್ನು ಬರೆದಿರುವರೆ ? ಯಾರು ? ಯಾವುದು ?

ಉತ್ತರ:— ನಂಜನಗೂಡಿನ ಶ್ರೀಮತಿ ತಿರುಮಲಾಂಬಾ ಅವರು ಬರೆದ ಕೆಲವು ಕಾದಂಬರಿಗಳು ಸಾಮಾಜಿಕ ಛಾಯೆಯಿಂದ ಕೂಡಿವೆ. ೩೫-೪೦ ವರ್ಷಗಳ ಹಿಂದೆ, ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಕಟಿಸಿದ 'ಸದ್ಗುಣಿ ಕೃಷ್ಣಾಬಾಯಿ' ಎಂಬ ಸಾಮಾಜಿಕ ಕಾದಂಬರಿಯೊಂದಿದೆ. ಅದನ್ನು ಬರೆದವರು ಶ್ರೀಮತಿ ಶಾಂತಾಬಾಯಿ ನೀಲಗಾರ ಎಂಬವರು. ಆದರೆ ಅದು ಸ್ವತಂತ್ರವಾಗಿ ಬರೆದುದೋ ಭಾಷಾಂತರವೋ ಎಂಬುದು ಗೊತ್ತಾಗುವುದಿಲ್ಲ.

ಶ್ರೀ. ಉಪೇಂದ್ರ ನಾಯಕ, ಕಾರವಾರ

೧. ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ಹೆಣಗುವ ಪ್ರಕಟನಾಲಯದ ಪದವೀಧರ ಕಾರ್ಯನಿರ್ವಿಗಳೊಬ್ಬರಿಗೆ. ನನ್ನ ಗೆಳೆಯರೊಬ್ಬರ ಕವನಸಂಗ್ರಹವನ್ನು ಪ್ರಕಟಿಸುವಂತೆ ತಿಳಿಸಿದಾಗ, 'ಈಗಿನ ಜನ ಕವನ ಅಸ್ಪೃಶ್ಯನೆಂದು ತಿಳಿಯುತ್ತಾರೆ' ಎಂದು ಉದ್ಗಾರವನ್ನೆತ್ತಿದರು. ಪ್ರಕಟನಾಲಯಗಳ ಕೆಲಸವು ಧನದ ಗಳಿಕೆಯೋ ? ಸಾಹಿತ್ಯದ ಉನ್ನತಿಯೋ ? ಮೂಗುಮುರಿಯುವ ಜನತೆಯ ಹೃದಯವನ್ನು ಕವನಪ್ರಪಂಚದಲ್ಲಿ ನಳಗಿಸುವ ಕೆಲಸ ಯಾರದು ?

ಉತ್ತರ:— ನಮ್ಮ ಗ್ರಂಥಪ್ರಕಟನಾಲಯಗಳಲ್ಲಿ ಎರಡು ಬಗೆಯವಿವೆ. ಲಾಭದಾಸೆಯಿಂದ ಬಂಡವಾಳ ತೊಡಗಿಸಿ ವ್ಯಾಪಾರ ಮಾಡುವುವು ಮೊದಲನೆಯ ಬಗೆಯವು. ತಮ್ಮ ಇಲ್ಲವೆ ತಮ್ಮವರ ಗ್ರಂಥಗಳನ್ನು ಪ್ರಕಟಿಸುವುವು ಎರಡನೆಯ ಬಗೆಯವು : ಕವನಗ್ರಂಥಗಳಿಗೆ ಗಿರಾಕಿಗಳು ಕಡಿಮೆಯಿರುವುದರಿಂದ, ಮೊದಲನೆಯ ಬಗೆಯ ಪ್ರಕಟನಾಲಯಗಳು ಅವುಗಳ ಕಡೆಗೆ ನೋಡುವುದೇ ಇಲ್ಲ. ತಮ್ಮ-ತಮ್ಮವರ— ಎಲ್ಲ ಗ್ರಂಥಗಳನ್ನೂ ಪ್ರಕಟಿಸುವ ಉದ್ದೇಶದಿಂದ ಹೊರಟ ಎರಡನೆಯ ಬಗೆಯವುಗಳಿಗೆ. ಇನ್ನೊಬ್ಬರ ಗ್ರಂಥಗಳನ್ನು ಪ್ರಕಟಿಸುವ ಮನಸ್ಸಿರುವುದಿಲ್ಲ. ಕವಿತೆ ಒಳ್ಳೆಯದೆ ಆಗಿದ್ದರೆ ಜನರು ಮೂಗು ಮುರಿಯುವ ಕಾರಣವೇ ಇಲ್ಲ. ಕವಿತಾ ಪ್ರೇಮಿಗಳು ಓದಿಯೇ ಓದುವರು. ಅವರನ್ನು ಬೇರೆಯವರಾರೂ ಪಳಗಿಸಬೇಕಾಗಿಲ್ಲ.

೨. ಸ್ವಲ್ಪಪ್ರಜ್ಞನೊಬ್ಬ ಅವಿದ್ಯಾವಂತನಿದ್ದರೂ ಆತನ ಹೃದಯದಿಂದ ಬಂದ ಸುಜ್ಞಾನದ ಒಳ್ನುಡಿಗಳು, ಭಾಷಾಲಂಕಾರವಿಲ್ಲದೆ ಸರಳವಾಗಿ ದಿಗಂಬರಾವಸ್ಥೆಯಲ್ಲಿದ್ದರೂ, ತ್ರಿಕಾಲದಲ್ಲಿಯೂ ಉಳಿಯುವ ಸಾಹಿತ್ಯವಾದೀತು— ಅಂತ ನನ್ನ ಭಾವನೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ:— ಸತ್ಯದ ನೆಲೆಯನ್ನು ಕಂಡುಹಿಡಿದು ಹೇಳುವ ಯಾವ ಒಳ್ನುಡಿಗಳಿಗೂ ಭಾಷಾಲಂಕಾರಗಳು ಬೇಕೇಬೇಕೆಂದು ನಿರ್ಬಂಧವಿಲ್ಲ. 'ಸಕ್ಕರೆಯು ನಾಲಗೆಗೆ ಸಿಹಿಯಾಗಿ ಎನಿಸುವುದು' ಎಂಬುದನ್ನು ಹೇಳಬೇಕಾದರೆ, ಭಾಷಾಲಂಕಾರವೇತಕ್ಕೆ ಬೇಕು ? ಆದರೆ ಇಂತಹ ಲೌಕ್ಯಾಚಾರದ ಮಾತುಗಳು ಸಾಹಿತ್ಯವೆನಿಸವು. ಸತ್ಯಾನುಭವವನ್ನು ಸುಂದರವಾದ ರೀತಿಯಿಂದ ಹೇಳುವ ಮಾತು ಸಾಹಿತ್ಯವೆನಿಸುವುದು; ಅಂತಹ ಸುಂದರ ರೀತಿಗೆ ಭಾಷಾಲಂಕಾರಗಳು ಅತ್ಯಗತ್ಯವಾಗಿವೆ.

೩. ಜೀವನದ ಪ್ರತಿಬಿಂಬವೇ ಸಾಹಿತ್ಯವಷ್ಟೆ ? ಇದ್ದುದಿದ್ದಂತೆ ಜೀವನದ ಛಾಯಾಚಿತ್ರ ತೆಗೆದು ಶಬ್ದಚಿತ್ರವನ್ನೇಕೆ ಚಿತ್ರಿಸಬಾರದು ? ಆ ವಸ್ತುವನ್ನು ಭಾವದ ಬಣ್ಣ, ಊಹೆಯ ಗರಿ— ಕುಂಚದ ಗೆರೆ, ಶೈಲಿಯ ನಾವಿನ್ಯದಲ್ಲೇಕೆ ಹಾಯಿಸಬೇಕು ? ಕಂಡುದನ್ನು ಕಂಡಂತೆ ಹೇಳುವುದು ಅಪರಾಧವೇನು ?

ಉತ್ತರ:— ಜೀವನದ ಪ್ರತಿಬಿಂಬವಷ್ಟೇ ಸಾಹಿತ್ಯವೆನಿಸದು. ಸಾಹಿತ್ಯಕ್ಕೆ ಉದ್ದೇಶಗಳಿರುವುವು : ಒಂದು ಸೌಂದರ್ಯದರ್ಶನದಿಂದುಂಟಾಗುವ ಆನಂದ. ಇನ್ನೊಂದು ಐಹಿಕಜೀವನದ ಸಮಾಧಾನ-ಶಾಂತಿಗಳಿಗೆ ಸಾಧಕವೆನಿಸುವಂತಹ ಸನ್ಮಾರ್ಗಬೋಧೆ. ಪರಿಣಾಮದಲ್ಲಿ ಇಂತಹ ಆನಂದ— ಸನ್ಮಾರ್ಗಬೋಧೆಗಳು ಸಿಕ್ಕುವಂತೆ, ವಾಸ್ತವಜೀವನದಲ್ಲಿಯ ವಿವಿಧಸಂದರ್ಭಗಳನ್ನು, ಔಚಿತ್ಯವರಿತು ಹೊಂದಿಸಿ, ಸ್ಪಷ್ಟವಾದ ಸುಂದರವಾದ ಭಾಷಾಶೈಲಿಯಲ್ಲಿ ಹೇಳುವುದೇ ಉತ್ತಮ ಸಾಹಿತ್ಯವೆನಿಸುವುದು. ಭಾವ, ಕಲ್ಪನೆ, ಶೈಲಿಯ ನಾವೀನ್ಯ ಇವು, ಸಾಹಿತ್ಯದ ಉದ್ದೇಶಸಿದ್ಧಿಗೆ ನಿಜವಾದ ಸಹಕಾರಿಗಳು. ಕಂಡುದನ್ನು ಕಂಡಂತೆ ಹೇಳುವುದು ಅಪರಾಧವೆನಿಸದೆ ಹೋದರೂ ಸಾಹಿತ್ಯವೆನಿಸದು.

೪. ಸಾಹಿತಿಗಳ ಮುದಿಪ್ರಾಯದಲ್ಲಿ ಅಥವಾ ಅವರು ಸತ್ತಮೇಲೆ, ಅವರ ಸಾಹಿತ್ಯಕ್ಕೆ ಬೆಳಕು ಬೀಳುತ್ತದೆ. ಉತ್ತಮ ಸಾಹಿತಿಗೆ ಸಾಹಿತ್ಯಕ್ಷೇತ್ರದಲ್ಲಿ ದುಡಿಯಲು ತಕ್ಕ ವಿಧಾನವನ್ನು ಜನತೆ ಏಕೆ ನೇರ್ಪಡಿಸಿ ಕೊಡಬಾರದು ? ನುಡಿಯ ಸೇವೆ ಸ್ವಾರ್ಥಸಾಧನವೆಂದು ಜನರಗ್ರಹಿಕೆಯೆ ? ಸಾಹಿತಿಗಳ ಈ ತೊಡಕನ್ನು ಬಿಡಿಸುವುದೆಂತು ?

ಉತ್ತರ:—ಹತ್ತಾರು ಜನ ರಸಿಕರು ಒಳ್ಳೆಯ ಸಾಹಿತ್ಯವೆಂದು ಒಪ್ಪುವ ವರೆಗೆ ಯಾವ ಒಳ್ಳೆಯ ಸಾಹಿತಿಯ ಸಾಹಿತ್ಯಕ್ಕೂ ಬೆಳಕು ಸಿಕ್ಕುವುದಿಲ್ಲ. ಹಾಗೆ ಹತ್ತಾರು ಜನರು ಒಪ್ಪುವ ವರೆಗೆ ಎಂದರೆ ಸಾಹಿತಿ ಮುದುಕನಾಗಿರುತ್ತಾನೆ; ಇಲ್ಲವೆ ಸತ್ತೇ ಹೋಗಿರುತ್ತಾನೆ. ತಮ್ಮ ಕಾಲದ ಕಲಾವಿದರ ಯಾವ ಕಲಾಕೃತಿಯನ್ನೂ ಸಂದೇಹದೃಷ್ಟಿಯಿಂದಲೇ ನೋಡುತ್ತಿರುವುದು ಮನುಷ್ಯನ ಸ್ವಭಾವದ್ದೊಂದು ವೈಶಿಷ್ಟ್ಯ. ಆದುದರಿಂದಲೆ ಕಲಾವಿದರು ಸಾಮಾನ್ಯ ಜನತೆಯ ಉಪೇಕ್ಷೆಗೆ ಪಾತ್ರರಾಗಬೇಕಾಗುವುದು. ಹೊಟ್ಟೆಯ ಪಾಡೊಂದನ್ನೆ ನೋಡುವ ಬಹುಜನರಿಗೆ, ನುಡಿಯ ಸೇವೆ ಸ್ವಾರ್ಥಸಾಧನವೆಂದು ಎನಿಸದಿದ್ದರೂ ಜೀವನಾವಶ್ಯಕ ಪದಾರ್ಥವೆಂದು ಎನಿಸುವುದಿಲ್ಲ. ಬಹುಜನರಿಗೆ ಹೀಗೆ ಎನಿಸಿದಾಗ, ಸಾಹಿತಿಯ ತೊಡಕು ತನ್ನಿಂದ ತಾನೇ ಬಿಡುವುದು.

⊙ ತಾಯ್ತನ ⊙

(ಒಂದು ಕತೆ)

ಶ್ರೀ. ಐರಣಿ ಶ್ರೀನಿವಾಸ ಬಿ. ಎ (ಆನರ್ಸ್). ಮುಂಬಯಿ

★

ತಾಯ್ತನದ ಮೇಲ್ಮೈ ನಮ್ಮಲ್ಲಿ ವೇದಕಾಲದಿಂದಲೂ ಹೊಗಳಿಸಿಕೊಳ್ಳುತ್ತ ಬಂದಿದೆ. ಅದರಂತೆಯೆ ತಾಯ್ತನದ ಹಿಂಗದ ವ್ಯಥೆಯು ಅಂದಿನಿಂದಲೆ ನಮ್ಮಲ್ಲಿ ಬೆಳೆಯುತ್ತ ಬಂದಿದೆ. ಹಳೆಯ ಸಂಸ್ಕೃತಿಯವರಲ್ಲೆ ಆಗಲಿ, ಹೊಸ ಸಂಸ್ಕೃತಿಯವರಲ್ಲೇ ಆಗಲಿ; ಇಂದೂ ತಾಯ್ತನದ ಆ ವ್ಯಥೆ ಇದ್ದಂತೆಯೇ ಇದೆ!

★

"ಮುಂಬಯಿಯ ಪಟ್ಟಣ ನೋಡು, ಮೈಸೂರು ಅರಮನೆ ನೋಡು, ಇದು ನೋಡು ತಾಜ ಮಹಾಲ, ಹಿಮಾಲಯ ಪರ್ವತ ನೋಡು, ಕಾಶೀ ವಿಶ್ವೇಶ್ವರ ನೋಡ್...."

ಬಿಳಿಯ ಗಡ್ಡದ ಸಾಬಿಗೆ ದುಡ್ಡು ಕೊಟ್ಟು, ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಗೊಂಬೆಯನ್ನು ನೋಡುತ್ತಿದ್ದೆ. 'ಚಿತ್ರದಲ್ಲಿ ನೋಡುವುದಕ್ಕಿಂತ ನಿಜವಾಗಿಯೂ ನೋಡುವ ಪ್ರಸಂಗ ಬಂದರೆ ಎಷ್ಟು ಒಳ್ಳೆಯದು!' ಎಂದು ನನ್ನ ಎಳಮನಸ್ಸು ಆಗ ಕಲ್ಪನೆಯ ಗರಿಗೆದರಿತ್ತು.

ಆದರೆ ಮನೆಯ ಆಳು ಬಸನಿಂಗನು, "ಮನೀಗೊಂದು ಸೊಸಾ ಪಾಪಾ ಬಂದೈತಿ" ಎಂದು ಹೇಳಿ, ಮನೆಗೆ ಕರೆದೊಯ್ದನು. ಮಗುವನ್ನು ನೋಡುವ ಸಂಭ್ರಮವೊ, ಮನೆಗೆ ಬರುವ ಸಂಭ್ರಮವೊ— ಅಂತೂ ಬೇಗಬೇಗ ಬಂದು, ಕೊನೆಗೊಮ್ಮೆ ನೋಡಿದಾಗ, ಆ ಮಾಂಸದ ಮುದ್ದೆ ನನಗೇನೂ ಅಂತಹ ಸಂತೋಷ ಕೊಡಲಿಲ್ಲ. ಮನೆಯಲ್ಲಿರುವ ಕಪ್ಪುರದ ಗೊಂಬೆಗೂ ಇದಕ್ಕೂ ಹೋಲಿಸಿದರೆ ಎಷ್ಟೊಂದು ಅಂತರ! ಆದರೆ ಅಕ್ಕಮ್ಮನಿಗೆ ಮಾತ್ರ ಲಲಿತೆ ಸಹಜವಾಗಿ ಮನೆಯಲ್ಲಿ ಎಲ್ಲರೂ ಸಂಭ್ರಮದಲ್ಲಿ ಇದ್ದರು. ಶಾಲೆಗೆ ಹೋಗುವ ಮುಂಚೆ ನೋವಿನಿಂದ ನರಳುತ್ತಿದ್ದ ತಾಯಿಯ ಮುಖದಲ್ಲಿ ಕೂಡ ಈಗ ಆನಂದದ ಛಾಯೆ ಇದ್ದಿತು. ಆ ಕಾರಣ ನಾನೂ ನಲಿದೆ.

ಉಳಿದ ತಮ್ಮಂದಿರನ್ನೊ, ತಂಗಿಯಂದಿರನ್ನೊ— ಸಣ್ಣವರಿದ್ದಾಗ ಬಿಡಿಸಲು ಸಾಧ್ಯವಾದಂತೆ, ಈ ಮಗುವಿನೊಟ್ಟಿಗೆ ಸಾಧ್ಯವಿರಲಿಲ್ಲ. ಇಂಗ್ಲಿಶ್ ಶಾಲೆಯನ್ನು ಸೇರಲು ನಾನು ಮನೆ ಬಿಡಬೇಕಾಗಿ ಬಂತು. ಕಳೆದ ತಿಂಗಳು ಊರಿಗೆ ಬಂದುಹೋಗಿದ್ದ ಕಲೆಕ್ಟರರ ತೀವಿ-ದನಲತ್ತುಗಳನ್ನು ಕಂಡು, ನಾನೂ ಹಾಗೆಯೇ ಆಗಬೇಕೆಂದು ತಂದೆಯವರ ಅಪೇಕ್ಷೆಯೇನೋ!

ಆದರೆ ಒಂದೇ ತಿಂಗಳಲ್ಲಿ ನಾನು ಧಾರವಾಡದಿಂದ ಓಡಿ ಬಂದೆ! ನನ್ನ ತಾಯಿ, ಅಕ್ಕ-ತಮ್ಮಂದಿರು, ನನ್ನ ಪ್ರೀತಿಯ ಹೋರಿಯ ಕರು, ಹುಟ್ಟಿದೂರಿನ ನೆಲ, ಜಲ— ಇವೆಲ್ಲವುಗಳನ್ನು ಬಿಟ್ಟು ಇರಲು ನನ್ನಿಂದಾಗಲಿಲ್ಲ.

ತಾಯಿ ಯಥಾಪ್ರಕಾರ ಆದರಿಸಿದಳು. ತಂದೆ ಮೂರು ದಿನ ಮಾತಾಡಲಿಲ್ಲ. ತಾಯಿಯನ್ನೇ ಬಲವಾಗಿ ಗದರಿಸಿದರು.

"ಅಂವೊಬ್ಬನ ಇಲ್ಲವಾದರೆ ಏನು ನಷ್ಟ? ಇನ್ನೂ ನಾಲ್ಕು ಜನ ಮಕ್ಕಳಿವೆ" ಎಂದು ಅನ್ನುತ್ತಿದ್ದರು. "ವಿದ್ಯೆಯಿಲ್ಲದ ಮಗ ನನ್ನ ಪಾಲಿಗೆ ಮಗನಲ್ಲ" ಎಂದು ಇನ್ನೊಮ್ಮೆ ಆಡಿದರು.

ಮತ್ತೆ ನಾನು ಕಲಿಯಲು ಹೋಗಬೇಕಾಯಿತು ಆಮೇಲೇನು ಓಡಿ ಬರಲಿಲ್ಲ. ಮಹತ್ವದ ಹಬ್ಬ-ಹುಣ್ಣಿಮೆಗಳಿಗೆ, ದೀಪಾವಳಿ— ಬೇಸಗೆಯ ಬಿಡುವುಗಳಿಗೆ ಊರಿಗೆ ಬರುತ್ತಿದ್ದೆ.

ಈ ಮಧ್ಯದಲ್ಲಿ, ಹೊಸದಾಗಿ ಹುಟ್ಟಿದ ಆ ತಮ್ಮ— ಅದೆಂತಹದೊ ಜಡ್ಡಂತೆ— ತೀರಿಕೊಂಡುದನ್ನು, ತಂದೆ ಒಂದು ಸಲ ಕಾಗದ ಬರೆದರು. ಕೂಡಲೇ ಮನೆಗೆ ಬಂದಿದ್ದೆ. 'ಕೊಟ್ಟು ಏಕೆ ದೇವರು ಕಸಿದುಕೊಳ್ಳಬೇಕು? ಒಟ್ಟಿಗೆ ಇದು ಮೂರನೆಯ ಸಲ ಹೀಗಾಗುವುದು!' ಎಂದು ನೆರೆಮನೆಯ ಗಂಗಮ್ಮ ನನ್ನ ತಾಯಿಯನ್ನು ಸಮಾಧಾನಮಾಡುತ್ತಿದ್ದರು.

ನಾನು ಇಂಗ್ಲಿಷ್ ಮೂರನೆಯ ಈಯತ್ತೆಯಲ್ಲಿ, ಮೊದಲನೆಯ ನಂಬರಿನಲ್ಲಿ ಪಾಸಾಗಿದ್ದೆ. ಆದುದರಿಂದಲೇ ವಿದ್ಯಾರ್ಥಿವೇತನ ದೊರೆಯಿತು. 'ಮೇ ತಿಂಗಳಲ್ಲಿ ನೀ ಊರಿಗೆ ಬಂದಾಗ, ಸತ್ಯನಾರಾಯಣ ಪೂಜೆ ಮಾಡುತ್ತೇವೆ, ಬೇಗ ಬಾ' ಎಂದು ಮನೆಯಿಂದ ಕಾಗದ ಬಂದಿತ್ತು.

ಈ ಪೂಜೆಗೆ ಇನ್ನೊಂದು ಕಾರಣವೆಂದರೆ, ನನಗೆ ಇನ್ನೊಬ್ಬ ತಮ್ಮ ಬಂದಿದ್ದ! ಈ ಮಗು ಅದೃಷ್ಟಶಾಲಿಯಾಗಿತ್ತು.

ನಮ್ಮ ಮನೆಯಲ್ಲಿ ಗೋಸಂಪತ್ತಿಗೂ ಕೊರತೆಯಿದ್ದಿಲ್ಲ. ಊರಿಗೆ ಹೋದಸಲಕ್ಕೊಮ್ಮೆ, ತಾಯಿ "ಇದು ನಿನ್ನ ಓರಗೆಯವು: ಆ ಎಮ್ಮೆಕರು ಸರಸಿಯು ಹುಟ್ಟಿದ ಮೂರು ದಿನಕ್ಕೆ ಹುಟ್ಟಿದೆ. ಆ ಕೋಣಗರು ಇತ್ತಲ್ಲ, ಅದನ್ನು ಊರ ದೇವತೆಗೆ ಬಲಿ ಕೊಟ್ಟೆವು...." ಎಂದೆಲ್ಲ ಆ ಪ್ರಪಂಚವನ್ನು ವಿವರಿಸುತ್ತಿದ್ದಳು.

ಐದನೆಯ ಈಯತ್ತೆಯ ಪರೀಕ್ಷೆ ಮುಗಿಸಿಕೊಂಡು ಊರಿಗೆ ಬಂದಾಗ, ನನ್ನ ತಾಯಿಯ ಉದರದಲ್ಲಿ, ಹುಟ್ಟಿನಲ್ಲಿ ಒಂಬತ್ತನೆಯದೂ, ಬದುಕಿ ಉಳಿದವರಲ್ಲಿ ಆರನೆಯದೂ ಆದ ಮಗುವು ಬೆಳೆಯುತ್ತಿತ್ತು. ಆಗ....

"ಅಂತೂ ನಾ ಬಂದ ಸಲಕ್ಕೊಮ್ಮೆ ಮನೆಯಲ್ಲೇ ಆಗಲಿ, ಕೊಟ್ಟಿಗೆಯಲ್ಲೇ ಆಗಲಿ, ಬಾಣಂತಿ ಇದ್ದೇ ಇರುತ್ತಾಳೆ." ಎಂದಿದ್ದೆ.



ಡೊಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

" ಸಂಸಾರವಾ, ನಡೆಯೋದೇ " ಎಂದಿದ್ದಳು ತಾಯಿ.

ತಂದೆ ತನ್ನ ಮಕ್ಕಳ ಜನನ-ಮರಣದ ಟಿಪ್ಪಣಿಯನ್ನು ಸರಿಯಾಗಿ ಬರೆದಿಡುತ್ತಿದ್ದರೆ, ನಾನೂ ಬಾಯಿಂದ ಆ ಲೆಕ್ಕವನ್ನು ಸ್ಪಷ್ಟವಾಗಿಟ್ಟುಕೊಳ್ಳಬೇಕಾಗುತ್ತಿತ್ತು. ಏಕೆಂದರೆ ಪರಪೂರಲ್ಲಿ ಯಾರಾದರೂ ಕೇಳಿದಾಗ, ಹೇಳಲು ಬೇಗ ಲೆಕ್ಕಹತ್ತಬೇಕಲ್ಲವೆ ?

ಅಕ್ಕನ ಮದುವೆಯ ನಿಮಿತ್ತ ತಡೆದು ನಿಂತಿದ್ದ ನನ್ನ ಮುಂಜಿಯ ಕಾರ್ಯ, ತವಳ ಮದುವೆ—ಎರಡೂ ಒಟ್ಟಿಗೇ ಆಯಿತು. ಹೇಗೆಂದರೆ, ಅಕ್ಕನ್ನನ್ನು ಮದುಮಗಳಾಗಿ ಸುಮ್ಮನೆ ಕೂಡುವಂತಿರಲಿಲ್ಲ. ಮದುವೆಯ ತಯಾರಿಯಲ್ಲಿ ನೆರವಾಗಬೇಕಿತ್ತು. ತನ್ನ ತಾಯಿಯು ಮೂರು ತಿಂಗಳಿನ ಮತ್ತೊಂದು ಹೊಸ ಮಗುವನ್ನೂ ಜೋಗರಿಸಬೇಕಿತ್ತು.

ಅಕ್ಕಮ್ಮ ಅತ್ತೆಯಮನೆಗೆ ಹೋದ ಮರುದಿನ ಭಾಗನ್ಮನಪರು ಬಂದು " ಮನೆ ಭಣಗುಟ್ಟುತ್ತದೆ ನೋಡಿರಿ " ಎಂದಿದ್ದರು. ಆಗ ನಾನು, " ನನ್ಮನೀ ಭಣಭಣ ಅನ್ನುವಹಾಗಿಲ್ಲವೇ ಇಲ್ಲ; ಯಾವಾಗಲೂ ತುಂಬಿಯೇ ಇರುತ್ತದೆ. ಅವಳಲ್ಲದಿದ್ದರೆ ಮತ್ತೆ ಆರು ಜನ ನಾವು ಇದ್ದೇವಲ್ಲ ! " ಅಂದೆ.

ನನ್ನದು ಅಪಕ್ವ ವಿಚಾರದ— ಅಧಿಕಪ್ರಸಂಗತನದ ನು ಎಂದು, ಆಡಿದ ಮೇಲೆ ನನಗೇ ಅನಿಸಿತು.

ಆ ಮೇಲೆ, ನಾನು ತಿರುಗಿ ಧಾರವಾಡಕ್ಕೆ ಹೊರಡುವ ಹಿಂದಿ ದಿನ, ನಾನೆಲ್ಲ ಊಟಕ್ಕೆ ಕುಳಿತಿದ್ದೆವು. ಮದುವೆಗೆ ಬಂದಿ ನಮ್ಮ ಸೋದರಮಾವ ನಮ್ಮ ತಾಯಿಗೆ ಹೇಳಿದ :

" ಇನ್ನು ಮಾತ್ರ ನೀ ಮಕ್ಕಳನ್ನ ಹಡೆಯುತ್ತ ಕೂ ಕಠಿಣವದೆ. ಇಷ್ಟು ದಿನ ಅಕ್ಕಮ್ಮ ಇದ್ದಳು; ಎಲ್ಲ ನೋಡಿಕೊಂ ಹೋಗುತ್ತಿದ್ದಳು. ಮದುವೇ ದಿನ ಸಹಿತ ಅವಳು ನಿನ್ನ ಬಾಣಂ ಶನ ಮಾಡಬೇಕಾಯಿತು. "

ತಂದೆ ವ್ಯಾಸಂಗಿಕ ನಗೆ ನಕ್ಕು, " ಅದೇನೊ ನಿಜ; ಆದರೆ ನಿನ ತಂಗಿಗೆ ಬಾಣಂತಿತನ ಮಾಡೋದು, ಮಾಡಿಸಿಕೊಳ್ಳೋದು- ಇವರ ತ್ರಾಸನೇ ಇಲ್ಲ. ಒಂದು ತಿಂಗಳದೊಳಗೆ ಮುಗಿದುಬಿಡತ ಮತ್ತೆ, ವಿಶೇಷ ಖರ್ಚೂ ಇಲ್ಲ. ಬೇಗ ಮಡಿ ಹಿಡಿದುಬಿಡುತ್ತಾ ಎಂದರು.

" ಅದೇನಿಲ್ಲ, ಇದೇ ಕೊನೆಯದು " ಎಂದಳು ತಾಯಿ!

" ಮುಂದುವರಿದರೂ, ಇನ್ನೊಬ್ಬ ಮಗಳು ಬಾಣಂತಿತನ ಸಿದ್ಧವಾಗಿಯೇ ಇದ್ದಾಳೆ " ಎಂದು ನಮ್ಮ ಸೋದರನೂ ಹದಿನೂರು ವರ್ಷದ ಲಲಿತೆಯ ಮುಖ ನೋಡುತ್ತ ಆಡಿದ

* * * *

ಅದು ನನ್ನ ಶಾಲೆಯ ಕೊನೆಯ ವರ್ಷ. ತಂದೆಯ ಸಲಹೆಯ ಮೇರೆಗೆ ಪ್ರತ್ಯೇಕ ಕೋಣೆಯನ್ನು ಹಿಡಿದು ಅಭ್ಯಾ ಮಾಡುತ್ತಿದ್ದೆ. ಎಲ್ಲವೂ ಸುಸೂತ್ರ ಸಾಗಿದಾಗ, ತಂದೆ ನ ಕಲೆಕ್ಟರಿಕೆಯ ಹಗಲುಗನಸನ್ನು ಕಾಣುತ್ತಿದ್ದರೇನೊ !

ತಾಯಿ 'ಇದೇ ಕೊನೆಯದು' ಎಂದಿದ್ದರಲ್ಲ ! ಹಾಗೇನಾಗಲಿ ಮರುವರ್ಷವೇ ಮತ್ತೆ— ನಾಡಿದು ಪರೀಕ್ಷೆಗೆ ಹೋಗಬೇಕೆನ ವಾಗ, ತಂದೆಯಿಂದ " ನಿನ್ನ ಮಾತೋಶ್ರೀಯು ನಿನ್ನೆ ರ ೮-೩೦ ಗಂಟೆಗೆ ಹೆಣ್ಣುಮಗುವನ್ನು ಹಡೆದಿದ್ದಾಳೆ. ಕೂ ಬಾಣಂತಿ ಕ್ಷೇಮದಿಂದ ಇರುತ್ತಾರೆಂದು ತಿಳಿಸಲು ಸಂತೋ ವಾಗುತ್ತದೆ " ಎಂಬ ಕಾಗದ ಬಂತು.

ಮೊದಲಿನ ಎರಡು ಹೇಸರುಗಳು ಚೆನ್ನಾಗಿ ಆದ ಬಗ್ಗೆ ತಿರ ಪತ್ರ ಬರೆದಾಗ, ಅದಕ್ಕೆ ಉತ್ತರವಾಗಿ " ಈ ಹುಡುಗಿಗೂ ಹುಟ್ಟಿದ ಗಳಿಗೆ ಬಹಳ ಚೆನ್ನಾಗಿ ಅದೆ; ಅದಕ್ಕೇ ಹೀಗಾದದ್ದು ಅಂತ ನಿನ್ನ ಮಾತೋಶ್ರೀಯು ಅಂಬೋಣವದೆ " ಎಂದು ಅವರಿ ಕಾಗದ ಬಂದಿತ್ತು.

ಆದರೆ ಊರಿಗೆ ಹೋದಾಗ, ಆ ಮಗು ಹೆಸರಿಡಿಸಿಕೊಳ್ ಮುನ್ನವೆ ಕಣ್ಮರೆಯಾಗಿತ್ತು. ಪರೀಕ್ಷೆಯ ಸಮಯದಲ್ಲಿ ನನಗೆ ತಿಳಿಸಬೇಕೆಂದು ಬಿಟ್ಟಿದ್ದರಂತೆ. ಆದು ಹುಟ್ಟಿದಾಗ ನ ವಿಶೇಷ ಆನಂದವೂ ಎನಿಸಿರಲಿಲ್ಲ. ಈಗ ದುಃಖವೂ ಆಗಲಿಲ್ಲ.

ತಾಯಿ ಮಾತ್ರ ಬಹಳ ನಿರ್ವಿಣ್ಣಳಾದಂತೆ ಕಂಡಿತು. ಒಟ್ಟಿ ನಾಲ್ಕು ಮಕ್ಕಳನ್ನು ಹೀಗೆ ಕಳೆದುಕೊಂಡು, ಮನಸ್ಸು ಗಾಸಿಯಾ

ಾಗುತ್ತೇನೊ! ಅಂತೆಯೇ ಮಗನು ವಿದ್ಯಾವಂತನಾಗಿ ಮುಂದೆ ಬರುವ ವಿಷಯದಲ್ಲಿ ಎಂದೂ ಎದುರುಬಾರದ ಆಕೆ, ಪುಣೆಗೆ ಹೊರಡುವ ಮುನ್ನ ನಮಸ್ಕಾರ ಮಾಡಲು ಹೋದಾಗ, ಕಣ್ಣಲ್ಲಿ ನೀರುತಂದಳು. ತಂದೆ ನನ್ನ ಸನ್ಮಾನುಗಳನ್ನು ಬಸನಿಂಗನ ಮೇಲೆ ಹೊರಿಸುವ ಕೆಲಸದಲ್ಲಿ ನಿರತಗಿದವರಂತೆ ಮಾಡಿದರು. ನನಗೇನು ಹೇಳಬೇಕೋ ತಿಳಿಯಲಿಲ್ಲ. ಹಡೆದು ಎದ್ದುದರಿಂದ ಸೊರಗಿದ ತಾಯಿಯ ಮುಖವನ್ನು ನೋಡಲೂ ನನ್ನಿಂದಾಗಲಿಲ್ಲ.

"ದೀಪಾವಳಿಗೆ ಬರತೀನಲ್ಲ" ಎಂದಿಷ್ಟೆ ಹೇಳಿದೆ.

ಪುಣೆಯಲ್ಲಿ ನಾನಿರುತ್ತಿದ್ದುದು, ವಿದ್ಯಾರ್ಥಿವಸತಿಗೃಹದಲ್ಲಿ, ಬ್ಬ ಮಹಾರಾಷ್ಟ್ರೀಯ ಗೆಳೆಯನೊಂದಿಗೆ. ಓದಿನಲ್ಲಿ ಅತೀವ ಸಕ್ತಿ ಇದ್ದುದರಿಂದ, ಊರ ಕಡೆಯ ಯೋಚನೆ ಆಷ್ಟಿರಲಿಲ್ಲ ದುದ್ದು ಬೇಕಾದಾಗ ಮಾತ್ರ ಪತ್ರ ಬರೆಯುತ್ತಿದ್ದೆ' (ಇದು ಂದೆ ಹೇಳುವ ಮಾತು.)

ಪರೀಕ್ಷೆ ಮುಗಿಸಿಕೊಂಡು, ಮಾರ್ಚ್ ತಿಂಗಳಲ್ಲಿ ಊರಿಗೆ ರಳುವಾಗ, ಎರಡು ಒಳ್ಳೆಯ ಕ್ಯಾಲೆಂಡರುಗಳನ್ನು ತೆಗೆದು- ೂಂಡು ಹೊರಟೆದ್ದೆ. ನನ್ನ ಸಹವಿದ್ಯಾರ್ಥಿ "ಇದು ಯಾತಕ್ಕೊ? ನ್ನ ತಂದೆ ಕ್ಯಾಲೆಂಡರ್ ಹಚ್ಚಿಯೇ ಇರತಾರೆ" ಎಂದು ಗೆಯಾಡಿದ್ದ. ಆದರೆ ವರ್ಷ-ವರ್ಷವೂ ಇರುವ ಕ್ಯಾಲೆಂಡರು ಸಲ ಇರಲಿಲ್ಲ. ನನ್ನ ತಾಯಿ 'ಸಬಾತಿಯಾಕೆ'ಯಾಗಿದ್ದಳು. ಈ ಬಗ್ಗೆ ಮಾತು ತೆಗೆದಾಗ "ಖಂಡಿತ ಆದೇ ಕಡೀದವಾ. ನ್ನೊಂದಕ್ಕೇ ಮುಕ್ತಾಯ ಆತು. ಇನ್ನೇನೊ! ತಿರುಗಿ ಮಕ್ಕಳು ಂತ ಮದುವಿಯಾಗಿ ಮಕ್ಕಳನ್ನ ಕಾಣುವ ದಿವಸ ಬಂದವು" ಂದಿದ್ದಳು.

"ಮತ್ತ ದೇವರು ಕೊಟ್ರ?" ಎಂಬ ಕೊಂಕುನುಡಿತನ್ನಾಡಿದ್ದೆ.

"ಬಿಳಿದ ಮಕ್ಕಳ ಇದರಿಗೆ, ದೇವರು ನನ್ಗ ಇಷ್ಟು ಮಾನಗೇಡಿನ್ನ ನೂಡಲಿಕ್ಕಿಲ್ಲ" ಎಂದೂ, ಆವಳ ಸ್ವಭಾವವಿರುದ್ಧವಾದ ಕಟು-ನುಡಿತನಿಂದ ಉತ್ತರ ಕೊಟ್ಟದ್ದಳು. ಲಿತೆ "ಇಲ್ಲ, ಅಣ್ಣಾ, ನ್ನ ಪ್ರಶ್ನೇ ಕೇಳಿಸ್ಯಾಳೆ. ಮೊನ್ನೆ ಹುಟ್ಟಿದ್ದೇ ಕಡೆಯದಂತೆ!" ಂದಳು.

ಆರುತಿಂಗಳ ಪರೀಕ್ಷೆಯ ನಿಮಿತ್ತ, ಆ ದೀವಳಿಗೆಗೆ ಊರಿಗೆ ಹೋಗಿರಲಿಲ್ಲ. ಮತ್ತೊಂದು ಮಗುವಿನ ಅವತಾರದ ವಿಷಯ ಕಾಗದ ಇರಲಿಲ್ಲ. ಆದುದರಿಂದ ಕಿರುಗೋಣಿಯಲ್ಲಿ ಈ ಸಲವೂ ಜೋಳಿಗೆ ತೊಟ್ಟಿಲಿನ ತೂಗು ಇಲ್ಲವೆಂದುಕೊಂಡಿದ್ದೆ. ಆದರೆ ತಾಯಿ ಹಡೆದು ಎರಡು ತಿಂಗಳ ಬಾಣಂತಿಯೆಂದು ತಿಳಿದಾಗ ನನಗೆ ಆಶ್ಚರ್ಯವಾಯಿತು. ನನಗೆ ತಿಳಿಸಬೇ ಇದ್ದುದು, ನನ್ನಲ್ಲಿ ಏಕೋ ಅಸಂತೋಷವನ್ನು ಹುಟ್ಟಿಸಿತು. ಅದರಲ್ಲಿಯೂ ಈ ಸಲ ಹಡೆದು ಎದ್ದು ಅತ್ಯಂತ ಸೊರಗಿದಾಗ, ಅವಳ ಮೇಲೆ ರೇಗಾಡಿದೆ.

"ನೀ ಇದರಿಂದನs ಸಾಯಬೇ ದಿ. ತಿಳಿದಹಾಗಾಯಿತು! ನೋಡಬಾರದs, ಎಷ್ಟು ಸೊರಗೀದಿ. ಔಷಧ ಸಿಗತಾವ..... ಔಷಧ.... ಬಂದಾಗಲಿಕ್ಕೆ! ತೊಗೊಂಡುಬಿಡು" ಎಂದೆ.

ತಾಯಿ, ದೇವರಿಂದ ಮಕ್ಕಳೆದುರು ಮಾನಗೇಡಿಯಾಗಿದ್ದಳು. ಅಪಮಾನಿತಳಾಗಿದ್ದಳು. ಔಷಧದ ಮಾತು ಅವಳಲ್ಲಿ ಎಂತಹ ಭಾವನೆಯನ್ನು ತಂದಿತ್ತೊ! ಅವಳ ಮನದಲ್ಲಿ ಕೋಲಾಹಲವೆದ್ದುದು ಮಾತ್ರ ಊಹಿಸುವಂತಿದ್ದಿತು. ಆದರೆ ಏನೂ ಆಡಲಿಲ್ಲ.

ಆವರದು ನನ್ನ ಮನಸ್ಸಿಗೆ ನಾಟಲು, ಮಾತಿನ ರೀತಿ ಬದಲಾಯಿಸಿದ್ದೆ. "ನೋಡು, ನೀನಿನ್ನೂ ಸೊಸೆ-ಮೊಮ್ಮಕ್ಕಳನ್ನು ಕಾಣುವಾಕೆ. ತೀರ್ಥ-ಯಾತ್ರೆ, ವ್ರತ-ನಿಯಮಾದಿಗಳನ್ನು

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:-

M's. Pranlal and Sons
Chemists, Druggists
Station Road. HUBLI

(H. O. Bangalore City)

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಚ್ಚಾಗಿವೆ)

ಬೆಲೆ ಪಕ್ಕ ಶಾಯಿ ಮಾತ್ರ

ಪ್ರಪಂಚಸಾಹಿತ್ಯವನ್ನು ಭಾಷಾಂತರವಾಗಿ, ಎಲ್ಲೆಲ್ಲಿಯೂ ಮುನ್ನಡೆ ಪಡೆದ ಪ್ರಾರಂಭವೆಂದು ಕಾದಂಬರಿ. ಕೆಲಸೇ ಪ್ರತಿಗಳಿಗೆ ೧೦ ರೂ. M. O. ಕಳಿಸಿ, ಈ ವೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಚಾದಂಬರಿಗಳು

ದೇವದಾಸ (ಅಂಜನೆಚ್ಚ ಸೇರಿ)		೧—೧೨—೦
ನಿಜಯುಗ	,,	೧—೧೨—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಜೋಡಶಿ	,,	೨— ೬—೦
ಚಿತ್ರ	,,	೧— ೦—೦

(ಪ್ರೇಮಪಥ, ಹೇಮಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಮಹಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಪುಸ್ತಕಗಳಿವೆ. ಬೇಕಾದವರು ಬರೆಯಿರಿ. ಕ್ಯಾಟಲಾಗ ಬರಿಸಿ:—

ಸಮಾಜ ಪುಸ್ತಕಾಲಯ, ಧಾರವಾಡ.

ಮಾತುವುದಿದೆ. ನೀನು ಗಟ್ಟಿಮುಟ್ಟಯಾಗಿರಬೇಡವೆ? ನಾನು ಸುಖದಿಂದಿರುವುದನ್ನು ನೀನು ನೋಡಬೇಡವೆ?"

ಈ ಮಾತಿಗೆ ಎಷ್ಟು ಬೇಗ ಆಕೆ ಕರಗಿಹೋಗಿದ್ದಳು! "ಏನು ಮಾಡಲೆಸಾ. ನನಗೂ ಸಾಕಾಗಿ ಹೋಗಿದೆ ನನಗಿಂತ ಒಂದು ವರ್ಷ ಚಿಕ್ಕವಳಿರುವ ವೆಂಕಕ್ಕ (ನನ್ನ ಸೋದರತ್ತೆ), ತಿರುಗಿ ಬುಷಿಪಂಚಮಿಗೆ 'ಉದ್ಯಾಪನೆ' ಮಾಡಿಸುವವರು ಇದ್ದಾರೆ. ನಾ ಪಾಪಗೇ ಕೂಡೇನಿ....ಮತ್ತೇನಿಲ್ಲೊ. ಈ ನನ್ನ ಹಡಿಯೋಣದರಿಂದ, ಅಕ್ಕಮ್ಮನ ಜೊಚ್ಚಲು ಬಾಣಂತಿತನಾ ನಾ ಮಾಡಲಿಕ್ಕಾಗಲಿಲ್ಲ. ತಾಯಿಯಿಲ್ಲದವರ್ಹಾಂಗ ಅತ್ತೆಯ ಮನೆಯಲ್ಲೇ ಮಾಡಿಸಿ ಕೊಳ್ಳಬೇಕಾಯಿತು" ಎಂದಳು. ಹೇಳು-ಹೇಳುತ್ತಲೇ ಅವಳಿಗೆ ಅಳುಬಂದಂತೆ, ಕಣ್ಣಂಚಿನಲ್ಲಿ ನೀರಾಡುತ್ತಿತ್ತು.

ಅಸೊಂದು ಕಹಿಗಳಿಗೆಯನ್ನು ಬಿಟ್ಟರೆ, ಊರಲ್ಲಿ ನಾನು ಸುಖವಾಗಿಯೇ ಇದ್ದೆ. ತಾಯಿ ಹಾಗೂ ಹೊಸ ಮಗುವಿನ ಆರೈಕೆ ಮಾಡುತ್ತಿದ್ದೆ. ಸಂಜೆಯ ವೇಳೆಯಲ್ಲಿ, ಜಗುಲಿಯ ಮೇಲೆ ಕುಳಿತಾಗ, ಮುಂದಿನ ನನ್ನ ಭವಿಷ್ಯಜೀವನದ ರಮ್ಯಚಿತ್ರವನ್ನು ರೂಪಿಸುತ್ತಿದ್ದೆ. ನೀರಿಗೆ ಹೊರಟಿದ್ದ ಯಾರಾದರೂ ಹೆಣ್ಣು ಮಕ್ಕಳು ನಿಂತು, 'ಅಪ್ಪಾಅವರು ದೊಡ್ಡವರಾಗ್ಯಾರು, ಹೋಳಿಗಿ ಯಾವಾಗ ಹಾಕತೀರಿ?' ಎಂದು ಕೇಳಿಹೋದರೆಂದರೆ, "ನಿನಗೆಂಥ ಸೀಸಿ ಬೇಕು?" ಎಂದು ಕೇಳುತ್ತಿದ್ದೆ. ಅದಕ್ಕೆ ತಾಯಿ:

"ನೀನು ಕಲಿತವ. ನಿನ್ನ ಮನಸ್ಸಿಗೆ ಎಂಥಾದು ಒಪ್ಪಿಯೆನಿಸತದೋ ಅದೇ ನನಗೂ! ಇಷ್ಟೇ, ನಾ ಸತ್ತ ಮೇ ನಿನಗ ಯಾವ ತ್ರಾಸನೂ ಇಲ್ಲದ ಹಾಗೆ ನೋಡಿಕೊಂಡು ಹೋ ಬೇಕು. ಮತ್ತ ನಮ್ಮ ಜಾತಿಯೊಳಗಿಂದೇ ಇರಬೇಕು" ಎಂದಳ್ ಮಾತನ್ನು ಹಾಗೆಯೇ ಬೆಳಿಸಿ, "ನಿನಗ ಮಗನ ಮೇಲೆ ಪ್ರೀತಿಯೆ ಸೊಮ್ಮಗನ ಮೇಲೆ ಹೆಚ್ಚು ಪ್ರೀತಿಯೊ?" ಎಂದು ಕೇಳಿದ ಮಾತಿನಲ್ಲಿ ನಮ್ಮ ತಾಯಿ ಅಷ್ಟು ಜಾಣೆಯಲ್ಲ, "ನನಗೆ ಎರಡ ಅಷ್ಟೆ" ಎಂದು ಮಾತು ಮುಗಿಸಿದ್ದಳು.

ಆದರೆ ಅವಳಿಗೆ ಯಾವ ಭಾಗ್ಯವನ್ನೂ ಕಾಣುವುದಾಗಲಿಲ್ಲ. ಮತ್ತು ನನ್ನ ಕೆಟ್ಟ ಬಾಯಿ ಆಡಿದ ಹಾಗೇ ಆಯಿತು. ಅವಳು ಮತ್ತೆ ಗರ್ಭಿಣಿಯಿರುವಾಗ, ಲಿವ್ಹರ್ ಬೇನೆಯಿಂದ ಮುಂಗಡಿ ಕೂಸು ತೀರಿಕೊಂಡಿತ್ತು. ಅನೇಲೆ ಹುಟ್ಟಿದ ಗಂಡುಮಗು, ಅವಳ ಕೊನೆಯ ಸಂತಾನನಾಗಿ, ಅವಳನ್ನೆ ಅಹುತಿ ತೆಗೆದು ಕೊಂಡು, ತಾನು ಬದುಕಿತು. ನಮ್ಮ ಮನೆತನದ ಆ ವರ್ಷನ ಬಲುಕೆಟ್ಟ ವರುಷವೆನ್ನ ಬಹುದು. ಸಾಯುವ ಗಳಿಗೆಯಲ್ಲಿ "ಮಕ್ಕಳನ್ನು ಬಿಟ್ಟರೆ, ಇನ್ನೇನು ಸುಖ ಸುರಕೊಂಡಿ?" ಎಂದು, ಅವಳ ತಲೆಯನ್ನು ತೊಡೆಯಮೇಲಿರಿಸಿಕೊಂಡು ತಂದೆ ಕಣ್ಣೀರು ಕರೆದಾಗ, "ಇಲ್ಲ ಇಲ್ಲ, ಎಲ್ಲವನ್ನೂ ಕಂಡೆ. ನಿಮ್ಮ ಮುಂದೆ ಹೋಗಿ ನಾ ಪುಣ್ಯ ಮಾಡಿದೆ. ಈ ಕೂಸಿನ್ನ ಅಷ್ಟು ಹೆಂಗರೆ ಜೋಸಾನ ಮಾಡಿರಿ! ಮತ್ತ ಅವನ್ನ ಒಮ್ಮೆ ನೋಡಬೇಕನಿಸೇದ" ಎಂದಳಂತೆ. ಆ ಮುಂಜೆಯೇ ನನಗೆ ತಂತಿ ಕೊಟ್ಟಿದ್ದಿತ್ತು. ಹೊತ್ತಿಗೆ ಮುಟ್ಟಲಿಲ್ಲ. ದಹನಕಾರ್ಯದಲ್ಲಿ ಕೂಡಾ ನಾನಿರಲಿಲ್ಲ.

ಅವಳು ತನ್ನ ಜೀವನದಲ್ಲಿ ಏನನ್ನೂ ಕಾಣಲಿಲ್ಲ. ಮಕ್ಕಳನ್ನು ಮಾತ್ರ ಕಂಡಳು! ಈ ಮಾತು ಎಷ್ಟು ನಿಜ!

* * * *

ಈ ಮಧ್ಯದ ಪೂರ್ಣ ಮೂರುವರುಷ ಮಾತ್ರ ನಮ್ಮ ಮನೆಯಲ್ಲಿ ಎಳಮಕ್ಕಳ ಅಳು-ನಗು ಇರಲಿಲ್ಲ. ಆರು ದಿನದ ಆ ಮಗುವನ್ನೂ ನಮ್ಮ ಓಕ್ಲಲಿನವಳಿಗೆ ಪೋಷಣೆಗೆ ಕೊಟ್ಟಿದ್ದೆವು. ಶಿಕ್ಷಣ ಮುಗಿದ ಮೇಲೆ, ನನಗೆ ದೊಡ್ಡ ಸಂಬಳದ ಕೆಲಸ ದೊರೆಯಿತು. ಹಳ್ಳಿಯ ಮನೆಯನ್ನು ಬಿಟ್ಟು, ಪಟ್ಟಣದಲ್ಲಿ ಬಂದಿದ್ದು, ರೈತರಿಗೆ ಎಲ್ಲ ದನಗಳನ್ನು ಒಪ್ಪಿಸಿದ್ದರಿಂದ, ಕೊಟ್ಟಿಗೆಯಲ್ಲಿಯೂ ಈಗ ಏನೂ ಇರಲಿಲ್ಲ.

ನಾನು ಮದುವೆಯಾಗುವ ಮುನ್ನ ನಾಲ್ಕು ಜನ ತಮ್ಮಂದಿರು, ಇಬ್ಬರು ತಂಗಿಯದಿರು, ಮುದುಕ ತಂದೆ—ಇಷ್ಟು ಜನರ ಸಂಸಾರಭಾರ ನನ್ನ ಮೇಲಿತ್ತು. ನನ್ನ ತಂದೆಯವರಿಗೆ ವೈರಾಗ್ಯ ಬಂದಂತಾಗಿತ್ತು. ತಮ್ಮ ಮಟ್ಟಿಗೆ ಧಾರ್ಮಿಕ ವಿಧಿನಿಯಮಪಾರಾಯಣಗಳನ್ನು ಬಿಟ್ಟರೆ, ಇನ್ನಾವುದರಲ್ಲಿ ಆಸಕ್ತಿ ತೋರಿಸುತ್ತಿರಲಿಲ್ಲ. ಅವರ ವಯಸ್ಕರು ಕೇಳಿದಾಗ, "ಪ್ರಬುದ್ಧ ಹಾಗು ಕಲಿತ ಮಗ ಇರುವಾಗ ನನಗೆ ಯಾತರ ಚಿಂತೆ?" ಎನ್ನುತ್ತಿದ್ದರು.

ಪನಗಾದರೂ 'ಇಷ್ಟು ದೊಡ್ಡ ಸಂಸಾರ ಹೇಗೆ ಹೊರಲಿ? ಇವರು ನಿಶ್ಚಿಂತೆಯಿಂದ ಮಕ್ಕಳನ್ನು ಹೆತ್ತು ನನ್ನ ಬೆನ್ನಿಗೆ ಕಟ್ಟಿ ಹೋದರು. ಇನ್ನು ಎಲ್ಲರೂ ಬದುಕಿದ್ದರಂತೂ ಮುಗಿದೇ ಹೋಗುತ್ತಿತ್ತು!'— ಎಂದೆನಿಸಿ. ದಿನಕ್ಕೊಮ್ಮೆಯಾದರೂ ಬೇಸರ ತೆಗೆದುಕೊಳ್ಳುತ್ತಿದ್ದೆ. ಆವರೆ ಆರ್ಥಿಕಸಮಸ್ಯೆ ಇರದ್ದರಿಂದ, ಯಾವುದೂ ಅಷ್ಟು ಎನಿಸಲಿಲ್ಲ.

ಮಡದಿ ಒಂದು ದಿನ ಮನೆಗೆ ಕಾಲಿರಿಸಿದಳು. ಪುಣೆಯಲ್ಲಿದ್ದ ನಿರಂತರ ಹೆಣ್ಣು ಬಣ್ಣದ ಬೀಸಣಿಕೆಯಾಗಿ ಬಂದುದು, ತಂದೆಗೆ ಕಷ್ಟ ಪ್ರಶಸ್ತವೆನಿಸಲಿಲ್ಲ. ನಮ್ಮಲ್ಲಿಯ ದೊಡ್ಡ ಸಂಸಾರ ಕಂಡು, ಕನ್ನಡಿತಿಯಾದರೂ ಅವಳ ತಾಯಿ ಕೊಡಲೊಪ್ಪಿರಲಿಲ್ಲವಂತೆ ಆದರೆ ಅವಳ ತಂದೆ ನುರಿತ ವ್ಯವಹಾರಿಕರು. ಅವರ ದೃಷ್ಟಿಯಲ್ಲಿ ನಾನೊಬ್ಬ 'ಭವ್ಯಭವಿಷ್ಯತ್ತಿನ ವ್ಯಕ್ತಿ' ಎಂದು ಕಂಡು ಬಂದು, ಈ ಮದುವೆ ಹೆಮ್ಮಾಲಾಗಿತ್ತು.

ಮನೆಗೆ ಬಂದ ಮೂರನೆಯ ರಾತ್ರಿ, ಮೈಭಳಿಬಿಟ್ಟು ನನ್ನೊಡನೆ ಇವಳು 'ಮಾತನಾಡುವಂತಾದಾಗ, "ನಿಮ್ಮ ತಾಯಿ ಇಷ್ಟು ಮಕ್ಕಳನ್ನು ಹೇಗೆ ಹೆತ್ತರು?" ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಳು.

"ನಿನ್ನ ಹಾಗೆ, ತೆಳ್ಳಗೆ ಬಣ್ಣದ ಗೊಂಬೆಯಂತೆ ಆಕೆ ಇರಲಿಲ್ಲ" ಎಂದೆ.

"ಅವರ ಹಾಗೆ ನಾನೂ ಆದರೆ, ನನ್ನ ಅವಸ್ಥೆಯೇ ಮುಗಿದಂತೆ" ಎಂದಳು.

"ತಡೆ ತಡೆ, ಅತ್ತೆಗೊಂದು ಕಾಲವಾದರೆ, ಸೊಸೆಗೊಂದು ಕಾಲ!" ಎಂದಿದ್ದೆ.

"ಊಹು! ನನಗಾವತೆ ಒಂದು ಗಂಡು, ಒಂದು ಹೆಣ್ಣು, ಎರಡು ಸಾಕು!"

"ಏನಾದರೂ ಹೆಚ್ಚು-ಕಡಿಮೆಯಾದರೆ?"

"ಕೆಟ್ಟದ್ದು ಬಯಸುವುದೇನು ಛಂದ? ಆಯ್ತು, ಇನ್ನೊಂದು ಇನ್ನೊಂದು ಇರಲಿ. ಆದಕ್ಕೂ ಹೆಚ್ಚು ಏನಾದರೂ ನಾ ಒಲ್ಲೆ. ಬಹಳ ಮಕ್ಕಳಾದರೆ, ನನ್ನ ಕಡೆಯಲ್ಲೆಲ್ಲ ಔಷಧ ಕೊಡಿಸಿ ಬಿಡುತ್ತಾರೆ. ಅಂದ ಹಾಗೆ, ನಿನ್ನ ತಾಯಿಗೆ ಯಾಕೆ ಕೊಡಿಸಲಿಲ್ಲ ನೀವು? ಇಲ್ಲವಾದರೆ ಅವರು ಈಗ ಖಂಡಿತ ಬದುಕಿರಬಹುದಿತ್ತು!"

ಆಗ ಹಳೆಯ ಸಂಗತಿಯನ್ನೆಲ್ಲ ವಿವರಿಸಿ ಹೇಳಿದ್ದೆ.

ಮದುವೆಯಾದ ಎರಡನೆಯ ವರುಷವೇ ಈಕೆ ಒಂದು ಗಂಡು ಮಗುವನ್ನು ಹೆತ್ತಳು! "ಚೊಚ್ಚಲು ಗಂಡುಮಗುವಾದ ಸಂಭ್ರಮವನ್ನು ನೋಡಲು ತಾಯಿಯಿಲ್ಲವಲ್ಲ!" ಎಂದು ಅಂತಃಕರಣ ಮಿಡುಕಿತ್ತು. ಆದರಲ್ಲಿಯೂ ನನ್ನವಳ ಬಾಣಂತಿತನದ ನಿಷ್ಟ ವೈಭವವನ್ನು ಕಂಡಾಗ, ನನ್ನ ತಾಯಿಯ ಬಾಣಂತಿತನದ ಜುಟುಕು ಹಾಗೂ ಸಾದಾತನ ಕಣ್ಣಿಗೆ ಕಟ್ಟಿದಂತಾಗುತ್ತಿತ್ತು.

ಈವಾಗ, ಲಲಿತೆ ಗಂಡನ ಮನೆ ಕಂಡಳು. ತಾಯಿ ತೀರಿಕೊಂಡಾಗ ಬಂದು ಹೋಗಿದ್ದ ಅಕ್ಕಮ್ಮ, ತನ್ನ ಮೂರನೆಯ ಮಗುವನ್ನು ಬಗಲಲ್ಲಿರಿಸಿಕೊಂಡು ತವರುಮನೆಗೆ ಬಂದು ಹೋಗಿದ್ದಳು.

ಆದರೆ ನನ್ನವಳೂ ಎಲ್ಲಿ ತನ್ನ ಅತ್ತೆಯ ಮಾರ್ಗವನ್ನೇ ಹಿಡಿಯುವಳೋ ಎಂದು ನೆನೆದುಕೊಂಡಿರುವಾಗ, ಮತ್ತೆ ಗಂಡು-ಕೂಸೊಂದು ಹುಟ್ಟಿತು. ಆಗ ಹಿರಿಯವನಾದ ಶಶಿಕಾಂತನಿಗೆ ಒಂಬೂವರೆ ವರ್ಷ ಮಾತ್ರ.

ಹಡೆದ ಸುದ್ದಿಯನ್ನು ಮನೆಗೆ ಬಂದು ತಿಳಿಸಿದಾಗ, ತಂದೆ ಏನೂ ಆಡಲಿಲ್ಲ ಒಂದು ವಿಶಿಷ್ಟ ನಗುವಿನಲ್ಲಿ 'ಹೀಂಗಽ. ನೆಟ್ಟಗಾಯಿತು' ಎಂದರು. ಆ ನಗೆಯ ಹಿಂದೆ ಕೊಂಕು ಇತ್ತೆಂದೇ ನನ್ನ ಭಾವನೆ.

ಆ ಮುಂದೆ ಅವರು ಬಹಳ ದಿನ ಬದುಕಿರಲಿಲ್ಲ. ನನ್ನ ತಮ್ಮ ಶ್ಯಾಮನ ಮದುವೆ ಮಾಡಿಯಾದ ಒಂದು ವಾರವಲ್ಲೇ, ಅವರು ತೀರಿಕೊಂಡರು. ಸಾಲವನ್ನಕ್ಕೆ ಶ್ಯಾಮನ ಹೆಂಡತಿಗೂ, ನಮ್ಮವಳಿಗೂ ಮನೆಯಲ್ಲಿ ರಸಕಸಿ ಇದ್ದೇ ಇತ್ತು. ಒಮ್ಮೆ ಹೊತ್ತಿದ ಕಿಡಿ ಎರಡು ಬೇರೆ ಒಲೆಗಳನ್ನೇ ಹೂಡುವಂತೆ ಮಾಡಿತು. ಶ್ಯಾಮನು ಬೇರೆಯಾಗಿ ಇರತೊಡಗಿದ ಅಂದೇ ನಾನು ನಿರ್ಧರಿಸಿದೆ:— ಉಳಿದ ತಮ್ಮಂದಿರಿಗೂ— ಶಿಕ್ಷಣ ಮುಗಿಸಿ ಗಳಿಸುವಂತಾದೊಡನೆಯೇ— ಬೇಗ ಮದುವೆ ಮಾಡಿಕೊಟ್ಟು, ಬೇರೆ ಇರಲು ತಾವಾಗಿಯೇ ತಿಳಿಸುವುದು.... ಎಂದು.

ಗರ್ಭ ನಿರೋಧದ ಸಾಧನಗಳು

ಗಂಡಸರ ನಿರ್ಮಜೀಲ ಬಹಳ ತಾಳಿಕೆಯುಳ್ಳದ್ದು	೧ ಕ್ಕೆ	೧-೪-೦
,, ,, ಸಾಧಾರಣ ,,	೧ ಕ್ಕೆ	೧-೦-೦
,, ,, ಸಾದಾ ,,	೧ಕ್ಕೆ	೦-೪-೦
,, ಮಣಿ ಕಂಚುಕ ,,	೧ಕ್ಕೆ	೦-೪-೦
ಪುರುಷೇಂದ್ರಿಯ ಬೆಳೆಯಿಸುವ, ಉದ್ರೇಕಿಸುವ ವ್ಹಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ	೧ಕ್ಕೆ	೨೫-೦-೦
ಬೀಜಾಂತಕ ತೈಲ	ಬಾ. ೧ ಕ್ಕೆ	೧-೦-೦
ಹೆಂಗಸರಿಗೆ ಜೆಕ್ಕಪೆಸರಿ ನಂ. ೧		೧-೪-೦
,, ,, ನಂ. ೨		೧-೪-೦
,, ,, ನಂ ೩		೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ		೧೨-೦-೦

ಬೆಲೆಯನ್ನೂ ಅಂಚೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಷ ಬೀದಿ, ಧಾರವಾಡ

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಿ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವುದು.

ವರ್ಮಿನೋಲ್ (ಜಂತುನಾಶಿನಿ)— ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ವೀರಸ್ವ : ನಿರ್ಜಾನಕರ ಮತ್ತು ಕಂಪನಿ

ಮೂರನೆಯದಾದ ಹೆಣ್ಣು ಮಗುವಿನ ಜನನ, ನಾಲ್ಕು ವರುಷಗಳ ವರೆಗೆ ಮುಂದೆ ನೋದಾಗ 'ನಮ್ಮ ತಂದೆ ಬದುಕಿ ಇರಬೇಕಿತ್ತು' ಎನಿಸಿತು !

ಹಡೆದು ಎದ್ದ ಮೇಲೆ ನಮ್ಮವಳ ಆರೋಗ್ಯ ಸರಿಯಾಗಿ ಉಳಿಯಲಿಲ್ಲ. ತವರುಮನೆಯಲ್ಲೇ ಒಂದು ವರುಷ ಪೂರ್ಣ ಆಕೆ ವಿಶ್ರಾಂತಿಗಾಗಿ ಇರಬೇಕಾಯಿತು. ಹಿರಿಯ ಮಗ ನನ್ನ ಬಳಿಯಲ್ಲಿದ್ದ. ಪುಣೆಗೆ ೧೫-೨೦ ದಿನಕ್ಕೊಮ್ಮೆ ಹೋಗಿಬರುತ್ತಿದ್ದೆ.

ಜೀವನವೆಂಬ ಅಲ್ಪ ಸ್ವಲ್ಪ ಏರು-ಇಳಿವುಗಳ ಮೇಲೆ ಹೀಗೆಯೇ ಸಾಗಿತ್ತು.....

ಪುನಃ ಅವಳು ಗರ್ಭಿಣಿ

ಈ ಸಲದ ಬಸಿರ ದಿನಗಳಲ್ಲಿ ತುಂಬ ಕಷ್ಟಪಡಬೇಕಾಯಿತು. ಟೊಂಕಸೂಲಿ, ಜ್ವರ ಬಿಟ್ಟಗಲಿಲ್ಲ. ಒಂದು ಸಣ್ಣ ಜಡ್ಡಾದರೂ ಇವಳಿಗೆ ನರಳಿಕೆ ಬಹಳ. ಒಮ್ಮೊಮ್ಮೆ ಸೂಲಿ ಹೆಚ್ಚಾದಾಗ "ನಾ ಇದರಿಂದೇ ಸಾಯತೇನಿ" ಎಂದುಬಿಡುತ್ತಿದ್ದಳು.

ಒಂದು ಇಡೀ ರಾತ್ರಿಯನ್ನು ಘೋರವಾಗಿ ಕಳೆದ ಮೇಲೆ, ಶಸ್ತ್ರಚಿಕಿತ್ಸೆಯಾಗಿ ಶಿಶು ಹೊರಗೆ ಬಂತು. ಮಗು ತೀರಿಕೊಂಡಿರಬೇಕೆಂದೇ ಡಾಕ್ಟರರು ಎಣಿಸಿದ್ದರು. ಹಾಗೇನಾಗಿರಲಿಲ್ಲ.

ನನ್ನ ತಾಯಿ ಗಟ್ಟಿಮುಟ್ಟಾದರೂ ಇದ್ದಳು ಹಡೆದೆದ್ದ ಮೇಲೆ ಬೇಗ ಸುಧಾರಿಸಿಕೊಳ್ಳುವ ದೈಹಿಕಚೈತನ್ಯವೂ ಇವಳಿಗೆ ಇರಲಿಲ್ಲ

ಈವಾಗಲೇ ಈಕೆಗೆ ಗರ್ಭನಿರೋಧ ಮಾಡಿಸಬೇಕೆಂಬ ವಿಚಾರ ನನಗೆ ಕಟಿಯುತ್ತಿದ್ದುದು ಔಷಧ ಕೊಡಿಸಿಬಿಡುವ ಎಂದು ಒಮ್ಮೊಮ್ಮೆ ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತಿದ್ದೆ ಆದರೂ ಯಾವುದೋ ಒಂದು ಯೋಚನೆ ಹಿಂದೆಳೆಯುತ್ತಿತ್ತು ಮನಸ್ಸಿಗೂ ಆ ಕೆಲಸ ಪ್ರಶಸ್ತವೆನಿಸುತ್ತಿರಲಿಲ್ಲ. ಅಂತೆಯೆ ಅವಳೆದುರು ಈ ವಿಷಯ ಆಡಲೂ ಇಲ್ಲ.

ಸಾಧ್ಯವಿದ್ದ ಮಟ್ಟಿಗೆ, ರಾತ್ರಿ ಹೆಂಡತಿಯ ಬಳಿ ಇರಬಾರದೆಂದು ನಿರ್ಧರಿಸಿಕೊಂಡಿದ್ದೆ. ನಿತ್ರಾಣವಾಗಿದ್ದ ಮಗುವಿನ ಆರೈಕೆಯೂ ರಾತ್ರಿಯಲ್ಲಿ ನನ್ನ ಪಾಲಿಗೆ ಬೀಳುತ್ತಿದ್ದು, ಈ ನಿರ್ಧಾರವನ್ನ ಪಾಲಿಸುವುದು ತುಸು ಶಕ್ಯವಾಗಿತ್ತು.

ಊಂಹು! ಮತ್ತೆ ಪ್ರಸಂಗ ಕೈವಿಾರಿತ್ತು. ದೇವರು ಮರು ವರ್ಷ ಮತ್ತೊಂದು (ಐದನೆಯದು) ಸಂತಾನವನ್ನು ದಯೆ ಪಾಲಿಸಿದ್ದ.

ಈ ಸಲ ಮಾತ್ರ ಅವಳು, ಮೂರು ನಾಲ್ಕು ತಿಂಗಳನ್ನ ಆರೋಗ್ಯವಾಗಿಯೆ ಇದ್ದಳು. 'ಇದೊಂದು ದಾಟಬಿಡಲಿ ! ಮುಂದಿನ ಸಲ ನಿಲ್ಲಿಸಿ ಬಿಡುವ' ಎಂದು ಹೇಳಿಕೊಂಡು, ಅವಳ ಆರೈಕೆಗೆ ಹೆಚ್ಚು ಗಮನ ಕೊಟ್ಟೆ. ಈಚೀಚೆಗೆ ಅವಳೊಟ್ಟಿಗೆ ಆತ್ಮೀಯ ಮಾತುಗಳೂ ಕಡಿಮೆಯಾಗಿದ್ದುವು. ಆ ದಿನದ ಆರೋಗ್ಯ, ಔಷಧದ ಮಾತೇ. ಮನೆಯಲ್ಲಿ ಎಲ್ಲಿ ನೋಡಿದರೂ ಔಷಧದ ಸೀಸೆಗಳೇ ಕಾಣುವಂತಾಗಿದ್ದಿತು.

ಆಗ ತವರುಮನೆಗೆ ಹೋಗುವ ಆಪೇಕ್ಷೆ ತೋರಿಸಿದ್ದರಿಂದ ಕಳಿಸಿಯೂ ಕೊಟ್ಟೆ. ಅಲ್ಲಿಂದ, ಕ್ಷೇಮವೆಂಬ ಕಾಗದ ಪ್ರತಿವಾರವೂ ಬರುತ್ತಿತ್ತು. ಆದರೊಮ್ಮೆ 'ತೀವ್ರ ಬರಬೇಕು' ಎಂಬ ತಂತಿ ಬಂದಾಗ, ಹಿರಿಯ ಎರಡೂ ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಧಾವಿಸಿದ್ದೆ.

ಆರನೆಯ ತಿಂಗಳಲ್ಲಿ ಗರ್ಭಪಾತವಾಗಿತ್ತು.

ಪ್ರಯತ್ನಪೂರ್ವಕವಾಗಿ ಆದುದು—ಎಂದು ಡಾಕ್ಟರರು ಹೇಳಿದಾಗ ನನಗೆ ಕಳವಳವಾಯಿತು. ಅವಳನ್ನು ಕೇಳಿದಾಗ, 'ಗೊತ್ತಿಲ್ಲ' ಎಂದು ಹಾರಿಸಿಕೊಂಡಳು.

ಮತ್ತೆ ಊರಿಗೆ ಕರೆಯಿಸಿಕೊಂಡೆ. ಟಾನಿಕ್ಕುಗಳ ಸೇವನೆ ನಡೆದೇ ಇತ್ತು. ಮನಸ್ಸು ಒಂದಿಲ್ಲೊಂದು ರೀತಿಯಿಂದ ರೋಸಿಕೊಂಡು, ಕೊನೆಗೆ ಮುಂಬಯಿಗೆ ಕರೆದೊಯ್ದು, ಶಸ್ತ್ರ-ಚಿಕಿತ್ಸೆ ಮಾಡಿಸಿಬಿಟ್ಟೆ. ಆದರ ಬಗ್ಗೆ ನಾನು ಆಡಿದುದು ಒಂದೇ ಸಲ. ಆ ಮಾತಿಗೆ ರಗಳೆಯಿಲ್ಲದೆ ಒಪ್ಪಿಕೊಂಡಿದ್ದಳು.

ಏನೇ ಆಗಲಿ. ಇನ್ನು ಅವಳು ಮಕ್ಕಳನ್ನು ಹೆರುವಂತಿರಲಿಲ್ಲ.

ತಿಂಗಳುಗಳು ಉರುಳುತ್ತಿರುವಾಗ, ಅವಳು ಮೈಕೈಯಿಂದ ಕೃಶೀಣ ತುಂಬಿಕೊಳ್ಳುತ್ತಿದ್ದಳು. ಆದರೆ ಮುಖದಲ್ಲಿ ಎಂಥದೋ ವೇದನೆಯ ಕಳೆ. ಪ್ರತಿ ತಿಂಗಳು ತಪ್ಪದೇ ಜ್ವರ ಬರುತ್ತಿತ್ತು. ೨-೩ ದಿನದಲ್ಲೇ ವಾಸಿಯಾಗುತ್ತಿದ್ದರೂ, ಆದನ್ನೊಮ್ಮೆ ಪೂರ್ಣ ನಿಲ್ಲಿಸ ಬೇಕೆಂದು, ಮುಂಬಯಿಯ ಡಾಕ್ಟರರಲ್ಲಿಗೇ ಮತ್ತೆ ಕರೆದೊಯ್ದೆ. ಹಿಂದೆ ಆದ ಶಸ್ತ್ರಚಿಕಿತ್ಸೆಯ ಅವಶೇಷದ ಪರಿಣಾಮವೆಂದು ತಿಳಿಯಬಂತು.

ನಿಸರ್ಗನಿಯಮವ ವಿರುದ್ಧ ನಾವು ಹೋರಾಡಿದಾಗ, ಅದು ಹೆಚ್ಚೇಟು ಕೊಟ್ಟಿತ್ತು.

ಏನಾದರೇನು? ತೋರಿಕೆಗೆ ಸಂಸಾರ ಸುಗಮವಾಗಿಯೆ ಸಾಗಿತ್ತು. ಮನೆತುಂಬ ಆಳು. ಕೈತುಂಬ ಸಂಬಳ. ಮತ್ತೆ ಮುಂಗಡಿ ಕೂಸು ಕ್ರಮೇಣ ಚೇತನಗೊಳ್ಳುತಲಿತ್ತು. ಹೆಂಡತಿಯ ಜಡ್ಡೂ ಗುಣವಾಗಿದ್ದಿತು.

ಮನೆಯಲ್ಲಿ ಮೂರು ದೊಡ್ಡ ಮಕ್ಕಳು. ಶಶಿಕಾಂತನು, ಎರಡನೆಯ ವರ್ಷ ಮೆಟ್ರಿಕ್ ಅಭ್ಯಾಸ ಮಾಡುತ್ತಿದ್ದ. ನಡುವಿನವ ಮಧು, ಅವನಿಗಿಂತ ಒಂದು ವರ್ಗ ಹಿಂದೆ. ಸರೋಜೆಯೂ ಶಾಲೆಗೆ ಹೋಗುತ್ತಿದ್ದಳು. ಮನಸ್ಸಿಗೆ ಆಗುತ್ತಿದ್ದ ನೋವೆಂದರೆ, ಶಶಿಕಾಂತನ ಏಷಾರಾಮಿ ನಡತೆ. ಓದು ಎಂದರೆ ಅವಂಗೆ ಬೇಸರು. ಪೋಲಿಯಾಗಿ ಅಲೆಯುವ ಅವನನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅಸಾಧ್ಯವಾಯಿತು. ಮತ್ತೆ ಈ ವರ್ಷವೂ ನಪಾಸಾಗಿ, ಕಾಲೇಜಿನ ಕಟ್ಟೆಯನ್ನೇ ಹತ್ತದೆ ಎಲ್ಲಿ ಉಳಿಯುವನೊ— ಎಂದು ಅನಿಸುತ್ತಿತ್ತು. ಆದರೆ ಮಧು ತದ್ವಿರುದ್ಧವಾಗಿದ್ದ. ಅವನ ಅಭ್ಯಾಸೀ ವೃತ್ತಿ, ಸೌಮ್ಯಗುಣ, ಒಳ್ಳೆಯ ನಡತೆ ಇವನ್ನು ಕಂಡು, ನನ್ನೆಲ್ಲ ಆಶೆ ಅವನಲ್ಲಿ ನೆಲೆಗೊಂಡಿತ್ತು. ಸರೋಜಳು ಕೂಡ ತನ್ನ ನಾಲ್ಕನೆಯ ಈಯತ್ತೆಯಲ್ಲಿ ಜಾಣೆಯೆನಿಸಿಕೊಂಡಿದ್ದಳು.

ಮರುವರ್ಷ ಅಣ್ಣ-ತಮ್ಮಂದಿರಿಬ್ಬರೂ ಒಟ್ಟಿಗೆ ಪರೀಕ್ಷೆ ಮುಗಿಸಿಕೊಂಡು ಬಂದಾಗ, ಮಧುವಿಗೆ ೪ ದಿನದ ಕಟ್ಟಿನ ಜ್ವರ ಪ್ರಾರಂಭವಾಯಿತು. ನಾವಿನ ವಿರುದ್ಧ ಸಂತತ ಹೋರಾಟ ವೆಂಬಂತೆ, ನಾವಿಬ್ಬರೂ ಹಗಲು ರಾತ್ರಿ ಶುಶ್ರೂಷೆ ಮಾಡಿದೆವು. ಅವಳಂತೂ ಬಹಳ ಮನಸ್ಸಿಗೆ ಹಚ್ಚಿಕೊಂಡಿದ್ದಳು.

ಅಂತಹ ಮುತ್ತಿನಂತಹ ಮಗ ನಮ್ಮ ಪಾಲಿಗೆ ಉಳಿಯಲಿಲ್ಲ. ಕೊಟ್ಟು ಕಸಿದುಕೊಳ್ಳುವ ದೇವರ ವಿಷಯದಲ್ಲಿ ಗಂಗಮ್ಮನ ಮಾತು ನೆನಪಾಗುತ್ತಿತ್ತು. ಆದರೆ ಬೆಳೆದ ಮಗ, ಕೈಗೆ ಬಂದೂ ಕಸಿದುಕೊಳ್ಳಲ್ಪಟ್ಟಿದ್ದು, ಅವಳಿಗೆ ಅತೀವ ಆಘಾತವನ್ನುಂಟು ಮಾಡಿತು. ಅಲ್ಲದೆ ದೇವರು ಇವನ್ನೂ ಕಸಿದುಕೊಂಡರೆ ಹೇಗೆ?— ಎಂಬ ಅಜ್ಞಾತ ಹಾಗು ಪ್ರತಿನಿತ್ಯದ ಭಯದಲ್ಲಿ, ಆಕೆಯ ತಾಯ್ತನದ ಆಸ್ಥೆ ಅತಿರೇಕಕ್ಕೆ ಹೋಯಿತು. ಎಷ್ಟೆಂದರೆ, ಬೆಳೆದ ಮಕ್ಕಳಾದರೂ, ಉಳಿದ ಮೂರು ಹುಡುಗರಿಗೆ ಸ್ವಲ್ಪ ಕೂಡ ಹೆಚ್ಚು-ಕಡಿಮೆಯಾಗಬಾರದು. ಎಂತಹ ಬೇಸಗೆಯಿರಲಿ, ಸಂಜೆಗೆ ಎಲ್ಲರೂ ಉಣ್ಣೆಯ ಬಟ್ಟೆಗಳನ್ನೇ ಹಾಕಿಕೊಂಡಿರಬೇಕು. ಪೆನ್ಸಿಲ್ಲು ಕೆತ್ತ ಹೋಗಿ, ಚಾಕುವಿನಿಂದ ಸರೋಜಳ ಕೈಗೆ ತುಸು ರಕ್ತ ಬಂದರೆ, ಡಾಕ್ಟರೇ ಬರಬೇಕು— ಎನ್ನುವ ಹಟದ ವೃತ್ತಿ ಬೆಳೆಯಿತು. ವಿಶೇಷ ಟ್ಯೂಶನ್ನಿನಿಂದ ಶಶಿಕಾಂತನು ಳನೆಯ ವರುಷ ಪಾಸಾಗಿದ್ದರಿಂದ, ಅವನನ್ನು ಕಾಲೇಜಿಗೆ ಧಾರವಾಡಕ್ಕೆ ಕಳಿಸಬೇಕೆಂಬ ಮಾತು ಬಂದಾಗ, 'ನನ್ನ ಮಕ್ಕಳು ನನ್ನ ಕಣ್ಣ ಮುಂದೆಯೇ ಇರಲಿ' ಎಂದು ಹಟತೊಟ್ಟಳು. ತನ್ನ ಆಚ್ಛೆಯಿಂದ, ಇದ್ದ ಮಕ್ಕಳನ್ನೂ ಹಾಳುಮಾಡುವಳಲ್ಲ—ಎಂದು ಅನೇಕ ಸಲ ತಾತ್ಸಾರಗೊಳ್ಳುತ್ತಿದ್ದೆ. ಆದರೂ ಮಕ್ಕಳನ್ನು ಕಳಿದುಕೊಂಡು ಹಣ್ಣುಗೊಂಡ ಜೀವ, ನೆಮ್ಮದಿಯಿಂದಿದ್ದರೆ ಸಾಕು— ಎಂದು ಸುಮ್ಮನಾಗುತ್ತಿದ್ದೆ. ಮೇಲಾಗಿ "ಮನಸ್ಸಿಗೆ ಬಹಳ ಆಘಾತ ಮಾಡಕೂಡದು. ಆಪರೇಶನ್ನಿನಿಂದ ಅವಳ ನರಶಕ್ತಿ ಬಹಳ ಕುಗ್ಗಿದೆ" ಎಂದು ಡಾಕ್ಟರರು ಹೇಳಿದ್ದರು.

ಧಾರವಾಡದಲ್ಲಿ ಮಕ್ಕಳೊಂದಿಗೆ ಅವಳು ಇರಬೇಕೆಂದು, ನಾನು ಒಬ್ಬನೇ ಇಲ್ಲಿ ಉಳಿಯಬೇಕೆಂದು ನಿರ್ಧಾರವಾಯಿತು. ನನಗೂ ಜೀವನದಲ್ಲಿ ಒಂದು ಬಗೆಯ ನೀರಸತೆ ಬಂದಿತ್ತು.

ಧಾರವಾಡದಲ್ಲಿ ಮನೆಮಾಡಿ ವರ್ಷವಾಗಿತ್ತು. ಶಶಿಕಾಂತನು ಇನ್ನಷ್ಟು ಪೋಲಿಯಾದನು. ನನ್ನೆಲ್ಲ ಆಶೆ ಸರೋಜಳಲ್ಲಿತ್ತು. ಅಂತೆಯೆ ಅವಳ 'ಪ್ರಿಲಿಮಿನರಿ' ಪರೀಕ್ಷೆ ನಡೆದಾಗ, ನಾನು ಧಾರವಾಡಕ್ಕೆ ಹೋಗಿದ್ದೆ. ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾಳೆಂಬುದನ್ನು ತಿಳಿಯಲು ಸಂಜೆಯ ಸುಮಂದೆ ಹೋದಾಗ, ಅವಳು ಇನ್ನೊಬ್ಬ ಹುಡುಗನೊಂದಿಗೆ, ಶಾಲೆಯ ಹಿಂದುಗಡೆಯ ಬಯಲಲ್ಲಿ ಕುಳಿತಿದ್ದಳು. ನಾ ಹೋಗುತ್ತಲೂ, ಗಡಬಡಿಸಾಗುತ್ತ "ಇವನು ನಮ್ಮ ವರ್ಗದವನೇ. ಪೇಪರನ್ನು ಬಿಡಿಸುತ್ತಿದ್ದೆವು!" ಎಂದಳು. ಸಾಲದ್ದಕ್ಕೆ ಅವನು ಮರುದಿನ ರಾತ್ರಿ ಮನೆಗೆ ಬಂದು, 'ಈಕೆ'-ಯೊಡನೆ ಗುಸುಗುಸು ಮಾತನಾಡಿ ಹೋದ ಸಂಶಯಗೊಂಡು, ಅವನಾರೆಂದು ಕೇಳಿದೆ. ಆ ಹುಡುಗ ಅದೇ ಓಣಿಯಲ್ಲಿ, ತಾಯಿ ಮೂರು ಜನ ತಮ್ಮಂದಿರೊಡನೆ ಇರುವನೆಂದೂ ತಿಳಿಯಿತು 'ತುಂಬ ಹಚ್ಚಿಕೊಳ್ಳುವ ಸ್ವಭಾವದವ' ಎಂದು ಇವಳ ಶಿಫಾರಸು. ಮರುದಿನ ಸರೋಜಳು ಪರೀಕ್ಷೆಗೆ ಹೋದಾಗ, ಮನೆಯಲ್ಲಿ ನಿಂತು, ಅವಳ ಕೋಣೆಯನ್ನೆಲ್ಲ ಹುಡುಕಿದಾಗ, ಕಟ್ಟುಹಾಕಿಟ್ಟ ಅವನ ಫೋಟೊ, '....ಇಲ್ಲಿ ಭೆಟ್ಟಿಯಾಗುವಾ', 'ಸರೀ ಮೂರು ಗಂಟೆಗೆ ....ಟಾಕೀಸಿನ ಬಳಿ ಕಾದಿರುತ್ತೇನೆ' ಎಂಬ ತುಂಡುಕಾಗದಗಳೂ ಸಿಕ್ಕವು. ಅವಳ ಲೆಕ್ಕದ ಪುಸ್ತಕದಲ್ಲಿ ಒಂದೆರಡು ಕವಿತೆ 'ನನ್ನ ಹೃದಯೇಶ್ವರನೆ' ಎಂದು ಪತ್ರ ಬರೆಯಹೋದದ್ದೂ ಕಂಡು ಬಂತು.

ಸರೋಜೆಯು ಮನೆಗೆ ಬರುತ್ತಲೂ, ಎಲ್ಲವನ್ನೂ ಅವಳ ನೋರೆಗೆ ಹಿಡಿದು, ಒಂದೇಟು ಬಿಗಿದೆ. ನನ್ನ ಜನ್ಮದಲ್ಲೇ

ನಾನಸ್ಸು ಸಿಟ್ಟಗದ್ದಿರಲಿಕ್ಕಿಲ್ಲ. ಆನರ ಹೆಂಡತಿಯ ರಂಬಾಟವೂ ಅತಿಯಾದಾಗ, ಮೊದಲಿನಿಂದ ಇವಳೊಂಮಗಳ ಆನಿಸೇಕತನಕ್ಕೆ ಅನುಕೂಲೆಯಾಗಿರುವಳೆಂದು ತಿಳಿಯಬಂತು. ಅಲ್ಲವೆ ಮನೆಯಲ್ಲೇ ಬಾಗಿಲು ಹಾಕಿಕೊಂಡು, ಅಭ್ಯಾಸನ ನೆವದಿಂದ ತಾಸುಗಟ್ಟಲೆ ಕೂಡುವರಾಗಿ ರವಿಕಾಂತನಿಂದ ತಿಳಿಯಿತು. ಸರೋಜೆಗೆ ಇನ್ನೂ ಎದಜೇಟು ಧಳಿಸಿನೆ. ಹೆಂಡತಿಯೂ ಕೊಟ್ಟಿಗೆನ್ದು, "ಸರೋಜಳನ್ನು ನಾನು ಅವನಿಗೇ ಮನುವೆ ಮಾಡಿಕೊಡುತ್ತೇನೆ. ಮಗಳು, ಅಳಿಯ ಮನೆಯಲ್ಲೇ ಬಳಿಯುತ್ತಾರೆ; ಅವನಿಗೆ ಶಿಕ್ಷಣಕೊಡಿಸುತ್ತೇನೆ. ನನ್ನ ಕಂದಮ್ಮನ ಮನಸ್ಸು ಹೇಗೆಯೊ, ಹಾಗೆ ನಾ ಮಾಡಿಸಿಕೊಡುವವಳೇ!" ಎಂದಳು.

ನನ್ನಲ್ಲಿ ಪ್ರಜ್ಞೆ ಉಳಿಯಲಿಲ್ಲ. 'ಆ ದಿಕ್ಕೇಡಿ ಹುಡುಗನ ಹೆಸರೆತ್ತಿದರೆ ಸಾಕು, ಮನೆಯಲ್ಲಿ ಯಾರೂ ಉಳಿಯಲಾರರಿ' ಎಂದು ಕೂಗಿದೆ. ರಾತ್ರಿಯೆಲ್ಲವೂ ಉರಿಯುವ ಮನೆಯಲ್ಲಿದ್ದಂತೆ ಭಾಸವಾಯಿತು. ಅದಕ್ಕಿಂತ ಹೆಚ್ಚಾಗಿ, ಹೆಂಡತಿಗೆ ಉನ್ಮಾದರೋಗ ಹಿಡಿದಿತ್ತು. ತಿಳಿವು ತಪ್ಪಿಹೋಗಿತ್ತು. ಸಂಪೂರ್ಣ ಹುಚ್ಚು ಹಿಡಿದಿರದಿದ್ದರೂ, ಅವಳು ವಿಚಾರಶೂನ್ಯಳಾಗಿದ್ದಳು.

ಇದೇ ಮೇ ತಿಂಗಳಲ್ಲಿ ಅವಳನ್ನು ವಿಶೇಷ ಚಿಕಿತ್ಸೆಗೆಂದು ಮುಂಬಯಿಯಲ್ಲಿಟ್ಟು ಬಂದಿದ್ದೆ. ೩-೪ ತಿಂಗಳಿಂದ ದವಾಖಾನೆಯಲ್ಲಿಯೇ ಇದ್ದಾಳೆ. ಗುಣಮುಖವಾಗುತ್ತಿದ್ದಾಳೆಂದು ಅವ ಅಣ್ಣನಿಂದ ಕಾಗದ ಬಂದಿದೆ. ಹವೆ ಬದಲಾಯಿಸಬೇಕೆಂದು ಡಾಕ್ಟರರ ಸಲಹೆಯ ಮೇರೆಗೆ, ಉತ್ತರ ಹಿಂದುಸ್ತಾನ ಪ್ರವಾಸಕ್ಕೆಂದು ಮುತ್ತೆ ಒಂದು ತಿಂಗಳು ರಜೆ ಪಡೆದು, ಮಕ್ಕಳೊಂದಿಗೆ ಇಂದು ಮುಂಬಯಿಗೆ ಹೊರಟಿದ್ದೇನೆ.

ಆದರೆ, ನನ್ನ ತಾಯಿಗೆ ತೀರ್ಥಯಾತ್ರೆ ಮಾಡಿಸುವೆನೆಂದು ಕೊಟ್ಟ ವಚನ, ಅವರ ಹಿಂದಿನ ಅವಳ ಎಲ್ಲ ಬಾಳ್ವೆಯ ನೆನಪಿಗೆ ಬರುತ್ತದೆ; ಅಲ್ಲಲ್ಲಿ ಕೊಳೆತ ಮುಳ್ಳಿನಂತೆ ನೋವನ್ನೆ ನೆಡುತ್ತಿದೆ

ದೇಶದ ಸ್ವಾತಂತ್ರ್ಯವನ್ನು ಉಳಿಸಬೇಕಿದ್ದರೆ ಮೊದಲು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ

ಆದಕ್ಕಾಗಿ

★ ತಮ್ಮ ಆದಾಯವನ್ನು ಬೆಳೆಯಿಸಿಕೊಳ್ಳುವವರೂ

★ ತಮ್ಮ ಹಣವನ್ನು ಸರಿಯಾದ ರೀತಿಯಲ್ಲಿ ತೊಡಗಿಸಬೇಕೆನ್ನುವವರೂ

★ ತಾರುಣ್ಯದಲ್ಲಿರುವಾಗಲೇ, ತಮ್ಮ ವೃದ್ಧಾಪ್ಯಕಾಲವು ನಿಶ್ಚಿಂತೆಯಿಂದ ಕಳೆಯಲು ಕೂಡಿಡಬೇಕೆನ್ನುವವರೂ

ಶ್ರೀ. ಶೇಟ್ ಬಿ. ಎಮ್. ಬಿರ್ಲಾ

ಇವರ ನೇತೃತ್ವದಲ್ಲಿ ನಡೆದ

ರುಬಿ ಜನರಲ್ ಏಮಾ ಕಂಪನಿ ಲಿಮಿಟೆಡ್

ರಜ್ಜಿ, ಮೂರುತಿಗಲ್ಲಿ, ಬೆಳಗಾಂವಿ

ಇವರಿಂದ ವಿವರಗಳನ್ನು ತಿಳಿದುಕೊಳ್ಳಬೇಕು.

ವಿ. ಸೂ.— ಕರ್ನಾಟಕ ಇಲ್ಲವೆ ಸಂಬಳದ ಮೇಲೆ ಬೇರೆ ಊರುಗಳಲ್ಲಿ ಸ್ತ್ರೀ ಹಾಗೂ ಪುರುಷ ಪ್ರತಿನಿಧಿಗಳನ್ನು ನಿಯಮಿಸಬೇಕಾಗಿದೆ. ಕೆಲಸ ಮಾಡಬಯಸುವವರು ತಾಣಬೇಕು.

ಭಾವಜೀವಿ

(ಒಂದು ಕಿಶುಗವನ)

ಶ್ರೀ. ಚೆನ್ನವೀರ ಕಣವಿ, 'ಕಾವ್ಯಾನುಭವ ಮಂಟಪ' ಧಾರವಾಡ

★

"ಅನುಭಾವ ಅನುಭಾವವೆಂದೆಂಬಿರಿ, ಅನುಭಾವವೆಂಬುವುದು ನೆಲವ ಮುಟ್ಟಿಯ ನಿಧಾನ ಕಾಣಿರೊ; ಅನುಭಾವವೆಂಬುದು ಅಂತರಂಗದ ರತ್ನ ಕಾಣಿರೊ; ಅನುಭಾವವೆಂಬುದು ಶಿರು ಕಂಡ ಕನಸು ಕಾಣಿರೊ; ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ಶಾನಾರೆಂದು ತೋರುವುದು. ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು. ಇಂತಪ್ಪ ಅನುಭಾವವನರಿಯದೆ ಶಾಸ್ತ್ರಜಾಲದ ವಸರವಸಿಕ್ಕಿ, ಕೊಳ್ಳದ ಕೊಡದ ವ್ಯವಹಾರವ ನೂಡುವ ಅಣ್ಣಗಳಿರಾ, ನೀವೆತ್ತ ? ಅನುಭಾವವೆತ್ತ ?"

—ಶ್ರೀಬಸವಣ್ಣ

(ಬೇಗನೆ ಪ್ರಕಟವಾಗಲಿರುವ ಇದೇ ಹೆಸರಿನ ಕಾವ್ಯದ ಮೊದಲಭಾಗವಿದು)

ಪ್ರಕೃತಿ ಮಾತೆಯ ಮಡಿಲ ಹಸುರು ಕುಸುರಿನ ಮೃದುಲ
ಶಲ್ಪದಲಿ ಹಾಯಾಗಿ ಮೈಚಾಚಿರಿ,
ಪಡುವಣದ ಬಾನದೇಗುಲದೆದುರು ಕಿರುಮೋಡ
ಮೌನದಲಿ ಶಲೆಬಾಗಿ ಕೈಮುಗಿದಿರಿ---

ಸೊಂಜೊಡರು ತೂಗಿದೊಲು ನೆಲಬಾನ ತಳ್ಕೆಯಲಿ
ನೇಸರನು ಬಿಡುಗಣ್ಣನಾಗುತಿರಲು,
ಸಿಂಗರದ ಬಂಗಾರದಂಗಾರ ಹರಡಿದೊಲು
ಹೊಂಬೆಳಕು ಹೊಡಕರಿಸಿ ಹೊಮ್ಮುತಿರಲು---

ಮನಸಿನೇಕಾಂತದಲಿ ಹಗಲುಗನಸಿನ ಸ್ವರ್ಣ-
ಮಂದಿರದ ಛಾಯೆಯೊಲು ಬಿಟ್ಟಕಾನು
ಗಂಭೀರ ಗುಂಭದಲಿ ಮೈದುಂಬಿ ನಿಂತಿಹವು ;
ಎನಿತಲ್ಪ ಜೀವಿಗಳೊ ನೀನು ನಾನು !

ತನಿವಣ್ಣ ತಿರಿದುಂಡು ಗಿಳಿವಿಂಡು ಹಾರುತಿದೆ
ಮುಗಿಲಲ್ಲಿ ತೇಲುತಿಹ ಬಳ್ಳಿಯಂತೆ---
ಬೆಳ್ಳಕ್ಕಿ ಬಳಿವಿಡಿದು ಓರಣದಿ ಸಾಗಿಹವು
ಮಾರುಗೈಯಲಿ ಮುಗಿಲನಳೆಯುವಂತೆ !

ನೆಲದೆದೆಯ ಕಂಪುಂಡ ತಂಗಾಳಿ ಮೈದಡವಿ
ತೀಡುತಿವೆ ನಲ್ಮೆಗೈ ಹರಸುವಂತೆ,
ಲೋಕಾಭಿರಾಮದಲಿ ಹಾಡಿ ಹಾರಾಡುತಿವೆ,
ಹಕ್ಕಿ ತಿರಿಯಾನಂದ ಸಾರುವಂತೆ !

ಬಣ್ಣ ಬಣ್ಣದೊಳಿಂತು ಸಂಜೆ ರಂಜಿಸುತಿರಲು
ಬಂಜೆನೆದುಳಿಗು ಬಣ್ಣ ವೇರುತಿಹುದು;
ಸಂತೆಗದ್ದಲದಲ್ಲಿ ಬಳಲಿ ಬೆಂಡಾಗಿರುವ
ಮನವು ರಸಸೇಚನೆಯ ಪಡೆಯುತಿಹುದು.

ಆ ಮಾತು ಈ ಮಾತು ಹಾಗಾಯ್ತು ಹೀಗಾಯ್ತು
ಏನಾಯ್ತು ? ಮನಬೀತು ಬಂಜರಾಯ್ತು ;
ಹಗಲೆಲ್ಲ ಹೈರಾಣ,[೧] ಪೂತೆಂಬುದೇ ಮರಣ,
ಅಂದಂದಿಗೇ ಏನಾ ಬೇಕಾಯಿತು.

ಕೀಟಲೆಯ ಕೋಟಲೆಗೆ ತಾಳಲಾರದ ಮನವು
ಶಾಂತಿಯರಸುತ ದಿನವು ಇಲ್ಲಿ ಬಹುದು,
ಯುಗ ಯುಗಾಂತಗಳನ್ನೆ ಈ ಬಗೆಯು ಏಕಾಂತ-
ದೆಡೆಯಲ್ಲಿ ಮನವಾರೆ ಕಳೆಯಬಹುದು.

ಒಡಕು ಬಾಯಿಯ ಸಿಡುಕು ಕೆಡುಕುನುಡಿ ನಾನ್ಯಾಡಿಯೂ
ತಡಕಾಟ ಪಡದಾಟವೆನಿತು ವರೆಗೆ ?
ನನ್ನ ನಾನೇ ತಿಳಿದು ನನ್ನೊಳಗನೇ ಬೆಳೆದು
ಎಂದು ನಾ ನಾನಾಗಿ ಬದುವೆನೋವರೆಗೆ ?

ಹುರುಳೆನಿತು ತಿರುಳೆನಿತು ಕಸರುಕಡ್ಡಿಗಳೆನಿತು
ಜರಡಿ ಹಿಡಿಯಲು ತಾನೆ ತಿಳಿವುದಲ್ಲ !
ನನ್ನ ನಾನೇ ಅಳೆದು ಕಳೆದು ನೋಡಲು ಬೇಕು---
ಎಂದು ಪೀಡಿಸದಿರುವ ದಿನವದಿಲ್ಲ.

ಆದಕಾಗಿ ಪ್ರಕೃತಿಮಾತೆಯ ಮಡಿಲಿನಾಸರೆಗೆ
ಆಸತ್ತು ಬೇಸತ್ತು ಬಂದೆನೆಂದು;
ಶಾಂತಿ ಬಯಸಿ ನಿತಾಂತ ಏಕಾಂತಕೇ ನೋಂತ
ಮನಕೆಂದು ದೊರಕೀತು ಅಮೃತಬಿಂದು ?

ಅಂತರಂಗದ ನಿಸ್ತರಂಗ ತಿಳಿಗೊಳದಲ್ಲಿ
ಲಲಿತಾರವಿಂದಗಳ ಮುಕರಂದವು,
ಅಂತು ನೆನಹಿನ ಗಂಧವರಮನೆಯ ಹೊಕ್ಕಂದು
ಅಲ್ಲೇನು ?- ಸ್ಮೃತಿಫಲದ ಮಾಕಂದವು !

---

೧ ಬಳಲಿಕೆ.

ನಾಗರಿಕ ನಾಗರವು ಹುತ್ತು ಕಟ್ಟದ ಹಳ್ಳಿ-
ಯಲ್ಲಿ ಬಳಿದಿಹ ಪರಿಯದಾವ ಸೊಗಸು !
ಭಾವದುನ್ಮಾದದಲಿ ಬೆರಗು ನಿಬ್ಬೆರಗಿನಲಿ
ವರುಷಗಳು ಹರುಷದಲಿ ಕಂಡ ಕನಸು !

ಚಿಕ್ಕಂದು ಯಾರಾವರೊಂದು ಬಿರುನುಡಿಯಾಡೆ
ಕಂಬನಿ ಕವ್ಪೋಲಗಳ ತೊಯಿಸುತಿತ್ತು;
ಹುಡುಗಾಟ ನಗೆಯಾಟ ಹೊಗೆಯಾಟವಾಗುತಿರೆ
ತಾವತಮ್ಯವನರಿಯದಾಗುತಿತ್ತು.

ತಂಪೆ ತುಸ ಸಿಡುಕಾಡೆ ಮಿಡುಕಾಡಿ ಮನವೆಲ್ಲ
ಮನೆತುಂಬ ತಾಯ ಬೆಂಬಳಿವಿಡಿಯುತ
ಸಾಂತ್ವನದಿ ಅಕ್ಕ-ಅಣ್ಣಂದಿರೊಡನಾಡುತಲಿ,
ಚಿಕ್ಕ ಗೆಳೆಯರ ರೆಕ್ಕೆಯಲ್ಲಿ ಸತತ !

ಬರುಬರುತ ಜನರ ಗುಂಪೆಂದೊಡನೆ ಮನವೇಕೊ
ಬಪವನಾ ಹುಳುವಿನೊಲು ಮುದುಡುತಿತ್ತು ;
ಊರ ಕೊರಗಿನ ತೋಟ-ಬೇಲಿ,[1] ಪಾತರಗಿತ್ತಿ
ಕಾಡ ಗಿಡಗಂಟಿಗಳ ಸಂಗವಾಯ್ತು.

ಆಟ ಬಯಲಾಟದಲಿ ಕೋಲು ಕುಣಿತಗಳಲ್ಲಿ
ಜಂತಿ ತಿರುಗುತ ಸುಗ್ಗಿ ಮೊದಲಾಗಿರೆ,
ಮುಕ್ಕುಮುಕ್ತಿಗೆ ಬೀಸುಗಲ್ಲ ಜೊತೆ ಹಾಡುಗಳ
ಸುರಿಸುಳಿಯು ಜನಪದವ ಪ್ರೇರಿಸುತಿರೆ,

ನಮ್ಮೂರ ಗುಡ್ಡದೋರೆಯ ಬದಿಯ ಕಿರುಹಳ್ಳ,
ಸುವಿಶಾಲ ಆಲ, ಎಲೆವಳ್ಳಿ ತೋಟ,
ಈಶ್ವರನ ಗುಡಿ, ಕಲ್ಲುಕಟ್ಟೆ, ಮಾದರಕೇರಿ
ಕೆಮ್ಮೆರಡಿ—ಏನೆಲ್ಲ ಎಂಥ ನೋಟ !

ಗುಂಡು-ಗಜಗವನಾಡೆ ಚಿಣ್ಣಿಕೋಲನು ತೂರಿ
ಮನೆಯವರ ಕಣ್ಮರೆಸಿ ಓಡಾಟವು ;
ಬೆಳ್ಳವತ್ತದ ಕಾಯ ಬುಗುರಿಯಲಿ ಜಾಳಿಗೆಯ
ಸುತ್ತಿ ಬಿಚ್ಚಲು ನಾದ ಭೋಂಕಾರವು !

"ಬಟ್ಟಬ್ಬಿ ಬೆಳಗಾತು ತಟ್ಟೀಮನಿ ಹಾಳಾತು
ಹಾಳುಗೋಡೆಮ ದೆನ್ವ ಬಂದು ಬಡಿತು"—
ಕಣ್ಣುಮುಚ್ಚಾಡುತ್ತ ಗೊಂಬೆಮದುವೆಯ ಹೂಡೆ
ಹಂಚು-ಹರಳುಗಳಾಗ ಹವಳ ಮುತ್ತು !

'ತಾಂಡೆ'[2]ಯಿಂದಲಿ ಬರುವ ಲಂಬಾಣಿ ಹೆಂಗುಸರ
ಉಡುಪು ತೊಡಪೇನವರ ಮಾತ್ ಬೇರೆ—
"ಲಂಬಾಣಿ ಗಿಲ್ ಗಿಲ್... ನಾ ಬಂದೆ ನಿಲ್ ನಿಲ್....
ಕಟಗಿ ಹೊರಿ ಚೆಲ್ ಚೆಲ್....ಏ ಏಡಿರೆ"

ಅಣಕವಾಡನು ಕಟ್ಟಿ ಅವರ ಕುಣಿತಕೆ ಹಾಡಿ
ಆನಂದ ಪಟ್ಟುದನು ಮರೆಯಬಹುದೆ ?
ಸುಡುಗಾಡಸಿದ್ಧ ತಾನೊಂದು ಸಲ ಹೆದರಿಸುತ
ಜೋಳಿಗೆಯ ಬಾಯ್ತೆರೆಯಲತ್ತು ಕರೆದೆ.

ಜೋಳದಾ ಪಯಿರು ಹೊಡೆ ಹಾಯ್ದು ಹೊಂದಲೆದೂಗೆ
ಅಕ್ಕಡಿಯ ಬಳ್ಳಿಗಳು ಹುಲುಸಾಗಿರೆ,
ಬನ್ನಿಗಿಡದಡಿಯಲ್ಲಿ ತಶ್ಶಾಣೆ ತಣ್ಣೀರ
ಕುಡಿದು ಬುತ್ತಿಯನುಂಡು ಸೊಂಪಾಗಿರೆ,

ಕೊಲ್ಲಾರಿ ಚಕ್ಕಡಿಗೆ ಹೂಡಿರುವ ಎತ್ತುಗಳ
ಕೊರಳ ಗೆಜ್ಜೆಯ ಸರವು ಟಂಟಣಿಸಲು
ಮೂಕೆಯಲಿ ಕುಳಿತಿರುವ ಆಳು ಲಾವಣಿ ಹಾಡೆ
ಕಿವಿಗೊಟ್ಟು ಕೇಳುವವು ಬಾನು, ಬಯಲು !

ರಾಜ-ರಾಣಿಯರ ಕತೆ ದೇವ-ದೆವ್ವಗಳ ಕತೆ
ಎಂಥನೆಂಥವ್ವೊನೂರು ಕತೆಯ ಕೇಳಿ
ಶಿಟ್ಟುಕತೆ ಕಟ್ಟುಕತೆಗೆಲ್ಲದಕು ಹೂಂಗೊಟ್ಟು
ತಲೆಯಾಡಿಸಿರೆ ಮತ್ತೆ ಕತೆಯ ಹೋಳಿ !

ಚಂದ್ರ-ಚಿಕ್ಕೆಗಳಲ್ಲಿ ಮೋಡ-ಕಾಡುಗಳಲ್ಲಿ
ಬಾಲ್ಯದಿಂದಲು ಪ್ರೀತಿ ಬಲಿಯಿಸಿತ್ತು ;
ಸತ್ತವರ ಕಂಡಾಗ ಮನವೆಲ್ಲ ಹೌಹಾರಿ
ಏನೇನೊ ಪ್ರಶ್ನೆಗಳ ಹೆಣೆಯುತಿತ್ತು.

ಮಳೆಯು ಬಂದರೆ ಹಿಗ್ಗಿ ಮೈ ತೊಯಿಸಿಕೊಳ್ಳುವುದೆ
ನೀರಾಟವಾಡುವುದೆ ಆಗ ಸೊಗಸು,
ಕಾಲುವೆಯ ನೀರಿನಲಿ ಕಾಗದದ ದೋಣಿಗಳ
ತೇಲಬಿಡೆ ಮುಳು-ಮುಳುಗಿ ಹೋದುವೇಸು ?

ನಾವು ಸಾಕಿದ ಬೆಕ್ಕು ತೀರಿಕೊಂಡಿರುವಾಗ
ಬೋರಾಡಿ ಅತ್ತಿರುವುದೆನಗೆ ನೆನಪು;
ಅದನೊಯ್ದು ಹೊಲದಲ್ಲಿ ಮಣ್ಣು ಗೊಟ್ಟೈತರಲು
ಮನಸಿಗಾಯಿತು ಏಕೊ ನಸುವೆ ತಣಿಪು.

[1] ಆಚ್ಛಾದನೆಯ ಬಣ್ಣ.

[2] ಲಂಬಾಣಿಗರ ಗುಂಪು.

ವನಸ್ಪತಿ ವಿಜ್ಞಾನವಿಶಾರದರಾದ ಕನ್ನಡಿಗ

ಪ್ರೊ. ಆರ್. ಎಸ್. ಇನಾಮದಾರರು

(ವ್ಯಕ್ತಿಪರಿಚಯ)

ಶ್ರೀ. ಡಿ. ಕೆ. ನಾಡಿಗೇರ, ಗವರ್ನ್‌ಮೆಂಟ್ ಲಾ ಕಾಲೇಜು, ಮುಂಬೈ

★

ಪ್ರೊ. ಇನಾಮದಾರರು ಪವಾಡಪುರುಷರಂತೆ ಇದ್ದಾರೆ. ಅವರು ಮಾಡಿತೋರಿಸಿದ ಪವಾಡಗಳಿಲ್ಲ ಅವರ ವಿಜ್ಞಾನದ ವಿಶಾರದತೆಗೆ ಸಾಕ್ಷಿಗಳಾಗಿವೆ. ಯೋಗ್ಯ ಪರಿಸ್ಥಿತಿಯಿರದುದಕ್ಕಾಗಿ, ಕನ್ನಡನಾಡು ಇಂತಹ ಎಷ್ಟೊಂದು ಕನ್ನಡಿಗರ ಜ್ಞಾನ-ಪ್ರಯೋಜನವನ್ನು ಕಳೆದುಕೊಂಡಿದೆ ಗೊತ್ತೇ ?

" ಪ್ರೊ. ಆರ್. ಎಸ್. ಇನಾಮದಾರ ! You look like a ge (ನೀವು ಯತಿಗಳಂತೆ ಕಾಣುವಿರಿ) " ಅಲಹಾಬಾದಿನಲ್ಲಿ ದ ಜಾನೆವರಿ ತಿಂಗಳಲ್ಲಿ ನಡೆದ " ಅಖಿಲ ಹಿಂದುಸ್ತಾನದ ಯನ್ಸ್ ಕಾಂಗ್ರೆಸಿ"ನ ಅಧಿವೇಶನದಲ್ಲಿ, ಪಾಶ್ಚಿಮಾತ್ಯ ವೇಷ-ರಿಸಿದವರೆಲ್ಲರ ಗುಂಪಿನಲ್ಲಿ ಕುಳಿತಿದ್ದ, ಬಿಳಿಯ ಸಾದಾ ಉಡುಪಿನ ಶ್ರೀ. ರಾಮನಾಥ ಇನಾಮದಾರರನ್ನು ಕಂಡಾಗ, ಸರ್ ಸಿ. ವಿ. ಮನ್‌ರಿಂದ ಮಾತು. ಅಷ್ಟು ಎತ್ತರವೂ ಅಲ್ಲದ ಅಷ್ಟು ಡ್ಡವೂ ಅಲ್ಲದ ನಿಲುವಿಕೆಯು— ಬಿಳಿಯಬಟ್ಟೆ ಧರಿಸುವ ಬಿಳಿಯ ೂದಲಿನ ವ್ಯಕ್ತಿ ಶ್ರೀ. ಇನಾಮದಾರರು. ಅವರ ವಿಶಾಲವಾದ ಹೆ. ಅವರ ಜ್ಞಾನದ ವಿಶಾಲತ್ವವನ್ನೇ ಬಿಂಬಿಸುವಂತಿದೆ.

ಪ್ರೊ. ಆರ್. ಎಸ್. ಇನಾಮದಾರರು.

ಪ್ರೊ. ಆರ್. ಎಸ್. ಇನಾಮದಾರರು ರ್ನಾಟಕದ ಕೀರ್ತಿವೆತ್ತ ಮಕ್ಕಳಲ್ಲಿ ಬ್ಬರು. ಚಿಕ್ಕಂದಿನಲ್ಲಿಯೆ ಮೇಧಾವಿ-ನಿಸಿಕೊಂಡು, ತಾವು ಕಲಿಯತಕ್ಕ ಎಲ್ಲ ಷಯಗಳಲ್ಲಿ ಮೊದಲಿಗರಾಗಿ ಶಾಲೆ-ಲೇಜುಗಳಲ್ಲಿಯ ಶಿಕ್ಷಕರಿಂದ ಉತ್ತಮ ದ್ಯಾರ್ಥಿಯೆಂದೆನಿಸಿಕೊಂಡವರು ಇವರು ಾರವಾಡ ಜಿಲ್ಲೆಯ ಬತ್ತೀಕೊಪ್ಪದ ನಾಮದಾರರ ಮನೆತನಕ್ಕೆ ಸೇರಿದವರು.

ಪೂನಾ ಒಕ್ಕಲುತನ ಕಾಲೇಜಿನಿಂದ ಾವಿರದ ಒಂಬೈನೂರಾ ಹದಿಮೂರರಲ್ಲಿ, ಮುಂಬಯಿ ವಿಶ್ವವಿದ್ಯಾಲಯದ ಬಿ. ಎಸ್‌ಸಿ. (ಅಗ್ರಿಕಲ್ಚರ್) ಪರೀಕ್ಷೆಯಲ್ಲಿ, ೊದಲನೆಯ ತರಗತಿಯಲ್ಲಿ ಮೊದಲಿಗ-ಾಗಿ ಬಂದು " ಕಾನಡೀ ಪೋರ್ಯಾ ಹಿಲಾ ಆಹೆ " ಎನ್ನುವುದನ್ನು ಆಗಿನ ಮಹಾರಾಷ್ಟ್ರದವರಿಗೆ ತೋರಿಸಿದರು.

ಅನಂತರ ಅದೇ ಕಾಲೇಜಿನಲ್ಲಿ ಒಂದು ವರುಷ ಶಿಕ್ಷಕರಾಗಿ ದುಡಿದು, ಪೂನಾದಲ್ಲಿ ಅನುಭವ ಪಡೆದುಕೊಂಡು, ಮುಂಬಯಿ ವಿಶ್ವವಿದ್ಯಾಲಯದಿಂದ ಕೇಂಬ್ರಿಜ್ ವಿಶ್ವವಿದ್ಯಾಲಯದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗಲು "ಮಂಗಲದಾಸ ನಾಥೂಭಾಯಿ" ವಿದ್ಯಾರ್ಥಿವೇತನವನ್ನು ಪಡೆದುಕೊಂಡರು.

ಸಾವಿರದಾ ಒಂಬೈನೂರಾ ಹದಿನೈದರಿಂದ ಹತ್ತೊಂಬತ್ತರ ವರೆಗೆ, ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ವನಸ್ಪತಿಶಾಸ್ತ್ರದ ಹೆಚ್ಚಿನ ಅನುಭವಪಡೆದುಕೊಂಡದ್ದಲ್ಲದೆ, ವನಸ್ಪತಿ ಶಾರೀರಿಕ-ಮೀಮಾಂಸೆಯ ಬಗ್ಗೆ ತಮ್ಮದೇ ಆದ ಒಂದು ವಿಶಿಷ್ಟಸಂಶೋಧ-ನೆಯ ರೀತಿಯನ್ನು ಪ್ರಸಿದ್ಧಿಸಿದರು. ಅಲ್ಲದೆ ಅದೇ ವಿಶ್ವವಿದ್ಯಾ-ಲಯದ " Natural Science Tripos Part I and II " ವಿಷಯಗಳಲ್ಲಿ ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾದರು. ಆಗ ಅವರಿಗೆ ಹಿಂದುಸ್ತಾನದ ಸೆಕ್ರೆಟರಿಯಿಂದ ಮತ್ತೊಂದು ವರುಷ ಕೇಂಬ್ರಿಜ್‌ನಲ್ಲಿಯೇ ನಿಂತು ಕೆಲಸ ಮಾಡಲು ವಿದ್ಯಾರ್ಥಿವೇತನ ಸಿಕ್ಕಿತು. ಜಗತ್ತಿನ ಮೊದಲನೆಯ ಮಹಾಯುದ್ಧದ ಮುಕ್ತಾಯ ಇವರ ಪರದೇಶವಾಸದ ಮುಕ್ತಾಯವಾಯಿತೆನ್ನಬಹುದು. ಸ್ವದೇಶಕ್ಕೆ ಮರಳಿದನಂತರ, ಯಾವುದೇ ತರದ ಸರಕಾರಿ ನೌಕರಿಯಲ್ಲಿ ಸೇರಲು ಮನಸ್ಸು ಮಾಡದೆ, ಸಾವಿರದ ಒಂಬೈನೂರಾ ಇಪ್ಪತ್ತೊಂದರಿಂದ ಮೂವತ್ತೊಂದರ ವರೆಗೆ, ಕಾಶೀ ವಿಶ್ವವಿದ್ಯಾಲಯದಲ್ಲಿ ನಿಂತರು. ಅಲ್ಲದೆ ಅಲ್ಲಿಯ ವನಸ್ಪತಿಶಾಸ್ತ್ರ ವಿಭಾಗದ ಬೆಳವಣಿಗೆಯ ಕಾರ್ಯವನ್ನೂ ಕೈಕೊಂಡು, ಅಲ್ಲಿಯೇ ವಿಶ್ವವಿದ್ಯಾ-

ಸುಖಕರವಾದ ವಸತಿ .... ರುಚಿಕರವಾದ ಊಟ

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ನಿತವಾದ ದರಗಳು —

ಸ್ವಲ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟಾಂಡಿಗೆ
ಸವೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ನಾರಕೋಡ

ಲಯದ ಪಿತಾಮಹರೆನಿಸಿಕೊಂಡ ಹಾಗೂ ಸಂಸ್ಥಾಪಕರಾದ ಪಂಡಿತ ಮದನಮೋಹನ ಮಾಲವಿಯಜಿಯವರ ಅತಿ ಪ್ರಿಯ ಸಹಕಾರಿಗಳಾಗಿ ಸೇವೆ ಸಲ್ಲಿಸಿದರು. ಇಂದಿನ ಕಾಶೀ ವಿಶ್ವವಿದ್ಯಾಲಯದ ವನಸ್ಪತಿಶಾಸ್ತ್ರ ವಿಭಾಗದ ಬೆಳೆವಣಿಗೆಯ ಪ್ರತಿಯೊಂದು ಮೂಲೆಯಲ್ಲಿ, ಶ್ರೀ. ಇನಾಮದಾರರ ಹೆಸರು ಮೂರ್ತಿಮತ್ತಾಗಿ ನಿಂತಿದೆ. ಇದರ ಸತ್ಯತೆ, ಇವರು (ಇನಾಮದಾರರು) ಕಳೆದ ಜಾನೇವರಿಯಲ್ಲಿ ಕಾಶೀ ವಿಶ್ವವಿದ್ಯಾಲಯಕ್ಕೆ ಸ್ನೇಹಭೇಟ್ಟಿ ಕೊಟ್ಟಾಗ— ಈಗಿನ ಅಲ್ಲಿಯ ಕುಲಾಧ್ಯಾಪಕರೂ ಹಾಗೂ ಪಂಡಿತ ಮದನಮೋಹನ ಮಾಲವಿಯಜಿಯವರ ಮಕ್ಕಳೂ ಆದ— ಪಂಡಿತ ಗೋವಿಂದ ಮಾಲವಿಯರು ನುಡಿದ ಮಾತಿನ ಮೇಲಿಂದ ವ್ಯಕ್ತವಾಗುತ್ತದೆ.

ಸಾವಿರದ ಒಂಬೈನೂರ ಇಪ್ಪತ್ತೊಂದರಲ್ಲಿ ಪಂಡಿತ ಮದನಮೋಹನ ಮಾಲವಿಯಜಿಯವರ ಇಚ್ಛೆಯ ಮೇರೆಗೆ ಹಾಗೂ ತಮ್ಮ ವಿದ್ಯಾಲಾಲಸೆಯಿಂದ ಶ್ರೀ. ಇನಾಮದಾರರು, ನೇಪಾಳದ ಮಹಾರಾಜರ ಸಹಾಯ ಪಡೆದುಕೊಂಡು, ವನಸ್ಪತಿಗಳ ಸಂಶೋಧನಾರ್ಥವಾಗಿ ಹಿಮಾಲಯ ಪ್ರವಾಸ ಮಾಡಿದರು. ನೇಪಾಳದ ಮಹಾರಾಜರು ಕೊಟ್ಟ ರಾಜಸಿಬ್ಬಂದಿ, ಸಲ್ಲಿಸಿದ ಸಹಾಯ ಇವರ ವ್ಯಕ್ತಿತ್ವಕ್ಕೆ ಪುಟಕೊಟ್ಟಂತಾದುವು.

೧೯೨೫ನೆಯ ಇಸವಿಯ ಸುಮಾರಿಗೆ ಎಂದರೆ (೧೯೨೦ ರಿಂದ ೧೯೨೫) ಇವರು ವನಸ್ಪತಿಶಾಸ್ತ್ರದಲ್ಲಿ ಮಾಡಿದ ಹೆಚ್ಚಿನ ಕೆಲಸ ಮರ್ಯಾದೆಗಾಗಿ "ಅಖಿಲ ಹಿಂದುಸ್ತಾನ ಸಾಯಿನ್ಸ್ ಕಾಂಗ್ರೆಸ್ ನವರು, ಅದೇ ವರುಷದ ಅಧಿವೇಶನದಲ್ಲಿ ಇವರನ್ನು ವನಸ್ಪತಿ ಶಾಸ್ತ್ರವಿಭಾಗಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು.

"ತಾನೊಂದು ಬಗೆದರೆ ದೈವವೊಂದು ಬಗೆಯಿತು" ಎನ್ನುವ ನಾಡಿಯ ಮಾತಿನ ಯಥಾರ್ಥದಂತೆ, ಸಾವಿರದ ಒಂಬೈನೂರ ಮೂವತ್ತೆರಡರಲ್ಲಿ ಇವರು, ಸ್ವಂತ ಪ್ರಕೃತಿಯ ಅನಾರೋಗ್ಯದ ಮೂಲಕ, ಕಾಶೀ ವಿಶ್ವವಿದ್ಯಾಲಯವನ್ನು ಬಿಟ್ಟು ಸ್ವಸ್ಥಾನವೆಂದು ಇಟ್ಟುಕೊಂಡ ರಾಣೇಬೆನ್ನೂರಿಗೆ ತಿರುಗಬೇಕಾಯಿತು. ಅಂದಿನಿಂದ ಇಂದಿನ ವರೆಗೂ ಇವರು ತಮ್ಮ ಹಳೆಯ ಗೆಳೆತನದ ಮಧುರತ್ವವನ್ನೇನು ಕಡಿಮೆ ಮಾಡಿಕೊಂಡಿಲ್ಲ ಶ್ರೀ. ಸಿ. ವಿ. ರಾಮನ್ (ನೋಬಲ್ ಬಹುಮಾನ ಪಡೆದವರು). ಶ್ರೀ. ಎಮ್. ಡಿ. ಭಟ್ (ಚೀಫ್ ಸೆಕ್ರೆಟರಿ, ಮುಂಬಾಯಿ ಸರಕಾರ). ಶ್ರೀ. ಜಿ. ಎಸ್. ರಾಜಾಧ್ಯಕ್ಷ (ಮುಂಬಾಯಿ ಹಾಯ್ಕೋರ್ಟ್ ನ್ಯಾಯಾಧೀಶರು). ಶ್ರೀ. ಸಿ. ಡಿ. ದೇಶಮುಖ (ರಿಝರ್ವ್ ಬ್ಯಾಂಕ್ ಗವ್ವರ್ನರರು) ಇಂತಹ—ಇನ್ನೂ ಅನೇಕ ವಿಷಯಗಳಲ್ಲಿ ಊರ್ಜಿತಸ್ಥಾನ ಪಡೆದ—ಅನೇಕ ಗೆಳೆಯರು ಇವರಿಗಿದ್ದಾರೆ.

ಕಳೆದ ಇಪ್ಪತ್ತು ವರುಷಗಳ ಹಿಂದೆಯೇ— ಈಗಿನ ನಮ್ಮ ಮಧ್ಯಂತರ್ಗಿ ಸರಕಾರದಲ್ಲಿ ಮಂತ್ರಿಗಳಾಗಿರುವ— ಶ್ರೀ. ದಿವಾಕರ ರೆಂಗರಾಯರೊಡನೆ, ಕರ್ನಾಟಕ ವಿಶ್ವವಿದ್ಯಾಲಯದ ರಚನೆಗಾಗಿ ಇವರು ಮಾಡಿದ—ವಿಚಾರಿಸಿದ—ನಡೆಸಿದ ಕಾರ್ಯವನ್ನು ನೆನೆಸಿಗ ತಂದಲ್ಲಿ, ಇವರ ಅಸಾಮಾನ್ಯವ್ಯಕ್ತಿತ್ವ, ಕರ್ತೃತ್ವಶಕ್ತಿ ಗಮನಾರ್ಹವೆನಿಸದೆ ಇರದು.

ಕಳೆದ ವರುಷ ಇವರು, ಮುಂಬಾಯಿ ಅಂಧೇರಿಯಲ್ಲಿರುವ ಭವನ್ಸ ಕಾಲೇಜಿನಲ್ಲಿ ವನಸ್ಪತಿಶಾಸ್ತ್ರದ "ಆನರರಿ" ಪ್ರಾಧ್ಯಾಪಕರೆಂದು ಕೆಲಸಮಾಡುತ್ತಿದ್ದರು. ತಮ್ಮ ಐವತ್ತೊಂಬತ್ತನೆಯ ವಯಸ್ಸಿನಲ್ಲಿ ಕೂಡಾ ಎಷ್ಟೊಂದು ಉತ್ಸಾಹದಿಂದ ಇವರು ದುಡಿಯುತ್ತಿದ್ದರೆಂಬುದು, ಇವರ ಆಗಿನ ವಿದ್ಯಾರ್ಥಿಗಳನ್ನು ಸಂದರ್ಶಿಸಿದಲ್ಲಿ ಹೆಚ್ಚಾಗಿ ತಿಳಿಯುವುದು.

ಇವರ ಸಂಗಡ ಕಾಶೀ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ ಇವರ ಶಿಷ್ಯವೃಂದ ಬೆಳೆದು ಮುಂದೆಬರಹತ್ತಿದೆ. ಅಲ್ಲಿಯ ಶಿಷ್ಯರಲ್ಲಿ ಒಬ್ಬರಾದ ಶ್ರೀ. "ರಂಜನ್" (ಎಮ್. ಎಸ್ಸಿ. ಕೇಂಬ್ರಿಜ್) ಎಂಬವರು, ಈಗ ಅಲಹಾಬಾದ ವಿಶ್ವವಿದ್ಯಾಲಯದಲ್ಲಿ ವನಸ್ಪತಿ ಶಾಸ್ತ್ರವಿಭಾಗದ ಮುಖ್ಯಾಧ್ಯಾಪಕರಾಗಿದ್ದಾರಲ್ಲದೆ, ಇಡೀ ಅಲ್ಲಿಯ ವಿಜ್ಞಾನವಿಭಾಗಕ್ಕೆ ಹೆಚ್ಚಿನ ಅಧಿಕಾರಿಗಳಾಗಿದ್ದಾರೆ.

ಇದೇ ಸಲದ ಸಾಯನ್ಸ್ ಕಾಂಗ್ರೆಸ್ಸಿನವರು ಹೊರಡಿಸಿದ ವಾರ್ಷಿಕ ವಿಶೇಷಾಂಕದಲ್ಲಿ ಆಚ್ಛಾದ ಶ್ರೀಯುತ ರಂಜನರವರ ಲೇಖನದಲ್ಲಿ, ಶ್ರೀಯುತ ಇನಾಮದಾರರ ಮಹತ್ತ್ವ ಎದ್ದು ಕಾಣುವಂತಿದೆ. "Prof. R. S. Inamdar is the founder of the plant Physiology in India." (ಪ್ರೊ. ಇ ನಾ ಮ

ಧಾರರೇ ಹಿಂದುಸ್ಥಾನದಲ್ಲಿ ವನಸ್ಪತಿ ಶಾಸ್ತ್ರದ ಶಾರೀರಿಕ ವಿಜ್ಞಾನವನ್ನು ಪ್ರಾರಂಭಮಾಡಿದವರು) ಎನ್ನುವ ವಾಕ್ಯವನ್ನು ಅವರು ಉಪಯೋಗಿಸಿರುವರು. ಶ್ರೀ. ರಂಜನರಂತಹ ಇನ್ನೂ ಅನೇಕ ಜನರು, ಶ್ರೀಯುತ ಇನಾಮುದಾರರ ಶಿಷ್ಯರು ತಾವು—ಎಂದು ಹೇಳಿಕೊಳ್ಳುವುದರಲ್ಲಿ ಅಭಿಮಾನಪಟ್ಟುಕೊಳ್ಳುತ್ತಾರೆ. ಇವರು ಕಾಶೀ ವಿಶ್ವವಿದ್ಯಾಲಯದಲ್ಲಿ ಸದ್ಯ ಇರದಿದ್ದರೂ, ಇವರ ವ್ಯಕ್ತಿತ್ವದ ಅರಿವನ್ನು ಮೇಲಿಂದ ಮೇಲೆ ಮಾಡಿಕೊಡುವುದಕ್ಕಾಗಿಯೇ ಕೆಲಸ ಕೈಕೊಂಡಂತೆ, ಇವರ ಅಣ್ಣಂದಿರ ಮಗ್ಗಳಾದ ಶ್ರೀಯುತ ಎನ್. ಎಮ್. ಕುಲಕರ್ಣಿಯವರು, ಅದೇ ವಿಶ್ವವಿದ್ಯಾಲಯದಲ್ಲಿ ಆಂಗ್ಲಭಾಷೆಯ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿದ್ದಾರೆ. ಶ್ರೀಯುತ ಎನ್. ಎಮ್. ಕುಲಕರ್ಣಿಯವರು ಕನ್ನಡ ಸಾಹಿತಿವೃಂದಕ್ಕೆಲ್ಲ ಚಿರಪರಿಚಿತರು.

ಶ್ರೀಯುತ ಇನಾಮುದಾರರ ನೆನಪಿನ ಶಕ್ತಿ ಅಗಾಧವಾದದ್ದು. ಅವರ ಕಳೆದ ಹಳೆಯ ದಿನಗಳ ಮಧುರಜೀವನದ ನೆನಹುಗಳನ್ನು ಕೇಳುವ ಸುಯೋಗ ನನಗೆ ಮೇಲಿಂದ ಮೇಲೆ ದೊರಕುತ್ತಿರುವುದೊಂದು ಸುದೈವ. ಅವರಿಗೆ ಸನಾತನ ಧರ್ಮದಲ್ಲಿ ಇರುವ ಅಭಿಮಾನ ಹೆಚ್ಚಾದದ್ದು. ಜಗತ್ತಿನ ಹಿರಿಯ ಪಟ್ಟಣವೆನಿಸಿಕೊಂಡ ಲಂಡನ್‌ನಲ್ಲಿಯ ಥೇಮ್ಸ್ ನದಿಯ ದಡದಲ್ಲಿ, ಆದೂ ಹಿಂದೂ ಪದ್ಧತಿಯ ಉಡುಪಿನಲ್ಲಿ, ಒಂದು ದಿನ ಸಂಧ್ಯಾವಂದನೆಯನ್ನು ಮಾಡಿರುವುದಾಗಿ ಹೇಳುತ್ತಾರೆ. ೧೯೨೭ನೆಯ ಇಸವಿಯಲ್ಲಿ ನಡೆದ ಕಾಶೀ ಸನಾತನ ಧರ್ಮದ ವಾರ್ಷಿಕ ಅಧಿವೇಶನದಲ್ಲಿ ಇವರು ಮಾಡಿದ ಭಾಷಣ ಅತ್ಯುತ್ತಮವಾಗಿದೆ. ಇವರು ಇತ್ತೀಚೆಗೆ ಜ್ಯೋತಿಷ ಶಾಸ್ತ್ರದಲ್ಲಿ ಮಾಡಿದ ಕಾರ್ಯ ಅಗಾಧವಾದದ್ದು. ಪೌರ್ವಾತ್ಯ ಪಾಶ್ಚಿಮಾತ್ಯ ಪದ್ಧತಿಯ ಜ್ಯೋತಿಷ ಶಾಸ್ತ್ರವನ್ನು ಅಭ್ಯಸಿಸಿ, ಅಚ್ಚಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದಿದ್ದಾರೆ. ಅದು ಅಚ್ಚಾಗಿ ಕನ್ನಡಿಗರ ಕೈಗೆ ಬರುವ ಭಾಗ್ಯದ ದಿನಕ್ಕಾಗಿ ನಾವೆಲ್ಲ ಕಾಯುತ್ತಿದ್ದೇವೆ.

ಇವರು ವನಸ್ಪತಿಶಾಸ್ತ್ರದಲ್ಲಿ ಅವುಗಳ ಶಾರೀರಿಕಜೀವನದ ಬಗ್ಗೆ ಕೇಂಬ್ರಿಜ್ ಹಾಗೂ ಕಾಶೀ ವಿಶ್ವವಿದ್ಯಾಲಯದಲ್ಲಿ ನಡೆಯಿಸಿದ ಸಂಶೋಧನೆಯ ಎಷ್ಟೋ ಕೆಲಸಗಳು, ಹೊರಗೇ ಬಾರದೆ ಹಾಗೇ ಉಳಿದಿವೆ. ಪರದೇಶದವರು ಪ್ರಕಟಿಸಿದ ಕೆಲವು—ವನಸ್ಪತಿಶಾಸ್ತ್ರಕ್ಕೆ ಸಂಬಂಧಪಟ್ಟ—ಪುಸ್ತಕಗಳಲ್ಲಿ, ಕೇಂಬ್ರಿಜ್ ಕೆಲಸದ ಕೆಲವೊಂದು ಅವತರಣಿಕೆ ಮಾತ್ರ ಬಂದಿವೆ. ಇದೊಂದು ಕನ್ನಡಿಗರಿಗೆ ಅಭಿಮಾನಾಸ್ಪದ ಸಂಗತಿಯೇ ಸರಿ.

" I have formed a very high opinion of his talents and energy as a Director of Investigation in the physiology of plants. " (By F. F. Blackman, Reader in Botany in the University of Cambridge)

ಪರದೇಶದಲ್ಲಿದ್ದು ಕೆಲಸ ಮಾಡಿ ಅಲ್ಲಿಯ ಜನರಿಂದ ಮರ್ಯಾದೆ ಪಡೆದುಕೊಂಡ ಹಿಂದುಸ್ಥಾನದ ಪುತ್ರರತ್ನಗಳಲ್ಲಿ ಇವರೊಬ್ಬರೆನ್ನಬಹುದು. ಪ್ರಕಾಶಿಸುವ ಸೂರ್ಯನಿಗೊಂದು ಗ್ರಹಣವು ಹಿಡಿದಂತೆ, ಇವರ ಪ್ರಕಾಶಪೂರಿತ ಜೀವನ ಕೆಲವು ದಿನಗಳಿಂದ ಮುಚ್ಚಿದ್ದು, ಈಗ ಆ ಗ್ರಹಣ ಬಿಡತೊಡಗಿದೆ.

ಸ್ವತಂತ್ರ ಹಿಂದುಸ್ಥಾನದಲ್ಲಿ ಅದೂ ಹೊಸತಾಗಿ ನಿರ್ಮಾಣವಾಗಲಿರುವ ಕರ್ನಾಟಕಕ್ಕೆ ಇದೊಂದು ಶುಭಚಿನ್ಹವೇ ಸರಿ.

ಚಟ ಜೀವನದಲ್ಲಿ ಮನುಷ್ಯನಿಗೊಂದು ಬಿಡಿಸಲಾರದ ಒಗಟು. ಅವರ ಹಿಡಿತಕ್ಕೆ ಸಿಗದವರು ವಿರಳ. " ರಾಮನಾಥಾಯ ನಾಥಾಯ ತಮ್ಮಾಕುಪತಯೇನಮಃ " (ತಂಬಾಕು ಸೇದುವ ರಾಮನಾಥಗೆ ನಮಸ್ಕಾರ) ಎಂದು ಮೇಲಿಂದ ಮೇಲೆ, ಶ್ರೀಯುತ ಚಿಂತಾಮಣ ದೇಶಮುಖ (ಈಗಿನ ರಿಝರ್ವ್ ಬ್ಯಾಂಕ್ ಗವರ್ನರರು) ಎನ್ನುತ್ತಿದ್ದರಂತೆ. ಅಷ್ಟೊಂದು ಆಳವಾಗಿ ಬೇರೂರಿತ್ತು ಈ ಚಟ ಶ್ರೀಯುತ ಇನಾಮದಾರರಲ್ಲಿ.

ಕೇಂಬ್ರಿಜ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾಲಯದ ಅಂಗಳದ ಪರಿಮಿತಿಯಲ್ಲಿ ತಂಬಾಕು ಸೇದಲು ಬಾರದಂತೆ. ಒಂದು ದಿನ ಶ್ರೀಯುತ ಇನಾಮದಾರರು, ತಮ್ಮ ಪದವಿಗೆ ಸಮಾನವಾದ ನಿಲುವಂಗಿಯನ್ನು ಧರಿಸಿ, ಸಿಗರೇಟನ್ನು ಸೇದುತ್ತ ವಿಶ್ವವಿದ್ಯಾಲಯದ ತುದಿಯ ಅಂಚಿಯ ಸರಪಳಿಯನ್ನು ದಾಟುತ್ತಿದ್ದರಂತೆ. ಅಷ್ಟರಲ್ಲಿಯೇ ಮೇಲಿನವರಿಂದ ಹಿಡಿಯಲ್ಪಟ್ಟು ಹದಿಮೂರು ಶಿಲಿಂಗ್ಸ್ ದಂಡವನ್ನು ತೆರಬೇಕಾಯಿತಂತೆ. ಇವರು ಪ್ರಿನ್ಸಿಪಾಲರೆದುರಿಗೆ ತಮ್ಮ ತಪ್ಪನ್ನು ಒಪ್ಪಿಕೊಂಡರೂ, ' ಅರ್ಧ ಕಾಲು ಸರಪಳಿಯ ಹೊರಗೆ ಇದ್ದ ಪ್ರಯುಕ್ತ ದಂಡ ಅರ್ಧವಾದಲ್ಲಿ ಒಳಿತು! ' ಎಂದರಂತೆ. ಇಷ್ಟೊಂದು ಸರಸಪೂರ್ಣ ವ್ಯಕ್ತಿ ಶ್ರೀಯುತ ಇನಾಮದಾರರು. ಅಂಥ ಸುಮಾರು ೪೦ವರುಷಗಳಿಂದ ಬೇರುಬಿಟ್ಟ ಚಟವನ್ನು ಮುಂಬಾಯಿಗೆ ಬಂದಮೇಲೆ ಸಂಪೂರ್ಣವಾಗಿ ತ್ಯಜಿಸಿದರು. ಇದೊಂದು ಅವರ ದೃಢ ಮನಸ್ಸಿನ ವೈಷಮ್ಯಂತ.

ಸದ್ಯ ಕರ್ನಾಟಕಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾಲಯವಾಗಲಿದೆ. ಇಂತಹ ವ್ಯಕ್ತಿಯ ಸಹಾಯವನ್ನು ನಮ್ಮ ನಿಶ್ವವಿದ್ಯಾಲಯದ ಆಡಳಿತದ ಧುರೀಣರು ಕಳೆದುಕೊಳ್ಳಲಾರರೆಂದು ಆಶಿಸುವೆ. ಇವರ ಅಗಾಧ ವ್ಯಕ್ತಿತ್ವ, ಆಳವಾದ ಅನುಭವ ಇವೆಲ್ಲ, ಹೊಸದಾಗಿ ಸ್ಥಾಪಿತವಾಗಿರುವ ನಮ್ಮ ವಿಶ್ವವಿದ್ಯಾಲಯಕ್ಕೆ ಸಹಾಯಕಾರಿಯಾಗದೇ ಹೋಗವು. ಇವರಾದರೂ ತಮ್ಮ ಜೀವನದಲ್ಲಿ, ಕಡೆಯದಾಗಿ ಕರ್ನಾಟಕದಲ್ಲಿಯೇ ಒಂದು ಸ್ಥಾನ ಪಡೆದು, ಇಲ್ಲಿಯೇ ಒಂದು ವನಸ್ಪತಿಶಾಸ್ತ್ರ ಹಾಗೂ ಇತ್ತೀಚೆಗೆ ಅಭ್ಯಸಿಸಿದ ಜ್ಯೋತಿಷಶಾಸ್ತ್ರ ಇವೆರಡೂ ವಿಷಯಗಳ ಬಗ್ಗೆ ಹೆಚ್ಚಿನ ಕಾರ್ಯ ಕೈಕೊಳ್ಳಬೇಕೆಂಬ ಮನೋವೃತ್ತಿಯುಳ್ಳವರಾಗಿದ್ದಾರೆ. ಇವರು ಭಾವಿಸಿವ ಕಾರ್ಯಕ್ಕೆ ಹೊಸತಾಗಿ ನಿರ್ಮಿತವಾಗುವ ನಮ್ಮ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇವರಿಗೊಂದು ಸ್ಥಾನ ದೊರೆತಲ್ಲಿ, ಕರ್ನಾಟಕದ ಹೆಸರೇ ಬೆಳಗಬಹುದು.

ತೆರೆಯ ಮರೆಯಲ್ಲಿ ಕೆಲಸಮಾಡುತ್ತಿರುವ ಇಂತಹ ಕರ್ನಾಟಕದ ಪುತ್ರರ ಬಗ್ಗೆ ಎಷ್ಟು ಬರೆದರೂ ಕಡಿಮೆಯೆ. ಇವರು ಈಗ ರಾಣೆಬೆನ್ನೂರಲ್ಲಿಯೇ ಇರುತ್ತಾರೆ. ದೇವರು ಇಂತಹ ವ್ಯಕ್ತಿಗಳಿಗೆ ಹೆಚ್ಚಿನ ದೇಹಾರೋಗ್ಯ ದಯಪಾಲಿಸಿ, ನಮ್ಮ ಕರ್ನಾಟಕಕ್ಕೆ ಇವರ ಉಪಯೋಗವಾಗುವಂತೆ ಸಮಯ ಒದಗಿಸಬೇಕೆಂದು ನನ್ನ ಹೆಬ್ಬಯಕೆ.

ಹುಚ್ಚು ಮುದಿಕೆ

(ಕಣ್ಣ ಕತೆ) *

ಶ್ರೀ. ಬಾಗಲೋಡಿ ದೇವರಾಯ ಎಂ. ಎ. ಮಂಗಳೂರು

★

ಹೃದಯದ ಧರ್ಮವನ್ನರಿಯದ ಬುದ್ಧಿವಂತರು ಭಾವುಕರನ್ನೆಲ್ಲ ಹುಚ್ಚರ ಮಾಲಿಕೆಯಲ್ಲಿಯೆ ಸೇರಿಸಿಬಿಡುತ್ತಾರೆ. ಆದರೆ ಭಾವುಕರು ಪಶು-ಪಕ್ಷಿಗಳನ್ನೂ ಆತ್ಮೀಯಭಾವದಿಂದ ಕಂಡರೆ, ಬುದ್ಧಿವಂತರು ಆತ್ಮೀಯರನ್ನೂ ಪಶು-ಪಕ್ಷಿಗಳೆಂಬ ಎಣಿಕೆಯಿಂದ ಕಾಣುತ್ತಾರೆ. ಯಾವುದು ಒಳ್ಳೆಯದು ?

★

ನಾನು ಚಿಕ್ಕಂದಿನಲ್ಲಿ. ನಮ್ಮ ಚಿಕ್ಕಪ್ಪ (ಕಕ್ಕ) ನೊಡನೆ ಒಮ್ಮೆ ಗೋವಿಂದಹಳ್ಳಿಯ ಜಾನುವಾರ ಸಂತೆಗೆ ಹೋಗಿದ್ದೆ. ಇದಕ್ಕೆ ಈ ಸೀಮೆಯಲ್ಲೆಲ್ಲಾ 'ಜಾನುವಾರಜಾತ್ರೆ'ಯೆಂದೇ ಹೆಸರು. ನಮ್ಮ ಚಿಕ್ಕಪ್ಪನವರಿಗೆ ಪನಕರು, ಎತ್ತು-ಕೋಣಗಳ ಸಂತೆ ಅಂದರೆ ಒಂದು ತರದ ಹುಚ್ಚು ಹಿಡಿಯುತ್ತಿತ್ತು. ಹರದಾರಿ ದೂರದ ಕಾಡುಕೊಂಜೆಗಾದರೂ ಸರಿಯೆ ; ಎತ್ತಿನ ಗಾಡಿಯಲ್ಲಿ ಗಡಗಡಾಯಿಸಿಕೊಂಡೋ, ಇಲ್ಲವೆ ಚಡ್ಡಾವು ಮೆಟ್ಟಿದ ಕಾಲಲ್ಲಿ ಕೆಸರು, ಮುಳ್ಳು, ಕಲ್ಲು ನೆಟ್ಟಿಕೊಂಡೋ ಹೋಗಿಯೇ ಹೋಗುತ್ತಿದ್ದರು. ಜಾನುವಾರುಗಳ ಜಾತ್ರೆ ಬಂತೆಂದರೆ, ನಮ್ಮ ಚಿಕ್ಕಮ್ಮನಿಗಾದರೋ ರೋಷ ಉಕ್ಕೇರುತ್ತಿತ್ತು. ಪರಿಪರಿಯಾಗಿ ಹರಟಿಕೊಂಡು, ಕೊನೆಗೆ ಉಪಾಯಾಂತರದಿಂದ ಚಿಕ್ಕಪ್ಪನ ಹಣದ ತಿಜೋರಿಯ ಬೀಗದ ಕೈ ಗೊಂಚಲು "ಕಾಣೆ" (ಅದೃಶ್ಯ) ಯಾಗುವಂತೆ ಮಾಡುತ್ತಿದ್ದರು. ಆದರೂ ಚಿಕ್ಕಪ್ಪ ಎಲ್ಲಿಂದಲಾದರೂ ಆಸ್ಪ ರೂಪಾಯಿ ಒಟ್ಟುಹಾಕಿ, ಯಾತ್ರೆ ಬೆಳಸಿ, ಜಾತ್ರೆಯಿಂದ ಒಂದು ಜೋಡು ಎತ್ತನ್ನೋ, ದನವನ್ನೋ ತಂದುದು ತಂದದ್ದೆ. "ಮನೆಯನ್ನೇನು ಗೋಕುಲ-ವೃಂದಾವನ ಮಾಡುವ ಆಲೋಚನೆಯೇ ?" ಎಂದು ಚಿಕ್ಕಮ್ಮ ಗೊಣಗುತ್ತಿದ್ದರು ಈ ಎತ್ತು-ದನಗಳನ್ನು ಕೊಂಡುಕೊಳ್ಳುವ ಯಾವ ಆವಶ್ಯಕತೆಯೂ ಇತ್ತೆಂದಲ್ಲ ; ಆದರೆ ಜಾತ್ರೆಗೆ ಹೋಗುವುದೊಂದು ಹುಚ್ಚು— ವ್ಯಾಮೋಹ. ಅಲ್ಲಿ ಮುತ್ತಿನಂತಹ ಜೋಡೆತ್ತು, ಕಾಮಧೇನುವಿನಂತಹ ಆಕಳು ಕಣ್ಣಿಗೆ ಬಿದ್ದರೆ— ಶಂಖದಂತಹ ಕಿವಿ, ಬಿಲ್ಲಿನಂತಹ ಕೊಡು, ಖಂಡುಗ ಹಾಲಿನ ಕೆಚ್ಚಲು ಕಂಡರೆ— ಪಾಪ ನಮ್ಮ ಚಿಕ್ಕಪ್ಪನಿಗೆ ಕೊಳ್ಳದೆ ಏನು ಗತ್ಯಂತರ ? ಹೀಗಾಗುತ್ತಿತ್ತು.

ಆ ಬಾರಿ ನಾನೂ ಚಿಕ್ಕಪ್ಪನೊಟ್ಟಿಗೆ ಹೊರಟಿದ್ದೆ. ನಮ್ಮ ಚಿಕ್ಕಪ್ಪನಿಗೆ ಸಣ್ಣ ಸಣ್ಣ ಪೋರರಲ್ಲೂ ಆಕಳುಗಳ ಹುಚ್ಚು ತುಂಬ ಬೇಕೆಂದು ಆಶೆ. ನಾನು ಈಗಲೇನೋ ಫರಂಗಿ ಭಾಷಾ ಪಂಡಿತನಾಗಿ, ಫರಂಗಿ ವೇಷ-ವಿನ್ಯಾಸಗಳನ್ನೇ ಅಪ್ಪಿಕೊಂಡು, ಡಬ್ಬು ದೊಳಗಿನ ವಿಲಾಯತೀ ಹಾಲನ್ನೇ ಅಮೃತವೆಂದುಕೊಂಡು ಗುಟುಕಿಸುತ್ತೇನೆನ್ನಿ. ಈಗ ಚಿಕ್ಕಪ್ಪ ನನ್ನನ್ನು ನೋಡಿದರೆ ಖಂಡಿತಕ್ಕೂ "ಥೂ ಮ್ಲೇಂಛ !" ಎಂದು ಕೊಂಡಾಡುವುದು ಸರಿ. ಅದುಬಿಡಿ. ಕಾಲಧರ್ಮ.. ನನ್ನ ತಪ್ಪಿದೆಯೇ ?

ಚಿಕ್ಕಪ್ಪನೂ ನಾನೂ ಆ ಬಾರಿ ಸಂತೆಯಿಡೀ ಸುತ್ತಾಡಿದೆವು. ಚಿಕ್ಕಪ್ಪನಿಗೆ ಏನನ್ನೂ ಕೊಂಡುಕೊಳ್ಳುವ ಆವಶ್ಯಕತೆಯೇ ಇರಲಿಲ್ಲ ಆದುದರಿಂದ ಪ್ರತೀ ಜಾನುವಾರಿನ ಬಳಿಹೋಗಿ, ಛೆನ್ನು ತಟ್ಟಿ ತೊಗಲಮೇಲೆ ಕೈಯಾಡಿಸಿ, ಕೊಂಬು ಸವರಿ, ಆಕಳಾಗಿದ್ದರೆ ಕೆಚ್ಚಲನ್ನು ಸರೀಕ್ಷಿಸಿ, ಮಾರುವಾತನೊಡನೆ ಅನಂತನಾಗಿ ತರ್ಕ-ವಿತರ್ಕ ನಡೆಯಿಸಿ, ಅತನನ್ನು ರೇಗಿಸಿಯೋ ನಗಿಸಿಯೋ ಹೋಗುತ್ತಾ ಇದ್ದರು. ಆಸುಪಾಸಿನ ಊರುಗಳಿಂದ, ಘಟ್ಟದ ಮೇಲಿಂದ, ಧಾರಾಳವಾಗಿ ಕಾಲ್ನಡೆ (ಜಾನುವಾರು)ಗಳು ಬಂದಿದ್ದುವು. ನೆಲ್ಲೂರು, ಗೋವೆ ಊರುಗಳ ಭವ್ಯವಾದ ಆನೆಯಂಥಾ ದನಗಳೂ ಇದ್ದುವು. ಹಾಗೆಯೇ ಇವನ್ನೆಲ್ಲಾ ನೋಡುತ್ತಾ ತಿರುಗುತ್ತಿರುವ ಹೊತ್ತಿಗೆ, ಸಂತೆಯ ಹೊರಬದಿಯಲ್ಲಿ ಒಂದು ಮೂಲೆಯಲ್ಲಿ ಒಂದು ದೊಡ್ಡ ದನ ನಿಂತುದು ಕಂಡಿತು.

ಚಿಕ್ಕಪ್ಪನೂ ನಾನೂ ಅಲ್ಲಿಗೆ ಹೋದೆವು. ದೊಡ್ಡದಾದ ದನ. ಜಾತಿಯಲ್ಲಿ ಊರಿನದೇ ಆದರೂ, ಗೋವೆ, ನೆಲ್ಲೂರು ದನಗಳಂತಹ ವಿಶಾಲವಾದ ಶರೀರ. ದೊಡ್ಡ ದೊಡ್ಡ ಕೆಚ್ಚಲು. ಅಲಂಕಾರವಾದ ಕೋಡುಗಳು. ಕೋಡುಗಳ ಆಕೃತಿಯನ್ನು ಕಂಡೇ, ಹಾಲಿನ ಮಟ್ಟಿಗೆ ಕ್ಷೀರಸಾಗರನೇ ಎಂದು ತಿಳಿಯುತ್ತಿತ್ತು. ಆದರೆ ಮುದಿದನ. ವಯಾಯ ಹೆಚ್ಚಾದುದರಿಂದ ಮೈ ತುಸು ಶಿಥಿಲವಾಗಿ, ಇಳಿಬಿದ್ದಿತ್ತು. ಆದರ ಕೊಂಬಿನ ಬಣ್ಣ ಮತ್ತು ಜೋತುಬಿದ್ದ ಮೈಯನ್ನು ಕಂಡೇ ಮುದಿಯ ದನವೆಂದು ಸ್ಪಷ್ಟವಾಗುತ್ತಿತ್ತು.

ದನವನ್ನು ಅಂದೇ ಪರಿಷ್ಕಾರವಾಗಿ ನಿವಾಯಿಸಿದ್ದಿರಬೇಕು. ಮೈ ತೊಳೆದುದರಿಂದ, ಬೆಳ್ಳನ್ನ ಬಿಳಿಯ ಮೈ ಮಾಟವಾಗಿ ಹೊಳೆಯುತ್ತಿತ್ತು. ಕೋಡಿಗೆ ಹೂವು ಮುಡಿಸಿತ್ತು. ಕೊರಳಲ್ಲೂ ಹೂಗಳ ಮಾಲೆ, ಮತ್ತು ಗಿಣಿಗಿಣಿಲೆನುವ ಗೆಜ್ಜೆ. ಹಣೆಯಲ್ಲಿ ಶೋಭಾಯಮಾನವಾಗಿ ಕುಂಕುಮವನ್ನೂ ಬಳಿದಿದ್ದರು.

ನಮ್ಮ ಚಿಕ್ಕಪ್ಪನಿಗೆ ಕಣ್ಣಿಗೆ ಹಬ್ಬವಾಯಿತು. ಮೈಪೂಸಿ, ಕೋಡು ಸವರಿ, ಕೆಚ್ಚಲು ಹಿಡಿದು ಪರೀಕ್ಷಿಸಿದರು. ದನ ಬಹಳ ದಾರ್ಶನಿಕವಾಗಿ, ಸಮಾಧಿಸ್ಥ ಆಕಳಿನಂತೆ, ವಿರಕ್ತಜೀವಿಯಂತೆ, ನಮ್ಮ ಚಿಕ್ಕಪ್ಪನ ಪರೀಕ್ಷೆಯನ್ನು ಗಮನಿಸದೇ ನಿಂತಿತ್ತು.

---

* ಒಂದು ಡೇನಿಷ್ ಕತೆಯನ್ನೋದಿ. —ಲೇ.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ — ಮಿರಜಿಯ ವೈದ್ಯ ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಜೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೨೪ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೬–೦. ಶೀಘ್ರ-ಗುಣಕಾರಿಯಾದ ಸ್ಪೆಶಲ್‌ಡಬ್ಬಿಗೆ ೧೦–೮–೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧–೬–೦. ೩ ಡಬ್ಬಿಗೆ ೨೫–೦–೦ ಅಂಚೆಯವೆಚ್ಚ ೨–೧೩–೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮೂಲಕ: **ವಿ.ಎಸ್. ಕಾಪಸೇ** ಮು. ಪೋ. ಮಿರಜ

ಚಿಕ್ಕಪ್ಪ ಯೋಚಿಸಿದರು: 'ದನವೇನೋ ತೀರಾ ಮುದಿದನ. ಆದರೂ ಒಂದೆರಡು ಕರು ಇನ್ನೂ ಹಾಕುವುದರಲ್ಲಿ ಸಂದೇಹವಿರಲಿಲ್ಲ. ಜಾತಿಯಲ್ಲೋ ಕಾಮಧೇನುವಿನಂಥಾ ದನ. ಈ ಜಾತಿಯ ಆಕಳೊಂದಿದ್ದರೆ ಹೆಟ್ಟಿಗೊಂದು ಶೋಭೆ. ಒಂದೆರಡು ಕರು ಹಾಕಿದ ಮೇಲೆ, ಮತ್ತೆ ಗುಡ್ಡೆಯಲ್ಲಿ ಮೇದು ಹೆಟ್ಟಿಯಲ್ಲಿ ಬಿದ್ದುಕೊಂಡಿರುತ್ತದೆ. ದನ-ಕರುಗಳಿಗೇನು ಹಾಲು-ತುಪ್ಪ ಉಣಿಸಬೇಕೇ? ಪಟ್ಟೆಪೀತಾಂಬರ ಬೇಕೇ? ಭೂಮಿತಾಯಿಯ ಹಸುರು ಹುಲ್ಲೊಂದಿದ್ದರೆ ಸಾಕು. ಹೇಗೂ ಈ ದನವನ್ನು ಕೊಂಡುಕೊಳ್ಳಬೇಕು!' ಎಂದು ಚಿಕ್ಕಪ್ಪ ಅಂದುಕೊಂಡರು.

ದನದ ಪಕ್ಕದಲ್ಲೇ ದನದಂತೆಯೇ ಮುದಿ ವ್ಯಾಯದ ಹೆಂಗುಸೊಬ್ಬಾಕೆ ನಿಂತಿದ್ದಳು. ಮುದುಕಿಗೂ ದನದಂತೆಯೇ ತುಸು ಸ್ಥೂಲ ಶರೀರ. ಹಣೆಯಲ್ಲಿ ಕುಂಕುಮವಿರಲಿಲ್ಲವಾದುದರಿಂದ ವಿಧವೆಯಾಗಿದ್ದಿರಬೇಕು. ತಲೆಯ ಕೂದಲೂ ನೆರೆತು ರಜತವೇಣಿಯಾಗಿದ್ದಳು. ಈಗೊಮ್ಮೆ ಆಗೊಮ್ಮೆ ದನದ ಬಾಯಲ್ಲಿಷ್ಟು ಹುಲ್ಲು ಕಡ್ಡಿ ಇಡುತ್ತಾ, ಮೈಪೂಸುತ್ತಾ ನಿಂತಿದ್ದಳು.

ನಮ್ಮ ಚಿಕ್ಕಪ್ಪ ವಿಚಾರಿಸಿದರು: "ಹೇಗವ್ವಾ ದೆಲೆ!.... ಮುದಿ ದನ, ಮೈ ಸುಕ್ಕುಗಟ್ಟಿದೆ. ಬೆಲೆ ಹೇಗೆ ಅನ್ನುತ್ತೀರಿ?"

ಮುದುಕಿಗೆ ತುಂಬಾ ಗಾಬರಿಯಾದಂತೆ ತೋರಿತು. ಒಂದಿಷ್ಟು ತಬ್ಬಿಬ್ಬಾಗಿ "ಇಲ್ಲ, ದನವನ್ನು ಮಾರುವುದಿಲ್ಲ!" ಎಂದಳು.

ಚಿಕ್ಕಪ್ಪನಿಗೆ ಈ ವ್ಯಾಪಾರಸ್ಥರ ಚೌಕಾಶಿಯ ಚಾತುರ್ಯ ಗೊತ್ತಿಲ್ಲದೆ ಉಂಟೇ? "ಅರೆ! ಈ ಹಣ್ಣು ಮುದುಕಿನೂ ಮಾರಾಟದ ಆಟ ಕಲಿತಿದ್ದಾಳೆ" ಎಂದುಕೊಂಡು:

"ಅದು ಸರಿಯಮ್ಮಾ! ಮಾರುವುದಿದೆ ಎಂದು ತಿಳಿಯೋಣ; ಹಾಗಿದ್ದರೆ ಬೆಲೆ ಏನು?"

ಮುದುಕಿಗೆ ಇನ್ನೂ ಹೆಚ್ಚುಕಳವಳವಾದಂತೆ ಆಯಿತು. "ಇಲ್ಲ, ಈ ದನ ಮಾರಲಿಕ್ಕಿಲ್ಲ!"

"ಅರೆ! ಅಂದರೇನು? ದನದ ಯಜಮಾನರು ಬೇರೇ ಕಡೆಯಲ್ಲಿದ್ದಾರೆಯೇ? ಹಾಗಿದ್ದರೆ ನಾನು ಇಲ್ಲೇ ಕಾದಿರುತ್ತೇನೆ. ನನ್ನನ್ನು ವಿಚಾರಿಸದೆ ಮಾರಬೇಡಿ!"

ಮುದುಕಿ ಪುನಃ "ಅಯ್ಯೋ! ತಪ್ಪು ತಿಳಕೊಳ್ಳಬೇಡಿ; ಇದು ಮಾರಾಟಕ್ಕಲ್ಲ." ಎಂದು ತೊದಲಿದಳು,

ಚಿಕ್ಕಪ್ಪ ರೇಗಿ ಅಜೆ ಹೊರಟರು. "ಹಾಳು ಮುದುಕಿ! ಗಂಟಿಗೊಂದೇ ಸ್ವರವಾದರೆ ವ್ಯಾಪಾರ ಮಾಡುವುದು ಹೇಗೆ?" ಎಂದು ಗೊಣಗಿದರು.

ನಾವು ಅತ್ತಿತ್ತ ತಿರುಗಾಡುತ್ತಿದ್ದಾಗ, ಇನ್ನೂ ಕೆಲವು ಮುಂದಿ ಮುದುಕಿಯು ದನದ ಕಡೆಗೆ ಹೋಗುವುದು ಕಂಡಿತು. ನಾವು ಕುತೂಹಲದಿಂದ ನಿಂತು ನೋಡಿದೆವು. ಹೋದವರೆಲ್ಲಾ ಹಿಂದಕ್ಕೆ ಮರಳಿದರು. ಚಿಕ್ಕಪ್ಪ ಕೆಲವರೊಡನೆ ವಿಚಾರಿಸಿದರು: "ಏನಂತೆ ಬೆಲೆ, ಆ ಮುದುಕಿಯ ದನಕ್ಕೆ?" ಎಂದು. ಅದಕ್ಕೆ "ಆ ಮುದುಕಿ ಮಹಾ ಖಂಡ ಪ್ರಾಣಿ. ಬೆಲೆಯೇ ಹೇಳುವುದಿಲ್ಲ. ಎಲ್ಲ ಇರವತ್ತು, ಎಪ್ಪತ್ತೈದು, ನೂರು ನೂರಿಪ್ಪತ್ತು ರೂಪಾಯಿ ವರೆಗೂ ಬಂದೆವು. ಆದರೆ ಮೊಂಡುಮುದುಕಿ 'ಅಲ್ಲ; ಅಲ್ಲ; ಮಾರಾಟಕ್ಕಲ್ಲ' ಎಂದು ನುಂತ್ರ ಉರುಟುತ್ತ ಇದೆ. ಇನ್ನೇನು ಇನ್ನೂರು-ಮುನ್ನೂರು ಸುರಿಯಬೇಕೇ ಆ ಮುದಿ ಐರಾವತಕ್ಕೆ" ಎಂದರು ಅವರೆಲ್ಲ.

ನಮ್ಮ ಚಿಕ್ಕಪ್ಪನಿಗೆ ಕೊನೆಗೂ ಆಶೆ ತಡೆಯಲಾಗಲಿಲ್ಲ. ಮುದುಕಿಯಿದ್ದಲ್ಲಿಗೆ ಹೋಗಿ, "ಕೊನೆಯ ಮಾತು ಹೇಳುತ್ತೇನೆ. ನೂರೈವತ್ತು ನಷ್ಟಪಟ್ಟುಕೊಂಡು ಕೊಡುತ್ತೇನೆ. ಮುದಿ ಆಕಳಿಗೆ ಜೋಡೆತ್ತಿನ ಕ್ರಯವಾಯಿತು. ಆಗಲಿ. ಈ ದನದ ಮೇಲೆ ನನಗೆ ಮೋಹ ಬಿದ್ದು ಹೋಗಿದೆ!"

ಆ ಮುದುಕಿ ಪುನಃ ಅದೇ ಗಾಯತ್ರಿ ಜಪಿಸಬೇಕೇ? "ಈ ದನ ಮಾರಲಿಕ್ಕಿಲ್ಲ."

"ಅರೇ ಮುದುಕಿ! ಹಾಗಿದ್ದರೆ, ಈ ದನವನ್ನು ಇಲ್ಲಿ ಏಕೆ ತಂದಿದ್ದೀಯೆ? ಜಾತ್ರೆ ತೋರಿಸಲಿಕ್ಕೇನು?"

ಮುದುಕಿ ಬಹಳ ತಬ್ಬಿಬ್ಬಾದಳು. ಕೈಹಿಸುಕಿಕೊಂಡು, ಸೆರಗು

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಪುಟ್ಟ ಮಕ್ಕಳು ಮತ್ತು ಹೊಟ್ಟೆ ಸರಿಯಾಗಿ ತುಂಬದೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಎಳೆದುಕೊಂಡು, ತನ್ನ ಬೆಳ್ಳಿಯ ಸರಿಗೆಯ ತಲೆಕೂದಲನ್ನು ನೇವರಿಸಿಕೊಂಡು, ಅಂಜುತ್ತಂಜುತ್ತ "ಹೌದು" ಎಂದಳು

ಮತ್ತೆ ಅಂಜಿ ಅಂಜಿ ಹೇಳಬೇಕಾದುದನ್ನೆಲ್ಲಾ ಹೇಳಿದಳು. ತನ್ನಿಂದ ಇವರಿಗೆಲ್ಲಾ ತುಂಬಾ ತೊಂದರೆಯಾಗಿದೆ—ಎಂದು ಆಕೆಗೆ ನಾಟಿತ್ತು. ಮುದಿಯರು ಮಾತಿಗೆ ತೊಡಗಿದರೆ ಮಿತಿ ಎಂಬುದಿದೆಯೇ ?

ಆಕೆ ಗೋವಿಂದ ಹಳ್ಳಿಯ ಮೂರು ಮೈಲಿ ಆಚೆಯ ಹುಲಿಬೈಲಿನಲ್ಲಿ ಇರುವುದಂತೆ ಬೆಟ್ಟದ ಬುಡದಲ್ಲೇ, ಕಾಡಿನ ನೆರೆಯಲ್ಲೇ ಗುಡಿಸಿಲಂತೆ. ಮುದುಕಿಯ ಗಂಡ, ಆಕೆಗೆ ಎಂಟು ವರುಷ ಪ್ರಾಯ ವಿರುವಾಗಲೆ ತೀರಿಕೊಂಡಿದ್ದನಂತೆ. ಅಣ್ಣ-ತಮ್ಮಂದಿರು, ಅತ್ತಿ, ನಾದಿನಿ, ತಾಯಿತಂದೆ ಎಲ್ಲಾ ಒಬ್ಬೊಬ್ಬರಾಗಿ ವೈಕುಂಠ ಸೇರಿ ಕೊಂಡಿದ್ದರಂತೆ. ಇಲ್ಲವೇ ಎಲ್ಲೋ ದೂರದ ಪರವೂರಲ್ಲಿ ಕಣ್ಮರೆ ಯಾಗಿದ್ದಿರಬೇಕು. "ಈ ಹಾಳು ಜೀವನವೊಂದರ ಮೇಲೆ ಯಮ-ಧರ್ಮರಾಯನಿಗೂ ಕನಿಕರ ಹುಟ್ಟಲ್ಲ ನರಳಿ ನರಳಿ ಬದುಕೂ ಅಂತ ಹಣೆಯಲ್ಲಿ ಬರೆದಿದ್ದರೆ ಯಾರೇನು ಮಾಡಲಿಕ್ಕಾಗುತ್ತದೆ ?" ಈಗ ಆಕೆಗೆ ಈ ಲೋಕದಲ್ಲಿ ನಂಟರು ಇಷ್ಟರು ಅಂದರೆ, ತಾನು ಗಂಡನ ಮನೆ ಹೊಕ್ಕಾಗ, ತಾಯಿಯ ಮನೆಯಿಂದ ತಾನು ತಂದ ಈ ಆಕಳು ಮಾತ್ರ. ತಾನು ಹೊಸ ಸೊಸೆಯಾಗಿ ಮನೆ ಹೊಕ್ಕಾಗ, ಜೊಚ್ಚಲ ಕರುವಿನೊಡನೆ ಬಂದ ದನ, ಈಗ ತನ್ನಂ-ತೆಯೇ ಮುದಿಯಾಗಿದೆ. ತನ್ನ ತಾಯಿ, "ಮಗಳ ಹೊಟ್ಟೆ ತಂಪಾಗಿಡಲಿ" ಎಂದು ಕಳಿಸಿದ ದನ, ಇಪ್ಪತ್ತು ವರ್ಷ ಆಕೆಯೊಡನೆ ಬಾಳಿಕೊಂಡಿದೆ. ದೇವರೇನೋ ಆಕೆಯ ಹೊಟ್ಟೆಗೆ ಉರಿ ಹಚ್ಚ ದರೂ, ಈ ಗೋಮಾತೆ ತಂಪು ಕಾಣಿಸದೆ ಇರಲಿಲ್ಲ. ಕೆಲವು ಕಾ ಆಕೆಯನ್ನು ಸಾಕಿದುದೂ ಈ ಪುಣ್ಯಾತ್ಮಗಿತ್ತಿ ಹಸುವೇ. ದಿನ ರಾತ್ರಿ, ಸುಖ, ದುಃಖ, ಚಳಿ, ಬೇಸಗೆಗಳೆಷ್ಟನ್ನೋ ಈ ಬಾಲ್ಯ ಸಂ ಯರು ಒಟ್ಟೊಟ್ಟಿಗೆ ಅನುಭವಿಸಿ, ಈಗ ಮೆಲುವಾಗಿ, ವಯಃ ತುಂಬಿ ಹೆಣ್ಣಾಗಿದ್ದರು. ಈಗ ಈ ಮುದುಕಿಯ ಕಷ್ಟ-ಸುಖ ಕಣ್ಣೀರು-ನಗೆ, ವ್ಯಸನ ಉಲ್ಲಾಸಗಳಿಗೆಲ್ಲಾ ಈ ಮೂಕ ಸಖಿಯೆ ಪಾಲುಗಾರ್ತಿ. ಅದು ಒಂದಿದ್ದರೆ ತನ್ನ ಅಮ್ಮನ ನೆರಳು ಪಕ್ಕ ದಲ್ಲಿದ್ದಂತೆ ಆಗುತ್ತಿತ್ತಂತೆ.....ಪಾಪ, ಆ ಕಾಡಿನ ಬದಿಯಲ್ಲಿ ಬೆಟ್ಟದ ಬುಡದ ಆ ಗುಡ್ಡಗಾಡು ಊರಿನಲ್ಲಿ, ಆ ದನಕ್ಕೆ ಒಂಟಿ-ಯಾಗಿ ಇರಲು ಎಷ್ಟು ಬೇಸರವಾಗುತ್ತಿರಬೇಕೋ ? ಹುಲಿ ಬೈಲಿನಲ್ಲಿ ಚಿರತೆ-ಕತ್ತೆಕಿರಬಗಳ ಕಾಟ ಬಹಳ. ಮನೆಯ ಹಿತ್ತಿಲ ಹೊರಗೆ ದನಕರು ಸೇರಿದರೆ, ಎಲುಬು-ತೊಗಲು ಉಳಿದರೇ ಮಹಾ ಪುಣ್ಯ..... ..... ತಾನಾಯಿತು, ತನ್ನಂತೆಯೇ ಮುದಿಯಾದ ತನ್ನ ಯಜಮಾನಿತಿಯಾಯಿತು ...."ಹಣೆಯಬರಹ ಕೆಟ್ಟ ಮನೆ-ಹಾಳ ನನಗೆಯೇ ಆ ಕೊಂಪೆಯಲ್ಲಿ ಮನುಷ್ಯರ, ನಂಟರ ಇಷ್ಟರ ಮುಖ ನೋಡದೆ, ಹಂಬಲು ಹೊಟ್ಟೆಯನ್ನು ಕೊರೆಯುತ್ತಿರೆ. ಪಾಪ ! ಅದೋ ಬಾಯಿಬಾರದ ಪ್ರಾಣಿ..... ..... ತನ್ನ ಜಾತಿಯ ಪ್ರಾಣಿಗಳನ್ನೆಲ್ಲಾ ಕಂಡು, ಚೆಲ್ಲಾಟವಾಡೋಣ, ಕಲೆಯೋಣ ಎಂದು ಎಷ್ಟು ಆಸೆಯಿರಬೇಕೊ ? ನಮ್ಮಂತೆಯೇ ಅವಕ್ಕೂ ಜಾತ್ರೆ ಉತ್ಸವ ಸಂತೆ ಅಂದರೆ ಹುಚ್ಚು ಕುದುರುವುದಿಲ್ಲವೇ ಪಾಪ ! ಮೂಕಜಂತು. ಆಸೆ ಹೊಟ್ಟೆಯೊಳಗೆಯೇ ಉಳಿಯುತ್ತೆ ನನಗೇನೋ ತೋರಿತು. ಎಲ್ಲಾದರೂ ಪುಣ್ಯವಂತರ ಹಟ್ಟಿಯೊಳ್ ಗಿರುತ್ತಿದ್ದರೆ, ಹತ್ತಾರು ಆಕಳು-ಕರುಗಳೊಡನೆ ಚೆಲ್ಲಾಟವಾಡಿ-ಕೊಂಡು ಸುಖವಾಗಿ ಇರುತ್ತಿದ್ದ ಜಂತು, ನನ್ನಂತಹ ದರಿದ್ರ ಮನೆಹಾಳಯ ಮಾಡಿನಡಿಯಲ್ಲಿ ಇದ್ದುದರಿಂದ, ಮಸಣದಲ್ಲಿದ್ದಂತೆ ಇರಬೇಕಲ್ಲ !..... ..... ಒಮ್ಮೆ ಒಂದಷ್ಟು ಆಕಳು-ಕರುಗಳೊಡನೆ ಕಲೆಯಲಿ, ಬೆರೆಯಲಿ, ಆಡಲಿ ಚೆಕ್ಕಂದವಾಡಿ ಸುಖ-ದುಃಖ ವಿಚಾರಿಸಿಕೊಳ್ಳಲಿ ಅಂತ ಜಾತ್ರೆಗೆ ಕರತಂದೆ.....ಪಾಪ ! ಅದಕ್ಕೂ ಆಸೆಯಲ್ಲವೇ ?..... ವರುಷಕ್ಕೊಮ್ಮೆಯಾದರೂ ಅದಕ್ಕೂ ಜಾತ್ರೆ ಹಬ್ಬ ಹುಣ್ಣಿಮೆ ಅಂತ ಬೇಡವೇ ?..... ಅದಕ್ಕೇ ಒಂದಿಷ್ಟು ಬಿಸಿನೀರಲ್ಲಿ ಮಿಂಯಿಸಿ, ಹೂವು ಮುಡಿಸಿ, ಕುಂಕುಮ ಇಟ್ಟು..... ನನ್ನಂತೆಯೇ ಹಣೆಬರಹ ಕೆಟ್ಟಾಕೆಯಲ್ಲ ಆಕೆ..... ಅವಳ ಹಣೆಯ ಕುಂಕುಮಕ್ಕೆಯಾವ ಕಲ್ಲೆದೆಯ ದೇವರೂ ಏನೂ ಮಾಡಲಾರ....." ಎಂದು ಹೇಳಿ ಮುದುಕಿ ಗುಸುಗುಸೆಂದು ಅಳಲಾರಂಭಿಸಿತು, ಸೆರಗಿನ ಮೂಲೆಯಿಂದ ಮೂಗನ್ನು ತಿಕ್ಕುತ್ತಾ.

ನಮ್ಮ ಚಿಕ್ಕಪ್ಪ ಮಂತ್ರಮುಗ್ಧರಂತೆ ಇದುವರೆಗೆ ಈ ಪುರಾಣ-ವನ್ನೇನೋ ಕೇಳಿದರು. ಕೊನೆಗೆ ಮಾತ್ರ "ಛೀ ! ಈ ಕಾಡು ಹರಟೆಯ ರಾಮಾಯಣ ಕೇಳುವ ಹೊತ್ತಿಗೆ ಎಷ್ಟು ಭಂಗಾರ-ದಂಥಾ ಆಕಳು ಮಾರಿಹೋದುವೋ ಏನೋ.... ಈ ಹುಚ್ಚು ಮುದುಕಿಯ ಹಾಳು ಹರಟೆ" ಎಂದು ಗೊಣಗಿ, ನನ್ನನ್ನು ಕರೆದು ಕೊಂಡು ಆಚೆ ಹೋದರು.

ಶಿಕ್ಷಣದಲ್ಲಿ ಹೊಸ ದೃಷ್ಟಿ

(ಒಂದು ಚರ್ಚಾತ್ಮಕ ಪ್ರಬಂಧ)

ಶ್ರೀ. ರಾ. ರಂ. ದೇಶಪಾಂಡೆ ಬಿ. ಎ., ಬಿ. ಟಿ. ಧಾರವಾಡ

★

ನಮ್ಮ ಮಕ್ಕಳಿಗೆ ದೊರೆಯುವ ಶಿಕ್ಷಣ ಪ್ರಗತಿಪರವಾದದ್ದು ಇರಬೇಕು. ಈ ಪ್ರಗತಿ ಮಕ್ಕಳಲ್ಲಿಯ ವೈಯಕ್ತಿಕವಾದ ಗುಣಗಳನ್ನೂ ಕರ್ತೃತ್ವಶಕ್ತಿಯನ್ನೂ ಹೊರಗೆಡಹುವಂತಹದಾಗಿರಬೇಕು.

ಶಿಕ್ಷಣವು ಜೀವನಕ್ಕೆ ಅತ್ಯಂತಿಕವಾಗಿ ಸಂಬಂಧಿಸಿದ ವಿಷಯ. ಆ ವಿದ್ಯಾರ್ಥಿಯ ಮನಸ್ಸಿನ ಒಲವನ್ನನುಸರಿಸಿ ಅವನ ಸಂಘಟನಾಶಕ್ತಿ, ಪ್ರತಿಭಾಶಕ್ತಿ, ವಾಕ್‌ಶಕ್ತಿಗಳ ಕಡೆಗೆ ವಿಶೇಷವಾಗಿ ಗಮನವಿಟ್ಟರಬೇಕು. 'ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವ-ಪ್ರಕಟನೆಗೆ ಪೂರ್ಣ ಅವಕಾಶ ದೊರೆಯುವಂತಹ ವಾತಾವರಣ ಶಿಕ್ಷಣದಲ್ಲಿ ಉಂಟಾಗಬೇಕಾಗಿದೆ' ಎಂದು ಹಳಪೇಟ ಚಿಂತಾಮಣಿರಾಯರು ಜಯಂತಿಯಲ್ಲಿ ಪ್ರಕಟವಾದ ತಮ್ಮ ಲೇಖನವೊಂದರಲ್ಲಿ ಉದ್ಗಾರ ತೆಗೆದಿದ್ದಾರೆ. ಈ ಉದ್ಗಾರದ ಹಿನ್ನೆಲೆಯನ್ನು ತಿಳುಹಿ, ಶರಣೋಪಾಯವನ್ನು ಸೂಚಿಸುವುದೇ ಈ ಲೇಖನದ ಉದ್ದೇಶ.

ದುರ್ದೈವದಿಂದ ನಮ್ಮ ದೇಶದ ಮುಂದಾಳುಗಳು ಶಿಕ್ಷಣಕ್ರಮಕ್ಕೆ ಹೆಚ್ಚು ಮಹತ್ತ್ವಕೊಟ್ಟಿದ್ದಾರೆ ಹೊರತು, ಶಿಕ್ಷಣದ ವಿಷಯಗಳ ಕಡೆಗೂ ಶಿಕ್ಷಣ ಹೊಂದತಕ್ಕ ಮಗುವಿನ ಕಡೆಗೂ ವಿಶೇಷ ಮಹತ್ತ್ವಕೊಟ್ಟಿಲ್ಲ. ಶಿಕ್ಷಣದ ವಿಷಯವನ್ನು ಶಿಕ್ಷಣಶಾಸ್ತ್ರಕ್ರಮವನ್ನನುಸರಿಸಿ ಚೆನ್ನಾಗಿ ಅಭ್ಯಾಸಮಾಡಿದವರು ನಮ್ಮ ದೇಶದಲ್ಲಿ ಯಾರೂ ಇಲ್ಲವೇನೋ ಎಂದೆನಿಸುವಂತಿದೆ ಇಂದಿನ ಪರಿಸ್ಥಿತಿ.

ಶಿಕ್ಷಣದಲ್ಲಿ ಮುಖ್ಯಸ್ಥಾನವು ಮಗುವಿಗೆ; ಮಗುವಿನ ಮಾನಸಿಕ ಮತ್ತು ಶಾರೀರಿಕ ಬೆಳೆವಣಿಗೆಗೆ ತಕ್ಕ ಶಿಕ್ಷಣಕೊಡುವ ವಾತಾವರಣವನ್ನು ಒದಗಿಸಿಕೊಟ್ಟು, ಅದರ ಸ್ವಂತದ ಬೆಳೆವಣಿಗೆಗೆ ಸಹಾಯಮಾಡುವುದು, ಸರಕಾರದ— ಸಮಾಜದ— ಮಾತಾಪಿತೃಗಳ— ಆದ್ಯ ಕರ್ತವ್ಯವಾಗಿದೆ. ಆದರೆ ಮಗುವಿನ ಕಡೆಗೆ ನೋಡುವ ಇವರೆಲ್ಲರ ದೃಷ್ಟಿಯು ದೂಷಿತವಾದದ್ದಿರುವುದೇ ಶಿಕ್ಷಣದ ಪ್ರಗತಿಗೆ ಅಡ್ಡವಾಗಿ ನಿಂತಿದೆ. ಚಿಕ್ಕಮಗುವಿನ ಮನಸ್ಸಿಗೆ ಹಿಡಿಸದೇ ಇದ್ದ ಧಾರ್ಮಿಕ, ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣದ ತಳಹದಿಯ ಮೇಲೆ ಶಿಕ್ಷಣಕೊಡುವುದೇ ನಮ್ಮ ದೇಶದ ಸಾಂಸ್ಕೃತಿಕ ಅಧೋಗತಿಗೆ ಕಾರಣವಾಗಿದೆ. ನಮ್ಮ ಪೂರ್ವಜರೂ ಮತ್ತು ಈಗಿನ ನಮ್ಮ ಮುಂದಾಳುಗಳೂ 'ಶಿಕ್ಷಣದ ಉದ್ದೇಶ ನಿಜವಾದ ನಾಗರಿಕರನ್ನು ತಯಾರಮಾಡುವುದು' ಎಂದು ಪದೇ ಪದೇ ಹೇಳುತ್ತಬಂದಿದ್ದಾರೆ— ಈ ಧ್ಯೇಯಕ್ಕನುಸರಿಸಿ ಮಗುವನ್ನು ಉತ್ತಮ ನಾಗರಿಕನನ್ನಾಗಿ ಮಾಡುವ ಶಿಕ್ಷಣಕ್ರಮಗಳನ್ನು ಹುಡುಕಿ ತೆಗೆಯುವುದರಲ್ಲಿ ಹೆಚ್ಚು ಶ್ರಮವನ್ನು ವಹಿಸಿದ್ದಾರೆ; ವಹಿಸುತ್ತಲೂ ಇದ್ದಾರೆ. ಆದರ ಪರಿಣಾಮವಾಗಿ **ಮೂಲಶಿಕ್ಷಣ**ವೆಂಬ ಶಿಕ್ಷಣಕ್ರಮದ ಉತ್ಪತ್ತಿಯಾಗಿದೆ; ಆದರೆ ಮಗುವು ಒಂದು ವ್ಯಕ್ತಿಯೆಂದು ತಿಳಿದು, ಅದನ್ನು ಪೂರ್ಣವಾಗಿ ಅಭ್ಯಾಸಮಾಡಲು ಯಾರೂ ಮುಂದೆಬಂದಿಲ್ಲ. ಮೂಲಶಿಕ್ಷಣಕ್ರಮದಲ್ಲಿ ವ್ಯಕ್ತಿ ಮತ್ತು ಸಮಾಜ ಇವೆರಡರ ಬೆಳೆವಣಿಗೆಯ ಸಂಬಂಧದಲ್ಲಿ ಭೇದವನ್ನೇ ಎಣಿಸಿಲ್ಲ. ಆದರೆ ವಸ್ತುಸ್ಥಿತಿಯು ಬೇರೆಯಿದೆ.

ಈ ವಿಷಯದಲ್ಲಿ **ಶ್ರೀಮಾನ್ ಡಿ. ವಿ. ಗುಂಡಪ್ಪನವರು** ಹೇಳಿದ ಕೆಲವು ಮಾತುಗಳನ್ನು ಓದುಗರ ಚಿತ್ತಕ್ಕೆ ತಂದುಕೊಡಲು ಬಯಸುತ್ತೇನೆ. ಅವರು ಹೇಳುವುದೇನೆಂದರೆ:— 'ಪ್ರತಿಯೊಬ್ಬ ವ್ಯಕ್ತಿಯು ಕೆಲವು ವಿಷಯಗಳಲ್ಲಿ ಪ್ರಜಾಸಮುದಾಯದೊಳಗೇ ಒಂದಾಗಿ ಸೇರಿಕೊಂಡಿರತಕ್ಕವನು. ಇನ್ನು ಕೆಲವು ವಿಷಯಗಳಲ್ಲಿ, ಹಾಗೆ ಸೇರದೆ ತಾನೇ ಬೇರೆಯಾಗಿ ನಿಂತಿರತಕ್ಕವನು. ಪ್ರತಿಯೊಬ್ಬ ಮನುಷ್ಯನ ಜೀವನಕ್ಷೇತ್ರದಲ್ಲಿಯೂ ಕೊಂಚ ಭಾಗ ಸರ್ವಜನ ಸಾಮಾನ್ಯವಾದದ್ದಾಗಿರುತ್ತದೆ. ಇಂಥ ಜೀವನಕ್ಷೇತ್ರದಲ್ಲಿ (೧) ಉದ್ಯೋಗ, (೨) ಗ್ರಾಮಶುಚಿತ್ವ, (೩) ಸಂಚಾರಸೌಲಭ್ಯ, (೪) ವಿದ್ಯಾಸೌಕರ್ಯ ಮುಂತಾದುವುಗಳು ಬರುತ್ತವೆ. ಈ ಸಾರ್ವಜನಿಕ ಭಾಗಗಳಲ್ಲಿ ಮನುಷ್ಯಜೀವನ ಪ್ರಜಾಸಮುದಾಯದ ವ್ಯವಸ್ಥೆಗೆ ಒಳಪಡಬೇಕಾದುದು. ಇಲ್ಲಿ ವ್ಯಕ್ತಿಯ ಮಾತು ಸಮಷ್ಟಿಯ ಮಾತಿನಲ್ಲಿ ಕರಗಿಹೋಗುತ್ತದೆ. ಆದರೆ ಮನುಷ್ಯಜೀವನದ ಇನ್ನೊಂದು ಭಾಗದಲ್ಲಿ ಸಮಷ್ಟಿಗೆ ಅಷ್ಟು ಅಧಿಕಾರ ಸಲ್ಲಲಾರದು. ಮನುಷ್ಯಜೀವನದ ಇನ್ನೊಂದು ಭಾಗದಲ್ಲಿ (೧) ಮನುಷ್ಯನ ಆಂತರಂಗ ವ್ಯಾಪಾರಗಳು, (೨) ಅವನ ವ್ರತ-ಪೂಜೆಗಳು, (೩) ಅವನಿಗೆ ಇಷ್ಟವಾದ ಸಂಗೀತ, (೪) ಅವನಿಗೆ ಬೇಕಾದ ಸಾಹಿತ್ಯ, (೫) ಅವನ ರುಚಿಗೆ ತಕ್ಕ ಆಹಾರ-ವಿಹಾರಗಳು ಬರುತ್ತವೆ. ಇವು ಕೇವಲ ವೈಯಕ್ತಿಕವಾದುವುಗಳು. ಈ ವ್ಯಕ್ತಿರುಚಿಪ್ರಧಾನಗಳಾದ ವೃತ್ತಿ-ವ್ಯಾಪಾರಗಳೇ ಜೀವನಕ್ಕೆ ಒಂದು ಬೆಲೆಯನ್ನು ಒಂದು ಸಾರ್ಥಿಕ್ಯವನ್ನು ಕೊಡತಕ್ಕುವ. ಇವುಗಳ ಬೆಳೆವಣಿಗೆಗೆ ತಕ್ಕದ್ದಾದ ಶಿಕ್ಷಣವು ನುಂದೆ ಸಮಾಜ-ಪೋಷಕವಾಗುತ್ತದೆ. ನಮ್ಮ ಮಕ್ಕಳಿಗೆ ಕೊಡಬೇಕೆಂದಿರುವ ಶಿಕ್ಷಣಕ್ರಮದಲ್ಲಿ ಮನುಷ್ಯಜೀವನದ ಸರ್ವಜನ ಸಾಮಾನ್ಯಕ್ಷೇತ್ರಕ್ಕೆ

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಆರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಸಂಬಂಧಿಸಿದ ವಿಷಯಗಳೇ ಹೆಚ್ಚಾಗಿವೆ. ಅದುದರಿಂದ ಅದು ವ್ಯಕ್ತಿಶಿಕ್ಷಣವಲ್ಲ. ಅದು ವ್ಯಕ್ತಿಮತಿಪ್ರಧಾನವಾದುದಿಲ್ಲ. ಅದರಿಂದ ವ್ಯಕ್ತಿಯ ಜೀವನಕ್ಕೆ ಬೆಲೆಯೂ ಇಲ್ಲ. ಸಾರ್ಥಿಕ್ಯವೂ ಇಲ್ಲ.

ಹೀಗೆಯೆಂದ ಮೇಲೆ ಇದಕ್ಕೆ ಉಪಾಯವೇನು? ನಮ್ಮ ದೇಶದ ಶಿಕ್ಷಣ ಫಲಕಾರಿಯಾಗಬೇಕಿದ್ದರೆ, ನಮ್ಮ ದೇಶದ ಮಕ್ಕಳ ಶಿಕ್ಷಣವೇ ಬದಲಾಗಬೇಕು. ಶಿಕ್ಷಣಕ್ರಮದಲ್ಲಿ ನೂತ್ರ ಅಲ್ಲ; ಶಿಕ್ಷಣದಲ್ಲಿ ಮುಖ್ಯ ಪಾತ್ರವನ್ನು ವಹಿಸುವ ಮಗುವಿನ ಕಡೆಗೆ ನೋಡುವ ನಮ್ಮ ದೃಷ್ಟಿಕೋನವೇ ಬದಲಾಗಬೇಕು. ಮಗುವಿನ ವ್ಯಕ್ತಿತ್ವವನ್ನು ಅಭ್ಯಾಸ ಮಾಡಲು ಅನುಕೂಲ ಮಾಡಿಕೊಡುವಂತಹ ಮಾನಸಶಾಸ್ತ್ರದ ಅಭ್ಯಾಸಕ್ಕೆ ಅನುಕೂಲ್ಯಬೇಕು. ನಮ್ಮ ಮುಂದಾಳುಗಳಿಗೆ ಗೊತ್ತಿರುವುದು ಗುಂಪಿನ ಮಾನಸಶಾಸ್ತ್ರವೇ ಹೊರತು, ಶಿಶುವಿನ ಎಲ್ಲ ಚಿಂತಸ್ತುಗಳ ಬೆಳೆವಣಿಗೆಗೆ ಸಂಬಂಧಪಟ್ಟ ಮಾನಸಶಾಸ್ತ್ರವಲ್ಲ.

ಪಾಶ್ಚಾತ್ಯದೇಶದ ಅನುಕರಣ ಬಿಡಬೇಕೆಂಬ ಒಂದು ಮನೋವಿಕಾರವಿಂದ, ನಮ್ಮ ದೇಶದ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ಆಗಬಾರದು. ಪಾಶ್ಚಾತ್ಯದೇಶದ ರಾಜ್ಯನಿಬಂಧನೆಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ದೇಶದ ರಾಜ್ಯ ನಿಬಂಧನೆಯನ್ನು ತಯಾರಿಸಲಾಗಿದೆಯೆಂದಮೇಲೆ, ಆ ದೇಶದ ರಾಜ್ಯ ನಿಬಂಧನೆಗಳಿಗೆ ತಳಹದಿಯಾದ ಶಿಕ್ಷಣದ ವಿಷಯವಾಗಿ ವಿಚಾರಿಸುವುದನ್ನು ಬಿಟ್ಟು ಬಿಡುವುದು ಅಸ್ಪಶಸ್ತವಾದ ಮಾತು. ಪಾಶ್ಚಾತ್ಯದೇಶದ ಶಿಕ್ಷಣಕ್ರಮದಲ್ಲಿ ಬದಲಾವಣೆಯಾದದ್ದು ಹೇಗೆ? ಅದು ಈಗ ಯಾವ ಮಾರ್ಗವನ್ನನುಸರಿಸಿರುತ್ತದೆ ಎಂಬುದನ್ನು ಕೆಳಗಿನ ಅವತರಣಿಕೆಯಿಂದ ತಿಳಿಯಬಹುದು.

"Early interest in the study of the child thus came not from an interest in the child but from an interest in the best method of education to develop him into a useful citizen. But the child should be studied as an individual not as an educational problem"

ಎಂದರೆ: ಮೊಟ್ಟಮೊದಲು ಮಗುವಿನ ವಿಷಯದಲ್ಲಿ ಆಸಕ್ತಿ ಹುಟ್ಟಿದ್ದು ಮಗುವಿನ ಮಾನಸಿಕ ಮತ್ತು ಶಾರೀರಿಕ ಬೆಳೆವಣಿಗೆಯ ವಿಷಯಗಳನ್ನು ಅಭ್ಯಾಸ ಮಾಡುವುದಕ್ಕಾಗಿ ಅಲ್ಲ; ಮಗುವನ್ನು ಉಪಯುಕ್ತ ನಾಗರಿಕನನ್ನಾಗಿ ಹೇಗೆ ಮಾಡಬೇಕೆಂಬ ಕ್ರಮದ ವಿಷಯಕ್ಕೆ. ಮಗುವನ್ನು ಒಂದು ವ್ಯಕ್ತಿಯೆಂದು ಅಭ್ಯಾಸ ಮಾಡಿಕಲ್ಲದೆ ಅದು ಒಂದು ಶೈಕ್ಷಣಿಕ ಸಮಸ್ಯೆಯೆಂದಲ್ಲ. ಶಿಕ್ಷಣಕ್ಕೆ ಮಗುವು ಹುಟ್ಟಿದೆಯೋ? ಅಥವಾ ಹುಟ್ಟಿದ ಮಗುವಿಗೆ ಶಿಕ್ಷಣವೋ? ಎಂಬುದನ್ನು ಬಲ್ಲವರು ವಿಚಾರ ಮಾಡುವ ಕಾಲ ಈಗ ಬಂದಿದೆ. ಪ್ರಜೆಗಳಿಗಾಗಿ ಅರಸನೋ? ಅರಸನ ಸಲುವ ಪ್ರಜೆಗಳೋ?—ಎಂಬ ಪ್ರಶ್ನೆಯನ್ನು ಎಲ್ಲ ದೇಶಗಳು ಬಿಡಿಸಿ ಬಂದು, ಈಗ ಪ್ರಜಾಪ್ರಭುತ್ವ ರಾಷ್ಟ್ರನಿರ್ಮಾಣದಲ್ಲಿ ಎಲ್ಲ ದೇಶಗಳೂ ಹೆಣಗಾಡುತ್ತಲಿವೆ. ಇಂತಹ ಪ್ರಜಾಪ್ರಭುತ್ವದ ಕಾಲದ ವ್ಯಕ್ತಿಶಿಕ್ಷಣದ ಮಹತ್ತ್ವವನ್ನು ಅರಿಯುವುದು ಅತಿ ಮಹತ್ವವಾದುದು.

ಔದ್ಯೋಗಿಕ ಶಿಕ್ಷಣವನ್ನು, ಈಗಿದ್ದ ಸಾಹಿತ್ಯಪ್ರಧಾನವಾ ಶಿಕ್ಷಣದ ಒಂದು ಅಂಗವೆಂದು ಕಲಿಸಬಾರದು—ಎಂಬುದು ಆ ಅಭಿಪ್ರಾಯ. ಔದ್ಯೋಗಿಕ ಶಿಕ್ಷಣವನ್ನು ಪ್ರತ್ಯೇಕವಾಗಿ ಕೊಡಬೇಕಾದರೆ, ಅದು ವಿದ್ಯಾರ್ಥಿಗಳ ಮತ್ತು ಕಸಬುದಾರರ ಚಿತ್ತವನ್ನು ಸೆಳೆಯುವಂತೆ ಮಾಡಬೇಕು. ಆಯಾ ಉದ್ಯೋಗಗಳ ಬಗ್ಗೆಯ ಒಂದು ವಾಙ್ಮಯ ನಿರ್ಮಾಣವಾಗಬೇಕು. ಹೀಗೆ ಹೇಳುವುದರ ತಜ್ಞತೆಯ ಹೆಸರಿನಲ್ಲಿ ಮೆರೆವ ಅರ್ಧಬೆಂದ ಮತವಲ್ಲ. ಇದರ ವ್ಯಕ್ತಿರುಚಿಪ್ರಧಾನ ಶಿಕ್ಷಣದ ಆವಶ್ಯಕತೆಗೆ ಸಂಬಂಧಪಟ್ಟದ್ದು 'ಉದ್ಯೋಗಸ್ಥನಾಗಬೇಕೋ? ಅಥವಾ ಸಾಹಿತಿಯಾಗಬೇಕೋ? ಎಂದು ಹಂಬಲಿಸುವ ಅರ್ಧ ಕಲಿತವರ ವಿಚಾರಸರಣಿಯು ಇದಕ್ಕೆ ಅಡ್ಡ ಬರುವುದು ದುರ್ದೈವದ ಸಂಗತಿ.

ಶಿಕ್ಷಣವು ಪ್ರಗತಿಪರವಾದದ್ದು ಇರಬೇಕು. ಪ್ರಗತಿಯು ಮಗುವಿನಲ್ಲಿಯ ಹೊಸ ಗುಣಗಳನ್ನು ಮತ್ತು ಕರ್ತೃತ್ವಶಕ್ತಿಯನ್ನು ಹೊರಗೆಡಹುವಂತಹ ಸ್ಥಿತ್ಯಂತರವುಳ್ಳದ್ದಾಗಬೇಕು. ಹಳೆಯದೆಲ್ಲವೂ ಒಳಿತೆಂದು ತಿಳಿದು, ಹಳೆಯ ಕಾಲದ ವಿಚಾರಗಳನ್ನೇ, ಹೊಸಕಾಲದಲ್ಲಿ ವಿಚಾರನೂಡುವ ಮಕ್ಕಳಲ್ಲಿ ತುಂಬುವ ಪ್ರಯತ್ನವು ಪ್ರಗತಿಯೆನಿಸಲಾರದು. ನಮ್ಮ ಸಂಸ್ಕೃತಿಯು ಹಳೆಯದಾದರೂ, ನಮ್ಮ ಮಕ್ಕಳು ಹೊಸಕಾಲದಲ್ಲಿ ಇರುವವರೂ ಬೆಳೆಯುವವರೂ ಎಂಬ ಮುಂದೋರಣವನ್ನು ವಿಚಾರಶೀಲರು ತಳೆದರೆ—ನಮ್ಮ ದೇಶದ ಶಿಕ್ಷಣವು ಪ್ರಗತಿಹೊಂದಿ ನವಸಂಸ್ಕೃತಿಯ ನಿರ್ಮಾಣವಾಗಿ ಬಹುಕಾಲ ಬಾಳಬಹುದು.

ಮಹಾತ್ಮಾ ಗಾಂಧೀಯವರು ಕೂಡ, ಚಿಕ್ಕ ಮಕ್ಕಳ ಶಿಕ್ಷಣವು ಶಾಲೆಗೆ ಹೋಗುವುದಕ್ಕಿಂತ ಮುಂಚೆ ಕಿಂಡರಗಾರ್ಟನ್ ಅಥವಾ ಮಾಂಟೀಸೋರಿ ಪದ್ಧತಿಯಂತೆ ಇರಬೇಕು, ಹಿಂದುಸ್ತಾನದಲ್ಲಿ ಈ ಬಗೆಯ ಶಿಕ್ಷಣಕೊಡಲು ಪ್ರಯತ್ನಮಾಡಿದವರಿಗೆ ಸರಕಾರದಿಂದ ಸಹಾಯಧನವು (ಗ್ರ್ಯಾಂಟ್) ದೊರೆಯಬಹುದೆಂದು ಹೇಳಿ, ಶಿಕ್ಷಣದ ಮೂಲವಾದ ಮಗುವನ್ನೇ ಅಲಕ್ಷ್ಯಮಾಡಿಬಿಟ್ಟಿದ್ದಾರೆ. ಎಂದ ಮೇಲೆ ಅವರು ಪಾಶ್ಚಾತ್ಯ ಶಿಕ್ಷಣವನ್ನೂ ಶಿಕ್ಷಣಕ್ರಮವನ್ನೂ ಒಳಿತೆಂದು ಒಪ್ಪಿಕೊಂಡಂತಾಯಿತು. ಆದುದರಿಂದ ಪ್ರತಿಯೊಬ್ಬರೂ ಭಾವನಾಪರವಶರಾಗದೆ, ಶಿಕ್ಷಣದ ವಿಷಯಕ್ಕೆ ಸಾರಾಸಾರ ವಿಚಾರಮಾಡುವುದು ಒಳಿತು.

⊙ ಮಗಳ ಮದುವೆ ⊙

(ಏಕಾಂಕ ನಾಟಕ)

ಶ್ರೀ ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

ಪಾತ್ರಗಳು:—

೧.	**ರಂಗರಾಯ:**— ಕಚೇರಿಯ ಕಾರಕೂನ	....	ವಯಸ್ಸು	೪೫
೨.	**ಸೀತಾಬಾಯಿ:**— ರಂಗರಾಯರ ಹೆಂಡತಿ	....	,,	೪೦
೩.	**ರಾಮು:**— ರಾಯರ ಮಗ— ಕಾಲೇಜಿನ ವಿದ್ಯಾರ್ಥಿ	....	,,	೨೩
೪.	**ಕುಸುಮಾ:**— ರಾಯರ ಮಗಳು	....	,,	೧೮
೫.	**ಶ್ಯಾಮು:**— ಎಂ. ಎ. ವಿದ್ಯಾರ್ಥಿ	....	,,	೨೫

ಕಾಲ:— ವರ್ತಮಾನ

ಗನೆಯ ಪ್ರವೇಶ

[ರಸ್ತೆಗೆ ಹೊಂದಿದ ಮನೆ. ಕಂಪೌಂಡ್ ಗೋಡೆಗೆ ಹೊಂದಿಕೊಂಡು ಬೆಳೆದ ಗುಲಾಬಿ ಕಂಟಿಗಳು. ಗೇಟು ದಾಟಿ ಒಳಗೆ ಬಂದೊಡನೆ, ಎಡಕ್ಕೆ ತುಸು ದೂರದಲ್ಲಿ ಎರಡು ಪೋಲಿಗಳು ಕಾಣುತ್ತಿವೆ. ಎದುರಿಗೆ ನೋಡಿದರೆ, ಮನೆಯಲ್ಲಿ ಗೋಡೆಗೆ ತೂಗು ಹಾಕಿದ ಗಡಿಯಾರ ಕಾಣುತ್ತಿದೆ. ಒಳಗಿನ ಮನೆಗೆ ಹೋಗುವ ಬಾಗಿಲು ತೆರೆದಿದೆ. ಪಡಸಾಲೆಯಲ್ಲಿ ಒಂದೂ ಕುರ್ಚಿ, ಟೇಬಲ್ ಇಲ್ಲವೇ ಇಲ್ಲ. ಗೂಟಕ್ಕೆ ಅರಿವೆಗಳನ್ನು ತೂಗು ಹಾಕಿದ್ದಾರೆ. ಒಂದು ಗಡಿಯಾರವನ್ನು ಅಸ್ಪಷ್ಟವಾಗಿ ಹಾಸಿದೆ. ಸಮಯ ಸಂಜೆಯ ೫॥ ಗಂಟೆ; ತಡೆ ತೆರೆದಾಗ—ಸೀತಕ್ಕ ಒಲ್ಲೇ ಗಡಬಡಿಯಿಂದ ಏನನ್ನೋ ಸಾನ್ಸಿನಿ ನಡುಮನೆ ಸೇರುವಳು. "ಏನರೆ ಹರವ್ಯಾವಪಾ ಹುಡುಗರು" ಎಂಬ ಧ್ವನಿಯೊಡನೆ ಒಳಗೆ ಹೋದಾಗ, ರಂಗರಾಯ ಹೊರಗಿನಿಂದ ಪ್ರವೇಶಿಸುತ್ತಾನೆ. ವಯಸ್ಸು ೪೫ ಇರಬಹುದು. ಕೈಯಲ್ಲಿ ವಾಕಿಂಗ್‌ಸ್ಟಿಕ್. ಬಿಳಿಯ ರುಮಾಲು, ಯೋಚನೆಯಲ್ಲಿ ತಸ: ಹಣೆಯು ವೇಲೇದೆ. ಒಳಗೆ ಬಂದು ರುಮಾಲು ಗೂಟಕ್ಕೆ ಇಟ್ಟ.]

ರಂಗರಾಯ:— ಏನ ಹರಿವ್ಯಾವಪಾ ಹುಡುಗರೂ! ಛಿ ಛಿ. (ಒಂದೂ ಗುಡಾರ ಸಂಪದಿಸುವಾಗ)

ಸೀತಾಬಾಯಿ:— ಏನದು ಸಪ್ಪಳ? (ತುಸು ತಡೆದು) ಅಯ್ಯ! ಇನಸ...? ಗುಡಾರ ಇದೇ ಈಗ ನೆಟ್ಟಗಮಾಡಿ ಹೋಗೇನಿ; ಮತ್ತ ಮುದಡಿಯಾಗೇದ. ಏನ ಹರವತಾವಂತೀನಿ ಹುಡುಗರು!.....

ರಂಗ:— ನಾನೂ ಅದs ಅಂತೀನಿ. ಈ ತೀನಿ ದೋನಿ ಅಂತ ಇಬ್ಬರೂ ಉತ್ತರಕ್ಕ ಪ್ರತಿ ಉತ್ತರ ಕೊಡೋದೇ ಆಗೇದ. ಒಂದ ದಿವಸಾನೂ ಪಡಸಾಲಿ ಸ್ವಚ್ಛ ಇರೋಹಾಂಗಿಲ್ಲ. ಯಾರಾದರೂ ಬಂದರ ಏನಂದಾರು? ನಾ ಆಲ್ಲೆ ಕಚೇರ್ಯಾಗ ಏನ ಅಮಲಿಟ್ಟೀನಿ? ಅದರ ಮಾತೇನು! ಮನ್ಯಾಗ ನನ್ನದು ಏನೇನೂ ನಡಿಯೋಹಾಂಗಿಲ್ಲ.

ಸೀತಾ:— ಮನಿ ಅಂದರ ಕಚೇರೇನು ಅಲ್ಲಾ.....ಹುಡುಗರು ಇದ್ದ ಮನೀ ಗದ್ದಲ ಇರೋದೆ! ಇದೇ ಈಗ ಕುಸುಮಾ ಕಸಾ ಉಡಗಿ, ಗುಡಾರಹಾಸಿ ಹೋಗ್ಯಾಳ! ಅಲ್ಲಾ, ಅದೆಲ್ಲ ಇರಲಿ, ವರದ ಹಕೀಕತ್ತು ಎಲ್ಲಿಗೆ ಬಂತು? ಅವರ್ಯಾರೋ ಇದ್ದಾರ.... ಅವರನ್ನ ಕೇಳಬೇಕು.... ಅಂತ ಅಂದು ಹೋಗಿದ್ರಿ, ಇನತ್ತ ಕಚೇರಿಗೆ ಹೋಗೋಮುಂದ!

ರಂಗರಾಯ:— ನನಗ ಈ ವರದ ಸಲುವಾಗಿ ತಲಿಬ್ಯಾಸರ ಬಂದಽದ್ಮನೋಡು. ನಾನೂ ಹೋಗಿ ವರದ್ಮವಿಚಾರ ಮಾಡೋದಕ್ಕs ಗೋತ್ರ ಒಂದಾಗೊವಕ್ಕs ಕೂಡಬೇಕ? ಸುಮ್ಮನೇ ಬಂದೆ. ಇಲ್ಲದಿದ್ದರ ಈ ಕೆಲಸ ಸಾಧ್ಯ ಆಗತಿತ್ತು ನೋಡು. ಮತ್ತ.... ಇವತ್ತs ನಮ್ಮ ದೇಸಾಯಿ ತಿಮ್ಮಣ್ಣನಿಂದಲೂ ಪತ್ರ ಬಂತು. ಅವರು ಹೇಳಿದ ವರದ್ದು ಲಗ್ನ ಅತಂತ. ನಮ್ಮ ಕುಸುಮಾನೂ ಅವರಕ್ಕ ಮೂಗು ಮುರದಿಲ್ಲನ್ನು. ಇರಲಿ, ಮತ್ತೇನರ ವಿಚಾರ ಮಾಡೋಣಂತ; ಒಂದು ಕಪ್ಪು ಚಹಾ ಮಾಡಲ!

ಸೀತಾ:—ಚಹಾನ? ಒಳಗ ಕುಸುಮಾ ಚಹಾನs ಮಾಡಲಿಕ್ಕೆ ಹತ್ಯಾಳ. ಕಾಲೇಜ ಕಲಿಯೋ ಹುಡಿಗಿ; ತಾಸಿಗೊಮ್ಮೆ ಚಹಾ ಬೇಕು. ಮ್ಯಾಲೆ ಓದಲಿಕ್ಕೆ ಪುಸ್ತಕ ಬೇಕು. ವರಾ ಸಿಗವೊಲ್ಲವೂ ಅಂತ ಕಾಲೇಜಕ್ಕ ಹಾಕಿದ್ರಿ, ಅವರ ಇನ್ನೂ ಏನೂ ಇಲ್ಲ,

ರಂಗರಾಯ:— ಆಕಿಗೆ ತಾಸಿಗೊಮ್ಮೆ ಚಹಾ ಬೇಕಾದ್ರ— ನಿನಗ ಎಲ್ಲಾರ ಸಂಗತೀ ಒಮ್ಮೊಮ್ಮೆ ಬೇಕು! ಇರಲಿ. ಆಕೀ ಇಂಟರ್ ಪರೀಕ್ಷಾನರ ಆಗ್ಲಿ. ಎಲ್ಲೆಲ್ಲೂ ವರಾ ಸಿಗವೊಲ್ಲವು. ಬೆಳಗಾಂವಿ ಗೋವಿಂದರಾಯರಿಗೆ ಹೇಳೇನಿ. ಕೂಸನೂರ ಸುಬ್ಬಣ್ಣಗೂ ಹೇಳೇನಿ. ಯಾರಿಗೆ ಎಷ್ಟ ಹೇಳಿದರೂ ಎಲ್ಲೆಲ್ಲೂ ವರಾ ಸಮಂಜಸ ಸಿಗವೊಲ್ಲವು. ಉತ್ಪನ್ನ ಇದ್ದರ ವಿದ್ಯಾ ಇಲ್ಲ: ವಿದ್ಯಾ ಇದ್ದರ ಉತ್ಪನ್ನ ಇಲ್ಲಾ.

ಸೀತಾ:— ಕುಸುಮಾಗ 'ನೀ ಆಟಾಸಾಟಾ ಆಡಬ್ಯಾಡ....'

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನಿಕೆಗಳನ್ನು ಹೋಗಲಾಡಿಸುವದಕ್ಕಾಗಿ ತಾಕ್ಟರ ಮತ್ತು ವೈದ್ಯರ ಕಡೆಗೆ ವ್ಯರ್ಥ ಸಾರಿ ಹೋಗುವದು ತಪ್ಪಿಸಲಿರುವುದಿಲ್ಲ — ಮತ್ತು ಅನ್ಯೋಂದು ಅನಿವಾರ್ಯತೆಯೂ ಇರುವುದಿಲ್ಲ. ಕೂಪ್ಸೋಲ್ಡ್, ವಾಂತಿ, ಅಜೀರ್ಣ, ಗ್ಯಾಸ್, ಮೈನೋವು, ಕಳ್ಳುನೋವು, ಮಲ್ಲರ ನಾಡ ಬೇನೆ ಇತ್ಯಾದಿ ಅಷ್ಟೆ ಚಿಲ್ಲರೆ ಬೇನೆಗಳಿಗೆಲ್ಲ

ಜವೇರಿಯನ್ ಜೇನಿನ ಮಿಕ್ಶ್ಚರ್ ಸ್ವಲ್ಪಮಟ್ಟಿಗೆ ಸುಲಭವಾಗಿ ಕಾರಿಸಿ ಮತ್ತು ಅಮೂಲ್ಯವಾಗಿ ಕಾಪಾಡಿಕೊಂಡ ಬಂದ ಅಮೃತಸಮಾನ ಮೊಳು ಔಷಧದ ಮೇಲೆ ಕಾಪಾಡಿಕೊಂಡ ಇವರ ಅಪಾರ ಅನುಭವದಿಂದಾಗಿ ತಾಳ್ಮೆಯಿಲ್ಲದಾಗ ಮೂವಾಗಲೂ ಇವರ ಔಷಧೋಪಚಾರಗಳಿಂದ ಇವರ ಒಂದು ಬಾಟ್ಲಿಯನ್ನು ಮನೆಯಲ್ಲಿಟ್ಟುಕೊಳ್ಳುವುದು ಅತ್ಯಂತ ಕ್ಷೇಮಕರವೆಂದು ಕಷ್ಟಕಾಲದಲ್ಲಿ ಕಷ್ಟಕರವೆಂದು ಅಭಿಪ್ರಾಯಪಡುತ್ತಾರೆ. (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ಮೂಮ್ಯಾಕ್ಟರ ಲಕ್ಷಣವಾಗಿ ಕಾಮ್ಯಕ್ಟರ್ಡಿಯೂ (ಕಿಸರ ವ್ಯಾಪಾರ ಸಂಬಂಧವು) ಬಳ್ಳಾರಿ ಅಂಗಡಿಯಲ್ಲಿಯೂ ದೊರೆಯುತ್ತದೆ.

ಪತಿ ಮಹಿ ಜವೇರಿಯನ ಮಳಿಗೆ
ಮುಂಬಾಯಿ

ಅಂತ ಹೇಳಿ ಬಿಟ್ಟೇನಿ ನಾ. ಅದೇನೋ ಝಾನೀಸನಟಿಸಂತಾದು ಓದಕೊಂಡು ಹೋಗತಿದ್ಲು.

ರಂಗರಾಯ:— ಪಹ ಹೆಹ! (ನಕ್ಕು) ಬ್ಯಾಡಮಿಂಟನ್ ಆಟ ಆದು. ಹೆಣ್ಣುಹುಡುಗರು ಆಡತಿರತಾವ. ಅದರಾಗ ಏನದ ಬಿಡು, ಆಡಲಿ!

ಸೀತಾ:— ಎಲ್ಲಾದಕ್ಕೊಂದು ನಿಮ್ಮದು ತಿರುಗಿ ಮಾತಕ! ಗಂಡುಹುಡುಗರಾಗ ಹೋಗೋದು ನೆಟ್ಟಗಲ್ಲಾ— ಅಂತ ಮೊನ್ನೆ ನೀವಕ ಅಂದಿದ್ದಿರಿ. ಆ ನಮ್ಮ ರಾಮನ ಗೆಳ್ಯಾ ಶ್ಯಾಮನ ಸಂಗತೀಲೆ ಕುಸುಮಾ ಏನೋ ನಾಲ್ಕು ಮಾತು ಮಾತಾಡಿದರ— ನೀವು ಮಾರೀ ಗುಮ್ಮನ ಮಾಡಿಕೊಂಡು, ಊಟೆಲ್ಲದಕ ಕಚೇರಿಗೆ ಹೋದ್ರಿ. ಅವಕ್ಕ ನಮಗ ನಿನುಗ ನ್ಯಾಯ ಆಗೋದು! ಅವರ ನೀವು ಏನಾ. ದರೂ ಅನ್ನರಿ; ಶ್ಯಾಮ ಬಹಾಳ ಒಳ್ಳೇ ಹುಡುಗ... ಮೂರು ನಾಲು ಪರ್ಸಾತು, ನಾನೋಡೇ ನೋಡತೀನಿ.

ರಂಗರಾಯ:— ನೀ ಒಳೇ ಚೆಲೋ ಹೇಳೋ ಆತಿ! ಅಲ್ಲಾ, ನಿನಗ ಇಷ್ಟರೆ ತಿಳಿಬಾರದ? ಗಂಡುಹುಡುಗರ ಸಂಗಡ ಯಾಕ ಇವರ ಚರ್ಚಾ? ನಮ್ಮ ಆಚಾರ ವಿಚಾರ ಬೇರೆ.... ತಿಳಿತಿಲ್ಲೊ?....ನಾಳಿ ಮಾ ಸಿಗಲಿಕ್ಕಿಲ್ಲ ಮಾ! ಕಾಲೇಜ ಬಿಡಸಬೇಕೂ ಅಂತ ನನ್ನ ಮನಸ್ಸಿನಾಗ ಅದ; ಆದರೆ ವರಾರ್ಥಿಯಾಗಿ ಹೋದಾಗ 'ಏನು ಕಲೀತಾಳ ನಿನ್ನ ಹುಡಗಿ?—' ಅಂತ ಬಿತ್ತರ ಪೊನಲನೇ ಪ್ರಶ್ನೆ!

ಸೀತಾ:— ಕಲಿಯೋದಕ್ಕ ಅಲ್ಲ ಏನು... ನೀವು ಮಗಳ ಕಾಲೇಜಕ್ಕ ಕಳಿಸೋದು? ಅಯ್ಯ! ಇದೇನು, ಸುಳ್ಳ ಸು ದುಡ್ಡು ಹಾಳು!

ರಂಗರಾಯ:— ಒಟ್ಟು ದುಡ್ಡು ಹಾಳು ಸು! ಕಲಿಸೊ ದೊಂದು; ಮ್ಯಾಲೆ ವರದಕ್ಷಣೆ! ಹೆಣ್ಣು ಹಡೆದವರ ಗೋಳು ದೇವ ಬಲ್ಲಾ.

ಸೀತಾ:— ನಾ ಮೊದಲೇ ಹೇಳಿದ್ದೆ. ಯಾಕ ಈ ಕಾಲೆ ಹುಚ್ಚು ನಿಮಗಕ ಅಂತ. ನೀವ್ಯಾಕ ಕೇಳತೀರಿ ನನ್ನ ಮಾತ ಕಳಿಸಿದಿರಿ. ಗಂಡುಹುಡುಗರಾಗ ಹೆಣ್ಣುಹುಡುಗರು ಅಡ್ಡಾಡೋ ಭಲೋನಕ.... ನೀವ ಹೇಳ್ರಿ?

ರಂಗರಾಯ:— ಹೌದು! ನನಗ ಈಗ ಹೊಳೀತು. ನೀ ನನಗ ಸತ್ಯಾದರ್ಶನಾ ಮಾಡಿಸಿದಿ ನೋಡು! ಅವಕ್ಕ ಅಂತ ಹೆಂಡಂದಿರಿಗೆ ಅರ್ಧಾಂಗೀ ಅಂತ! ಅಹಹ (ಗಹಗಹಿಸಿ ನಗುವನ

ಸೀತಾ:— ಇನ್ನ ಕಾಲೇಜ ಸಾಕು! ಕುಸುಮಾ ಮನೀ ಕೆಲ ಕಲಕೊಂಡ ನಾಳೆ ಬಾಳ್ವೆ ಚಿಲೋ ಆದೀತು. ಕೇವಲ ಪುಸ್ತ ಓದಿದರ ಬುದ್ಧಿ ಬರತದೇನು ಎಲ್ಲ್ಯಾದರೂ? ನಾ ಏನ ಕಲತೆ ನೀವಕ ಹೇಳ್ರಿ?

ರಂಗರಾಯ:— ನೀ ಕಲಿತಿದ್ರ ನಾ ಮನೀ ಹಿಡಿತಿದ್ದೆ.... ನ ನೌಕರೀ ನಿನಗ ಬಿಟ್ಟು! ನಮ್ಮ ಕಚೇರ್ಯಾಗಿನ ಸಿಪಾಯರು ನಿ ಅಂಜದಷ್ಟು ನನಗೇನೂ ಅಂಜೋದಿಲ್ಲ. ನಿನ್ನ ಆಮಲು ದೊಡ್ಡದ

ಸೀತಾ:— ನಿಮಗ ಇಷ್ಟೊಂದು ನನ್ನ ಅಡಿಕೋಬೇಕೂ ಅನ್ನೋ ಹಟ ಇದ್ದರ ಇರಲಿ! ನಾಳೆ ನಿಮ್ಮ ಮಗಳು ಹ್ಯಾ ತನ್ನ ಗಂಡನ ಮನ್ಯಾಗ ಮನೀ ನಡಿಸಿಕೊಂಡು ಹೋಗತ ನೋಡೋಣಾಂತ. (ಎಂದು ಸಡುಸಡುಸೆದು ಬಾಗಿಲಿಗೆ ತಿರುಗುವ ಕುಸುಮಾ ಬಹಳ ಗಡಬಿಡಿಯಿಂದ ಎದುರಿಗೆ ಬರುವಳು).

ಕುಸುಮಾ:— ಏ ಅವ್ವಾ..... ಹಾಲು ಉಕ್ಕತಾವ ಬಾ ಲಗೂನ ಬಾ!

ಸೀತಾ:— ಯಾಕ? ಇಳಸಲಿಕ್ಕೆ ಬರೋದಿಲ್ಲೇನು ನಿನ ಆ ಝೂರೀಸನಟು ಬೀಸೋದು ಹ್ಯಾಂಗ ತಿಳೀತದ.....ಥಕ ಕುಣಕೋತ! ಹಾಲಿಳಸಲಿಕ್ಕೆ, ಅಲ್ಲಿಂದ ಇಲ್ಲಿಗೆ ನನ್ನ ಕರೀ ಬಂದಾಳ.

ಕುಸುಮಾ:— ಕೈ ಬಹಳ ಸುಟ್ಟಿತು; ನಾನರೇ ಏನ ಮ ನೀನಕ ಹೇಳು? ಲಗೂನಕ ಬಂದಾರಕ ಬಾ ಒಳಗ!

ಸೀತಾಬಾಯಿ:— ಕೈ ಸುಡತದಕ ಮಳ್ಳಿ! (ಸೋರಿಗೆ ತಿನಿಸು) ತಿರುಗಿ ನಿನ್ನಷ್ಟ ವರುಷಕ್ಕ ನಾ ರಾಮನ್ನ ಹಡೆದಿ ನಿನಗಿನ್ನೂ ಒಲೀನ್ಯಾಲಿನ ಹಾಲಿಳಸಲಿಕ್ಕೆ ಬರೂದಿಲ್ಲ.

ರಂಗರಾಯ:— ನಿನ್ನ ಬಡದಾಟ ಸಾಗಲಿ! ನಾನಕ ಹ ಇಳಸತೀನಿ. ಹಾಲಿನ ರೊಕ್ಕಾ ಕೊಡೋರು ನೀವಿಬ್ಬರೂ ಅ (ಎಂದು ಪ್ರಯುಕ್ತಿಸುವಾಗ).

ಸೀತಾ:— (ತಡೆದು) ಅನುಭವ ಎಂದ ಬರಬೇಕು ಹೇಳ

ಕುಸುಮಾಗ ಕೈಮಾಡಿ) ಹೋಗು ಸಾಕು; ಇಕ್ಕಳಾ ಹಿಡಿದು ಇಳಿಲಾ! (ಎಂದು ನಗುವಳು).

ಕುಸುಮಾ :— ಅವ್ವಾ, ಇಕ್ಕಳ ಮುಸರಿ ಆಗೇದ. ನೀನು ಹ್ಯಾಂಗ ಇಳಸತೀ ಇಳಸಬಾರವ್ವಾ!

ರಂಗರಾಯ :— (ಹಣೆ ಹಣೆ ಬಡಿದುಕೊಂಡು) ನೀವು ಇಬ್ಬರೂ ಮೂರ್ಖರಿದ್ದೀರಿ.— ನಿಮಗ ಬುದ್ಧಿ ಅನ್ನೋದಿಲ್ಲಾ ಅಂತೀನಿ—

ಸೀತಾಬಾಯಿ :— ನಾನೂ ಅದನ ಅಂತೀನಿ.... ಈಕಿಗೆ ಬುದ್ಧಿಮಿಲ್ಲಾ ಅಂತ.

ಕುಸುಮಾ :— ಬುದ್ಧಿಲ್ಲಂತ, ಅದು ಹ್ಯಾಂಗ? ಇಲ್ಲದಿದ್ದರ ನ್ಯಾಟ್ರಿಕ್ ಒಂದನ ವರ್ಷಕ್ಕ ಪಾಸ ಆಗತಿದ್ನಿ?

ರಂಗರಾಯ :— ಎಲಾ ಇವರ....! ಹಾಲಿಳಸೋದು ಬಿಟ್ಟು ಬುದ್ಧಿಮ್ಯಾಲೆ ಇಬ್ಬರೂ ಲಕ್ಚೀರ ಕೊಡತಾರಲ್ಲೋ!—ನಿಮ್ಮ ತಲಿ! ಸರಿ ಬಾಗಿಲು ಬಿಡು ನನಗ.... ಒಳಗ ಹೋಗತೀನಿ!

ಸೀತಾಬಾಯಿ :— ಆಗಲಿ ನಿಮ್ಮ ಕಸರತ್ತು. ಒಲೀ ಮುಂದ ಕೂಡೋ ಹುರುವು ಬಂದ್ಹಾಂಗ ಕಾಣಸ್ತದ. ಮಗಳಿಗೆ ಬುದ್ಧೀ ಹೇಳೋದು ಬಿಟ್ಟು ತಾವು ಬುದ್ಧೀ ಕಲೀತಾರಂತ....ಕಲೀರೀಲಾ! ನನ್ನದೇನು ಹೋಗೋದು? ಅದಕ್ಕs ವರಾ ಹುಡಿಕಿ ಈಕಿನ್ನ ಒಟ್ಟಹಾಕರೀ ಅಂತ ಹೇಳತೀನಿ.... ಅದರೂ ಸುಮ್ಮನ ಕಾಲಹರಣ ನಡಿಸ್ಯಾರ.

ರಂಗರಾಯ :— ಕಾಲಹರಣ—ಹಾಲುಹರಣ! ಮುಂದೆ ನನ್ನ ದುಡ್ಡು ಹರಣ! ಈ ಮೂರೂ ನನ್ನ ಪ್ರಾಣಹರಣ ಮಾಡುವಾಗ ನಿಮ್ಮ್ಹಂಥವರಿಗೆ ನನ್ನ ಶರಣ ಶರಣ!

ಕುಸುಮಾ :— ಅಪ್ಪಾ ಎಂಥಾ ಛಂದ ಎಲಿಟರೇಶನ್ ಕೂಡಿಸಿ ಮಾತನಾಡಿದಿ! Wonderful Speech ನೋಡಪಾ!

ಸೀತಾ :— ಶಗದ್ಲು ಬಾಯಿ. ಎಲ್ಲಿ ಮಾಡ್ಯಾರ ರೇಶನ್ನು ಈ ಸಾರೆ? ರೇಶನ್ನಿನ ಸುಖಾ ತನಗೇನು ಗೊತ್ತೋ! ಒಂದೂ ಪೂರ್ತಿ ಮಾತು ತಿಳಿಯೋ ಹಾಂಗಿಲ್ಲ.... ಈಕೀವು ನಮಗ!

ರಂಗರಾಯ :— ಸರಿ, ನಿಮ್ಮ ತಲೀ ಪೂರ್ಣ ಕೆಟ್ಟಿದೆ ಈ ಹೊತ್ತು (ಎದ್ದುತ್ತ ಒಳಗೆ ಹೋಗಿಬಿಡ ತ್ತಾನೆ).

ಸೀತಾಬಾಯಿ :— (ಗಂಡಾರವನ್ನು ಕಾಲಿನಿಂದ ಸರಿಸುತ್ತ) ಇನ್ನ ನೋಡು ಕುಸುಮಾ, ನಾ ನಿನಗ ಹೇಳಿರತೀನಿ .....ನೀನು ಲಗೂ ಲಗೂ ಎಲ್ಲಾ ಕೆಲಸಾ ಕಲಕೊಳ್ಳಲಿಕ್ಕೇ ಬೇಕು. ಅವರು ಗಂಡಸರು. ಇದೆಲ್ಲಾ ತಿಳಿಯೂದಿಲ್ಲ. ಯಾಕ ಸುಮ್ಮನs ನಿಂತೆಲ್ಲ? ನಾಯೇನು ಗೊಂಬೀಮುಂದ ಮಾತಾಡತೀನೇನು?

ಕುಸುಮಾ :— ಅವ್ವಾ, ನಿನ್ನ ಮಾತು ಪೂರ್ಣ ಕೇಳದ ನಾ ಹ್ಯಾಂಗ ಉತ್ತರಾ ಕೊಡಬೇಕು?

ಸೀತಾಬಾಯಿ :— ಪ್ರಶ್ನೀ, ಉತ್ತರಾ! ಬರೇ ಇನs ನಿನ್ನ ಬಾಯಾಗ! ಸುಟ್ಟ ಸಾಲ್ಯಾಗಿನ ಮಾತು ಮನ್ಯಾಗ ನೀ ಎಂದೂ ಮಾತಾಡಬ್ಯಾಡಾ— ತಿಳೀತಿಲ್ಲೊ?

ಕುಸುಮಾ :— (ಮುಗುಳು ನಗೆಸಗುತ್ತ) ಅವ್ವಾ, ನನಗ ನಗೀ ಬರತsದ ನಿನ್ನ ಮಾತು ಕೇಳಿ. "ಮನೀ ಕೆಲಸ ಬರೂದಿಲ್ಲ—ಅದನ್ನ ಕಲೀರಿ" ಅಂತ ಹಗಲೆಲ್ಲಾ ಒಟಗುಟತೀದಿ. ಮನೀ ಕೆಲಸದ ಸಾಲೀನರ ತಗಿಯಲಾ; ನಿನ್ನಂಥಾ ಹೆಣ್ಣುಮಕ್ಕಳಿಗೆ ಉದ್ಯೋಗರೇ ಆದೀತು! ಈಗಿನ ಸರಕಾರ ಬೇಕಾದ್ದಕ್ಕ ಗ್ರ್ಯಾಂಟು ಕೊಡತsದ.

ಸೀತಾಬಾಯಿ :— ಹಿರೇರು ಕಿರೇರು ಅನ್ನೋ ಭೇದಾ ಮರತsಬಿಟ್ಟೀ ಏನು? ಗಂಡಸರು ಮಾತಾಡಿದ್ಹಾಂಗ ನೀ ಮಾತಾಡ್ಲಿಕ್ಕೆ ಕಲತೀಯೇನು? ಗಂಟು ಕೊಡತದಂತ ಸರಕಾರ! ಸರಕಾರದ ಕಟ್ಟೀ ಪತ್ತೋದೊಂದು ಉಳದsನ ನಿಮ್ಮಂಥಾ ಮಕ್ಕಳನ್ನು ಪಡೆದು! (ಎಂದು ನಟ್ಟಿಸುರುಬಿಟ್ಟು) ಸಾಕ ಬಾ ನಮ್ಮವ್ವಾ ಒಳಗ! (ಒಳಗೆ ಹೋಗುವಳು).

ಕುಸುಮಾ :— (ತಂದೆಯ ರುವಾಲ ಗೂಟಕ್ಕಿಟ್ಟು) ನನ್ನ ಲಗ್ನದ ಸಲುವಾಗಿ ಎಷ್ಟು ಪ್ರಯತ್ನ ನಡಿಸ್ಯಾರಪ್ಪ.... ಏನ ಕಥೀ.... ನಮ್ಮ ಜನಕ್ಕ ತಮ್ಮದು ತಮಗ ಗೊತ್ತಿಲ್ಲ. ನಮ್ಮ ಲಗ್ನದ ಗೊಡವೀ ನಮಗs ಯಾಕ ಬಿಡಬಾರದು? (ಎಂದು ಒಳಗೆ ಹೋಗುತ್ತಾಳೆ)

— ಸಾವಕಾಶವಾಗಿ ತೆರೆ ಉರುಳುವುದು —

೨ನೆಯ ಪ್ರವೇಶ

[ಅದೇ ಮನೆಯ ಅಂಗಣದಲ್ಲಿರುವ ಒಂದು ಕೋಣೆಯಲ್ಲಿ, ರಾಯರು ಮಂಗರಾಮನು ಏನೋ ಓದುತ್ತ ಕುಳಿತಿರುತ್ತಾನೆ. ನಡುನಡುವೆ ಮೆಲ್ಲ ಬಾಗಿಲಿಗೆ ಬಂದು ನಿಂತು ಹೋಗುತ್ತಿರುವಳಾ— ಶ್ಯಾಮನು ಬರುತ್ತಾನೆ.]

ದಿ ನೂತನ ಆಯುರ್ವೇದ
ಕಾರ್ಯಾಲಯ ಲಿ., ವಿಜಾಪೂರ

ಎಲ್ಲ ಬಗೆಯ ಆಯುರ್ವೇದ ಔಷಧಗಳನ್ನು ಶಾಸ್ತ್ರಶುದ್ಧವಾಗಿ ಸಿದ್ಧಗೊಳಿಸುವ ಕರ್ನಾಟಕದ ಸರ್ವಾಂಗ ಪರಿಪೂರ್ಣವಾದ ಕಾರಖಾನೆ. ಅನೇಕ ವೈದ್ಯ-ಡಾಕ್ಟರರು ನಮ್ಮ ಔಷಧಗಳನ್ನು ಪ್ರಯೋಗಿಸಿ ಒಳ್ಳೇ ಗುಣಕಾರಿಯೆಂದು ಪ್ರಶಂಸಿಸಿದ್ದಾರೆ. ಎಲ್ಲ ಪ್ರಕಾರದ ಭಸ್ಮ-ರಸಾಯನ-ಮಾತ್ರೆ-ಆಸವಾರಿಷ್ಟ ಕಷಾಯಗಳು — ಆವಲೇಹ-ತೈಲ ಮೊದಲಾದ ಔಷಧಗಳಿಗೆಲ್ಲ ಇಂದೇ ಬರೆಯಿರಿ.

ಕರ್ನಾಟಕದಲ್ಲೆಲ್ಲ ಸ್ವಾಕಸ್ಪರು ಬೇಕಾಗಿದ್ದಾರೆ.

೩೦-೩೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಚಾವಿನಿಂದ ಮೂತ್ರದವರೆಗಿನ—ಸ್ವಪ್ನ — ವೀರ್ಯಸ್ಖಲನ ಆಗುವುದು, ಸ್ವರತಿಯ ದುರಭ್ಯಾಸದಿಂದ ಉಂಟಾದ ಬಲಹೀನತೆ, ಪರಿಣಾಮಶಕ್ತಿ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆದಟ್ಟುತ್ತಿ, ವೀರ್ಯವನ್ನು ಶಕ್ತಿಯುತವಾಗಿಸುವುದು. ಮಲಬದ್ಧಿಯಾಗಿ ತುಂಬ ತಪಿಸಿಯೂ ಆಗುವುದು. ಕರುಳಿನ ಇತರ ಪ್ರಯೋಜನ ಕಡಿಯುವುದಿಷ್ಟೆ ಅಲ್ಲ; ಬಹುಕಾಲ ಪಯಸ್ವಿನ ಸಂಬಂಧಿಕರೂ ಇದರ ಸೇವನೆಯಿಂದ ನವಚೈತನ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಹೆಣ್ಣುಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಆದಮಕ್ಕಳು ಕೂಡಲೆ ಸಾಯುವಿಕೆ, ಮೊದಲಾದುವುಗಳ ಮೇಲೆ ಇದರಿಂದ ಅದ್ಭುತವಾದ ಪರಿಣಾಮ ಬೀರುವುದು. ಇದರಲ್ಲಿ ಹಸುವಿನ ಗಿಡಮೂಲಿಕೆ, ಭಸ್ಮ, ಸುವರ್ಣಮಾಕ್ಷಿಕಾದಿ ಅವಶ್ಯಕ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ಡಬ್ಬಿಯ ಬೆಲೆ ೩ ರೂ. ೭ ದಿನಗಳಲ್ಲಿ ಗುಣ. ೨ ಡಬ್ಬಿ ಬೆಲೆ ೫ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟು-ಸಾವಕಾಶದ ಸಲುವಾಗಿ ಸ್ಪೆಶಲ್ ಡಬ್ಬಿಗೆ ೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ ಶಕ್ತಿವರ್ಧಕ ಔಷಧಿಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೂ ೧ ರೂ. ಯಂತೆ ಅಡ್ವಾನ್ಸು ಕಳುಹಿಸಬೇಕು. ಅದನ್ನು ಪೂರ್ತಾಮಾಡಿ ಉಳಿದ ಹಣಕ್ಕೆ ವಿ. ಪಿ. ಮಾಡುತ್ತೇವೆ. ಇತ್ಯನೇಸೂ ಇಲ್ಲ. ೧ಡಬ್ಬಿ ೩ ದಿನಕ್ಕೆ ಸಾಲುವುದು. ೨ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ವೆಚ್ಚವಿಲ್ಲ. ೪ಡಬ್ಬಿ ಕೊಳ್ಳುವವರಿಗೆ ೧ಡಬ್ಬಿ ಬಕ್ಷೀಸು. ಗುಣವಾಗಿರುವ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. **ಮಿರಜ** (ಎಸ್. ಎಂ. ಸಿ.)

ರಾಮು :— ಯಾಕಪಾ ಕವಿ ಮಹಾರಾಯಾ,! ಸಂಜೆಯ ಆರು ಘಂಟೆಯಾದರೂ ಹೊರಗ ಹೊರಡುವ ತಯಾರೀ ಇಲ್ಲ? ಆದೇನದು ಹೆಬ್ಬೊತ್ತಿಗಿ ಕೈಯಾಗ? (ಕೈಯಲ್ಲಿ ತೆಗೆದುಕೊಂಡು) Discovery of Indiaನs ? ಎಷ್ಟರ ಓದಬೇಕು ಅಂತೀದಿ ಶ್ಯಾಮಾ! ಅಲ್ಲಾ ; ನಿನಗ ಸ್ಫೂರ್ತಿ ಬಂದ್ಹಾಂಗ ಕಾಣಸಲಿಲ್ಲಾ. ಜೋಲುಮೊರೀ ಹಾಕೀದಿ ?

ಶ್ಯಾಮು :— ಈ ಹೊತ್ತು ಮನಸ್ಸಿನಲ್ಲಿ ಅಷ್ಟು ಸೊಗಸಿಲ್ಲಾ. ಈಗ ತಿರುಗಾಟ ಬೇಡಾ. ನಿನ್ನ ಕೋಣೆಯೇ ಹರಟೆಯ ನಿವಾಸಪಾಗಲಿ. ಕವಿಗಳಂಜೋರೆಲ್ಲಾ ಆಕಾಶ ಕುಸುಮಾ ನೋಡೋದೆ! ಸಿಗದ್ಹಾಂಗ ಆತಂದ್ರ ನಿರುತ್ಸಾಹ!

ರಾಮು :— ನಿರುತ್ಸಾಹದಾಗ ಬರೆದಿರೋ lyrics ಬಹಳ Beautiful ಇರತಾವ. ಇವತ್ತ ಮುಂಜಾನೆ:

"ಏನು ಮಾಡಿದಿ ಎಂದು ಯಾರು ಕೇಳುವರಿಲ್ಲ ? "

ಚೆನ್ನೈಯರ ಮೆಲುಮಾತು ಮೊದಲೆ ಇಲ್ಲ ! " ಎಂದು ಬರೆದು **ಟೇಬಲ್** ಮ್ಯಾಲೆ ಇಟ್ಟಿದ್ದಿ. ಏನಪಾ ಅದರ ಅರ್ಥ ?

ಶ್ಯಾಮು :.... ಏಕಾಕಿಜೀವನ ನಿನಗೆ ಸೊಗಸುತ್ತಿದೆಯೆ ನನಗಂತೂ ಬಹಳ ಬೇಜಾರ ಬಂದsದ ನೋಡು.

ರಾಮು :— ಹೌದಪಾ, ಈಗ ತಿಳೀತು ನಿನ್ನ ಹಕೀಕತ್ತು. ನ ಮುಂದ ಹೇಳಬಾರದs ಮುಂಕಾ..... ಮನಸ್ಸು ಬಿಚ್ಚಿ.

ಶ್ಯಾಮು :— ನಮ್ಮ ಸಮಾಜದಾಗ, ತಮ್ಮ ಮಾತು ಬೀ ಮುಂದಿಗೆ ಹೇಳೋ ಹಾಂಗs ಇಲ್ಲ. ಮುಂದಿ ಹೇಳಿದ ಮಾತ ಕೇಳೋದು; ಇಷ್ಟೇ ! ತಿಳೀತs ? ಸರಿ, ಬಾಯಿ ಬಿಚ್ಚಿ ಹೇಳಬರೂ ನಿಂದೆಗೇ ಪ್ರಾರಂಭ. (ತುಸು ತಡೆದು— ಕಲೆ ತುರಿಸಿ) ಹೋಗ ಬಿಡಪ್ಪಾ; ಕುಸುಮಾ ನನ್ನ ಕಡಿಂದ ಉಮರಖಯ್ಯಾಮನ Poetry ತಗೊಂಡಿದ್ಲು. ಕೇಳಬೇಕೂ ಅಂತ ಬಂದೆ. ನೀನs ತೊಗೊಂಡ ಬಾಕಲಾ !

ರಾಮು :— (ಅರ್ಥ ಆಗದವನಂತೆ) ನೀ ಕೊಟ್ಟಾಂವ... ನೀನs ಕೇಳಬೇಕು. ನನ್ನ ದೇನು ನಡುವೆ ? ನೀ ಏನು ಈ ಮನೀಗ ಹೊಸಬನs ? ಪುಸ್ತಕ ಕೊಡೋದು ತೊಗೊಳ್ಳೋದು ಇದs ಏನs ಮೊದಲಲ್ಲ ?

ಶ್ಯಾಮು :— ಎಲಾ ಇವನ! ನಿನ್ನ ಮಾತೇ ಬೇರೆ ಹಾದೀ ಹಿಡೀತಲ್ಲಾ !

ರಾಮು :— ನಾಲ್ಕೈದು ದಿನಸಾಯಿತು. ಯಾಕೋ ನಮ್ಮ ಮನೀಕಡೇನ ಹಾಯ್ದಿಲ್ಲ ನಿ?.... ಇರಲಿ. ಈ ಹೊತ್ತು ರಾತ್ರಿ ಊಟಕ್ಕ ಇಲ್ಲೇ ಇದ್ದು ಬಿಡು. ನಿನಗೂ ಖಾನಾವಳೀ ಊಟ ಬ್ಯಾಸರ ಬಂದಿದ್ದೀತು.

ಶ್ಯಾಮು:— ನನಗ ಬೇರೆ ಕೆಲಸವಿದೆ. ಮತ್ತೊಮ್ಮೆ ಬರತೇನೀ! ನನುಗ, ಖಾನಾವಳೀ ಊಟಕ್ಕ ಬಿಟ್ಟದ್ದಲ್ಲ.

ರಾಮು :— ಛೀ ಛೀ ! ಇಂದ ಬರಬೇಕೂ ಅಂತ ಹೇಳತೇನಿ ! ....ಎಲ್ಲೆರೂ ಕೂಡಿ ಹರಟೆ ಹೊಡೆದು ಊಟ ಮಾಡಿದರ, ನಿನಗ ಹೋದ ಉತ್ಸಾಹ ಮರಳಿ ಬರಬಹುದು....ಹ....ಹ.....ಹ (ಎಂದು ನಗುವನು)

ಶ್ಯಾಮು :—ಯಾಕ ನಗತಿಯೋ ಹುಚ್ಚನಂತೆ? ನೀನು ಬೇಕಾದಷ್ಟು ನಗು, ನಿನ್ನ ಆಮಂತ್ರಣದ ಮೇರೆಗೆ ಊಟಕ್ಕಂತೂ ಬರುತ್ತೇನೆ.

ರಾಮು :— ಅದಕ್ಕೇ ನಕ್ಕೆ ನಾನೂ. ನೀನು ಕರೆದರೆ ನಾಕೂ ಆಂತ ಕುಳಿತಿದ್ದೆ. ಬಾರಪಾ ನನ್ನ ಗೆಳೆಯಾ ಊಟಕ್ಕ....ಬರಲಿ ನಿನಗೆ ಉತ್ಸಾಹದ ಕಳೆ ! (ತುಸು ಬಾಗಿಲಿಗೆ ಬಂದು) ಅಲ್ಲೋ, ಶ್ಯಾಮಾ, ಚಪ್ಪಾಮನ್ಯಾಗs ಇದ್ದಾನ.ಅತ್ತು, ನೀನು ಊಟಕ್ಕ ಬಾ,! ರಾತ್ರಿ ತಪ್ಪಿಸಬ್ಯಾಡ ಮತ್ತ. ನಾನೂ ಅಪ್ಪನ ಕೂಡ ನಾಲ್ಕು ಮಾತಾಡಬೇಕಾಗೇದ.... ಆ ಮನೀಗೆ ಹೋಗತೇನಿ (ಎಂದ ರಾವ ಹೊರಡುತ್ತ....ಶಾಮುನೂ ಹೋಗುವನು)

೩ ನೆಯ ಪ್ರವೇಶ

[ರಂಗರಾಯನ ಮನೆಯ ಅದೇ ಕಡಸಾಲೆ. ರಂಗರಾಯರು ಕತ್ತಿಯನ್ನು ಹರಿತ ಮಾಡುತ್ತಿದ್ದಾರೆ. ಯೋಜನೆಯ ಭಾವ ಮುಖದ ಮೇಲೆ ಹೊರಹೊಮ್ಮುತ್ತಿದೆ. ರಾಮುವಿನ ಪ್ರವೇಶವಾಗುವದು]

ರಂಗರಾಯ:— ಏ ರಾಮಾ, ನಿನ್ನ ಗೆಳೆಯ ಕವಿ ಮಹಾರಾಯ ಬಂದಿದ್ದನಲ್ಲ ಇದೇ ಈಗ! ನೀನೂ ಹೊರಗ ಹೋಗಲಿಲ್ಲ ಅವ್ನ ಜೊತೆಗೆ?

ರಾಮು:— ನನಗೂ ಬೇಸರ ಬಂದಿತ್ತು. ನೀನೂ ಮನ್ಯಾಗ ಇದ್ದಿ....ಅದಕ್ಕ ಇಲ್ಲೇ ಬಂದೆ. ಅಲ್ಲಪಾ, ನೀನು ಶ್ಯಾಮು ಅಂದರ ಸಾಮಾನ್ಯ ಅಂತ ತಿಳಕೊಂಡೀದಿ. ಬಿ. ಎ. ದಾಗ ಫರ್ಸ್ಟ್‌ಕ್ಲಾಸ್ ಹೊಡದ....ಈಗ ಎಂ ಏ ಕ್ಕ ಕೂಡತಾನ, ತಿಳತಿಲ್ಲೊ?

ರಂಗರಾಯ:— ಅದರ ನಿಮ್ಮ ಶ್ಯಾಮು ಮಂದೀಸಂಗತಿ ನಾಕು ಮಾತು ಸಹಿತ ಆಡೂದಿಲ್ಲ. ಯಾವಾಗಲೂ ಗುಂಗಿನಾಗಕ ಇರತಾನಪಾ! ಹುಡುಗರು ಹುರುಪು ಇರಬೇಕು. ಹೋಗಲಿ ಬಿಡು, ನಮಗ ಅದನ್ನ ತಗೊಂಡರೆ ಏನು ಮಾಡೋದದ....ಕೂಡು.

ರಾಮು:— ಅಪ್ಪಾ, ನೀ ಏನೋ ತಪ್ಪು ತಿಳಕೊಂಡಿದಿ! ಹಳ್ಳೀ ಊರ ಹುಂಬರ್ದ್ಹಾಂಗ ವಡಾವಡಾ ಮಾತಾಡಿದ್ರಕ ಖರೇ ಏನು? ಅವನ ಗಾಂಭೀರ್ಯ ಗೌರವ....ಅವನ ವಿದ್ಯಾಕ್ಕ ತಕ್ಕ ಹಾಂಗ ಇದ್ದಾನ ಶ್ಯಾಮು. ಅಂವ ಮಾತಾಡಿದ್ದು ತಿಳಕೋಬೇಕಾದ್ರ ಕರಿಣ. ತಿಳೀತ? ನಾಳೆ ಪ್ರೊಫೆಸರ್ ಆಗತಾನ ಅಂವ!

ರಂಗರಾಯ:— (ಸಂಶಯ ನಿವಾರಣದ ಮುಖದಿಂದ) ಮನಿಮುಂದ ನಟ್ಟಗಿದ್ದಾನೇನು ಶ್ಯಾಮು? ನೋಡಲಿಕ್ಕೆ ಬಹಳ ಸಾದಾ ಇದ್ದಾನ!

ರಾಮು:—ಸಾಧಾ ಏನೋ ಇದ್ದಾನ—ಆದರ ವಿದ್ಯಾವಂತ—ಅವನ ಕೀರ್ತಿ ಸಣ್ಣದಲ್ಲ. ಪುಣೇದಾಗ ಡಿಬೇಟಿನಾಗ ಮಾತಾಡಿ, ಬಂಗಾರದ ಪದಕಾ ಹೊಡದ, ಹೋದ ವರ್ಷ! ✓

ರಂಗರಾಯ:— (ಯೋಚನೆಯಲ್ಲಿ ಸುತ್ತಾಡಿ) ಹೂಂ, ಏಂಗೇನು?....ರಾಮಾ, ಇವತ್ತು ಮನ್ಯಾಗ ಕುಸುಮಾನ ಮದಿವ್ಯಾಲಾಗ ಯುದ್ಧಾನಕ ಆತು. ನನಗೂ ವರಾ ಹುಡುಕಿ ಹುಡುಕಿ ಲಿಬ್ಯಾಸರು ಬಂತು. ಎಲ್ಲಿ ನೋಡಿದರೂ ಉತ್ಪನ್ನ ಇದ್ದ ವರಲೋಕಕ ಸಿಗವಲ್ಲವೊ! ನಮ್ಮ ಕಚೇರ್ಯಾಗ ಹೊಸದಾಗಿ ಭರ್ತೀ ಆದ ಹುಡುಗರಿಗೆ ಕೊಡಬೇಕಂದ್ರ, ಅವರಿಗೆ ನಾಕು ಇಂಗ್ಲೀಷ ಮಾತ್ಯಾ ಬರೀಲಿಕ್ಕೆ ಬರೂದಿಲ್ಲ. ಖರೇ ನೋಡಿದ್ರ, ಕುಸುಮಾನಕ ಅವರಿಗಿಂತ ಶ್ಯಾಣ್ಯಾಕಿ ಇದ್ದಾಳ! ಹ....ಹ....ಹ (ಎಂದು ನಕ್ಕು ಮತ್ತೆ ಆಡ್ಡಾಡುವನು)

ರಾಮು:— ಅಪ್ಪಾ, ನಾ ಖರೇ ಹೇಳಲೇನು?.... ಲಗ್ನ ಮಾಡೋದು ಸುಲಭ; ಸುಳ್ಳ ಸುಳ್ಳೇ ತಲೆ ಕೆಡಿಸಿಕೋತೀರಿ ನೀವು! ಎದುರಿಗೆ ವರಾ ಆಡ್ಡಾಡತಾವ....ಅವನ್ನ ಬಿಟ್ಟು, ವರಾ—ವರಾ ಅಂತ ಗಿಮಿ ಗಿಮೀ ತಿರಗತೀರಿ ಮತ್ತ!

ರಂಗರಾಯ:—ಏನೋ ರಾಮಾ—ಹೀಂಗಂದ್ರ? ಯಾವ್ದಪಾ ಹಿಂಥಾ ವರಾ ನಮಗ ಗೊತ್ತಿದ್ದವ? ಹೇಳಿರ ಹೇಳಲಾ! ನೀ ಏನ್ನಾಂವಾದರೂ ನಿನ್ನ ಮಾತು ಕೇಳತೀನಿ ನಾ....ಹೇಳು.

ರಾಮು:—ಅಪ್ಪಾ, ನಮ್ಮ ಶ್ಯಾಮು ಏನು ಕಡಿಮಿ ವರಾ ಅಂತ ಆಗಿದಿ? ಇವತ ವರ್ಷ ಎಂ. ಎ. ಪರೀಕ್ಷಾಕ್ಕ ಕೂಡತಾನ. ಹುಡುಗ ಬಹಳ ಗುಣಿ. ಸಿಗರೇಟ್‌ಸಹಿತ ಸೇದೂದಿಲ್ಲ. ಯಾವಾಗಲೂ ಹುರುಪು ಇರತಾನ. ದೊಡ್ಡ ನೌಕರೀ ಕೈಯಾಗ ಇದ್ದಾಂಗ. ಮತ್ತೇನು ಬೇಕು?

ರಂಗರಾಯ:— ಆದರ ಅಂವಗ ಉತ್ಪನ್ನು ಇಲ್ಲಾ ಅಂತ ಅನಸತಕದ. ಮೇಲಾಗಿ ನೌಕರೀ ಎಂದ ಪತ್ತದೋ ಏನೋ ಯಾರು ಬಲ್ಲರು! ಎನ್ನೋ, ಮಹಾರಾಯಾ, ನನಗ ಅಷ್ಟು ಸರಿ ಅನಸಲ್ಲದು.

ರಾಮು:—ಉತ್ಪನ್ನು ಉತ್ಪನ್ನು! (ಅಕ್ಕರದಿಂದ) ನಿನಗೊಂದು ಹುಜ್ಜ ಹಿಡದದ. ನಿನ್ನ ಗೆಳೆಯ ಭೀಮರಾಯ, ಉತ್ಪನ್ನ ಇದ್ದವರಾ ಅಂತ ತನ್ನ ಮಗಳನ್ನ ಆ ದೇಸಾಯಿಗ ಮಗ್ಗ ಕೊಟ್ಟ. ಅಂವಾ ಶುದ್ಧ ಹುಂಬ. ಒಟ್ಟು ಗುಣ ಬೇಕು. ನಮ್ಮ ಶ್ಯಾನುಗ ನೌಕರಿಗೇನು ಕಡಿಮಿ? ನಾಳೆ ಸಿಕ್ಕಾವ!....ನೌಕರೀ ಸಿಕ್ಕನಮ್ಯಾಲೆ ಲಗ್ನಾ ಮಾಡೋಣು ತೀರಿತಕ?

ರಂಗರಾಯ:— ಮನ್ಯಾಗ ಆಕಿ ಒಪ್ಪಬೇಕಲ್ಲ! ಕುಸುಮಾ ಒಪ್ಪಬಹುದು....ಆಕೀಗೆ ಕಾದಂಬರೀ ಕಥೀ ಬಹಳ ಸೇರತಾವ. ಖರೇ ನೋಡಿದ್ರ, ನಮಗರಕ ಏನು ಉತ್ಪನ್ನ ಆದಕ?

ರಾಮು:— ಅಪ್ಪಾ, ನಿನ್ನ ಒಪ್ಪಿಗಿದ್ದರ ಅವ್ವ ಒಪ್ಪೇ ಒಪ್ಪತಾಳ. ಆಕಿಗೆ ಶ್ಯಾಮುನ ಮ್ಯಾಲೆ ಮಮತಾ ಬಹಾಳ; ತಿಳತೇನು?

ಮಲೇರಿಯಾ
ಇನ್ ಫ್ಲಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨

ಖಿಸಗ್ಗತ್ನ ಆಯುರ್ವೇದ ವಿದ್ವಾನ್ ಬಿ. ವಿ. ಹಂಪಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾಗುವುದು. ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ: ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಸ್ಥಾನ.

ರಂಗರಾಯ:— ನನ್ನ ಮನಸ್ಸು ಈಗ ಒಪ್ಪಿದ್ದಾಂಗ ಆತು. ನೀನು ಹೇಳಿದ್ಹಾಂಗ ಶ್ಯಾಮ ಬಹಳ ಹುರುಪಿನ ಹುಡುಗ, ವಿದ್ಯಾವಂತ, ಮತ್ತು ನಾನಾದರೂ ವರಾ ಹುಡುಕಿ ಬೇಸತ್ತೀನಿ. ಕುಸುಮಾ ಕಲಿತಾಕಿ. ಶ್ಯಾಮನೂ ಕಲಿತಾನ. ಎಲ್ಲಾನೂ ಕೂಡಿ ಬಂತು. ಆಲ್ಲೋ ರಾಮಾ, ಶ್ಯಾಮ ಒಪ್ಪಬೇಕಲ್ಲ ಮತ್ತ?

ರಾಮು:— ಒಪ್ಪದ ಏನು, ಪದಾ ಹೇಳ್ಯಾನು! 'ಕುಸುಮಾ ಕುಸುಮಾ' ಅಂತ ಕನಕದಸತಿರತಾನ! ಶ್ಯಾಮನ್ನ ಒಪ್ಪಿಸೋದು ನನ್ನ ಕೂಡಿತು ತಿಳಿತಿಲ್ಲೊ!....ನಡಿ, ಅವ್ವನ ಮುಂದ ಹೇಳೋಣ. ಆಕಿನೂ ಕುಸುಮಾನ ಲಗ್ನ ಹ್ಯಾಂಗ ಆದೀತೂ ಅಂತ ಚಿಂತೀ ಮಾಡತಾಳ.

(ತಬ್ಬರೂ ಒಳಗೆ ಹೋಗಬೇಕೆನ್ನುವಷ್ಟರಲ್ಲಿಯೇ ಸೀತಾಬಾಯಿ ನಡುಮನೆಯ ಬಾಗಿಲಿಗೆ ಬಂದಳು. ತುಸು ಕಡೆಗೆ)

ಸೀತಾಬಾಯಿ:— ಏ ಕುಸುಮಾ... ಪಲ್ಯಾ ಹೊತ್ತಿತೇನ? ಕೆಳಗಿಳಿಸು. ಜೇಕಾದರೆ ಇನ್ನಿಷ್ಟು ನೀರು ಹಾಕು ಸುಡುಗಾಡ್ಯ ಇವರಿಗೆ ಎಂದ ಅಡಗಿ ಬರಜೇಕೋ! ಅದಿಗಿ ಬರೂದಿಲ್ಲಾ ಅಂತ ಅಂದರೆ, ತಮ್ಮ ಸಾಲೀ ಶಾಣೇತನಾ ನಮ್ಮ ಮುಂದ ಹೇಳತಾರ.... (ಮುಂದಕ್ಕೆ ಬಂದು) ಅಯ್ಯ! ಇಬ್ಬರೂ ಇಲ್ಲೇ ಇದ್ದಾರಲ್ಲ!

ರಾಮು:— ಅವ್ವಾ ಬಾರವಾ ಇಲ್ಲಿ, ನಿನ್ನ ಹಾದೀನ ನೋಡತಿದ್ದಿವಿ. ಕುಸುಮಾ ಎಲ್ಲಿದ್ದಾಳ?

ರಂಗರಾಯ:— ಅಡಿಗೀಮನ್ಯಾಗ! ಈರಿಗೆ ಆಕಿಗೆ ಬಡಿದಾಟ ನಡಿದಿತ್ತು; ನಾ ಸುಮ್ಮನಕ ಹೊರಗ ಬಂದೆ....ತಿಳೀತ?

ಸೀತಾಬಾಯಿ:— ಮನಿಗೆ ಬಂದಕೂಡಲೇ ನ್ಯಾಯಾನ್ಯಾಯ ಸುರುವೋ ಏನ ಮಣ್ಣೋ!

ರಂಗರಾಯ:— ಹಾಂಗೆಲ್ಲಾ ಅನಬ್ಯಾಡ! ಮಗಳಿಗೆ ವರಾ ಸಿಕ್ಕಿತು. ಅರಿಷಿಣಾ ಕುಂಕುಮಾ, ಹಾಲು ಮೊಸರು—ಅನ್ನು ಹುಚ್ಚೀ

ಸೀತಾಬಾಯಿ:—(ನಾಚಿಕೆಯಿಂದ ಮುಖವನ್ನು ಮುಚ್ಚಿಕೊಳ್ಳುತ್ತ) ಅಧ್ಯಾಂಗ ಆದು? ಈಗ ಹೊರಗ ಸಹಿತ ಹೋಗಿಲ್ಲ; ವರಾ ಸಿಕ್ಕಿತಂತ ವರಾ! ಸುಳ್ಳ ಸುಳ್ಳ ಮಾತು.

ರಂಗರಾಯ:— ನಾನು ಹೇಳಿದ್ದು ನಿನಗ ಯಾವಾಗ ಖರೇ ಕಂಡಿತ್ತು? ಕೇಳತಿದ್ದರ ನನ್ನ ಮಾತು ಕೇಳು; ಇಲ್ಲದಿದ್ದರ ಕುಸುಮಾನ್ನ ಲಗೂನ ಕಳಿಸು.

ಸೀತಾಬಾಯಿ:— ಸಿಟ್ಟಬಂದು ನಿಮ್ಮ ಮೂಗಿನ ಮ್ಯಾಲೇ ಇರತಕದ ಎಲ್ಲೀ ವರಾ? ಯಾವ ಊರವರು? ಏನುಮಾಡತಾನ? ಹೇಳ್ರಿ!

ರಾಮು:— ಅವ್ವಾ, ಒಮ್ಮೆಲೇ ಇಷ್ಟು ಪ್ರಶ್ನೀ ಹಾಕಿದ್ರ ಅಪ್ಪ ಹ್ಯಾಂಗ ಉತ್ತರ ಕೊಡಬೇಕು. ಸ್ವಲ್ಪು ಕೇಳರ ಕೇಳಲಾ! ನಮ್ಮ ಶ್ಯಾಮನ ವರಾ! ನೀನಕ ಅಂತಿದ್ದೆಲ್ಲ: 'ಶ್ಯಾಮಾ, ಲಗೂನ ಲಗ್ನ ಮಾಡಿಕೋಳಪಾ ಇನ್ನ' ಅಂತ? ಕುಸುಮಾಗ ತಕ್ಕ ವರಾ ಹೌದೋ ಅಲ್ಲೊ ?

ಸೀತಾಬಾಯಿ:— ಅವ್ವಯ್ಯಾ ಶ್ಯಾಮಗ ? (ರಂಗರಾಯನ ಕಡೆ ನೋಡಿ) ಇವರ ಮನಸ್ಸಿಗೆ ಬಂತ? ಶ್ಯಾಮನ್ನ ಕಂಡರ ಆಗತಿದ್ದಿಲ್ಲ. ನಾ ಮಾತ್ರ ಎಂದೋ ಹುಡಗನ್ನ ಪಾಸುಮಾಡಿದ್ದೆ ಇನೇ ಅಂಜಿಕಿಗೇ ಸುಮ್ಮನಿದ್ದೆ.

ರಂಗರಾಯ:— ಅದೇನರೇ ಇರಲಿ; ನಿನ್ನ ಅಳಿಯ ಊಟಕ್ಕ ಇಲ್ಲೇ ಬರತಾನ. ಅಡಿಗಿ ಇಷ್ಟು ರಂಗ ಆಗ್ಲಿ! ಮಾತ್ರ ನೀನು ಒಪ್ಪಿದ್ಹಾಂಗ ಆತನ್ನು!

ಸೀತಾಬಾಯಿ:— ಮುಹೂರ್ತ ಎಂದ ತಗಸೀರಿ ಲಗ್ನದ್ದು? ಗೋತ್ರಾ ಗುಣಾ ಎಲ್ಲಾ ಕೂಡ್ಯಾವ ?

ರಾಮು:— ಅವ್ವಾ, ಮನಸ್ಸು ಕೂಡಿದ್ರ ಎಲ್ಲಾನೂ ಕೂಡ್ತದವ ಜಗತ್ತು ನಡದದ್ದು ಒಂದೇ ಒಂದು ಸೂತ್ರದಿಂದ: ಅದಕ್ಕ ಪ್ರೀತಿರ ಅನ್ನು, ಪ್ರೇಮರ ಅನ್ನು!

ರಂಗರಾಯ:— ಇರಲಿ, ನೀನು ಈ ಸುದ್ದೀ ಕುಸುಮಾಗ ತಿಳಿಸು. ಶ್ಯಾಮ ಈಗ ಬರತಾನ. ಶ್ಯಾಮಗ ಈ ಸುದ್ದೀ ರಾಮ ತಿಳಿಸತಾನ. ಹೋಗು, ಎಲ್ಲಾ ತಯಾರಿ ಮಾಡು.

ಸೀತಾಬಾಯಿ:— ಇದೇನೋ ವಿಚಿತ್ರಾನ ನಡದದ. ಆಗಲಿ, ಕುಸುಮಾ ಒಳಗ ಅಡಿಗಿ ನಡಿಸ್ಯಾಳ; ಈ ಸುದ್ದೀ ಕೇಳಿದ್ರ, ಏನು ಹಾಲು ಉಳ್ಳಿಸತಾಳೋ ಛಧವಾ ಸಾರು ಉಳ್ಳಿಸತಾಳೋ ಯಾರಿಗೆ ಗೊತ್ತು? (ನಗುತ್ತ ಒಳಗೆ ಹೋಗುವಳು)

ರಾಮು:— ಅಪ್ಪಾ, ಶ್ಯಾಮನ್ನ ಒಪ್ಪಿಸುವುದು ನನ್ನ ಕೂಡಿತು. ಕಲಿತವರು ಕಲಿತ ಹುಡಗಿಯನ್ನ ಬೇಡತಾರ. ಮೇಲಾಗಿ ಕುಸುಮಾನೂ ಶ್ಯಾಮನ ಮೇಲೆ ಅದರ ತೋರಿಸತಾಳ. ನನ

ನಸ್ಸಿಗಂತೂ ಪುರ್ತಿ ಬಂದಂತಿದೆ! ನೀ ವಿಚಾರ ಮಾಡು (ಕೂತು ಯೋಚಿಸುವ ಪದ್ಧತಿಯೇ ಶ್ಯಾಮು ಬರುತ್ತಾನೆ 'ಸ್ವಾಗತಿಸುವಳು.)

ಶ್ಯಾಮು :— ಏನು ಆದರಪಾ ರಾಮಾ... ಏನೋ ಸುದ್ದಿ ಹೇಳಿತ್ತು!

ರಂಗರಾಯ :— ಬಾರಪಾ ಶ್ಯಾಮಾ! ಎಲ್ಲಾ ಫೆಲೋನನ್ನೇ ಸುದ್ದಿ ನಡದಿತ್ತನ....ಕೂಡು.

ಶ್ಯಾಮು :— ನಡದಂದ——ಏನೋ——ತೀರಿತು.

ರಾಮು :— ಅಪ್ಪಾ, ನಾವು ಇಲ್ಲೇ ಕೋಣೆಯೊಳಗ ಕುಳತಿರವಿ. ಅಡಿಗಿ ಇನ್ನೂ ಆಗಿಲ್ಲ, ಬಾರೋ ಶ್ಯಾಮಾ! ✓

ರಂಗರಾಯ :— ಆಗಲಿ,ಹಾಂಗನ ಮಾಡ್ರಿ! (ಶ್ಯಾಮು-ರಾಮುರು ಒಳಗಡೆ ಬರುವರು. ರಂಗರಾಯ ತಲಿಯ ಕಡೆದು) ಇದೊಂದು ನನ್ನ ತಲೀಗರ ಇಳದ್ಹಾಂಗ ಆತು. ಒಟ್ಟು ವ್ಯಾಳ್ಯಾ ಕೂಡಿಬರಬೇಕು. ಕುಸುಮಾ ಕಲಿತಾಕಿ....ವರಾ ಚೆಲೋ ಸಿಕ್ಕಾಂಗ ಆತು. ನನಗ ಬಿಡ್ಡಿನ ಖರ್ಚು ಶಪ್ಪಿದ್ಹಾಂಗ ಆತು. ಕಲಿತವರಿಗೆ ವರದಕ್ಷಿಣೀ ಆಶಾ ಕಡಿಮಿ. ಒಟ್ಟು ಎಲ್ಲಾ ನೆಟ್ಟಗನ ಆದ್ಹಾಂಗಾತು.... ಕತ್ತಲಾದ ಮತ್ತೆ ಪ್ರಾರಂಭ ಮಾಡಿ....ತಾನು ಏನೋ ನೆನಪಿ ಮಾಡಿಕೊಂಡವನಂತೆ) ಏ, ಬಾ ಇಲ್ಲೆ!

ಸೀತಾಬಾಯಿ :— ಯಾಕ ಒದರತೀರಿ? (ಸಾವಕಾಶವಾಗಿ) ಶ್ಯಾಮು ಬಂದಾನೇನು? (ತಿಳಿದವಳಂತೆ) ಕುಸುಮಾವತಿ, ಬಾರವ್ವಾ ಇಲ್ಲೆ.

ರಂಗರಾಯ :— ಅಹಹ....ಅಳಿಯ ಬಂದಮ್ಯಾಲೆ ನಿನ್ನ ಧನಿ ದಿಮ್ಯಾತು ಸಾಕು! ಕುಸುಮಾ ಏನಂತಾಳ?

ಸೀತಾಬಾಯಿ :— ಮುದಕರಾದ್ರಿ....ಬೆಳಗ ಹರಿದ್ರ ಮಗಳ ಮದಿವಿ....ಇನ್ನೂ ನಿಮ್ಮ ಹುಚ್ಚುಚ್ಚಾರ ಬಿಟ್ಟಿಲ್ಲ. ಕುಸುಮಾನ ಮನಸ್ಸಿಗೆ ಬಂತು... ಮುಂದಿನ ಮಾತು ಕಥಿ ನಡೀಲಿ! (ಬಾಗಿಲ ಕಡೆ ನೋಡಿ) ಬಾ ಕುಸುಮವ್ವಾ, ಬಾ. (ಕುಸುಮಾ ಬರುವಳು)

ರಂಗರಾಯ :— ಯಾಕ ಕುಸುಮಾ, ನಿನ್ನ ಒಪ್ಪಿಗಿ ಆದನ? ನಿನ್ನ ಮನಸ್ಸಿಗೆ ಬಂದ್ರ ನಮ್ಮ ಮನಸ್ಸಿಗೆ ಬಂದ್ಹಾಂಗನ!

ಸೀತಾಬಾಯಿ :— ಬರದ ಏನ ಮಾಡತದ? ಇಲ್ಲದ್ದೊಂದು ಮಾತಾಡ ಬ್ಯಾಡರಿ ಅಡ್ಡಡ್ಡನ!

ರಂಗರಾಯ :— ಹಾಂಗಾದ್ರ ಹ್ಯಾಂಗ ಕೇಳದೇಕು? ಅವರ ಮನಸ್ಸಿಗೆ ಬರದನ (ಕೂತು ಮುಗಿಯುವುದರಲ್ಲೇ ಶ್ಯಾಮು ರಾಮು ಬರುವರು)

ರಾಮು :— ಅಪ್ಪಾ, ಎಲ್ಲಾ ವಿಚಾರ ಮುಗದ್ಹಾಂಗ ಆತು. ಶ್ಯಾಮಣ್ಣಾ ಪರೀಕ್ಷಾ ಆದ ಮ್ಯಾಲೆ ಲಗ್ನಕ್ಕ ಒಪ್ಪಾಕನ; ಇವತ್ತ. ನಿಶ್ಚಯ ಆದ್ಹಾಂಗನ! ಮದುವೀ ಕೆಲಸ ಸಾವಕಾಶ ನಡೀಲ್ಲಿ

ಕುಸುಮಾ :— (ಹುಳು ಹುಳು ಕೋಡಿ) ರಾಮಣ್ಣಾ, ನಿನ ಮದಿವೀನೂ ಈಗನ ಆಗಿ ಬಿಡ್ಲಿ, ಅಂದರ ನೆಟ್ಟಗಾಗತದ!

ರಂಗರಾಯ :— ಕೇಳಪಾ ರಾಮಾ ನಿನ್ನ ತಂಗೀ ಮಾತು. ಮಹಾರಾಯಳ, ನಿನ್ನ ಮದಿವಿ ಆದರ ಸಾಕು. ರಾಮನ ಮದಿವೀ ರಾಮನನ ಮಾಡಿಕೋತಾನ. ಯಾಕೋ ರಾಮಾ....ಹೆ....ಹೆ-ಹೆ

ಶ್ಯಾಮು :— ರಾಮುಗ ಕನ್ಯಾ ಹುಡುಕುವ ಭಾರ ನನ್ನ ಮ್ಯಾಲೆ ಬಿತ್ತು. ನನ್ನ ಲಗ್ನಕ್ಕ ರಾಮನೇ ಕಾರಣ.

ಸೀತಾಬಾಯಿ :— ಈಗ ಎಲ್ಲಾರಿಗೂ ಹೊಬ್ಬರಿ-ಸಕ್ಕರಿ ಕೊಟ್ಟು ಬಿಡತೀನಿ. ನಿಶ್ಚಯ ಆದ್ಹಾಂಗ ಆಗನದ. (ಗಡಬಡಿಯಿಂದ ಒಳಗೆ ಹೋಗುವಳು)

ರಂಗರಾಯ :— ಮಗಳ ಮದಿವಿ ಇಷ್ಟು ಸುಲಭ ಆದರೆ, ಹೆಣ್ಣು ಹಡೆದ ತಂದೆ-ತಾಯಿಗಳಿಗೆ ಎಷ್ಟು ಸಂತೋಷ?

(ರಾಮು-ಶ್ಯಾಮರು ರಂಗರಾಯನ ಕಡೆಗೆ ನೋಡುತ್ತಿರುವಾಗಲೇ— ಸೀತಾಬಾಯಿ ಬರುವಳು; ಮತ್ತು ಹೊಬ್ಬರಿ ಸಕ್ಕರಿ ತಂದಿರುವಳು.... ತೆರೆ ಸಾವಕಾಶವಾಗಿ ಬೀಳುವುದು.)

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕರು : ಬಸವರಾಜ ಕಟ್ಟೀಮನಿ

ವರ್ಷಕ್ಕೆ ಅರುನೂರು ಪುಟಗಳಷ್ಟು ಸಾಹಿತ್ಯ. ಕತೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ.

ನಾ. ಚಂದಾ ೫ರೂಪಾಯಿ (ರಜಿಸ್ಟರ್ ಅಂಚೆವೆಚ್ಚ ಸೇರಿ)

ಮೊದಲನೆಯ ಪ್ರಕಟನೆ:

ಸೆರೆಯಿಂದ ಹೊರಗೆ

(ಸಣ್ಣಕತೆಗಳ ಸಂಕಲನ)

ಈಗ ತಾನೆ ಹೊರಟಿದೆ. ಕೂಡಲೆ ಚಂದಾದಾರರಾಗಿರಿ.

ನಿರೀಕ್ಷಕ

(ಪಕ್ಷಾತೀತ ವಾರಪತ್ರಿಕೆ) ಧಾರವಾಡ

ಸಂಪಾದಕರು : ಮುಳಿಯೆ ಗೋವರ್ಧನರಾಯರು

ವಾರ್ಷಿಕ ಚಂದಾ ೭ ರೂ. ಸ್ಥಳಿಕರಿಗೆ ೬-೪-೦

ಇಂದೇ ಚಂದಾದಾರರಾಗಿರಿ.

ರಾಷ್ಟ್ರೀಯ ದೃಷ್ಟಿಕೋನ

(ಒಂದು ವಿಚಾರಲಹರಿ)

ಡಾ. ವರಗಿರಿ ಮೂರ್ತಿಂಡರಾಯ ಎಂ.ಎ. ಬಿ.ಟಿ. ಧಾರವಾಡ

★

ಭಾರತದಲ್ಲಿಂದು ರಾಷ್ಟ್ರೀಯಭಾವನೆ ಹೊಸತಾಗಿ ಹುಟ್ಟಬೇಕಾಗಿದೆ. ಈಗಾಗಲೆ ಹುಟ್ಟಿದೆಯೆಂಬುದು ಬರೀ ಭ್ರಮೆ. ಅದು ಹುಟ್ಟಿದುದು ನಿಜವಾಗಿದ್ದರೆ, ನಮ್ಮಲ್ಲಿ ಅಧಿಕಾರದ ಜಗಳಾಟಕ್ಕೆ ಎಡೆಯಿರುತ್ತಿರಲಿಲ್ಲ. ಕಳಪೇಟಿಯ ಗಂಟುಗಳ್ಳರಿಗೆ ಅಪ್ಪದವಿರುತ್ತಿರಲಿಲ್ಲ.

೧

ನಾನು ವಿಜಾಪುರದಲ್ಲಿದ್ದಾಗ, ಒಮ್ಮೆ ಸಂಜೆಯ ಮುಂದೆ ತಿರುಗಾಡಲು ಹೋದ ಸನುಯದಲ್ಲಿ, ಎತ್ತರವಾದ— ಭವ್ಯವಾದ— ಒಂದು ಹಳೆಯ ಕಮಾನನ್ನು ಕಂಡೆ. ಮನಸ್ಸಿನಲ್ಲಿ ಅದನ್ನು ನೋಡುವ ಕುತೂಹಲ ಕೆರಳಿತು. ಹತ್ತಿರ ಹೋದೆ.

ಅದೊಂದು ಭವ್ಯವಾದ ಕಟ್ಟಡದ ಅವಶೇಷ. ಕಮಾನು ಆಗಸದ ವರೆಗೂ ಎದ್ದು ನಿಂತಂತಿತ್ತು. ಅದರ ಮೇಲೆ ಅದಕ್ಕಿಂತಲೂ ದಿವ್ಯವಾದ ಇನ್ನೊಂದು ಕಟ್ಟಡವಿದ್ದಿತೆಂಬ ಚಿನ್ಹಗಳು ನಿಚ್ಚಳವಾಗಿ ಕಾಣುತ್ತಿದ್ದುವು. ಹಿಂದಿನ ಕಾಲದ ಆ ಭವ್ಯ ಕಟ್ಟಡದ ಗೋಡೆಗಳು, ಆ ಕಟ್ಟಡದಲ್ಲಿಯ ಎತ್ತರವಾದ ಚಾವಡಿಯ ಕಟ್ಟಿ, ಮೇಲ್ಮಾಳಿಗೆಯ ಮೆಟ್ಟಿಲುಗಳು— ಎಲ್ಲವೂ ಇನ್ನೂ ಅಚ್ಚಳಿಯದೆ ಉಳಿದಿವೆ; ನಿಂತು ನೋಡುವವರಿಗೆ ಆ ಕಟ್ಟಡದ ಗತವೈಭವವನ್ನು ನೆನಪಿಗೆ ತರುತ್ತವೆ. ಮನ ಕರಗುತ್ತದೆ. 'ಯಾವ ಮಹಾರಾಯನು ಹಿಂದೆ ಇಲ್ಲಿ ವಾಸಿಸುತ್ತಿರಬಹುದು? ಅವನ ಹೆಸರು ಹೇಳ ಹೆಸರಿಲ್ಲದೆಯೆ ಮಾಯವಾಗಿದೆಯಲ್ಲ!' ಎನಿಸಿ, ಕುತೂಹಲದ ಕಣ್ಣು ಅತ್ತಿತ್ತ ಸುಳಿದಾಗ, ಆ ಕಟ್ಟಡದ ಪರಿಚಯವನ್ನೊಳಗೊಂಡ ಕರಿಯ ಹಲಗೆಯೊಂದು ಕಣ್ಣಿಗೆ ಬಿತ್ತು. ಅದರ ಹೆಸರು 'ಗಗನಮಹಾಲ್' ಎಂದೂ, ಇತಿಹಾಸದ ಕಣ್ಣನ್ನೇ ಕುಕ್ಕಿಸಿದ ವೀರ ಚಾಂದ್‌ಬೀಬಿಯು ಇಲ್ಲಿ ತನ್ನ ಬಾಲ್ಯವನ್ನು ಕಳೆದಳು ಎಂದೂ, ಉಲ್ಲೇಖ ಓದಿದೊಡನೆ ಕಣ್ಣಲ್ಲಿ ನೀರು ಬಂತು. ಆ ಕಟ್ಟಡ, ಅದರ ಭವ್ಯತೆ, ಅದರಲ್ಲಿ ಅಂಬೆಗಾಲಿಕ್ಕಿದ ಆ ವೀರ ಚಾಂದ್‌ಬೀಬಿ, ಅವಳ ಶೌರ್ಯ-ಸಾಹಸ— ಎಲ್ಲವೂ ಇಂದು ಕಾಲನ ಒಡಲಲ್ಲಿ ಬಯಲಾಗಿ, ಬರಿಯ ಅವಶೇಷವಾಗಿ, ಕನಸಾಗಿ ಭಣಗುಟ್ಟುತ್ತಿದೆಯಲ್ಲ— ಎಂದು ಮನಮುದುಡಿ ಅಲ್ಲಿಯೇ ಕುಳಿತುಕೊಂಡೆ. ವಿಚಾರಲಹರಿಯಲ್ಲಿ ಈಜತೊಡಗಿದೆ.

ಆಗ ನನಗೆನ್ನಿಸಿತು, ರಾಷ್ಟ್ರಕ್ಕೂ ಈ ಅವಶೇಷಕ್ಕೂ ಸಂಬಂಧ ಕಂಡಿತು. ಭಾರತವೂ ಇಂದು ಗಗನಮಹಾಲಿನಂತೆ ತಾಳ್ಮೆಯುತ್ತಿದೆ. ಹಿಂದೊಮ್ಮೆ ಭಾರತವೂ ಗಗನಮಹಾಲಿನಂತೆ ಪಡೆದಿದ್ದ ಅವಶೇಷಗಳು ಹೆಜ್ಜೆಹೆಜ್ಜೆಗೆ ಕಣ್ಣಿಗೆ ಬೀಳುತ್ತಿವೆ. ಹಿಂದೆ ಆ ರಾಷ್ಟ್ರವನ್ನು ಕಟ್ಟಿ, ಆ ಸಂಸ್ಕೃತಿಯನ್ನು ಕಟ್ಟಿ, ಬೆಳೆದು ನಲಿದ ರಾಷ್ಟ್ರಪುರುಷರು, ಇಂದು ಚಾಂದಬೀಬಿಯಂತೆ ಕಣ್ಮರೆಯಾಗಿದ್ದಾರೆ. ಆ ಗತವೈಭವನವನ್ನು ತಿರುಗಿ ಗಳಿಸಬಹುದೆ? ಅಷ್ಟೇ ಉನ್ನತವಾದ ವೈಭವಸಂಪನ್ನ ಭಾರತವನ್ನು ಮತ್ತೆ ಕಟ್ಟುವ ಸಾಧ್ಯವಿದೆಯೇ? ಹಾಗೆ ಮಾಡಬೇಕಾದರೆ ನಮ್ಮಲ್ಲಿ ಯಾವ ಬೇಕು?

ಹೀಗೆ ನಾನು ವಿಚಾರದ ಮಡುವಿನಲ್ಲಿ ಸಿಲುಕಿದೆ.

೨

ಕುಳಿತಂತೆಯೇ ವಿಚಾರದ ಹೊನಲು ಹರಿಯತೊಡಗಿತು: ವ್ಯಕ್ತಿಯಂತೆ ರಾಷ್ಟ್ರಕ್ಕೂ ಒಂದು ವ್ಯಕ್ತಿತ್ವವಿದೆ. ರಾಷ್ಟ್ರದ ಭೌಗೋಳಿಕ ಸ್ವರೂಪ—ಹೊಳೆ-ಹಳ್ಳ, ಗಿರಿ-ಕಂದರ, ಆಡಿನೆ-ಬಯಲು, ನುಣ್ಣನೆ ಬೆಳೆ— ಇವೆಲ್ಲ ರಾಷ್ಟ್ರದ ಅಂಗೋಪಾಂಗಗಳು. ಪರಂಪರಾಗತವಾಗಿ ಬೆಳೆದು ಉಳಿದು ಬಂದ ಹಲವಾರು ಶಾಸ್ತ್ರಗಳು ರಾಷ್ಟ್ರದ ಮೆದುಳು; ಅಲ್ಲಿ ನೆಲಸಿದ ವಿಶಿಷ್ಟವಾದ ಸಾಹಿತ್ಯ ಸಂಗೀತ ನಾನಾ ಕಲೆಗಳು ಅದರ ಹೃದಯ; ಅಲ್ಲಿಯ ಭಾಷೆ ಅದರ ಉಸಿರು. ಅಲ್ಲಿ ಪ್ರಜ್ವಲಿಸುವ ನೀತಿಯೇ ಅದರ ಆತ್ಮ. ಇವೆಲ್ಲವುಗಳ ಕ್ರಿಯಾ ಪ್ರತಿಕ್ರಿಯೆಗಳ ಫಲವಾದ ಸಂಸ್ಕೃತಿಯೇ ರಾಷ್ಟ್ರದ ವ್ಯಕ್ತಿತ್ವ.

ರಾಷ್ಟ್ರ ಬೇರೆಯಲ್ಲ, ರಾಷ್ಟ್ರದಲ್ಲಿ ಉಸಿರಾಡಿಸುವ ಜನ ಬೇರೆಯಲ್ಲ. ಜನವೇ ರಾಷ್ಟ್ರ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ತೇಜಸ್ಸಂಕಲನವೇ ಆ ರಾಷ್ಟ್ರದ ವ್ಯಕ್ತಿತ್ವದ ತೇಜವಾಗಿ ಪರಿಣಮಿಸುವುದು. ಮನುಷ್ಯನ ಶರೀರಸೌಷ್ಠವ, ಶಕ್ತಿ, ಬೆಳೆವಣಿಗೆ, ಕಣ್ಣಲ್ಲಿಯ ತೇಜ, ತುಟಿಯಲ್ಲಿಯ ಕಾಂತಿ, ಗಲ್ಲದಲ್ಲಿಯ ಗುಲಾಬಿಯ ಬಣ್ಣ, ಮುಖದ ಮೇಲಿನ ಕಳೆ— ಎಲ್ಲಕ್ಕೂ ಕಾರಣ ಅವನ ನಾಳನಾಳದಲ್ಲಿ ಹರಿಯುವ ರಕ್ತ. ರಕ್ತದ ಒಂದು ಹನಿಯಲ್ಲಿ ಲಕ್ಷಗಟ್ಟಲೆ ಕೋಟಿಗಟ್ಟಲೆ ರಕ್ತಗೋಲಗಳಿವೆ. ಈ ರಕ್ತಗೋಲಗಳು ದೇಹದ ಅಂಗಾಂಗಗಳ ವರ್ಧನೆಯ ಒಂದೇ ಒಂದು ಉದಾತ್ತ ಧ್ಯೇಯದಿಂದ ಪರಸ್ಪರ ಸಹಾಯಕವಾಗಿ, ಪರಸ್ಪರಪೂರಕವಾಗಿ, ಪರಸ್ಪರ ಸಹಾನುಭೂತಿಪರವಾಗಿ— ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ—ಸತತ ದುಡಿಯುತ್ತಿರುತ್ತವೆ; ಜಾಗೃತವಾಗಿರುತ್ತವೆ. ಹೊರಗಿನಿಂದ ಯಾವುದೊಂದು ರೋಗಜಂತುವು ದೇಹವನ್ನು ಪ್ರವೇಶಿಸಿದೊಡನೆ, ಈ ರಕ್ತಗೋಲಗಳು— ಅದರಲ್ಲಿಯೇ ಶ್ವೇತಗೋಲಗಳು—ವಿದ್ಯುದ್ವೇಗದಿಂದ ಆ ಜಂತುವಿನ ಕಡೆಗೆ ಧಾವಿಸಿ, ಆ ಜಂತುವನ್ನು ನಾಶ ಮಾಡಲು ಪ್ರಯತ್ನಪಡುತ್ತವೆ. ರಾಷ್ಟ್ರವು ಒಂದು ದೇಹದಂತಿದ್ದರೆ, ಅದರಲ್ಲಿಯ ಪ್ರತಿಯೊಂದು ವ್ಯಕ್ತಿಯೂ ಈ ರಕ್ತಗೋಲ-

ಂತೆಯೇ ರಾಷ್ಟ್ರದ ಬಲ, ತೇಜಸ್ಸು, ಓಜಸ್ಸು— ಅದರಲ್ಲಿಯ ವ್ಯಕ್ತಿಯನ್ನು ಅವಲಂಬಿಸಿದೆ.

ಷ್ಟ್ರವನ್ನು ಜೇನಿನ ಹುಟ್ಟಿಗೂ ಹೋಲಿಸಬಹುದು. ಒಂದು ನಲ್ಲಿ ಸಾವಿರಾರು ಜೇನುಹುಳುಗಳಿದ್ದರೂ, ಅವೆಲ್ಲವುಗ- ಒಂದೇ ದೃಷ್ಟಿ; ಒಂದೇ ಧ್ಯೇಯ—— 'ಒಂದು ಹುಟ್ಟು ೇಕು, ಆ ಹುಟ್ಟನ್ನು ಕುಸ್ಪದಿಂದ ತುಂಬಬೇಕು' ಎಂದು. ಳಗೆ ಸಾವಿರ ದೇಹಗಳಿದ್ದರೂ ಮನ ಒಂದೇ. ಒಂದಕ್ಕೆ ಂದರ ಸಹಕಾರ, ಸಹಾನುಭೂತಿ, ಪ್ರೀತಿ. ಸಾವಿರ ಹುಳು- ನಿಸ್ವಾರ್ಥವಾದ ಸತತವಾದ ಸಾಮೂಹಿಕವಾದ ಮಧು- ಯವೇ ಹುಟ್ಟಿನ ನಿರ್ಮಾಣ. ಒಬ್ಬ ಕಿಡಿಗೇಡಿ ಒಂದು ುಳವನ್ನು ಹಿಡಿದು ರೆಕ್ಕೆ ಕಿತ್ತಲಿ; ಸಾವಿರ ಹುಳುಗಳೂ ನ ನೆತ್ತಿ ಕುಕ್ಕುವುವು. ಒಂದು ಹುಳುವಿಗೆ ಬೇಡವಾದ ಹುಟ್ಟು ರ ಹುಳುಗಳಿಗೂ ಬೇಡ. ಹೊರಟವು ಮತ್ತೊಂದೆಡೆ! ರಾಷ್ಟ್ರ ರ್ಮಪಕರು ಜೇನಿನಿಂದ ಎಷ್ಟು ಬುದ್ಧಿ ಕಲಿತರೂ ಸಾಲದು. ಜೊಬ್ಬ ವ್ಯಕ್ತಿಯೂ ಜೇನುಹುಳುವೇ ಆಗಬೇಕು. ಅಂದರೇನೇ ು ರಾಷ್ಟ್ರವು ಜೇನುಹುಟ್ಟಾಗುವುದು; ಅದರಲ್ಲಿ ಮಧುವು ು ತುಳುಕುವುದು.

ರಾಷ್ಟ್ರನಿರ್ಮಾಣಕಾರ್ಯದಲ್ಲಿ ಸ್ವಾರ್ಥದ ಕೈವಾಡ ತುಂಬಾ ುಸೆ. ರಾಷ್ಟ್ರವನ್ನು ಕೆಡಹುವುದೂ ಸ್ವಾರ್ಥ; ಕಟ್ಟುವುದೂ ರ್ಥ. ಹೀಗೆ ಎಂದಾಕ್ಷಣ ನನ್ನ ವಿಚಾರ ವಿಪರೀತ, ವಿಲಕ್ಷಣ, ಸಬಹುದು. ಸ್ವಾರ್ಥವಿಲ್ಲದೆ ಅಭಿಮಾನವಿಲ್ಲ; ಅಭಿಮಾನವಿಲ್ಲದೆ ಷ್ಟ್ರನಿರ್ಮಾಣವಿಲ್ಲ.

ಆದರೆ ಇಷ್ಟೇ; ರಾಷ್ಟ್ರಕ್ಕೆ ಗಂಡಭೇರುಂಡದಂತೆ ಎರಡು ಮುಖ- ುಂಟು.— ಒಂದನೆಯದು ಅಂತರ್ಮುಖ; ಎರಡನೆಯದು ಹಿರ್ಮುಖ. ಅದು ಅಂತರ್ಮುಖವನ್ನು ಎತ್ತಿದಾಗ, ಜಗತ್ತೆಲ್ಲ ಮಮತ್ವ 'ದಲ್ಲಿ ಕೇಂದ್ರೀಕೃತವಾಗಿ, ತನ್ನ ನುಳಿದು ಬೇರೆ ಜಗತ್ತೇ ಾನುವುದಿಲ್ಲ; ತನ್ನವರೂ ಬೇರೆಯವರಾಗುವರು; ಬೇರೆಯವ- ೂ ದೊರೇ ಉಳಿಯುವರು. ಸ್ವಾರ್ಥದ ಎರಡನೆಯ ುಖಕ್ಕೆ— ಬಹಿರ್ಮುಖಕ್ಕೆ--ತಾನು ಎಂಬುದು ಕಾಣುವುದೇ ಲ್ಲ. ತಾನು, ತನ್ನವರು, ಬೇರೆಯವರು— ಎಲ್ಲರೂ ರಾಷ್ಟ್ರ- ವರೇ. ತಾನು ರಾಷ್ಟ್ರದ ಒಂದು ಕಣ. ತನ್ನ ವ್ಯಕ್ತಿತ್ವ ರಾಷ್ಟ್ರ- ಲ್ಲಿ ಏಕರೂಪತೆ ಹೊಂದುವುದು. ಸ್ವಾರ್ಥದ ಅಂತರ್ಮುಖ ರಾಷ್ಟ್ರವು ತನಗಾಗಿ' ಎಂದರೆ, ಬಹಿರ್ಮುಖ 'ರಾಷ್ಟ್ರಕ್ಕಾಗಿ ನು' ಎನ್ನುತ್ತಿದೆ. ರಾಷ್ಟ್ರನಿರ್ಮಾಣಕ್ಕೆ ಸ್ವಾರ್ಥದ ಈ ಎರಡ- ು ಮುಖ ತೆರೆಯಬೇಕು.

ಈ ಮಾತನ್ನೇ ಇನ್ನೊಂದು ರೀತಿಯಿಂದ ಹೇಳಬಹುದು: ರ್ಥವೆಂಬುದು ಅಸಂಶ್ಯತವಾದ ಕಲ್ಮಷಮಿಶ್ರಿತವಾದ ಪ್ರೀತಿ. ನ್ನು ಸ್ವಲ್ಪ ಪುಟಕ್ಕೆ ಹಾಕಿದರೆ, ಅದು ಬಂಧುಪ್ರೇಮವಾಗಿ ಣಮಿಸುವುದು. ಅದನ್ನು ಮತ್ತೊಮ್ಮೆ ಪುಟಕ್ಕೆ ಹಾಕಿದಲ್ಲಿ ಅದೇ ರಾಷ್ಟ್ರಪ್ರೇಮವಾಗಿ ಪ್ರಜ್ವಲಿಸುವುದು; ದಿವ್ಯವಾಗುವುದು.

ರಾಷ್ಟ್ರಪ್ರೇಮ ದಿವ್ಯವಾದುದು ಎಂದೊಡನೆ, ಅದರಲ್ಲಿ ಧಾರ್ಮಿಕತೆಯ ಛಾಯೆಯುಳ್ಳ ಇನ್ನೊಂದು ಮಾತು ಸ್ಪಷ್ಟ- ವಾಯಿತು. ರಾಷ್ಟ್ರವೆಂದರೆ ಜನತೆ, ಜನತೆಯೆಂದರೆ ದೇವ; ಆದುದರಿಂದ ರಾಷ್ಟ್ರವೆಂದರೆ ದೇವ. ದೇವತಾಪ್ರೀತ್ಯರ್ಥವಾಗಿ ನಾನಾಬಗೆಯ ಧಾರ್ಮಿಕ ಕರ್ಮಗಳನ್ನು ಮಾಡುವುದಕ್ಕಿಂತ, ಯಜ್ಞ-ಯಾಗ-ತಪಶ್ಚರ್ಯಾದಿಗಳ ಗೋಜಿಗೆ ಹೋಗುವುದಕ್ಕಿಂತ, ಸುಲಭವಾದ ಒಳಹಾದಿಯನ್ನು ಹಿಡಿಯುವುದು ಲೇಸು. ಜನತೆ- ಯಲ್ಲಿ ಪ್ರೇಮಭಾವ ತೋರಿಸಿಬಿಟ್ಟರೆ ದೇವರನ್ನು ಪ್ರೀತಿಸಿದಂತೆ; ಎಂದರೆ ದೇವ ತಾನೇ ನಮ್ಮನ್ನು ಪ್ರೀತಿಸುವನು. ಇಲ್ಲಿ ಈ ಮಾತಿಗೆ ಪುಷ್ಟಿ ದೊರೆಯುವ ಒಂದು ಐತಿಹಾಸಿಕ ಕತೆಯೂ ನೆನಪಿಗೆ ಬಂತು:

ಹಿಂದಕ್ಕೆ ಒಬ್ಬ ದೊಡ್ಡ ಅರಸು ಆಗಿಹೋದ— ಅಬೂಬೆನ್ ಅದಮ್ ಎಂದು. ಒಂದು ರಾತ್ರಿ ಅತ ಗಾಢನಿದ್ರೆಯಲ್ಲಿ ಇದ್ದಾಗ ಶಬ್ದನೆ ಎದ್ದು ಕುಳಿತ. ಅರ್ಧ ನಿದ್ರೆ, ಅರ್ಧ ಎಚ್ಚರಿಕೆ. ಮಲಗಿದ ಕೋಣೆ ಪ್ರಶಾಂತವಾಗಿತ್ತು. ತುಂಬಿದ ಹುಣ್ಣಿಮೆಯ ಬೆಳುದಿಂಗಳು ಕಟಾಂಜನದ ಕಿಡಿಕಿಗಳಿಂದ ಒಳಗೆ ಚೆಲ್ಲಿ, ಎಲ್ಲೆಲ್ಲಿಯೂ ಬೆಳ್ಳಗೆ ರಂಗವಲ್ಲಿ ಹಾಕಿದಂತಿತ್ತು. ಅದಮನಿಗೆ ಆನಂದವಾಯ್ತು.

ಬಹುಮಾನ ೫೦೦ ರೂ.
— ಅದ್ಭುತ ಸಂಶೋಧನೆ —
ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿ ಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರ ವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸು ವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನೌಕರಿಯಲ್ಲಿ ಗೆಲವನ್ನು ಪಡೆ ಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಸ್ಟು ಖರ್ಚು ಬೇರೆ.

MAHAKALI ASHRAM
NO. 247. KANPUR.



ನಮ್ಮ 'ಪಾನ್ ಮಸಾಲಾ'
ವೀಳ್ಯಕ್ಕೆ ಉಪಯೋಗಿಸಿದರೆ ಅದು
ಅತ್ಯಂತ ರುಚಿಕರವೂ ಹಿತಕರವೂ
ಎನಿಸುತ್ತದೆ.
ಒಮ್ಮೆ ಉಪಯೋಗಿಸಿ ನೋಡಿ.
ನಮ್ಮ ಗದುಗಿನ ವಿಜಂಟರು:
ಶ್ರೀನಿವಾಸ ಸ್ಟೋರ್ಸ್, ಗದಗ

ಮರುಕ್ಷಣ ಒಂದು ವಿಚಿತ್ರ ಸಂಗತಿ ಜರುಗಿತು: ನೋಡು-ನೋಡುತ್ತಿದ್ದಂತೆ ಅದನ ಮುಂದೆ ಮುಲ್ಲಿಗೆಗಿಂತಲೂ ಮುದ್ದಾದ ದೇವಕನ್ನಿಕೆಯೊಬ್ಬಳು ವೈಡೂರಿ ನಿಂತಳು ಆಕೆಯ ಬಣ್ಣ, ಆಕೆಯ ನಗೆ– ಎಲ್ಲವೂ ಅಹ್ಲಾದಕರವಾಗಿದ್ದುವು. ಆಕೆ ಕೈಯಲ್ಲಿ ಒಂದು ಸ್ವರ್ಣಪತ್ರವನ್ನು ಹಿಡಿದಿದ್ದಳು.

ಅದಮ್ ಬೆಚ್ಚಿಬಿದ್ದ. ಆದರೂ ಧೈರ್ಯಗೊಂಡು ವಿನಯದಿಂದ ಕೇಳಿದ :

" ಕೈಯಲ್ಲಿ ಇರುವುದು ಏನದು ? "
" ಜನರ ಪಟ್ಟಿ ! "
" ಎಂತಹ ಜನರ ಪಟ್ಟಿ ? "
" ದೇವರನ್ನು ಪ್ರೀತಿಸುವ ಜನರದು. "
" ಅದರಲ್ಲಿ ನನ್ನ ಹೆಸರು ಇದೆಯೇ ? "
" ಇಲ್ಲ. "

ಅದಮನ ಮೋರೆ ಬಾಡಿತು. ಮರುಕ್ಷಣ ಆತ ದೇವಕನ್ನಿಕೆಯನ್ನು ದೀನಮುದ್ರೆಯಿಂದ ಕೇಳಿಕೊಂಡ : " ಜನತೆಯನ್ನು ಪ್ರೀತಿಸುವವರ ಯಾದಿಯಲ್ಲಾದರೂ ನನ್ನ ಹೆಸರನ್ನು ಬರೆದುಕೊಳ್ಳುವೆಯಾ ? " ಎಂದು.

ಆಕೆ ' ಹೂಂ ' ಎಂದಳು; ನಕ್ಕಳು; ಮಾಯವಾದಳು.

ಮರುದಿನ ರಾತ್ರಿ ಅದೇ ಕನ್ನಿಕೆ ಮತ್ತೆ ಬಂದಳು.
ಅದಮ್ ಕೇಳಿದ : " ಎಲ್ಲಿಂದ ಬಂದೆ ? "
" ದೇವನಿಂದ. "
" ಕೈಯಲ್ಲಿ ಇಂದು ಏನಿವೆ ? "
" ದೇವನ ಪ್ರೀತಿಗೆ ಪಾತ್ರರಾದವರ ಪಟ್ಟಿ ! "
" ಅದರಲ್ಲಿ ನನ್ನ ಹೆಸರು ಇದೆಯೇ ? "

ದೇವಕನ್ನಿಕೆ ಮುಖವನ್ನು ಅರಳಿಸಿ ನುಡಿದಳು : " ಹು ಎಲ್ಲಕ್ಕೂ ಮೊದಲು ನಿನ್ನ ಹೆಸರೇ ಇದೆ; ದಪ್ಪ ಅಕ್ಷರಗಳಲ್ಲಿ ಇ ವರ್ಣರಂಜಿತವಾಗಿ ಬರೆದಿದೆ ! "

ಅದಮನ ವಿನಯ ಹೆಚ್ಚಿತು. ಆಕೆ ಮಾಯವಾದಳು.

೩

ಈಗ ನನ್ನ ಚಿತ್ತ ಜಪಾನಿನತ್ತ ಹೊರಳಿತು.

ಎಂದಿನಿಂದಲೋ ಹಿಂದೆಬಿದ್ದ ಜಪಾನು ಒಮ್ಮಿದೊಮ್ಮೆ ಮುಂ ಬಂದುದು, ರಾಷ್ಟ್ರನಿರ್ಮಾಣದ ಈ ಗುಟ್ಟನ್ನು ಕಂಡುಕೊಂಡಿದ್ದ ರಿಂದಲೇ. ಅಂತೆಯೇ ಕಣ್ಮುಚ್ಚಿ ಕಣ್ಣರೆಯುವುದರಲ್ಲಿಯೇ ಅ ಬಲಾಢ್ಯ ರಾಷ್ಟ್ರ ಕಟ್ಟಿತು. ಜಗತ್ತನ್ನೇ ಬೆರಗುಗೊಳಿಸಿತು. ಕಡೆ ಯುದ್ಧದಲ್ಲಿ ಬಿದ್ದರೂ ವೀರನಂತೆ ಬಿದ್ದಿತು. ಡಾ. ಪಾಲ್ ಹೇಳುವಂತೆ, ಜಪಾನು ದಲಿತರಾಷ್ಟ್ರವಾಗಿ ಉಳಿಯಲು ಸಾಧ್ಯವ ಇಲ್ಲ. ಅದನ್ನು ಸ್ವಲ್ಪ ಪುಟಿಸಿದರೆ, ಪುಟಗೆಚಂಡಿನಂತೆ ಮೂ ಮಾರು ಜಿಗಿಯುವುದು.

ಜಪಾನಿಗಳಲ್ಲಿ ಒಂದು ವಿಚಿತ್ರ ಪರಿಸ್ಥಿತಿ: ಅವರಲ್ಲಿ ಎರಡ ಧರ್ಮಗಳು. ಮನೆಯಲ್ಲಿ ಒಂದು, ಮನೆಯ ಹೊರಗೆ ಒಂದು ಮನೆಯಲ್ಲಿಯ ಧರ್ಮಕ್ಕೆ ಪ್ರಾಮುಖ್ಯವಿಲ್ಲ. ಒಂದೇ ಮನೆ ಯಲ್ಲಿ ತಂದೆ ಕ್ರೈಸ್ತನಾದರೆ, ತಾಯಿ ಬೌದ್ಧಧರ್ಮದವಳು ಮಗ ಮುಸಲ್ಮಾನ; ಮಗಳು ಮತ್ತೊಂದು ಧರ್ಮದವಳು. ಮನೆ ಬಿಟ್ಟುಹೊರಗೆ ಬಂದಾಗ, ಪ್ರತಿಯೊಬ್ಬನ ಧರ್ಮ ' ಶ್ಯಾಂಟೊ-ಯಿಜಂ '. ಇದು ರಾಷ್ಟ್ರ ಧರ್ಮ. ಈ ಧರ್ಮದ ಮೇರೆಗೆ ಪ್ರತಿ-ಯೊಬ್ಬ ಜಪಾನಿಯು ತಾನೂ ತನ್ನ ಸರ್ವಸ್ವವೂ ರಾಷ್ಟ್ರದ ಹಿತ-ಕ್ಕಾಗಿ, ರಾಷ್ಟ್ರದ ಏಳಿಗೆಗಾಗಿ–ಎಂದು ಭಾವಿಸುವನು. ರಾಷ್ಟ್ರಕ್ಕಾಗಿ ದುಡಿದವನು, ಪ್ರತಿಯೊಬ್ಬರ ಮನೆಯ ಜಗುಲಿಯ ಮೇಲೆ ದೇವ-ರಾಗಿ— ಪೂಜೆಗೆ ಪಾತ್ರನಾಗಿ—ಕೂಡುವನು. ಈ ದೃಷ್ಟಿಯಲ್ಲಿಯೇ ಜಪಾನಿನಲ್ಲಿಯ ಹೊಸ ಪೀಳಿಗೆಯ ಶಿಕ್ಷಣ ಸಾಗಿದೆ.

ಭಾರತದಿಂದ ಒಬ್ಬ ಶಿಕ್ಷಣತಜ್ಞ ಜಪಾನದ ಶಿಕ್ಷಣ ಪದ್ಧತಿ-ಯನ್ನು ಅಭ್ಯಸಿಸಲು ಹೋಗಿದ್ದ. ಅವನು ಅಲ್ಲಿಯ ಪ್ರಾಥಮಿಕ ಶಾಲೆಗಳಿಗೆ ಸಂದರ್ಶನವೀಯುತಿದ್ದ. ಹೋದಹೋದಲ್ಲೆಲ್ಲ ಆ ಪುಟ್ಟ ಬಾಲಕರಿಗೆ ಒಂದೇ ಒಂದು ಪ್ರಶ್ನೆ ಕೇಳುತ್ತಿದ್ದ : ' ನಿಮ್ಮ ಜೀವನ-ದಲ್ಲಿಯ ಅತ್ಯುನ್ನತ ಮಹತ್ತ್ವಾಕಾಂಕ್ಷೆ ಯಾವುದು ? ' ಎಂದು. ಯಾವ ಶಾಲೆಯಲ್ಲಿಯೂ ಅವನಿಗೆ ದೊರೆತ ಉತ್ತರ ಒಂದೇ:

ನನ್ನ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುವುದು!" ಎಂದು. ಶಪಥ ಚಕಿತನಾದ; ಹರ್ಷಭರಿತನಾದ.

ಇದು ಬರಿಯ ಹಿಂಧಾಚಾರದ ಧರ್ಮವಲ್ಲ. ಈ ಧರ್ಮ ಜಪಾನಿಯರ ನಾಳನಾಳದಲ್ಲಿ ಹರಿಯುತ್ತಿದೆ ಎಂಬುದು, ಕಲ್ಲಿನ ಎದೆಯನ್ನೂ ಕರಗಿಸುವಂತಹ ಕೆಳಗಿನ ದೃಷ್ಟಾಂತದಿಂದ ಸ್ಪಷ್ಟವಾಗುವುದು.

ಹಿಂದೆ ಮಂಚೂರಿಯಾದಲ್ಲಿ ಯುದ್ಧ ನಡೆದಿತ್ತು. ಜಪಾನಿಗಳ ಶೌರ್ಯ-ದೇಶಾಭಿಮಾನಗಳ ಫಲವಾಗಿ ವಿಜಯಶ್ರೀ ಅವರಿಗೆ ಜೈಜೈಗೆ ಮಾಲೆಹಾಕುತ್ತಿದ್ದಳು.

ಈ ಜಯಕ್ಕೆಲ್ಲ ಕಾರಣ ಒಬ್ಬ ಶೂರ ಸೇನಾಪತಿ. ಜಪಾನಿನ ಪ್ರತಿಯೊಬ್ಬ ವ್ಯಕ್ತಿಗೂ ಈ ಸೇನಾಪತಿಯು ಬಗ್ಗೆ ಅವರ, ಪ್ರೀತಿ. ಪ್ರತಿಯೊಂದು ವರ್ತಮಾನ ಪತ್ರದಲ್ಲಿಯೂ ಇವನ ಚಿತ್ರ, ವರ್ಣನೆ. ಪ್ರತಿಯೊಬ್ಬನೂ ಯುದ್ಧಭೂಮಿಯಲ್ಲಿಯೂ ಇವನ ಚಲನವಲನಗಳನ್ನು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದನು.

ಎಲ್ಲರಿಗಿಂತಲೂ ಹೆಚ್ಚು ಆನಂದ ಇವನ ಹೆಂಡತಿಗೆ. ಆಕೆ ಜಪಾನಿನಲ್ಲಿಯೇ ಇದ್ದಳು. ಗಂಡನ ವಿಜಯದ ಸುದ್ದಿ—ಜಪಾನಿನ ವಿಜಯದ ಸುದ್ದಿ— ಬಂದೊಡನೆ, ಆಕೆ ಆನಂದದಿಂದ ಕಣ್ಣೀರುಗರೆಯುತ್ತಿದ್ದಳು. ಆ ಚೆಲುವೆಗೆ ಗಂಡನಲ್ಲಿ ಅಷ್ಟು ಪ್ರೀತಿ; ಅವನ ಬಗೆಗೆ ಅಷ್ಟು ಅಭಿಮಾನ.

ಆ ಸೇನಾಪತಿಗೆ ಹೆಂಡತಿಯೆಂದರೆ ಎಲ್ಲಿಲ್ಲದ ಆಕರ್ಷಣೆ. ರಣರಂಗದ ತಾಪತ್ರಯ ಬೇಜಾರು ಬಂದು, ಜಪಾನಿಗೆ ಹೋಗಿ ಹೆಂಡತಿಯ ಮುಖವನ್ನು ಒಮ್ಮೆ ನೋಡಿಯಾದರೂ ಬರಲಾ?—ಎನಿಸಿತವನಿಗೆ. ಬಯಕೆ ಹೆಚ್ಚಿತು. ಹೆಂಡತಿಗೆ ತಂತೀ ಮಾಡಿದ—'ಬಂದು ಹೋಗುವೆ' ಎಂದು.

ಈಗ ನಿರ್ಣಾಯಕ ಯುದ್ಧ ನಡೆದಿದ್ದಿತು. ಜಪಾನಿನ ಸೇನೆ ಅಯಕಟ್ಟಿನ ಸ್ಥಳ ವಶಪಡಿಸಿಕೊಳ್ಳುವುದರಲ್ಲಿ ಇತ್ತು. ಈ ಸಮಯದಲ್ಲಿ ಗಂಡನು ರಣಭೂಮಿಯಲ್ಲಿ ಇದ್ದರೆ ಜಪಾನಿಗೆ ಜಯ ಖಂಡಿತ ಎಂಬುದು ಆ ಸುಂದರಿಗೆ ಗೊತ್ತಿತ್ತು.

ತಂತಿ ಬಂದೊಡನೆ ಆಕೆಗೆ ಒಂದು ಕ್ಷಣ ಆನಂದವಾಯಿತು. ಮರುಕ್ಷಣವೇ ಆಕೆ ಚೀಟಿಗೆ ಬಿದ್ದಳು: 'ಗಂಡ ಈಗ ಇತ್ತ ಬಂದರೆ, ಜಪಾನದ ಗತಿಯೇನು?' ಎಂದು. 'ಬರಬೇಡ' ಎಂದು ತಂತೀ ಬಿಡಲಾ?—ಎನಿಸಿತಾಕೆಗೆ. ಹಾಗೆ ಮಾಡಿದರೆ, ಗಂಡ ಅಪಾರ್ಥ-ಮಾಡಿಕೊಳ್ಳುವನೆಲ್ಲೋ ಎಂದು ಭಯ. ಮೇಲಾಗಿ 'ಬರುತ್ತೇನೆ' ಎಂದು ತಂತೀನೂಡಿದ ಮೇಲೆ ಬಂದೇ ತೀರುವ ದೃಢನಿಶ್ಚಯದ ಗಂಡ ಎಂಬದೂ ಗೊತ್ತಿತ್ತು ಆಕೆಗೆ.

ಒಂದು ಕ್ಷಣ ವಿಚಾರಿಸಿದಳು. ಒಂದು ಉಪಾಯವನ್ನೂ ಹುಡುಕಿದಳು. ತಾನು ಇದ್ದರೆ, ಗಂಡ ಓಡಿಬರುವ. ತಾನು ಸತ್ತು-ಹೋದೆನೆಂಬ ಸುದ್ದಿ ತಿಳಿದರೆ, ಅಲ್ಲಿಯೇ ಉಳಿದು ಜಪಾನಿಗೆ ವಿಜಯ ತರುವ— ಎಂದು ಆಂದುಕೊಂಡಳು.

ಆಕೆಯ ಕಣ್ಣುಗಳು ಅರಳಿದುವು; ತೇಜಃಪುಂಜವಾದುವು. ಮೇಜಿನ ಒಡಲಲ್ಲಿ ಒಂದು ಪಿಸ್ತೂಲು ಇತ್ತು; ಗುಂಡಿನಿಂದ ಸುಸಜ್ಜಿತವಾಗಿತ್ತು. ಅದನ್ನು ಎದೆಗೆ ಇಟ್ಟುಕೊಂಡು 'ಢಮ್' ಎನಿಸಿದಳು!

x x x x x

ಈ ಸುಂದರಿಯ ದೇಶಾಭಿಮಾನದ ನೆನಪು ನನ್ನ ಮೈಮೇಲೆ ಮುಳ್ಳೆಬ್ಬಿಸಿತು. ಗಗನಮಹಾಲಿನ ಕಟ್ಟೆಯಮೇಲೆ ಕುಳಿತು ಬಹಳ ಹೊತ್ತಾದುದು ನೆನಪಿಗೆ ಬಂತು. ಎಲ್ಲೆಲ್ಲಿಯೂ ಕತ್ತಲೆಯಾಗಿತ್ತು. ಮೇಲೆ ಎದ್ದು ಮನೆಗೆ ಹೊರಟಾಗ, 'ನಮ್ಮ ಭಾರತದಲ್ಲಿ— ಅದರಲ್ಲಿಯೇ ನಮ್ಮ ಕರ್ನಾಟಕದಲ್ಲಿ— ಈ ಬಗೆಯ ರಾಷ್ಟ್ರದೃಷ್ಟಿ ಉಂಟೇ?' ಎಂದು ನನ್ನನ್ನೇ ಕೇಳಿಕೊಂಡೆ. ಅದಕ್ಕೆ ಉತ್ತರವಾಗಿ ಕಣ್ಣುಮುಂದಿನ ಕತ್ತಲೆ ಕಾರ್ಗತ್ತಲೆಯಾಗಿತ್ತು. ಎಡಹುತ್ತ ಮುಗ್ಗರಿಸುತ್ತ ಮನೆಗೆ ಹೋದೆ.

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಸುಮಾರು ೬೦೦ ಪುಟಗಳಲ್ಲಿ ನಾಲ್ಕು ಗ್ರಂಥಗಳು

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚಸೇರಿ

ಸಂಪಾದಕರು— ಕಲಮದಾನಿ ಗುರುರಾಯರು

೩ನೆಯ ವರ್ಷದ ಎರಡನೆಯ ಗ್ರಂಥ

ಆಶಾ

[ಸಾಮಾಜಿಕ ಕಾದಂಬರಿ]

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಮೂರ್ಛಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ

ಔಷಧಿ!

ಡಾ. ವಾಮನ ಗೋಪಾಳ

ಇವರ

ಸಾರ್ವ ಪರಿಲ್ಲಾ

ಧಾರವಾಡದಿಂದ ಉತ್ತರಕ್ಕೆ

(ಪ್ರವಾಸದ ಅವಧಿಯಲ್ಲಿಯ ದಿನಚರಿ)

ಬರೆದವರು: ಬಸವಣ್ಣೆಪ್ಪ ದೊಡ್ಡಜ್ಜಪ್ಪನವರ, ಒಕ್ಕಲುತನದ ಕಾಲೇಜ್, ಧಾರವಾಡ

★

ಪ್ರವಾಸ ಪ್ರಬಂಧಗಳು ಕತೆಯಂತೆ ಮನೋರಂಜಕವಾಗಿದ್ದು ವಾಸ್ತವದ ಜ್ಞಾನವನ್ನೂ ಮಾಡಿ ಕೊಡಬಲ್ಲವು. ಒಕ್ಕಲುತನದ ಕಾಲೇಜಿನ ವಿದ್ಯಾರ್ಥಿಯೊಬ್ಬನ ಪ್ರವಾಸಾನುಭವ ಇದರಲ್ಲಿ ನಿರೂಪಿತವಾಗಿದೆ.

ಮಿರಜಿಯಿಂದ ೪-೩೦ ಗಂಟೆಗೆ ಹೊರಟ ಉಗಿಬಂಡಿಯು ಇದೀಗ ಒಂದು ತಾಸಿನ ಹಿಂದೆ ನನ್ನನ್ನು ಪುಣೆಯ ನಿಲ್ದಾಣಕ್ಕೆ ತಲ್ಪಿಸಿತು. ನನ್ನ ನಾಡು "ಇತೋ ಭ್ರಷ್ಟಃ ತತೋ ಭ್ರಷ್ಟಃ" ಎಂಬಂತೆ ಆಯಿತು. ಇರುಳೆಲ್ಲವೂ ಬಂಡಿಯಲ್ಲಿಯೇ ಕಳೆದು ಹೋಗಿದ್ದರೆ ಎಲ್ಲವೂ ಸರಿಹೋಗಬಹುದಿತ್ತು; ಇಲ್ಲವೆ ಬಂಡಿಯು ನನ್ನನ್ನು ಇಂತಹ ವಿಷಮವೇಳೆಗೆ ನಿಲ್ದಾಣಕ್ಕೆ ತಲ್ಪಿಸದೆ ಅನುಕೂಲ ವೇಳೆಗೆ ತಂದಿಳಿಸಿದ್ದರೆ, ಜೇರೆ ಎಲ್ಲಿಯಾದರೂ ನಿಲ್ದಾಣದ ಹೊರಗೆ ಹೋಗಿ ತಂಗಬಹುದಾಗಿತ್ತು. ಇವೆರಡೂ ಸಾಧ್ಯವಾಗದೆ, ನಾನು ಗಂಟು-ಮೊಟ್ಟೆಗಳನ್ನು ಕಾಯುತ್ತ ಬೆಳಗಾಗುವ ವರೆಗೆ ನಿಲ್ದಾಣದಲ್ಲಿಯೇ ಜಾಗರಣೆ ಮಾಡಿದೆನೆಂದು ಹೇಳಿದರೆ, ನಾನು ಮೇಲೆ ಬರೆದ ಸಂಸ್ಕೃತ ಗಾದೆಯ ಸ್ಪಷ್ಟತೆಯು ನಿಮಗೆ ಹೊಳೆದು, ನನ್ನೆಲ್ಲರ ಇಂದಿನ ಸ್ಥಿತಿಯ ಬಗ್ಗೆ ನೀವೂ ಮರುಕಪಡಬಹುದು.

ಇರುಳು ಜಾಗರಣೆ ಮಾಡಿದೆನೆಂದು ಹೇಳಲಿಲ್ಲವೇ? ಆ ವೇಳೆಯಲ್ಲಿಯೇ ದಿನಚರಿಯನ್ನು ಬರೆಯುವ ಸಾಹಸ ಕೈಕೊಂಡೆ. ಈ ದಿನಚರಿಯಲ್ಲಿ ಪ್ರವಾಸ ಮಾಡುವ ಅವಧಿಯಲ್ಲಿ ನನಗುಂಟಾಗುವ ಅನುಭವಗಳನ್ನೂ, ನಿರೀಕ್ಷಣೆಗಳನ್ನೂ, ಎನಿಸಿಕೆಗಳನ್ನೂ, ಕೇಳಿಕೆಗಳನ್ನೂ ಬರೆದಿಡುವೆನೆಂದು ಗೆಳೆಯರ ಎದುರು ಅಡಿದ್ದೆನು. ನುಡಿದಂತೆ ನಡೆದು ತೋರಿಸಲು— ಮಾತಿಗೆ ಹುಸಿಯದಿರಲು— ನನ್ನ ಮತಿಗೆ ತೋಚಿದ ವಿಷಯಗಳನ್ನು, ಪ್ರವಾಸದ ಕೊನೆಯವರೆಗೂ ಬರೆದಿಡುತ್ತ ಸಾಗುವೆ

× × × ×

ಪ್ರವಾಸದ ಮೇಲೆ ಹೊರಟವರು ಒಟ್ಟಾರೆ ಎಂಬತ್ತೆರಡು ಜನ: ಐವರು ಅಧ್ಯಾಪಕರು, ಉಳಿದವರು ವಿದ್ಯಾರ್ಥಿಗಳು. ಅಕ್ಟೋಬರ್ (೧೯೪೪) ೬ನೆಯ ಗುರುವಾರ ೬-೩೦ ಗಂಟೆಯ 'ಪೂನಾ-ಪ್ಯಾಸೆಂಜೆರ್'ನಲ್ಲಿ ಪ್ರಯಾಣ ಬೆಳಸಿದೆವು ಶಿಕ್ಷಕರಲ್ಲೊಬ್ಬರು ನಮಗಾಗಿ ಜಿ. ಆಯ್. ಪಿ. ನುತ್ತು ಬಿ. ಬಿ. ಸಿ. ಆಯ್. ಮಾರ್ಗಗಳಲ್ಲಿ ಬಂಡಿಗಳನ್ನು ಕಾಯ್ದಿರಿಸುವ ಕಾರ್ಯಕ್ಕಾಗಿ ಮುನ್ನವೇ ತೆರಳಿದ್ದರು. ವಿದ್ಯಾರ್ಥಿಗಳಲ್ಲಿ ಕೆಲವರು— ಪುಣೆಯಲ್ಲಿ ೬ನೆಯ ದಿನಾಂಕಕ್ಕೆ ನಿಯಮಿಸಿದ— ಭಾರತದ ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಕಣ್ಣಾರೆ ಕಾಣುವ ಸುವರ್ಣಸಂಧಿಯ ಲಾಭ ಪಡೆಯಲು ಮೊದಲೇ ಹೊರಟು ಹೋಗಿದ್ದರು. ಈ ಎಲ್ಲ ಮಂಡಳಿಯೂ ನಾಳೆ ಮುಂಜಾವ ನಮ್ಮನ್ನು ಕೂಡಲಿರುವುದು.

ನಾವು ಬಂಡಿಯಿಂದಿಳಿದು ಊಟ-ನಿದ್ದೆಗಳಿಗಾಗಿ ತಂಗುವುದು— ಸುಮಾರು ೨೫ ಗಂಟೆಗಳ ತರುವಾಯ— ನಿಫಾದ ಎಂಬ ಊರಲ್ಲಿ ಎಂಬುದು, ಮೊದಲೇ ಎಲ್ಲರಿಗೂ ತಿಳಿದ ವಿಷಯವಾಗಿತ್ತು. ನಿಫಾದಕ್ಕೆ ತಲುಪುವ ತನಕ, ತಮ್ಮ ತಮ್ಮ ಊಟ ಅಲ್ಪೋಪಹಾರಗಳ ಹೊಣೆಗಾರಿಕೆ ಅವರವರ ಮೇಲೆಯೇ ಎಂಬುದು ವಿಧಿತವಾಗಿತ್ತು. ನಿಫಾದಕ್ಕೆ ತಲುಪಿದ ನಂತರ ಪ್ರವಾಸದ ಕಾರ್ಯಕ್ರಮವು ಮುಗಿಯುವ ವರೆಗೂ, ಊಟ-ತಿಂಡ್ಯೋಪಹಾರಗಳ ವಿಷಯದಲ್ಲಿಯ ಹೊಣೆಗಾರಿಕೆಯು "ಸಾಮೂಹಿಕ ಕ್ಲಬ್ಬಿ"ನ ಈರ್ವರು ಪ್ರಮುಖ ಕಾರ್ಯದರ್ಶಿಗಳು— ಐವರು ವಿದ್ಯಾರ್ಥಿ-ಸಹಾಯಕ ಕಾರ್ಯದರ್ಶಿಗಳು— ಇನ್ನುಳಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು— ಇವರೆಲ್ಲರಿಂದಲೂ ಸಾರ್ವತ್ರಿಕವಾಗಿ ನಿರ್ವಹಿಸಲ್ಪಡಬೇಕೆಂದು ನಿರ್ಣಯಿಸಲಾಗಿತ್ತು. "ಮನೆಗೆದ್ದು ಮಾರು-ಗೆದೆ"ಯ ಬೇಕೆಂಬ ಮಾತಿನಲ್ಲಿ ನಮ್ಮವರಿಗೆ ನಂಬಿಕೆ ಹೆಚ್ಚಾಗಿದ್ದಿತೇನೋ! ಎಲ್ಲರೂ ತಮತಮಗೆ ಯೋಗ್ಯ ತೋರಿದ ರೀತಿಯಲ್ಲಿ— ವೈಯಕ್ತಿಕವಾಗಿ— ಬೇಕೆನಿಸಿದಷ್ಟು ಉಣಿಸು-ತಿನಿಸುಗಳನ್ನು ಸಿದ್ಧಗೊಳಿಸುವುದರಲ್ಲಿ ಮಗ್ನರಾದರು. ವ್ಯಕ್ತಿಗತವಾದ ಈ ಒಂದು ವರೆ ದಿನಗಳ ಸಮಸ್ಯೆಯ ಪರಿಹಾರಕ್ಕಾಗಿಯೇ ಎಷ್ಟೋ ಶ್ರಮವಹಿಸಿದರು. ಇಂತಹದರಿಂದ ಸಾಂಘಿಕಕೆಲಸವು ಕೆಲಮಟ್ಟಿಗೆ ದುರ್ಲಕ್ಷ್ಯಿಸಲ್ಪಟ್ಟಿತೆಂಬುದನ್ನು ಹೇಳುವದೇ ನನ್ನ ಮುಖ್ಯ ಉದ್ದೇಶವು. ಸಾಪ ತಪ್ಪೇನಿಲ್ಲ ಆವರು ಮಾಡಿದುದರಲ್ಲಿ? ಆವರು ಹಿಂದೀಯರಲ್ಲವೆ? ಈ ಗುಣ ಹಿಂದೀಯ ಜನಾಂಗಗಳಲ್ಲಿ ಅನುವಂಶಿಕವಾಗಿ ಬಂದು ಅಳವಾಗಿ ಬೇರೂರಿದುದನ್ನು ತಪ್ಪಿಸುವುದು ಕೊಂಚ ಕಷ್ಟ.

ಎರಡು ದಿನಗಳ ಊಟ-ಉಪ್ಪೋಪಹಾರಗಳ ಬಗ್ಗೆ ಉಣಿಸು ತಿನಿಸುಗಳನ್ನು ಕಟ್ಟಿಸುವ ಪ್ರಶ್ನೆಯು ಹುಟ್ಟಿ, ಆ ಬಗ್ಗೆ ಚರ್ಚೆಯೂ ನಮ್ಮ-ನಮ್ಮೊಳಗೆ ಆಯಿತು ಕ್ಷಣಕ್ಕೊಂದು ಗಳಿಗೆಗೊಂದು ಜಡೆತಡೆಗಳು ಅಡ್ಡ ಬಂದು—ಮುಂದುಗಾಣದೆ—ಕೊನೆಗೆ ಯಾವ ನಿರ್ಣಯಕ್ಕೂ ಬಾರದೆ, ನಮ್ಮ ಚಾವಡಿಯು ಚೆದರಿತು. ಕೊನೆಗೆ, ಮುನ್ನಾದಿನ ನುಲಗುವ ಮುನ್ನ ಗೆಳೆಯರೊಬ್ಬರು ಬಿಸಿಸುದ್ದಿಯೊಂದನ್ನು ಬೀರಿದರು:— ನಾವೆಲ್ಲರೂ ನಸುಕಿನಲ್ಲಿ ಊಟ ತೀರಿಸಿ ಸಾಯಂಕಾಲದ ಊಟಕ್ಕೆ ಕಟ್ಟಿಸುವುದೆಂದು. ಮನಸ್ಸಿಲ್ಲದಿದ್ದರೂ ಅವರೆದುರು ಹೂಗುಟ್ಟಿ ನಿದ್ದೆ ಹೋದೆನು. ಸಾಯಂಕಾಲದ ಊಟಕ್ಕೆ ಕಟ್ಟಿಸುವುದು ರಹಿತಪಟ್ಟಿತೆಂದು ಇಂದು ಮುಂಜಾನೆ ಗೊತ್ತಾದಾಗ ನಾನೆಷ್ಟು ಸಂತೋಷಪಟ್ಟಿರಬೇಕೆಂಬುದನ್ನು ಊಹಿಸಬಲ್ಲಿರಾ? ತಣ್ಣನೆಯ ಉಣಿಸು-ತಿನಿಸುಗಳು ಹಾಗೂ ತಂಪಾದ ಪಾನೀಯಗಳು ನನ್ನ ಏಳು ಏಳು ಜನ್ಮದ ವೈರಿಗಳು. ನನಗೂ ಅವುಗಳಿಗೂ ಇರುವ ಸ್ನೇಹ ಎಣ್ಣೆ-ಸೀಗೇಕಾಯಿಗಳಿದ್ದಷ್ಟು! ಈ ಬಗ್ಗೆ ನನ್ನದೇ ಆದ ಒಂದು ಮೋಜಿನ ಘಟನೆಯು ನೆನಪಾಗುತ್ತದೆ. ಒಮ್ಮೆ ನನ್ನ ಸಂಗಡಿಗನ ಮಾತಿಗೆ ಕಿವಿಜೋತು ಎರಡು "ಆಯಿಸ್-ಕ್ರೀಮಿನ" ಗಣಿಕೆಗಳನ್ನು ಕೊಂಡಿದ್ದೆನು. ಪದ್ಧತಿಯಂತೆ ಅವನು ತಿನ್ನಲಾರಂಭಿಸಿದನು. ನಾನು ಗಣಿಕೆಯ ಹಿಂಬದಿಗಿದ್ದ— ಅ ಬರ್ಫಕ್ಕೆ ಆಧಾರಕೊಡುವ ಬಿದಿರುಕಡ್ಡಿಯನ್ನು ಬಲಗೈಯ ಎರಡು ಬೆರಳುಗಳ ನಡುವೆ ಹಿಡಿದು ಅದನ್ನು ಮೇಲಕ್ಕೆತ್ತಿದೆನು. 'ಆ' ಎಂದು ಬಾಯ್ದೆರೆದು ಅದನ್ನು ಸಾವಕಾಶವಾಗಿ ಬಾಯಲ್ಲಿಳಿಸಿದೆನು. ಅದರ ಮೊದಲನೆಯ ಸಂಪರ್ಕ ದಂತಪಙ್ತಿಯೊಡನೆ ಆಯಿತು.

ಸೌ. ಸೋನೂಬಾಯಿ, ಹಾವೇರಿ

GE 8359 } ಸಖಿ ಬಾರೆ ಪೋಗಿ ತಾರೆ
ನಗಿ ಸವಾರಿ ಬಂದಿತು ಸ್ವಾರಿ

★

ಉಮರಜಿ ಸೋನೂಬಾಯಿ ಮತ್ತು ಪಾರ್ಟಿ

GE 8455 ರಿಂದ } ಶರಣ ಬಸವ ನಾಟಕ
8457 ರ ವರೆಗೆ } ಭಾಗ ೧ ರಿಂದ ೬

GE 8342 ರಿಂದ } ಅಕ್ಕ ಮಹಾದೇವಿ ನಾಟಕ
8344 ರ ವರೆಗೆ } ಭಾಗ ೧ ರಿಂದ ೬

ಶ್ರೀ. ಭಾಗವತ

GE 8409 } ಬಂತು ಬಂತು ಮಾಗಿ ಭಾಮೆ (ಭಾವಗೀತ)
ಏರಿತು ಗಗನಕೆ ನಮ್ಮ ಧ್ವಜ

ಶ್ರೀಮತಿ ಸುಶೀಲಾ ಟೇಂಬೆ

GE 8394 } ಇದೆ ನಮ್ಮ ದೇವರ ಪೂಜೆ
ಇದು ಸಿ.ಐ.ಡಿ.ನ

'ಶರಣ ಬಸವ' ಹಾಗು
'ಅಕ್ಕ ಮಹಾದೇವಿ' ಈ ಎರಡೂ

ನಾಟಕಗಳಲ್ಲಿಯ ಹಾಡುಗಳನ್ನು ಕರ್ನಾಟಕದ ತುಂಬೆಲ್ಲ ಹೆಸರುಗಳಿಸಿದ **ಉಮರಜಿ-ಸೋನೂಬಾಯಿ** ಇವರ ಕಲಾಪಥಕದವರು ಮನಮೆಚ್ಚುವಂತೆ ಹಾಡಿದ್ದಾರೆ. ಈ ಧ್ವನಿಮುದ್ರಿಕೆಗಳನ್ನು ಮತ್ತು ಬೇರೆ ಅನೇಕ ಕನ್ನಡ ಧ್ವನಿಮುದ್ರಿಕೆಗಳನ್ನು ನಮ್ಮ 'ಕೋಲಂಬಿಯಾ' ಮೂರಾಟಗಾರರಲ್ಲಿ ಅವಶ್ಯ ಕೇಳಿರಿ.

ಇದರ ಬಗ್ಗೆ ಬೇಕಾದ ವಿವರಗಳು ನಿಮ್ಮ ಊರಿನ ಗ್ರಾಮೋಫೋನ್ ಅಂಗಡಿಯಲ್ಲಿ ದೊರೆಯುವುವು.

ಕೋಲಂಬಿಯಾ ಗ್ರಾಫೋಫೋನ್ ಕಂ. ಲಿ.
ಕಲಕತ್ತೆ • ಮುಂಬಯಿ • ಮದ್ರಾಸ • ದಿಲ್ಲಿ • ಲಾಹೋರ್
COLUMBIA GRAPHOPHONE CO. LTD. CALCUTTA, BOMBAY, MADRAS, DELHI, LAHORE

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕರ್ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೪-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕರ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ನನಗೊಂದು ತರದ ವಿಚಿತ್ರ ವೇದನೆಯಾಗಿ, ಕೈಯಲ್ಲಿ ಹಿಡಿದಿದ್ದ "ಆಯಿಸ್ ಕ್ರೀಮು"ದ ಗಣಿಕೆಯನ್ನು ಚೆಲ್ಲಿಬಿಟ್ಟಿ. ಇಷ್ಟಕ್ಕೆ ಮುಗಿಯಲಿಲ್ಲ ನನ್ನ ಹಣೇಬರೆಹದ ಗಣೇಶಚವತಿ! ಎದುರಿಗೆಯೇ ಇದ್ದ ವಿದ್ಯಾರ್ಥಿನಿಯರ್ವರು ಮತ್ತು ವಿದ್ಯಾರ್ಥಿಗಳ ತಂಡವೊಂದು, ನನ್ನನ್ನು ನೋಡಿ ಜೆಪ್ಪಾಳೆಯಿಕ್ಕಿ, ಗಹಗಹಿಸಿ ನಗುವಂತೆ ಆಯಿತು ನನ್ನ ಸ್ಥಿತಿ. ಅರಿವಿಲ್ಲದೆ ನನ್ನ ಕಾಲ ಮೇಲೆಯೇ ನಾನು ಬಾಯಿಮುಕ್ಕಳಿಸಿದೆ. ಚೀರಾಟ ಹೋರಾಟದಿಂದ ನನ್ನ ಮುಖಚರ್ಯೆಯೇ ಬೇರೆತೆರನಾಗಿ, ಆ ದಿನದ ಮಟ್ಟಿಗೆ ನಾನು ಅವರೆಲ್ಲರಿಗೆ ಒಂದು ವಿನೋದದ ವಸ್ತುವೇ ಆಗಿಬಿಟ್ಟೆನು. ಪಾಪ! ಯಾರ ನೋನಿಗೆ ಯಾರು ಅಳಬೇಕು? ನನ್ನ ಹೊಟ್ಟೆ ಕಡಿದರೆ ಅವರೇಕೆ ಅಜವಾನ ಮುಕ್ಕಿಯಾರು? ತನಗೆ ಅಪಮಾನವಾಯಿತೆಂದು ಸಂಗಡಿಗನೂ ನನ್ನ ಮೇಲೆ ರೇಗಿದನು. ಅದೇಕಾದೀತು? "ದುಃಖಂ ದುಃಖಾಧಿಕಾನ್ ಪಶ್ಯೇತ್" ನನ್ನಷ್ಟು ದುಃಖವು ಅವನಿಗೆ— ತರ್ಕಶಾಸ್ತ್ರದ ಗುಣಧರ್ಮಗಳಿಗೆ ಅನುಗುಣವಾಗಿ— ಆಗಿರಲಿಕ್ಕೆ ಸಾಧ್ಯವಿಲ್ಲ. ಅವನೇಕೆ ನನ್ನನ್ನು ಸಂತಯಿಸಬಾರದಾಗಿತ್ತು — ಎಂದು ನನ್ನ ಅಭಿಪ್ರಾಯ. ಏನೇ ಇರಲಿ, ಅಂದಿನಿಂದ ಅಂತಹ ತಿನಿಸುಗಳ ಅಕ್ಕಪಕ್ಕಕ್ಕೆ ಕೂಡಾ ನಾನು ಹಾಯುವುದಿಲ್ಲ. ಅದಕ್ಕೆಂದೇ ಬಿಸಿಬಿಸಿ ತಿನಿಸು— ಊಣಿಸು—ಪಾನೀಯಗಳೆಂದರೆ ನನ್ನ ಪಂಚಪ್ರಾಣಗಳು.

ಪ್ರವಾಸದ ಸಾಮಗ್ರಿಸಹಿತವಾಗಿ ನಮ್ಮ ಕಾಲೇಜ್ ಮೋಟಾರಿನ ನಿತ್ಯದ ನಿಲ್ದಾಣಕ್ಕೆ ಹೋಗುವುದರೊಳಗಾಗಿ, ಮೋಟಾರು ಹೋಗಿಬಿಟ್ಟಿದ್ದಿತು. ಕುಂಕುಮಕಾಂತಿಯ ದೇವತೆಯು ಮಾಯವಾಗಿ ಬಿಟ್ಟಿದ್ದಳು. "ಪ್ರಥಮಗ್ರಾಸೇ ಮಕ್ಷಿಕಾಪಾತಃ" ಎಂದು ನಾವೆಲ್ಲರೂ ಗಾಬರಿಯಾದೆವು. ಕೊನೆಗೆ ನಮ್ಮಲ್ಲೊಬ್ಬರು ಸಾಯ್ಕಲ್ ಸವಾರರಾಗಿ ವರದಿಕೊಟ್ಟಮೇಲೆ, ಮೋಟಾರು ವಾಹನವು ನಾವು ಇಚ್ಛಿಸಿದ ಸ್ಥಳಕ್ಕೆ ಬಂದು, ನಮ್ಮೆಲ್ಲರನ್ನೂ ಸಾಮಗ್ರಿಸಹಿತವಾಗಿ ಧಾರವಾಡ ನಿಲ್ದಾಣಕ್ಕೆ—ವೇಳೆಗೆ ಮುಂಚಿತ. ವಾಗಿ—ತಂದಿಳಿಸಿತು. 'ಇನ್ನೇನು? ಕಾಯ್ದಿಟ್ಟ ಡಬ್ಬಿಗಳಲ್ಲಿ ಚಕ್ಕಂದದಿಂದ ಹೋಗುವುದು!' ಎಂದು ನಾವೆಲ್ಲರೂ ಮನದಲ್ಲಿ ಮಂಡಿಗೆ ತಿಂದಿದ್ದೆವು. ತಾನೊಂದು ಬಗೆದರೆ ದೈವವೊಂದು ಬಗೆಯಿತು. ನಚ್ಚಿದೆಮ್ಮೆ ಕೋಣನನ್ನೀದಿತ್ತು. ಡಬ್ಬಿಗಳು ಕಾಯ್ದಿಡಲ್ಪಟ್ಟರಲಿಲ್ಲ. ಸಿಕ್ಕಸಿಕ್ಕಲ್ಲಿ ಸಾಮಾನುಗಳನ್ನು ಸೇರಿಸಿ, ಡಬ್ಬಿಗಳಲ್ಲಿ ನಾವು ಹೊಕ್ಕೆವು. ಗಾರ್ಡನ ಅನುಮತಿಯಿಂದ ಒಂದು ಡಬ್ಬಿಯನ್ನು ನಮಗಾಗಿ ತೆರವು ಮಾಡಿಸಿದರು. ನಿರಂತರವಾಗಿ ಆಕ್ರಮಣ ನಾಡಲು ತಾಣಗಳು ಸಿಕ್ಕುತ್ತವೆಂಬ ಆಶೆಯಿಂದ, ನಾವೆಲ್ಲರೂ ಗಂಟುಗದಡಿಗಳನ್ನು ಕಿತ್ತಾಡಿ, ಇತ್ತೆಡೆಗೆ ಸೇರಿಸಿದೆವು. ಅಲ್ಲಿ ಕುಳಿತಾಗ, ನಾವಿರುವುದು ಲೇಡೀಜ್ ಕಂಪಾರ್ಟ್‌ಮೆಂಟಿನಲ್ಲಿ ಎನ್ನುವುದು ಗೊತ್ತಾಯಿತು. ನಮಗೆ ಸಿಕ್ಕ ತಾಣಗಳ ನಿರಂತರತೆಯ ಬಗ್ಗೆ ಸಂಶಯವು ಉತ್ಪನ್ನವಾಗಿ, ಮನದಲ್ಲಿ ಮೊಥಲು ಹಿಗ್ಗಿದಷ್ಟೆ ಕುಗ್ಗಲೂ ಬೇಕಾಯಿತು. ಬಂಡಿಯುರುಳುತ್ತ ನಡೆದ ಹಾಗೆ, ಮಲೆನಾಡಿನ ಸೃಷ್ಟಿಸೌಂದರ್ಯವು ಕಣ್ಣಿಗೆ ಹಬ್ಬವನ್ನುಂಟು ಮಾಡುವುದಾಯಿತು. ಧಾರವಾಡದಿಂದ ಕ್ಯಾರಕೊಪ್ಪದವರೆಗೂ ನೆಲ್ಲು ಚಿಕ್ಕಪುಟ್ಟ ಗದ್ದೆಗಳಲ್ಲಿ ಜೆಲ್ಲನರಿದಿದೆ. ಹಚ್ಚಹಸಿರುಮುರಿಯುವ ಆ ಬೆಳೆ, ಒಂದೇ ಎತ್ತರದ್ದಾಗಿ ಸೇವಿಗೆಯ ಸಿವುಡುಗಳನ್ನು ನಿಲ್ಲಿಸಿದ ಹಾಗೆ ಕಾಣಿಸುತ್ತಿತ್ತು; ಕ್ಯಾರಕೊಪ್ಪದಿಂದ ಬೆಳಗಾಂವಿಯವರೆಗೂ ಭತ್ತವು ಮುಖ್ಯ ಬೆಳೆಯು; ಆದರೆ ಕ್ಯಾರಕೊಪ್ಪದಿಂದಲೇ ಹಳಗಳಗುಂಟ ಅಡವಿಗಳೂ ಪಸರಿಸಿವೆ. ಕೆಲವೆಡೆ ಅಡವಿ ದಟ್ಟವಾಗಿದೆ; ಮತ್ತೆ ಕೆಲವೆಡೆ ವಿರಳವಾಗಿದೆ. ಸೃಷ್ಟಿಸೌಂದರ್ಯದ ರಮಣೀಯತೆ ಗಂಭೀರತೆಗಳು ನನ್ನನ್ನು ಸೆರೆ ಹಿಡಿದು ಬಿಟ್ಟವು. ವರ್ಡ್ಸ್‌ವರ್ಥ್ ಕವಿಗೆ ಬಂದ ಸ್ಫೂರ್ತಿ ನನಗೆ ಬಂದಿದ್ದರೆ, ಆ ಸನುಯದಲ್ಲಿಯೇ 'ಡಜನ್' ಕವಿತೆಗಳನ್ನಾದರೂ ಬರೆಯಬಹುದಾಗಿತ್ತು. ಅಂತಹ ಕವಿತಾಶಕ್ತಿಯು ಇಲ್ಲವಾದರೆ, ಗದ್ಯಗ್ರಂಥವನ್ನಾದರೂ ರಚಿಸಬಹುದಾಗಿತ್ತಲ್ಲಾ—ಎಂದು ತರ್ಕದ ತಾಕಲಾಟದಲ್ಲಿ ನೀವು ಸಿಲುಕಬಹುದು. ಅಹುದು. 'ಗದ್ಯಂ ಹೃದ್ಯಂ' ನಿಜ! ಹೃದಯಕ್ಕೆ ಎನಿಸಿದ್ದನ್ನು ಇದ್ದಕ್ಕಿದ್ದಹಾಗೆ ತಿಳಿಸುವ ಶಕ್ತಿ ನನ್ನ ನಾಲಗೆಗೇ ಇಲ್ಲ. ಲೇಖನಿಗಂತೂ ದೂರವೆ. ಪಟ ಕಟ್ಟಿದ ಗಡ್ಡೆತೇರುಗಳಂತಿರುವ ತೇಗಿನ ಮರದ ಹೂಗಳನ್ನು ನಾನು ನನ್ನ ಜೀವನದಲ್ಲಿಯೇ ಮೊದಲು ಕಂಡದ್ದು ಇಲ್ಲಿ. ಮುತ್ತಳಲೆಗಳ ವಿಪುಲತೆಯನ್ನಂತೂ ಹೇಳಲಾಸಲ್ಲ. ಹೂಬಿಟ್ಟುಕೊಂಡು ಕಾಡುಜೋಳವು ಹಳಿಗಳ ಎರಡೂಮಗ್ಗಲಿಗೆ ಸ್ವಾಗತವನ್ನು ಪುವ ಸೈನಿಕರೋಪಾದಿಯಲ್ಲಿ ನಿಂತಿದ್ದವು. ಕಾಡುಜೋಳದ ತೆನೆಯು, ಜವಾರಿ ಜೋಳದ ತೆನೆಯಂತಿರುತ್ತದೆ. "ಬಿಷ್ಟಗಟ್ಟಿ" ನಿಲ್ದಾಣದ ಸನಿಹದಲ್ಲಿ, ಅಡವಿಗಳಲ್ಲಿ ಬೆಳೆಸಿ ಜೋಪಾನ ಮಾಡಿದ ಗಿಡಗಳುಂಟು. ಹಚ್ಚಿ ಬೆಳೆಸಿದ ಈ ಗಿಡಗಳು ಉದ್ದವಾಗಿಯೂ ನೇರವಾಗಿಯೂ ಇವೆ. ಈ ಗಿಡಗಳಿಗೆ ಕೊಂಬೆಗಳು ಕಡಿಮೆ. ಬೊಡ್ಡೆಗಳು ದುಂಡಗೆ ಇದ್ದು ಬುಡದಿಂದ ತುದಿಯ-

ನಕ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಗಾತ್ರದವಿರುತ್ತವೆ. ಈ ಭಾಗದ ಡನಿಯಲ್ಲಿ ಮತ್ತಿ, ಕಿಂದಳ, ಬಿದಿರು, ಮೊದಲಾದ ಅತ್ಯುಪ-ಯುಕ್ತವಾದ ಗಿಡ-ಮರಗಳುಂಟು. ಗಳೆಮುಟ್ಟುಗಳಿಗೆ ಮತ್ತು ವಾರತುಗಳಿಗೆ ಇಲ್ಲಿಂದ ದೊಡ್ಡ ಪ್ರಮಾಣದ ಮೇಲೆ ಕಟ್ಟಿಗೆಯ ಸಾರಿಕೆಯಾಗುತ್ತದೆಂದು ತಿಳಿದುಬಂದಿತು. ಮುಂದೆ 'ಲೋಂಡಾ ನಿಲ್ವಾಣ' ಬರುವುದಿತ್ತು. ಲೋಂಡಾ ಜಂಕ್ಷನ್ ಇದ್ದು, ಅಲ್ಲಿಂದ ಗೋವೆಯ ಕಡೆಗೊಂದು ಮಾರ್ಗವು ಹೋಗುತ್ತದೆಂಬುದು ತಲೆಯಲ್ಲಿ ಬಂಬಿಕೊಂಡ ಹುದುಗು. ಈ ಗುಂಗಿನಲ್ಲಿಯೇ ಸೆರೆಸಿಕ್ಕು ಅನ್ಯ-ಮನಸ್ಕನಾಗಿ ಇಲ್ಲವೇ ಶೂನ್ಯಮನಸ್ಕನಾಗಿ— ಛೀ. ಅಲ್ಲ! ಗೋವಾ ಮನಸ್ಕನಾಗಿ— "ಮುಂದೆ ಬರೋ ಸ್ಟೇಶನ್ ಗೋವಾ ಏನ್ರೀ?" ಎಂದು ಕೇಳಿಬಿಟ್ಟೆ ಎದುರಿಗಿದ್ದ ಗೆಳೆಯರನ್ನು. ಅವರು ಹೊಟ್ಟೆ ಹುಣ್ಣು ಆಗುವಂತೆ ನಕ್ಕರು, ನನ್ನ ಮರಗೂಳಿತನವನ್ನು ಕಂಡು. ಲೋಂಡಾ ನಿಲ್ವಾಣದಲ್ಲಿ ಇಳಿದು ಊಟದ ಟಿಕೆಟ್ಟನ್ನು ಕೊಳ್ಳಬೇಕೆಂದು ಅಲ್ಲಿಯ ಮಾಸ್ತರರನ್ನು ಇಂಗ್ಲಿಷಿನಲ್ಲಿ ವಿಚಾರಿ-ಸುತ್ತಲಿದ್ದೆ. ಪಕ್ಕದಲ್ಲಿಯೇ ನಿಂತ ಮತ್ತೊಬ್ಬ ರೇಲ್ವೆ ನೌಕರನು ಮರಾಠಿಯಲ್ಲಿ ಮಾತನಾಡಿಸಿದನು. "ನನಗೆ ಮರಾಠಿ ಬರುವುದಿಲ್ಲ" ಎಂದು ನಾನು ಇಂಗ್ಲಿಷಿನಲ್ಲಿ ನಿಷ್ಕಾರವಾಗಿ ಹೇಳಿದೆ. ಆಗ ಅವನ ಮೋರೆ ಸುಣ್ಣದಿಂದ ಮಂಗನ ಮೋರೆಯಂತಾಯಿತು. ಅವನಿಗೆ ಕನ್ನಡವೂ ಚೆನ್ನಾಗಿ ಗೊತ್ತಿತ್ತೆಂಬುದು ಆ ಕೂಡಲೆ ತಿಳಿಯಿತು.

ವನದೇವತೆಯು ತನ್ನ ಬೆಡಗು-ಬಿನ್ನಾಣಗಳನ್ನು ಹಿಂದಿನ ಪ್ರದೇಶಕ್ಕಿಂತ ಈಲ್ಲಿ ಇನ್ನಷ್ಟು ಚೆನ್ನಾಗಿ ಪ್ರದರ್ಶಿಸುತ್ತಿದ್ದಳು. 'ಗುಂಜಿ' ಮತ್ತು 'ಖಾನಾಪುರ'ಗಳ ನಡುವೆ ಹಬ್ಬಿದ ಅಡವಿಯಲ್ಲಿ, ತಾವಾಗಿಯೇ ಬೆಳೆದ ರಾಯನೆಲ್ಲಿಯ ಗಿಡಗಳನ್ನು ಕಾಣಬಹುದು. ರಾಯನೆಲ್ಲಿಯ ಬೀಜಗಳಿಂದ ಎಣ್ಣೆ ತೆಗೆಯು-ವುದೆಂದೂ, ಅದರ ಮಹತ್ತ್ವವು ಔಷಧಗಳಲ್ಲಿ ವಿಶೇಷವೆಂದೂ ಎಲ್ಲರೊಬ್ಬರು ಹೇಳಿದರು. ರೈಲು ಖಾನಾಪುರವನ್ನು ಸಮೀಪಿಸಿದಂತೆ, ಬಲಬದಿಗೆ "ಕುಂಬಾರಿಕೆ ಉದ್ಯೋಗಾಭಿವೃದ್ಧಿ ಸಂಸ್ಥೆ" ಯವರ ನಿಲಯವು ಕಂಡಿತು. ಚೀನೀ ಮಣ್ಣಿನ ಪಾತ್ರೆಗಳಂತಹ ಎಲ್ಲ ತರದ ಮಡಕೆಗಳು, ಉಪಯುಕ್ತ ಪಾತ್ರೆಗಳು ಇಲ್ಲಿ ಸಿದ್ಧ ವಾಗುತ್ತವೆ. 'ದೇಸೂರ' ನಿಲ್ವಾಣದ ಹಿಂದೆ ಎಳ್ಳೂರ-ಗಡವು ಸಣ್ಣ ಗುಡ್ಡದ ಮೇಲೆ ಕಾಣುತ್ತದೆ. ಈ ಕೋಟೆಯ ಸಮೀಪದಲ್ಲಿ ಕಲ್ಲುಗಳೇ ಸಿಕ್ಕುವುದಿಲ್ಲವಂತೆ. ಕೆಳಗಿನಿಂದ ಗುಡ್ಡದ ಮೇಲೆ ಕಲ್ಲುಗಳನ್ನೊಯ್ದು ಈ ಕೋಟೆಯನ್ನು ಕಟ್ಟಿ-ದ್ದಾರೆ. ಎಳ್ಳೂರ ಮಠದ ಸ್ವಾಮಿಗಳವರು, ಒಂದಾನೊಂದು ಕಾಲಕ್ಕೆ ಒಳ್ಳೆಯ ಸಿದ್ಧಪುರುಷರಿದ್ದರೆಂದು ಐತಿಹ್ಯವಿದೆ. ಬೆಳ-ಗಾಂವಿಯ ಸಮೀಪಕ್ಕೆ ಬಂದ ಹಾಗೆ, ಭತ್ತವನ್ನು ಬಿತ್ತುವ ಕ್ರಮದಲ್ಲಿಯ ವೈಶಿಷ್ಟ್ಯವು ನಿದರ್ಶನಕ್ಕೆ ಬಂದಿತು. ಭತ್ತದಲ್ಲಿ ಜೋಳವನ್ನು "ಮಂಜರಿಕೆ" ಹಾಕಿ ಬಿತ್ತುತ್ತಾರೆ. ಭತ್ತದ ಗದ್ದೆಯ ನಾಲ್ಕೂ ಬದಿಗೆ ಮೇರೆಸಾಲುಗಳಲ್ಲಿಯೂ ಜೋಳವನ್ನು ಬಿತ್ತುತ್ತಾರೆ. ಬೆಳಗಾಂವಿಯು ನಾಲ್ಕು ಐದು ಮೈಲುಗಳಿರುವಾಗ

ಂಸು, ಮಸಾರಿ, ಮಡಿಕಟ್ಟು ಭೂಮಿಯ ಪ್ರಕಾರಗಳು ಕಂಡವು. ನೆಲವು ಕೆಲವೆಡೆ ಅತೀವ ಕೆಂಪಾಗಿ, ಮನೆಯ ಗೋಡೆಗಳನ್ನು ಬಳಿಯುವುದಕ್ಕೆ ಉಪಯೋಗಿಸುವ ಕೆಮ್ಮಣ್ಣಿಗಿಂತಲೂ ಹೆಚ್ಚು ಕೆಂಪಾಗಿತ್ತು. ಇಲ್ಲಿ ಭತ್ತವಷ್ಟೇ ಅಲ್ಲದೆ ಉಳಿದ ಬೆಳೆಗಳೂ ಬೆಳೆ-ಯುತ್ತವೆ. ರೈಲು ಕಳಕವಾಡಿಯನ್ನು ಎಡಕ್ಕೆ ಬೇರ್ಪಡಿಸಿ, ನಿಲ್ವಾಣಕ್ಕೆ ಬರುತ್ತದೆ. ಕಳಕವಾಡಿಯು ಬೆಳಗಾಂವಿಯ ಉಳಿದ ಭಾಗ ಗಳಿಂದ ಬೇರ್ಪಟ್ಟು, ಸ್ಥಿತಿವಂತರ ಆಗರಗಳಿಂದ ರಚಿತವಾಗಿದೆ. ಈ ನಿಲ್ವಾಣದಿಂದ ನಮ್ಮ 'ರಿಝರ್ವ್ ಡಬ್ಬಿ' ನಮಗೆ ದೊರಕಿತು. ನಿಲ್ವಾಣದ ಸಮೀಪದಲ್ಲಿಯೇ 'ಬೆಳಗಾಂವ ಕಿಲ್ಲೆ' ಇದೆ. ಕೋಟೆಯ ಸುತ್ತಲೂ ಸುಮಾರು ೩೦-೪೦ ಫೂಟು ಆಗಲಳತೆಯ ಕಂದಕವಿದೆ. ಅದರ ಆಳವು ೧೦-೧೫ ಫೂಟುಗಳಿರಬಹುದೆಂದು ತರ್ಕಿಸಲಾ-ಯಿತು. ನರಗುಂದ ಬಾಬಾಸಾಹೇಬರನ್ನು ಗಲ್ಲಿಗೇರಿಸುವ ಶಿಕ್ಷೆ-ಯಾದದ್ದು ಇದೇ ಕೋಟೆಯಲ್ಲಂತೆ. ೧೯೪೨ರ ಆಗಸ್ಟ್ ಚಳವಳಿ-ಯಲ್ಲಿ, ಹಿಂದುಸ್ತಾನ ಸಂರಕ್ಷಣ ಕಾಯ್ದೆಯನ್ವಯ ಬಂಧಿಸಲ್ಪಟ್ಟ ಸಂಶಯಿತರನ್ನು ಈ ಕೋಟೆಯಲ್ಲಿ ಇಡುತ್ತಿದ್ದರಂತೆ. ಈಗ ಇಲ್ಲಿ ಸರಕಾರೀ ಗೋದಾವುನ್‌ಗಳಿವೆ. ಮುಂದೆ ಬಂದ ಹಾಗೆ ಗಿಡಗಂಟಿ-ಗಳು ಮತ್ತು ಮರಗಳು ಗುಡ್ಡಗಳ ಮೇಲೆಯಷ್ಟೇ ಬೆಳೆದದ್ದು ಕಾಣುವುದು. ಗಿಡಗಳು ಎತ್ತರವಿರಲಿ ಕುಳ್ಳವಾಗಿಯೂ, ತಕ್ಕ-ಮಟ್ಟಿಗೆ ಹರಿಕೊಂಬೆಗಳುಳ್ಳವೂ ಅವೆ. 'ಸೂಳಿಭಾವಿ'ಯನ್ನು ದಾಟಿದನಂತರ ಎಲ್ಲ ಗುಣಧರ್ಮಗಳುಳ್ಳ ವಿವಿಧ ತರದ ಭೂಮಿಯು ಕಣ್ಣಿಗೆ ಬಿತ್ತು. ತಂಬಾಕು, ಮೆಣಸಿನಗಿಡ, ಜೋಳ, ಭತ್ತ, ಸೆಜ್ಜೆ-ಗಳು ಹುಲುಸಾಗಿ ಬೆಳೆದು ನಿಂತಿದ್ದುವು. 'ಸೂಲಧಾಳ'ದಲ್ಲಿ ಜೋಳದ ಬೆಳೆಯು ತೆನೆಗಳನ್ನು ಹೊತ್ತು ಮೆರೆಯುತ್ತಿತ್ತು. ನಮ್ಮಲ್ಲಿ ಈಗ ಜೋಳದ ಬೆಳೆಯು ಹೊಡೆಯನ್ನು ಹೊರಗೆ ಹಾಕುತ್ತದೆ.

ಛೇಡೆ ಮಾರುವವನೊಬ್ಬನು 'ಏಕ ಆಣೇಲಾ ಮೊನ್ ತಾಜೇ ಛೇಡೆ' ಎಂದು ಪ್ರಾರಂಭಿಸಿದನು. ನಮ್ಮ ಡಬ್ಬಿಯಲ್ಲಿ ಎಲ್ಲರೂ ವಯಸ್ಕರು. ಛೇಡೆ ಕೊಂಡು ತಿನ್ನುವ ಹುಡುಗತನದ ಗೋಜಿಗೆ ಯಾರು ಹೋಗಬೇಕು? ನಮ್ಮ ಡಬ್ಬಿ ಕಾಲೇಜಿನ ಹುಡುಗರದು ಎಂಬ ಮಾತು ಅವನ ನಿಪರ್ಕಕ್ಕೆ ಕೊನೆಯ ಪರಿಗೂ ಬರಬಾರದೇ! ಇತರರಿಂದ ದೂರ ಮಾಡಬಹುದಾಗಿದ್ದ ಕಾಯಕವೆಲ್ಲವನ್ನೂ ಅಲ್ಲಿ ಮಾಡಿ, ನಿಷ್ಫಲನಾಗಿ ಮುಂದಿನ ನಿಲ್ವಾಣಕ್ಕಿಳಿದನು.

'ಪಾಚ್ಛಾಪುರ'ವು ಶುದ್ಧ ಗಡಿನಾಡು ಪ್ರದೇಶವು. 'ಗೋಕಾಕ್ ರೋಡ್' ನಿಲ್ವಾಣದಿಂದ ಮೂರು-ನಾಲ್ಕು ಫರ್ಲಾಂಗುಗಳ ಮೇಲೆ 'ಘಟಪ್ರಭೆ' ಹರಿದಿದೆ. ರೈಲಿನಲ್ಲಿ ಕುಳಿತುಕೊಂಡೇ ಘಟಪ್ರಭೆಗೆ ಹಾಕಿದ ಆಣೆಕಟ್ಟನ್ನು ನೋಡಬಹುದು. ಇಲ್ಲಿಂದ ಕಾಲುವೆಗಳನ್ನು ತೆಗೆದುಕೊಂಡಿದ್ದಾರೆ. 'ಗೋಕಾಕ ಕಾಲುವೆಯ ಪ್ರದೇಶ'ವು, ಈ ಆಣೆಕಟ್ಟಿನಿಂದ ತಡೆಯಲ್ಪಟ್ಟ ನೀರನ್ನು ಉಣ್ಣು-ತ್ತದೆ. ಫಲಭರಿತೆಯು ನಿಲ್ವಾಣಕ್ಕೆ ೩-೪ ಮೈಲುಗಳಷ್ಟಾಗುತ್ತದೆ. 'ಹುಕ್ಕೇರಿ ರೋಡ್' ನಿಲ್ವಾಣದಿಂದ ಪಡುವಣಕ್ಕೆ ಶ್ರೀ ಮೂರು ಸಾವಿರ ಜಗದ್ಗುರುಗಳವರ ವಿಶ್ರಾಮಾಗಾರವಿದೆ. ಪ್ರವಾಸಿಕರಿಗೂ

ಪರಸ್ಥಳಿಕರಿಗೂ ಅಲ್ಲಿ ತಂಗಲು ಅನುವಿರುವುದೆಂದು ಕೇಳಿಕೆ. ಈ ಭಾಗದಲ್ಲಿ ಹೊಲಗಳಲ್ಲಿ ತೋಡಿದ ಬಾವಿಗಳು ಹೆಚ್ಚು. ಬಾವಿಗಳ ಸುತ್ತುವರಿದು ಗಿಡಗಂಟಿಗಳಾಗಲಿ ಇಲ್ಲವೆ. ಕಲ್ಲುಗೋಡೆಗಳಾಗಲಿ ಎನ್ನುವ ಕಾಣುವಂತೆ ಇರದೆ, ಅವು ಬೋಳಾಗಿರುತ್ತವೆ. ದೂರದಿಂದ ಬಾವಿಗಳ ಸುಳುವೇ ಹತ್ತುವಂತಿಲ್ಲ. 'ಬೆಲ್ಲದ ಬಾಗೇವಾಡಿ'ಯ ಸವಿವಾಪದಲ್ಲಿ ಸುಣ್ಣಬುರಲಿಯ ಅಂಶ ವಿಶೇಷವಾಗಿದ್ದ ಗರಸು ಭೂಮಿಯಲ್ಲಿ, ಅಂಕಡೊಂಕಾದ ಒಡ್ಡು (Contour bunds ಗಳನ್ನು ಹಾಕಿದ್ದಾರೆ. 'ಚಿಕ್ಕೋಡಿ ರೋಡ್' ನಿಲ್ದಾಣದಿಂದಾಚೆ 'ಬಾಳೆಹಣ್ಣು', 'ಕೇಳಿ' ಎಂಬ ನಾಮಕರಣ ಹೊಂದಿದೆ. ಇಲ್ಲಿಂದ ಉತ್ತರಕ್ಕೆ ಭೂಮಿಯು ಬಹಳ ಸವಕಳಿ ಹೊಂದಿದ್ದೂ, ಸರವು—ಕೊಳ್ಳಗಳುಳ್ಳದ್ದೂ ಆದೆ. ಸಣ್ಣ ಪುಟ್ಟ ಕಲ್ಲುಬಂಡೆಗಳುಳ್ಳ ಈ ಬೀಳುನೆಲದಲ್ಲಿ, ಜಾಲಿ ಇನ್ನಿತರ ಮುಳ್ಳುಕಂಟಿಗಳೂ ಕುರಿಗಳಿಗೆ ಮೇಯುಲು ಯೋಗ್ಯವಾದ ಸಣ್ಣ ಚಿಗುರು ಹುಲ್ಲೂ ಬೆಳೆದಿದೆ. 'ಕೃಷ್ಣೆಯ ಸೇತುವೆ' 'ಕುಡಚಿ'ಯಿಂದಾಚೆಗೆ ಆದೆ. ಸೇತುವೆಯ ಸನಿಹದಲ್ಲಿ ಕಾಲುವೆಗಳಿಂದ ನೀರು ತೆಗೆದುಕೊಂಡು ಕಬ್ಬು ಬೆಳೆಯುತ್ತಾರೆ. ಇದರ ಸೂಚನಾವಾಗಿ 'ಉಗಾರ ಶುಗರ್ ಮಿಲ್' ಸ್ಥಾಪಿಸಲ್ಪಟ್ಟಿದೆ.

ಈ ಸುವಾರಿಗೆ ನಮಗೂ ಕರ್ನಾಟಕ ಕಾಲೇಜಿನಿಂದ ಮುಂಬೈಗೆ 'ಚಾನ್ಸ್-ಪೀಕ್ಷೆ'ಗೆ ಹೊರಟ ಬಿ. ಎಸ್ಸಿ. ವರ್ಗದ ವಿದ್ಯಾರ್ಥಿಗಳಿಗೂ ಮಾತಿನ ಚಕಮಕಿಗಾರಂಭವಾಯಿತು. ಅವರಲ್ಲಿಯೂ ಒಬ್ಬಿಬ್ಬರು ಒಳ್ಳೆಯ ವೋಜುಗಾರರು, ಮಾತುಗುಳಿಗಳು. ಮಾತಿನ ಮಲ್ಲತನಕ್ಕೆ ತುದಿಮೊದಲಿರಲಿಲ್ಲ. ಹರಟೆ-ಚರ್ಚೆಗಳು ಬಹಳ ಹೊತ್ತಿನವರೆಗೆ ಹಾಗೆಯೇ ಸಾಗಿದುವು. ಅವನ್ನೆಲ್ಲ ಇಲ್ಲಿ ಬಿತ್ತರಿಸುವುದು ಅಪ್ರಸ್ತುತವು.

ಮುಂದೆ ಸಾಗಿದಂತೆ ಭೂಮಿಯು ಹೆಚ್ಚು ಕಪ್ಪಾಗುತ್ತ ವಡೆದಿದೆ. 'ಮಿರ್ಜಿ' ನಿಲ್ದಾಣದಿಂದ ಸ್ವಲ್ಪದೂರ ಹೋದಮೇಲೆ, ಸಾಂಗಲಿಯ ಕಡೆಗೊಂದು ಮಾರ್ಗ ಒಡೆದಿದೆ. ದೂರದಿಂದಲೇ 'ವಿಲಿಂಡ್ಡನ್ ಕಾಲೇಜು' 'ಇಂಜನೀಯರಿಂಗ್ ಕಾಲೇಜು' ಮತ್ತು ಷ್ಯಯರೋಗದ ಆಸ್ಪತ್ರೆಗಳ ಭವ್ಯ ಇಮಾರತುಗಳು ಗೋಚರವಾಗುತ್ತವೆ. 'ಕಿರ್ಲೋಸ್ಕರವಾಡಿ'ಯಲ್ಲಿ ಕಬ್ಬಿಣದ ದೊಡ್ಡ ಕಾರಖಾನೆಯಿದೆ. ಇಲ್ಲಿ ಕಬ್ಬಿಣದ ರೆಂಟಿಗಳು ಹಾಗೂ ನೀರಾವರಿಗೆ ಉಪಯೋಗಿಸುವ 'ಪಂಪು'ಗಳು ದೊಡ್ಡ ಪ್ರಮಾಣದ ಮೇಲೆ ತಯಾರಿಸಲ್ಪಡುತ್ತವೆ. ಮುಸ್ಸಂಜೆಯ ಮುಂದೆ ನಮ್ಮ ಗಾಡಿಯು ಕರಾಡ ನಿಲ್ದಾಣದಲ್ಲಿತ್ತು. ಕತ್ತಲಾಗಿ ಹೊರಗಿನ ಸೊಬಗು ಸವಿಯಲು ಅಸ್ಪದ. ವಿಲ್ಲಪ್ಪಕ್ಕೂ ಎಡೆಬಿಡದ ಪ್ರವಾಸದ ಬೇಸರದಿಂದಲೂ ನಾನು ಅಷ್ಟಾಗಿಬಿಟ್ಟೆನು. ಕಲೆ, ವಿಜ್ಞಾನ, ಒಕ್ಕಲುತನ ಈ ವಿಷಯಗಳನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಕಷ್ಟ-ನಷ್ಟಗಳನ್ನು ಹೋಲಿಕೆಸಾಡತ್ತ ಹರಟಿಹೊಡೆಯುವ ಗುಂಪೊಂದು ಇರುಳು ಎಂಟೂವರೆ ಗಂಟೆಯವರೆಗೂ ಎಚ್ಚರಿದ್ದುದು ನನಗೆ ನೆನಪಿದೆ. ನಿದ್ರಾದೇವಿ ನನ್ನನ್ನು ಸೆರೆಹಿಡಿದಳು. ಉಳಿದವರ ವಾಡೂ ಹೀಗಿರಲು ಸಾಕು ಪುಣೆ ಬಂದಿತೆಂಬ ಸಿಹಿ-ಸುದ್ದಿಯೊಡನೆ ಕಣ್ಣುಜ್ಜಿಕೊಳ್ಳುತ್ತ ಆಕಳಿಯಾಗಿ, ಗಂಟು-ಗದಡಿಗಳೊಡನೆ ಇಲ್ಲೀಗ ನಿಲ್ದಾಣದಲ್ಲಿ ಬೀಡುಬಿಟ್ಟಿದ್ದೇವೆ.



ಅಮೃತಬಿಂದು

ಶ್ರೀಮಾನ್ ಬಿ. ಹೆ. ಶ್ರೀಧರರ ಕವನಸಂಕಲನ. ಕ್ರಾ. ಅ. ಲಂ ಪುಟಿಗಳು. ಬೆ ೧-೨-೦.

'ಕರ್ಮವೀರ' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದು ಕೆಲಸ ಮಾಡುತ್ತಿರುವ ಶ್ರೀ. ಬಿ. ಎಚ್. ಶ್ರೀಧರ ಎಂ.ಎ. ಅವರು, ಕನ್ನಡ ವಾಚಕಲೋಕಕ್ಕೆ ಅಪರಿಚಿತರಲ್ಲ. ಇವರು ಬರೆಯದ ಕನ್ನಡ ಪತ್ರಿಕೆಗಳೇ ಇಲ್ಲವೆನಿಸುವಷ್ಟು ಇವರ ಲೇಖನದ ವ್ಯಾಪ್ತಿಯಿದೆ. ಕವಿಗಳಾಗಿಯೆ ಸಾಹಿತ್ಯಪ್ರಪಂಚದಲ್ಲಿ ಪೊದಲು ಕಾಣಿಸಿಕೊಂಡಿದ್ದರೂ ಶ್ರೀ. ಬಿ. ಎಚ್. ಶ್ರೀಧರರ ಲೇಖನಿ ಇಂದು ನುಟ್ಟದ ವಿಷಯವಿಲ್ಲ. ಗದ್ಯ-ಪದ್ಯಪ್ರಪಂಚಗಳೆರಡರಲ್ಲಿಯೂ ಕೈಚಳಕ ತೋರಿಸಬಲ್ಲ ಸವ್ಯಸಾಚಿಗಳಿವರು. ಸಾಂಪ್ರದಾಯಿಕ ಸಾಹಿತ್ಯಲಕ್ಷಣಶಾಸ್ತ್ರವನ್ನು ಚೆನ್ನಾಗಿ ಓದಿಕೊಂಡವರು. ನಮ್ಮ ಪ್ರಾಚೀನ ಸಂಸ್ಕೃತಿಯ ಬಗೆಗೆ ತುಂಬ ಪ್ರೀತಿಯನ್ನಿಟ್ಟುಕೊಂಡವರು.

ಪ್ರಸ್ತುತ ಸಂಕಲನದಲ್ಲಿ ಶ್ರೀ. ಬಿ. ಎಚ್. ಶ್ರೀಧರರ ೫೧ ಕವನಗಳು ಅಡಕವಾಗಿವೆ. ದೇಶಭಕ್ತಿ, ದೇವಭಕ್ತಿ, ಪ್ರೇಮ, ತತ್ತ್ವಾನುಭವ, ಆತ್ಮಕಥೆ, ನಿಸರ್ಗವರ್ಣನೆ, ನೆನಹು, ಸಂದರ್ಭವರ್ಣನೆ ಇವೆಲ್ಲ ಇಲ್ಲಿಯ ಬೇರೆ ಬೇರೆ ಕವನಗಳಿಗೆ ವಿಷಯಗಳನ್ನು ಒದವಿಸಿಕೊಟ್ಟವೆ. ವಿಡಂಬನೆಗೂ ಎಡೆಕೊಟ್ಟ ಒಂದೆರಡು ಕವನಗಳಿವೆ. ಕೊನೆಯ ಕವಿತೆಯ ಹೆಸರಾದ 'ಅಮೃತಬಿಂದು' ಎಂಬ ಹೆಸರನ್ನೆ ಸಂಕಲನಕ್ಕೆ ಇರಿಸಲಾಗಿದೆ.

" ಬ್ರಹ್ಮಪಟ್ಟದಲಿ ಕುಳಿತು ಸೃಷ್ಟಿಯಲಿ
ಕಂಡಕೊರತೆಗಳನು,—
ಬ್ರಹ್ಮನೇತಕಿಂತೆಸಗಿಬಿಟ್ಟ ಚೀ
ತಾಳಲಾರೆನಿದನು—
ಅಲ್ಲ ಹೀಗೆಯೆಂದೊಲುಮೆಗುಂಚದಿಂ-
ದಿಳೆಯ ತಿದ್ದಲೇಳಿ
ಚಿಲ್ಲಿಹರಿವ ಕವಿಮನದ ನಲ್ಮೆಯೊಂ-
ದಮೃತಬಿಂದು ಕೇಳಿ!"

ಎಂಬ ಮಾತಿನಲ್ಲಿ ಶ್ರೀಧರರು ತಮ್ಮ 'ಅಮೃತಬಿಂದು'ವಿನ ವಿವರಣೆಯನ್ನೇ ಮಾಡಿದ್ದಾರೆನ್ನುವಂತಿದೆ. ಸಂಕಲನದಲ್ಲಿಯ ಬಹುಸಂಖ್ಯೆಯ ಕವಿತೆಗಳು: 'ಇಳೆಯ ತಿದ್ದಲೇಳಿ ಚಿಲ್ಲಿಹರಿವ ಕವಿಮನದ ನಲ್ಮೆಯ ಅಮೃತಬಿಂದು'ಗಳೇ— ಎಂದರೆ ಸ್ಪಷ್ಟವಾಗಿ ನೀತಿಯನ್ನು ಬೋಧಿಸಲು ಹೊರಟುವುಗಳೆ, ಆದುದರಿಂದಲೆ ಇಲ್ಲಿಯ ಕವನಗಳನ್ನು 'ಭಾವಕವನ'ಗಳೆಂದು ಕೇಳಬಹುದೇ— ಎಂಬ ಸಂದೇಹ ವಿಮರ್ಶಕರ ಮನಸ್ಸನ್ನು ಉಯ್ಯಾಲೆಯಾಡಿಸದೆ ಬಿಡದು. ಇಲ್ಲಿಯ ಒಂದೊಂದು ಕವನದ ಹುಟ್ಟಿಗೂ ಕಾರಣವಾದ ಭಾವನೆಯನ್ನು ನಾವು ಕಾಣಬಹುದು; ಆದರೆ 'ಇಳೆಯ ತಿದ್ದಲು ಹೊರಟ' ಕವಿಯ ಬುದ್ಧಿ, ಆ ಭಾವನೆಯನ್ನು ಪ್ರಾರಂಭದಲ್ಲಿಯೆ ಹಿಂದೆ ಸರಿಸಿ, ಉಪಾಧ್ಯಾಯನಾಗಿ ನಿಂತು ಉಪದೇಶವನ್ನು ಪ್ರಾರಂಭಿಸುವುದು. ಮೊದಲನೆಯ ಕವನವಾದ 'ಭಾರತ ಸ್ವಾತಂತ್ರ್ಯ'ವನ್ನೇ ತೆಗೆದುಕೊಳ್ಳೋಣ. 'ಸ್ವಾತಂತ್ರ್ಯ ಭಾರತಕೆ ಬಂದಿತೋ' ಎಂಬ ಮೊದಲನೆಯ ಮಾತನ್ನೋದಿ ತಲೆಯೆತ್ತಬೇಕೆನ್ನುತ್ತಿರುವ ಆಶೋತ್ಸಾಹ ಭಾವಗಳು, 'ಭಾರತರ ಶೋಕವಿಂದಿಗೆ ಮುಗಿಯಿತೆಂದು ತಿಳಿದೆ' ಎಂಬ ಕೊನೆಯ ಸಾಲನ್ನೋದಿ, ಹೆಡೆ ಮಡಿಚಿಬಿದ್ದು ಬಿಡುವುವು. ಮುಂದೆ ರಸಿಕವಾಚಕರು ಕೇಳಬೇಕಾದುದು ಬುದ್ಧಿಯುಗದ್ಯಮಯ ವಿಚಾರಗಳನ್ನು. ಪತ್ರಿಕಾ ಸಂಪಾದಕನೊಬ್ಬ ಅಂಕಣದಲ್ಲಿ ತುಂಬಬಹುದಾಗಿದ್ದ ವಿಷಯವನ್ನೆ ಪದ್ಯದಲ್ಲಿ ಹೆಣೆದು ತುಂಬಿರುವರೆಂಬುದನ್ನು.

ಉದಯವಾದ ಭಾವ ಬುದ್ಧಿಕೌಶಲದ ನೆರವಿನಿಂದ ಬೆಳೆದು ಅರಳಿದರೆ ಭಾವಗೀತವಾಗುವುದೇ ಹೊಗತು, ಸಾಂಪ್ರದಾಯಿಕ ಬುದ್ಧಿಯ ಬುಡುಬುಡಿಕೆಯ ಸಪ್ಪಳವೇ ಹೆಚ್ಚಾಗಿ, ಭಾವದ ಸಮಾಧಿಯಾಗಿರುವ ಕವಿತೆಗಳು ಭಾವಗೀತಗಳೆನಿಸವು. ಈ ಸಂಕಲನದಲ್ಲಿಯ ಹೆಚ್ಚಿನ ಕವಿತೆಗಳು ಬುದ್ಧಿಪ್ರಾಧಾನ್ಯವಾದವುಗಳೇ ಆಗಿವೆ. ಕವಿತೆಗಳ ಹೆಸರುಗಳ ಮೇಲಿಂದ ಪ್ರೇಮಗೀತಗಳಿರಬಹುದೆಂದು ಓದಲಾರಂಭಿಸಿದರೆ, ಪ್ರೇಮಭಾವಕ್ಕಿಂತಲೂ ನಲ್ಲ ನಲ್ಲಳಿಗೆ ಕಲಿಸುವ ಜೀವನತತ್ತ್ವಜ್ಞಾನದ ಪಾಠ-ಪ್ರವಚನಗಳೇ ಅಲ್ಲಿ ಕಾಣಲು ಸಿಕ್ಕುವುವು. 'ಪ್ರೇಮನ್ರತ'ದಂತಹ ವಾಸ್ತವವಸ್ತುವನ್ನೊಳಗೊಂಡ ಕವಿತೆಯು ಜೀವಾಳವೂ ನೀತಿಬೋಧೆಯೆ ಆಗಿದೆ ನೀತಿಬೋಧೆ ಮುಖ್ಯೋದ್ದೇಶವಾದುದರಿಂದಲೇ, ಶೈಲಿಯಲ್ಲಿ ವಿಲಾಸಕ್ಕಿಂತ ಗಾಂಭೀರ್ಯ ಹೆಚ್ಚಾಗಿದೆ. ಕೆಲಕೆಲವು ಕಡೆಗಂತೂ ಕ್ಲಿಷ್ಟತೆಗಿಳಿದು, ಅರ್ಥಬೋಧೆಗೆ ಕೂಡ ಅಡ್ಡಿಯನ್ನೊದವಿಸುವುದು:

'ನಿತ್ತು ಮೆಟ್ಟಿದಂತೆ ಎದೆಯ ಕುಗ್ಗಿಕಾತ್ಮಕೋರಕ
ತುತ್ತು ಕುತ್ತು ತರುವ ಹಾಗೆ ಇಲ್ಲದಾಗೆ ಜೀರಕ!'

ಇಂತಹ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು.

ಇಲ್ಲಿಯ ಕವನಗಳನ್ನು ಓದುತ್ತ ಹೋದಂತೆಲ್ಲ ಬಹಳ ಕಡೆಗೆ, ಬಳಸಿದ ಪದಗಳ ಅರ್ಥವಾಗುವುದು; ಒಳ್ಳೆಯ ಅರ್ಥವನ್ನೊಳಗೊಂಡ ಚರಣಗಳ ಹುರುಳೂ ಹೊಳೆಯುವುದು. ಆದರೆ ಇಡಿಯ ಪದ್ಯಗಳನ್ನೋದಿದ ಮೇಲೆ 'ಇವರು ಬರೆದ ಕವಿತೆಯ

ಅರ್ಥವೇನು?' ಎಂಬ ಸಂದೇಹವುಂಟಾಗುವಂತಹ ಕವನಗಳು ಹಲವು ಇವೆ. ಬರೀ ಉರವೆ—ದೀಪಕಗಳಿಂದಲೇ ದೀರ್ಘದೇಹಿ. ಗಳಾದ ಕವನಗಳೂ ಕಾಣುವುವು. 'ಉದಯರಾಗ' 'ಉತ್ತರರಾಗ' ದಂತಹ ಕವನ ಒಳ್ಳೆಯ ಭಾವದಿಂದ ಪ್ರಾರಂಭವಾಗಿವೆ ಸರಿ! ಆದರೆ. ಅವು ಅಷ್ಟು ಲಂಬಿಸಿದುವೇಕೆಂಬುದೂ, ಅಷ್ಟಕ್ಕೆ ಮುಗಿದು. ವೇಕೆಂಬುದೂ ಗೊತ್ತಾಗುವುದೇ ಇಲ್ಲ 'ದೀಪ' ಎಂಬ ಕವಿತೆಯಲ್ಲಿಯ ಕರುಣೆ, ಆವರ ಛಂದಸ್ಸಿನ ಕುಣಿತದ ಮೂಲಕ ಆಭಾಸಕ್ಕೆಟ್ಟಿದೆ. 'ಜಕ್ಕನ ನೆನಪು' ಕೇವಲ ನೆನಹಿನ ಮಾಲೆಯಾಗಿದೆ ಹೊರತು ತನ್ಮಾನ ಹೃದಯದ ವಿಷಿತ ಸಹೃದಯರಿಗೆ ಕಂಡುಬರುವುದೇ ಇಲ್ಲ.

ಸಂಕಲನದಲ್ಲಿ ಒಳ್ಳೆಯವೆನಿಸಿಕೊಳ್ಳಬಹುದಾದ ಕವಿತೆಗಳೂ ಕೆಲವು ಇಲ್ಲದೆ ಇಲ್ಲ. 'ಉಪವಾಸ' ಎಂಬ ಕವಿತೆ ತುಂಬ ಚೆನ್ನಾಗಿವೆ. ಛಂದಸ್ಸು-ಲೈಲಿಗಳ ಔಚಿತ್ಯವನ್ನೂ ಭಾವದ ಹದವಾದ ಬೆಳವಣಿಗೆಯನ್ನೂ ಈ ಕವಿತೆಯಲ್ಲಿ ಉದ್ದಕ್ಕೂ ನಾವು ಕಾಣಬಹುದು. ಇದರಂತೆಯೆ 'ಕುರುಡು ದೀಪ' 'ನಾಳ್ಗಾಹಿಗೆ' 'ಅಂದು- ಇಂದು' 'ನನಗೆ ನಾನೇ' 'ನರನಾದೆನೇಕೆ' ಮೊದಲಾದ ಕವನಗಳೂ ಚೆನ್ನಾಗಿವೆ.

ಕವನಗಳ ಭಾಷೆ ಪರಿಶುದ್ಧವಾಮಿದೆ. ಆದರೆ ಆದಿಪ್ರಾಸ-ಅಂತ್ಯಪ್ರಾಸಗಳನ್ನಿರಿಸಲೇ ಬೇಕೆಂಬ ಒತ್ತಾಯಕ್ಕೊಳಗಾದುದರಿಂದ ಅನುಚಿತ ಪದಗಳ ಉಪಯೋಗವನ್ನೂ ಅಪ್ಪಟರೂಪಕಗಳನ್ನೂ ಅಲ್ಲಲ್ಲಿ ಕಾಣುವ ಸಂದರ್ಭ ನಮಗೆ ಒದಗುವುದು.

" ರಾಧೆ ರನ್ನೆ, ನನ್ನ ತನದ
ಬಳ್ಳಿಯಲ್ಲಿ ನಿನ್ನ ತನದ
ಬಳ್ಳಿ ಹೆಣೆದುಕೊಂಡ ಬಿನದ...."
' ಬೆಣ್ಣೆಯಿದೆಯ ಕಣ್ಣ ನಗೆಯ,
ಹೆಣ್ಣು ಹಿಡುಕ! ನನ್ನ ಬಗೆಯ
ಕಣ್ಣ ಳೆಕೆಸಿ ಬಿಟ್ಟ ಗೆಳೆಯ...."
" ಅರಿವೆ ಬೆಳಕು, ನೇಹವೆಣ್ಣೆ
ಒಲಿಸೆದೆಗಳ ಬತ್ತಿ, ಹೆಣ್ಣೆ
ಬೆರೆವ ಮೇಲೆ ಬಗೆಯೆ ಬೆಣ್ಣೆ...."

ಇಂತಹ ನಾದಭ್ರಮೆ ಚಮತ್ಕಾರಗಳಿಗೆ ಹಲವಾರು ಉದಾಹರಣೆಗಳನ್ನು ಕೊಡಬಹುದು.

ಛಂದಸ್ಸಿನಲ್ಲಿ ನ್ಯೂನ್ಯತೆಯಿದೆ. ಬಂಧದಲ್ಲಿ ಬಿಗುಪು ಇದೆ. ಆದರೆ ಇಲ್ಲಿಯ ಅನೇಕ ಕವಿತೆಗಳಿಗೆ ಬಳಸಿದ ಛಂದಸ್ಸು ಸಂದರ್ಭೋಚಿತವಾಗಿಲ್ಲ. ಲಾವಣಿಯಂತಹ ನಾಲ್ಕು ಮಾತ್ರೆಯ ಛಂದಸ್ಸಿನ ಬಳಕೆ ಬಹಳ ಕಡೆಗೆ ಅನುಚಿತವಾಗಿದೆ:

' ಏಕನಾದವೆ ಬರಲಿ ಏಕನಾದ '

ಎಂಬ ಕವಿಯ ಬೇಡಿಕೆ ಫಲಿಸಿದಂತೆ ಆಗಿದ್ದರೂ, ರಸಿಕರಿಗೆ ಆ ಏಕನಾದ ಬೇಸರವನ್ನುಂಟು ಮಾಡುವುದು.

ಶ್ರೀ. ಬಿ. ಎಚ್. ಶ್ರೀಧರರ ರಸಜ್ಞತೆಯ ಕಲ್ಪನೆ ನಮಗೆ ಇಲ್ಲದೆ ಇಲ್ಲ. ಆದರೆ ಈ ಸಂಕಲನದ ಬಹುಭಾಗದಲ್ಲಿ, ಅವರಿಂದ ನಿರೀಕ್ಷಿಸಬಹುದಾದ ರಸಾನ್ನ ದೊರೆತಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಆದರೆ ಉದಯೇತದ ಉತ್ತೇಶದಿಂದಲೆ ಬರೆದು ಸಂಗ್ರಹಿಸಿದ ಪದ್ಯಗಳು ಇನ್ನಾಗಿದ್ದರೆ, ಅವನ್ನು ಬಯಸುವ ವಾಚಕರು ಇವುಗಳಿಂದ ಪ್ರಯೋಜನವನ್ನು ಪಡೆಯಬಹುದಾಗಿದೆ.

—ಬಿ. ಪಿ. ಎಸ್. ರಾವ್.

ಮೇವಾಡ ಪತನ

(ಅನುವಾದಿತ ನಾಟಕ)

ದಿವಂ 1ಕ ಗೋವಿಂದ ಲಕ್ಷ್ಮಣ ಹಳೆಕ್ಕಿಸನವರ ಅವರು ಅನುವಾದಿಸಿದ ಪದ್ಯ, ಶ್ರೀ. ವಿ. ಜಿ. ಹುದ್ದಾರ, ಹೂಳಮಡ್ಡಿ, ಧಾರವಾಡ ಅವರು ಪ್ರಕಟಿಸಿದ್ದಾರೆ.

ಕೀರ್ತಿಶೇಷ ದ್ವಿಜೇಂದ್ರಲಾಲ ರಾಯರು ಬಂಗಾಲಿ ಭಾಷೆಯಲ್ಲಿ ಕುಶಲರಾದ ನಾಟಕಕಾರರು. ಅವರು ಬರೆದ ನಾಟಕಗಳಲ್ಲೆಲ್ಲ ಈ 'ಮೇವಾಡ ಪತನ' ವು ಅತ್ಯುತ್ತಮ ನಾಟಕವೆಂದು ಹೆಸರ ಪಡೆದಿದ್ದು, ಭಾರತದಲ್ಲಿಯ ಹಲವು ಭಾಷೆಗಳಲ್ಲಿ ಭಾಷಾಂತರ ಗೊಂಡು ಎಲ್ಲ ಜನರಿಂದಲೂ ಮೆಚ್ಚಿಕೆಯನ್ನು ಪಡೆದಿದೆ.

ಇದೊಂದು ಐತಿಹಾಸಿಕ ನಾಟಕ. ಮಹಾರಾಣಾ ಪ್ರತಾಪ ಸಿಂಹನ ತರುವಾಯ ಮೇವಾಡದ ಪಟ್ಟಕ್ಕೆ ಬಂದ ಆತನ ಮಗ ಅಮರಸಿಂಹನ ಆಡಳಿತದ ಕಾಲ ಇದಕ್ಕೆ ವಸ್ತುವನ್ನು ಒದಗಿಸಿ ಕೊಟ್ಟಿದೆ.

ಮಹಾರಾಣಾ ಪ್ರತಾಪಸಿಂಹರ ಕಾಲದಲ್ಲಿ ನಡೆದ ದೀರ್ಘಾವಧಿ ಯುದ್ಧದಲ್ಲಿ, ಮೇವಾಡದ ಪ್ರಜೆಗಳು ಪಟ್ಟ ಕಷ್ಟ ನಷ್ಟಗಳನ್ನು ಕಣ್ಣಾರೆ ಕಂಡು ಕರಗಿದ ಹೃದಯದ ಅಮರಸಿಂಹನು, ತನ್ನ ಪ್ರಜೆಗಳಿಗೆ ಹೆಚ್ಚಿನ ಕಷ್ಟಕೊಡಬಾರದೆಂದು ಶಾಂತಿಪ್ರಿಯ ಮನಸ್ಕನಾಗಿರುವನು. ಆತನ ಮಗಳು ಮಾನಸಿ. ಆವಳೊಂದು ಪರಿಪೂರ್ಣ ಮಾನವತೆಯ ಮೂರ್ತಿ. ಸಾಲುಂಬರದ ಅಧಿಪತಿ ಗೋವಿಂದಸಿಂಹ ಮೇವಾಡದ ಮಾಂಡಲಿಕ. ವೃದ್ಧವೀರ. ಇವನ ಮಗ ಅಜಯಸಿಂಹ. ಧಿರೋದಾತ್ತಮೂರ್ತಿ. ಮಾನಸಿ ಅಜಯರು ಪರಸ್ಪರರನ್ನು ಪ್ರೀತಿಸುತ್ತಿರುವರು. ಇವರಿಬ್ಬರ ಪ್ರೀತಿ ದೈಹಿಕ ವಿಕಾರವಾದ ಕಾಮದ ಆಕರ್ಷಣೆಯಲ್ಲವೆಂಬುದು ನಾಟಕದಲ್ಲಿ ಸುಂದರವಾಗಿ ರೂಪುಗೊಂಡಿದೆ.

ಎಲ್ಲ ರಜಪೂತರೂ ಮೊಗಲರಿಗೆ ಅಧೀನರಾಗಿ ನಡೆಯುತ್ತಿದ್ದರೂ ಮೇವಾಡದವರು ಮಾತ್ರ ಸಂಪೂರ್ಣ ಸ್ವತಂತ್ರರಾಗಿಯೆ ಇರುತ್ತಿದ್ದರು. ಇವರನ್ನೂ ಬಗ್ಗಿಸಿ ಅಧೀನರನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಮೊಗಲ ಬಾದಶಹನು ಮೇವಾಡವನ್ನು ಮುತ್ತಲು ಸೈನ್ಯ ಕಳುಹುವುದರಿಂದ ನಾಟಕ ಪ್ರಾರಂಭವಾಗುತ್ತದೆ.

(ಶರದ್ ಸಂಜೆಯ ಹೊಟಕ್ಕೆ)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, ಶ್ರೀಮಾನ್ ಮಿರ್ಜಿ ಅಣ್ಣಾರಾಯರ 'ಮಾತು-ಕತೆ' ಎಂಬ ಸಣ್ಣಕತೆಯನ್ನು ಕುರಿತು ೧೫ ಜನರಿಂದ ವಿಮರ್ಶೆಗಳು ಬಂದಿವೆ. ವಿಮರ್ಶಕರ ವಿಳಾಸ ಹೀಗಿದೆ:

೧. ಶ್ರೀ ಅನಂತ ಬುಲ್ಲಿ, ಬಾಗಿಲುಕೋಟೆ. ೨. ಶ್ರೀ. ನರೇಂದ್ರ, ಸಾಧನಕೇರಿ, ಧಾರವಾಡ. ೩. ಶ್ರೀ ಎಸ್. ಎಸ್. ಪುರುಷನ್, ಬಂಕಿಕೊಡ್ಲು. ೪. ಡಿ. ಎನ್. ಜೋಶಿ. ಸದಾಶಿವಪೇಟೆ, ಪುಣೆ. ೫. ಶ್ರೀ. ಬಾಳು ಉಪಾಧ್ಯೆ, ಮನೇವಾಡಿ. ೬. ಶ್ರೀ. ಶ್ರಿಕಾಂತ ಚತುರ ಜೋತ, ಶಮನೇವಾಡಿ. ೭. ಶ್ರೀ. ವಿರುಪಾಕ್ಷಿ ಎಸ್. ಶೆಟ್ಟಿ, ಭೋಜ. ೮. ಶ್ರೀ. ಜಿ. ಆರ್. ಸುಬ್ಬರಾವ್, ಶಿವಮೊಗ್ಗ. ೯. ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ. ೧೦. ಶ್ರೀ ದೇ. ಮೋಹನರಾವ್, ಧಾರವಾಡ. ೧೧. ಶ್ರೀ. ಎಚ್. ಬಿ. ನರಸಿಂಹಮೂರ್ತಿ, ಚಾಮರಾಜಪೇಟೆ, ಬೆಂಗಳೂರು ೧೮ ೧೨. ಶ್ರೀ. ಜಿ.ಎಸ್. ಮಕರ್ ಎಂ. ಎ, ಬಿ. ಟಿ. ಪುಣೆ. ೧೩. ಶ್ರೀ. ನಾ. ಮ. ಗುಡ್ಡಳ್ಳಿ. ಮಂಗಳವಾರಪೇಟೆ, ಧಾರವಾಡ. ೧೪. ಶ್ರೀಮತಿ ಪದ್ಮಾ, ಶಾರದಾ ಸ್ತ್ರೀಸಮಾಜ, ಚಾಮರಾಜಪೇಟೆ, ಬೆಂಗಳೂರು ೧೮. ೧೫. ಶ್ರೀ. ಕೊ. ಸು. ಸೀತಾರಾಮ, ಬೆಂಗಳೂರು ನಗರ.

ಈ ಸಲದ ವಿಮರ್ಶೆಗಳನ್ನು ಪರೀಕ್ಷಿಸಿ ನಿರ್ಣಯ ಕೊಟ್ಟವರು ಶ್ರೀಮಾನ್ ಎಸ್. ಗವಗೇಕರ್ ಬಿ. ಎ. ಅವರು. ಅವರ ನಿರ್ಣಯದಂತೆ **ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ** ಅವರ ವಿಮರ್ಶೆ ಅತ್ಯುತ್ತಮವೆಂದು ಮೊದಲಿನ ಸ್ಥಾನ ಪಡೆದಿದೆ. **ಶ್ರೀ. ಅನಂತ ಬುಲ್ಲಿ, ಶ್ರೀ ಎಚ್. ಬಿ ನರಸಿಂಹ ಮೂರ್ತಿ, ಶ್ರೀ. ಜಿ. ಎಸ್. ಮಕರ ಎಂ. ಎ., ಬಿ. ಟಿ, ಶ್ರೀಮತಿ ಪದ್ಮಾ** ಇವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಶ್ರಿಕಾಂತ ಚತುರ ಜೋತ, ಶ್ರೀ ಡಿ. ಎನ್. ಜೋಶಿ, ಶ್ರೀ. ನಾ. ಮ. ಗುಡ್ಡಳ್ಳಿ, ಶ್ರೀ ದೇ. ಮೋಹನರಾವ್, ಶ್ರೀ. ಕೊ. ಸು. ಸೀತಾರಾಮ ಅವರ ವಿಮರ್ಶೆಗಳು ಒಳ್ಳೆಯವಾಗಿವೆ.

'ಮಾತು-ಕತೆ' ಯನ್ನು ಎಲ್ಲರೂ ಮೆಚ್ಚಿ ಬರೆದುದು ಸಂತೋಷದ ಸಂಗತಿ. ಶ್ರೀ. ಜಿ ಎಸ್. ಮಕರ್ ಮತ್ತು ಶ್ರೀಮತಿ ಪದ್ಮಾ ಅವರು ತೋರಿಸಿದ ಒಂದೆರಡು ದೋಷಗಳು ವಿಚಾರಣೀಯವಾಗಿವೆ. ಆದರೆ ಅವುಗಳ ಗೌಣತೆಯನ್ನು ಅವರೂ ಒಪ್ಪಿರುವರು.

ಮುಂದಿನ ತಿಂಗಳಿಗಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ತಾಯ್ತನ' ಎಂಬುವನ್ನು ವಿಮರ್ಶೆಗೆ ತೆಗೆದುಕೊಂಡು, ೨೦ನೆಯ ಡಿಸೆಂಬರಿನೊಳಗಾಗಿ ತಲ್ಪುವಂತೆ ವಿಮರ್ಶೆಗಳನ್ನು ಕಳುಹಬೇಕು.

—ಸಂಪಾದಕರು

'ಮಾತು-ಕತೆ'

(ವಿಮರ್ಶೆ)

ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ

'ಮಾತು-ಕತೆ'—ಮೂರು ನಾಲ್ಕು ವ್ಯಕ್ತಿಗಳ ಮಾತು-ಕತೆಯನ್ನೇ ಆಕರ್ಷಕವಾಗಿ ಹೆಣೆದು ರಚಿಸಿದ ಕತೆಯಿದು. ಕನ್ನಡದ ಕತೆಗಳ ಬಳಗದಲ್ಲಿ ಈ ವಿಧದ ಕೃತಿಗಳು ಹೆಲವಿಲ್ಲ. ತನ್ನ ಗುಣಗಳು ಹೆಚ್ಚು ಇವೆ, ಸಂವಾದರೂಪದಲ್ಲಿ ಕತೆಯನ್ನು ಬರೆದು, ಅಚ್ಚುಕಟ್ಟಾಗಿ ಕೊನೆಗೊಳಿಸಿದ ಲೇಖಕರ ಜಾಣ್ಮೆ ಪ್ರಶಂಸನೀಯ.

ಮನೆತನ ಹೋಳಾಗಿರಬಾರದು, ಹೋಳಾದಂತೆ ಜನರಿಗೂ ಹರಿದಿರಬಾರದು, ಮಕ್ಕಳು ಮಾತ್ರ ಬೇರೆಬೇರೆಯಾಗಿ ನಿಂತು ಕಳೆಯಿಲ್ಲದೆ ಬಾಳಿರಬೇಕು—ಎನ್ನುವ ಯೋಜನೆಯನ್ನು ಹೂಡಿ, ಮನೆಯ ಹಿರಿಯ ಸಿದ್ದಪ್ಪ ತನ್ನ ಕಿರಿಯ ಮಗ-ಸೊಸೆಯರನ್ನು ಪೇಟೆಯೊಳಗಿನ ಮನೆಯಲ್ಲಿ ಇರಗೊಡಿಸಿದನು. ಇದರಿಂದಾಗಿ ಮನೆಯಲ್ಲಿ 'ದಿನಾ ಬೆಳಗಾದರ ಜಗಳ' ತಪ್ಪಿತು; ಆದರೆ, 'ನಾಲ್ಕು ದಿನ ಮರ್ಯಾದಿಯಿಂದ ಸಂಸಾರಮಾಡಿ ಹೋಗೋದಕ್ಕೂ ಬಹಳ ಬುದ್ಧಿವಂತಿಕೆ ಬೇಕಾಗ್ತದ' ಎಂದ ಸಿದ್ದಪ್ಪ, ತನ್ನ ಬುದ್ಧಿವಂತಿಕೆಯ ಸೋಲಿಗಾಗಿ—ಇದರಿಂದಾದ ತುಂಬಲಾರದ ನಷ್ಟಕ್ಕಾಗಿ—'ಮುಂದಿಗೆ ಮುಖ ತೋರಿಸಬಾರದಂತ ಮುದುಕ ತೋಟದೊಳಗ ಹೋದವನಕ, ಗಿಡಕ್ಕೆ ಉರುರು ಹಾಕಿಕೊಂಡಿದಾನ—' ಎನ್ನಿಸಿಕೊಳ್ಳಬೇಕಾಯಿತು.

ಈ ಕತೆಯಲ್ಲಿ ವಿಷಯಕ್ಕೆ ಪ್ರಾಧಾನ್ಯವಲ್ಲದೆ, ವ್ಯಕ್ತಿಚಿತ್ರಣಕ್ಕಲ್ಲ. ಹಾಗೆಂದೇ ಇಲ್ಲಿಯ ಯಾವ ವ್ಯಕ್ತಿಯೂ ಸುಸ್ಪಷ್ಟವಾಗಿ ಬಿಂಬಿಸಲ್ಪಟ್ಟಿಲ್ಲ. ಆದರೂ, ಸಾತವ್ವನೆಂಬಷ್ಟು ಇಂದು ನಮ್ಮ ನಾಡಿನಲ್ಲಿ ಎಲ್ಲೆಲ್ಲೂ ಕಾಣಬಹುದಾದ ನೂರಾರು ಹಿರಿಯ ಹೆಂಗಳೆಯ

—ಹುಬ್ಬಳ್ಳಿಯಲ್ಲಿ ಹೊಸ ಮಾಸಪತ್ರಿಕೆ—

ಇದೇ ೧೯೫೦ನೆಯ ಜನೇವರಿ ೧೯ನೇ ತಾರೀಖಿಗೆ

'ಸುಧಾಕರ' ಎಂಬ ಮಾಸಪತ್ರಿಕೆಯು **ಶ್ರೀ. ಕಲಮದಾನಿ ಗುರುರಾಯರ** ಸಂಪಾದಕತ್ವದಲ್ಲಿ ಹೊರಡಲಿರುವದು. ಆರ್ಥಿಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಮಟ್ಟವನ್ನು ಮೇಲೆತ್ತಲು ಸಾಹಸಪಡುವದೇ ಇದರ ಗುರಿ. ಚಂದಾವಿವರ, ಜಾಹೀರಾತು ಏಜೆನ್ಸಿ ಮೊದಲಾದವುಗಳಿಗಾಗಿ ಮೆಸರ್ಸ್ ಕಂಬಾಯಿಂಡ್ ನ್ಯೂಜ್ ಏಜನ್ಸಿ, ಟಿಳಕರೋಡ ಹುಬಳಿ ಇವರಿಗೆ ಬರೆಯಿರಿ.

ಪ್ರತಿರೂಪ. ಸಿದ್ದಪ್ಪ ತನ್ನ ಮಗ-ಸೊಸೆಯರನ್ನು ಪೇಟೆಯ ಮನೆಯಲ್ಲಿರಿಸುತ್ತೇನೆಂದಾಗಲೇ, 'ಅವರೇನೂ ನಮ್ಮ ಹಿಡಿತು ದೊಳಗೆ ಉಳಿಯೂವಿಲ್ಲ' ಎಂದು ತನ್ನ ನಿಶ್ಚಿತಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಳು; 'ಪೇಟೆಯ ಮನೆಗಿಂತಲೂ ತೋಟದೊಳಗಿನದ್ದು ಲೇಸು' ಎಂದೂ ಹೇಳಿದ್ದಳು. 'ನಾಲ್ಕು ಮುಂದಿ ಕೂಡಿ ನಮ್ಮ ತಲಿಗೆ ಏನಾದರೂ ತಂದಾರೂ ಅನ್ನತೇನು. ಅಬರೂ ಅನ್ನೋದು ಎಷ್ಟ ಇರತದ?' ಈ ಮಾತುಗಳೆಲ್ಲ ಅವಳ ಮೂರಿಪ್ಪತ್ತು ವರ್ಷದ ಅನುಭವಸಾಗರದ ಆಣಿಮುತ್ತುಗಳು. ಅನೇಕ ಬಾರಿ ಅನುಭವದ ಮಾತುಗಳು, ಒದ್ದಿವಂತಿಕೆಯನ್ನು ಹಿನ್ಮೆಟ್ಟಿಸುವುವು 'ಆವಮೇಲೆ ನೀವೆಲ್ಲಾ ಜೀವಾ ಕೊಡಲಿಕ್ಕೆ ಓಡಾಡವರು. ಮೊದಲಕ ಎಚ್ಚರಿಕೆಯಿಂದ ಇದ್ದರ ಹ್ಯಾಂಗ?' —ಅವಳ ಈ ಮಾತೇ ಕೊನೆಗೆ ನಿಜವಾಯಿತು.

'ಒಂದಾಗಿ ಬಾಳುವ ಭಾರತೀಯ ಸಂಸ್ಕೃತಿಯೇ ನಷ್ಟವಾಯಿತೆ?' ಎನ್ನುವ ಉದ್ಗಾರವೇ ಈ ಕತೆಯನ್ನು ಬರೆಯಲು ಲೇಖಕರನ್ನು ಪ್ರೇರೇಪಿಸಿರಬೇಕು. ಹಾಗೆಂದೇ ಅವರು, ಬೇರೆ ಬೇರೆಯಾಗಿ ಬಾಳುವುದರಿಂದ ಒದಗಬಹುದಾದ ಹಾನಿಯನ್ನು ಸೂಚಿಸುತ್ತ, ಕೂಡಿ ಬಾಳುವುದರಿಂದ ಇಂತಹ ಹಾನಿಯನ್ನು ತಡೆಯಬಹುದೆಂದು ಸೂಚ್ಯವಾಗಿ ನಿರೂಪಿಸಿರುವರು. ಕಥನ ಕಲೆಯಲ್ಲಿ ಪಳಗಿದವರಿಗೆ ಮಾತ್ರ ಇಂತಹ ಸಂಯಮವು ಸಾಧ್ಯ; ಅವರು ಅಸ್ಪಿತಸ್ಪಿಯಾದರೂ ಓದುಗರನ್ನು 'ಹಾಗೆ ಮಾಡಬೇಕು, ಹೀಗೆ ಮಾಡಬಾರದು' ಎಂದು ಆಜ್ಞಾಪಿಸಲು ಹೊರಡುವುದಿಲ್ಲ. ಆದರೆ ಕತೆಯನ್ನು ಓದಿ ಮುಗಿಸಿದಾಗ, ಲೇಖಕನ ಉದ್ದೇಶವು ಓದುಗನ ಮನಸ್ಸನ್ನು— ಅವನಿಗೇ ಅರಿಯದಂತೆ ಆಕ್ರಮಿಸಿಕೊಳ್ಳುವುದು. 'ಮಾತು ಕತೆ' ಆ ಮಾದರಿಯದು.

ಮನೆಗೆ ಹಿರಿಯರಾದವರ ಕಡಿವಾಣವಿಲ್ಲದಿದ್ದರೆ, ಅಸ್ರಬುದ್ಧರಾದ ಮನೆಯ ಮಗ-ಸೊಸೆಯಂದಿರು ಕಾಲುಜಾರಬಹುದೆಂದೂ ಈ ಕತೆಯಲ್ಲಿ ಮಾರ್ಮಿಕವಾಗಿ ಚಿತ್ರಿತವಾಗಿದೆ. ಇಲ್ಲಿಯೂ, ಈ ಭಾವನೆ ಸೂಚ್ಯವಾಗಿಯೇ ಬಂದಿರುವುದರಿಂದ ಕತೆಗೆ ಕಳೆಗಟ್ಟಿದೆ.

ಕತೆಯ ಮೊದಲಿಗೆ ಅವತರಣಿಕೆ (Introduction) ರೂಪದಲ್ಲಿ ಕೊಟ್ಟ ಕೆಲವು ವಾಕ್ಯಗಳು ಬಾರದಿರುತ್ತಿದ್ದರೆ, ಅದರ ಬಿಗಿಯು ಇನ್ನೂ ಅಧಿಕವಾಗುತ್ತಿತ್ತು. 'ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರ ಎನ್ನುವಂತೆ ನಾಡಿನ ಜನ ವರ್ತಿಸುತ್ತಿದೆ; ಬಹುದಿನದ ಸಾಧನೆಯಿಂದ ಪಡೆದ ಸಿದ್ಧಿಯನ್ನು ಮಣ್ಣುಗೂಡಿಸುತ್ತಲಿದೆ. ಇದನ್ನು ತಡೆಯಲಿಕ್ಕೆ ಭಾರತದ ಹಳ್ಳಿಹಳ್ಳಿಗಳಲ್ಲಿಯೂ ಗ್ರಾಮಸಂರಕ್ಷಣ ದಳಗಳನ್ನು ಕಟ್ಟಲಾಗುತ್ತಿದೆ'— ಈ ಮಾತುಗಳನ್ನು ಕತೆಯ ಮೊದಲಲ್ಲಿ ಓದುವಾಗ—ಸ್ವೇಚ್ಛಾಚಾರ, ಅನಿಚಾರಗಳಿಂದ ಆಗ ಬಹುದಾಗಿದ್ದ ಒಂದು ಹಾನಿಯನ್ನು ಗ್ರಾಮಸಂರಕ್ಷಕ ದಳದ ತಡೆದದ್ದು ಈ ಕತೆಯ ವಸ್ತುವಾಗಿರಬೇಕು— ಎಂದು ಸಾಮಾನ್ಯ ಓದುಗನಿಗೆ ಹೊಳೆಯಬಹುದು—ನನಗಂತೂ ಹಾಗೆಯೇ ಹೊಳೆದಿದೆ. ಆದರೆ ಕೊನೆಗೆ ಕತೆ ಬೇರೆಯೇ. ಹೀಗೆ ತೊಡಗುವುದಕ್ಕಿಂತ, ಆ ಪೀಠಿಕೆಯನ್ನಷ್ಟು ಬಿಟ್ಟುಬಿಡಬಹುದಿತ್ತು, ಅಥವಾ ತಾನು ಗ್ರಾಮಸಂರಕ್ಷಕ ದಳದವನಾದುದರಿಂದ 'ಮಾತು-ಕತೆ'ಯನ್ನು ಕೇಳುವ ಸಂದರ್ಭವೊದಗಿತು—ಎಂದಷ್ಟೆ ಹೇಳಿ ತೀರಿಸಬಹುದಾಗಿತ್ತು.

ಹಾಗೆಯೇ ಸಿದ್ದಪ್ಪ— ಸಾತವ್ವರ ಕುಟುಂಬದ ತೊಡಕನ್ನು ವಿವರಿಸುತ್ತ, ಅದರೊಂದಿಗೆ ಭಾರತದ ರಾಜಕೀಯ ಸಮಸ್ಯೆಗಳನ್ನು ಹೊಂದಿಸಲು ಪ್ರಯತ್ನಿಸಿದುದು ಕತೆಯ ದೃಷ್ಟಿಯಿಂದ ಅಪ್ರಾಸಂಗಿಕ. 'ಒಂದು ಮನೆತನದ ಹೊಣೆ ಹೊತ್ತವರಿಗೇ ಇ ಸಮಸ್ಯೆಯಾದರೆ, ದೇಶದ ಹೊರೆ ಹೊತ್ತಿರುವ ಹಿರಿಯರ ಗತಿಯೇನು?'— ಇಂತಹ ವಾಕ್ಯಗಳು ಕತೆಯಲ್ಲಿ ಒಂದೆರಡ ಬಾರಿ ಅವತರಿತವಾಗಿವೆ. ಇಲ್ಲಿ ಮಾತ್ರ ಲೇಖಕರು—ನಾನ ಮೊದಲು ಸೂಚಿಸಿದ, ಲೇಖಕರಲ್ಲಿರಬೇಕಾದ ಸಂಯಮದ ಗಡಿಯನ್ನು ತುಸು ವಿಾರಿರುವರೆಂದು ನನ್ನ ಭಾವನೆ. ಹಿರಿಯರ ಹೊಣೆಯ ವಿಶ್ವರೂಪ ಪ್ರದರ್ಶನವು ಈ ಕತೆಯ ಉದ್ದೇಶವಲ್ಲ.

ಕತೆಯ ಮೊದಲನೆಯಭಾಗವನ್ನು ತೊಡಗುವಾಗಲೇ ಸಿದ್ದಪ್ಪನು 'ನೀನೂ ದಿನಾ ಬೆಳಗಾದರೆ ಜಗಳಾಡತ ಕೂತರ, ನಾ ಯಾವ ಗಿಡಕ್ಕ ಜೋತಾಡಲಿ?' ಎಂಬ ವಾಕ್ಯವನ್ನೂ, ಕತೆಯ ಮುಗಿತಾಯದಲ್ಲಿ 'ಗಿಡಕ್ಕ ಉರುಲು ಹಾಕಿಕೊಂಡಿದಾನ.....' ಎಂದು ಮೊದಲಿನ ಮಾತಿಗೇ ಕತೆಯ ಕೊನೆಯನ್ನೂ ತಂದು ನಿಲ್ಲಿಸಿದುದನ್ನೂ ಆಲೋಚಿಸಿದರೆ, ಕತೆ ಹೇಳುವಾಗ ಲೇಖಕರು ಬಳಸಿದ ಈ ಸಾವೀನ್ಯ ಪೂರ್ಣವಾದ ತಂತ್ರ— ನಾನು ತಿಳಿದಂತೆ ಈವರೆಗೂ ಕನ್ನಡ ಕತೆಗಳಲ್ಲಿ ಬಳಸಲ್ಪಟ್ಟಿಲ್ಲ—'ಮಾತು-ಕತೆ'ಯ ಲೇಖಕರು ಕನ್ನಡ ಕಥಾಪ್ರಪಂಚಕ್ಕೆ ಇತ್ತಿರುವ ಅಮೂಲ್ಯ ಕೊಡುಗೆ ಇದು ಎನ್ನಬೇಕು.

ನಗೀಗೆ ನೇವಿದ್ಯ

(೧)

ಒಬ್ಬ ಹಳ್ಳಿಗನನ್ನು ರೋಗಿಯೆಂದು ಮಿಲ್ ಆಸ್ಪತ್ರೆಯಲ್ಲಿ ತರಲಾಗಿತ್ತು. ಮಿಮ್ಮ ನಿತ್ಯಕ್ರಮದಂತೆ ದೊಡ್ಡ ಡಾಕ್ಟರರು ರೋಗಿಗಳನ್ನು ನೋಡಿಕೊಂಡು ಹೋಗಲು ಬಂದರು; ಸಹಜವಾಗಿ ಪ್ರಶ್ನೆ ಕೇಳುವಂತೆ ಹಳ್ಳಿಗನಿಗೆ ಕೇಳಿದರು. "ಮುಂಜಾನೆ ನಿನಗೆ ಏನಾದರೂ ತಿನ್ನಲಿಕ್ಕೆ ಕೊಟ್ಟರೇನೇ?"

ಹಳ್ಳಿಗ ಉತ್ತರಿಸಿದ:—'ಒಂದು ಕಾಜಿನ ಕೊಳವಿಯನ್ನು ತುಸುಹೊತ್ತು ಚೀಪಲಿಕ್ಕೆ ಕೊಟ್ಟದ್ದರ್ರಿ.'

(೨)

ಒಬ್ಬ ಸಾಕ್ಷಿದಾರನನ್ನು ಕೋರ್ಟಿನಲ್ಲಿ ಅವಮಾನಗೊಳಿಸಬೇಕೆಂದು ವಕೀಲ ಮಹಾಶಯರು ಕ್ರಾಸಿನಲ್ಲಿ ಕೇಳಿದರು.

'ನೀವು ಸೆಕಂಡ್‌ಹ್ಯಾಂಡ್ ಸಾಮಾನು ಮಾರುವ ಉದ್ಯೋಗ ಮಾಡ್ತೀರಲ್ಲ?'

'ಹೌದು.'

'ಇದು ಕೀಳುತರವ ಉದ್ಯೋಗ ಅಂತ ನಿಮಗ ಅನಿಸುವದಿಲ್ಲೇನು?'

'ಅನಿಸ್ತದ. ಆದರ ನನ್ನ ತಂದಿ ಮಾಡುತ್ತಿದ್ದ ಉದ್ಯೋಗಕ್ಕಿಂತ ಇದು ಒಳ್ಳೇ ಉದ್ಯೋಗ ಅಂತ ನಾ ತಿಳಿದೇನಿ.'

'ನಿಮ್ಮ ತಂದಿ ಯಾವ ಉದ್ಯೋಗ ಮಾಡುತ್ತಿದ್ದರು?'

'ವಕೀಲ.'

(೩)

ಮದ್ರಾಸಿ, ಪಂಜಾಬಿ, ಮಾರವಾಡಿ ಹೀಗೆ ಮೂವರಿಗೆ ಒಮ್ಮೆ ಸ್ಟೇಶನ್ ಮೇಲೆ ಗಾಡಿಯ ದಾರಿಕಾಯುವ ಪ್ರಸಂಗ ಬಂತು. ವೇಟಿಂಗ್ ರೂಮಿನಲ್ಲಿ ಕುಳಿತಾಗ ತಮ್ಮ ಶ್ರೀಮಂತಿಕೆಯನ್ನು ಪರಸ್ಪರರಿಗೆ ತೋರಿಸುವ ಲಹರಿ ಬಂದಿತು!

ಮದ್ರಾಸಿ ಮನುಷ್ಯನು ತನ್ನ ಜೇಬಿನಲ್ಲಿಯ ಒಂದುರೂಪಾಯಿಯ ನೋಟನ್ನು ಬೆಂಕಿಯ ಕಡ್ಡಿಗೆ ಹಿಡಿದು, ಆ ನೋಟಿನಿಂದ ತನ್ನ ಸಿಗರೇಟನ್ನು ಹೊತ್ತಿಸಿದನು.

ಪಂಜಾಬಿಯು ಹತ್ತು ರೂಪಾಯಿಯ ನೋಟನ್ನು ಹೊತ್ತಿಸಿ ತನ್ನ ಚಿರೂಟನ್ನು ಅದರ ಮೇಲೆ ಹಿಡಿದನು.

ಈ ಸ್ಪರ್ಧೆಯಲ್ಲಿ ತಾನು ಹಿಂದೆ ಬೀಳಬಾರದು ಎಂದು ಮಾರವಾಡಿಯು ಚಿಲಿಮೆಯಲ್ಲಿ ಕಂಬಾಕು ತುಂಬಿದನು, ತನ್ನ ಜೇಕ್ ಬುಕ್ಕನ್ನು ಹೊರಗೆ ತೆಗೆದು, ನೂರು ರೂಪಾಯಿಗೆ ಚೆಕ್ ಬರೆದನು ಮತ್ತು ಅದರಿಂದ ತನ್ನ ಚಿಲಿಮೆಯನ್ನು ಹೊತ್ತಿಸಿ, ಹೊಗೆ ಬಿಡಹತ್ತಿದನು.

(೪)

ಪ್ರಸಿದ್ಧ ಚಿತ್ರಕಾರನೊಬ್ಬನು 'ಮೃತ್ಯು-ಶಯ್ಯೆಯ ಮೇಲಿನ ಕೊನೆಯ ಕ್ಷಣ' ಎಂದು ಒಬ್ಬ ರೋಗಿಯ ಚಿತ್ರವನ್ನು ತಯಾರಿಸಿ ತನ್ನ ಡಾಕ್ಟರ್ ಮಿತ್ರನಿಗೆ ತೋರಿಸಿ ಅಭಿಪ್ರಾಯ ಕೇಳಿದನು.

ಡಾಕ್ಟರರು ಕ್ಷಣಹೊತ್ತು ಚಿತ್ರವನ್ನು ನಿರುಕಿಸಿ ಹೇಳಿದರು:—'ಇದು ನ್ಯೂಮೋನಿಯಾ!'

(೫)

ಹಳ್ಳಿಯ ಇನಾಮದಾರರೊಬ್ಬರು ಮೊದಲನೆಯ ಸಲ ಮುಂಬಯಿ ನೋಡಲು ಬಂದು, ಒಂದು ದೊಡ್ಡ ಹೊಟೆಲ್‌ನಲ್ಲಿ ಇಳಿದರು. ಊಟ-ತಿಂಡಿಯು ಹೊತ್ತು ಯಾವಾಗ ಎಂದು ಮ್ಯಾನೇಜರನನ್ನು ಕೇಳಲು ಅವನು ತಿಳಿಸಿದ:—

"ಮುಂಜಾನೆ ೬ ರಿಂದ ೯ ಗಂಟೆ, ೧೦ ರಿಂದ ೧೫ ಊಟ; ೨ ರಿಂದ ೫ ಚಹ-ಫಲಾಹಾರ, ೬ ಯಿಂದ ೧೦ ರಾತ್ರಿ ಊಟ."

"ಅಲ್ರೀ, ಇದರಲ್ಲಿ ನಮಗೆ ಮುಂಬಯಿ ನೋಡಲು ಟೈಮೇ ಇಲ್ಲನಲ್ಲ!" ಇನಾಮದಾರರು ಉದ್ಗಾರ ತೆಗೆದರು.

(೬)

ಮಿಂಚಿನ ದೀಪ ನೋಡದ ಹಳ್ಳಿಗ ಕಾರಣಾಂತರದಿಂದ ಪಟ್ಟಣಕ್ಕೆ ಬಂದು, ರಾತ್ರಿ ಒಂದು ಹೋಟೆಲ್‌ನಲ್ಲಿ ತಂಗಿದ. ಮರುದಿನ ತನ್ನೂರಿಗೆ ಹೋದಮೇಲೆ ಹೆಂಡತಿಯ ಮುಂದೆ ಹೇಳತೊಡಗಿದ:—

"ಆ ಹೋಟೆಲಿನವರು ನನ್ನ ಕೋಣೆಯಲ್ಲಿ ಬೆಳತನಕ ದೀಪವನ್ನು ಇಟ್ಟಿದ್ದರು. ಅದರಿಂದ ನನಗೆ ನಿದ್ದೆಯೇ ಬರಲಿಲ್ಲ."

"ನೀವು ಅದನ್ನ ಆರಿಸಿಬಿಡಬೇಕಿತ್ತು?"

"ನಾನು ಹಾಗೆ ಮಾಡೇನು ಅಂತಲೇ ಅವರು ದೀಪವನ್ನು ಬಾಟಲಿಯಲ್ಲಿ ಬಂದು-ಮಾಡಿ ಇರಿಸಿದ್ದರು!"

ಸಾದರ ಸ್ವೀಕಾರ

೯೩. **ಕರುಣಭಾರತ** (ಮರಾಠಿ ಅರ್ಧವಾರಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಬಾಬೂರಾವ್ ಠಾಕೂರ, 'ಕರುಣಭಾರತ' ಕಾರ್ಯಾಲಯ, ಬೆಳಗಾಂವಿ. ಡೆ. ೧ದ ೧೮೦ ಪುಟಗಳು. ಬೆಲೆ ೧-೪-೦.

ಶ್ರೀಮಾನ್ ಲಟ್ಟಿಯವರ ಮತ್ತು ಪುಂಡಲೀಕಜಿಯವರ ಹಳೆಯ ನೆನಪಿನ ಬರೆಹಗಳೂ ಶ್ರೀ. ಮರಾಠೆಯವರ ಬೆಳಗಾಂವಿಯ ವಿಷಯಕವಾದ ಐತಿಹಾಸಿಕ ಲೇಖನವೂ ವಾಚನೀಯವಾಗಿವೆ. ಆಕರ್ಷಕವಾದ ಮುಖಚಿತ್ರವಿದೆ.

೯೪. **ಸಣ್ಣಕತೆಗಳು** (ಕಥಾಸಂಕಲನ) ಬರೆದವರು 'ಅಶ್ವತ್ಥ'. ಪ್ರಕಾಶಕರು: ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು. ಕ್ರೌ. ಆ. ೧೭೪ ಪುಟಗಳು. ಬೆಲೆ ೨-೪-೦.

೯೫. **ನಿರೀಕ್ಷಕ** (ಹೊಸ ವಾರಪತ್ರಿಕೆ). ಸಂಪಾದಕರು ಶ್ರೀ. ಮಳಯೆ ಗೋವರ್ಧನರಾಯರು. 'ನಿರೀಕ್ಷಕ' ಕಾರ್ಯಾಲಯ, ಧಾರವಾಡ. ಕ್ರೌ ಸ್ಮೋ. ೧೨ ಪುಟಗಳು. ವಾರ್ಷಿಕ ಚಂದಾ ಸ್ಥಳೀಕರಿಗೆ ೬-೪-೦. ಪರಸ್ಥಳದವರಿಗೆ ೭-೦-೦ ಬಿಡಿಸಂಚಿಕೆಗೆ ೦-೨-೦.

ಸಂಪಾದಕರಾದ ಶ್ರೀ. ಗೋವರ್ಧನರಾಯರು ವೃತ್ತಪತ್ರ ವ್ಯವಸಾಯದಲ್ಲಿ ಪಳಗಿದ ಕೈಯವರು. ರಾಜಕೀಯ, ಸಾಮಾಜಿಕ ವಿಷಯಗಳಲ್ಲಿ ಸ್ವತಂತ್ರವಾಗಿ ವಿಚಾರಮಾಡಿ, ನಿರ್ದಾಕ್ಷಿಣ್ಯದ ಅಭಿಪ್ರಾಯಗಳನ್ನು ಕೊಡುವಂತಹ ಮುನ್ನೋಟದವರು. ಭಾಷೆಯಲ್ಲಿ ಶುದ್ಧತೆಯಿದೆ. ಶೈಲಿಯಲ್ಲಿ ಸತ್ತ್ವವಿದೆ. ಕರ್ನಾಟಕವ ಬಗೆಗೆ ಕುಂಬ ವಿಚಾರನಮಾಡಿದ ಅಭಿಮಾನಿಗಳು ಇಂಥವರ ಸಂಪಾದಕತ್ವದಲ್ಲಿ ಹೊಂಟಿರುವ 'ನಿರೀಕ್ಷಕ' ಕನ್ನಡಿಗರಿಗೆಲ್ಲ ಪ್ರೀತಿಪಾತ್ರವಾಗುವುದರಲ್ಲಿ ಸಂದೇಹವಿಲ್ಲ. 'ನಿರೀಕ್ಷಕ' ಹತ್ತರಕೂಡ ಹನ್ನೊಂದನೆಯದಾಗಿ ಬಾಳದೆ, ತನ್ನ ವ್ಯಕ್ತಿತ್ವವನ್ನು ವಿಶೇಷರೀತಿಯಿಂದ ಕಾಯ್ದುಕೊಂಡು ಹೋಗುವುದೆಂಬ ನಂಬುಗೆ ನಮಗಿದೆ. ಸಂಪಾದಕರ ಸತತ ಶ್ರಮಕ್ಕೆ ಕನ್ನಡಿಗರ ಔದಾರ್ಯದ ಸಹಕಾರ ದೊರೆತು, 'ನಿರೀಕ್ಷಕ' ಬಹುಕಾಲ ಬಾಳಲಿ!


ಪುಣ್ಯಿನ
ಕಾಟ
ಶಾಸ್ತ್ರೀಯ
ಉಪಾಯದಿಂದಲೇ ಕಡಿಯೋದು
ಪೇಟೆಯಲ್ಲಿಯ ಔಷಧದಿಂದಲ್ಲ. ಅವು ಬರೇ ಕ್ಷಣಿಕ ಗುಣಮಾಡುಸಂಥವು. ಸ್ವಲ್ಪ ತಡೆದಿಟ್ಟ ದಮ್ಮು ಹೆಚ್ಚಾಗುತ್ತ ಹೋಗುವುದು. ಆದರೆ ಪುರೋಹಿತ ಶ್ವಾಸಹಾರಿಯು ಅಂಥ ಔಷಧವಲ್ಲ. ಅದು ದಮ್ಮಿಗಾಗಿ ಶಾಸ್ತ್ರೀಯ ಉಪಾಯವೆಂದು ಎಲ್ಲ ಡಾಕ್ಟರರಿಗೂ ಎಷ್ಟೋ ವರ್ಷಗಳಿಂದ ಗೊತ್ತಿದ್ದ ಮಾತು.
ಪುರೋಹಿತ ಶ್ವಾಸಹಾರಿಯು ಮಾತ್ರ ಇಂಥ ಔಷಧವಿದೆ; ಅದನ್ನು ತೆಗೆದು ಕೊಳ್ಳಲು ಹತ್ತಿದ ಕೂಡಲೇ ಕೆಮ್ಮು ಕಡಿದು ಹೋಗಿ ತೇಕು ಕಡಿಮೆ ಆಗುವುದು. ಪಚನಕ್ರಿಯೆ ಹೆಚ್ಚುವುದು. ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಬಿಟ್ಟು ಹೋಗುವುದು.
೩-೪, ೬ ಮತ್ತು ೧೦ ರೂ. ಪ್ಯಾಕಿಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ. ಇವರಿಂದ ತರಿಸಿ ಕೊಳ್ಳಬೇಕು.
ಪುರೋಹಿತ
ಶ್ವಾಸಹಾರಿ

೯೬. **ಜೀವನದ ನಿಲುವು** (ನೆನಪಿನ ಕತೆಗಳ ರಸನಿಮಿಷಮಾಲೆ). ಬರೆದವರು ಶ್ರೀಮಾನ್ ವಿ. ಕೃ. ಗೋಕಾಕ. ಆನಂದವನದ ಶ್ರೀ ಶೇಷಾಚಲ ಗ್ರಂಥಮಾಲೆಯ ೧೩ನೆಯ ಹೂವಿದು. ಕ್ರೌ. ೧೩೮ ಪುಟಗಳು. ಬೆಲೆ ೧-೧೭-೦.

೯೭. **ಭಾಷೆಯ ಕೈಪಿಡಿ** (ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ). ಲೇಖಕರು ಶ್ರೀ ದ್ವೈಪಾಯನಾಚಾರ್ಯ ನಾ. ಜಹಾಗೀರದಾರ್ 'ಕನ್ನಡ ಜಾಣ;' ಸ್ಕೂಲ್ ಉಪಶಿಕ್ಷಕ ಆಲಮೇಲ. ಪ್ರಕಾಶಕರು ಶ್ರೀ. ವೆಂ. ನಾಯಕ 'ಕರ್ನಾಟಕ ವೈಭವ' ಮುದ್ರಣಾಲಯ, ವಿಜಾಪುರ. ಕ್ರೌ. ಆ. ೧೪ ಪುಟಗಳು. ಬೆಲೆ ೧-೦-೦.

೯೮. **ಸಮಾಧಾನ** (ಮರಾಠಿ ವಾರಪತ್ರಿಕೆಯ ದೀಪಾವಳಿ ಸಂಚಿಕೆಯು). ಸಂಪಾದಕರು ಶ್ರೀಮಾನ್ ಶ್ರೀ. ನಾ. ಬನ್ದಟ್ಟಿಯವರು 'ಸಮಾಧಾನ' ಕಾರ್ಯಾಲಯ, ನಾಗಪುರ. ಕ್ರೌ. ೧ದ ಸುಮಾರು ೧೦೮ ಪುಟಗಳು.

ಮಹಾರಾಷ್ಟ್ರದಲ್ಲಿಯ ಅನೇಕ ಸುಪ್ರಸಿದ್ಧ ಸಾಹಿತ್ಯಿಕರ ಬರೆಹಗಳು ಅಲ್ಲದೆ ಕನ್ನಡ ಮರಾಠಿ, ತೆಲಗು, ಹಿಂದಿ ಉರ್ದು ಭಾಷೆಯ ಒಂದೊಂದು ಕತೆಗಳನ್ನು ಭಾಷಾಂತರಿಸಿ, ಲೇಖಕರ ಪರಿಚಯಗಳೊಂದಿಗೆ ಪ್ರಕಟಿಸಿದುದು ಈ ಸಂಚಿಕೆಯಲ್ಲಿಯದೊಂದು ವಿಶೇಷ. ಜಯತಿಯ ೧೦ನೆಯ ಸಂಪುಟದಲ್ಲಿ ಪ್ರಕಟವಾದ ಶ್ರೀಮಾನ್ ಕೆ. ಎ ಎನ್. ರಾವ ಅವರ 'ಧರ್ಮಕೊಂಡದ ಕಥೆ' ಕನ್ನಡ ಪ್ರಾತಿನಿಧಿಕ ಕಥೆಯೆಂದು ಭಾಷಾಂತರಿತವಾಗಿ ಅಚ್ಚಾಗಿದೆಯಲ್ಲದೆ, ಅದೇ ಒಳ್ಳೆಯ ಕತೆಯೆಂದು ಮರಾಠಿ ವಾಚಕರಿಂದಲೂ ಹೊಗಳಿಸಿಕೊಳ್ಳುವಂತಿದೆ. ಸಂಪಾದಕರ ಈ ಹೊಸ ಉಪಕ್ರಮವು ಪ್ರಶಂಸನೀಯವಾಗಿರುವುದು.

(೩೬೦ ನೆಯ ಪುಟದಿಂದ)

ಯನ್ನು ಬಯಸುವ ಅಮರಸಿಂಹನು ಮೊಗಲರೊಡನೆ
ದವನ್ನು ಅಪೇಕ್ಷಿಸಿದರೂ– ಗೋವಿಂದಸಿಂಹನಂತಹ ಕ್ಷಾತ್ರ-
ರ್ತಿಗಳ ಸ್ವಾಭಿಮಾನ-ಸ್ವಾತಂತ್ರ್ಯಪ್ರೀತಿಗಳನ್ನು ಮುರಿಯದ
ದವನಾಗಿ— ದಂಡೆತ್ತಿ ಬಂದ ಮೊಗಲ ಸೇನಾಪತಿಯನ್ನು
ರಿಸಲು ಒಪ್ಪುವನು. ಮೊದಲನೆಯ ಯುದ್ಧದಲ್ಲಿ ರಜಪೂತರು
ಶಾಲಿಗಳಾಗುವರು. ಎರಡನೆಯ ಯುದ್ಧದಲ್ಲಿ ಅಜಯ ಸತ್ತು,
ಪೂತರು ಸೋತು, ಮೊಗಲರೊಡನೆ ಒಪ್ಪಂದ ಮಾಡಿಕೊಳ್ಳು-
ು: ಎಂದಿನಿಂದಲೂ ಸ್ವತಂತ್ರವಾಗಿ ಮೆರೆಯುತ್ತಿದ್ದ ನೀವಾಡದ
ತ್ಯ ಸಿಂಹಾಸನವು ಮೊಗಲರ ಆಧಿಪತ್ಯವನ್ನೊಪ್ಪಿದುದರಿಂದ
ೀವಾಡದ ಪತನ 'ನಾವಂತಾಯಿತು-

ಪಾತ್ರಪರಿಪುಷ್ಟಿ, ರಸಪುಷ್ಟಿ, ಸಂವಿಧಾನ ಚಮತ್ಕೃತಿ, ನಾಟಕದ-
ತ್ರ ಇವೆಲ್ಲವುಗಳ ದೃಷ್ಟಿಯಿಂದಲೂ ಈ ನಾಟಕ ಆದರ್ಶವೆನಿಸು-
ಂತಹದು. ವೀರ-ಕರುಣೆಗಳ ಬೆಳೆವಣಿಗೆ ಎಂತಹ ಅರಸಿಕರ
ೃದಯ-ಮನಗಳನ್ನೂ ಹಟ್ಟಿ ಮೈ ಜುಮ್ಮೆನಿಸುವಂತಿದೆ.
ಕಾಲದ ಹಿಂದೀಯರ ಮನಸ್ಥಿತಿಯ ರೂಪ-ವೈಚಿತ್ರ್ಯಗಳು
ುಧಾವತ್ತಾಗಿ ಇದರಲ್ಲಿ ಮೂಡಿನಿಂತಿವೆ. ಮನೋವಿಶ್ಲೇಷಣವೇ
ಈ ನಾಟಕದ ಜೀವಾಳವಾದುದರಿಂದ, ಇದರಲ್ಲಿಯ ಒಂದೊಂದು
ಪಾತ್ರಗಳೂ ಸಜೀವ ಮೂರ್ತಿಗಳಾಗಿ ಕಣ್ಮುಂದೆ ಸುಳಿದಾಡಿದಂತಾ-
ಗುವುದು.

ಇದರಲ್ಲಿ ಬರುವ ಮಾನಸಿ, ಕಲ್ಯಾಣಿ, ಸತ್ಯವತಿ, ಮಹಾರಾಣಿ
ಇವರೆಲ್ಲ ಒಂದೊಂದು ಸ್ತ್ರೀಸ್ವಭಾವದ ಮಾದರಿಗಳಾಗಿದ್ದಾರೆ.
ಭಾರತಸಂಸ್ಕೃತಿಯು ಆಭಿವ್ಯಕ್ತಿಗಳಿಗೆ ಸತ್ಯವತಿಯು ಒಬ್ಬ ದೇವತೆ-
ಯಾಗಿ ತೋರಿದರೆ ಆಶ್ಚರ್ಯವಿಲ್ಲ. ಮುಸಲ್ಮಾನರನ್ನು ಸಖ-
ಶಿಖಾಂತವಾಗಿ ದ್ವೇಷಿಸುವ ಗೋವಿಂದಸಿಂಹನ ಪ್ರತ್ಯಕ್ಷ ಮಗಳು
ಕಲ್ಯಾಣಿ. ಅಂತಹಳು ಮುಸಲ್ಮಾನ್ ಧರ್ಮವನ್ನು ಸ್ವೀಕರಿಸಿದ
ಪತಿಯ ಪ್ರೇಮಕ್ಕಾಗಿ ದೇಶವನ್ನೂ ಧರ್ಮವನ್ನೂ ಹೇಗೆ ಗೌಣವಾಗಿ
ಭಾವಿಸುತ್ತಾಳೆಂಬುದು ಪರಿಣಾಮಕಾರಿಯಾಗಿ ರೂಪಿತವಾಗಿದೆ.

ಮಾನಸಿ, ಅಮರಸಿಂಹ, ಅಜಯ ಇವರ್ಯಾತ್ರಗಳಂತೂ ಓದು-
ಗರ ಹೃದಯವಲ್ಲಿ ಕೊರೆದಂತೆ ನಿಲ್ಲಬಲ್ಲವು. ಮೊಘಲ ಮಾನಸ
ಸಪ್ತಂಜನ್ಯವಾದ ಸಂಸ್ಕಾರವೂ ಸುರೆಯಂತಹದು.

ಭಾರತೀಯರಿಗೆ ಇದು ಒಂದು ವಿಷಾದಾಂತ ನಾಟಕವೆ! ಆದರೆ
ನಾಟಕಕಾರನಿಗೆ ಈ ನಾಟಕದ ಮೂಲಕ ಜಗತ್ತಿಗೊಂದು ಸಂದೇಶ
ವನ್ನು ಕೊಡಬೇಕಾಗಿದೆ. ಅದಾವುದೆಂದರೆ ಯುದ್ಧನಿರೋಧ
ಇಂತಹ ಒಳ್ಳೆಯ ನಾಟಕವನ್ನು ಕನ್ನಡಿಸಿ, ಅದು ಬೆಳಕಿಗೆ ಬರು-
ಮೊದಲೆ ಶ್ರೀ- ಹಳ್ಳಿಪ್ಪನವರ ಗೋವಿಂದರಾಯರು ದಿವಂಗತ
ರಾದುದು ವಿಷಾದದ ಸಂಗತಿ. ಅದನ್ನು ಬೆಳಕಿಗೆ ತಂದು ಕನ್ನಡಿ-
ಗರಿಗೊಂದು ಒಳ್ಳೆಯ ರಸದೂಟವನ್ನು ಒದಗಿಸಿಕೊಟ್ಟ ಪ್ರಕಾಶಕ-
ರನ್ನು ಮನಸಾರೆ ಅಭಿನಂದಿಸುವೆವು.

ಸಂಪಾದಕ.

'ಶರಣ ಬಸವ'

(GE, 8455 ರಿಂದ GE 8457 ರ ವರೆಗೆ)

ಅಭಿನಯ ಕೇಸರಿ ಶ್ರೀ. ಸದಾಶಿವರಾವ್ ಗರುಡ ಇವರಿಂದ
ಬರೆಯಲ್ಪಟ್ಟ, ಹೃದಯವನ್ನು ಸೂರೆಗೊಳ್ಳುವ ಅದ್ಭುತವಾದ

ನಾಟಕ

ಅಣ್ಣಶಮ್ಮಕಿ (ದಾಯಾದಿತನ) ಎಂಬುದು ಜಾಗತಿಕ ಸತ್ಯ. ಧರ್ಮಬೋಧಕರು, ಸಾಧು-ಶರಣರು ನಮಗೆ ಕಾಲಕಾಲಕ್ಕೆ
ಸತ್ಯ, ಅಹಿಂಸೆ ಹಾಗು ತ್ಯಾಗದ ತತ್ತ್ವಗಳನ್ನು ಬೋಧಿಸಿದ್ದಾರೆ. ಆ ತತ್ತ್ವಬೋಧೆಯು ಎಷ್ಟು ಜನರನ್ನು ಸತ್ಯವಂತರನ್ನಾಗಿ
ಅಹಿಂಸಾವಾದಿಗಳನ್ನಾಗಿ, ತ್ಯಾಗಿಗಳನ್ನಾಗಿ ಮಾಡಿದೆ ?

ಇಂಥ ಶರಣರಲ್ಲಿ ಶರಣಬಸವರೊಬ್ಬರು. ಅಣ್ಣನ ದುರಾಶೆ ದುರ್ನಡತೆಗೆ ತಮ್ಮುದೆಲ್ಲವನ್ನೂ ಬಲಿಗೊಟ್ಟು, ಅವರು
ಯೋಗಿಗಳಾದರು. ತಮ್ಮನಿಂದ ಸರ್ವಸ್ವವನ್ನೂ ಸೆಳೆದುಕೊಂಡಿರುವ ಅಣ್ಣ ಭಾಗ್ಯಶಾಲಿಯಾಗಲಿಲ್ಲ. ನಿಜವಾಗಿ,
ಆತ್ಮಜ್ಞಾನದ ವೈಭವದಿಂದ ಬೆಳಗಿದವರು ಶರಣಬಸವರು. ಅಂತೆಯೇ ಅವರು ತಮ್ಮ ದೈವೀಗಣಗಳಿಂದ ಮಾನವರಲ್ಲಿ
ದೇವಾಂಶರೆನಿಸಿಕೊಂಡರು.

ಶರಣಬಸವರ ಇಂಥ ನವರಸಗಳಿಂದ ಕೂಡಿದ ಕಥೆ ಯಾರಿಗೆ ಚೀಡವಾದೀತು ?

ಕೋಲಂಬಿಯಾ ಕಂಪನಿಯವರು ಈ ನಾಟಕದ ಧ್ವನಿಮುದ್ರಿಕೆಗಳನ್ನು ತಯಾರಿಸಿದ್ದಾರೆ.
ನಿಮ್ಮ ಊರಿನ ಗ್ರಾಮೋಫೋನ್ ವಿಜಂಟನಲ್ಲಿ ಅವಶ್ಯವಾಗಿ ದೊರೆಯುವವು.



Printed by V..Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dhorwar—2081-49.

ವರ್ಷ ೧೨. ★ ಸಂಚಿಕೆ ೮

ಈ ಸಂಚಿಕೆಯಲ್ಲಿಯ ಮುಖ್ಯ ಲೇಖಕರು

ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

ಶ್ರೀ. ಯಮ್ಮುಂಜ ರಾಮಚಂದ್ರ, ಕಬಕ

ಶ್ರೀ. ಜಾಲೀಹಾಳ ಮೋಹನರಾಯರು, ಕಿ. ವಾಡಿ

ಕರ್ನಾಟಕ ಪ್ರಾಂತೀಕರಣ ಪ್ರಶ್ನೆ ಇಂದು ಪ್ರತಿಯೊಬ್ಬ ಕನ್ನಡಿಗನ ಜೀವ-ಸಾವಿನ ಪ್ರಶ್ನೆಯಾಗಿದೆ. ಕೇವಲ ಭಾಷೆ-ಸಂಸ್ಕೃತಿಗಳಿಗಾಗಿ ಮಾತ್ರ ಕರ್ನಾಟಕಪ್ರಾಂತದ ಅಗತ್ಯವೆಂದಲ್ಲ. ಕರ್ನಾಟಕಸ್ಥರ ಸುಖಜೀವನದ—ಮಾನಯುತ ಜೀವನದ—ಜೀವಾಳವೇ ಪ್ರಾಂತೀಕರಣವನ್ನು ಅವಲಂಬಿಸಿ ನಿಂತಿದೆ.

ಜನವರಿ ೧೯೫೦

ಜಯಂತಿ

JAYANTI

ಜನವರಿ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ

ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು— ಶ್ರೀ. ಎಲ್.ಜಿ. ಜೇಂದ್ರೆ

ಪ್ರಕಾಶಕರು— ಶ್ರೀ ಎಸ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ವರಗಳು

೧	ಪುಟ	ರೂ.	೪೦	ಒಂದು ಸಲ
೧/೨	,,	,,	೨೫	,,
೧/೪	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧ನೆಯ ಜನವರಿ ೧೯೫೦ | ಸಂಚಿ

ಈ ಸಂಚಿಕೆಯಲ್ಲಿ:

ಇದು ಕನ್ನಡಿಗರಿಗೆ ಪ್ರತ್ಯಕ್ಷ ಅಪಮಾನ (ಸಂಪಾದಕೀಯ)
ಸಂಪಾದಕರು ೧೬೫

ರನ್ನಮಹಾಕವಿಯ ಸಹಸ್ರವತ್ಸರೋತ್ಸವ
'ವಿಹಂಗಮ' ೧೬೬

ಶ್ರೀಕವಿರತ್ನಂ (ಕವಿತೆ)
ಶ್ರೀ ಜಿನ್ನ ವೀರ ಕಣವಿ, ಧಾರವಾಡ ೧೬೬

ಪ್ರಶ್ನೆಗೆ ಉತ್ತರಗಳು
ಸಂಪಾದಕ ಸಮಿತಿ ೧೬೭

ರಾಮಿ (ಸಣ್ಣಕತೆ)
ಶ್ರೀ. ಕೆ. ಅಶ್ವತ್ಥನಾರಾಯಣರಾಯರು, ಬನಾರಸ ೧೭೪

ಏರಿಳಿತಗಳ ಆಳತೆಗೋಲು (ಆರ್ಥಿಕವಿಚಾರ)
ಶ್ರೀ. ಜಾಲಿಹಾಳ ಮೋಹನರಾಯರು
ಬಿ. ಕಾಮ್, ಜಿ. ಡಿ. ಸಿ. ಎ. ೧೭೭

ಶಾಂತಿ (ಕವನ)
ಶ್ರೀ. ಕೆ. ಮಂಜುನಾಥ, ಹೊಸಪೇಟೆ ೧೮೦

ಬಲವು ಬರಲಿ ಮೈಯಲಿ (ಕವನ)
ಶ್ರೀ. ಭುಜೇಂದ್ರ ಮಹಿಸವಾಡಿಗಿ ೧೮೦

ಅಮ್ಮಾ ಯಾಕ್ ಅಳ್ತಿ.... ? (ಜೀವನಚಿತ್ರ)
ಶ್ರೀ ಉಪೇಂದ್ರ ನಾಯಕ, ಕಾರವಾರ ೧೮೧

ನಾನು ಕಂಡ ನಾಡು (ಪ್ರವಾಸಪ್ರಬಂಧ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೧೮೫

ಒಂದು ದಿವಸದ ತಾಯ್ತನ (ಸಣ್ಣಕತೆ)
ಶ್ರೀ. ಯರ್ಮುಂಜ ರಾಮಚಂದ್ರ, ಪುತ್ತೂರು ೧೯೧

ಪಾಕಶಾಲೆ (ಒಂದು ಭಾಷಣ)
ಶ್ರೀಮತಿ ಲಲಿತಾ ರಾಮಣ್ಣ, ಮುಂಬಯಿ ೧೯೭

ಜಾಗತಿಕ ಬ್ಯಾಂಕು (ಪರಿಚಯಪ್ರಬಂಧ)
ಶ್ರೀ. ಐ. ಭೀ. ಜೋಶಿಪುರ, ಸೊಲ್ಲಾಪುರ ೧೯೯

ಪುಸ್ತಕ ವಿಮರ್ಶೆ ('ನಕ್ಷತ್ರಗಾನ' ಮತ್ತು 'ಆಶಾ')
ಶ್ರೀ. ಬಿ. ಪಿ. ಎಸ್. ರಾವ್ ಮತ್ತು ಜಿ. ಎಸ್. ಮಹಕರ್ ೨೦೧

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ (ಮೇಲಾಟ)
ಶ್ರೀ. ಅನಂತ ಬುರ್ಲಿ, ಬಾಗಲಕೋಟೆ ೨೦೪

ನಗೀಗೆ ನೇವೇದ್ಯ
'ನಕಲೀ ನಾರಾಯಣಾಚಾರ್ರು' ೨೦೬

ಸಾದರ ಸ್ವೀಕಾರ ೨೦೮

ವರ್ಷ ೧೨

★

ಜನವರಿ



ಸಂಚಿಕೆ ೮

★

೧೯೫೦

ಇದು ಕನ್ನಡಿಗರೆಲ್ಲರ ಪ್ರತ್ಯಕ್ಷ ಅಪಮಾನ!

(ಸಂಪಾದಕೀಯ)

ರಾ. ಮಹಾಸಭೆಯು ಘಟನೆಗನುಸಾರವಾಗಿ, ಬೇರೆ ಬೇರೆ ಶಾಸನ ಸಭೆಗಳ ಕನ್ನಡ ಸದಸ್ಯರು—ಕರ್ನಾಟಕ ಪ್ರಾಂತೀಕರಣದ ಉಪೇಕ್ಷೆಯ ಕಾರಣದ ಮೂಲಕ—ರಾಜೀನಾಮೆ ಕೊಡಲು ಮೇಲಿನವರ ಒಪ್ಪಿಗೆ ಕೇಳಿದ್ದರು. ಅದಕ್ಕಾಗಿ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೇರಿ, ವಿಚಾರ ಮಾಡಿದಂತೆ ನಟಿಸಿ, ಮೊದಲೇ ಗೊತ್ತುಮಾಡಿರುವಂತೆ ನಿರ್ಣಯವನ್ನು ಪಾಸುಮಾಡಿ, ಕನ್ನಡಿಗರೆಲ್ಲರ ಕೆನ್ನೆಗೆ ಹೊಡೆದಂತೆ ಮಾಡಿರುವುದು. ಹಿರಿಯ ಮುಂದಾಳುಗಳ ಮೇಲೆ ಸಂಪೂರ್ಣ ಶ್ರದ್ಧೆಯಿರಿಸಿದ ಕನ್ನಡಿಗರು, ಕಾಂ. ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಆಶಾಭಾವದಿಂದ ನೋಡುತ್ತಲಿದ್ದರು; ಆದರೆ ಕನ್ನಡಿಗರ ಬಗೆಗೆ ನಿರ್ಣಯದಲ್ಲಿ ಸಹಾನುಭೂತಿಯ ನ್ಯಾಯವಾದ ಆಶ್ವಾಸನವೇನೂ ದೊರೆಯದೆ 'ಮೂರ್ಖರು' 'ತಿಳಿಗೇಡಿಗಳು' ಎಂಬ ಬೈಗಳ ಬಿರುದು ಮಾತ್ರ ಲೋಕವೆಲ್ಲ ಅರಿಯುವಂತಹ ಡಂಗುರದೊಂದಿಗೆ ಸಿಕ್ಕುವು.

ಕರ್ನಾಟಕ ಏಕೀಕರಣದ ವಿಷಯದಲ್ಲಿ ಕನ್ನಡಿಗರಲ್ಲಿ ತಲೆದೋರಿರುವ ಉತ್ಕಟಭಾವದ ಅರ್ಥ ಕಾಂ. ವರ್ಕಿಂಗ್ ಕಮಿಟಿಯಲ್ಲಿರುವ ಹಿರಿಯರಿಗೆ ಇನ್ನೂ ಆಗಿಲ್ಲವೆಂಬುದಕ್ಕೆ ಈ ನಿರ್ಣಯವು ಪ್ರತ್ಯಕ್ಷ ಪ್ರಮಾಣ. ಇದನ್ನು ನೋಡಿದರೆ, ಕೇಂದ್ರದಲ್ಲಿಯೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿಯೂ ಇರುವ ಕನ್ನಡದ ಹಿರಿಯ ಮುಂದಾಳುಗಳು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಿಗೆ ಕನ್ನಡಿಗರ ಮನಸ್ಸನ್ನು ಸರಿಯಾಗಿ ತಿಳಿವಳಿಕೆಗೆ ತಂದು ಕೊಟ್ಟಿಲ್ಲವೆಂದೇ ಹೇಳಬೇಕಾಗುವುದು. ಇವರಿಗೇ ಸದ್ಯ ಕರ್ನಾಟಕ ಪ್ರಾಂತೀಕರಣ ಬೇಡವಾಗಿದ್ದರೆ, ಧೈರ್ಯವಾಗಿ ಬಹಿರಂಗ ಪ್ರಕಟನೆ ತೆಗೆದು, ಕನ್ನಡಿಗರಿಗೆ ತಂತಮ್ಮ ಕಾರಣಗಳನ್ನು ಸ್ಪಷ್ಟವಾಗಿ ತಿಳುಹಲಿ. ಕನ್ನಡ ಜನತೆಯೆದುರು ಬಂದಾಗ, ಕರ್ನಾಟಕ ಏಕೀಕರಣದ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡಿ, ತಮ್ಮ ನಾಯಕತ್ವವನ್ನು ಉಳುಹಿಕೊಳ್ಳಲು ಪ್ರಯತ್ನಿಸುವುದು; ಮೇಲಿನ ಜನರಲ್ಲಿ ಹೋಗಿ ಮಾತನಾಡಬೇಕಾದ ಪ್ರಸಂಗ ಬಂದಾಗ, ಅವರ ಆಂತರಿಕ ಅಪೇಕ್ಷೆಗಳನ್ನು ಮುರಿಯಲಾರದೆ, ಬಾಯಿ ಮುಚ್ಚಿಕೊಂಡಿದ್ದು, ತಮ್ಮ ತಮ್ಮ ಸ್ಥಾನಗಳನ್ನು ಭದ್ರವಾಗಿರಿಸಿಕೊಳ್ಳಲು ಹವಣಿಸುವುದು. ಈ ಇವ್ಮೊಗದ ಸೋಗು ಎಷ್ಟು ದಿನ ನಡೆದೀತು? ಅದಕ್ಕಿಂತ, ಮಹಾತ್ಮರ ಹೆಸರನ್ನು ಹೇಳಿ ರಾಜಕಾರಣವನ್ನು ಆಡುತ್ತಿರುವ ಇವರು, ಮಹಾತ್ಮರಂತೆ ನಿಜವಾದ ಸತ್ಯವನ್ನು ಅನುಸರಿಸಿ, ತಮ್ಮ ಮನಸ್ಸಿನಲ್ಲಿ ಇದ್ದುದನ್ನು ಬಯಲಿಗಿಟ್ಟು, ಸತ್ಯಾಗ್ರಹಿಗಳಿಂದಾದರೂ ಎನಿಸಿಕೊಳ್ಳಬಾರದೆ? ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿರುವ ಕರ್ನಾಟಕದ ಸದಸ್ಯರು ನಿಜವಾದ ಪರಿಸ್ಥಿತಿಯನ್ನು ಖಂಡಿತವಾದ ಮಾತಿನಲ್ಲಿ ಸೂಚಿಸಿದ್ದರೆ, ನಿರ್ಣಯದಲ್ಲಿ ಇಂತಹ ಕಟುಮಾತುಗಳನ್ನು ಬಳಸುವ ಧೈರ್ಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಎಂದೂ ಆಗುತ್ತಿರಲಿಲ್ಲ. ರಾಜೀನಾಮೆ ಕೊಡುವುದು ತಮಗೆ ಬೇಡವಾಗಿದೆ. ಜನತೆಯ ಆಗ್ರಹಕ್ಕಾಗಿ ಅನಿವಾರ್ಯವಾಗಿ ರಾಜೀನಾಮೆಯ ಪಣವನ್ನು ಕೆ. ಪಿ. ಸಿ. ಸಿ. ಯಲ್ಲಿ ಎತ್ತಿ ಹಿಡಿಯಬೇಕಾಗಿ ಬಂದಿದೆ. ಇಂತಹ ಅರೆಮನಸ್ಸಿನವರು, ಮೇಲಿನ ಮುಂದಾಳುಗಳ ಹಟವನ್ನು ತಿದ್ದಲು ಪೇಗೆ ಸಮರ್ಥರಾದಾರು? ಅವರ ಹಟವು ತಮಗೆ ಪಥ್ಯಕರವಲ್ಲವೆ? ನಮ್ಮ ಮುಂದಾಳುಗಳ ಈ ಸ್ವಾರ್ಥ, ಕನ್ನಡಿಗರನ್ನು

ಬೈಗುಳಗಳಿಗೆ ಗುರಿಮಾಡಿದವಯಲ್ಲದೆ, ಆದಕ್ಕೆ ಬೇರೆಯವರಾರೂ ಕಾರಣವಲ್ಲವೆಂದು ಹೇಳಬಹುದು.

ಆದರೂ ಕನ್ನಡಿಗರನ್ನು ಬೈಯುವಾಗ ನಮ್ಮ ಭಾರತದ ಮೇಲಾಳುಗಳು ಸ್ವಲ್ಪ ವಿಚಾರಮಾಡಿ ಬೈಯಬೇಕಾಗಿತ್ತು. ಭಾರತದ ಸ್ವಾತಂತ್ರ್ಯಯುದ್ಧದ ಚರಿತ್ರೆಯಲ್ಲಿ ಕನ್ನಡಿಗರ ಹೋರಾಟದ ಸಂಗತಿ ಉಜ್ವಲವಾಗಿ ಮೂಡಿ ನಿಂತಿರುವುದು. ಪ್ರತಿಯೊಂದು ಯುದ್ಧಪ್ರಸಂಗದಲ್ಲಿಯೂ ಪ್ರಮುಖರಾಗಿ ಕೆಲಸ ಮಾಡಿದ ಕನ್ನಡಿಗರು, ಆ ಆ ಕಾಲದ ಹಿರಿಯರಿಂದ ಸೆಬ್ಬಿಕೆ ಪಡೆದಿದ್ದಾರೆ. ಆಗ 'ಛಲೆ' ಎಂದು ಬೆನ್ನು ತಟ್ಟಿದ ಹಿರಿಯರೇ ಇನ್ನೂ — ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ— ಇದುವರೆಗೂ ಇದ್ದಾರೆ.

ಕರ್ನಾಟಕ ಪ್ರಾಂತೀಕರಣವನ್ನು ಬೇಡುವುದು ಕನ್ನಡಿಗರ ಮೂರ್ಖಿತನವೂ ತಿಳಿಗೇಡಿತನವೂ ಆಗಿದ್ದಲ್ಲಿ, ಭಾರತ ರಾಷ್ಟ್ರ ನಾಯಕರು ಬೇಡಿದಾ ಬೇಡಿದಷ್ಟು ಕಾಣವನ್ನು ಒದಗಿಸಿಕೊಟ್ಟಿದ್ದೂ ಮೂರ್ಖತನವೇ! ಕಾಂಗ್ರೆಸ್ಸು ಹೇಳಿದ ವಿಧಾಯಕ ಕಾರ್ಯಕ್ರಮಗಳನ್ನು ತಮ್ಮ ಪ್ರಾಂತದಲ್ಲಿ ಯಶಸ್ವಿಯಾಗಿ ನೆರವೇರಿಸಿದ್ದೂ ಮೂರ್ಖತನವೇ! ಧಾರವಾಡ-ಕಾರವಾರ ಜಿಲ್ಲೆಗಳಲ್ಲಿ, ಬ್ರಿಟಿಷ್ ಸರಕಾರದೊಂದಿಗೆ ಕಾದುವೆಭಂಗದ ಯುದ್ಧ ಹೂಡಿ ಕರನಿರಾಕರಣ ಚಳವಳಿಯಲ್ಲಿ ಗೆಲುವು ಪಡೆದಿದ್ದೂ ಮೂರ್ಖತನವೆ! ಗೋಕಾಕ್‌ದಲ್ಲಿಯ ನಿಷ್ಠುರಕ ಜಟುವಟಿಕೆಗಳನ್ನು — ಎಲ್ಲಿಯೂ ಕಾಣದವು — ನಡೆಯಿಸಿ, ಬ್ರಿಟಿಷರನ್ನು ಜೆದರಿಸಿದ್ದೂ ಮೂರ್ಖತನವೆ! ಇವೆಲ್ಲ ಸಂದರ್ಭಗಳಲ್ಲಿ ತಾವು ಹೇಳಿದಂತೆ ನಡೆದರೆಂದು ಕನ್ನಡಿಗರು ಜಾಣರೆನಿಸಿಕೊಂಡರು. ಆದರೆ ಭಾರತ ಸ್ವಾತಂತ್ರ್ಯವಷ್ಟೇ ಆಗತ್ತಿದ್ದಾಗಿನಿಂದ ಪ್ರಾಂತದ ವಿಶೇಷೀಕರಣವನ್ನು ಕುರಿತು ಜಟದಿಂದ ಕೇಳಿಬರೆ. ಈಗ ಒಮ್ಮೆಲೆ ಕನ್ನಡಿಗರು ಮೂರ್ಖರಾದರು; ತಿಳಿಗೇಡಿಗಳಾದರು. ಮಹಾತ್ಮಾಜಿಯವರ ಹತ್ತಿರವಿರುವ ಬಳಗಕ್ಕೇ ಸೇರಿದವರು ಬಾಯಿಂದ ಇಂತಹ ಕಟುಮಾತುಗಳು ಹೊರಡುವುದೆಂದರೆ, ಭಾರತದಲ್ಲಿ ಮಹಾತ್ಮಾಜಿಯವರು ಹುಟ್ಟಿಬಂದುದಕ್ಕಾಗಿ ನಾವು ಸ್ವಲ್ಪವೂ ಹೆಮ್ಮೆಪಡಬೇಕಾಗಿಲ್ಲ.

ಕಾಂಗ್ರೆಸ್ಸು ಕರ್ನಾಟಕ ವಿಶೇಷೀಕರಣದ ಬಗೆಗಿರುವ ಸಾರ್ವತ್ರಿಕ ಉತ್ಸಟಿತೆಯನ್ನು ತಿರಿಸಿರುವಂತೆ, ಮುಂದು ಕಾಲಾನುಸಾರ ಅದು ಆಗಿಯೇ ಆಗುವುದಂತೆ. ಭಾರತ ಸ್ವಾತಂತ್ರ್ಯದ ಸಲುವಾಗಿ ಚರ್ಚಿಲ್ ದೊರೆಗಳು ಇಂತಹ ಮಾತುಗಳನ್ನೇ ಆಡುತ್ತಿದ್ದರು. ಆಲ್ಲದೆ ಈ ಶುಷ್ಕ ಆಶ್ವಾಸನದ ಮೇಲೆ ಕುರುಡುನಂಬಿಗೆಯನ್ನಿಟ್ಟು ಕಾಲಕಳೆಯಲು ಕನ್ನಡಿಗರಿಗೆ ಒಪ್ಪುವುದಿಲ್ಲ. ಒಪ್ಪುವುದರಲ್ಲಿ ಆತ್ಮಘಾತವಿದೆಯೆಂಬ ಅರಿವು ಅವರಿಗೆ ಸಾಕಷ್ಟು ಉಂಟಾಗಿದೆ. ಆಲ್ಲದೆ ಈ ಆಶ್ವಾಸನಗಳು ರಾಜಕಾರಣದಲ್ಲಿಯ ಒಂದು ಕುಟಿಲ ಪ್ರಚಾರತಂತ್ರವೆಂಬುದು, ಹೊಸ್ತ ಹೊಸ್ತ ಮಾನ್ಯ ರಾಜಾಜಿಯವರಾಡಿದ ಒಂದು ಮಾತಿನಿಂದ ಸ್ಪಷ್ಟವಾಗಿಯೇ ಬಟ್ಟಬಯಲಾಗಿದೆ. ಕಾಂಗ್ರೆಸ್ಸು ಭಾಷಾನುಗುಣ ಪ್ರಾಂತರಚನೆಯ ಮಾತನ್ನು ತನ್ನ ಉಗ್ಗಡಣೆಯಲ್ಲಿ ಸೇರಿಸಿಕೊಂಡುದು, ಕೇವಲ ಸಾಂದರ್ಭಿಕ ಪ್ರಚಾರಸಾಧನವೆಂದು ಮಾತ್ರ—ಎಂಬರ್ಥದ ಮಾತನ್ನು ಅವರು ನುಡಿದಿರುವರು. ಅವರಂತೆಯೇ ಕರ್ನಾಟಕದ ವಿಷಯದಲ್ಲಿ ಹಿರಿಯ ಮುಂದಾಳುಗಳು ನಡೆಸುಕೊಳ್ಳುತ್ತಿರುವ ರೀತಿ, ರಾಜಾಜಿಯವರ ಅಭಿಪ್ರಾಯವನ್ನೆ ಎತ್ತಿಹಿಡಿಯುತ್ತಿರುವುದು ಕನ್ನಡಿಗರ ಅನುಭವಕ್ಕೆ ಬರುತ್ತಲಿದೆ.

ಈಗ ಕನ್ನಡಿಗರೇನು ಮಾಡುವರು? ಒಂದು ಕೆನ್ನೆಗೆ ಬಿದ್ದ ಏಟನ್ನು ಸಹಿಸಿಕೊಂಡು, ಇನ್ನೊಂದು ಕೆನ್ನೆಯನ್ನೂ ಮುಂದೊಡ್ಡುವ ಮಹಾಸಾಧುಗಳಾಗುವರೋ? ಹಾಗಾದರೆ ಕರ್ನಾಟಕ ಮಹಾತ್ಯಾಗಕ್ಕೂ ಅವರು ಸಿದ್ಧರಾಗಲಿ. ಕರ್ನಾಟಕವು ಬೇಕೇ ಬೇಕೆಂಬ ರಜೋಬುದ್ಧಿಯಿದ್ದರೆ, ಪ್ರಾಂತೀಕರಣಕ್ಕಾಗಿ ಎಂತಹ ಸಾಹಸವನ್ನೂ ಕೈಕೊಳ್ಳಲು ಸಿದ್ಧರಾಗಲಿ.

ತಂದೆಯಾದರೇನು? ತನ್ನ ಹಿತದ ಕಡೆಗೆ ಅಲಕ್ಷವಾಡುವನೆಂದು ಕಂಡರೆ, ಮಗನು ಕೂಡ ಹಟದಿಂದ ಹೋರಾಡಲೇಬೇಕಾಗುವುದು. 'ಅಂಗಿ ಹರಿದಿದೆ, ಚಳಿಗಾಲ, ಹೊಲಿಸಿಕೊಡು!' ಎಂದು ಕೇಳಿದರೆ, 'ಬೇಸಗೆಯಲ್ಲಿ ಹಣಬಂದಾಗ ನೋಡೋಣ' ಎನ್ನುವುದು. ಏನೋ ವಿಶ್ವಾಸವಿಟ್ಟು ಚಳಿಯನ್ನು ಸಹಿಸಿಕೊಂಡು ಬದುಕಿ, ಬೇಸಗೆಯಲ್ಲಿ ಕೇಳಿದಾಗ 'ಈಗ ಬಿಸಿಲು ದಿನಗಳಲ್ಲಿ ಅಂಗಿಯ ಅಗತ್ಯವೇನು? ಮುಂದೆ ನೋಡೋಣ!' ಎಂದು ಹೇಳುವುದು! ಇಂತಹ ತಂದೆಯನ್ನು ಮಗನು ಎಷ್ಟು ದಿನಗಳವರೆಗೆ ಸಹಿಸಬೇಕು?

* * * *

೮ ಆಣೆ ಚಂದಾ ಹೆಚ್ಚಿಸಲಾಗಿದೆ.

ಜಯಂತಿ ಕನ್ನಡಿಗರ ಮೆಚ್ಚಿಕೆಯ ಹಿರಿಯ ಮಾಸಪತ್ರಿಕೆಯೆಂದು ಹೆಸರಾಗಿದ್ದರೂ, ಆ ಮರ್ಯಾದೆಯ ಸ್ಥಾನವನ್ನು ಉಳಿಸಿಕೊಳ್ಳಲು ಅನುಕೂಲವೆನಿಸುವಷ್ಟು ಜನರಿಂದ ಆರ್ಥಿಕ ಸಹಕಾರ ಸಿಕ್ಕುತ್ತಿಲ್ಲ. ಆದುದರಿಂದಲೆ ಜಯಂತಿಯ ತಲೆಯ ಮೇಲೆ ವರುವರುಷಕ್ಕೂ ಸಾಲದ ಭಾರ ಹೆಚ್ಚುತ್ತ ನಡೆದಿದೆ. ಆಗುತ್ತಿರುವ ನಷ್ಟವನ್ನು ಕೆಲವು ಮಟ್ಟಿಗಾದರೂ ಕಡಿಮೆಮಾಡಿಕೊಳ್ಳಬೇಕೆಂದು, ೧೯೩೦ನೆಯ ಜನವರಿಯಿಂದ ಜಯಂತಿಯ ವಾರ್ಷಿಕ ವರ್ಗಣಿಯನ್ನು ಐದು ರೂಪಾಯಿ ಮಾಡಲಾಗಿದೆ. ಜಯಂತಿಯ ಅಭಿಮಾನಿಗಳಾದ ನಮ್ಮ ಚಂದಾದಾರರು, ಇದೊಂದು ದೊಡ್ಡ ಭಾರವೆಂದು ಗಣಿಸಲಾರರೆಂಬ ನಂಬುಗೆ ನಮಗಿದೆ. ತಾವು ಎಂದಿನಂತೆ ಚಂದಾದಾರರಾಗಿ ಉಳಿಯುವುದಲ್ಲದೆ, ಒಬ್ಬರನ್ನಾದರೂ ಹೊಸ ಚಂದಾದಾರರನ್ನು ಎಲ್ಲರೂ ಒದಗಿಸಿಕೊಡಬೇಕೆಂದು ಬೇಡಿಕೆ.

೧೯೩೦ನೆಯ ಮೇ ತಿಂಗಳಲ್ಲಿ ಹೊರಡುವ ವಿಶೇಷ ಸಂಚಿಕೆಯನ್ನು ಒಂದು ವಿಶಿಷ್ಟ ರೀತಿಯಲ್ಲಿ ಹೊರಡಿಸಬೇಕೆಂಬ ಯೋಜನೆಯನ್ನು ಈಗಿನಿಂದಲೆ ನಡಿಸಿರುವೆವು. ಚಂದಾದಾರರಿಗೆ ಆ ವಿಶೇಷ ಸಂಚಿಕೆ ಉಚಿತವಾಗಿಯೆ ದೊರೆಯುವುದು.

—ಸಂಪಾದಕರು.

ರನ್ನ ಮಹಾಕವಿಯ ಸಹಸ್ರವತ್ಸರೋತ್ಸವ

'ವಿಹಂಗಮ'

ಮತಿ ಕೋಕಂ, ಪದವಿನ್ಯೆ ಕಂಠಿಕೆ, ಜಸು ಶ್ವೇತಾತಪತ್ರಂ, ಸರ-
ಸ್ವತಿ ಮಾವೇನಿ, ಪದೋಕ್ತಿ ಭೀರಿ ಕಳಿತು ಸಿಂಹಾಸನಂ, ಸಂತಲಂ-
ಕೃತಿ ಚಾಜಿಷ್ಣುಮಿನೀಜವಾಗೆ—ಕವಿತಾ ಸಾಮ್ರಾಜ್ಯಮುಂ ತಾಳ್ದಿಮ-
ನ್ನತಿಯಿಂದಂ ಕವಿ ಚಕ್ರವರ್ತಿವೆಸರೇಂ ರನ್ನಂಗೆ ಮೆಯ್ವೆತ್ತುದೋ ! ॥

ಕ್ರಿ. ಶಕದ ಗಂನೆಯ ಶತಮಾನವು ಕನ್ನಡ ಸಾಹಿತ್ಯಸಾಮ್ರಾಜ್ಯದ ಸಮುನ್ನತಿಯ ಕಾಲ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಪೃಥ್ವಿ' ಯಾದ ಪಂಪನ ಕೃತಿರತ್ನಗಳು ಆಣಿಗೊಂಡು ಮುಗಿಯುತ್ತಿರುವಾಗಲೆ (೯೪೧), ಉಭಯ ಕವಿಚಕ್ರವರ್ತಿಯಾದ 'ಕುರುಳ್ಗಳ ಪವಣ'ವೊನ್ನ ಮಹಾಕವಿಯ ಕಾವ್ಯವಾಣಿಗಳು ಕಳೆವೆತ್ತು-ನಿಂತುವು (೯೫೦). ಈತನ ಕೃತಿಗಳು ಜನಿಸುತ್ತಿರುವಾಗಲೆ ಕನ್ನಡದ ಬೆಳುಗರೆ ನಾಡಿನಲ್ಲಿರುವ ಬೆಳುಗಲಿ ಐನೂರಿನಲ್ಲಿಯು ಜಂಬು. ಕಂಡಿ ಎಪ್ಪತ್ತರಲ್ಲಿ ಶ್ರೇಷ್ಠವಾದ ಮುದುವೊಳಲಲ್ಲಿ ಕ್ರಿ. ಶ. ೯೪೯ರ ಸೌಮ್ಯನಾಮ ಸಂವತ್ಸರದಲ್ಲಿ, ಕನ್ನಡ ಕವಿಚಕ್ರವರ್ತಿಯ ಪದವಿಯನ್ನು ಪಡೆಯಲು ಇನ್ನೊಂದು ಜೀವರತ್ನ ಜನ್ಮತಾಳಿತು. ಈತನಿಗೆ ಜನ್ಮವಿತ್ತ ತಾಯಿ ಅಬ್ಬಲಬ್ಬೆ, ತಂದೆ ಜಿನವಲ್ಲಭೇಂದ್ರರು ಎಂತಪ ಪುಣ್ಯಶಾಲಿಗಳೊ. ಕನ್ನಡಿತಿಯರಾದ ಐದೆಯರ ಕೈಗೆ ಕಾಜಿನ ಬಳೆಗಳನ್ನು ತೊಡಿಸುತ್ತಿರುವ ಅವರು, ಕನ್ನಡ ಸಾಹಿತ್ಯ ದೇವತೆಗೆ ಅಮೂಲ್ಯವಾದ—ಶಾಶ್ವತವಾದ—ರನ್ನ ಗಂಕಣಗಳನ್ನು ತೊಡಿಸುವ ಮಗನನ್ನು ಹಡೆದರು. ಕವಿರತ್ನನಾಗುವ ಭವಿಷ್ಯವನ್ನರಿತೋ ಏನೋ 'ರನ್ನ' ಎಂದು ಹೆಸರನ್ನಿರಿಸಿದರು.

ಕನ್ನಡಕ್ಕೆ ಸಾಹಿತ್ಯರತ್ನರನ್ನು ಒದಗಿಸಿಕೊಡುವ ರತ್ನಕಾರರಾದ ಅಜಿತಸೇನಾಚಾರ್ಯರು ರನ್ನನ ಗುರುಗಳು. ಶಾರದೋಪಾಸಕನಾದ ಚಾವುಂಡರಾಯ ಇವನಿಗೆ ಆಶ್ರಯದಾತ. ಚಾಲುಕ್ಯರಾಜ ತೈಲಪ ಈತನ ಯೋಗ್ಯತೆಯನ್ನರಿತು 'ಕವಿಚಕ್ರವರ್ತಿ' ಯೆಂಬ ಬಿರುದನ್ನು ಅನೇಕ ರಾಜಮರ್ಯಾದೆಗಳೊಂದಿಗೆ ದಯಪಾಲಿಸಿದ. ಈ ಕವಿ-ಸಾಹಸಭೀಮನು, 'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದು' ಕನ್ನಡತಾಯಿಗೆ ಕೃತಿರತ್ನಗಳೆನ್ನು ಒದಗಿಸಿಕೊಟ್ಟ. 'ರನ್ನನ ಕೃತಿರತ್ನಮುಮುಂ ಫಣಿಪತಿಯ ಫಣಾರತ್ನಮುಮುಂ ಪರೀಕ್ಷಿಸಲಂಗೆ ಎಂಟೆದೆಯೆ?' ಎಂದು ಗಂಡುದನಿಯಿಂದ ಗುಡುಗಿದ. ಆ ಗುಡುಗು ಇನ್ನೂ ಕನ್ನಡದ ಆಕಾಶದಲ್ಲಿ ಗುಡುಗುತ್ತಿದೆ. ಇಂದಿನ ಕನ್ನಡಿಗರಿಗೂ ಸಾವಿರ ವರ್ಷಗಳ ಹಿಂದಣ ಕನ್ನಡರ ಪೂರ್ಣ-ಜೀವನವನ್ನು ತೋರಿಸುತ್ತಲಿದೆ.

ಸಾವಿರ ವರ್ಷ ! ಅಹುದು, ರನ್ನನಂತಹ ಕವಿ ಕನ್ನಡ ನಾಡಿನಲ್ಲಿ ಒಂದು ಸಾವಿರ ವರ್ಷದ ಹಿಂದೆ ಹುಟ್ಟಿದ. ಯಾವ ನಾಡಿನಲ್ಲಿ ಒಂದು ಸಾವಿರ ವರ್ಷಗಳ ಹಿಂದೆಯೆ ರನ್ನನಂತಹ ಕವಿಯನ್ನು ಪಡೆವ ವಾತಾವರಣವ ಸತ್ತ್ವವಿದ್ದಿತೊ, ಆ ನಾಡಿಗೆ ಇನ್ನೆಷ್ಟು ಸಾವಿರ ವರ್ಷದ ಪೂರ್ವಪರಂಪರೆಯ ಸತ್ತ್ವದ ಹಿನ್ನೆಲೆಯಿವ್ವೀತು?

ಆ ಪೂರ್ವಪರಂಪರೆಯ ಸತ್ತ್ವವನ್ನು ನೆನೆಯಲೆಂದೇ ಅಖಿಲ ಕರ್ನಾಟಕ, ಕವಿಚಕ್ರವರ್ತಿ ರನ್ನನ ಸಹಸ್ರವತ್ಸರೋತ್ಸವವನ್ನು ಆಚರಿಸುತ್ತಲಿದೆ. ಸ್ವಾರ್ಥಮಯವಾದ ರಾಜಕಾರಣವಿಂದು ಕನ್ನಡ ನಾಡನ್ನು ಒಮ್ಮಗೂಡಿಸಲು ವಿರೋಧವಾಗಿದ್ದರೂ, ಸತ್ತ್ವಯುತವಾದ ಕನ್ನಡಸಂಸ್ಕೃತಿ ಅಖಿಲ ಕರ್ನಾಟಕವನ್ನು ಒಂದುಗೂಡಿಸಿಬಿಟ್ಟಿದೆಯೆಂಬುದನ್ನು ನಿವರ್ಶನಕ್ಕೆ ತಂದುಕೊಟ್ಟಿದೆ. 'ಗಟ್ಟಿಗೆ—ಪೆರ್ದೊರೆ'ಗಳ ನಡುವಣ ಬೆಳುವಲ ನಾಡಲ್ಲಿ ಹುಟ್ಟಿದ್ದರೂ ರನ್ನಕವಿ, ಅಖಿಲ ಕರ್ನಾಟಕದವರ ಹೃದಯದಲ್ಲಿ ನೆಲೆಗೊಂಡು ನಿಂತ. ಇಂದಿನ ಅವನ ಸಹಸ್ರವರ್ಷದ ನೆನಪಿನ ಉತ್ಸವ, ಒಡೆದ ಕರ್ನಾಟಕವನ್ನು ಇಡಿಗೂಡಿಸುವ ಉತ್ಸವದ ನಾಂದಿಯಾಗಲೆಂದು ನಾನೆಲ್ಲ ಹಾರಯಿಸೋಣ !

"ಶ್ರೀ ಕವಿರತ್ನಂ"

ಸಾವಿರದ ಸಾಸಿರಂಬರಿಸ ಪೂರ್ವದಲಿ ಭುವ-
ನದ ಭಾಗ್ಯದಿಂ ಪುಟ್ಟಿ ಮುದುಪೊಳಲ ಬಳಿಗಾರ
ಬೀರಪಡಗವ ತೊಟ್ಟು ಇಪಪರವ ರಸಸಾರ-
ವೆನೆ ನಿಮಿರ್ಚಿಪ ಕಾವ್ಯ ರನ್ನಕೃತಿ! ಪರಿಕಿಸುವ-
ಗೆಂಟೆದೆಯೆ? ಒಂದರಲಿ ಶಾಂತ ಮತ್ತೊಂದರಲಿ
ವೀರರಸವೊತ್ತರಿಸಿ ಪುಟಿಯುತಿರೆ, ಜಲಕಿರಿಪ
ಆ ಸುಯೋಧನನ ಘನತೆಯ ರುದ್ರನಾಟಕದ
ಪೃಥ್ಯ! – ಗವೆಗಪೆಯ ಸಂಘಟ್ಟಜೆ—ನುಪಾಖ್ಯೆಲಿ!
ಅತ್ತಿಮಬ್ಬೆಯ ಪಾಸಚಿಂತಾಮಣಿಯ ಪೆಸರ-
ನುಳಿಸಿ, ರಾಯನೆ ನಮಿಸಿ, ಪಂಪ-ಪೊನ್ನರ ಕೃತಿಯ
ತಿರುಳ ನುಹಿಮೋನ್ನತಿಯ ಬಗೆ ಹೀರಿ, ಜಿನಸಮಯ
ನೀಪಕಂ ಒಡೆಪನೊಡೆಪಂ ನುಡಿಯ ಭಂಡಾರ!
ಸುಳಿಗಪಲಿ ಎರ್ದೆಗೊಂಬ ಗಂಡುಕವಿ ಕೃತಾರ್ಥಂ
ನಿಲ್ಲೆ ನಿನ್ನಯ ಪೆಸರ್ ಜಂಪ್ರತಾರಂಬರಂ!

—ಚೆನ್ನವೀರ ಕಣವಿ.

ಪ್ರಶ್ನೆಗೆ ಉತ್ತರ

★

೧೩

ಶ್ರೀ. ಸ್ಹಿ. ಸಿ. (ಧಾರವಾಡ) ಹಾನೇರಿ

೧. ನೀವು ಚಿತ್ರಪ್ರಪಂಚದ ಸಮಸ್ಯೆಗಳಿಗೆ ಎಡೆ ಕೊಡದಿರುವ ಕಾರಣವೇನು?

ಉತ್ತರ:— ಅವಕ್ಕೆ ಎಡೆ ಕೊಡಲು ಜಯಂತಿಯಲ್ಲಿ ಸಾಕಷ್ಟು ವುಟಗಳಿಲ್ಲ. ಅಲ್ಲದೆ ಕರ್ನಾಟಕದಲ್ಲಿ ಆ ಚಿತ್ರಪ್ರಪಂಚವೆಂಬುದು ಚರ್ಚಿಸುವಷ್ಟು ಬೆಳೆವಣಿಗೆಯನ್ನೂ ಪಡೆದಿಲ್ಲ. ಇನ್ನೂ ಎಳೆಯತನದಲ್ಲಿಯೆ ಇರುವ ಕನ್ನಡಚಿತ್ರಪ್ರಪಂಚದಲ್ಲಿ ಅದು ಬೆಳೆಯದೆ ಇರುವುದೇ ಒಂದು ಮಹಾ ಸಮಸ್ಯೆ. ಈ ಸಮಸ್ಯೆ ಬಗೆಹರಿಯಬೇಕಾದರೆ, ಕರ್ನಾಟಕದ ಸಿರಿವಂತರು ಜಾಗೃತರಾಗಬೇಕು. ಸಾಡಿನಲ್ಲಿಯ ಚಲಚ್ಚಿತ್ರಮಂದಿರದ ಒಡೆಯರು ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಿ ತೋರಿಸಲು ಸಿದ್ಧರಾಗಬೇಕು. ಜನರೂ ಕನ್ನಡ ಚಿತ್ರಗಳನ್ನೇ ನೋಡುವ ಹಟ ಹಿಡಿಯಬೇಕು. ಆಗ ಕನ್ನಡ ಚಿತ್ರಪ್ರಪಂಚದಲ್ಲಿ ಸಮಸ್ಯೆಗಳು ತಲೆದೋರಬಹುದು. ಅವುಗಳಿಗೆ ಎಡೆಕೊಡುವುದು ಜಯಂತಿಗೆ ಅಗತ್ಯದ ಮಾತಾದೀತು.

೨. ಸಾಹಿತ್ಯಸೃಷ್ಟಿಯಲ್ಲಿ ಪದವೀಧರನು ಕೂಡಲೆ ಸಾಹಿತಿಯಾಗಬಲ್ಲನೆ?

ಉತ್ತರ:— ಪದವಿಗೂ ಸಾಹಿತಿಯಾಗುವುದಕ್ಕೂ ಯಾವ ಸಂಬಂಧವೂ ಇಲ್ಲ. ಸಾಹಿತಿಯಾಗುವುದಕ್ಕೆ ಮನುಷ್ಯನಲ್ಲಿ ಕೆಲವೊಂದು ವಿಶಿಷ್ಟವಾದ; ಸಹಜ ಗುಣಗಳಿರಬೇಕಲ್ಲದೆ, ಸಾಹಿತ್ಯದ ಅಭ್ಯಾಸವನ್ನೂ ಮಾಡಬೇಕಾಗುವುದು. ಕೂಡಲೆ ಯಾವನೂ ಸಾಹಿತಿಯಾಗಲಾರ.

೩. ಮಾನವನು ಚಿಂತಾರಹಿತನಾಗಬೇಕಾದರೆ ಯಾವುದರ ತ್ಯಾಗವನ್ನು ಮಾಡಬೇಕಾಗುವುದು?

ಉತ್ತರ:— ದುರಾಶೆಯ ತ್ಯಾಗವನ್ನು ಮಾಡಬೇಕು. ಒಳ್ಳೆಯ ಆಶೆ ಮಾನವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡುವುದು; ದುರಾಶೆ ಚಿಂತಾಪ್ರವೃತ್ತನನ್ನಾಗಿ ಮಾಡುವುದು.

೪. ಮನಸ್ಸನ್ನು ಎಷ್ಟು 'ಬಿಗಿ' ಹಿಡಿದರೂ ಕೂಡ ತರುಣಿಯರನ್ನು ತರುಣರು ನೋಡಿದಾಗ 'ಬಿಗಿ' ಎಂಬುದರ ಬದಲು 'ಸಡಿಲು' ಎಂಬ ಪದವು ಸೇರುವ ಕಾರಣವೇನು?

ಉತ್ತರ:— ಮನಸ್ಸನ್ನು 'ಬಿಗಿ' ಹಿಡಿದಿದ್ದೇವೆ ಎಂಬ ನಿಮ್ಮ ತಿಳಿವಳಿಕೆ ಭ್ರಮೆಯದಾಗಿರುವುದು. ನಿಜವಾಗಿಯೆ 'ಬಿಗಿ' ಹಿಡಿದಿದ್ದರೆ, ಅದು 'ಸಡಿಲು' ಆಗುವುದಕ್ಕೆ ಕಾರಣವೇ ಇರುವುದಿಲ್ಲ.

೫. ಒಬ್ಬನ ಆಹಾರವು ಇನ್ನೊಬ್ಬನಿಗೆ ವಿಷವಾಗಲು ಕಾರಣವೇನು?

ಉತ್ತರ:— ಆಹಾರವು ನಿಜವಾದ ಆಹಾರವೇ ಆಗಿದ್ದರೆ ಅ ವಿಷವಾಗಲು ಕಾರಣವೇ ಇಲ್ಲ. ರುಚಿಭೇದದ ಮೂಲಕ ಒಬ್ಬ ಆಹಾರ ಇನ್ನೊಬ್ಬರಿಗೆ ರುಚಿಸದಿರಬಹುದು. ರುಚಿಸದೆ ಉಂ ಊಟ ಜೀರ್ಣವಾಗುವುದಿಲ್ಲ. ಆಹಾರದ ಅಜೀರ್ಣವೆಂದರೆ, ಆ ದೇಹಕ್ಕೆ ವಿಷವೇ ಸರಿ!

೬. 'ಮಾಮಾಂಸೆ' ಎಂದರೇನು?

ಉತ್ತರ:— ತಿಳಿಯದ ತತ್ತ್ವಗಳನ್ನು ತಿಳಿಯುವಂತೆ ಹೇಳು ವಿವರಣೆಗೆ 'ಮಾಮಾಂಸೆ' ಎಂದೆನ್ನುವರು.

೧೩

ಶ್ರೀ. ಪಿ. ಕೆ. ಮೂಡಿತ್ತಾಯ, ಕಯ್ಕಾರ

೧. ಮೇಲ್ತರಗತಿಯ ಸಾಹಿತ್ಯವಿಮರ್ಶಕನ ಲಕ್ಷಣಗಳೇನು

ಉತ್ತರ:— ವೈಯಕ್ತಿಕ ಪೂರ್ವಗ್ರಹ-ದಾಕ್ಷಿಣ್ಯಗಳಿಗೆ ಒಳಗಾಗದೆ, ಸಾಹಿತ್ಯದ ಗುಣ-ದೋಷ, ಸ್ಥಾನಗಳನ್ನು ಎಲ್ಲರಿಗೂ ತಿಳಿಯುವಂತೆ ನಿವರಿಸುವುದೇ ಸಾಹಿತ್ಯ ವಿಮರ್ಶಕನ ಮುಖ್ಯಲಕ್ಷಣ.

೨. ರಾಜಕೀಯ ವಿಮರ್ಶಕನಿಗೂ ಸಾಹಿತ್ಯ ವಿಮರ್ಶಕನಿಗೂ ಇರುವ ಅಂತರವೇನು?

ಉತ್ತರ:— ದೇಶ-ವಿದೇಶಗಳ ರಾಜ್ಯಘಟನೆಗಳನ್ನೂ ಸರಕಾರ ಮತ್ತು ಜನತೆಯ ಹಕ್ಕು-ಬಾಧ್ಯತೆಗಳನ್ನೂ ಕಾಯದೆ-ಕಾನೂನುಗಳನ್ನೂ ಅರಿತಿದ್ದರೆ ರಾಜಕೀಯ ವಿಮರ್ಶಕನಿಗೆ ಸಾಕು. ಸಾಹಿತ್ಯವಿಮರ್ಶಕನು ಲೋಕದ ಎಲ್ಲ ವಿಚಾರಗಳನ್ನೂ ಅರಿತಿರಬೇಕಾಗುವುದು. ಕೇವಲ ಬುದ್ಧಿವಂತ ರಾಜಕೀಯ ವಿಮರ್ಶಕನಾಗಬಲ್ಲ; ಬುದ್ಧಿ-ಭಾವನೆಗಳ ಸಮನ್ವಯವನ್ನು ಸಾಧಿಸಿಕೊಂಡವನು ಮಾತ್ರ ಸಾಹಿತ್ಯವಿಮರ್ಶಕನಾಗಬಲ್ಲ.

೩. ಕನ್ನಡದಲ್ಲಿ ಮಕ್ಕಳ ಸಾಹಿತ್ಯವು ಬೇಕಾದಷ್ಟು ಇದೆಯೆ?

ಉತ್ತರ:— ಬೇಕಾದಷ್ಟು ಇಲ್ಲ. ಇದ್ದಷ್ಟನ್ನೂ ತರಿಸಿ ತಮ್ಮ ಮಕ್ಕಳಿಗೆ ಓದಲು ಓದಿಗಿಸಿಕೊಡುವ ತಾಯಿ-ತಂದೆಗಳು ಎಷ್ಟಿದ್ದಾರೆ? ಅವರು ಬೇಕಾದಷ್ಟು ಹೆಚ್ಚಿದರೆ, ಮಕ್ಕಳ ಸಾಹಿತ್ಯವೂ ಬೇಕಾದಷ್ಟು ಹೆಚ್ಚಾದೀತು.

೪. ನಮ್ಮಲ್ಲಿ ಮಕ್ಕಳ ಸಾಹಿತ್ಯಕ್ಕೆಂದೇ ಮಾಸಲಾಗಿ ದುಡಿಯುವ ಬರೆಹಗಾರರು ಇದ್ದಾರೆಯೆ? ಯಾರು?

ಉತ್ತರ:— ಮಾಸಲಾಗಿ ದುಡಿಯುವ ಬರೆಹಗಾರರು ನಮ್ಮಲ್ಲಿ ಯಾರೂ ಇಲ್ಲದಿದ್ದರೂ, ತಮ್ಮ ಬರೆಯುವ ವೇಳೆಯಲ್ಲಿಯ ಕೆಲವೊಂದು ವೇಳೆಯನ್ನು ಮಕ್ಕಳ ಸಾಹಿತ್ಯಕ್ಕೆಂದು ಕೊಡುವವರು ತುಂಬ ಜನರು ಇದ್ದಾರೆ. ಎಲ್ಲರ ಹೆಸರನ್ನೂ ಬರೆಯಲಿಕ್ಕೆ ಇಲ್ಲಿ ಸ್ಥಳ ಸಾಲದು.

೫. ಇಂದಿನ ವಾರ್ತಾಪತ್ರಿಕೆಗಳು ಸತ್ಯವನ್ನೇ ಪ್ರತಿಪಾದಿಸುವದಿಲ್ಲವೇಕೆ?

ಉತ್ತರ:— ಓದುವ ಜನತೆ ಸತ್ಯವಂತರಾಗಿ, ಸತ್ಯಜೀವನವನ್ನೇ ಅಪೇಕ್ಷಿಸುವರೆಂದು ತಿಳಿದರೆ, ಅವೂ ಖಂಡಿತವಾಗಿ ಸತ್ಯವನ್ನೇ ಪ್ರತಿಪಾದಿಸಬಹುದು.

ರಾಮಿ

(ಸಣ್ಣ ಕತೆ)

ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ

★

ುಯ ರೂಪ ಕುರೂಪವೇ. ಹೊ ಟ್ಟೆಯ ಪಸಾಯ, ಸಭ್ಯ ನಾಗರಿಕಲೋಕ ಬಾಯಿಂದ ಡ ಆಡದಂತಹದು. ಈ ಮುಳ್ಳುಕಂಟಿಯ ರೆಯಲ್ಲಿ ಅರಳಿನಿಂತಿದ್ದ ಸುಂದರವಾದ ಗುಲಾಬಿಯ ಡೆಗೆ ಯಾರೂ ಮನದ ಕಣ್ಣು ಕೊಟ್ಟವರಿಲ್ಲ!

೧

ರಾಮಿ ಒಬ್ಬಳು ಸೂಳೆ. ಬೆಂಗಳೂರು ಬಳೇಪೇಟೆ ಗಲ್ಲಿಯೊಂದ- ಲ್ಲಿ ವಾಸ. ಮೂವತ್ತೈದು ವರ್ಷ ವಯಸ್ಸು. ಮೂರು ಮಕ್ಕಳು. ಟ್ಟಮುಗ್ಗಟ್ಟುಗಳ ಕಾಲ. ಗಿರಾಕಿಗಳಿಲ್ಲ. ನಾಲ್ಕು ಅತ್ಯಗಳನ್ನು ೀಹಗಳೊಳಗೆ ಕೂಡಿಡುವುದು ಬಹಳ ದುಸ್ಸಹವಾಗಿತ್ತು.

ಇಷ್ಟಕ್ಕೂ ರಾಮಿ ಸುಂದರಿಯೂ ಅಲ್ಲ. ಸೈನಿಕನ ದೊಡ್ಡ ೃಕಟ್ಟು. ಐದು ಅಡಿ ಎಂಟು ಅಂಗುಲದ ಎತ್ತರ. ಸಟೆದ ಲುವು. ಮುಖವೂ ಗಂಡೇ. ತಲೆಮುಚ್ಚುವಷ್ಟು ಕೂದಲಿನ ಳಗೆ ಉಬ್ಬಿ ಮುಂದೆ ಬಂದ ದೊಡ್ಡ ಹಣೆ. ಅದರ ಕೆಳಗೆ ದಪ್ಪ ಪುಬ್ಬುಗಳು. ಶುಂಟರ ಮೋಟು ಮೂಗು. ಕೊಂಚ ಜಗ್ಗಿದ ೆನ್ನೆಗಳ ಮೇಲುಗಡೆ ಎದ್ದ ಮೂಳೆಗಳು. ಮೇಲಿನ ತುಟಿಯ ಮೇಲೆ ಗಂಡುಬೀರಿಯ ಮೀಸೆ. ದಪ್ಪ ತುಟಿಗಳು. ಮುಸಲೊ- ನಿಯ ಗಲ್ಲ. ಚಪ್ಪಟೆಯಾದ ಮುಂದು ಹಿಂದು. ಮೂಳೆಯ ಪಾದಗಳು. ಕುರುಡು ವಿಧಿಯು ಲಿಂಗಭೇದಮಾಡಿಬಿಟ್ಟಿದ್ದಿತು. ಇಲ್ಲದಿದ್ದರೆ ರಾಮಿ ಸೈನ್ಯದಲ್ಲಿ ಕಡೆಯಪಕ್ಷ 'ಬ್ರಿಗೆಡಿಯರ್' ಆದರೂ ಆಗಿರುತ್ತಿದ್ದಳು. ನಿಜ, ಅವಳ ಕಣ್ಣಿನಲ್ಲಿ ವಿಚಿತ್ರವಾದ ಹೊಳಪಿತ್ತು. ನೋಟವನ್ನು ನಡೆಸುವುದರಲ್ಲೂ ಚತುರೆ. ಅಭ್ಯಾಸ ಬೇರೆ. ಆದರೂ ಇವಳ ಬಲೆಗೆ ಬೀಳುತ್ತಿದ್ದ ನೊಣಗಳು ಬಹಳ ಕಡಿಮೆ. ಯೌವನವೇ ಸೌಂದರ್ಯವಾಪ ಕಾಲದಲ್ಲಿಯೂ ಇವಳಿಗೆ ವ್ಯಾಪಾರ ಅಷ್ಟಕ್ಕಷ್ಟೆ. ಮಧ್ಯಾಹ್ನದೆಲ್ಲ ಅಲಂಕಾರಮಾಡಿಕೊಂಡು, ಸಂಜೆಯೆಲ್ಲ ತನ್ನ ಮೊವಲನೆಯ ಅಂತಸ್ತಿನ ಕಟಕಟೆಯ ವರಾಂಡದಲ್ಲಿ ಕೆಂಪುದೀಸದ ಕೆಳಗೆ ಕೂತು ಕಣ್ಣುಹೊರಳಿಸುತ್ತ, ಕಿಸಿಕಿಸಿ ಹಲ್ಲುಕಿರಿಯುತ್ತ, ಆಗಾಗ ಕೈಸನ್ನೆಯನ್ನೂ ಮಾಡುತ್ತ ಇದ್ದರೂ, ಕೆಳಗೆ ರಸ್ತೆಯಲ್ಲಿ ಹೋಗುವ ನೊಣಗಳು ನೋಡಿ ನೋಡಿ ದೇರೆ ಕಡೆಗೆ ಹಾರಿಹೋಗುತ್ತಿದ್ದುವು. ಸುತ್ತ ಮುತ್ತ 'House full' ಆದ ಮೇಲೆ, ಮಿಕ್ಕುಮೀರಿದ ಒಂದೆರಡು ಪ್ರಾಣಿ- ಗಳು ಇವಳ ಕಡೆ ಸುಳಿಯುತ್ತಿದ್ದುವು. ಹೀಗಿದ್ದು ಯೌವನ ಸೌಭಾಗ್ಯದ ಲೆಕ್ಕವು ಬರಿದಾದಮೇಲಂತೂ ಇವಳನ್ನು ಕೇಳುವವರೇ ದಿಕ್ಕಿರಲಿಲ್ಲ. ಹಾಗೆಂದು ಸುಮ್ಮನಿರುವುದು ಸಾಧ್ಯವೆ? ಹೊಟ್ಟೆ ಕೇಳಬೇಕಲ್ಲ. ಬಟ್ಟೆಯಾಗಬೇಕಲ್ಲ.

ಕೊಟ್ಟ ಸುಖಕ್ಕೆ ಕೊಂಡ ಕಷ್ಟನಾಗಿ ಮಕ್ಕಳು ಬೇರೆ ಕಣ್ಣಿ- ದೊಡ್ಡವರೂ ಗಂಡಾಗಬೇಕೆ? ಹತ್ತು ವರ್ಷದ ಸೂಳೆ ಮಗ— ಗೋಪಾಲ— ಹೆಣ್ಣಾದರೂ ಆಗಿದ್ದರೆ, ಇನ್ನು ಮೂ- ನಾಲ್ಕು ವರ್ಷಗಳಲ್ಲಿ ಕೈಗೆ ಬಂದು ಕಸಬಿಗೆ ಇಳಿ ತಾಪತ್ರಯವಾದರೂ ಕಳೆಯುತ್ತಿತ್ತು' ಎನ್ನಿಸುತ್ತಿತ್ತು. ಅವಳ ತಾಯಿಗೆ ಅವಳು ಹಾಗೇ ನೆರವಾಗಿದ್ದಳು. ನೆಯ ಏಟೇ ಸಾಲದೋ ಎನ್ನುವಹಾಗೆ, ಆರು ವರ್ಷದ ಮಗುವೂ— ಗೋವಿಂದ— ಗಂಡೇ. ದೇವರ ದಯೆ ರಾಮಿ ಹಾಗೆ ಅನ್ನುತ್ತಿದ್ದಳು— ಮೂರನೆಯ ಹೆಣ್ಣಾಗಿದ್ದಿತು. ಮುದ್ದಾಗಿದ್ದಿತು. ರಾಮಿ ಅಂಕ್ಲಿ ಎಂದೇ ಹೆಸರಿಟ್ಟಿದ್ದಳು. ಆ ಬತ್ತಿಗೆ ಇನ್ನೂ ಎಂಟು ತಿಂಗಳು ಮಾತ್ರ. ಬಾಕಿಯ ಮಕ್ಕಳಾದರೂ ರಾಮಿಯನ್ನು ಹೊಸ್ತು- ಕೊಂಡಿರಲಿಲ್ಲ. ಲಕ್ಷಣವಾಗಿದ್ದುವು. ರಾಮಿಯು ಅನೇಕ ಪೇಳೆ ಕಷ್ಟದಲ್ಲಿ ಸಿಕ್ಕಿ ನರಳುತ್ತಿದ್ದಾಗ 'ಈ ಹಾಳು ಮಕ್ಕಳು ಇಲ್ಲದೇ ಇದ್ದರೇ ಚೆನ್ನಾಗಿರಲಿಲ್ಲವೆ?' ಎಂದು ತನ್ನನ್ನೇ ಕೇಳಿಕೊಳ್ಳು- ತ್ತಿದ್ದಳು. ಆದರೆ ಮರುಕ್ಷಣದಲ್ಲೇ 'ಛೇ! ಪಾಪ!' ಅಂದು- ಕೊಂಡು, ಈ ಯೋಚನೆಯನ್ನು ದೂರಮಾಡುತ್ತಿದ್ದಳು.

ವಿಧಿಯು ರಾಮಿಗೆ ದೇಹದಲ್ಲಿ ಮಾತ್ರ ಅನ್ಯಾಯಮಾಡಿದನೇ ಹೊರತು ಸ್ವಭಾವದಲ್ಲಲ್ಲ. ಅವಳ ಹೆಣ್ಣಿನ ಹೃದಯ ಮೃದು- ವಾಗಿದ್ದಿತು. ತನ್ನ ಮಕ್ಕಳನ್ನು ಯಾವ ತಾಯಿಗೂ ಕಡಿಮೆ- ಯಾಗಿ ಪ್ರೀತಿಸುತ್ತಿರಲಿಲ್ಲ. ತನ್ನನ್ನೇ ಸವೆಸಿಕೊಂಡು ಅವುಗಳ ಸೇವೆ ಮಾಡುತ್ತಿದ್ದಳು. ತನ್ನನ್ನೇ ಮಾರಿಕೊಂಡೇ— ಯಾವ ಮಾರ್ಕೆಟ್ಟಿನಲ್ಲಾದರೂ ಸರಿ— ಅವುಗಳನ್ನು ಕಾಪಾಡಲು ಹೋರಾಡುತ್ತಿದ್ದಳು. ತಾನು ಗಂಟುಹಾಕಿದ ಸೀರೆಯನ್ನು ಉಟ್ಟರೂ ಮಕ್ಕಳ ಅಂಗಿಗಳಲ್ಲಿ ತೂತಿರುತ್ತಿರಲಿಲ್ಲ. ತೇಪೆ ಹಾಕಿ ಹಾಕಿ ಅವಳ ಬೆರಳುಗಳು ತೂತುಬಿದ್ದಿದ್ದುವು. ಮಕ್ಕಳು ಉಂಡು ಮಿಕ್ಕಷ್ಟು ತನಗೆ— ಮಿಗದಿದ್ದರೆ ಇಲ್ಲ. 'ಈ ಉಪವಾಸ ವನ- ವಾಸಗಳ ಕಾರ್ಪಣ್ಯವನ್ನು ಸಹಿಸುವುದಕ್ಕಾಗಿಯೇ ದೇವರು ತನಗೆ ಅಂಥ ಗಟ್ಟಿಯಾದ ದೇಹವನ್ನು ಕರುಣಿಸಿದ್ದಾನೋ' ಎಂದು ಕೊಳ್ಳುತ್ತಿದ್ದಳು, ರಾಮಿ. ಮೊದಲನೆಯ ಹುಡುಗ ಎಲ್ಲಾದರೂ ಚಾಕರಿಮಾಡಲು ಶಕ್ತನಾಗಿದ್ದರೂ, ರಾಮಿ ಅವನನ್ನು ಗಾಣಕ್ಕೆ ಹಾಕಿ ತನ್ನ ಕಷ್ಟಗಳನ್ನು ಕಡಿಮೆಮಾಡಿಕೊಳ್ಳಲು ಮನಸ್ಸು ಮಾಡಲಿಲ್ಲ. ಇದಕ್ಕೆ ಕಾರಣ, ಅವಳು ಈಚೀಚೆಗೆ ಕಾಣುತ್ತಿದ್ದ ಹೊಸ ಹೊಸ ಕನಸುಗಳು. ತನ್ನ ಗಂಡುಮಕ್ಕಳು ತನ್ನ ಶ್ರೀಮಂತ ಗಿರಾಕಿಗಳ ಹಾಗೆ ಆಗಬೇಕು, ತನ್ನ ಹೆಣ್ಣುಮಗು ಅವರ ಹೆಂಡತಿ- ಯರಂತೆ ಗಣತಿಯಾಗಬೇಕು—ಎಂಬ ಬಲವಾದ ಹಂಬಲ.



ಮೊದಲನೆಯ ಮಗು ಹೆಣ್ಣಾಗಿದ್ದರೆ ಅವಳ ಬುದ್ಧಿ ಹೇಗೆ ಓಡು-ತ್ತಿದ್ದಿತೋ ಏನೋ! ಆದರೆ ಅದಾಗದ ಶಾಪ ಅವಳಿಗೆ ಈಗ ಒಂದು ವರವಾಗಿಯೇ ಕಾಣುವ ದಿನಗಳು ಬಂದಿದ್ದುವು. ಈ ಹಂಬಲದಿಂದ ಅವಳು ತನ್ನ ಗಂಡುಮಕ್ಕಳನ್ನು ಶಾಲೆಗೆ ತಪ್ಪದೆ ಕಳುಹಿಸುತ್ತಿದ್ದಳು. ಅವರ ಪಾಠಗಳಿಗೆ ಕೊರತೆಯಾಗದಂತೆ ಶ್ರಮಪಡುತ್ತಿದ್ದಳು. ಅವರಿಗೆ ತನ್ನ ಸ್ಥಿತಿ, ಸಜವಾಸ, ವ್ಯಾಪಾರ-ಗಳು ಅವಮಟ್ಟು ತಿಳಿಯದಿರಲೆಂದು ಅವರು ಮಲಗುವವರೆಗೂ ತಾನು ವರಾಂಡದ ಕೆಂಪುದೀಪವನ್ನು ಹಚ್ಚಿಸುತ್ತಿರಲಿಲ್ಲ. ಗೋಪಾಲನಿಗೆ ಇನ್ನೆರಡು ವರ್ಷಗಳು ತುಂಬುವಷ್ಟರಲ್ಲಿ ಅಂಗಡಿ-ಮನೆಗಳನ್ನು ದೂರ ದೂರ ಬೇರ್ಪಡಿಸಬೇಕೆಂದೂ ಯೋಚಿಸಿ-ಕೊಂಡಿದ್ದಳು.

ಆದರೆ ಇದಕ್ಕೆಲ್ಲ ಅಡಚಣೆಯೆಂದರೆ ಹಣದ ಕೊರತೆ. ಪೆಜ್ಜವು ದಿನೇ ದಿನೇ ಹೆಚ್ಚುತ್ತಿದ್ದರೆ, ಸಂಪಾದನೆ ದಿನೇ ದಿನೇ ಕುಗ್ಗುತ್ತಿತ್ತು. ದೇವರು ಕೊಟ್ಟ ರೂಪ ಒಂದು ಪೆಟ್ಟು; ವಯಸ್ಸು ಎರಡನೆಯದು; ಮೂರನೆಯದಾಗಿ, ಈಗ ಮಕ್ಕಳದೆಸೆಯಿಂದ ಮುಂಜೆಯೇ ದೀಪ ಹಚ್ಚಿಸಲಾರದ ಸಂಕಟ. ಹೀಗಾಗಿ ಎರಡು ಮೂರು ದಿನಗಳಿಗೆ ಒಬ್ಬ ದಾತ ಸಿಕ್ಕುವುದೂ ಕಷ್ಟವಾಗುತ್ತಿತ್ತು. ಆದುದರಿಂದ ಈಚೀಚೆಗೆ ರಾಮಿ ಮಕ್ಕಳಿಗೆ ಮುತ್ಸಂಜೆಗೇ ಅನ್ನಹಾಕಿ, ಓ ಕೊಳ್ಳುವಂತೆ ಹೇಳಿ, ಕೈಮಗುವಿಗೆ ಹಾಲುಕೊಟ್ಟು, ಒಂದು ಗು ಅಫೀಮು ತಿನ್ನಿಸಿ ತೊಟ್ಟಿಲಿಗೆ ಹಾಕಿ, ಅಲಂಕಾರಮಾಡಿಕೊಂ ಪಾರ್ಕಿನ ಬೇಟಿಗೇ ಹೋಗುತ್ತಿದ್ದಳು. ಮನೆಗೆ ಹಿಂದಿರುಗುವು ಸಾಮಾನ್ಯವಾಗಿ ಮಕ್ಕಳು ಮಲಗಿಕೊಂಡಮೇಲೆಯೇ. ಹಾಗಿಲ್ಲ ಮುಂದಾದರೆ ಮಕ್ಕಳಿಗೆ 'ಹೊಸನಂಟರ' ಪರಿಚಯವಾಗುತ್ತಿತ್ತು ರಾಮಿಯೂ ನಂಟರೂ ಮಕ್ಕಳು ಮಲಗಿಕೊಳ್ಳುವ ವರೆಗೆ ಮಾತಾಡುತ್ತಿರುತ್ತಿದ್ದರು. ಪಾರ್ಕಿನ ಬೇಟೆ ಫಲಿಸದಿದ್ದ ದಿ ರಾಮಿ ಮನೆಗೆ ಹಿಂದಿರುಗಿ, ಕೆಂಪುದೀಪವನ್ನು ಹಚ್ಚಿ ವರಾಂಡ. ವನ್ನು ಸೇರುತ್ತಿದ್ದಳು. ನಡುರಾತ್ರಿಯ ವರೆಗೆ ಬೇಕಾದರೂ ಕುಳಿತಿರುತ್ತಿದ್ದಳು.

೨

ರಾಮಿ ಕಡೆಯ ಸಂಪಾದನೆಯನ್ನು ಕಂಡಾಗಲೇ ನಾಲ್ಕು ದಿನ-ಗಳಾಗಿದ್ದುವು. ಪಾರ್ಕಿನಲ್ಲಿ ಮೇನಕೆಯಂತೆ ಸುಳಿದಾಡಿದುದೂ, ಕೆಂಪು ದೀಪದ ಕೆಳಗೆ ರಾತ್ರಿಯೆಲ್ಲ ದೆವ್ವದಂತೆ ಕುಳಿತಿದ್ದುದೂ ಎರಡೂ ವಿಫಲವಾಗಿದ್ದುವು. ಮನೆಯಲ್ಲಿ ಕಾಲು ಬಾಟಲು ಸುವಾಸನೆ ಕೂದಲೆಣ್ಣೆ, ನಾಲ್ಕಾರು ತೊಟ್ಟು ಸೆಂಟು, ಅಷ್ಟಿಷ್ಟು ಪೌಡರು, ಲಿಪ್‌ಸ್ಟಿಕ್—ತುಟಿಯ ರಂಗು—ಒಂದು ಲಕ್ಷಣವಾದ ಸೀರೆ ಇವು ಇದ್ದರೂ, ಒಂದು ಕಾಳು ಅಕ್ಕಿಯಾಗಲೀ ರಾಗಿಯಾಗಲೀ ಇರಲಿಲ್ಲ. ಸುತ್ತುಮುತ್ತಿನ ಸಾಲ ಆಗಲೇ ಏರಿಹೋಗಿತ್ತು. ಅನರಿವರನ್ನು ಅಂಗಲಾಚಿದುದೂ ವ್ಯರ್ಥವಾಯಿತು. ರಾಮಿ ತನ್ನಲ್ಲಿದ್ದ ಒಂದೇ ಒಂದು ಬೆಳ್ಳಿಯ ಉಂಗುರವನ್ನು ಮಾರಿ, ಒಂದು ಸೇರು ರಾಗಿಯನ್ನು ತಂದು ಬೀಸಿ ಅಂಬಲಿಯನ್ನು ಕುದಿಸಿ, ಮಕ್ಕಳಿಗೆ ಹಾಕಿ ತಾನೂ ಉಂಡಳು. ಐದನೆಯ ದಿನದ ಅದೃಷ್ಟ-ವನ್ನು ನೆನೆದು ಆಶಾದೃಷ್ಟಿಯ ಆತುರದಿಂದ ಸಂಜೆಯನ್ನು ಇದಿರು ನೋಡುತ್ತಿದ್ದಳು.

ಪಕ್ಕದ ಮನೆಯ ಗಡಿಯಾರ ಆರು ಗಂಟೆ ಹೊಡೆಯಿತೋ ಇಲ್ಲವೋ; ಗೋಪಾಲ-ಗೋವಿಂದರಿಗೆ ಬೇಗ ಬೇಗ ಅಂಬಲಿಯನ್ನು ಹಂಚಿ, ಹಾಸಿಗೆ ಹಾಸಿಕೊಟ್ಟಳು. ಕೈಮಗುವಿಗೆ ಹಾಲಾಯಿತು. ಅಫೀಮು ಸಾಕಾದಷ್ಟು ಇರಲಿಲ್ಲ. ಡಬ್ಬಿಯನ್ನು ಬಳಿದು ಅಷ್ಟನ್ನೇ ನೆಕ್ಕಿಸಿ ತೊಟ್ಟಿಲಿಗೆ ಹಾಕಿ ತೂಗಿದಳು. ಮಗು ಮಲಗಿದ ಮೇಲೆ ತನ್ನ ಅಲಂಕಾರಕ್ಕೆ ತಿರುಗಿದಳು. ಆ ದಿನ ಗೂಡಿನ ಕನ್ನಡಿಯ ಮುಂದೆ ನಿಂತಾಗ ಅವಳಿಗೆ ಇನ್ನೂ ಹೆಚ್ಚು ಹತ್ತು ವರ್ಷ ವಯ-ಸ್ಸಾದಂತೆ ಕಂಡಿತು. ಮುಖ ಸೋತ ಹಾಗಿತ್ತು. ಆದರೆ ಅವಳೇ ಸೋಲುವಳು? ಸುಮ್ಮನೆ ಲೊಚಗುಟ್ಟಿ, ಕಟಬಾಯನ್ನು ಓರೆಮಾಡಿ ನಸುನಕ್ಕು ಭುಜ ಕುಲುಕಿದಳು. ಇದ್ದ ಸ್ವಲ್ಪ ಕೂದಲಿಗೇ ನಾಲ್ಕು ತೊಟ್ಟು ಹೆಚ್ಚಾಗಿಯೇ 'ಟಾಂಕೋ ಲಾವೆಂಡರ್' ಎಣ್ಣೆಯನ್ನು ಹಾಕಿ ಜೆನ್ನಾಗಿ ಮೆರುಗು ಬರುವಂತೆ ಬಾಚಿ, ಎಡಕ್ಕೆ ವಾರೆಬೈತಲೆ ತೆಗೆದು, ಕುರುಳುಗಳು ಎದ್ದು ಕಾಣುವಂತೆ ಹತ್ತಾರು ಹೇರ್‌ಪಿನ್-ಗಳನ್ನು ಸಿಕ್ಕಿಸಿದಳು. ನರೆಗೂದಲಿಗೆಲ್ಲ ಅಚ್ಚ ಕಪ್ಪನ್ನು ಬಳಿದಳು.

ಚೌರಿಕಟ್ಟಿ' ಹಾಕಿ ಹೆಣೆದ ಜಡೆಗೆ ಸ್ವಲ್ಪ ಮೇಲೆ, ಸ್ಪಷ್ಟವಾಗಿ ಗಾಣುವಂತೆ ಎಂಟಾಣೆಯ ಕೆಂಪು ಕರ್ಪೂರದ ಗಿಣಿಗಳ ಪಿನ್ನುಗಳನ್ನೂ ತಗಲಿಸಿಕೊಂಡಳು. ಕಾಗದದ ಮಲ್ಲಿಗೆಯ ದಂಡೆಯನ್ನೂ ಗುಲಾಬಿಯನ್ನೂ ಮುಡಿದುಕೊಂಡಳು. ಮುಖಕ್ಕೆ ಕೊಂಚ ದಟ್ಟವಾಗಿಯೇ ಪೌಡರನ್ನು ಹಾಕಿಕೊಂಡಳು. ಕಣ್ಣಿನ ಸುತ್ತದ ಕಪ್ಪುಗೆರೆಯನ್ನೂ, ಮೂಗಿನ ತುದಿಯ ಮಿಂಚನ್ನೂ, ಮೇಲುತುಟಿಯ ಮೀಸೆಯನ್ನೂ ಮುಚ್ಚಲು ಬಹಳ ಹೊತ್ತು ಹೋರಾಡಿ ವಿಫಲಳಾಗಿ ಅಸಮಾಧಾನಪಟ್ಟಳು. ಕೆನ್ನೆಗಳೆರಡಕ್ಕೂ ಕೆಂಪನ್ನು ಜೋರಾಗಿ ಎರಡು ಬೆರಳುಗಳಿಂದ ಬಳಿದುಕೊಂಡು, ತುಟಿಗಳಿಗೆ ರಂಗನ್ನು ಒತ್ತಿ ಬಳಿದು ಸಂತೋಷಪಟ್ಟಳು. ಹುಬ್ಬಿನ ಮಧ್ಯದಲ್ಲಿ ಕಂಡೂಕಾಣದಂತೆ ಕುಂಕುಮದ ಚುಕ್ಕಿಯನ್ನು ಹಂಚಿಕಡ್ಡಿಯ ತುದಿಯಿಂದ ಇಟ್ಟುಕೊಂಡಳು. ಹುಬ್ಬನ್ನು ಕಪ್ಪಿನಿಂದ ತಿದ್ದಿದಳು. ಕಣ್ಣಿಗೆ ಕಾಡಿಗೆಯನ್ನು ತೀಡಿ, ಕೆನ್ನೆಗೆ ದೃಷ್ಟಿ ಬಟ್ಟಿಟ್ಟು ತೃಪ್ತಿ ಕೊಂದಿದಳು. ಕಿವಿಗೆ ರೂಪಾಯಿ ಬೆಲೆಯ ಹಿತ್ತಾಳೆ ಗಿಲೀಟಿನ ಬೆಂಡೋಲೆಗಳನ್ನು ನೇತುಹಾಕಿಕೊಂಡಳು. ಕತ್ತಿಗೆ ಪೌಡರ್ ಬಳಿದು ಇಮಿಟೇಶನ್ ಮುತ್ತಿನ ಹಾರವನ್ನು ಕಟ್ಟಿಕೊಂಡಳು. ತೊಳುಬಿದ್ದ ಮೊಲೆಗಳನ್ನು 'ಬಾಡಿ' ಬಟ್ಟೆ ಬಿಗಿದು ಎತ್ತಿಕಟ್ಟಿ, ರೋಜಾ' ಬಣ್ಣದ ಕುಚ್ಚುತೋಳಿನ ರವಿಕೆಯನ್ನು ತೊಟ್ಟಳು. ಇದ್ದೊಂದು ಹಸಿರು ಸೀರೆಯನ್ನು ಎಚ್ಚರಿಕೆಯಿಂದ ಉಟ್ಟು, ಸೆರಗನ್ನು ನೆರಿಹಿಡಿದು, ಅರ್ಧ ಎದೆ ಕಾಣುವಂತೆ ಎಡಭುಜಕ್ಕೆ ಹಾಯಿಸಿ ಬೆನ್ನಿಗೆ ಜೋಲು ಬಿಟ್ಟು, ಕರ್ಪೂರದ ಹಳದಿ ನವಿಲಿನ ಬ್ರೋಚನ್ನು ಭುಜದೆಡೆ ಸಿಕ್ಕಿಸಿದಳು. ಸೆಂಟಿನ ಸೀಸೆಯಿಂದ ಅಲ್ಲಲ್ಲಿ ತನ್ನ ಮೇಲೆ ಸುವಾಸನೆಯನ್ನು ಪ್ರೋಕ್ಷಿಸಿಕೊಂಡಳು. ಕೈಗಳಿಗೂ ಅಷ್ಟು ಪೌಡರನ್ನು ತೋರಿಸಿ, ಹಿತ್ತಾಳೆ ಮತ್ತು ರಬ್ಬರಿನ ಬಳೆಗಳು ನಾಲ್ಕು ನಾಲ್ಕನ್ನು ತೂರಿಸಿಕೊಂಡು, ಬೆರಳುಗಳಿಗೆ ಹಿತ್ತಾಳೆಯ ಉಂಗುರವಿಟ್ಟುಕೊಂಡಳು. ಎದೆಯ ಮಧ್ಯಕ್ಕೆ ಬಿಳಿಯ ಚೌಕನ್ನು ಸಿಕ್ಕಿಸಿ, ಒಡೆದ ಪಾದಕ್ಕೆ ಕೆಂಪು ಬಳಿದು ಚಪ್ಪಲಿ ಮೆಟ್ಟಿಕೊಂಡಳು. ಮೊಳೆಯ ಮೇಲಿನಿಂದ ಹಾವಿನ ಚರ್ಮದ ಕೈಚೀಲವನ್ನು ತೆಗೆದು ಬಿಚ್ಚಿ ನೋಡಿ ಪೌಡರು, ಸೆಂಟು, ಲಿಪ್‌ಸ್ಟಿಕ್, ಮೊದಲಾಗಿ ಭರ್ತಿಮಾಡಿ ಎಡಗೈಯಿಗೆ ತಗಲುಹಾಕಿಕೊಂಡ ಮೇಲೆ, ಅಲಂಕಾರ ಸಿದ್ಧತೆಗಳು ಪೂರ್ಣವಾದುವು. ಕಡೆಯದಾಗಿ ರಾಮಿ ಕನ್ನಡಿಯಲ್ಲಿ ಮತ್ತೊಂದು ಬಾರಿ ನೋಡಿಕೊಳ್ಳುತ್ತ, ತುಟಿ ಮುಂದು ಮಾಡಿ ಹಲ್ಲು ಕಿರಿದು ಅಣಕಿಸಿ, ಕಣ್ಣು ಹೊಡೆದು ನಗುತ್ತಿರುವಾಗ ಅರ್ಧಗಂಟೆ ಕೇಳಿಸಿತು. ಆರೂವರೆ! ರಾಮಿ ಸರಸರನೆ ಹೊರಹೊರಟಳು.

ಮಹಡಿಯ ಮೆಟ್ಟಿಲುಗಳನ್ನಿಳಿದು ಬೀದಿಯಲ್ಲಿ ಅತ್ತಿತ್ತ ನೋಡುತ್ತ ಬಿಂಕದಿಂದ ಒಂದೆರಡು ಹೆಜ್ಜೆಯಿಟ್ಟಾಗ, ರಾಮಿಯ ಕಿವಿಗೆ ಹಕ್ಕದ ಮಹಡಿಯಿಂದ ಕಿಲಕಿಲದ ನಗುವು ಕೇಳಿಸಿತು.

"ನೋಡೆ, ರತಿ ಹೊರಟಿದಾಳೆ" ಎಂದಿತು ಒಂದು ಧ್ವನಿ ಮೆಲ್ಲಗೆ.

"ಮನ್ಮಥ ವಿಜಯಕ್ಕೆ" ಎಂದಿತು ಇನ್ನೊಂದು.

ಮತ್ತೊಮ್ಮೆ ನಗು ರಾಮಿಗೆ ಕೇಳಿಸಿತು. ಆದರೆ ಈ ಅನುಭವ ರಾಮಿಗೆ ಹೊಸದಾಗಿರಲಿಲ್ಲ. ತಾನೂ ಹಿಂದೆ ಯುವತಿಯಾಗಿದ್ದಾಗ ಹೀಗೇ ನಗುತ್ತಿದ್ದಳು. "ಹುಂ, ಪಾಪ, ಇವರಿಗೂ ಒಂದು ದಿನ ಇದೇ ಗತಿ ಬರುತ್ತಲ್ಲ!" ಎಂದುಕೊಂಡು ರಾಮಿ, ತುಳಸಿ ಪಾರ್ಕಿನ ಕಡೆಗೆ ನಡೆದಳು.

ಪಾರ್ಕಿನಲ್ಲಿ ಮಬ್ಬು ಕವಿಯುತ್ತಿತ್ತು. ಗದಲಿಯರೂ ಗೃಹಸ್ಥರೂ ಮನೆಗಳಿಗೆ ಹಿಂತಿರುಗುತ್ತಿದ್ದರು. ಹಕ್ಕಿಗಳ ಚಿಲಪಿಲ, ಗೂಗೆಗಳ 'ಘೂಕ' ಕ್ಕೆ ಸ್ಥಳಗೊಡುವ ಕಾಲ. ತನಗೆ ಅದೇ ಸಮಯವಾದ ಹೊತ್ತೆಂದುಕೊಂಡು ರಾಮಿ ಪಾರ್ಕನ್ನು ಹೊಕ್ಕು, ಮೇನಕೆಯಂತೆ ಅಲ್ಲಲ್ಲಿ ಬಿನ್ನಾಣದಿಂದ ಸುಳಿದಾಡಿದಳು. ಒಂದು ಕಡೆಯಲ್ಲಿ ಇಬ್ಬರು ಹೆಂಗಸರು ರಸ್ತೆಯ ಪಕ್ಕದಲ್ಲಿ ಹುಲ್ಲಿನ ಮೇಲೆ ಕುಳಿತಿದ್ದರು. ಅವರ ಮುಂದೆ ನಾಲ್ಕು ಮಕ್ಕಳು ಆಡುತ್ತಿದ್ದುವು. ಹೆಂಗಸರು ಜರತಾರಿ ಅಂಚಿನ ರೇಷ್ಮೆ ಸೀರೆ-ಕುಪ್ಪಸಗಳಲ್ಲಿದ್ದರು. ಕಿವಿಗಳಲ್ಲಿ ವಜ್ರದ ಬೆಂಡೋಲೆ, ಮೂಗಿನ ಎರಡು ಕಡೆಗೂ ವಜ್ರದ ಮೂಗುತಿಗಳು. ಕತ್ತಿನಲ್ಲಿ ಚಿನ್ನದ ಹಾರ, ಕೆಂಪುವಜ್ರಗಳ ಪದಕಗಳು. ಕೈಯಲ್ಲಿ ನಾಲ್ಕು ನಾಲ್ಕು ಚಿನ್ನದ ಬಳೆಗಳು. ಮಕ್ಕಳುಗಳಲ್ಲಿ ಹೆಣ್ಣು ಎರಡೂ, ಜರಿಯ ಖಣದ ಪರಕಾರಗಳ ಮೇಲೆ ರೇಷ್ಮೆಯ ಅಂಗಿಯನ್ನು ಹಾಕಿದ್ದುವು. ಕತ್ತಿನಲ್ಲಿ ಚಿನ್ನದ ಸರಪಳಿಯ ಹಾರಪದಕ, ಕಿವಿಗಳಲ್ಲಿ ಕೆಂಪು ಸುತ್ತಿದ ವಜ್ರದ

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M's. Pranlal and Sons
Chemists, Druggists
Station Road. HUBLI

(H. O. Bangalore City)

— ಶರಚ್ಚಂದ್ರರ ಶ್ರೇಷ್ಠ ಕಾದಂಬರಿ —

ಶ್ರೀ ಕಾಂತ

(ಎಂಟು ಭಾಗಗಳೂ ಪೂರ್ಣ ಆಯ್ದಾಗಿವೆ)

ಬಿಲಿ ಹತ್ತು ರೂಪಾಯಿ ಮಾತ್ರ

ಪ್ರಪಂಚಭಾಷೆಗಳಲ್ಲಿಯೂ ಭಾಷಾಂತರವಾಗಿ, ಎಲ್ಲೆಲ್ಲಿಯೂ ಮುನ್ನೆ ಕಡೆದ ಪ್ರಸಿದ್ಧಿಯಾದ ಕಾದಂಬರಿ. ಕೆಲವೇ ಪ್ರತಿಗಳಿವೆ ಬೆಂಗಳೂರು. M. O. ಕಳಿಸಿ, ಈಗಲೇ ತರಿಸಿಕೊಳ್ಳಿರಿ.

ಬೇರೆ ಕೆಲವು ಶರತ್ಚಾಂದ್ರಂಬರಿಗಳು

ದೇವದಾಸ (ಅಂಚೆಖರ್ಚು ಸೇರಿ)		೧—೧೨—೦
ವಿಜಯಾ	,,	೧—೧೪—೦
ವೈಕುಂಠನ ಮೃತ್ಯುಪತ್ರ	,,	೧—೧೨—೦
ರಾಜಲಕ್ಷ್ಮಿ	,,	೧—೧೨—೦
ಪೋತಚೆ	,,	೧—೧೨—೦
ಚಿತ್ರ	,,	೨— ೬—೦
	,,	೧— ೦—೦

(ಪ್ರೇಮಪಥ, ಜೀವಾಂಗಿನಿ, ಮಹೇಶ, ಗುರುಚರಣ, ಮಂಗಲಸೂತ್ರ, ಪುಷ್ಪಾಸತಿ, ಅಭಾಗಿನಿ ಸ್ವರ್ಗ ಈ ಏಳು ಕತೆಗಳ ಸೂಡು ೨—೦—೦)

ಇನ್ನೂ ಅನೇಕ ಶರತ್ಕಾಲಗಳು ದೊರೆಯುತ್ತವೆ ಬೇಕಾದಲ್ಲಿ ಬರೆಯಿರಿ:—

ಸಮಾಜ ಪುಸ್ತಕಾಲಯ, ಧಾರವಾಡ.

ಲೆಂಪೋಲೆ-ಲೋಲಾಕು, ಇವು ಜಗಿಯುತ್ತಿದ್ದುವು. ಗಂಡು ರೇಷ್ಮೆ ಪರಟಿನ ಮೇಲೆ ಟ್ರೌಜ್ ಕೋಟು-ಚಡ್ಡಿಗಳನ್ನು ಹಾಕಿದ್ದುವು. ಕಾಲಿಗೆ ಕಾಲುಚೀಲ ಷೂಗಳು. ರಾಮಿಯ ಕಣ್ಣು ಮಕ್ಕಳ ಕಡೆಗೆ ಹೋಯಿತು. ಅವಳ ತಾಯಿಯೆಂಬ ಬಿಚ್ಚಿತು. ಕಾಲು ತಾನಾಗಿ ಹತ್ತಿರ ರಸ್ತೆಯಲ್ಲಿ ನಿಂತಿತು. "ಎಂಥ ಮುದ್ದು ಮಕ್ಕಳು! ಏನು ಶ್ರೀಮಂತಿಕೆ! ನನ್ನ ಮಕ್ಕಳು.." ರಾಮಿಯ ಮನಸ್ಸು ಭಾವನೆಯ ಲೋಕದಲ್ಲಿ ಸಂಚರಿಸತೊಡಗಿತು. ಹತ್ತಿರದಲ್ಲಿ ನಿಂತ ರಾಮಿಯನ್ನು ದಿಟ್ಟಿಸಿ ನೋಡಿ ಮಕ್ಕಳು ಆಟವನ್ನು ಬಿಟ್ಟು ತಾಯಂದಿರ ಬಳಿಗೆ ಓಡಿಹೋದುವು. ರಾಮಿಗೆ ಎಚ್ಚರವಾಯಿತು. ಹೆಂಗಸರು ಇವಳನ್ನು ನೋಡಿ, ತಮ್ಮಲ್ಲೇ ಒಬ್ಬರನ್ನೊಬ್ಬರು ನೋಡಿಕೊಂಡು ಪಿಸಿಗುಟ್ಟುತ್ತ ಮೇಲಿದ್ದು, ಮಕ್ಕಳನ್ನೂ ಸೆಳೆದುಕೊಂಡು ಹಿಂದೆ ಹಿಂದೆ ನೋಡುತ್ತ ಹೊರಟು ಹೋದರು.

ರಾಮಿ ಕ್ಷಣಕಾಲ ಸಪ್ಪೆಯಾಗಿ ಮುಂದೆ ಹೆಜ್ಜೆ ಹಾಕಿದಳು. ಅವಳ ಕೃತಕ ಗೆಲುವು ಹಿಂದಿರುಗಿತು. ಬಿಂಕ ಮೆರೆಯಿತು. ಇನ್ನೊಂದು ಕಡೆ ಒಬ್ಬಾತ ಕುಳಿತಿದ್ದ. ರಾಮಿಗೆ ಅವನನ್ನು ಹಿಂದೆಲ್ಲೋ ಕಂಡಂತೆ ನೆನಪಾಗಿ ಅನಿಸಿ ಹುಟ್ಟಿತು. ಅವನ ನಾಲ್ಕು ಬಿಟ್ಟಗಲದ ಜರತಾರಿ ಪೇಟ, ವಜ್ರದ ಹತ್ತ ಕಡಕು, ಸರ್ಜು ಕೋಟು ಮೇಲುಕೋಟೆಯಂಚಿನ ಪಂಚೆ, ಪಂಪುಷೂ, ಕೈಬೆರಳುಗಳ ಉಂಗುರ, ಮಣಿಕಟ್ಟಿನ ಕಪ್ಪಗಳು ಬಹಳ ಆಕರ್ಷಿಸಿದುವು. ಸ್ವಲ್ಪ ಧೈರ್ಯದಿಂದ ಅವನ ಹತ್ತಿರದಲ್ಲೇ ಸುಳಿದಳು. ಅವನು ತನ್ನ ಕಡೆ ನೋಡಿದಾಗ ನಸುನಕ್ಕಳು. ಆದರೆ ಆತ ಮುಖ ತಿರುಗಿಸಿಕೊಂಡ ಒಂದು ಕಡೆ ಉಗುಳಿದನು. ರಾಮಿಗೆ ಕೆನ್ನೆಯ ಮೇಲೆ ಹೊಡೆದ ಹಾಗಾಯಿತು; ತನ್ನ ಮುಖದ ಮೇಲೇ ಉಗುಳಿದ ಹಾಗಾಯಿತು. ಆದರೆ ಇಂತಹದೇನು ಹೊಸ ಅನುಭವವಾಗಿರಲಿಲ್ಲ "ನನ್ನ ಆಟದಲ್ಲಿ ಇವೆಲ್ಲ ಇವೆ" ಎಂದುಕೊಂಡು ಮುಂದೆ ಸಾಗಿದಳು,

ಆ ಹಸಿರು ಬೇಲಿಯಿಂದ ಕತ್ತರಿಸಿದ್ದ ನವಿಲಿನ ಆಕಾರದ ಬಳಿ, ಕಲ್ಲು ಬೆಂಚಿನ ಮೇಲೆ ಕುಳಿತಿದ್ದ ಇಬ್ಬರು ಯುವಕರು ಇವಳ ಕಡೆಗೆ ಆಗಾಗ ನೋಡುತ್ತಿದ್ದುದನ್ನು ರಾಮಿ ದೂರದಿಂದಲೇ ಕಂಡು. ಕೊಂಡಿದ್ದಳು. ಈಗ ಅವರ ಹತ್ತಿರ ಬಂದು ಇದಿರು ಬೆಂಚಿನ ಮೇಲೆ ಕುಳಿತುಕೊಂಡಳು. ಒಬ್ಬ ಪಾಶ್ಚಾತ್ಯ ಉಡುಪಿನಲ್ಲಿದ್ದು ಸಿಗರೇಟು ಸೇದುತ್ತಿದ್ದ. ಇನ್ನೊಬ್ಬ ಪಾದಿಯ ಕಚ್ಚೆಪಂಚೆ 'ಕುರ್ತ'ಗಳಲ್ಲಿದ್ದು ಬೀಡಿ ಸೇದುತ್ತಿದ್ದ. ಮೊದಲನೆಯವನು ರಾಮಿಯಿಂದ ತನ್ನ ಸ್ನೇಹಿತನ ಕಡೆ ನೋಡಿ ಹುಬ್ಬು ಹಾರಿಸಿದ. ಅವನೂ ನಸುನಕ್ಕ. ಇಬ್ಬರ ದೃಷ್ಟಿಯೂ ತನ್ನ ಕಡೆಗೆ ಕದ್ದು ಬಂದಾಗ ರಾಮಿ ಕಣ್ಣು ಹಾರಿಸಿದಳು. ಇಬ್ಬರೂ ಇಂಗ್ಲೀಷಿನಲ್ಲಿ ಮಾತನಾಡುತ್ತ ಎದ್ದು, ಬೀಡಿ-ಸಿಗರೇಟುಗಳನ್ನು ಅಪ್ಪಕ್ಕೇ ಎಸೆದು, ಒಬ್ಬನ ಬೆನ್ನಿಗೊಬ್ಬ ಕೈಹಾಕಿಕೊಂಡು, ಗಹಗಹಿಸಿ ನಗುತ್ತ, ಹೆಂಡಕುಡುಕರಂತೆ ತೂರಾಡುತ್ತ ರಾಮಿಗೆ ಬೆನ್ನು ತಿರುಗಿಸಿ ಹೊರಟು ಹೋದರು. ರಾಮಿಗೆ ತಟ್ಟನೆ ತನ್ನ ಯೌವನ ನೆನಪಿಗೆ ಬಂತು. ಆಗ ಇಂತಹ ಎಷ್ಟು ಜನರನ್ನು ಕಂಡಿದ್ದಳು ಅವರೇ ಇವಳನ್ನು ಅರಸುತ್ತಿದ್ದರು. ಈಗ? ತಾನೇ ಮುಂದ ನರಿದರೂ ತಿರಸ್ಕಾರ? ರಾಮಿಗೆ ಗಂಟಲು ಒತ್ತಿತು. ಕಣ್ಣು ಒದ್ದೆಯಾದ ಹಾಗಾಯ್ತು. ಆದರೆ ಅವಳು ತಟ್ಟನೆ ಚೇತರಿಸಿಕೊಂಡ ನಸುನಕ್ಕಳು. ಕವಿದಿದ್ದ ಯೋಚನೆಯನ್ನು ಕೊಡಹುವಳಂತೆ ಭುಜಝಾರಿಸಿ ಎಷ್ಟು ನಡೆದಳು.

ಪಾರ್ಕಿನ ಇತರರಿಗೆಲ್ಲ ಇವಳ ಕಡೆಯ ಒಂದೇ ನೋಟ ಸಾಕಾಯಿತು. ಕೆಲವರು ಭೂತ-ಪ್ರೇತಗಳನ್ನು ಕಂಡಂತೆ ಎದ್ದು ಸರಸರನೆ ಹೋದರು. ಇತರರು ಇವಳ ಇರುವಿಕೆಯನ್ನೇ ಗಮನಿಸಲಿಲ್ಲ ರಾತ್ರಿ ಕವಿಯುತ್ತಿತ್ತು. ದೀಪಗಳು ಹತ್ತಿಕೊಂಡುವು. ಪಾರ್ಕಿನಿಂದ ಜನರು ಹೋಗುತ್ತಿದ್ದರೇ ಹೊರತು ಬರುತ್ತಿರಲಿಲ್ಲ. ಬಂದ ಒಬ್ಬಿಬ್ಬರೂ ಕುಳಿತುಕೊಳ್ಳದೆ ಹಾಗೆಯೇ ಹಾಯ್ದು ಅಕ್ಕಪೇಟೆಗೋ, ರೇಲ್ವೆ ಸ್ಟೇಷನ್ನಿಗೋ ಹೊರಟು ಹೋಗುತ್ತಿದ್ದರು. ರಾಮಿ 'ಇನ್ನೂ ಒಂದು ಏಕಾದಶಿಯೋ?' ಎಂದುಕೊಂಡು ಪಾರ್ಕಿನ ಪ್ರೇತದಂತೆಯೇ ಸುಳಿದಾಡುತ್ತಿದ್ದಳು ಇಲ್ಲ, ಅವಳ ಅದೃಷ್ಟ ಅಷ್ಟು ಕೆಟ್ಟದ್ದಾಗಿರಲಿಲ್ಲ. ಆಗೋ! ಅಲ್ಲೊಬ್ಬ ಧರ್ಮಾಂಬುಧಿ ಕೆರೆಯ ಮೆಟ್ಟಿಲನ್ನಿಳಿದು ಬರುತ್ತಿದ್ದಾನೆ! ಹುಂ! ಬಂದವನು ದಾರಿಯಲ್ಲಿ ರಾಮಿಯನ್ನು ಇದಿರಾಗಿ ಹಾಯ್ದು

ಪ್ಪಿಸಿ ನೋಡಿದ. ಅವಳ ಎದೆ ಕುಣಿಯಿತು. ಅವಳು ಹಿಂತಿರುಗಿ ನೋಡಿದಳು. ಅವನೂ ನೋಡುತ್ತಿದ್ದ! ತಾನು ನಕ್ಕಳು. ಅವನೂ ನಕ್ಕ—ವಿಚಿತ್ರವಾಗಿ, ಮುಂಕಾಗಿ. ರಾಮಿಗೆ ನೂರಾರು ಗಂಡಸರ ನಗು ತಿಳಿದಿದ್ದರೂ ಇದು ಹೊಸದಾಗಿದ್ದಿತು. ಇದರಲ್ಲಿ ಆಸೆ ಇರಲಿಲ್ಲ, ಅಭ್ಯಾಸವಿರಲಿಲ್ಲ, ಇಂಗಿತವಿರಲಿಲ್ಲ. ಏನೋ ಒಂದು ಸೋಜಿಗ ಇತ್ತು. ಕೊಂಚ ಅನುಮಾನಿಸಿ ಹಾಗೇ ನಿಂತಳು. ಅವನು ನಾಲ್ಕು ಹೆಜ್ಜೆ ಹೋಗಿ ದೀಪದ ಕಂಬದ ಬಳಿಯ ಬೆಂಚಿನ ಮೇಲೆ ಕುಳಿತ. ಇವಳೂ ಹೋಗಿ ಕಂಬದ ಇನ್ನೊಂದು ಕಡೆಯ ಬೆಂಚಿನ ಮೇಲೆ ಕುಳಿತಳು.

ಅವನು ಸುಮಾರು ನಲವತ್ತು ವರ್ಷದವನಂತಿದ್ದ. ಆದರೆ ಅವನ ಅಕಾಲ ಮುಪ್ಪಿನ ಮುದ್ರೆಯಿಂದ ಇನ್ನೂ ಕಡಿಮೆ ವಯಸ್ಸಿನವನಿರಬೇಕೆಂದು ರಾಮಿ ಊಹಿಸಿದಳು. ಅಸಾಮಿ ಆಕಾರದಲ್ಲಿ ತಿಳ್ಳಗೆ ಕುಳ್ಳಗೆ ಬಡಕಲು ಗೂಬೆಯ ಹಾಗಿದ್ದ. ಮುಂತಲೆ ಬೋಳಾಗಿದ್ದಿತು. ಮೂರು ದಿನದ ಅರೆಸರತ ಗಡ್ಡವೂ ಕೆನ್ನೆಯ ಹಳ್ಳಗಳನ್ನು ಮುಚ್ಚಲಾರದೆ ಇದ್ದುವು. ಬೆರಗುಬೆರಗಾದ ದುಂಡುಕಣ್ಣುಗಳೇ ಅವನ ಮುಖಕ್ಕೆ ಗೂಬೆಯ ಹೋಲಿಕೆಯನ್ನು ಕೊಟ್ಟಿದ್ದುವು. ಕತ್ತಿನ ಹತ್ತಿರವೂ ತೋಳುಗಳ ಕೊನೆಯಲ್ಲಿಯೂ ಹರಿದು ಜುಂಗಾಗಿದ್ದ ಬೂದಿಬಣ್ಣದ ಓಬಿರಾಯನ ಕಾಲದ ಫ್ಲೀಸು ಕಾಲರಿನ ಕೋಟೂ, ಮುಂಕು ಹಿಡಿದಿದ್ದ ಪೇಟು ಕಂಚೆಯೂ, ಮೂಳೆ-ಚರ್ಮದ ಕಣಿಗಾಲು ತೊಡೆಗಳನ್ನು ಜೋಡಿಸಿ ಬೆಂಚಿನ ಮೇಲೆ ಕುಳಿತಿದ್ದ ರೀತಿಯೂ ಈ ಹೋಲಿಕೆಯನ್ನು ಹೆಚ್ಚಿಸುತ್ತಿದ್ದುವು. ರಾಮಿ ಅವನನ್ನು ನೋಡಿಯೂ "ನನಗೆ ಎಲ್ಲಿ ತಪ್ಪಿಸಿಕೆ? ಪಾಲಿಗೆ ಬಂದದ್ದೇ ಪರಮಾನ್ನ. ಈ ವರೆಗೆ ಎಂಥೆಂಥವರನ್ನು ಕಂಡಿದ್ದೇನೆ!" ಎಂದು ತನ್ನನ್ನು ಸಮಾಧಾನಪಡಿಸಿಕೊಂಡಳು. ಇದೂ ಅಲ್ಲದೆ ಈತ ಶ್ರೀಮಂತನಾಗಿರುವುದಿರಲಿ, ಸಾಮಾನ್ಯನೂ ಅಲ್ಲ; ಬಡವನೇ ಎಂದು ಅವಳಿಗೆ ತೋರದೆ ಇರಲಿಲ್ಲ. ಆದರೇನು? ಎರಡು ಮೂರು ರೂಪಾಯಿ ಸಿಕ್ಕದೆ ಇರುತ್ತದೆಯೆ? ಇನ್ನೆರಡು ದಿನಗಳನ್ನು ತಳ್ಳಿದರಾಯಿತು. ಮುಂದಿನ ಭವಿಷ್ಯ ಮುಂದೆ. ರಾಮಿ ಹೀಗೆ ಯೋಚಿಸಿಕೊಂಡು ತನ್ನ ಬಲೆಯನ್ನು ಬೀಸಿದಳು.

ಮೊದಲನೆಯ ಮೆಟ್ಟಿಲಾಗಿ ತನ್ನ ಕೈಚೀಲವನ್ನು ತೆಗೆದು, ಒಂದೊಂದಾಗಿ ಸೌಂದರ್ಯ ಸಲಕರಣೆಗಳನ್ನು ತೆಗೆದು, ಚೀಲದ ಮೇಲಿನ ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಮುಖಕ್ಕೆ—ಮುಖ್ಯವಾಗಿ ಮೂಗು ಮೇಲುತುಟಿಗಳಿಗೆ—ಬಿಳಿ ಪೌಡರನ್ನೂ, ಅದರ ಮೇಲೆ ಕೆನ್ನೆಗೆ ಕೆಂಪು ಪೌಡರನ್ನೂ 'ಪಫ್' ಇಂದ ಹಾಕಿಕೊಂಡು, ತುಟಿಯ ರಂಗನ್ನು ತಿದ್ದಿಕೊಂಡಳು. ತಾನು ಹೀಗೆ ಮಾಡುವಾಗ ಅತ ತನ್ನ ಕಡೆಗೇ ಅತ್ಯಾಶೆಯ ದೃಷ್ಟಿಯಿಂದ ನೋಡುತ್ತಿದ್ದುದನ್ನು ತಿರುಗಿದ ಕನ್ನಡಿಯಲ್ಲಿ ಕಂಡುಕೊಂಡು ಒಳಗೊಳಗೇ ಹಿಗ್ಗಿದಳು ಆದರೆ ತಾನು ಅವನ ಕಡೆಗೆ ತಿರುಗಿದಾಗ ಅವನು ಬೆಚ್ಚಿದಂತೆ ಬೇರೆ ಕಡೆಗೆ ತಿರುಗಿದುದನ್ನು ಕಂಡು, ಅಷ್ಟು ನಿರುತ್ಸಾಹವಾಯಿತು. ಆದರೆ ತಾನು ನೋಡದಿದ್ದಾಗ ಅವನು ಕದ್ದು ನೋಡುತ್ತಿದ್ದುದನ್ನು ಬಲ ಪಡಿಸಿಕೊಂಡು "ಎಲ್ಲೋ ಹಳೆಯ ಕುಳ—ಪಾಪ!" ಎಂದು ತನ್ನೊಳಗೇ ನಕ್ಕಳು. ಪ್ರಯಾಸಪಟ್ಟು ಒಂದು ಬಾರಿ ಅವನ ನೋಟವನ್ನು ಸಂಧಿಸಿ ನಸುನಕ್ಕಳು. ಅವನು ವಾಪಸು ನಗಲಿಲ್ಲ. ಆದರೆ ಅವನ ಸಪ್ಪೆಮುಖಕ್ಕೆ ಕೆಂಪೇರಿದಂತೆ ಕಂಡುದುದನ್ನೇ ರಾಮಿ ತನಗೆ ಬೇಕಾದ ಉತ್ತರವೆಂದು ಭಾವಿಸಿದಳು. "ಬಡಪಾಯಿಗೆ ಅದೆಲ್ಲ ಏನು ಗೊತ್ತಿಲ್ಲ—ಕಲಿಸಬೇಕು" ಎಂದುಕೊಂಡು ಎದ್ದು, ಅವನ ಬೆಂಚಿಗೇ ಹೋಗಿ ಕುಳಿತುಕೊಂಡಳು. ಅವನು ಕೊಂಚ ಮಿಸುಕಾಡಿದ, ಅಷ್ಟೆ.

ರಾಮಿ ಸುತ್ತಲೂ ನೋಡಿದಳು. ಹತ್ತಿರದ ಜನರೆಲ್ಲ ಹೊರಟು ಹೋಗಿದ್ದರು. ಇನ್ನೂ ಹತ್ತಿರಕ್ಕೆ ಸರಿದುಕೊಂಡಳು. ತಡವರಿಸಲು ಇಷ್ಟವಾದ ನಾಯಿಯ ಸೋಂಕಿಗಾಗಿ ಬೆದರುವ ಸಣ್ಣ ಮಗುವಿನಂತೆ ಅವನು ತಿರುಗಿ ನೋಡಿದನು.

"ಯಾವ ಊರು?" ಅವಳು ನಸುನಗುತ್ತ ಕೇಳಿದಳು.

"ಆ!" ಎಂದು ತಡವರಿಸಿ "ಹ—ಇದೇ" ಎಂದ ಅವನು.

"ಈ ಪಾರ್ಕಿಗೆ ಬರೋದು ಹೊಸದೇನೋ?"

"ಇಲ್ಲ....ಆಗಾಗ...." ಮುಂದೆ ಮಾತು ಹೊರಡಲಿಲ್ಲ.

"ಮತ್ತೆ ನಾನು ಕಂಡೇ ಇಲ್ಲವಲ್ಲ! ನೀವು ನನ್ನ ನೋಡಿದ್ದಿರಾ—ಯಾವಾಗಲಾದರೂ?"

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖಾಂತರ ಮಕ್ಕಳ ಯಕೃತ್ತು ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ಕೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿವ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಸ್ಪನುಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿವೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ಮೆಸರ್ಸ್: ಮಿರ್ಜಾನಕರ ಮತ್ತು ಕಂಪನಿ

"ಹುಂ. ಒಂದೆರಡು ಸಾರಿ!" ಅವನು ಸ್ವಲ್ಪ ಬಾಯಿ ಬಿಟ್ಟು ತಲೆಯಾಡಿಸಿದ.

"ಹಾಗೋ? ಹಾಗಾದರೆ ನಾವು ಪರಿಚಿತರು ಅಂತಲೇ ಅನ್ನಿ" ರಾಮಿ ಸ್ಪಷ್ಟವಾಗಿಯೇ ನಕ್ಕಳು.

ಅವನು ಬಾಯನ್ನೆಲ್ಲ ತೆರೆದು ಹಲ್ಲುಕಿರಿದ. ಹಲ್ಲು ವಕ್ರವಾಲು. "ಪಾಪ, ಒಬ್ಬರೇ ಕೂತಿದ್ದೀರಲ್ಲ; ಸ್ವಲ್ಪ ಜೊತೆಗೆ ಇರೋಣ—ಮಾತಾಡೋಣ—ಅಂತ ಬಂದೆ. ಆಗಬಹುದೆ?"

"ಅಯ್ಯೊ, ಅಯ್ಯೊ. ಹ್ಹ! ಹ್ಹಾ!"

"ಯಾಕೆ, ಇಷ್ಟು ಬಡವಾಗಿದೀರಲ್ಲ—ಪಾಪ! ಖಾಯಿಲೆ ಗೀಯಿಲೆ?"

"ಇಲ್ಲ. ಇಲ್ಲ. ನನ್ನ ಸ್ವಭಾವವೇ ಹಾಗೆ. ಬಹಳ ನೊಂದ ಬಾಳು."

"ಪಾಪ! ಪಾಪ! ಹಾಗೇ ಕಾಣುತ್ತೆ. ಯಾಕೆ ಸಂಸಾರದಲ್ಲಿ ಸುಖ.."

"ಅಯ್ಯೊ, ನಂಗೆಲ್ಲಿಯ ಸಂಸಾರ?"

"ಯಾಕೆ, ಹೆಂಡತಿ ತೀರಿ ಗೀರಿ...."

"ಮದುವೆಯೇ ಆಗಲಿಲ್ಲ."

"ಮದುವೆ ಆಗಲಿಲ್ಲ!"

"ಹುಂ."

"ಕಾರಣ?"

"ನಮ್ಮಪ್ಪ ಅವ್ಯ ಎಷ್ಟೋ ಕಷ್ಟಪಟ್ಟರು. ಯಾವ ಹುಡುಗಿಯೂ ಸಿಕ್ಕಲಿಲ್ಲ. ನಂಗೆ ವಯಸ್ಸಾದ ಮೇಲಂತೂ ಸಾಧ್ಯ ಆಗಲಿಲ್ಲ."

"ಛೆ! ಛೆ! ವಿಚಿತ್ರ!"

"ಆಶ್ಚರ್ಯದ ಮಾತು. ಆದರೆ ನಿಜವಾಗಿ ನಾನು ಅದೃಷ್ಟಹೀನ."

"ಹಾಗಾದರೆ ಈವರೆಗೂ ಒಂಟಿಯಾಗಿಯೇ ಜೀವನ?"

"ಜಸ್ಟ್. ಮತ್ತೇನು?"

"ಪಾಪ, ಬಾಳೇ ಪೂರ್ಣವಾಗಲಿಲ್ಲ."

"ಅವನು ಸುಮ್ಮನೆ ತಲೆಯಾಡಿಸಿದನು." ಆದರೆ ಮುದುಕನಾಗದಿದ್ದರೇನು? ರಾಮಿ ಅರ್ಥಪೂರ್ಣವಾಗಿ ನಕ್ಕಳು.

"ನಂಗೆ ಭಯ!"

"ಹ್ಹ! ಅದರಲ್ಲೆಲ್ಲ ಏನು ಭಯ!" ಅವಳು ಗಟ್ಟಿಯಾಗಿ ನಕ್ಕಳು.

"ನಾನು ಯಾರಿಗೂ ಬೇಡ."

"ಛಿ; ಏನು ಮಾತು! ಇಗೊ, ನಾನಿದ್ದೀನಿ—ನಿಮ್ಮ ಸೇವೆಗೆ."

"ಏನು!" ಈಗ ಅವನು ಅವಳನ್ನು ದಿಟ್ಟಿಸಿ ನೋಡಿದ.

"ಹುಂ!" ಅವಳು ತಲೆಯಾಡಿಸಿದಳು.

"ಯಾಕೆ, ಈ ಹಾಸ್ಯ?" ಅವನು ನಂಬಲಿಲ್ಲ.

"ಇಲ್ಲ. ನಿಜವಾಗಿ."

ರಾಮಿ ಭರವಸೆಕೊಡುವಂತೆ ಅವನ ಕೈ ಮುಟ್ಟಿದಳು. ಅದು ಸುಡುತ್ತಿತ್ತು.

"ನಿಮ್ಮ ಕೈ ಇಷ್ಟು ಬಿಸಿ! ಜ್ವರಗಿರ....?"

"ಇಲ್ಲ. ಕೈಸೋಕಿ ಹಾಗಾಯಿತು" ಅವನು ಮೊದಲನೆಯ ಬಾರಿಗೆ ಸರಳವಾಗಿ ಮಾತಾಡಿ ನಕ್ಕ.

"ಹ್ಹ! ಹ್ಹಾ!" ಅವಳೂ ನಕ್ಕು ಅವನ ಕೈ ಒತ್ತಿದಳು. ಸೇರಿದ ಕೈಗಳನ್ನು ಬೇರ್ಪಡಿಸಲಿಲ್ಲ.

ಆ ಕ್ಷಣದಿಂದ ಅವನು ಹೊಸ ಮನುಷ್ಯನಾದ. ಅವನ ಬಿಗಿತ ಸಡಿಲವಾಯಿತು, ಸುಲಭವಾಯಿತು. ನಾಲಗೆ ಬಿಚ್ಚಿತು. ತನ್ನ ದಾರುಣವಾದ ಒಣ ಆತ್ಮಕಥೆಯನ್ನು ಹೇಳಿಕೊಂಡ. ಅವಳು ಕೇಳುತ್ತ ಕನಿಕರಿಸಿದಳು, ಸಂತಯಿಸಿದಳು. ಅವರು ಚಿರಪರಿಚಿತರಂತೆ ಒತ್ತಿ ಕುಳಿತು, ಅತ್ಮೀಯತೆಯಿಂದ ಎಷ್ಟೋ ಹೊತ್ತು ಮಾತನಾಡಿದರು. ಮಧ್ಯೆ ಮಧ್ಯೆ ಅಷ್ಟು ಸರಸವೂ ನಡೆಯಿತು. ಮರಳುಗಾಡಿನಲ್ಲಿ ದಾರಿ ತಪ್ಪಿದ ಪ್ರಯಾಣಿಕ 'ಓಯಸಿಸ್' ಕಂಡಂತೆ, ಮಗುವು ಮೊದಲನೆಯ ಆಟದ ಸಾಮಾನನ್ನು ಕಂಡಂತೆ, ಅವನು ಮೈಮರೆತು ಅವಳೊಡನೆ ಹುಡುಗಾಟವಾಡಿದ. ಬಗ್ಗಡದ ನೀರಾದರೇನು; ಅದೂ ನೀರೇ. ಗಂಟಲು ಒಣಗಿದಾಗ

ಕೂಡ ಎಷ್ಟು ಹಿತ! ಈಗಾಗಲೇ ಎಷ್ಟೋ ತರದ ಸರಸಗಳನ್ನು ಸಹಿಸಿಕೊಂಡಿದ್ದ ರಾಮಿ, ಇವನ ಸರಸವನ್ನೂ ಸಹಿಸಿಕೊಂಡಳು. ಪುತ್ತಷ್ಟಕ್ಕೆ ಉತ್ತೇಜನವನ್ನೂ ಕೊಟ್ಟಳು. ಆದರೆ ಅವಳ ಗಮನ ಹೊತ್ತಿನ ಮೇಲಿನಿಂದ ಜಾರಿ ಹೋಗಲಿಲ್ಲ. ಎಷ್ಟು ಹೊತ್ತಿಗೆ ಮನೆಗೆ ಹೋದಾಳು; ಯಾವಾಗ ಆ ಆಟವೆಲ್ಲ ಮುಗಿದೀತು, ಎರಡು ದಿನದ ಕಷ್ಟ ಕಳೆದೀತು—ಎಂಬ ಆತುರವೂ ಇಳಿದಿರಲಿಲ್ಲ. ಹೀಗಿದ್ದು ಎಂಟುಗಂಟೆಯ ಗುಂತುಕಲ್ಲಿನ ರೈಲು ಕೂಗಿದೊಡನೆ ರಾಮಿ " ಇನ್ನು ಮನೆಗೆ ಹೋಗೋಣ " ಎಂದು ಹೇಳಿದಳು. ಅವನು ಆವೇಶದಲ್ಲಿ " ಓಹೋ " ಎಂದು ಒಪ್ಪಿಕೊಂಡ.

೩

ರಾಮಿಯ ಬೀದಿ ಇನ್ನೂ ಬಹಳ ಗೆಲುವಾಗಿತ್ತು. ಎರಡು ಕಡೆಯಲ್ಲೂ ಬೇಕಾದಷ್ಟು ನೋಟ, ಆಟ. ಈ ಜೋಡಿ ಪಾಯ್ದುಂತೆ ನಗುವಿನ ಕೆಸರೆರಚು, ಮಾತಿನ ಗುಜುಗುಜು, ಹೆಚ್ಚಾಗಿ ಟುಂಬಾಲಿಸಿದಂತೆ ರಾಮಿಗೆ ತೋರಿತು. ' ಗೂಬೆ-ಕೊಕ್ಕರೆ ' ಎಂಬ ಮಾತೂ ಕೇಳಿಸಿತು. ಆದರೆ ಅವಳು ಯಾವುದನ್ನೂ ಲಕ್ಷ್ಯಕ್ಕೆ ತಂದುಕೊಳ್ಳಲಿಲ್ಲ. ಅವನಂತೂ ಮೈಮರೆದು ಸ್ವರ್ಗದಲ್ಲಿದ್ದ.

ಅವರು ಮನೆಯನ್ನು ಸಮೀಪಿಸಿದಾಗ ಒಳಗೆ ದೀಪ ಇನ್ನೂ ಉರಿಯುತ್ತಿತ್ತು. ಮಕ್ಕಳು ಇನ್ನೂ ಮಲಗಿರಲಿಲ್ಲ. ರಾಮಿಯೂ ಅವನೂ ಅವಳ ಸರ್ವಸ್ವವಾದ ಆ ಒಂದೇ ಒಂದು ಕೋಣೆಯನ್ನು ಪ್ರವೇಶಿಸಿದಾಗ, ಮಕ್ಕಳು ಗಟ್ಟಿಯಾಗಿ ಓದುತ್ತಿದ್ದರು. ರಾಮಿ ಗಂಡುಸನ್ನು ತೋರಿಸಿ " ಇವರು ನಿಮ್ಮ ಚಿಕ್ಕಪ್ಪ " ಎಂದು ಪರಿಚಯ ಮಾಡಿಕೊಟ್ಟು " ನೋಡಿ, ಚಿಕ್ಕಪ್ಪ ಬಹಳ ದಣಿದು ಬಂದಿದಾರೆ. ಮಲಗಿಕೋತಾರೆ. ಇವತ್ತಿಗೆ ಓದು ಸಾಕು. ನೀವೂ ಹೋಗಿ ಮಲಗಿಕೊಳ್ಳಿ " ಎಂದು ಏಳಿದಳು. ಮಕ್ಕಳು ಕೂಡಲೆ ಪುಸ್ತಕಗಳನ್ನು ಮುಚ್ಚಿ, ನೆಲದ ಮೇಲೆ ಹಾಸಿದ್ದ ಹಾಸಿಗೆಗಳಿಗೆ ಉರುಳಿಕೊಂಡರು. ರಾಮಿ ತನ್ನ ಮಂಚಕ್ಕೂ ಆ ಹಾಸಿಗೆಗಳಿಗೂ ಮಧ್ಯೆ ಇದ್ದ ಪರದೆಯನ್ನು ಎಳೆದು ಮರೆಮಾಡಿದಳು.

" ಎಂಥ ಮುದ್ದು ಮಕ್ಕಳು ! " ಗಂಡಸು ಮೆಚ್ಚಿಕೊಂಡ.

" ನಿಜವಾಗಿ ! " ರಾಮಿಗೆ ಬಹಳ ಹೆಮ್ಮೆಯಾಯಿತು.

" ನನಗೆ ಇಂಥ ಹುಡುಗರಿದ್ದರೆ ಎಷ್ಟು ಜೆನ್ನಾಗಿರುತ್ತಿತ್ತು ! "

" ಇಲ್ಲಿ ನೋಡಿ—ಈ ರತ್ನ " ರಾಮಿ ಮಂಚದ ಬಳಿ ತೂಗಾಡುತ್ತಿದ್ದ ತೊಟ್ಟಿಲಿಗೆ ಬಗ್ಗಿದಳು.

" ನೀನು ಪುಣ್ಯವಂತೆ " ಅವನೂ ಬಗ್ಗಿ ನೋಡುತ್ತ ಹೇಳಿದ.

" ಆದೇನೋ ನೋಡಬೇಕು. ಕೂತುಕೊಳ್ಳಿ " ಅವಳು ಯೋಚಿಸುತ್ತ ಹಾಸಿಗೆ ಬಿಚ್ಚಿದ್ದ ಮಂಚದ ಕಡೆಗೆ ಕೈ ತೋರಿಸಿದಳು. ಅವನು ಕುಳಿತ.

ಆ ಕ್ಷಣದಲ್ಲಿ ಮಗು ' ಕುಸಕುಸ ' ಅಳುತ್ತ ಎದ್ದಿತು. ರಾಮಿ ಅದನ್ನು ಎತ್ತಿಕೊಂಡು ಮಂಚದ ಮೇಲೆ ಕುಳಿತು, ಸೆರಗು ಮುಚ್ಚಿಕೊಳ್ಳದೆಯೇ ನೊಲೆಯೂಡಿಸಿ, ತೊಡೆಯಾಡಿಸಿ, ಮಗುವನ್ನು ಮತ್ತೆ ಮಲಗಿಸಿ, ತೊಟ್ಟಿಲಿಗಿಟ್ಟು ಮೆಲ್ಲನೆ ಹಂಬಿಟ್ಟಳು. ಇದನ್ನೆಲ್ಲ ಮೂಕನಂತೆ ನೋಡುತ್ತ ಗಂಡಸು ವಿಚಿತ್ರವಾದ ವಿಶೇಷ ಆನಂದವನ್ನು ಅನುಭವಿಸುತ್ತಿದ್ದ. ರಾಮಿ ಮೆಲ್ಲಗೆ " ಗೋಪಾಲ " ಎಂದಳು. ಉತ್ತರ ಬರಲಿಲ್ಲ. " ಮಕ್ಕಳು ಮಲಗಿದರು." ಎಂದು ರಾಮಿ ಲಗುಬಗೆಯಿಂದ ಎದ್ದು ಪರದೆಯ ಅತ್ತಕಡೆಗೆ ಹೋಗಿ, ಗಾಜಿನ ತಟ್ಟೆಯಲ್ಲಿ ತಾಂಬೂಲವನ್ನು ಸಿದ್ಧಪಡಿಸಿಕೊಂಡು ತಂದು ಗಂಡಸಿನ ಮುಂದಿಟ್ಟು, ಗೂಡಿನ ಕನ್ನಡಿಯ ಮುಂದೆ ಹೋಗಿ ನಿಂತು ಸೆರಗಿನ ಬ್ರೋಚನ್ನು ಬಿಡಿಸಿ, ರೌಕೆಯ ಗುಂಡಿಗಳನ್ನು ಒಂದೊಂದಾಗಿ ಮೆಲ್ಲಗೆ ತೆಗೆಯುತ್ತ:

" ತಾಂಬೂಲಕ್ಕೆ ಏನು ಇಡುತ್ತೀರಿ ? " ಎಂದು ನಸುನಗುತ್ತ ಕೇಳಿದಳು.

" ಅ! " ಅವನು ಅಡಿಕೆ ಅಗಿಯುತ್ತ ಅನುಮಾನಿಸಿದುದು ಅವಳಿಗೆ ಕನ್ನಡಿಯಲ್ಲಿ ಕಾಣಿಸಿತು.

" ಏನು ದಕ್ಷಿಣೇ—ಅಂದೆ. ತಟ್ಟೆಯಲ್ಲಿಡಿ" ನಗುತ್ತಲೇ ಖಂಡಿತವಾಗಿ ಹೇಳಿದಳು.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಸೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಜೆನ್ನಾಗಿ ನುಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೬ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ಪಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೫೧ ದಿನಗಳಿಗೆ ಸಾಲಬಹುದಾದ ಲಳ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೬–೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦–೮–೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫–೦–೦ ಅಂಚೆಯವೆಚ್ಚ ೨–೧೩–೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫೫ ರೂ ಮುಂಗಡ ಕಳಿಸಬೇಕು.

ಮೂಲಕ: ವಿ.ಎಸ್. ಕಾಪಸೇ ಮು. ಪೋ. ಮಿರಜ

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಸಿ. ಮಾರಕೋಡ

" ನುತ್ತಿ....." ಅವನ ಬೆರಗು ಗುಡ್ಡೆಕಣ್ಣುಗಳು ಕನ್ನಡಿಯಲ್ಲಿ ಕಂಡವೇ ಹೊರತು, ಹಣ ತೆಗೆದ ಕೈ ಕಾಣಿಸಲಿಲ್ಲ. ರಾಮಿಗೆ ಅವನು ಎಷ್ಟು, ಏನು ಎಂದು ತನುವಾನಿಸುತ್ತಿದ್ದಂತೆ ಭಾಸವಾಯಿತು.

" ಅಷ್ಟು ಇಷ್ಟು ಅಂತಿಲ್ಲ. ನಿಮ್ಮ ಇಷ್ಟ ಬಂದಷ್ಟು, ಇದ್ದಷ್ಟು. ಅಷ್ಟೇ " ರಾಮಿ ತೋಳುಗಳನ್ನು ಹಿಂದಕ್ಕೆ ನೀಡಿ ರೌಕೆಯನ್ನು ನುಣುಚುತ್ತ ಹೇಳಿದಳು.

" ರಾಮಮ್ಮ ! "

" ಏನು ? ಸಂಕೋಚವೇನು ಬೇಡ!"

" ನನ್ನಿಂದ ತಪ್ಪಾಯ್ತು."

" ಏನಂದಿರಿ ? " ರಾಮಿ ಛಳಕು ಹೊಡೆದವಳಂತೆ ನಿಂತಲ್ಲೇ ತಿರುಗಿದಳು.

" ಏನೂ ತಂದಿಲ್ಲ—ಬಡವ "

" ಏನೂ! " ರಾಮಿ ಗಂಟಲಿನಲ್ಲೇ ಗರ್ಜಿಸಿ ಅವನ ಕಡೆಗೆ ಎರಡು ಹೆಜ್ಜೆಯಿಟ್ಟಳು. ದಾರಿದ್ರ್ಯದುಃಖದ ಕಟ್ಟಿಗೆ ಹತ್ತಿಸಿದ ಬೆಂಕಿಗೆ ಆಶಾಭಂಗದ ತುಪ್ಪವೂ ಸುರಿದಂತಾಗಿ, ಕೋಪದ ಭುಗುಭುಗಿಲೆಂದಿತು.

ಗಂಡಸು ಮಂಚದಿಂದ ನೆಗೆದು ಕೆಳಗೆ ನಿಂತ. ಎತ್ತರದ ರಾಜ ಕುಳ್ಳನ ಮುಂದೆ, ಮೇಷ್ಟರು ಹುಡುಗನ ಮುಂದೆ ನಿಂತು ಸಿಡಿಗುಟ್ಟುವಂತೆ " ಎಂಥ ಮನುಷ್ಯರು ನೀವು ? ಮತ್ತೆ ಇಲ್ಲಿ ಯಾಕೆ ಬಂದಿರಿ ? ಆಸೆ ತೋರಿಸಿ ಮೋಸ ! ನಾಚಿಕೆಯಿಲ್ಲವೆ ಥೂ ! " ಎಂದು ಗದರಿಸಿದಳು.

" ಬರಬೇಕು ಅಂತಿರಲ್ಲಿಲ್ಲ ರಾಮಮ್ಮ. ನಿನ್ನ ಸಂಗದಲ್ಲಿ ಇಷ್ಟುದ್ದ ಬಾಳನಲ್ಲಿ ಸಿಕ್ಕಿದ ಒಂದೇ ಒಂದು ಹೆಂಗಸಿನ ಸಂಗವನ್ನ ನಾನು ಮೈಮರೆತು ಹೋದೆ. ಹುಚ್ಚನಾದೆ. ತಪ್ಪು ತಿಳಿದೆ "

" ತಪ್ಪು ತಿಳಿದೆ ! ಹುಂ ! ನನ್ನ ಸಂಜೆಯೆಲ್ಲ ಹಾಳು ! ಯಾರು ಸಿಕ್ಕುತ್ತಾರೆ ಇನ್ನು ? ಇನ್ನೆಷ್ಟು ಹೊತ್ತು ವರಂಡಾದಲ್ಲಿ ಕಾಯಬೇಕೋ ! ಹಾಗೂ ನಾಳೆ ಉಪವಾಸವೇಯೋ—ನಿಮ್ಮಿಂದ " ರಾಮಿ ರೇಗಿ ಹೋದಳು. ಆ ಬಡಕಲನಿಗೆ ಎರಡು ಬಾರಿಸಲೂ ಬೇಕು ಅನ್ನಿಸಿತು ಅವಳಿಗೆ. ಆದರೆ ಅಷ್ಟಕ್ಕೆ ಹೋಗದೆ

" ಸಾಕು ! ಹೋಗಿ ! " ಎಂದಳು.

" ಇಗೋ ಹೋಗುತ್ತೀನಮ್ಮ. ನಾನು ಅದೃಷ್ಟಹೀನ ಅಂತ ಗೊತ್ತಿತ್ತು. ನಾನು ಯಾರಿಗೂ ಬೇಡ; ನಿನಗೂ ಬೇಡವಾದೆ ! " ಅವನು ದೀನ ಕ್ಷೀಣ ಸ್ವರದಲ್ಲಿ ಹೇಳಿ ಬಾಗಿಲಿಗೆ ಹೊರಟನು.

ರಾಮಿಯೂ ಅವನ ಹಿಂದೆ ಹೋಗಿ, ಬಾಗಿಲಿನ ಹಿಂದಿನ ಸ್ವಿಚ್ ಅಮುಕಿ, ವರಾಂಡದ ಕೆಂಪು ದೀಪವನ್ನು ಹೆಚ್ಚಿ, ಕದವನ್ನು ಮುಚ್ಚಲು ಕೈ ಹಾಕಿದಳು. ಹೊರಗಡೆ ಬೀದಿಯಲ್ಲಿ ಇನ್ನೂ ಜನರು ಸುಳಿದಾಡುತ್ತಿದ್ದುದು ಕಂಡಿತು. ಹಾಗೇ ತನ್ನ ಮುಂದೆ ಅಲ್ಲೇ ಆ ಗಂಡಸಿನ ಮುದುರಿ ಮುರಿದು ಹೋದ ಶರೀರ ಮೆಟ್ಟಲನ್ನಿಳಿಯುತ್ತಿದ್ದುದೂ ಅವಳಿಗೆ ಕಂಡಿತು. ಆ ಕ್ಷಣದಲ್ಲಿ ಅವನ ಕತೆಯೆಲ್ಲ ಅವಳ ಮನಸ್ಸಿನಲ್ಲಿ ಹಾಯಿತು. ಹೆಂಡತಿ ಮಕ್ಕಳನ್ನೇ, ಹೆಣ್ಣಿನ ಸಂಗವನ್ನೇ ಕಾಣದ ಒಂಟಿ ಬಾಳು ! ಹಾಳು ! ಕದ ಮುಚ್ಚುವುದಕ್ಕೆ ಹೋಗಿದ್ದ ಕೈ ಕೆಂಪುದೀಪವನ್ನು ಅರಿಸಿತು. ಅವಳ ಕೊರಳು ಪಿಸಿಮಾತಿನಲ್ಲಿ " ಏ ! ಬನ್ನಿ ! " ಎಂದು ಅವನ ಕಡೆಗೆ ಕೂಗಿತು. ಅವನು ಹಿಂತಿರುಗಿ ನೋಡಿ ಅನುಮಾನಿಸಿ ಇನ್ನೂ ಇಳಿಯುತ್ತಲೇ ಇದ್ದ.

" ಬನ್ನಿ ಅಂದೆನಲ್ಲ, ಬನ್ನಿ ! " ರಾಮಿ ಕೈ ಬೀಸಿದಳು.

ಅವನು ಆಶ್ಚರ್ಯದಿಂದ ಮೇಲಕ್ಕೆ ಮತ್ತೆ ಹತ್ತಿಬಂದ. " ಏನು ? " ಎಂದು ಗಾಬರಿಯಿಂದ ತೊದಲಿದ. ರಾಮಿ ಅವನ ಕೈ ಹಿಡಿದು ಒಳಕ್ಕೆ ಬರಮಾಡಿಕೊಂಡು,

" ಪರವಾಗಿಲ್ಲ. ರಾತ್ರಿ ಇಲ್ಲೇ ಇದ್ದು ಹೋಗಿ ! " ಎಂದು ಬಾಗಿಲನ್ನು ಮುಚ್ಚಿಕೊಂಡಳು.

ಏರಿಳಿತಗಳ ಅಳತೆಗೋಲು

ಶ್ರೀ. ಜಾಲಿಹಾಳ ಮೋಹನರಾಯರು, ಬಿ. ಕಾಮ್., ಜಿ. ಡಿ. ಸಿ. ಎ. ಕಲ್ಲೋಳ್ಕರವಾಡಿ

★

ಲೆಕ್ಕಾಚಾರವಿಲ್ಲದವನ ಬಾಳು ದಿಕ್ಕುಗೇಡಿಯಾಗುತ್ತದೆ. ಲೆಕ್ಕವಿಟ್ಟು ನಡೆವವನ ಬಾಳು ನಕ್ಕು ನಗಿಸುತ್ತಿರುತ್ತದೆ. ಇಂದಿನ ಬಲ್ಲಿದರು ಲೆಕ್ಕಾಚಾರಗಳನ್ನು ಕಂಡುಹಿಡಿಯುವುದು ಅಳತೆಗೋಲಿನ ಅಂಕೆ-ಸಂಖ್ಯೆಗಳಿಂದ.

ಬೆಲೆಗಳ ಏರಿಳಿತಗಳನ್ನು ನೀರಿಕ್ಷಿಸುವಾಗ ಅಂಕೆಗಳ ಸಾಲುಗಳು ಸುಳಿಯುತ್ತವೆ. ಈ ಅಂಕೆಗಳು ನಮಗೆ ಬೆಲೆಗಳ ಏರಿಳಿತಗಳನ್ನು ಸೂಚಿಸುತ್ತವೆ. ಇವುಗಳಿಗೆ ಸೂಚಿಅಂಕೆ (ದರ್ಶಕ ಅಂಕೆ= Index Number) ಗಳೆಂದು ಹೆಸರು.

ಈಗ ಸಾಮ್ರಾಜ್ಯಗಳು ಕುಸಿದು ಬಿಳುತ್ತಲಿವೆ. ಬಂಡವಲದ ಸಾಮ್ರಾಜ್ಯ, ಅಮೇರಿಕೆಯಲ್ಲಿ ಇನ್ನೂಬದುಕಿದೆಯಾದರೂ ಜಗತ್ತೇ ಸಾಮ್ಯವಾದದ ಕಡೆಗೆ ಸಾಗುತ್ತಿದೆ. ಆದರೆ ಬಂಡವಲದ ಗಂಡುಮೆಟ್ಟಾದ ಅಮೇರಿಕೆಯಿಂದ ಸಾಮ್ಯವಾದದ ಸ್ವರ್ಗವಾದ ರಶಿಯದ ನಡೆಗೆ-ಇಡಿಯ ಜಗತ್ತಿಲ್ಲ ಈಗ ಅಂಕೆಗಳ (Statistical figures) ಅಂಕಿತಕ್ಕೆ ಒಳಗಾಗಿದೆ. ಅಂಕೆ-ಸಂಖ್ಯೆಗಳೇ ಎಲ್ಲ ಯೋಜನೆಗಳ ತಳಹದಿ. ನಮ್ಮ ಪ್ರಯತ್ನದ ಫಲಗಳಿಗೂ ಅಂಕೆ-ಸಂಖ್ಯೆಗಳೇ ಒರೆಗಲ್ಲು. ಜೋಗದ ವಿದ್ಯುತ್ಕೇಂದ್ರದಿಂದ ಕರ್ನಾಟಕದ ಪಟ್ಟಣಗಳಿಗೆ ವಿದ್ಯುತ್ಪೂರಯಿಕೆಯಾಗಬೇಕಾದರೆ, ಕಲೆಹಾಕಿದ ಅಂಕೆ-ಸಂಖ್ಯೆಗಳ ಆಧಾರದಿಂದ, ಅಗ್ಗವಾಗಿ ಪೂರಯಿಸಲಿಕ್ಕೆ ಸಾಧ್ಯವಿದೆಯೆಂದು ತಜ್ಞರು ಅಭಿಪ್ರಾಯ ಪಟ್ಟರೆ ನಾತ್ರ ಆ ಕೆಲಸ ನಡೆಯುವುದು. ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಯೋಜನೆ ಯಶಸ್ವಿಯಾಗಿಲ್ಲ— ಎಂದು ಟೀಕೆ ನಡೆದಿದೆಯಲ್ಲ! ಹುಟ್ಟುವಳಿಯನ್ನು ತೋರಿಸುವ ಅಂಕೆಗಳೇ ಈ ಟೀಕೆಗಳಿಗೆ ತಳಹದಿ.

ಸಂಸ್ಥೆ-ಸಂಸ್ಥೆಗಳು, ಉದ್ಯಮಗಳು, ವಿದೇಶ ವ್ಯಾಪಾರ, ನಾಡಿನ ಹುಟ್ಟುವಳಿ—ಇವುಗಳ ಏಳ್ಗೆ, ಪ್ರಗತಿ, ಮುನ್ನಡೆ ತಿಳಿಯಬೇಕಾದರೆ ಇಲ್ಲವೆ ಅವನತಿ, ಹಿನ್ನಡೆ ಕಣ್ಣಿಗೆ ಕಟ್ಟಬೇಕಾದರೆ, ಈ ಅಂಕೆ-ಸಂಖ್ಯೆಗಳೇ ಕನ್ನಡಿ. ಬ್ಯಾಂಕುಗಳು- ತಮ್ಮ ಠೇವುಗಳು ಬೆಳೆದಿವೆಯೇ? ಕೊಡುವ ಸಾಲ ಹೆಚ್ಚಾಗಿದೆಯೇ? ಬಡ್ಡಿಯಿಂದ ಬರುವ ಆದಾಯ (Interest) ಕರಗುತ್ತಿದೆಯೇ? ಕಡಿಮೆಯಾಗಿದೆಯೇ? ಉಡಳಿತದ ವೆಚ್ಚ ಹೆಚ್ಚಾಗಿ 'ನಿವ್ವಳ' ಲಾಭ ಕಡಿಮೆಯಾಗಿದೆಯೇ?—ಇವನ್ನೆಲ್ಲ ತಿಳಿಯಬೇಕಾದರೆ, ಅಂಕೆಗಳೆ ಗತಿ. ಕಾವ್ಯ ಹಾಕಿದ ಬಂಡವಲು ಬೆಳೆಯುತ್ತಿದೆಯೇ ಕರಗುತ್ತಿದೆಯೇ? ವ್ಯವಹಾರ ಏರಿಕೆಯಲ್ಲಿದೆಯೇ? ಲಾಭ ಕಳೆದ ವರುಷಕ್ಕಿಂತ ಹೆಚ್ಚಾಗಿದೆಯೇ ಕಡಿಮೆಯಾಗಿದೆಯೇ?—ಎಂಬುದನ್ನೆಲ್ಲ ವರ್ತಕರು ತಿಳಿಯಬೇಕಾದರೆ, ಅವರು ಅಂಕೆಗಳಿಗೇ ಶರಣೆನ್ನಬೇಕಾಗುತ್ತದೆ.

ಮಧ್ಯಮವರ್ಗದವರು ತೂಕದ ಮೇಲೆ ಇರಬೇಕಾಗುತ್ತದೆ. ಇಲ್ಲವಾದರೆ ಆಯವ್ಯಯ ಬಾಯಿಗೂಡುವುದೇ ಕಠಿಣ. ಗಳಿಕೆಯ ಬಾಬುಗಳು ಒಂದೆರಡೇ ಇದ್ದರೂ ವೆಚ್ಚದ ಅಂಕೆಗಳನ್ನು ನಿಯಂತ್ರಿಸಿ, ಹಾಸಿಗೆಯಿದ್ದಷ್ಟು ಕಾಲು ಚಾಚಬೇಕಾಗುತ್ತದೆ. ತಪ್ಪಿದರೆ ಸಾಲದ ಹೊರೆ ಮೈಮೇಲೆ ಬಂತೇ.

ಈಗ ಕಾರಖಾನೆಗಳ ಕೂಲಿಕಾರರಿಗೆ ಸಿಕ್ಕುವ ತುಟ್ಟಿಭತ್ತೆಗೂ ಜೀವನದ ವೆಚ್ಚವನ್ನು ಸೂಚಿಸುವ ಸೂಚಿಅಂಕೆಗಳಿಗೂ ತಳಕು ಹಾಕಿರುವುದರಿಂದ, ಸೂಚಿಅಂಕೆಗಳಿಗೆ ಕೂಲಿಕಾರರ ದೃಷ್ಟಿಯಿಂದ ಬಹಳ ಮಹತ್ತ್ವ ಬಂದಿದೆ. ಹೀಗೆ ಸರಕಾರದಿಂದ ಬಡವ-ಬಲ್ಲಿದರವರೆಗೆ ಎಲ್ಲರೂ ಅಂಕೆಗಳಿಗೆ ಅಂಕಿತರಾಗಿದ್ದಾರೆ.

ಅಂಕೆಗಳ ಮಹತ್ತ್ವ ಮನದಟ್ಟಾಗಿರುವುದರಿಂದ, ಮತ್ತು ವಿವಿಧ ಉದ್ದೇಶಗಳಿಗಾಗಿ ಅಂಕೆಗಳನ್ನು ಕಲೆಹಾಕುತ್ತಿರುವುದರಿಂದ, ಅಂಕೆಗಳ ಸಂಕಲನ, ಮತ್ತು ಸಂಕಲನ ಮಾಡಿದ ಅಂಕೆಗಳ ವಿಮರ್ಶೆ—ಪರೀಕ್ಷೆ ಇದು ಒಂದು ಶಾಸ್ತ್ರವೇ ಆಗಿದೆ ಸಂಖ್ಯಾಶಾಸ್ತ್ರವೆಂದು (Statistics) ಇದರ ಹೆಸರು. ಈ ಸಂಖ್ಯಾಶಾಸ್ತ್ರದ ಒಂದು ಅಂಶವಾದ, 'ಸೂಚಿ ಅಂಕೆ' ಅಥವಾ ದರ್ಶಕ ಅಂಕೆ (Index Number) ಗಳ ಅಲ್ಪ ಪರಿಚಯ ಮಾಡಿಕೊಡುವುದೇ ಈ ಬರೆಹದ ಗುರಿ.

ಈ ಸೂಚಿಅಂಕೆಗಳು ಪ್ರಗತಿಯನ್ನು ಇಲ್ಲವೆ ಅವನತಿಯನ್ನು (ಏರಿಳಿತವನ್ನು)—ಒಟ್ಟಾರೆ ಇದ್ದ ಸ್ಥಿತಿಯನ್ನು—ಸೂಚಿಸುತ್ತವೆ. ಇದರಿಂದ ತಪ್ಪು-ತಡೆಗಳನ್ನು ತಿದ್ದಿಕೊಂಡು, ಮುಂದೆ ಸರಿಯಾದ ದಾರಿಯಿಂದ ಸಾಗಲಿಕ್ಕೆ ಬರುವುದು. ಮುಂದಿನ ಹೆಜ್ಜೆಯ ರೂಪರೇಷೆಗಳನ್ನು ನಿರ್ಣಯಿಸಲಿಕ್ಕೆ ಸಹಾಯವಾಗುವುದು.

ಸರಕಾರದವರು ಅಂಕೆಗಳನ್ನು ಸಂಗ್ರಹಿಸಿ, ಕಾಲಕಾಲಕ್ಕೆ ಪ್ರಸಿದ್ಧಿಪಡಿಸುತ್ತಾರೆ. ಸರಕಾರದ ಕೂಲಿಕಾರ ಶಾಖೆಯು, ಉದ್ಯಮಗಳಿಗೆ ಕೂಲಿಕಾರರಿಗೆ ಸಂಬಂಧಿಸಿದ ಅಂಕೆಗಳನ್ನು ಲೇಬರ್ ಗ್ಯಾಝೆಟಿನಲ್ಲಿ ಪ್ರಸಿದ್ಧಮಾಡುತ್ತದೆ. ಮುಂಬಯಿ ಸರಕಾರದವರು ಮುಂಬಯಿ, ಅಹಮ್ಮದಾಬಾದ್, ಸೊಲ್ಲಾಪುರ, ಜಳಗಾಂವ ಈ ಕೇಂದ್ರಗಳಲ್ಲಿಯ ಕೂಲಿಕಾರರ ಜೀವಹದ ವೆಚ್ಚ-

ಸರಕಾರಮಾನ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ತುಸು ಅವಧಿಯ ವಿವಿಧ ವರ್ಗಗಳು. **ಲಂಡನ್, ನ್ಯೂ-ಯಾರ್ಕ್**ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈ-ಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನ ಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋರ್ಸು ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿ ಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕ ಗಳು ನಮ್ಮಲ್ಲಿ ದೊರೆಯುತ್ತವೆ. ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ,ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದ್ದು ಇಲ್ಲಿಯೇ ದೊರೆಯುತ್ತದೆ.

ವನ್ನು ಸೂಚಿಸುವ ಅಂಕೆಗಳನ್ನು, ಪ್ರತಿ ತಿಂಗಳಿಗೆ ಪ್ರಸಿದ್ಧವಾಗುವ ಮುಂಬಯಿ ಲೇಬರ್ ಗ್ಯಾಝೆಟಿನಲ್ಲಿ ಪ್ರಸಿದ್ಧಿಸುತ್ತಾರೆ. ಇವರಂತೆಯೇ ಉಳಿದ ಸ್ವಾಂತಿಕ ಸರಕಾರದವರು, ತಮ್ಮ ಕೂಲಿ-ಕಾರರ ಕೇಂದ್ರಗಳಲ್ಲಿಯ ಜೀವನವೆಚ್ಚವನ್ನು ಸೂಚಿಸುವ ಅಂಕೆ-ಗಳನ್ನು (ಸೂಚಿಅಂಕೆ), ತಮ್ಮ ಲೇಬರ್ ಗ್ಯಾಝೆಟಿನಲ್ಲಿ ಪ್ರಸಿದ್ಧಿಸುತ್ತಾರೆ. ಇದಲ್ಲದೆ ಕೇಂದ್ರ ಸರಕಾರದ ಆರ್ಥಿಕ ಸಲಹೆಗಾರರು (Economic Adviser), ಇಡಿಯ ದೇಶದಲ್ಲಿಯ ಠೋಕ ಬೆಲೆಗಳು (Wholesale Prices) ಗ್ರಾಮಾಂತರಗಳ-ಲ್ಲಿಯ ಕಿರುಕುಳ ಬೆಲೆಗಳು. (Retail Prices Of Rural Centres) ಸರಕಾರದ ಸಾಲಪತ್ರಗಳ ಬೆಲೆಗಳು (Govt. Securities) ಚಿನ್ನ-ಬೆಳ್ಳಿಗಳ ಬೆಲೆಗಳು ಇವುಗಳ ಸೂಚಿಅಂಕೆಗಳನ್ನು ಪ್ರಸಿದ್ಧಿಸುತ್ತಾರೆ.

ಇವಲ್ಲದೆ ಬೇರೆ ಬೇರೆ ವಣಿಕ್ಸಂಘಗಳೂ, **ಕಾಮರ್ಸ್, ಕ್ಯಾಪಿ-ಟಲ್, ಈಸ್ಟರ್ನ್ ಎಕಾನಮಿಸ್ಟ್**–ಮೊದಲಾದ ವಾಣಿಜ್ಯ ಅರ್ಥ-ಶಾಸ್ತ್ರಗಳಿಗೆ ಸೇರಿದ— ವಾರಪತ್ರಿಕೆಗಳೂ ಬೇರೆ ಬೇರೆ ಸೂಚಿ-ಅಂಕೆಗಳನ್ನು ಪ್ರಸಿದ್ಧಿಸುತ್ತವೆ. ಈ ಸೂಚಿಅಂಕೆಗಳು ನಾಡಿನ ಹುಟ್ಟುವಳಿ, ಒಳದೇಶದ ವ್ಯಾಪಾರ, ಶೇರುಗಳ ಬೆಲೆ, ವಿದೇಶ ವ್ಯಾಪಾರ, ಚಿನ್ನ-ಬೆಳ್ಳಿ-ಸರಕಾರದ ಸಾಲಪತ್ರಗಳ ಬೆಲೆ, ನಿ ದ್ಯೋಗ, ಸಂಪುಗಳು, ಜೀವನದ ವೆಚ್ಚ ಇವೆಲ್ಲವುಗಳ ವಿವರಗಳ ತೋರಿಸುತ್ತವೆ.

ವಿಶಿಷ್ಟತೆಗಳನ್ನು ಅಳೆಯುವುದಕ್ಕಾಗಿ ಸಂಖ್ಯಾಶಾಸ್ತ್ರವು ಪು ಕಿದ ಹಂಚಿಕೆ—ಅಳತೆಗೋಲು– ಎಂದರೆ **ಸೂಚಿಅಂಕೆ** (ಸೂ ಅಂಕೆ) ಎಂದು ಸಾಧಾರಣವಾಗಿ ಹೇಳಬಹುದು.

೧೯೩೯ರಲ್ಲಿ ೨ ರೂ. ಗೆ ಸಿಕ್ಕುತ್ತಿದ್ದ ಧೋತರಜೋಡಿಗೆ ೧೯ ೪ ರೂ. ಕೊಡಬೇಕಾಗುತ್ತದೆ. ೧೯೩೯ರಲ್ಲಿಯ ಬೆಲೆ ೧೦೦ ರೂ ಎಂದು ತಿಳಿದರೆ, ಈಗಿನ ಬೆಲೆ ೩೦೦ ರೂ. ಆಗುವುದು. ಧೋತರ ೧೯೩೯ರ ಬೆಲೆ (೨ ರೂ.) ಮತ್ತು ೧೯೪೯ರ ಬೆಲೆ (೪ ರೂ.) ಈ ಎರಡು ಬೆಲೆಗಳ ಅಂತರವನ್ನು, ೧೯೩೯ರ ಬೆಲೆಯನ್ನು ತಳಹದಿ ಆಧಾರವೆಂದು ತಿಳಿದು, ೧೯೪೯ರಲ್ಲಿ ಆ ಬೆಲೆ ೩೦೦ ಆಗಿದೆ ಎಂದ ಹೇಳಬಹುದು. ಈ ೩೦೦ ಸೂಚಿಅಂಕೆ.

ಈ ಸೂಚಿಅಂಕೆಗಳನ್ನು ಗೊತ್ತುಪಡಿಸುವ ಕ್ರಮ :

ಸೂಚಿಅಂಕೆಗಳು ಬೆಲೆಗಳ ವಿಶಿಷ್ಟತೆಗಳನ್ನಷ್ಟೇ ತೋರಿಸುವ ದಿಲ್ಲ. ನಾಡಿನ ಹುಟ್ಟುವಳಿ ಮೊದಲಾದ ವಿವಿಧಕ್ಷೇತ್ರಗಳಲ್ಲಿಯ ಪರಿಸ್ಥಿತಿಯ ಚಿತ್ರವನ್ನೂ ಸ್ಪಷ್ಟಗೊಳಿಸುತ್ತವೆ.

೧. ತಳಹದಿಯ ಅಂಕೆಗಳು : ಇವುಗಳನ್ನು ಆರಿಸುವಾ ನಮಗೆ ಯಾವ ಉದ್ದೇಶಗಳಿಗಾಗಿ ಈ ಸೂಚಿಅಂಕೆಗಳು ಬೇಕು ಎಂಬುದನ್ನು ನೋಡಬೇಕು. ಹುಟ್ಟುವಳಿಯನ್ನು - ಸೂಚಿಸು ಅಂಕೆಗಳು ನಮಗೆ ಬೇಕಾಗಿದ್ದರೆ, ಹುಟ್ಟುವಳಿ ತೀರ ಹೆಚ್ಚು ಇಲ್ಲ ತೀರ ಕಡಿಮೆ ಇದ್ದ ವರುಷವನ್ನು ಬಿಟ್ಟು, ಸಾಧಾರಣವಿದ್ದ ವರು ಷದ ಅಂಕೆಗಳನ್ನು ಆರಿಸಬೇಕಾಗುತ್ತದೆ. ಕಾಲಕಾಲಕ್ಕೆ ಮಳೆಗ ದರಿ ಒಳ್ಳೆಯ ಬೆಳೆ ಬಂದು ಒಕ್ಕಲುತನದ ಹುಟ್ಟುವಳಿ ಬೆಚ್ಚಾಗ ವಂತೆ, ಯುದ್ಧದ ಸಿದ್ಧತೆಯ ಕಾಲದಲ್ಲಿ ಮತ್ತು ಯುದ್ಧದ ಕಾಲದ ಕೆಲವೊಮ್ಮೆ ಉದ್ಯಮಗಳ ಹುಟ್ಟುವಳಿಯೂ ಬೆಳೆಯಬಹುದ ಮೊನ್ನೆ ಮುಗಿದ ಎರಡನೆಯ ಮಹಾಯುದ್ಧದ ಕಾಲದಲ್ಲಿ, ಕೆಲ-ವೊಂದು ಹಿಂದೀ ಉದ್ಯಮಗಳ ಹುಟ್ಟುವಳಿ ಮೇಲ್ಮಟ್ಟವನ್ನು ಮುಟ್ಟಿತ್ತು. ಆದರಂತೆ ೧೯೩೯-೪೯ರಲ್ಲಿಯ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಹುಟ್ಟುವಳಿಯೂ, ಬೆಲೆಗಳೂ ತೀರ ಕೆಳಗೆ ಇಳಿದಿದ್ದುವು. ನಾವು ಇಂತಹ ವಿಷಮವಾದದ (Exceptions) ಅಂಕೆಗಳನ್ನು ಬಿಟ್ಟು ಒಂದು ಮಟ್ಟದಲ್ಲಿ ಸ್ಥಿರವಾಗಿದ್ದ ಹುಟ್ಟುವಳಿ-ಬೆಲೆಗಳನ್ನು ತಳಹದಿ-ಯೆಂದು, ಆಧಾರವೆಂದು ಆರಿಸಬೇಕು. ಮುಂಬಯಿ ಸರಕಾರದ ಕೂಲೀಕಾರರ ಖಾತೆ (Labour Dept.) ಯವರು ಸೊಲ್ಲಾಪುರ ಕೇಂದ್ರದಲ್ಲಿಯ ಸೂಚಿಅಂಕೆಗಳನ್ನು ತಯಾರಿಸುವಾಗ, ೧೯೩೯ನೆಯ ಇಸ್ವಿಯ ಅಂಕೆಗಳನ್ನು ತಳಹದಿಯೆಂದು ಹಿಡಿದಿದ್ದಾರೆ. ಮುಂಬಯಿ ಕೇಂದ್ರದ ಸೂಚಿಅಂಕೆಗಳನ್ನು ತಯಾರಿಸುವಾಗ, ೧೯೩೯ರಲ್ಲಿಯ ಅಂಕೆಗಳು ತಳಹದಿಯಾಗಿವೆ.

ಅಂಕೆಗಳ ಸಂಕಲನ :— ಸೊಲ್ಲಾಪುರದಲ್ಲಿಯ ಕೂಲಿಕಾರರ ಶಾಖೆಯವರು (Labour Dept.) ಕೂಲಿಕಾರರು ಹೆಚ್ಚಾಗಿ

ಕೃಷಿಯ ಚಿಲ್ಲರೆ ಅಂಗಡಿಗಳಲ್ಲಿಯ ಬೆಲೆಗಳನ್ನು ಪ್ರತಿವಾರ ಸಂಗ್ರಹಿಸಿ, ಪ್ರತಿತಿಂಗಳಿಗೆ ಆ ಬೆಲೆಗಳ ತಿಂಗಳ ಸರಾಸರಿಯನ್ನು (Monthly average prices) ತೆಗೆಯುತ್ತಾರೆ.

ಸಮಾಜಕ್ಕೆ ಮಧ್ಯಮ ವರ್ಗದವರ (Middle classes) ಜೀವನ ಮಟ್ಟವನ್ನು ಸೂಚಿಸುವ ಅಂಕೆಗಳು ಬೇಕಾದರೆ, ಅವರು ವ್ಯವಹಾರ ಮಾಡುವ (ಕೊಳ್ಳುವ) ಅಂಗಡಿಗಳಲ್ಲಿಯ ಬೆಲೆಗಳನ್ನು ಸಂಗ್ರಹಿಸಬೇಕು.

ವಸ್ತುಗಳ ಆಯ್ಕೆ: ಒಂದು ಗುಂಪಿನಲ್ಲಿ (ಕೂಲಿಕಾರ ನಲ್ಲನೆ ಮಧ್ಯಮವರ್ಗ) ಎಲ್ಲರೂ ಸಾಮಾನ್ಯವಾಗಿ ಬಳಸುವ ವಸ್ತುಗಳನ್ನು ಆರಿಸಬೇಕು. ಒಂದು ಕೂಲಿಕಾರ ಕುಟುಂಬದ ವೆಚ್ಚದ ಬಾಬುಗಳು ಕೆಳಗೆ ಕಾಣಿಸಿದಂತೆ ಇವೆ :

೧) ಆಹಾರ, ೨) ಅರಿವೆ, ೩) ಮನೆ ಬಾಡಿಗೆ, ೪) ಉರುವಲು, ೫) ಇತರ ಬಾಬುಗಳು.

ಮಧ್ಯಮವರ್ಗದ ಕುಟುಂಬದ ವೆಚ್ಚದ ಬಾಬುಗಳೂ ಸ್ವಲ್ಪ ಹೆಚ್ಚು ಕಡಿಮೆ ಮೇಲಿನಂತೆಯೇ. ವೆಚ್ಚದ ಪ್ರಮಾಣದಲ್ಲಿ ಮಾತ್ರ ಹೆಚ್ಚು ಕಡಿಮೆಯಾಗಬಹುದು. ಕೂಲಿಕಾರರು ಜೋಳದ ರೊಟ್ಟಿ, ಶೇಂಗಾ ಚಟ್ನಿಸಿನಕಾಯಿ ಹಿಂಡಿ ತಿಂದರೆ, ಮಧ್ಯಮವರ್ಗದವರು ಅಕ್ಕಿ, ಗೋದಿ, ಪಲ್ಲೆ ತಿನ್ನುವುದರಿಂದ, ಅವರ ಆಹಾರದ ವೆಚ್ಚ ಹೆಚ್ಚು. ಇದರಂತೆ ಶಿಕ್ಷಣದ ವೆಚ್ಚ ಹೆಚ್ಚು.

ವೆಚ್ಚದ ಬಾಬುಗಳ ವಿವರಗಳು ಕೆಳಗಿನಂತೆ ಇವೆ:

ಆಹಾರ— ಅಕ್ಕಿ. ಗೋದಿ, ಜೋಳ, ಕಡಲೆ, ತೊಗರಿ, ಬೇಳೆ, ಎಣ್ಣೆ, ಸಕ್ಕರೆ, ಚಹ, ಮಾಂಸ, ಹಾಲು, ತುಪ್ಪ, ಉಪ್ಪು, ಮೆಣಸಿನ ಕಾಯಿ, ಉಳ್ಳೀಗಡ್ಡಿ, ಬಟಾಟೆ, ಒಳೈಣ್ಣೆ.

ಇವು ಆಹಾರದ ವೆಚ್ಚದಲ್ಲಿ ನೂರಕ್ಕೆ ೯೦ರಷ್ಟು

೨. **ಅರಿವೆ—**ಧೋತರ, ಜಿಂಗಿ, ಸೀರೆ, ಕುಪ್ಪಸ.

೩. **ಉರುವಲು**—ಕಟ್ಟಿಗೆ, ಚಿಮಣೀ ಎಣ್ಣೆ, ಕಡ್ಡೀ ಬೆಟ್ಟಿಗೆ

ಇವುಗಳಿಗಾಗಿ ನೂರಕ್ಕೆ ೯ರಷ್ಟು ವೆಚ್ಚವಾಗುತ್ತದೆ.

೪. **ಇತರ—** ಕೊಬ್ಬರಿ ಎಣ್ಣೆ, ಸುಗಂಧೀ ಎಣ್ಣೆ, ಎಲೆಯಡಿಕೆ, ಸಾಬಾಣ, ಸಿನೇಮಾ, ಶಿಕ್ಷಣ.

ಸೊಲ್ಲಾಪೂರ ಕೇಂದ್ರದಲ್ಲಿಯ ಮತ್ತು ಬೇರೆ ಕೇಂದ್ರಗಳಲ್ಲಿಯ ಕೂಲಿಕಾರರ ಜೀವನ ವೆಚ್ಚವನ್ನು ಸೂಚಿಸುವ ಸೂಚಿಅಂಕೆಗಳನ್ನು ಕೆಳಗೆ ಸೂಚಿಸಲಾಗಿದೆ:

	ಸೊಲ್ಲಾಪೂರ	ಮುಂಬಯಿ	ಅಮರಾವತಿ	ಜಳಗಾಂವ	ಮದ್ರಾಸ	ಕಾನಪೂರ
ಮಾರ್ಚ್ ೧೯೪೫	೩೬೫	೨೭೦	೨೯೭	೪೧೫	೩೦೯	೩೭೫
ಎಪ್ರಿಲ್	೩೬೬	೨೮೭	೩೧೦	೪೨೫	೩೦೭	೩೭೯
ಮೇ	೩೯೬	೨೭೮	೩೨೭	೪೨೦	೩೧೧	೩೭೮
ಜೂನ್	೪೧೨	೨೯೨	೩೩೬	೪೬೫	೩೧೨	೪೬೨
ಜುಲೈ	೪೨೩	೨೯೭	೩೪೪	೪೪೦	೩೨೦	೪೬೬
ಆಗಸ್ಟ್	೪೧೯	೩೦೬	೩೪೫	೪೩೩	೩೨೧	೪೬೪
ಸಪ್ಟಂಬರ್	೪೨೪	೩೧೦	೩೪೬	೪೪೭	೩೨೭	೪೬೫
ಅಕ್ಟೋಬರ್	೪೧೯	೩೦೦	೩೪೨	೪೪೨	೩೨೬	೪೬೬
ನವೆಂಬರ್	೪೨೩	೩೦೨	೩೪೪	೪೪೬	೩೨೭	೪೬೪
ಡಿಸೆಂಬರ್	೪೨೭	೩೧೦	೩೪೮	೪೪೯	೩೨೯	೪೬೮
ಜನೇವಾರಿ ೧೯೪೬	೪೨೬	೩೧೩	೩೪೮	೪೪೮	೩೨೯	೪೬೮
ಫೆಬ್ರುವರಿ	೪೨೩	೩೧೨	೩೪೮	೪೪೮	೩೨೯	೪೬೮
ಮಾರ್ಚ್	೪೨೩	೩೧೩	೩೪೮	೪೪೮	೩೨೯	೪೬೮
ಎಪ್ರಿಲ್	೪೨೩	೩೧೩	೩೪೮	೪೪೮	೩೨೯	೪೬೮
ಮೇ	೪೨೩	೩೧೩	೩೪೮	೪೪೮	೩೨೯	೪೬೮
ಜೂನ್	೪೨೩	೩೧೩	೩೪೮	೪೪೮	೩೨೯	೪೬೮
ಜುಲೈ	೪೨೩	೩೧೩	೩೪೮	೪೪೮	೩೨೯	೪೬೮
ಆಗಸ್ಟ್	೪೨೩	೩೧೩	೩೪೮	೪೪೮	೩೨೯	೪೬೮

ಈ ಸೂಚಿಅಂಕೆಗಳನ್ನು ಪರಿಶೀಲಿಸಿದರೆ, [೧] ಮುಂಬಯಿ, ಮದ್ರಾಸದಂತಹ ದೊಡ್ಡ ಪಟ್ಟಣಗಳಿಗಿಂತ ಸೊಲ್ಲಾಪುರ, ಜಳಗಾವ, ಕಾನಪುರದಂತಹ ಕೇಂದ್ರಗಳಲ್ಲಿ ಜೀವನ ವೆಚ್ಚ ಹೆಚ್ಚಿರುವುದು ಒಡೆದು ಕಾಣುತ್ತದೆ. ಕೂಲಿಕಾರರಿಗೆ ಸಿಕ್ಕುವ ತುಟ್ಟಿಭತ್ತೆಗೂ ಜೀವನ ವೆಚ್ಚವನ್ನು ಸೂಚಿಸುವ ಸೂಚಿಅಂಕೆಗಳಿಗೂ ತಳಕು ಹಾಕಿರುವುದು ಎಷ್ಟು ಯೋಗ್ಯವೆಂಬುದು ಮನವರಿಕೆಯಾಗುವುದು. ಎಪ್ರಿಲ್, ಮೇ, ಜೂನ್ ತಿಂಗಳಲ್ಲಿಯ ಸೂಚಿಅಂಕೆಗಳನ್ನು ನೋಡಿದರೆ, ಸುಗ್ಗಿಯ ದಿನಗಳಲ್ಲಿ ಪೇಟೆಗೆ ಬಂದ ಸರಕುಗಳು ತುಂಬಿರುವುದರಿಂದ, ಬೆಲೆಗಳು ಇಳಿದು ಜೀವನವೆಚ್ಚ ಕಡಿಮೆಯಾಗಿರುವುದು ಕಂಡುಬರುತ್ತದೆ. ಜುಲೈದಿಂದ ಡಿಸೆಂಬರಿನ ವರೆಗೆ ಸರಕುಗಳ ಸಂಗ್ರಹ ಕಡಿಮೆಯಾಗಿರುತ್ತದೆ. ಮಳೆಗಾಲದಲ್ಲಿ ಕೆಲವು ಕಡೆ ಸಾರಿಗೆ ಕಟ್ಟಾಗಿ ಸರಕುಗಳ ಸಂಚಲನಕ್ಕೆ ತಡೆಯಾಗಿ, ಬೆಲೆಗಳು ಏರುತ್ತವೆ.

ಸಪ್ಟಂಬರ್ ತಿಂಗಳಲ್ಲಿ ಪೌಂಡಿನೊಡನೆ ರೂಪಾಯಿಯ ಬೆಲೆಯಲ್ಲಿಯೂ ಕಡಿತವನ್ನು ಮಾಡಿದ್ದರಿಂದ, ಏರಿದ ಬೆಲೆಗಳು ಮತ್ತೆ ಏರಿ, ಮೇಲ್ಕಟ್ಟವನ್ನು ಮುಟ್ಟುತ್ತವೆ, ಎಂದು ಕೆಲವರು ಟೀಕೆ ಮಾಡಿದ್ದರು.

ತೋಕು ಬೆಲೆಗಳ ಸೂಚಿಅಂಕೆಗಳು

೨೪-೯-೪೯	೧-೧೦-೪೯	೮-೧೦-೪೯	೧೫-೧೦-೪೯
೩೮೮.೧	೩೯೦.೮	೩೯೪.೮	೩೯೪.೧

ಎಂದರೆ ಐದು ವಾರಗಳಲ್ಲಿ ಬೆಲೆಗಳು ನೂರಕ್ಕೆ ೧.೬ರಷ್ಟು ಏರಿವೆ.

ಈಗ ಸರಕಾರದವರು ಆಹಾರಧಾನ್ಯ ಹಾಗು ಬಟ್ಟೆಗಳ ನಿಯಂತ್ರಿತ ಬೆಲೆಗಳಲ್ಲಿ ಕಡಿತ ಮಾಡಿ, ಒಟ್ಟು ಬೆಲೆಗಳನ್ನು ನೂರಕ್ಕೆ ೧೦ರಷ್ಟು ಇಳಿಸಬೇಕೆಂದು ನಿರ್ಣಯಿಸಿದ್ದಾರೆ. ಈ ನಿರ್ಣಯ ಎಷ್ಟು ಯಶಸ್ವಿಯಾಗುವುದೆಂಬುದನ್ನು ಇನ್ನು ಮುಂದಿನ ಸೂಚಿ ಅಂಕೆಗಳೇ ತೋರಿಸಬಲ್ಲವು.

ಶಾಂತಿ!

ಶ್ರೀ. ಕೆ. ಮಂಜುನಾಥ, ಬೊಸಪೇಟೆ

ಎಲ್ಲಿರುವೆ ಶಾಂತಿ! ಬಾಳುವೆಯ ವಿಕಸಿಪ ಕಾಂತಿ!
ಚೆಲ್ಲಿರಲು ಬಗೆಯ ಬಾನಿನೊಳಶಾಂತಿ!
ಕುದಿವ ಸೊಲ್ಲುಗಳ ಕರ್ಕಶದ ಕಾರ್ಗಣ್ಯದಲಿ
ಬಿಲ್ಲಾಗಿ ಬಗ್ಗಿ ಮನಕಿರಿಯೆ ಭ್ರಾಂತಿ!

ಶಾಂತಿಯೊಡಲಿನ ಕಾಳಗರ್ಭದಿಂ ಪೊಸರಮುಟ್ಟು
ನೂರ್ತಿಗೊಂಡಿಹುದು ಜೀವನದ ಸರಣಿ—
ಶೂನ್ಯದಾಗರವ ರಸಬಿಂದುವಿನ ತೊಟ್ಟಾಗಿ
ಬೆಳೆವಿಹುದು ಬಾಳ್ಕೆ ಬೆಕ್ಕಸದ ಭರಣಿ.

ಚಿಗುರಾಗಿ ಚಿಗಿದು ಜೀನ್ನಾಟಪಾಟದ ಹದುಳ
ಗೊಂದಳದ ಗೋಷ್ಠಿಯಲಿ ಹೂವಿಟ್ಟ ಗೆಲುವು,
ಗಾಂಭೀರ್ಯದಧಿಕ ತಪ ತಾಪದಂತರ್ಯದಲಿ
ಕೆನೆಗೊಂಡುಮಬ್ಬಿಗದ ಬಾಳಿನಲಿ ಚೆಲುವು

ಪ್ರಗತಿಧಾರೆಯು ಧಮನಿ-ಧಮನಿಯಲಿ ನಿಂಗೊಂಡು
ತೊಪಲಿಸುವಶಾಂತಿ ಮೌನದ ಹಸಿವನುತ್ತು,
ಜಗದ ಜಾಡ್ಯವನೆದಕಿ ಕೆದಕಿ ಮಾಯಿಸಲೆಂದು
ಅಂಕುರಿಸಿದುದು ಮೂಡಿದೆನ್ನಿಸಿಕೆಗೆ ತುತ್ತು

ಬೆಳೆಯಿತು ಅಶಾಂತಿಯಿನಿದಿಂಬಿಸಲಿ ಮೆಲುನೆಲನೆ
ತಳೆದುದುಪಚಳ ರೂಪುವೆತ್ತು ಬಂದು
ಬಾಳ ಕಳೆಗೊಡಲೆಂದು ತಂದ ಕುಡಿ ಬೀಳ್ಕಾಗಿ
ಬಾಳ್ಗೇ ಕಳೆಯಾಗಿ ಕೊಳೆಯಾಯಿತಿಂದು.

ಕಳವಳದ ಸಿಡಿಲು ರೋದನದ ನಿರ್ಜಲ ನಿಗಿಲು
ಸುರಿದಿಹುದು ಬೇವಸದ ಸೋನೆಯಿಹುದಲ್ಲಿ;
ಅಳುಕನಿಡೆ ಬಿತ್ತಿ ವ್ಲಾನತೆಯ ಸೋಗನು ಹರಹಿ
ಕರಿದಿಹುದಶಾಂತಿ ಬಾಳಿನ ಸುಮವ ಜೆಲ್ಲಿ.

ಶಾಂತಿಯನು ಬಯಸುತ ಅಶಾಂತಿ ವಧಪನು ತುಳಿದು
ಶಾಂತಿಸಾಗರದ ಕಲ್ಲೋಲವನೆ ಸೇರಿ,
ಬಗೆಯ ಹರಿತಿಂಬುವಲೆಗಳ ಹಿಡಿತದಲಿ ಸಿಕ್ಕು
ಕಂಗಾಲಗೊಂಡಿಹುದು ಮನವಿರವಿ ದಾರಿ!

ಎಲ್ಲಿರುವೆ ಶಾಂತಿ! ಬಾ! ಬಾಳಕ್ರಂದನ ಕೇಳಿ
ಸಂತವಿಸು ಬಾ! ಹಸಿದ ಜಗಕಾಗು ಕ್ರಾಂತಿ!
ಸೋತು ಪೆರೆಯಾದ ಮಾನವತೆಯನು ಬಿಡುಗಡೆಯ
ಬೆಳಕಿಗೊಯ್ಯುತ ಮೆರೆಸೆ, ಓ ಶಾಂತಿ! ಶಾಂತಿ!

ಬಲವು ಬರಲಿ ಮೈಯಲಿ!

ಶ್ರೀ. ಭುಜೇಂದ್ರ ಮಹಿಸವಾಡಿಗ

೧

ಹೆಣ್ಣು ಬೇಡ, ಹೊನ್ನು ಬೇಡ, ಮಣ್ಣು ಬೇಡಲಾರೆನು!
ಸುಖವ ಬೇಡೆ, ಸ್ವರ್ಗ ಬೇಡೆ, ಮೋಕ್ಷ ಬೇಡಲಾರೆನು!
ಮಾನಬೇಡಿ ಕೀರ್ತಿಬೇಡಿ ಅಮರನಾಗಲಾರೆನು;
ಎಲ್ಲರಂತೆ ಒಳಿತನೊಂದೆ ಬೇಡಿ ಬೇಡಿ ಕಾಡೆನು!
ಅದರಾನು ಬೇಡಿಕೊಳುವುದೊಂದೆ ನಿನ್ನ ಬಳಿಯಲಿ:
ಬಂದ ಎಡರನೆದುರುಗೊಳುವ ಬಲವು ಬರಲಿ ಮೈಯಲಿ!

೨

ದೀನ ಹೀನ ಬಡವರಿನ್ನ ಅಣ್ಣ-ತಮ್ಮರಲ್ಲವೆ?
ಕೀಳುಸಾಪಿ ಪತಿತರಿನ್ನ ಬಂಧುಬಳಗವಲ್ಲವೆ?
ಅವರನುಳಿದು ಸ್ವರ್ಗವೆಲ್ಲಿ? ಬೇಡ, ಬೇಡ, ಬೇಡದು!
ಅವರನುಳಿದು ಮೋಕ್ಷವೆಲ್ಲಿ? ಬೇಡ, ಬೇಡ, ಬೇಡದು!
ಅದರಾನು ಬೇಡಿಕೊಳುವುದೊಂದೆ ನಿನ್ನ ಬಳಿಯಲಿ:
ಬಂದ ಎಡರನೆದುರುಗೊಳುವ ಬಲವು ಬರಲಿ ಮೈಯಲಿ!

೩

'ಕಷ್ಟ-ನಷ್ಟಬೇಡವೆನಗೆ, ಸಾವ-ನೋವನೊಲ್ಲೆನು!'—
ಎನ್ನ ಬಹುದೆ ಮರುಳರಂತೆ? ಇಲ್ಲ, ನಾನು ಬಲ್ಲೆನು:
ಕಷ್ಟ-ನಷ್ಟ-ರೋಗ-ರುಜಿನ ಸಾವು-ನೋವು ಎಲ್ಲವು
ಹುಟ್ಟಿ ಬಂದ ಮೇಲೆ ನಮಗೆ ತಪ್ಪಿಸಿಕೊಳ್ಳಬಾರದಿರುವುದಿಲ್ಲವು!
ಅದರಾನು ಬೇಡಿಕೊಳುವುದೊಂದೆ ನಿನ್ನ ಬಳಿಯಲಿ:
ಬಂದ ಎಡರನೆದುರುಗೊಳುವ ಬಲವು ಬರಲಿ ಮೈಯಲಿ!

೪

ಹುಟ್ಟುಗುಣಗಳನ್ನು ನಾವು ಹಳಿವುದೆಂತು ತಿಳಿಯದೆ?
ಹಳಿದರೇನು ಹೋಗಬಹುದೆ ಹೊಳುವನಕ ಉಳಿಯದೆ?
ನಾಯಬಾಲ ಡೊಂಕು ಇರಲು ಕಂಬಿಕಟ್ಟಿ ಕಳೆವುದೆ?
ಹರಿವ ಗುಣವು ನೀರಿಗಿರಲು ಒಡ್ಡು ಹಾಕೆ ತಡೆವುದೆ?
ಅದರಾನು ಬೇಡಿಕೊಳುವುದೊಂದೆ ನಿನ್ನ ಬಳಿಯಲಿ;
ಬಂದ ಎಡರನೆದುರುಗೊಳುವ ಬಲವು ಬರಲಿ ಮೈಯಲಿ!

೫

ದೇಹಗುಣಗಳೇನು ಉಂಟೊ ಆಗಿ ತೀರಬೇಕಲಾ!
ದೇಹ ಹೊತ್ತ ಜೀವವದನು ಉಂಡು ನೀಗಬೇಕಲಾ!
ಬರುವುದೆಲ್ಲ ಬರಲಿ ಬರಲಿ, ಬೇಡವೆನ್ನಲಾಗದು!
ಎಂದರೇನು ಬಂದುದೆಲ್ಲ ಬಿಟ್ಟು ಮರಳಿ ಹೋಗದು!
ಅದರಾನು ಬೇಡಿಕೊಳುವುದೊಂದೆ ನಿನ್ನ ಬಳಿಯಲಿ:
ಬಂದ ಎಡರನೆದುರುಗೊಳುವ ಬಲವು ಬರಲಿ ಮೈಯಲಿ!!

ಅಮ್ಮಾ ಯಾಕ್ ಅಳ್ತಿ?.....

(ಉತ್ತರಕನ್ನಡ ಜಿಲ್ಲೆಯ ಜೀವನಚಿತ್ರವೊಂದು)

ಡಿ. ಉಪೇಂದ್ರನಾಯಕ ಕಾರವಾರ.

★

ಭಾರತೀಯರಲ್ಲಿ ಹಲವರ ಉದರಬೇಗೆ, ಕೆಲವರ ಅನ್ನ ಬೇಯಿಸುತ್ತಿದೆ. ಜಾತೀಯತೆಯ ಕಿಲ್ಬಿಷ ಹೃದಯವನ್ನು ವಿಷಮಯ ಮಾಡಿದೆ! ಸ್ವಾರ್ಥ ತುಂಬಿ ತೂರಿದೆ. ಈ ಬೇಗೆ ಸುತ್ತ ಹರಡಿರುವಾಗ, ಎದೆ ಸುಡುತ್ತಿರುವಾಗ, ಮೈಮನ ಮುಟ್ಟಿ ಮರುಗಿದೆಯೇ ಅಮ್ಮಾ? ಆ ಮರುಗು ನಿನ್ನೆದೆಯಲ್ಲಿಯೇ ಉಳಿದರಾಗದು. ಆ ದುಃಖದ ಗೀತರಸದಿಂದ ತುಂಬಿದ ವೀಣೆಯನ್ನು ನಾನು ನಿನಾಟಲೇ ಬೇಕು; ಅಂತೇ ಮನಮುಟ್ಟಿ ಎಲ್ಲರೂ ನಿನಾಟಲಿ. ದನಿ ಮಾರ್ದನಿಯಾಗಿ—ಹಿರಿದನಿಯಾಗಿ—ವಿಶ್ವದ ಕೇರಿಯೆಲ್ಲ ನಡುಗಲಿ!

ಭರಮ ಕೆಂಪು ಅಂಚಿನ ಧೋತರ ಉಟ್ಟಿದ್ದ. ತಲೆಗೊಂದು ಸೀರಾದ ಕೆಳ್ಳಗಿನ ಜರಿಯ ಸೆರಗಿದ್ದ ಬಿಳಿಯ ರುಮಾಲು ಸುತ್ತಿಕೊಂಡಿದ್ದ. ಮದುವೆಗೆ ತೊಟ್ಟ ದೊಡ್ಡ ಮುರುವು ಕಿವಿಯಲ್ಲಿ ಜೋತಾಡುತ್ತಿತ್ತು. ಕೈಯಲ್ಲಿ ಗಡುತರವಾದ ಬೆಳ್ಳಿಯ ಬಳೆ ತೊಳಗಿದರೆ, ಬೆರಳಿನಲ್ಲಿ ಬಂಗಾರದ ಉಂಗುರ ಹೊಳೆಯುತ್ತಿತ್ತು. ಎಷ್ಟೆಂದರೂ ಭರಮ ನಮ್ಮೂರ ಒಕ್ಕಲಿಗ. ನಮ್ಮೂರ ಒಕ್ಕಲಿಗರೆಂದರೆ ಗೇಣಗಲದ ಎರಡು ಮೊಳ ಕಚ್ಚೆಯನ್ನುಟ್ಟು, ತಲೆಗೊಂದು ಮಸಕಾದ ಪಂಚೆಯನ್ನು ಸುತ್ತಿಕೊಂಡು, ಹೆಗಲ ಮೇಲೊಂದು ತುಂಡುಗಂಬಳಿ ಹೊದೆಸಿಕೊಂಡರೆ ಮುಗಿಯಿತು.... ಅವರ ಪೋಷಾಕು. ಈ ಪೋಷಾಕಿನಲ್ಲಿಯೇ ಇಪ್ಪತ್ತೈದು ವರುಷಗಳನ್ನು ನೂಕಿದ ಭರಮ, ಇಂದು ಮೊಳಕಾಲ ಕೆಳಗೆ ಪಂಚೆಯನ್ನುಟ್ಟಾಗ ಆನಂದದಿಂದ ಉಬ್ಬುವುದು ಹೆಚ್ಚಿನದಲ್ಲ. ಧೋತರದ ಮೇಲೆ, ಸೊಂಟದಲ್ಲಿ ಬೆಳ್ಳಿಯ ಜೋಡುನೇವಾಳ ಹೊಳೆಯುತ್ತಿತ್ತು. ಎಲ್ಲವನ್ನೂ ತೊಟ್ಟು ಆನಂದದಿಂದ ಉಬ್ಬಿದ ಭರಮ, ಏನೇನೋ ನೆನೆದುಕೊಂಡ. ವಿಾಸೆಯ ಮೇಲೂ ಕೈ ಹೋಯಿತು. ಆದರೂ ಭರಮನಿಗೆ ಆನಂದದಲ್ಲಿಯೇ ಕೊಂಚ ಬೇಜಾರು. ಅವನು ಏಳೆಂಟು ದಿನಗಳಿಂದ— ತನ್ನ ಮದುವೆಯ ಗಲಾಟೆಯಲ್ಲಿ— ಒಡೆಯರ ಮನೆಯ ಕಡೆಗೆ ಸುಳಿದಿರಲಿಲ್ಲ. ಅದಕ್ಕಾಗಿಯೇ ಇರಬೇಕು ಮನದಲ್ಲಿ ಸಂಕೋಚ. ಆದರೂ ತನ್ನ ಪೋಷಾಕಿನ ಗಡಿಬಿಡಿಯಲ್ಲಿ ಎಲ್ಲವನ್ನೂ ಮರೆತ. ಮನದಲ್ಲಿಯೇ ಧೈರ್ಯತಂದುಕೊಂಡ. ಭರಮನಿಗೆ ತಾನು ವಸ್ತ್ರ ತೊಟ್ಟಾಗ ತನ್ನನ್ನು ತಾನು ನೋಡಿಕೊಳ್ಳಲು ನಿಲುಗನ್ನಡಿ ಎಲ್ಲಿಂದ ಬರಬೇಕು? ಅಲ್ಲಿ ಇಲ್ಲಿ ಹುಡುಕಾಡಿದ. ಕಾಯಿಯೊಂದು ಸಲ ಆವನಿಗೆ ಬಿಲ್ಲಿಯಕ್ಕನ ದೊಡ್ಡ ಕನ್ನಡಿ ತೋರಿಸಿದುದು ನೆನಪಾಯಿತು. ಕೂಗಿದ. ಪಾಪ! ಕಾಯಿ ಹೊರಗೆ ಕೆಲಸಕ್ಕೆ ಹೋದವಳು ಇನ್ನೂ ಬಂದಿರಲಿಲ್ಲ. ಹೊಟ್ಟೆಯ ತುತ್ತಿಗೆಂದು ಹೊಲಕ್ಕೆ ಹೋದವಳು, ಐದು ತಾಸು ಹೊತ್ತು ಏರಿದರೂ ಮನೆಗೆ ಬಂದಿರಲಿಲ್ಲ. ಹೊರಜಗುಲಿಗೆ ಬಂದ. ಅತ್ತ ಇತ್ತ ಸುಳಿದಾಡಿದ. ಹೊಸ ಹೆಂಡತಿಯ ಸುಳಿವೂ ಇರಲಿಲ್ಲ. ಹೊರಗೆ ನೋಡಿದ. ಹೆಂಡತಿ ಕೊಟ್ಟಗೆಯ ಸಗಣಿಯನ್ನು ಬುಟ್ಟಿಯಲ್ಲಿ ತುಂಬಿ, ಎತ್ತಲಿಕ್ಕಾಗದೆ ಹಾತೊರೆದು ನಿಂತಿದ್ದಾಳೆ. ಹೊಸ ಮದುವಣಗಿತ್ತಿ! ಆದರೂ ಆಕೆ ಸುಸ್ಮ್ಯಾನೇ ಕೂಡ್ರಲಿಕ್ಕಾಗುವುದೇ? ಒಕ್ಕಲಿಗರ ಮನೆಯಿಂದರೆ, ಹಾಲುಹಲ್ಲುಮುರಿಯದ ಕೂಸಿನಿಂದ ಶ್ವಾಸಹಿಡಿದ ಮುದುಕನ ವರೆಗೆ ದುಡಿದಾಗಲೇ ಹೊಟ್ಟೆಗೆ ಕೂಳು. ಗಂಡು, ಹೆಣ್ಣು, ಹುಡುಗರು ಸಮನಾಗಿ ದುಡಿಯುತ್ತಾರೆ. ಭರಮನಿಗೆ ಗೊತ್ತಾಯಿತು. ಆದರೆ ಮಾಡುವುದೇನು? ಭರಮ ಇದ್ದುದು ಹೊಸ ಪೋಷಾಕಿನಲ್ಲಿ! ಅವನಿಗೆ ಸಗಣಿಯ ಬುಟ್ಟಿ ಮುಟ್ಟಲು ಮನಸೊಪ್ಪಿಸಲಿಲ್ಲ. ಇದೇ ಏಳೆಂಟು ದಿನಗಳಲ್ಲಿ ಅವನು ಸಗಣಿ ಬಳಿಯುವ ಕೆಲಸದಿಂದ ಮುಕ್ತನಾಗಿದ್ದ. ಹೊಸ ಹೆಂಡತಿ ಬಂದಾಗಿನಿಂದ ಆ ಕೆಲಸ ಆಕೆಗೆ ಒಪ್ಪಿಸಿಬಿಟ್ಟಿದ್ದ. ಭರಮ ಹೊರಗೆ ಬಂದ. ಹೆಂಡತಿ ನೋಡಿದಳು. ಡೌಲಾದ ಭರಮನಿಗೆ ಸಗಣಿ ಬುಟ್ಟಿ ಹಿಡಿಯುವಂತೆ ಹೇಳಲು ಆಕೆಗೂ ನಾಚಿಕೆಯಾಯಿತು. ಮುಗುಳು ನಕ್ಕಳು. ಭರಮ "ಏಽಽ, ನಾ ಒಡೆಯರ ಮನ್ಯಾಗೆ ಹೋಗಿಬರ್ತೇನಿ. ಅವ್ವಾ ಬಂದ್ರೆ ಹೇಳ್ಬಿಡೇ" ಎಂದು ಹೊರಟೇ ಬಿಟ್ಟ. ಆಕೆ ನೋಡಿದಳು ಡೌಲಾದ ಗಂಡನನ್ನು!

ಭರಮ ದಾರಿಗುಂಟ ನಡೆದ. ಸುತ್ತುಮುತ್ತಲ ಮನೆಯವರು ಮಿಕಿಮಿಕಿ ನೋಡುತ್ತಿದ್ದರು ಭರಮನ ಪೋಷಾಕನ್ನು. ಭರಮನಿಗೆ ಸ್ವಲ್ಪ ನಾಚಿಕೆಯಾಯಿತು. ಜೋರಾಗಿ ದಾರಿ ನಡೆಯಹತ್ತಿದ. ಪಿಸುಪಿಸು ಮಾತನಾಡಿದರು ಕೆಲವರು. ಎಷ್ಟೋ ಜನ ಕೆಮ್ಮಿದರು. ನಕ್ಕರು, ಭರಮನನ್ನು ನೋಡಿ. "ಭಲೇ ಮದುಮಗ, ನಮ್ಮೂರ ಸರದಾರ" ಎಂದರು ತುಂಟ ಹುಡುಗರು. ಭರಮ ಯಾರ ಕಡೆಗೂ ಗಮನ ಕೊಡಲಿಲ್ಲ. ತಾನಾಯಿತು, ರಸ್ತೆಯಾಯಿತು. ಭರಮ ಈಗ ಗೆದ್ದೆಯ ಪಾದಿ ಹಿಡಿದ. ಸ್ವಲ್ಪ ನೆಮ್ಮದಿಯಾಯಿತು

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೆಸಿಲಿಕಗಳನ್ನು ಹೋಗಲಾಡಿ ಮಿಮರ್ಯಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಕಡ್ಡಾಯವಿರುವದಿಲ್ಲ — ಸುಸ್ತು ಕಮ್ಮೋದು ಅವಶ್ಯಕತೆಯೂ ಇರುವದಿಲ್ಲ. ಬೂಬೈಸಿನಂಥ ಪಾತಿ, ಅವಶ್ಯಕ ಕಲ್ಲು, ಮೈಕೊಂತ, ತಲ್ಲುನೋವು, ಸ್ಮರ ಪಾತ ವಿರ್ಸ ಇತ್ಯಾದಿ ಅನೇಕ ಆಲ್ಪ ಬೆಲೆಸೇವಕಗಳನ್ನು ಜನೇರಿಯನ್ ಜೀವನ ಮಿಕ್ಕ್ಶರ್ ಒಸ್ಸಂಯಾಸ್ಸಾ ಸುಲಭವಿಲ್ಲದೆ ಕಾಲಾ ಮತ್ತು ಅಮೂಲ್ಯವಂಥ ಭಾಷಿಕವಾದ ಬೂಂಗು ಸುಸ್ತಿನ ಸೀರ ಜಾಮಂತೆ ಇವರ ಜಾಪಾರೋಗಾಸ್ಸಾಕ್ಷ ತಾಳ್ಮೆದ್ದುವಾಗ ಮಾಮಾಗೂ ಇವರ ಅನುಭೋಗಾರಾಮಯಿಂದ ಇವರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ತುಸ್ತ ಕ್ರಮಾಪಟ್ಟ ಕ್ಷಿಪ್ರದ ಉಪಯೋಗವು (ಉಚ್ಚೈಪ್ಪ ಮುಂಜಾಗ್ರತೆಯ ಕಾರಣಾಯವಾಗಿದೆ) ಬಾಯಾಕ್ಕಿನ ಲಕ್ಷಣವು ಕುಸ್ಸನ್ನಿಯೂ (ನಿಷ್ಠ ವ್ಯಾಪಾರ ಗಳಲ್ಲಿಯೂ) ಕಲ್ಲಂಗಡಿ ಅವಯವಾಂಗದಲ್ಲಿಯೂ ದೊರೆಯುತ್ತದೆ.

ಜನೇರಿಯನ್ ಮಿಕ್ಕ್ಶರ್
ಮುಂಬಾಯಿ ೨

ಆತನಿಗೆ. ಊರ ಜನರ ಕಾಟ ತಪ್ಪಿತೆಂದು ತಲೆಯೆತ್ತಿದ. "ಭರಮಾ, ಯಾವ ಕಡೆ ಈ ಸುಡುಮಧ್ಯಾನ್ಹ ದ್ದಾಗೆ?" ಎಂದ ಒಬ್ಬ. "ಇಲ್ಲ ನಾಗಣ್ಣಾ, ಒಡೆಯರ ಮನೀಗೆ ಹೋಗ್‌ಬರ್ತೆ" ಎಂದ. ನಾಗಣ್ಣ ಭರಮನನ್ನು ಹಿಂತಿರುಗಿ ನೋಡುತ್ತ ಹೋದ.

ಭರಮನಿಗೆ ಜನರ ಕಾಟ ತಪ್ಪಿತು. ಭರಮ ವಿಚಾರಮಾಡ. ತೊಡಗಿದ: ಈಗ ಹೊರಟಿದ್ದು ಒಡೆಯರ ಮನೆಗೆ. ಆದರೆ ಮೊದಲು ಭರಮ ಕಚ್ಚೆಯುಟ್ಟು ಹೋಗುತ್ತಿದ್ದ ಒಡೆಯರ ಮನೆಗೆ. ಈಗ ಸರದಾರನಾಗಿ ಡೌಲಾಗಿ ಜೊರಟಿದ್ದಾನೆ. ಅವನಿಗೆ ಈಗ ಹೆಚ್ಚಿನ ಮನ್ನಣೆ ಬೇಕು. ದಿನವೂ ಕಚ್ಚೆಯುಟ್ಟು ಹೋದಾಗ ಭರಮ, ಆ ನಾಯಿ ಕಟ್ಟುವ ತೀರ ಕೆಳಗಿನ ಜಗುಲಿ ಒಂದು ಕಡೆ— ಒಡೆಯ ಎಲೆ ಜಗಿದು ಜಗಿದು ಉಗುಳಿ ಕೆಂಪಾಗಿದ್ದ ಎಂಜಲ ಕೊಳಸಿ ಒಂದು ಕಡೆ,— ನಾಯಿತಿನ್ನುವ ತಾಟಿನಲ್ಲಿ ನೊಣ ಹಾರಾಡುತ್ತಿರುತ್ತದೆ ಎಲ್ಲಿಡೆ— ಭರಮ ಅಲ್ಲಿ ಹೆಗಲ ಮೇಲಿನ ಕಂಬಳಿಹಾಸಿ ಕೂಡ್ರುತ್ತಿದ್ದ. ಭರಮನಿಗೆ ಆ ಚಿತ್ರ ಕಣ್ಮುಟ್ಟಿತು. ಮೈ ಝುಮ್ಮೆಂದಿತು. ತಾನು ಈ ಪೋಷಾಕಿನಲ್ಲಿ ಆಲ್ಲಿ ಕೂಡ್ರುವುದೇ? ಎಂದಿಗೂ ಆಗದು. ಭರಮ ಇಂದು ಹಳ್ಳಿಯ ಒಕ್ಕಲಲ್ಲ. ಧೋತರ ಅಂಗಿ ತೊಟ್ಟಿದ್ದಾನೆ. ಅವನಿಗಿಂದು ಮೇಲಿನ ಜಗುಲಿ! ಪಟೇಲರು, ಶಾನಭೋಗರು ಕೂಡ್ರುವ ಜಗುಲಿ ಬೇಕು. ಆಸ್ಪೇ ಏಕೆ? ಆ ದಿನ ಬಂದ ಮಾಪ್ಲೀದಾರರು ಅಲ್ಲೇ ಕುಳಿತಿದ್ದರು. ಭರಮನಿಗೆ ನಮ್ಮೂರ ಪಟೇಲನ ನೆನಪಾಯಿತು. ಅವನೇನು ಪೋಷಾಕು ಹಾಕುತ್ತಾನೆ? ಕೊಳಕು ಧೋತರವನ್ನುಟ್ಟರೂ ಅವನಿಗೇಕೆ ಮೇಲಿನ ಜಗುಲಿ? ತಾನು ಅವನಿಗಿಂತ ಏನು ಕಡಿಮೆಮಾಡಿದ್ದೇನೆ ಪೋಷಾಕನ್ನು? ಭರಮ ವಿಚಾರಮಾಡತೊಡಗಿದ: 'ನಮ್ಮ ಒಡೆಯರಿಗೂ ನನಗೂ ಯಾತರ ಸಂಬಂಧ? ಅವರಿಗೂ ಹೊಲ ಇದೆ, ಮನೆ ಇದೆ. ನನಗೂ ಹೊಲ ಇದೆ ಹರುಕು-ಮುರುಕಾಗಲಿ, ನನಗೂ ಸಣ್ಣ ಮನೆ ಇದೆ. ಮನೆಯಲ್ಲೆ ಹೆಂಡತಿ ಇದ್ದಾಳೆ. ವಿಚಾರ ಕೊಸೆ ಮುಟ್ಟುತ್ತಿರುವಾಗಲೇ ಒಡೆಯರ ಮನೆಯ ತೋಟದ ದಣಪೆ ಕಾಲಿಗೆ ಬಡಿಯಿತು. ಮುಂಚೆ ನೋಡಿದ. ತುತ್ತತುದಿಗೆ ಒಡೆಯರ ಮನೆ ಕಾಣುತ್ತಿತ್ತು. ಭರಮನಿಗೆ ನಾಚಿಕೆಯಾಯಿತು. ವಿಚಾರ ಬದಲಾಯಿತು. ಈ ಪೋಷಾಕಿನಲ್ಲಿ ಒಡೆಯರಿಗೆ ಸಿಗುವುದು ಬೇಡವೆನಿಸಿತು. 'ಒಡೆಯರ ಮನೆಯ ಆಳಾದ ನನಗೇತಕ್ಕೆ ಈ ಶೃಂಗಾರ! ಒಕ್ಕಲುಮಕ್ಕಳಿಗ್ಯಾರು ಹೇಳಿದ್ದಾರೆ ಈ ಡೌಲು?' ಎನಿಸಿತು. ಭರಮ ಕಲ್ಲಾಗಿ ನಿಂತ. ಭರಮನಿಗೆ ಹೋಗಬೇಕೋ ಹೋಗಬಾರದೋ ಎನಿಸಿತು. ಹಿಂತಿರುಗುವುದಕ್ಕೂ ನಾಚಿಕೆ. ನೇಸರು ಬಿಸಿಲ ಕಿರಣ ಚೆಲ್ಲುತ್ತಿದ್ದ. "ಏ ಭರಮಾ, ಜೋರಾಗಿ ಕಾಣ್ತಾ ಇದ್ದಿ! ಅಪ್ಪಾ ಮನ್ಯಾಗ ಅವನೆ" ಎಂದು ಒಡೆಯರ ಮನೆಯ ಮಾಣಿ ಕೂಗಿದ. ಭರಮನಿಗೆ ಧಸ್ಸೆಂದಿತು 'ಹುಂ' ಎಂದು ದಣಪೆ ದಾಟಿ ಮುಂದೆ ನಡೆದ.

ಭರಮ ನಿರೀಕ್ಷಿಸಿದ. ಒಡೆಯರು ಚಿಕ್ಕದಾದ ಸಂಜೆಯನ್ನುಟ್ಟು ಮೈ ಗಾಳಿಗೆ ಒಡ್ಡಿ 'ಎಲಡಕೆ' ಜಗಿಯುತ್ತಿದ್ದರು. ಈಗಲೇ ಊಟವಾಗಿರಬೇಕು. ಅಂಗಳದಲ್ಲಿದ್ದ ನಾಯಿ ಭರಮನನ್ನು ನೋಡಿ ಬೊಗಳಹತ್ತಿತು. ಭರಮನಿಗೆ ಆಚ್ಚರಿಯಾಯಿತು. ಎಂದೂ ಬೊಗಳದಿದ್ದ ನಾಯಿ ಇಂದು ಬೊಗಳಿದುದನ್ನು ಕಂಡು ಒಡೆಯರ ದೃಷ್ಟಿ ಹತ್ತಲ ಕಡೆಗೆ ಹೋಯಿತು. ಆ ದೃಷ್ಟಿ ಭರಮನಿಗೆ ಬಾಣದಂತೆ ನೆಟ್ಟಿತು. ಒಡೆಯರು ಮೊದಲು ಭರಮನ ಗುರುತು ಹಿಡಿಯಲಿಲ್ಲ. "ಯಾರು? ಬನ್ನಿ!" ಎಂದರು. ಭರಮ ಹೆದರುತ್ತ ಹೆಜ್ಜೆ ಮುಂದಿಟ್ಟ.

"ಇಲ್ಲಾ, ನಾನು ಭರಮಾ--ನನ್ನೊಡ್ಯಾ"

ಒಡೆಯರ ಕಣ್ಣು ಅರಳಿ ದೊಡ್ಡದಾಯಿತು, ಬಂಡಿಯ ಗಾಲಿಯ ಹಾಗೆ. "ಹುಂ, ಬಾ ಕೂತುಕೋ" ಎಂದು ಜಾಗ ತೋರಿಸಿದರು ನಾಯಿಯ ಕಡೆ. ನಾಯಿ 'ಗುರ್ರ್' ಎಂದಿತು ಭರಮನ ಗುರುತು ಹಿಡಿಯದೆ. ಭರಮ ಹಿಂದುಮುಂದೆ ನೋಡಿದ.

ಒಡೆಯರು, "ಹುಂ, ಕೂತ್ಕೊ ಭರಮಾ, ಮೊಳಕಾಲ ಕೆಳಗೆ ಪಂಜೆ ಬಂತು ಅಂತ, ಕೂಳ್ಕೋದ್ಕೆ ಹಿಂದೆ ಮುಂದೆ ನೋಡೋದೇ? ಒಕ್ಕಲು ಅನ್ನೋದು ಮರ್ತೇ ಹೋಯ್ತೆನೊ ಭರಮಾ? ಎಷ್ಟೆಂದರೂ ಕೀಳು ಜಾತಿ ನಿಮ್ದು. ಧೋತ್ರ ಉಟ್ರೂ ಜಾತೀ ಗುರ್ತು ಸಿಗದೇ ಹೋಗ್ತದ್ಯೋ?"

"ಇಲ್ಲ ಒಡ್ಯಾ, ತಪ್ಪಾಯ್ತು ದೇವ್ರು!" ಎನ್ನುವ ಒಂದು ಅಳುಕಿನ ದನಿ.

ಭರಮ ಕೂಡ್ರಲು ಹೋದ. ಹೆಗಲ ಮೇಲೆ ಕೈ ಹಾಕಿದ. ಕಂಬಳಿ ಇಲ್ಲವಾಗಿತ್ತು. ಅಲ್ಲೇ ಕುಳಿತುಕೊಂಡ.

"ನಿನ್ನ ಸುಟ್ಟ ಮೋರಿ ನೋಡ್ದೆ ಭಾಳ್ ದಿನಾಯ್ತು. ಇಷ್ಟು ದಿನವೆಲ್ಲಿದ್ದಿ?" ರಾಯರು ಸಿಟ್ಟಿನಿಂದ ಕೇಳಿದರು. ಭರಮ ನಡುಗ ಪತ್ತಿದ.

"ಒಡ್ಯಾ, ಮದ್ವೀ ಅಂತ ಬರಾಕಾಗ್ಲಿಲ್ಲ" ಎನ್ನುವ ಕರುಣೆಯ ದನಿ.

"ಗೊತ್ತಽದ್ಯ. ಮದ್ವೀ ಅಂತ ಈ ಪೋಷಾಕು. ಹೊಲದ ಕೆಲಸ ಮಾಡೋರು ಯಾರು? ಹೊಲ ಬಿಡ್ಸಿದರೆ ತಿಳೀತದೆ! ಉಟ್ಕೊಳ್ಳೋಕೆ ಕಚ್ಚೆಗೂ ಗತಿಯಿಲ್ಲದೇ ಹೋಗ್ತೀರಿ! ಈ ಪೋಷಾಕು ಎಷ್ಟು ದಿನ? ಒಕ್ಕಲಿಗ್ಯಾರು ಹೇಳ್ಯಾರೆ ಸೊಳಕಾಲ್ ಕೆಳಗೆ ಪಂಚೆ? ಮೇಲಾಗಿ ನಮ್ಮ ಮನೀಗೆ ನನ್ನೆದುರು ಡ್ಯಾಲು ತೋರ್ಸಾಕ್ ಹಾಕ್ಕೊಂಡು ಬಂದವನೆ, ಈ ಮಗ! ಹೊಟ್ಟೆಗಿಲ್ಲ ಅಂತ ಸಾಯ್ತೀರಿ....ಇಷ್ಟುದಿನ ಕೆಲ್ಸ ತಪ್ಸಿದ್ದಕ್ಕ ಏನಂತಿ?"

"ಒಡ್ಯಾ ಮದ್ವೀ ಅಂತ ಬರ್ಲಿಲ್ಲ. ದೇವ್ರು, ಕ್ಷಮಾ ಕೊಡಿ"

"ಮದ್ವಿ! ಹೊಟ್ಟೆಗಿಲ್ಲ, ಮೇಲಾಗಿ ಮದ್ವಿ. ನಮ್ಮ ಮನೇ ಎಂಜಲ ಗಂಜೀ ತೆಳೀ ಕುಡ್ದು ದೊಡ್ಡಾಗಿದ್ದಿ ನೀನು! ಸುದಿಕೇ ಕೇಳ್ನೋಡು. ನಮ್ಮದೇ ತಿಂದು ನಮ್ಮುಂದೆ ನಿನ್ನ ಟಾಪು ಟೀಪು! ಹೇಳೋಕೆ ನಾಚಿಕೆ ಇಲ್ವೆ?"

"ಒಡ್ಯಾ, ಕಾಲ್ಗೆ ಬೀಳ್ತೆ; ತಿಪ್ಪಾಯ್ತು ನನ್ನೊಡ್ಯಾ"

ಒಡೆಯರ ಮಗ, ತಾಟುತುಂಬ ನಾಯಿಗೆಂದು ಅನ್ನ ತಂದ. ರಾಯರು "ಈ ಮುಂಡೇದು ಇಲ್ಲೇ ಕುಳಿತಿದೆ. ಏ ಭರಮಾ, ಈ ಕಡೆ ಸರಿ. ರಾಮು, ಮುಟ್ಟಿಸಿಕೊಂಡೀ ಜೋಕೆ" ಎಂದು ಕೂಗಿದರು. ಭರಮ ಹೆದರಿದ. ಹೆದರಿ ಸರಿದ. ರಾಮು ನಾಯಿಯ ತಾಟಿಗೆ ಅನ್ನ ಸುರುವಿ, ನಾಯಿಯ ಬೆನ್ನ ಮೇಲೆ ಕೈಯೆಳೆದು ಹೋದ. ನಾಯಿ ಬಾಲ ಕುಣಿಸಿತು. ಹಸಿದ ಭರಮನನ್ನು ಕಂಡು ಗುರುಗುಟ್ಟಿತು. ಅದೂ ನಿಜವೇ! ಭರಮ ಅನ್ನಕ್ಕೆ ಗತಿಯಿಲ್ಲದೇ ಅಂಬಲಿ ಗಂಜಿ ತೆಳಿ ಕುಡಿದು ಬದುಕುವಾಗ, ನಾಯಿ ಅವನನ್ನು ನೋಡಿ ಗುರುಗುಡುವುದು ಅದರ ಜಾತಿ ಗುಣ. ಎಷ್ಟೆಂದರೂ ಅವನು ಒಡೆಯರ ನಾಯಿಗಿಂತ ಕೀಳು ಜಾತಿಯವ!

"ಥೂ ಮುಂಡೇದು, ನಾಯಿ ತಿನ್ನೋಡ್ಸೆ ಕೋರು ಹಾಕೋದೇ ಎಂತಾ ಜಾತಿ. ಭರಮಾ—ಏ ಭರಮಾ, ಇಂದು ಮದ್ವಿ; ನಾಳೆ ಅವ್ವಿ ಸೊಡ್ಲೇಗೆ (ಸುಡುಗಾಡ ಕಟ್ಟೆಗೆ) ಒಯ್ದೆ— ಅಂದರೆ ಇಲ್ಲಿ ಕೆಲ್ಸವಾಡೋರು ಯಾರು?"

ಭರಮ ಮಂಕಾಗಿ ಕಲ್ಲಿನಂತೆ ಕುಳಿತ. ನಾಯಿ ಅನ್ನ ತಿಂದು ತಾಟು ನೆಕ್ಕುತ್ತಿತ್ತು. ರಾಯರು ಎಲೆಜಗಿದು ತಿಪ್ಪೆಯ ಕೊಳಚೆಯ ಕಡೆ—ಕುಳಿತಲ್ಲಿಂದಲೇ—ಎಂಜಲ ಹಾರಿಸಿದರು. ಆ ಎಂಜಲಿನ ಕೆಂಪು ತುಂತುರುವನಿಗಳು ಭರಮನಿಗೆ ಎಷ್ಟೋ ಸಿಡಿದುವು. ಆದರೆ ಭರಮನಿಗೆ ಅದು ವಿಪರೀತವಾಗಿ ತೋರಲಿಲ್ಲ. ಆದರಲ್ಲಿಯೇ ಅವನ ನೈಯುಂಡು ಹೋಗಿದೆ. ಆದರೆ ಇಂದು ಅವನ ಹೊಸ ವಸ್ತ್ರಕ್ಕೆ ಸಿಡಿದದ್ದರಿಂದ ಕೊಂಚ ಭೇದವಾಯಿತು.

"ಭರಮಾ, ಬಂದಿದ್ದಿ ಹೇಗೂ—ನಾಯಿಯನ್ನು ಕರೆದೊಯ್ದು ಮೈತೊಳಿಸು! ಬರ್ತಾ ಕೊಟ್ಗೀಗೆ ಹೋಗಿ ಸಗಣೀ ತೆಗೆದು ಗೊಬ್ಬರಕ್ಕೆ ಜೆಲ್ಲು," ಎಂದರು ರಾಯರು.

ಭರಮ ಮೇಲೆ ಕೆಳಗೆ ನೋಡಿದ. ಅವನಿಗೆ ಹೆಂಡತಿಯು ನಿಃಸ್ಸಹಾಯಕಳಾಗಿ, ಹೊರಿಸುವವರ ದಾರಿ ಕಾಯುತ್ತ ಸಗಣಿಯ ಬುಟ್ಟಿಯ ಹತ್ತಿರ ನಿಂತ ಚಿತ್ರ ಕಣ್ಣು ಕಟ್ಟಿತು.

"ಹುಂ ಭರಮಾ. ಪಂಚೆ ಉಟ್ಟಿಯುಂತ ಹಿಂದು ಮುಂದು ನೋಡ್ತೀಯಾ? ಎಷ್ಟ ದಿನಾ ಉಟ್ಕೋಳ್ತೀ? ತಿನ್ನೋಕೆ ಗತಿಯಿಲ್ಲ ನಿಮ್ಗೆ. ನಮ್ಮ ಎಂಜಲಾ ತಿಂದು ನಾವ್ ಹೇಳೋದು ಕೇಳೋಕಾಗೋದಿಲ್ವೆ?"

ಭರಮನ ದೇಪ ಸರಿದಾಡಿತು. ಪಂಚೆ ಮೇಲಕ್ಕೇರಿಸಿ, ನಾಯಿಯನ್ನು ಹಿಡಿದು ಕಡೆಗೆ ಒಯ್ದ. ಭರಮನಿಗೆ ಜೀವವೇ ಬೇಡ-

೫೦-೫೨ ವರ್ಷಗಳಿಂದಲೂ ಸಾವಿರಾರು ಜನರನ್ನು
ಪೀಡಿಸುತ್ತಿರುವ ಮೂತ್ರಕೋಶದ ಕಲ್ಲನ್ನು
ಶಸ್ತ್ರಚಿಕಿತ್ಸೆಯಿಲ್ಲದೆ ಕರಗಿಸಿ ಅನುಭವಪಡೆದುಕೊಂಡ
ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಸಾವಿರಾರು ಮೂತ್ರ ಮೊಂದಿಗೆ—ಸ್ವಸ್ಥಚಿತ್ತ—ವೀರ್ಯಸ್ಖಲನ ಕಾಲದಲ್ಲಿ ಆಗುವುದು, ಸ್ವರತಿಯ ಪರಾಕಾಷ್ಠೆಯಿಂದ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯದೌರ್ಬಲ್ಯ ಇವುಗಳನ್ನೆಲ್ಲ ಹೊಡೆದೋಡಿಸಿ, ವೀರ್ಯವನ್ನು ಸತ್ವಯುತವಾಗಿಸುವುದು. ಮೂಲಶುದ್ಧಿಯಾಗಿ ತುಂಬ ಹಸಿವೆಯಾಗುವುದು. ತರುಣರು ಇದರ ಪ್ರಯೋಜನ ಪಡೆಯಲಾಗದಿಷ್ಟು ಅಲ್ಲ; ೬೦-೭೦ ವಯಸ್ಸಿನ ವಾಯುಕರೂ ಇದರ ಸೇವನೆಯಿಂದ ನವತಾರುಣ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಹೆಣ್ಣುಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಇವುಗಳ ಮೇಲೆ ಇದು ರಾಮಬಾಣವಾಗಿ ಕೆಲಸ ಮಾಡುತ್ತದೆ. ಇದರಲ್ಲಿ ಹಲವು ಗಿಡಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ಡಬ್ಬಿಯ ಬೆಲೆ ೧೫ ರೂ. ೭ ದಿನಗಳಲ್ಲಿ ಗುಣ. ೨ ತರ ಬೆಲೆ ರೂ. ೧೫ ದಿನಗಳಲ್ಲಿ ಗುಣ. ಶ್ರೀಮಂತ ಸೆಟ್ಟು-ಸಾಧಕರ ಸಲುವಾಗಿ ಸ್ಪೆಶಲ್ ಡಬ್ಬಿಗೆ ೧೬ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೆಲೆಯುಳ್ಳ, ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೂ ರೂ. ಯಂತೆ ಅಡ್ವಾನ್ಸು ಕಳುಹಬೇಕು. ಅದನ್ನು ವಜಾಮಾಡಿ ಉಳಿದ ಹಣಕ್ಕೆ ವಿ. ಪಿ. ಮಾಡುತ್ತೇವೆ. ಕಾಸ್ಟವೇನೂ ಇಲ್ಲ. ೧ಡಬ್ಬಿ ೩ಲ ದಿನಕ್ಕೆ ಸಾಲುವುದು. ೨ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯ ಪೆಚ್ಚು ವಿಲ್ಲ. ೬ಡಬ್ಬಿ ಕೊಳ್ಳುವವರಿಗೆ ೧ ಡಬ್ಬಿ ಬಕ್ಷೀಸು. ಗುಣದಲಗ್ಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. **ಮಿರಜ (ಎಸ್. ಎಂ. ಸಿ.)**

ಪಾಯಿತು. ರಾಯರು ಭರಮನನ್ನು ನೋಡಿ ಹುಚ್ಚು ನಗೆ ನಕ್ಕು "ಈ ಸೂ....ಮಕ್ಕಳಿಗ್ಯಾರು ಹೇಳ್ಯಾರೆ ಈ ಡ್ಯೌಲು ?" ಎಂದರು.

ಭರಮು ಕೆರೆಗೆ ಹೋದ. ಕೆರೆಯ ತಿಳಿನೀರಲ್ಲಿ ತನ್ನನ್ನು ತಾನು ನೋಡಿಕೊಂಡ. ಭರಮನಿಗೆ ಕಂಡಿತು....ಸರದಾರ] ಭರಮನ ಪ್ರತಿಬಿಂಬ. ಕಚ್ಚೆಯುಟ್ಟ ಭರಮ ಅಲ್ಲಿರಲಿಲ್ಲ. ಭರಮ ತನ್ನ ಪ್ರತಿಬಿಂಬ ನೋಡುತ್ತ ನಿಂತ. ಅಲ್ಲೇ ನಿಂತಿದ್ದ ನಾಯಿ ಟಣ್ಣನೇ ನೀರಿಗೆ ಜಿಗಿಯಿತು. ಭರಮ ತಕ್ಷಣ ನಾಯವಾದ.

ಭರಮ ಹಿಂದಿರುಗಿದ. ಕೊಟ್ಟಿಗೆಯಲ್ಲಿ ಸಿಡಿದ ಸಗಣಿ ಹೊಸ ಪಂಚೆ ಅಂಗಿಗೆ ಬಡಿದಿತ್ತು. ರಾಯರು ವ್ಯಂಗ್ಯದೃಷ್ಟಿ ಭರಮನ ಕಡೆಗೆ ಬಿಟ್ಟು "ಭರಮಾ ನೋಪ್ಪೊ ನಿನ್ನ ಪಂಚೆ ! ಒಕ್ಕಲಿಗ್ಯಾರು ಹೇಳ್ಯಾವೆ ಪೊಳಕಾಲ್ ಕೆಳಗೆ ಪಂಚೆ ?" ಎಂದರು.

ಭರಮು ಮನೆಯ ಹಾವಿ ಹಿಡಿದ, ಸಂಜೆಯಾಗಿತ್ತು. ದಾರಿಯ ಬಳಿ ಎಷ್ಟೋ ಜನ ಭರಮನನ್ನು ಮಾತನಾಡಿಸಿದರು. ಆದರೆ ಭರಮನಿಗೆ ಉತ್ತರಕೊಡಲು ಚೈತನ್ಯವಿರಲಿಲ್ಲ. ಎಷ್ಟೋ ಜನ "ಭರಮಾ ಯಾಕ ಮಾತಾಡ್ತಾನೆ ? ಪೊಳಕಾಲ ಕೆಳಗೆ ಪಂಚೆ ಬಂದಿವೆ !" ಎಂದರು. ಭರಮನಿಗೆ ಕೊಯ್ದ 'ಗಾಯಕ್ಕೆ ಉಪ್ಪೇರಚಿದಂತಾಗುತ್ತಿತ್ತು. ಎಲ್ಲದಕ್ಕೂ ಭರಮನ ಉತ್ತರ ಮೌನ-ಮುದ್ರೆಯಾಗಿತ್ತು.

ಮನೆಗೆ ಬಂದ ಕಾಲು ಎಳೆಯುತ್ತ. ಹೊಸ ಹೆಂಡತಿ ದಾರಿ ಕಾಯುತ್ತಲಿದ್ದಳು. ಮುದಿತಾಯಿ ಮಗನ ಸಿಂಗಾರ ನೋಡಿ ಕಣ್ಣುಜ್ಜಿಕೊಂಡಳು. ಹೆಂಡತಿ ಓಡಿ ಹೋಗಿ ನೀರು ತಂದು ಕೊಟ್ಟಳು. ಭರಮು ಕಾಲಮೇಲೆ ನೀರು ಸುರುವಿಕೊಂಡ. ಯಾರ ಕಡೆಗೂ ನೋಡದೆ ಕೆಳಗೆ ಮೋರೆಮಾಡಿ, ಜಗುಲಿಯ ಮೇಲೆ ಕುಳಿತುಕೊಂಡ. ತಾಯಿಗೆ ದುಃಖವಾಯಿತು, ಭರಮನ ಮೌನವ್ರತ ಕಂಡು.

"ಭರಮಾ, ಒಡ್ಯರು ಏನಂದ್ರು ?"

ಭರಮ ಸುಮ್ಮನೇ ಕುಳಿತಿದ್ದ.

"ನಂಗೊತ್ತು. ನೀ ಈ ವಸ್ತ್ರ ಹಾಕ್ಕೊಂಡು ಯಾಕ್ ಹೋದಿ? ನೀವ್ ಡ್ಯೌಲು ಮಾಡಿದ್ರೆ ಅವರ ಕಣ್ಣಿಗೆ ಮಣ್ಣು ಬೀಳ್ತದೆ. ಆ ದಿನ ನನ್ನ ಗಿರಿಯಾ ಜಾತ್ರೀಗಂತ ಧೋತ್ರಾ ಉಟ್ಟು, ನಿನ್ನನ್ನ ಹೆಗ್ಲ ಮೇಲೆ ಕುಳ್ಸಕೊಂಡಿದ್ದ. ನಾನೂ ತೋಪಿನ ಸೆರ್ಗಿನ ಸೀರೆ ಉಟ್ಟಿದ್ದೆ. ನೀ ಇನ್ನೂ ಚಿಕ್ಕವ. ದೇವ್ರ ಮನೆ ಒಳಗೆ ಹೊಕ್ಕೂವಾಗ್ಲೆ, ಹಿಂಬದಿಗೆ ನಮ್ಮೊಡ್ಯಾ ಇದ್ದದ್ದು ನಾವ್ ನೋಡ್ಲಿಲ್ಲಾ. ನಾವೇ ಮೊದಲು ಒಳಗ್ ಹೋದ್ವಿ. ಮಾರ್ನಾ ದಿನ, ಒಡ್ಯಾ ಅವ್ರಿಗೆ ಕರ್ದು ಬಾಯಿಗೆ ಬಂದ್ಹಾಂಗೆ ಬಯ್ದು ಬಿಟ್ರು. 'ಒಕ್ಲ ಮುಕ್ಕೀಗೆ ಪೊಳ್ಳಾಲ್ ಕೆಳಗೆ ಪಂಚೆ ಯಾಕ್ಬೇಕು ?' ಅಂದರು. ಅಂದ್ನಿಂದ ನನ್ನ ಒಬ್ಬಾ ಧೋತ್ರಾ ಉಟ್ಟಿಲ್ಲಾ. ಆದೇ ವ್ಯಥೀಲೇ ಸತ್ತೋಗ್ದೆ." ಎಂದು ಬಿಕ್ಕಿ ಬಿಕ್ಕಿ ಅಳುತ್ತ "ಮಗ್ನೆ, ನಿ ಗ್ಯಾರು ಹೇಳವ್ರೆ ಧೋತ್ರ ಅಂಗಿ ?" ಎಂದಳು. ಭರಮು ಕಲ್ಲಾ ಎಲ್ಲವನ್ನೂ ಕೇಳಿದ. ಆತನ ತಲೆ ಕಾಯ್ದು ಹೋಯಿತು. ಸಾ ದುದಕ್ಕೆ ಹೊಟ್ಟೆಯ ಹಸಿವು.

ತಾಯಿ ಊಟಕ್ಕೆ ಕರೆದಳು. ಭರಮ ಗಂಜಿ ಅಂಬಲಿ ಕುಡಿ ಎದ್ದ. ಆಗ ಅವನಿಗೆ ಒಡೆಯರ ನಾಯಿಯ ಅನ್ನದೂಟದ ನೆನ ಬಂದಿರಬೇಕು. ಭರಮನಿಗೆ ತನ್ನ ಬಾಳು ನಾಯಿಗಿಂತ ಕೀಳು ಎನ್ನಿಸಿತು. ನಿಸ್ತೇಜನಾಗಿ ಹಸೆಯ ಮೇಲೆ ಒರಗಿದ.

ಭರಮನಿಗೆ ಮೊದಮೊದಲು ನಿದ್ದೆ ಬರಲಿಲ್ಲ. ಒಂದೊಂದೇ ನೆನಪು ಬರತೊಡಗಿದುವು. ನಿದ್ದೆ ಹತ್ತಿದಾಗ, ಯಾರೋ ಬಂದಂತೆ ಆಯಿತು. ಭರಮ ಓಡಿ ಹೋಗಿ ಬಾಗಿಲು ತೆರೆದ. ತಾಯಿ ! ಭರಮ ಹರಕು ಕಚ್ಚೆಯುಟ್ಟಿದ್ದ. ಆಗ ೧೦-೧೨ ವರ್ಷ ಆತನಿಗೆ. ವಿಪರೀತ ಹಸಿವು. ಒಂದು ದಿವಸವಿಡೀ ಉಪವಾಸ. ಓಡಿಹೋಗಿ ತಾಯಿಯ ಬಗಲಿನೊಳಗಿನ ಕುಡಿಕೆಯಲ್ಲಿದ್ದ ಗಂಜೀ ತೆಳಿ ಕುಡಿದು ಬಿಟ್ಟ. "ಅಮ್ಮಾ ಹಸಿದಿದ್ದೆ. ಹೊಟ್ಟೆ ತುಂಬಿತು" ಎಂದು ನೆಗೆದಾಡಿದ. ತಾಯಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. "ಅಮ್ಮಾ, ಯಾಕ್ ಅಳ್ತಿ ?" ಎಂದು ತಾನೂ ಅತ್ತ. ತಾಯಿ, "ಮಗೂ ನೀನು ಹೊಟ್ಟೇಗೆ ಗಂಜೀ ಇಲ್ಲ ಅಂತ ಅಳ್ತಿ. ಒಡ್ಯಾರ ಮನಿಯಾಗ ಹೊರಗೆ ಹೊರಿಗಟ್ಲೆ ಅನ್ನ ಚೆಲ್ತಾರೆ. ಹಳಸಿದ ತೆಳೀನ ನೀ ಕುಡ್ದ ಬಿಟ್ಟ" ಅಂದಳು. ಭರಮು ಕಣ್ಣೀರು ಒರಸಿಕೊಂಡ. ತಾಯಿ ಅಳುತ್ತಲೇ ಇದ್ದಳು. ಭರಮ ಕಣ್ಣು ತೆರೆಯಲು ಪ್ರಯತ್ನಿಸಿದ. ಭರಮ ಈಗ ಸ್ವಲ್ಪ ದೊಡ್ಡವನಾಗಿದ್ದಾನೆ. ಹೊಸ ಹುಮ್ಮಸ್ಸಿ ದಿಂದ, ತಾನು ಮೊದಲ ಸಲ ಬಿತ್ತಿದ ಭತ್ತ ಚೆನ್ನಾಗಿ ಫಲ ಕೊಟ್ಟ ಆನಂದ ತಾಯಿಗೆ ಉಸುರಲು ಬಂದ. ತಾಯಿ ಅಗಲೂ ಅತ್ತಳು. "ಅಮ್ಮಾ, ಯಾಕ್ ಅಳ್ತಿ ? ನಗಬೇಕು ಅಮ್ಮಾ !" ಎಂದ. ತಾಯಿ, "ಮಗೂ, ಎಷ್ಟೇ ಬೆಳೆ ಬಂದ್ರೂನುನೆ ಒಡೆಯರಿಗೆ ಹೋಗ್ತದೆ. ನಾವು ಅವರಿಗೆ ಸಾಲಾ ಕೊಡೋದದೆ." ಅಂದಳು. ಭರಮನ ಮೋರೆ ಪೆಚ್ಚಾಯಿತು. ಭರಮ ಕಣ್ಣುಜ್ಜಿಕೊಂಡ. ಭರಮನ ಮದುವೆ ನವಿಲುಗೋಣಿನಲ್ಲಿ. ಭರಮನ ಆನಂದಕ್ಕೆ ಮಿತಿಯೇ ಇಲ್ಲ. "ಅಯ್ಯಯ್ಯ ! ಅವ್ವನಿಗೆ ಹೊಸ ಸೀರೆ, ತನಗೆ ಪೊಳಕಾಲ ಕೆಳಗೆ ಪಂಚೆ, ಬದೀಗೆ ಹೊಸ ಹೆಂಡ್ತಿ" ಭರಮು ಉಬ್ಬಿದ. ಹಿಗ್ಗಿ ಹೆಬ್ಬಾಗಿಲಾದ. ಹೊರಗೆ ಶಬ್ದವಾದಂತಾ ಯಿತು. ಮದುವೆಯ ಘಟಾಸ್ಫೋಯ ನಾದವದು. ಭರಮ ದಿಗಿಲು ಗೊಂಡ. ಎಚ್ಚರವಾಯಿತು. ಕೋಳಿಯು ಕೂಗುತ್ತಿತ್ತು. ತಾಯಿ ಬಂದು, "ಭರಮಾ, ಹೊಲಕ್ಕೋಗೂ, ನಿನ್ನೇ ಒಡ್ಯರು ಬಯ್ದು ಕಳಸ್ಯಾರೆ !" ಎಂದಳು. ಭರಮನು ನಂಬಲಾರದೆ ಹೋದನು.

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

ತೀರ್ಥಯಾತ್ರೆ ಮಾಡುವ ಜನರು ನಮ್ಮ ನಾಡಿನಲ್ಲಿ ಕಡಿಮೆಯಿಲ್ಲ. ಆದರೆ ತೀರ್ಥಯಾತ್ರೆಯ ಕಾಲದ ಅನುಭವಗಳನ್ನು ಸಾಹಿತ್ಯದಲ್ಲಿ ಮೂಡಿಸುವವರು ಕಡಿಮೆ. ಶ್ರೀ. ಮಿರ್ಜಿ ಅಣ್ಣಾರಾಯರು ಇದರಲ್ಲಿ ಅಂತಹ ಕಾರ್ಯ ಮಾಡಿದ್ದಾರೆ.

★

(೧) ಸೇಡಬಾಳದಿಂದ ಶ್ರೀಶಾಂತಿಸಾಗರರೆಡೆಗೆ

"ಆಶ್ರಮದಲ್ಲಿ ಕನ್ನಡವನ್ನೇಕೆ ಕಲಿಸಬಾರದು?"

"ಕಲಿಸಬಹುದಲ್ಲ; ಶಿಕ್ಷಕರಿಲ್ಲೆಂದು ಕಲಿಸುವುದಿಲ್ಲ"

"ನೀವು ಕನ್ನಡ ಆರಂಭಿಸುವುದಾದರೆ ನಾನೇ ಬರುವೆ."

"ಸರಕಾರೀ ಕೆಲಸ ಬಿಟ್ಟು!"

"ಹೋ! ಶಾಂತಿಸಾಗರ ಆಶ್ರಮದಂಥ ಒಂದು ಸಂಸ್ಥೆಗೆ ಕನ್ನಡ ದೀಕ್ಷೆಯನ್ನು ಕೊಡಬೇಕಾದರೆ, ಏನನ್ನೂ ಬಿಡಬಹುದು."

"ಅಸ್ಸು ಹೊಗೆಹೊರುವಂತಿದ್ದರೆ ಆಶ್ರಮವನ್ನೇ ಏಕೆ ನೋಡಿಕೊಳ್ಳಬಾರದು?"

"ನಿಮ್ಮಂಥ ಹಿರಿಯರು ತರುಣರಿಗೆ ಕೆಲಸ ಮಾಡಲಿಕ್ಕೆ ಅವಕಾಶ ಕಲ್ಪಿಸಿ ಕೊಡಬೇಕಲ್ಲ! ತಾವೂ ಮಾಡುವದಿಲ್ಲ, ಇನ್ನೊಬ್ಬರಿಗೂ ಮಾಡಗೊಡುವುದಿಲ್ಲ." ತುಸು ತಡೆದು "ಸ್ವಲ್ಪ ವಿಚಾರ ಮಾಡಿರಿ. ಕೇವಲ ಮೂವತ್ತು ಹುಡುಗರ ಪ್ರಾಥಮಿಕ ಶಿಕ್ಷಣಕ್ಕೆ ವರ್ಷಕ್ಕೆ ಹತ್ತು ಸಾವಿರ ರೂಪಾಯಿ ವೆಚ್ಚ ಮಾಡುವಿರಿ. ಅದೂ ಕನ್ನಡ ಮಾತೃಭಾಷೆಯುಳ್ಳವರಿಗೆ ಮರಾಠಿ ಭಾಷೆಯಲ್ಲಿ ಶಿಕ್ಷಣ ಕೊಡಲಿಕ್ಕೆ! ಅದರಲ್ಲೂ ಊರಲ್ಲಿ ಎರಡು ಮೂರು ಕನ್ನಡ ಸಾಲೆಗಳಿರುವಲ್ಲಿ! ನಾಡಿನ ದುಡ್ಡು ವ್ಯರ್ಥ ಹಾಳಾದಂತೆ ಎನಿಸುವುದಿಲ್ಲವೆ ನಿಮಗೆ?" ಎಂದು ಚಿಕ್ಕ ಉಪನ್ಯಾಸವನ್ನೇ ಆರಂಭಿಸಿದೆ.

"ಆಶ್ರಮದ ಸಲುವಾಗಿ ಇಷ್ಟು ವಿಚಾರ ಮಾಡುವವರು ಯಾರಿದ್ದಾರೆ ಊರೊಳಗೆ? ಆಶ್ರಮದ ಲಾಭ ಮಾತ್ರ ಎಲ್ಲರಿಗೂ ಬೇಕು. ಊರೊಳಗೆ ಮದುವೆಗಳಾದರೆ ಪಾತ್ರೆ ಇಲ್ಲಿಯದು, ಚಾಪಲಿಕ್ಕೆ ಗುದ್ದಾರ ಇಲ್ಲಿಯದು, ಮಂಟಪಕ್ಕೆ ಬಿದಿರು ಇಲ್ಲಿಯವು! ಇದೇ ಆಶ್ರಮದ ಅನಾಥ ವಿದ್ಯಾರ್ಥಿಗಳಿಗೆ ಜೋಳ ಮಾರಬೇಕಾದರೆ, ಕಳ್ಳಪೇಟೆಯ ಧಾರಣೆ ಇವರದು. ಸೇಡಬಾಳದ ಜನ ಇಂಥದು!"

"ನೀವೂ ಸೇಡಬಾಳದವರೇ ಅಲ್ಲ!"

"ನಾನೂ ಇಲ್ಲಿಯವ, ನೀವೂ ಇಲ್ಲಿಯವರೇ; ಆದರೆ ಒಂದು ಮಾತು ಅಂತ ಹೇಳಿದೆ. ಆದಿರಲಿ, ಆಶ್ರಮವನ್ನು ನೀವು ನೋಡಿಕೊಳ್ಳುವಿರೋ?"

"ಅವಶ್ಯವಾಗಿ."

"ಹಾಗಾದರೆ, ಒಂದು ದಿನ ಶಾಂತಿಸಾಗರ ಮಹಾರಾಜರ ಕಡೆಗೆ ಹೋಗಿ ಬರೋಣ ನಡೆಯಿರಿ!"

ಸೇಡಬಾಳದ ಶ್ರೀಶಾಂತಿಸಾಗರ ಅನಾಥ ಛಾತ್ರಾಶ್ರಮದ ಸಂಚಾಲಕರ ಈ ಆಹ್ವಾನವು ನನ್ನ ಪ್ರವಾಸಕ್ಕೆ ಕಾರಣವಾಯಿತು.

ಸೇಡಬಾಳವು ಕರ್ನಾಟಕ-ಮಹಾರಾಷ್ಟ್ರಗಳ ಗಡಿನಾಡಿನಲ್ಲಿರುವ ಒಂದು ಪ್ರಸಿದ್ಧ ಹಳ್ಳಿಯಾಗಿದೆ. ಹಿಂದಿನ ಕಾಲಕ್ಕೆ ಶಿಲಾಹಾರರ ಆಳಿಕೆಯಲ್ಲಿ, ವೈಭವದಿಂದ ಬಾಳಿದ ಊರಿದು. ಆದರಂತೆ ಕನ್ನಡದ ಕೇಂದ್ರಸ್ಥಳವೂ ಆಗಿತ್ತು. ಈಗಲಾದರೂ ಊರಲ್ಲಿಯ ಕನ್ನಡತನಕ್ಕೇನೂ ಚ್ಯುತಿಯಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಹುಟ್ಟಿದ ಶಾಂತಿಸಾಗರ ಆಶ್ರಮದಲ್ಲಿ ಮಾತ್ರ, ಹೇಗೋ ಮರಾಠಿ ಶಿಕ್ಷಣ ಒಮ್ಮೆ ಆರಂಭವಾಗಿ ಸಾಗುತ್ತ ಬಂದಿದೆ. ಈ ವಿಷಯ ಬೇರನ್ನೊಮ್ಮೆ ಕಿತ್ತೊಗೆಯಬೇಕೆಂದು, ಶ್ರೀ ಆಚಾರ್ಯ ಶಾಂತಿಸಾಗರರ ಸನ್ನಿಧಿಗೆ ಪ್ರಯಾಣ ಬೆಳಸಿದೆ.

ಅದು ವರ್ಷಾಕಾಲದ ಆರಂಭ. ಮುಂಬರುವ ಚಾತುರ್ಮಾಸಗಳನ್ನು ಎಲ್ಲಿ ಕಳೆಯಬೇಕೆಂದು ಜೈನಮುನಿಗಳು ವಿಚಾರಿಸುವ ಸಮಯ. ಆಗ ಆಚಾರ್ಯರು ಗಜಪಂಥ ಕ್ಷೇತ್ರದಲ್ಲಿ—ನಾಶಿಕದಿಂದ ಏದು ಮೈಲಿನ ಮೇಲಿರುವ ಮಸರೂಳ ಗ್ರಾಮ—ಇರುವುದೆಂದು ತಿಳಿಯಿತು. ಅದರಿಂದ ತಂದೆ-ತಾಯಂದಿರನ್ನು ಕರೆದುಕೊಂಡು ಸೇಡಬಾಳದಿಂದ ಹೊರಟೆ. ಅಂದು ಬ್ರಹ್ಮಚಾರಿಗಳು—ಆಶ್ರಮದ ಸಂಚಾಲಕರು—ನಮ್ಮ ನೇತೃವಾಗಿದ್ದರು. ಗೆಳೆಯರೊಬ್ಬನು ಜೊತೆಗೆ ಹೊರಟಿರು. ಅವರೂ ಕನ್ನಡದ ಭಕ್ತರು, ಅದಕ್ಕಿಂತಲೂ ಹೆಚ್ಚಾಗಿ ಆಶ್ರಮದ ಹಿತಚಿಂತಕರು.

ಧರ್ಮದ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುವವರಿಗೆ ಆಶ್ರಮವೊಂದು ಸಾಧನವಾಗಿದೆ; ಆಶ್ರಮದ ದ್ರವ್ಯನಿಧಿಯ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಗಳಿಸಿದ ವಿಶ್ವಸ್ತ ಮಂಡಳದ ಸದಸ್ಯರೂ ಇದ್ದಾರೆ; ಅದನ್ನೇ ಅನುಕರಿಸಬೇಕೆನ್ನುವ ಸೇಡಬಾಳದ ಶ್ರಾವಕರ ಕಣ್ಣೂ ಸಂಸ್ಥೆಯ ಮೇಲಿದೆ. ಇವರಿಗೆಲ್ಲ ಕನ್ನಡ ಮರಾಠಿಯ ಪ್ರಶ್ನೆಯಿಲ್ಲ, ಮಡ್ಡಿನ ಪ್ರಶ್ನೆಯಿದೆ. ಸಂಸ್ಥೆಯ ಹಿತಚಿಂತನೆಯಿಲ್ಲ, ತಮ್ಮ ಮನೆ ತುಂಬಿಕೊಳ್ಳುವ ದೃಷ್ಟಿಯಿದೆ. ಈ ಎಲ್ಲ ಸಂಗತಿಗಳು ನನಗಿಂತಲೂ ನನ್ನ ಗೆಳೆಯನಿಗೆ ಹೆಚ್ಚು ಗೊತ್ತು. ಬ್ರಹ್ಮಚಾರಿಗಂತೂ ಅನುಭವದ ಸಂಗತಿಗಳವು. ಆದರಿಂದ ಅವರು ಆಗಿನಿಂದಲೇ ಚಾಣಕ್ಯನೀತಿಯನ್ನು ಅವಲಂಬಿಸಿದ್ದರು. ಇದನ್ನರಿಯದ ನಾನು ಮಾತ್ರ 'ಸರಕಾರೀ ಕೆಲಸವನ್ನು

ದಿ ನೂತನ ಆಯುರ್ವೇದ ಕಾರ್ಯಾಲಯ ಲಿ., ವಿಜಾಪೂರ

ಎಲ್ಲ ಬಗೆಯ ಆಯುರ್ವೇದ ಔಷಧಗಳನ್ನು ಶಾಸ್ತ್ರಶುದ್ಧವಾಗಿ ಸಿದ್ಧಗೊಳಿಸುವ ಕರ್ನಾಟಕದ ಸರ್ವಾಂಗ ಪರಿಪೂರ್ಣವಾದ ಕಾರಖಾನೆ. ಅನೇಕ ವೈದ್ಯ-ಡಾಕ್ಟರರು ನಮ್ಮ ಔಷಧಗಳನ್ನು ಪಯೋಗಿಸಿ ಒಳ್ಳೇ ಗುಣಕಾರಿಯೆಂದು ಪ್ರಶಂಸಿಸಿದ್ದಾರೆ. ಎಲ್ಲ ಪ್ರಕಾರದ ಭಸ್ಮ-ರಸಾಯನ-ಮಾತ್ರೆ-ಆಸವಾರಿಷ್ಟ ಕಷಾಯಗಳು — ಅವಲೇಹ-ತೈಲ ಮೊದಲಾದ ಔಷಧಗಳಿಗೆಲ್ಲ ಇಂದೇ ಬರೆಯಿರಿ.

ಕರ್ನಾಟಕದಲ್ಲೆಲ್ಲ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಬಿಟ್ಟು ಬಂದರೂ ಅಡ್ಡಿಯಿಲ್ಲ. ಕನ್ನಡದ ಕೆಲಸಕ್ಕಾಗಿ ಬಿಡುತ್ತಿರುವೆ. ಒಂದು ಸಂಸ್ಥೆಗೆ ಕನ್ನಡ ದೀಕ್ಷೆಯನ್ನು ಕೊಡುತ್ತಿರುವೆ' ಎಂಬ ಹುಮ್ಮಸ್ಸಿನಲ್ಲಿದ್ದೆ. ಹುರುಪಿನಿಂದ ನಿಲ್ದಾಣಕ್ಕೆ ಬಂದೆ. ಆದರೆ ಅಲ್ಲಿ ಬ್ರಹ್ಮಚಾರಿಯೂ ಇಲ್ಲ; ಗೆಳೆಯನೂ ಇಲ್ಲ. ರೈಲು ಬಿಡುವ ಹೊತ್ತಾದರೂ ಅವರ ಸುಳಿವೇ ಇಲ್ಲ.

ಟೆನ್ಷನಾಗಿ ನಿಂತೆ! ಗಡಿಯಾರದ ಕಡೆಗೊಮ್ಮೆ, ಊರ ದಾರಿಯ ಕಡೆಗೊಮ್ಮೆ ನೋಡತೊಡಗಿದೆ. ಊರಿಂದ ಗಾಡಿಗಳು ಬಂದುವು. ಟಾಂಗಾ ಬಂತು, ಉಳಿದ ಅನೇಕ ಜನ ಪ್ರವಾಸಿಕರೂ ಬಂದರು. ಆದರೆ ಇವರ ಸುಳಿವೇ ಇಲ್ಲ. ಈಗಾಗಲೇ ಹಿಂದಿನ ನಿಲ್ದಾಣದಿಂದ ರೈಲು ಬಿಟ್ಟು ಗಂಟೆಯಾಗಿದ್ದಿತು. ದಾರಿ ಬಿಡುವ ಕೈಯೂ ಹೊಗೆ-ಬಂಡಿಗೆ ದಾರಿ ಮಾಡಿ ಕೊಟ್ಟಿದ್ದಿತು. ನಾನು ನಿಲ್ದಾಣದ ಒಳ-ಕೊರಗೆ ಪುನಃ ನಿಗೆ ನೆಮ್ಮದಿಯಿಲ್ಲದೆ ಓಡಾಡುತಲಿದ್ದೆ. ಆಗ ಊರಿನಲ್ಲಿ ಬ್ರಹ್ಮಚಾರಿಗಳು ಬರುವುದು ಕಂಡಿತು. ಸಂತಸಗೊಂಡು 'ಸರ್' ಸ್ಟೇಷನ್ ಮಾಸ್ತರರ ಹತ್ತಿರ ಟಿಕೇಟು ಕೇಳಲಿಕ್ಕೆ ಹೋದೆ.

"ಲೈನಿನಲ್ಲಿ ದಟ್ಟಣೆಯಿದೆ. ಅದಕ್ಕಾಗಿ ಟಿಕೇಟು ಕೊಡುವು ದನ್ನು ನಿಲ್ಲಿಸಲಾಗಿದೆ."

ಎಂಬ ಸ್ಟೇಶನ್ ಮಾಸ್ತರರ ಮಾತು ನನ್ನ ಹಿಗ್ಗನ್ನು ಕುಗ್ಗಿಸಿತು. ಹಿಂದಿನಿನ ಓಡುತ್ತ ವೇಳೆಗೆ ಸರಿಯಾಗಿ ಬಂದ ಗೆಳೆಯನೂ ನಾವೂ ಕೂಡಿ, ಸೇಡಬಾಳ ನಿಲ್ದಾಣದಲ್ಲಿಯೇ ನಿಂತೆವು. ಎದುರಿನಿಂದಲೇ ಸಾವಿರಾರು ಜನರನ್ನು ಹೇರಿಕೊಂಡು ರೈಲು ಹೋಯಿತು. ಟಿಕೇಟು ಸಂಪಾದಿಸಲಿಕ್ಕೆ ಮಾಡಿದ ಎಲ್ಲ ಪ್ರಯತ್ನವೂ ವ್ಯರ್ಥವಾಯಿತು. ನಿರಾಶೆಯಿಂದ ನಿಲ್ದಾಣದ ಕೆಳಗೆ ಇಳಿದು ಬರುತ್ತ ಗೆಳೆಯನಿಗೆ ಅಂದೆ:

"ನೀನು ಇನ್ನು ಬರುವದಿಲ್ಲವೆಂದೇ ಭಾವಿಸಿದ್ದೆ. ಅರಳಿಯ ವ್ಯಾಪಾರದ ಕಾರಣ ಹೇಳಿ ಉಳಿದುಕೊಳ್ಳುವೆಯೆಂದು ಯೋಚಿಸಿದ್ದೆ."

"ಹಾಗೇನಿಲ್ಲ. ನೀನು ನಿನ್ನ ಜೀವನವನ್ನೆಲ್ಲ ಆಶ್ರಮಕ್ಕಾಗಿ ಮುಡುಪಿಡುವಾಗ, ನಾನು ನಾಲ್ಕು ದಿನ ನನ್ನ ವ್ಯವಹಾರ ಬಿಟ್ಟು ನಿನ್ನ ಜೊತ್ತು ಹೆತ್ತದಿದ್ದರೆ ಹೇಗೆ?"

"ಈಗ ಬರುವೆನೆಂದು ಆಗಲೇ ಹೋದವ, ಇಷ್ಟೇಕೆ ತಡ ಮಾಡಿದೆ?"

"ಯಾರಿಗೂ ತಿಳಿಯದಂತೆ ಬರಬೇಕಲ್ಲ.!"

"ಏಕೆ? ನಾನೆಲ್ಲರಿಗೂ ಹೇಳುತ್ತ ಬಂದೆನಲ್ಲ!"

"ಕೆಲಸ ಸಾಧಿಸುವ ವರೆಗೆ ಯಾರಿಗೂ ಹೇಳುವಂತಿಲ್ಲ."

"ಇದರಲ್ಲೇನು ನಮ್ಮ ಸ್ವಾರ್ಥವಿದೆಯೇ? ಇದರಲ್ಲೇಕೆ ಮೋಸ?"

"ಸ್ವಾರ್ಥವಿಲ್ಲವೆಂದರೆ ಹೇಗೆ? ಒಳ್ಳೆಯ ಸಂಸ್ಥೆಯನ್ನು ಕಟ್ಟಬೇಕು, ಕನ್ನಡದ ಕೆಲಸ ಮಾಡಬೇಕು- ಎನ್ನುವುದೂ ಸ್ವಾರ್ಥವಲ್ಲವೆ? ಇಂಥ ಕೆಲಸಗಳಿಗೂ ನಮ್ಮ ಊರಲ್ಲಿ--ಕನ್ನಡ ನಾಡಿನಲ್ಲಿ—ಅಡ್ಡಿ-ಆತಂಕಗಳು ಇದ್ದೇ ಇರುವವು."

"ಆದಿರಲಿ. ಮುಂದಿನ ಪ್ರಯಾಣದ ವಿಚಾರ ಮಾಡಿರಿ!" ಎಂದ ಬ್ರಹ್ಮಚಾರಿಗಳ ಮಾತಿನಿಂದ ನಾವು ಮುಂದಿನ ಪ್ರಯಾಣದ ವಿಚಾರಕ್ಕೆ ಬಂದೆವು. ಅದೆಲ್ಲಿಂದಲೋ ಮದುವೆಯ ನಿಬ್ಬಣವನ್ನು ತರಲಿಕ್ಕೆ ನಡೆದ ಎತ್ತಿನ ಗಾಡಿಗಳು ಸಿಕ್ಕವು. ಅವುಗಳನ್ನೇ ಹಿಡಿದು— ಸದ್ಯ ಊರು ಬಿಟ್ಟರೆ ಸಾಕೆನ್ನುವ ಬ್ರಹ್ಮಚಾರಿಗಳು —ನಮ್ಮನ್ನು ಕೂಡಿಸಿಕೊಂಡು ಮಿರಜಿಗೆ ಸಾಗಿದರು.

ಅಂದು ಮುಂದಿನ ಗಾಡಿಗೆ ಮಿರಜಿಯಲ್ಲಿಯೂ ನಮಗೆ ಟಿಕೇಟುಗಳು ಸಿಕ್ಕಲಿಲ್ಲ. ಆದರಿಂದ ಅಲ್ಲಿಯೇ ಬೆಳಗಿನ ವರೆಗೆ ನಿಲ್ದಾಣದಲ್ಲಿ ಕಳೆಯಬೇಕಾಯಿತು. ಮರುದಿನ ಬೆಳಗಿನ ಗಾಡಿಗೆ ಮುಂದೆ ಹೊರಟರೆ, ಹಾದಿಯಲ್ಲಿ ಬ್ರಹ್ಮಚಾರಿಗಳಿಗೆ ಊಟವಾಗದು. ಅವರು ವ್ರತಿಕರು. ಅದರಿಂದ ಊಟ ತೀರಿಸಿಕೊಂಡು ಹೊರಡುವದಕ್ಕಾಗಿ ಅವರು ಸೇಡಬಾಳಕ್ಕೆ ಮರಳಿದರು. ಗೆಳೆಯನೂ ಅವರ ಹಾದಿಯನ್ನೇ ಹಿಡಿದ. ಅಲ್ಲದೆ ಅವನು ಹೋಗುವಾಗ 'ಇಲ್ಲಿಯೇ ಒಂದುದಿನ ಕಳೆಯಿತು. ಮುಂದೆ ಎಷ್ಟು ದಿನ ಬೇಕೋ ಏನೋ! ನಾಲ್ಕೈಂಟು ದಿನ ಜಾರಿದರೆ, ಅರಳಿಯ ವ್ಯಾಪಾರದಲ್ಲಿ ನಾಲ್ಕಾರು ಸಾವಿರಗಳ ಹಾನಿಯಾದೀತು. ಅದಕ್ಕಾಗಿ ನಾನು ತಿರುಗಿ ಬರುವುದಿಲ್ಲ. ಬ್ರಹ್ಮಚಾರಿಗಳನ್ನು ಕಳಿಸುವೆ. ನೀವಿಷ್ಟು ಹೋಗಿ ಬನ್ನಿರಿ!' ಎಂದು ಹೇಳಿಯೇ ಹೋಗಿ

ಟ್ಟನು. ನಾನು ತಂದೆ-ತಾಯಂದಿರನ್ನು ಕರೆದುಕೊಂಡು ಪುಣೆಯ
ಡೋ ಹತ್ತಿದೆ. ಹಿರಿಯರಿಗೆ ಪ್ರಯಾಣ ಮುಂದರಿದದ್ದಕ್ಕಾಗಿ
ತಸವಾಗಿದ್ದಿತು. ಯಾತ್ರೆ ! ಅದರಲ್ಲೂ ಮುನಿಗಳ ದರ್ಶನ !
ನ್ನಿವೇಶಗಳು ಅವರಿಬ್ಬರ ಹೃದಯವನ್ನು ಅರಳಿಸಿದ್ದುವು.
ನ ಮಾಡದೆ ಬಾಯಿಯಲ್ಲಿ ನೀರೂ ಹಾಕದ ಅವರು, ಅಂದು
ಣ್ಣೀರಿನಲ್ಲಿ ಸ್ನಾನ ಮಾಡಿ ನಡುಗುತ್ತ ಹೊಗೆಬಂಡಿಯ ಬೆಚ್ಚನ್ನ
ಬೆಗಳಲ್ಲಿ ಸೇರಿದರು. ನಾನು 'ಆಶ್ರಮದ ಬ್ರಹ್ಮಚಾರಿಗಳೇ
ಕೊಟ್ಟರಲ್ಲ! ಮುಂದೆ ನಾನು ಹೋಗಿ ಮಾಡುವುದೇನು ?
ವರ ಮನಸ್ಸಿನಲ್ಲಿ ಆಶ್ರಮವನ್ನು ನನಗೆ ಒಪ್ಪಿಸುವುದಿದೆಯೋ
ಲ್ಲವೊ ?' ಎಂದೇನೇನೊ ಚಿಂತಿಸುತ್ತಲಿದ್ದೆ. ಗಾಡಿಯು
ಗು ಹಾಕಿ ಮಿರಜಿಯಿಂದ ಮುಂದೆ ಸಾಗಿತು.

ಮುಂಜಾನೆಯ ಸಮಯ, ಬೇಸಗೆಯ ಕೊನೆಕೊನೆಯ ದಿನ-
ಳು. ಮಧುರವಾದ ಸುಳಿಗಾಳಿ ತೀಡುತಲಿತ್ತು. ಆ ಗಾಳಿಗೆ
ನಸ್ಸು ಅರಳಿತು. ಎಲ್ಲರ ಮುಖಗಳೂ ಪ್ರಸನ್ನವಾದುವು.
ನಿಯ ಹೊಂಗಾಂತಿಯಿಂದ ಭುವಿಯೆಲ್ಲ ಸ್ವರ್ಣಮಯವಾಗಿ
ತೋರತೊಡಗಿತು. ಆದರೂ ಆ ರಂಗಿಗೆ ಮನ ಸೋಲದೆ ಹಿರಿ-
ಯರು ಹೇಳಿದರು:

" ಇತ್ತೆಲ್ಲ ಇಂಥ ಮೊರಡಿ ಹಬ್ಬಿದೆ ಎಂದೇ ಸರಕಾರದವರು
ನಮ್ಮ ಕಡೆಯಿಂದ ಜೋಳ ಕೂಡಿಸಿ ತರತಾರೆ. ಇಲ್ಲೆನು ಬೆಳೆ-
ಯುವುದದೆ ಮಣ್ಣು !"

ಮಹಾರಾಷ್ಟ್ರದ ನೆಲವನ್ನು ಕಂಡು ಹಿರಿಯರಾಡಿದ ಮಾತು
ನಿಜವೆನಿಸಿತೆನಗೆ. ಇಲ್ಲಿ ಬೆಳೆಯುಳ್ಳ ಭೂಮಿ ಸಿಮೇಗಳಿಲ್ಲವೆಂದೇ
ಮಹಾರಾಷ್ಟ್ರಿಗರು ಪರಪ್ರಾಂತಗಳಿಗೆ ತೆರಳುವುದು ಹೆಚ್ಚು; ಅಲ್ಲದೆ
ಅವರು ಸಶಕ್ತೋದ್ಯೋಗಿಗಳಾಗಿರುವುದಕ್ಕೂ ಇದೇ ಕಾರಣವಾಗಿದೆ.
ನಮ್ಮಲ್ಲಿ ನಾಲ್ಕು ತಿಂಗಳು ದುಡಿದರೆ, ಹನ್ನೆರಡು ತಿಂಗಳೂ ಒಕ್ಕ-
ಲಿಗರು ಕುಳಿತು ತಿನ್ನಬಹುದು. ಅಂತಲೇ ಅಲಸಿಗರು !

ಹಾಗೆಯೇ ಮುಂದೆ ಮುಂದೆ ಸಾಗಿದಂತೆ ಕನ್ನಡದ ಸವಿ-
ಸೊಲ್ಲು ಕಡಿಮೆಯಾಯಿತು. ಗಾಡಿಯಲ್ಲಿ ಹತ್ತುವ ಜನತೆಯಲ್ಲಿ
ಸೌಹಾರ್ದವೂ ಇಲ್ಲದಂತಾಗುತ್ತ ನಡೆಯಿತು. ಸ್ಥಳದ ಸಲು-
ವಾಗಿ ಕಟುಮಾತುಗಳೂ ಕಠೋರ ನಡತೆಗಳೂ ಕಾಣತೊಡಗಿದುವು.
ಸಾಹೇಬರ ವೇಷಭೂಷಣಗಳುಳ್ಳ ತರುಣರು—ಸುಧಾರಕ ಸುಶಿ-
ಕ್ಷಿತರೆಂದೆನ್ನಿಸಿ ಕೊಳ್ಳುವವರು—ಮೂರನೆಯ ತರಗತಿಯಲ್ಲಿಯೇ
ಮೊದಲನೆಯ ತರಗತಿಯ ಸುಖಗಳನ್ನು ಬಯಸುವ—ಈ ಜನ
ಹೆಚ್ಚಾಗ ತೊಡಗಿತು. ಆಗ ಪುಣೆಯು ಸಮೀಪಿಸಿತೆಂಬುದು
ನಮಗೆಲ್ಲರಿಗೆ ಗೊತ್ತಾಯಿತು. ಹಣ್ಣು ಹಣ್ಣು ಮುದುಕಿಯೊಬ್ಬಳಿಗೆ
ರೈಲಿನಲ್ಲಿ ಕೂಡಲಿಕ್ಕೆ ಸ್ಥಳ ಮಾಡಿಕೊಡದ ಆ ತರುಣರು,
'ತಮಾಸೆ'ಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ತರುಣಿಗೆ, ಕರೆದು
ಸ್ಥಳ ಕೊಟ್ಟರು ! ಸವಿಯಾಗಿ ಮಾತನ್ನಾರಂಭಿಸಿದರು ! ಇಂಥ
ಪುಣ್ಯನಗರಿಯ ಸುಶಿಕ್ಷಿತರಿಗೆ ಉತ್ತರ ಕೊಡಲಿಕ್ಕೆ ಶಿವಾಜಿಯ
ಪುನೀತರಾದ 'ಮಾವಳೆ' ಜನರೇ ಗಟ್ಟಿಗರು. ತಲೆಯ ಮೇಲೆ
ಕೆಂಪು ಬಣ್ಣದ ದೊಡ್ಡ ರುಮಾಲು, ಮೈಯಲ್ಲಿ ಗುಂಡಂಗಿ, ಹೆಗಲ
ಮೇಲೊಂದು ಕಂಬಳಿ, ಕಿವಿಯಲ್ಲಿ ದೊಡ್ಡ ಬಾವುಲಿ, ಕಾಲಲ್ಲಿ
ದೊಡ್ಡ ಜೋಡುಗಳು, ಕೈಯಲ್ಲೊಂದು ಬಡಿಗೆಯನ್ನು ಹಿಡಿದು-
ಕೊಂಡು ಎಲೆ ತಿನ್ನುತ್ತ, ಗಾಡಿಯಲ್ಲಿ ಈ ಹಿಂಡು ಪ್ರವೇಶಿಸಿ-
ತೆಂದರೆ, ಆ ಗೊಂವಲವನ್ನು ನೋಡಲಿಕ್ಕೇ ಬೇಡ. ಪುಣೆಗೆ
ಹೋಗುವ ತರುಣರು ತಮ್ಮ ಮೈಯೊಳಗಿನ ಹಾಫ್ ಶರ್ಟನ
ಇಸ್ತ್ರಿ ಮುರಿಯುವುದೆಂದು ಹೆದರಿ, ಈ ಗುದ್ದಾಡು ಜನರನ್ನು
ಕಂಡರೆ ದೂರೇ ಸರಿಯುವರು. ಅವರ ಉಡಿಗೆ-ತೊಡಿಗೆಗಳನ್ನು
ಕಂಡು ಮುಗುಳುನಗೆ ಬೀರುವರು. ಆದರೆ ಅವರಲ್ಲಿರುವ
ಮಾನವತೆ ಮಾತ್ರ, ಈ ನಾಲ್ಕಕ್ಷರ ಕಲಿತವರಲ್ಲಿ ನೋಡಲಿಕ್ಕೆ
ಸಿಗಲಾರದು.

ಪುಣೆಯನ್ನು ದಾಟಿ ಮುಂದೆ ಸಾಗಿದಾಗ, ಎರಡೂ ಮಗ್ಗಲಿಗೆ
ಅಸಂಖ್ಯ ಮುರುಕು ನೋಟರುಗಳನ್ನು ಕಂಡು ಬೆರಗಾಗುವಂತಾ-
ಯಿತು. ಬ್ರಿಟಿಷ್ ಸರಕಾರವು ಮೊನ್ನಿನ ಯುದ್ಧದಲ್ಲಿ ಭಾರತದ
ಹೊನ್ನನ್ನು ಪೇಗೆ ಹೊಳೆಯಾಗಿ ಹರಿಯಿಸಿ, ಗೆಲುವನ್ನು ಪಡೆಯಿ-
ಸಿಂಬುದಕ್ಕೆ ಅದೊಂದು ದೃಷ್ಟಾಂತವಾಗಿದ್ದಿತು. ಅವುಗಳನ್ನು
ಕಂಡು:—

" ಇಷ್ಟೆಲ್ಲ ಮಾಡಿದ ಇಂಗ್ಲೀಷ ಸರಕಾರ ಇಲ್ಲೇದ ಇಲ್ಲೇ

ಮಲೇರಿಯಾ
ಇನ್ ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಬಹುಮಾನ ೫೦೦ ರೂ.
— ಅದ್ಭುತ ಸಂಶೋಧನ —
ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡೆಸಬಹುದು. ಇದರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನವಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಬೆಂಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಹೊಸಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೫ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಷ್ಟು ಖರ್ಚು ಬೇರೆ.

MAHAKALI ASHRAM
NO 247. KANPUR.

ಎಷ್ಟು ಹೋಗಬೇಕಾದರೆ, ಹೊಟ್ಟೆಯೊಳಗೆ ಎಷ್ಟು ಮರುಗಿರಬೇಕು?" ಎಂದು ಕೇಳಿದರು ತಂದೆ.

"ಇವೆಲ್ಲ ನಮ್ಮ ಕಾಂಗ್ರೆಸ್ ಸರಕಾರದವರಿಗೇ ಬಂದುವು?" ಬೆರಗಿನಿಂದ ಕೇಳಿದಳು ತಾಯಿ!

ಇಬ್ಬರಿಗೂ ಸಮಾಧಾನವಾಗುವಂತೆ, ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸುವಾಗ ನಡೆದ ಸಂಗತಿಯನ್ನೆಲ್ಲ ಸ್ವಲ್ಪದರಲ್ಲಿ ವಿವರಿಸಿದೆ. ದೇಶವನ್ನು ಹೋಳು ಮಾಡಿದ ಕತೆ – ಸಂಸ್ಥಾನಿಕರ ಸ್ವಾತಂತ್ರ್ಯ— ಇತ್ಯಾದಿ ಸಂಗತಿಗಳೆಲ್ಲ ಬಂದುಹೋದುವು. ಎಲ್ಲವನ್ನೂ ಕೇಳಿ ತಾಯಿಯು ಬಾಯಿಂದ ಉದ್ಗಾರವೊಂದು ಹೊರಟಿತು:

"ಇಷ್ಟೆಲ್ಲ ಹೊರಿಸಿಕೊಟ್ಟ ಆ ಪುಣ್ಯವಂತ ಗಾಂಧಿಯನ್ನು ಗುಂಡುಹಾರಿ ಕೊಂದರೆಲ್ಲ! ನಮ್ಮ ದೇಶದ ಜನಾರಿಗೆ ಏನನ್ನುವೆ!"

"ಕೊಂದವನ ಇನೇ ಪುಣೆಯುವ ನೋಡು!" ಹಿರಿಯರೆಂದರು.

"ಬೆಂಕೀಹಚ್ಚಲಿ ಆ ಊರಿಗೆ" ಎಂದಳು ತಾಯಿ.

ಅಷ್ಟರಲ್ಲಿ ನಮ್ಮ ಗಾಡಿಯು ಬೊಗದೆಯಲ್ಲಿ ಸೇರಿತು. ಗಾಡಿಯಲ್ಲಿಳಿದ ಕತ್ತಲೆ ಕವಿಯಿತು. ಹೀಗೆ ಬೆಳಕು-ಕತ್ತಲೆಗಳಲ್ಲಿ ಪ್ರಯಾಣಿಸುತ್ತ, ಗಾಳುಂಕಾಲಕ್ಕೆ ಕಲ್ಯಾಣಕ್ಕೆ ಹೋಗಿ ತಲುಪಿದೆವು. ಮುಂಬಯಿಯಿಂದ ಕಲಕತ್ತೆಗೆ ಹೋಗುವ ಗಾಡಿಯನ್ನು ನಾವಲ್ಲಿ ಹಿಡಿಯಬೇಕು; ನಾಸಿಕಕ್ಕೆ ಹೋಗಬೇಕು. ಆ ಗಾಡಿಯು ಬರಲಿಕ್ಕೆ ನಾಲ್ಕಾರು ತಾಸುಗಳ ಅವಕಾಶವಿದ್ದಿತು. ಅದಕ್ಕಾಗಿ ಸಂಜೆಯ ತಿಂಡಿ-ತಿನಿಸುಗಳನ್ನು ತೀರಿಸುವುದರಲ್ಲಿ ಮುನ್ನೆರಾದೆವು. ಅದರಲ್ಲಿಯೂ ಆ ಮಾತು ಈ ಮಾತುಗಳನ್ನು ಆಡುತ್ತಲಿದ್ದೆವು:

"ಯಾವ ಊರವರು ನೀವು?"

ಕನ್ನಡದ ಸವಿಮಾತೊಂದು ಕಿವಿಗೆ ಬಿದ್ದಿತು. ಮುಂಜಾನೆಯಿಂದಲೂ ಕನ್ನಡವನ್ನು ಕೇಳದ ಕಿವಿಗೆ ಅಮೃತದ ಬಿಂದು ಒಂದು ಸಿಕ್ಕಂತಾಯಿತು. ನಮ್ಮ ಕನ್ನಡ ಮಾತುಗಳನ್ನು ಕೇಳಿ ಮುಂಬಯಿಯಿಂದ ಅಲ್ಲಿಗೆ ಬಂದ ಕನ್ನಡ ಕರುಣ ನಮ್ಮ ಹತ್ತಿರ ಬಂದಿದ್ದ. ಅವನ ಮುಖವನ್ನು ಕಂಡರೆ ಹಸಿದು ಕಂಗಾಲಾದಂತಿದ್ದಿತು. ತಾಯಿಯು ಕರೆದು ಅವನಿಗೂ ತಿನ್ನಲಿಕ್ಕೆ ಕೊಟ್ಟಳು. ಮರುಕ್ಷಣದಲ್ಲಿ ಅವನೊಬ್ಬ ನಮಗೆ ಮನೆಯವನಂತಾದ. ತನ್ನ ಪರಿಚಯವನ್ನೆಲ್ಲ ಮಾಡಿಕೊಟ್ಟ. ಶ್ರೀ. ಶಾಂತೇಶ ಪಾಟೀಲರು ತಯಾರಿಸಿದ ಚಿತ್ರಸೃಷ್ಟಿಯಲ್ಲಿಯ ಒಬ್ಬ ನಟನಂತೆ ಆತ. ಯಾರನ್ನೋ ಕಾಣಲಿಕ್ಕೆ ಕಲ್ಯಾಣದ ವರೆಗೆ ಬಂದಿದ್ದ, ಅವರೂ ಸಿಕ್ಕಲಿಲ್ಲ. ಇವನ ಕೈಯಲ್ಲಿಯೂ ಕಾಸಿರಲಿಲ್ಲ. ಹೀಗಾಗಿ ಅಡ್ಡಾಡುತ್ತಲಿದ್ದ. ಕನ್ನಡದ ಅಭಿಮಾನವನ್ನು ವ್ಯಕ್ತಪಡಿಸಿ, ನಮ್ಮಿಂದ ದುಡ್ಡು ಸಿಗುವುದೇನೋ ನೋಡಿದ. ನಿರಾಶೆಯಾಗಲು ಹೇಳದೆ ಕೇಳದೆ ಕಣ್ಮರೆಯಾಗಿಬಿಟ್ಟ. ಎದುರಿಗಿನ ಜನರ ಒಲವಿನಂತೆ ಮಾತಾಡಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಜನರೆಷ್ಟೋ ನಮ್ಮ ನಾಡಿನಲ್ಲಿದ್ದಾರಲ್ಲ!

ಇನ್ನೂ ಒಂದೆರಡು ತಾಸು ರಾತ್ರಿ ಇರುವಾಗಲೇ ನಾಸಿಕ ಸ್ಟೇಶನ್ನಿನಲ್ಲಿ ಇಳಿದೆವು. ಅಂಥ ಸಮಯದಲ್ಲಿಯೂ 'ತೀರ್ಥಯಾತ್ರೆಗೆ ಬಂದಿರಾ? ನಮ್ಮಲ್ಲಿ ಇಳಿದುಕೊಳ್ಳಲು ಬನ್ನಿರಿ!' ಎಂದು ಸ್ವಾಗತಿಸುವವರಿಗೇನೂ ಕೊರತೆ ಇರಲಿಲ್ಲ. ಅವರ ಸ್ವಾಗತವನ್ನು ಕೇಳಿದಾಗಲೇ ನನಗೆ ಗೋದಾವರಿ ನದಿಯ ತೀರ— ರಾಮನ ವನವಾಸದ ಕತೆ— ಪಂಚವಟಿಗಳ ನೆನಪೆಲ್ಲ ಆಯಿತು. ಬೆಳಗಾಗುವ ವರೆಗೆ ನಿಲ್ದಾಣದಲ್ಲುಳಿದುಕೊಂಡೆವು. ಮುಂಜಾನೆ ಊರಲ್ಲಿ ಹೋಗಿ ನದಿಯ ತೀರಕ್ಕೇನೇ ಹೋದೆವು. ಸ್ನಾನ ತೀರಿಸಿ ರಾಮ-ಸೀತೆಯರ ದರ್ಶನ ಮಾಡಿದೆವು. ರಾಮಭಕ್ತ ಹನುಮನನ್ನೂ ಕಂಡೆವು. ನಾಸಿಕದಲ್ಲಿ ದ್ರಾಕ್ಷೆಗಳು ಪ್ರಸಿದ್ಧವಾಗಿವೆ. ಅವುಗಳನ್ನು ಕೊಂಡುಕೊಂಡು ಗಜಪಂಥ ಕ್ಷೇತ್ರಕ್ಕೆ ತೆರಳಿದೆವು.

ಗಜಪಂಥವು ಒಂದು ಚಿಕ್ಕ ಪರ್ವತವು. ನಾಲ್ನೂರು ಫೂಟು ಎತ್ತರವಾಗಿದೆ. ಇಲ್ಲಿ ಶ್ರೀಬಲಭದ್ರ ಮೊದಲಾದ ಹಲವು ಜನ ಮುನಿಗಳು ತಪಸ್ಸುಮಾಡಿ ಮುಕ್ತರಾದರು. ಈ ಪರ್ವತದ ನೆರೆಯಲ್ಲಿ ಒಂದು ಆಶ್ರಮವಿದೆ. ಯಾತ್ರೆಗೆ ಬಂದ ಜನರಿಂದ ಹಣ ಕಾಸುಗಳನ್ನು ಪಡೆದು ಅದನ್ನು ನಡೆಯಿಸುವರು. ಅಲ್ಲಿಯೇ ಭಟ್ಟಾರಕ ಪ್ರೇಮೇಂದ್ರ ಕೀರ್ತಿಗಳ ಸಮಾಧಿಯೂ ಒಂದು ಸುಂದರ ಜಿನಮಂದಿರವೂ ಇರುವುವು. ಈ ಆಶ್ರಮದಲ್ಲಿ ನಿಂತು ಅಭ್ಯಾಸ-

ಡುವ ವಿದ್ಯಾರ್ಥಿಗಳು ಕಡಿಮೆ. ಈ ಆಶ್ರಮದಿಂದ ಧನ-ಸಹಾಯವನ್ನು ಹೊಂದಿ ನಗರಗಳಲ್ಲಿ ನಿಂತು ಓದುವ ವಿದ್ಯಾರ್ಥಿ-ಗಳ ಸಂಖ್ಯೆಯೇ ಹೆಚ್ಚು. ಇದನ್ನು ಸೇರದ ಸನಾತನಿಗಳು ಬೇರೊಳ ಊರಲ್ಲಿ ಇನ್ನೊಂದು ಆಶ್ರಮವನ್ನು ಆರಂಭಿಸಿದ್ದಾರೆ. ಇದು ಗುರುಕುಲಪದ್ಧತಿಯದಾಗಿದೆ.

ಗಜಪಂಥ ಗಿರಿಯನ್ನೇರಲಿಕ್ಕೆ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ಮಾರು ೩೫೦ ಪಾವಟಿಗೆಗಳಿವೆ. ಮೇಲೆ ಹೋದೊಡನೆಯೇ ಹೊಸದಾಗಿ ಕಟ್ಟಿದ ಎರಡು ಮಂದಿರಗಳು ನೋಡಲಿಕ್ಕೆ ಸಿಕ್ಕುತ್ತವೆ. ಅವು ಸುಂದರವಾಗಿವೆ. ಇವುಗಳ ಮಗ್ಗುಲಲ್ಲಿಯೇ ಗುಡ್ಡದಲ್ಲಿ ಕೊರೆದ ಎರಡು ಮಂದಿರಗಳಿವೆ. ಅವುಗಳಲ್ಲಿ ೧೨ ನೆಯ ಶತಮಾನದಿಂದ ೧೬ ನೆಯ ಶತಮಾನದ ವರೆಗಿನ ಶಿಲ್ಪವನ್ನೂ ಮೂರ್ತಿಗಳನ್ನೂ ನಾವು ಕಾಣಬಹುದು. ನಾಸಿಕದಲ್ಲಿರುವ ಒಂದು ಗುಹೆಯ ಗುಡಿಯನ್ನೂ ಈ ಗುಹೆಗಳಲ್ಲಿರುವ ಶಿಲ್ಪವನ್ನೂ ನಿರೀಕ್ಷಿಸಿದೆ, ಜಕ್ಕಣಾಚಾರಿಯ ಶಿಲ್ಪದ ಮಾರ್ಗದ ಹೊಳಹು ಕಂಡುಬರುವುದು.

ನಮ್ಮ ಮುಖ್ಯ ಉದ್ದೇಶವು ಶ್ರೀಶಾಂತಿಸಾಗರ ಆಚಾರ್ಯರನ್ನು ಕಾಣುವುದಾಗಿದ್ದಿತು; ಗಜಪಂಥ ಕ್ಷೇತ್ರವನ್ನಲ್ಲ. ಆದರೆ ಅಲ್ಲಿ ಆಚಾರ್ಯರು ಇರಲಿಲ್ಲ. ಅವರು ಎರಡು ಮೂರು ದಿನಗಳ ಮೊದಲೇ ಅಲ್ಲಿಂದ ಪ್ರಯಾಣ ಬೆಳೆಯಿಸಿದ್ದರು. ಇತ್ತ ಆಶ್ರಮದ ಬ್ರಹ್ಮಚಾರಿಗಳ ಸುಳಿವೂ ಇಲ್ಲ. ಹೀಗಾಗಿ ನಾನು ಸ್ವಲ್ಪ ನಿರಾಶೆಯನ್ನೇ ಹೊಂದಿದೆ. ಆದರೂ ಹಿರಿಮರನ್ನು ಕರೆದುಕೊಂಡು ಕ್ಷೇತ್ರದರ್ಶನವನ್ನು ಮಾಡಿದೆ. ಒಂದು ದಿನ ಅಲ್ಲಿಯೇ ಉಳಿದು ಬ್ರಹ್ಮಚಾರಿಗಳ ಆಗಮನವನ್ನು ನಿರೀಕ್ಷಿಸಿದೆ.

ಮರುದಿನ ಮಧ್ಯಾಹ್ನ ಬ್ರಹ್ಮಚಾರಿಗಳ ಸ್ವಾರಿಯು ಗಜಪಂಥಕ್ಕೆ ಬಂದಿತು. ನಿರಾಶೆಯಲ್ಲಿಯೇ ತುಸು ಸಮಾಧಾನವಾಯಿತು. ಆಚಾರ್ಯರು ಅಲ್ಲಿ ಇಲ್ಲದುದನ್ನು ಕೇಳಿ ಅವರ ಮುಖವೂ ಬಾಡಿತು. ಆದರೂ, ಇಬ್ಬರೂ ಕೂಡಿ ಆಚಾರ್ಯರನ್ನು ಹುಡುಕಿಕೊಂಡು ಹೋಗುವುದೆಂದು ನಿರ್ಧರಿಸಿದೆವು. ಮತ್ತು ಒಂದು ದಿನ ಅಲ್ಲಿಯೇ ಕಳೆದು, ಆಚಾರ್ಯ ಮಹಾರಾಜರ ಸುದ್ದಿ ಏನಾದರೂ ಬರುವದೇನೋ—ಎಂದು ನಿರೀಕ್ಷಿಸತೊಡಗಿದೆವು. ನಮ್ಮಂತೆಯೇ ಶ್ರೀಗಳವರ ದರ್ಶನವನ್ನು ಪಡೆಯಲು ಮುಂಬಯಿ, ಅಹಮ್ಮದನಗರಗಳ ಸಿರಿವಂತರು ಕಾರುಗಳಲ್ಲಿ ಬಂದು ಬಂದು ಹಿಂದಿರುಗಿದರು; ಮರುದಿನ ಮಾತ್ರ ಆಚಾರ್ಯಶ್ರೀಯವರು ನಾಂದಗಾಂವಕ್ಕೆ ಹೋಗಿ ತಲುಪಿದುದು ತಿಳಿಯಿತು.

ನಾಂದಗಾಂವ ನಗರವು ಗಜಪಂಥದಿಂದ ನಲವತ್ತು ಮೈಲುಗಳ ಅಂತರದ ಮೇಲಿದೆ. ಅದು ನಾಸಿಕ ಜಿಲ್ಲೆಯ ಒಂದು ತಾಲೂಕಿನ ಸ್ಥಳವೂ ಆಗಿದೆ. ಅದರಂತೆ ಜಿ. ಆಯ್. ಪಿ. ರೇಲ್ವೆ ನಿಲ್ದಾಣವೂ ಆದಾಗಿದೆ. ಅಲ್ಲಿಗೆ ಎಲ್ಲರೂ ಕೂಡಿ ಹೊರಟು ನಿಂತೆವು. ಅಂದು ಅಷ್ಟಮಿಯೋ ಚತುರ್ದಶಿಯೋ ಇರಬೇಕು. ಪರ್ವತಿಥಿ. ವ್ರತಿಕರು ಪ್ರಯಾಣ ಬೆಳಸುವಂತಿಲ್ಲ. ಆದರೂ ಬ್ರಹ್ಮಚಾರಿಗಳು ಹೊರಟರು. ಆಶ್ರಮದ ಮುಂದಿನ ವ್ಯವಸ್ಥೆಯ ಬಗ್ಗೆ ಅವರಲ್ಲಿರುವ ಕಳಕಳಿಯೇ ಇದನ್ನೆಲ್ಲ ಮಾಡ ಹಚ್ಚಿತು. ಆದರಿಂದ ಬ್ರಹ್ಮಚಾರಿಗಳ ಮೇಲೆ ನನ್ನ ಶ್ರದ್ಧೆ-ವಿಶ್ವಾಸಗಳು ಹೆಚ್ಚಾಗತೊಡಗಿದುವು.

ಮರಳಿ ನಾಸಿಕಕ್ಕೆ ಬಂದು ಮತ್ತೆ ರೈಲನ್ನು ಹತ್ತಿದೆವು. ಗಾಡಿಯಲ್ಲಿ ಆ ಮಾತು ಈ ಮಾತು ಆಡುತ್ತಿದ್ದೆವು. ನಮ್ಮ ಕನ್ನಡ ನುಡಿಯನ್ನು ಕೇಳಿ, ತಿಳಿಯದೆ, ಡಬ್ಬಿಯಲ್ಲಿ ಕುಳಿತವರು ಹುಳು ಹುಳು ನೋಡುತ್ತಿದ್ದರು; ಕುತೂಹಲದಿಂದ ಕೇಳುತ್ತಿದ್ದರು. ಆದರಲ್ಲಿಯೂ ಕನ್ನಡ ತಿಳಿಯುವ ಮಹಾರಾಷ್ಟ್ರೀಯ ತರುಣನೊಬ್ಬ ಮರಾಠಿಯಲ್ಲಿಯೇ ಕೇಳಿದ :—

"ನಿಮ್ಮ ಕನ್ನಡದೊಳಗ ಅರ್ಧಕ್ಕಿಂತ ಹೆಚ್ಚಾಗಿ ಮರಾಠೀನೇ ಅದ ಅಲ್ಲರಿ!" ದನಿಯಲ್ಲಿ ಕನ್ನಡದ ಅವಹೇಲನ ತುಂಬಿ ತುಳುಕುತ್ತಲಿತ್ತು.

"ಹೇಗೆ ಹೇಳುವಿರಿ?" ತಡೆದುಕೊಂಡು ಕೇಳಿದೆ.

"ನನಗ ಎಲ್ಲ ತಿಳಿಯಿತಲ್ಲ!"

"ನಿಮಗೂ ಕನ್ನಡ ತಿಳಿಯತದ...ಇಷ್ಟೇ ಅವರ ಅರ್ಥ."

ಆತ ಸುಮ್ಮನಾದ. ನಾನೂ ಹೆಚ್ಚಾಗಿ ಮಾತನ್ನಾಡಲಿಲ್ಲ. ಆದರೂ ನನ್ನ ತಲೆಯಲ್ಲಿ ವಿಚಾರದ ಚಕ್ರ ತಿರುಗುತಲಿತ್ತು: ಈತ ಕರ್ನಾಟಕದವನಿರಬೇಕು, ಇಲ್ಲ ಕರ್ನಾಟಕದಲ್ಲಿ ಕೆಲವು ದಿನ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಕಳೆದವನಿರಬೇಕು. ವಿಚಾರಿಸೋಣ– ಎಂದುಕೊಂಡು ಸ್ವಲ್ಪ ವೇಳೆ ಕಳೆದೆ. ಸರಳ ಕೇಳಿದರೆ ಹೇಳುವ ಅಸಾಮಿಯಾಗಿರಲಿಲ್ಲ. ಈಗಾಗಲೇ ನನ್ನ ಮಾತಿನಿಂದ ತುಸು ಹೆತಪ್ರಭನಾದಂತಾಗಿದ್ದ ನಾತ. ಒಂದೆರಡು ನಿಲ್ಲಾಣಗಳನ್ನು ಹಿಂದೆ ಹಾಕಿದ ತರುವಾಯ, ಅಡಿಕೆಯ ಪುಡಿಯೊಂದನ್ನು ಸಹಜ ಆವನಿಗೆ ಕೊಡುತ್ತ ಕೇಳಿದೆ:—

" ಯಾವ ಕೆಲಸದ ಮೇಲಿರುವಿರಿ ? "

" ನಾನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿರುವೆ."

" ಹೆಡ್‌ಕ್ವಾರ್ಟರ್ ಯಾವುದು ? "

" ನಗರ."

" ಅನಕ್ಕೂ ಮುಂಚೆ ಎಲ್ಲಿದ್ದಿರಿ ? "

" ವಿಜಾಪುರ...."

" ಓ! ಹೊ! ಅವಕ್ಕೇ ಕನ್ನಡ ಬರುವುದು! "

ನಗುತ್ತ ಮಾತು ಮುಗಿಸಿದೆ ನಾನು. ಸೋಲಿನಿಂದ ಅವನ ಮುಖ ಸಪ್ಪಗಾಯಿತು. ಆದರೂ ಕನ್ನಡವೂ ಸಂಸ್ಕೃತದಿಂದಲೇ ಹುಟ್ಟಿದ ಭಾಷೆಯೆಂದು ವಾದಿಸಿದ. ಅದರಿಂದಲೇ ಕನ್ನಡ-ಮರಾಠಿಗಳಲ್ಲಿ ಒಂದೇ ಮಾದರಿಯ ಶಬ್ದಗಳು ಬರುವುವೆಂದೂ ಸಾಧಿಸತೊಡಗಿದ. ಅವನ ಕಲ್ಪನೆಗಳನ್ನೆಲ್ಲ ಕಳಿಮುಬಿಟ್ಟೆ. ಕನ್ನಡ ದ್ರಾವಿಡ ಭಾಷೆಗಳಲ್ಲೊಂದು ಎಂದೂ ಹೇಳಿದೆ. ಉದಾಹರಣೆಗಳನ್ನು ಕೊಟ್ಟು ಒಪ್ಪಿಸಿದೆ. ಆ ಮೇಲೆ ಅತ ಸುಮ್ಮನಾದ. ಮಾತನ್ನು ಬೇರೆ ವಿಷಯಕ್ಕೆ ತಿರುಗಿಸಿದ.

ನಾಂದಗಾಂವ ಸಮೀಪಿಸಿತು. ಹೊರಗೆ ಈಗಾಗಲೇ ಕತ್ತಲೆ ಕವಿದಿದ್ದಿತು. ಆದರಲ್ಲೂ ಚಿಟಿಚಿಟಿ ಮಳೆಯೊಂದು ಆರಂಭವಾಗಿದ್ದಿತು. ನಾಂದಗಾಂವವು ನಮ್ಮೆಲ್ಲರಿಗೂ ಅಪರಿಚಿತವಾದ ಊರು. ನಿಲ್ದಾಣದಿಂದ ಊರು ಎಷ್ಟು ದೂರವಿದೆಯೋ ? ಊರಲ್ಲಿ ಜಿನಮಂದಿರ ಎಲ್ಲಿದೆಯೋ ? ನನ್ನ ಮುಂದೆ ಎಲ್ಲ ಪ್ರಶ್ನಾರ್ಥಕ ಚಿಹ್ನೆಗಳೇ. ಆದರಿಂದ ಸಹಜವಾಗಿ ಆ ವಿಷಯಕ್ಕೆ ನಮ್ಮನಮ್ಮಲ್ಲಿ ಮಾತಿಗೆ ಆರಂಭವಾಯಿತು. ಹಿರಿಯರಂತೂ ಬಗೆಹರಿಯದ ಸಮಸ್ಯೆಯೇನೋ ಎನ್ನುವಂತೆ ಮಾತಾಡತೊಡಗಿದರು. ಆಗ ಅಮೃತದ ಧಾರೆಯಂತೆ ಒಂದು ಸವಿಗೊರಲಿನ ಮಾತು ಕಿವಿಗೆ ಬಿತ್ತು :

" ನಾನು ತೋರಿಸುವೆ ನಡೆಯಿರಿ ! "

ಇಲ್ಲಿಯವರೆಗೆ ಮಾತನಾಡದೆ ಸುಮ್ಮನೇ ಕೇಳುತ್ತ ಕುಳಿತ ಹೆಂಗುಸೊಬ್ಬಳು, ಅಚ್ಚಕನ್ನಡದಲ್ಲಿ ಹೀಗೆ ಆಶ್ವಾಸನವಿತ್ತಳು! ಈ ಮಾತನ್ನು ಕೇಳಿ ನನಗಂತೂ ಆಶ್ಚರ್ಯವಾಯಿತು. ಇವಳಾರು? ಎಂದು ಹೊರಳಿ ನೋಡಿದೆ. ನಡುಹರೆಯದ ಹೆಂಗುಸು, ನೋಡಲು ಸುಲಕ್ಷಣವಾದ ಹೆಣ್ಣು ಮಗಳು. ಪ್ರವಾಸದಲ್ಲಿ ಒಬ್ಬಳೇ ಇರುವಂತೆ ತೋರಿತು. ಮುಖದ ಲಕ್ಷಣವನ್ನು ನೋಡಿದರೆ ಕಲಿತವಳಂತೆ ಕಾಣಲಿಲ್ಲ. ನಾನು ಹೊರಳಿ ಅವಳ ಕಡೆಗೆ ನೋಡಿದ್ದಕ್ಕೆ ಸ್ವಲ್ಪ ಸಂಕೋಚವನ್ನೂ ವ್ಯಕ್ತಪಡಿಸಿದಳು. ಅವಳ ಮಾತು ಅವಳರಿಯದೆಯೇ ಅವಳ ಹೃದಯದಿಂದ ಹೊರಹೊಮ್ಮಿದಂತಿತ್ತು. ಬೆರಗು ಬೆರೆತ ಸ್ವರದಿಂದ ನಾನು ಕೇಳಿದೆ :

" ನೀವೆಲ್ಲಿಂದ ಬಂದಿರಿ ? "

" ಮುಂಬಯಿಯಿಂದ.... "

" ಎಲ್ಲಿಗೆ ಹೋಗುವಿರಿ ? "

" ನಾಂದಗಾಂವಕ್ಕೇ ಹೋಗುವೆ. ನಮ್ಮವರಿಗೆ ಅಲ್ಲಿಗೆ ವರ್ಗವಾಗಿದೆ.... "

" ನಾಂದಗಾಂವ ನಿಮಗೂ ಹೊಸದೇ ಎನ್ನಿರಿ ! "

" ಇಲ್ಲ, ತಿಂಗಳೆರಡು ತಿಂಗಳಾಯಿತು, ನಾವಿಲ್ಲಿ ಬಂದು. "

" ನಿಮ್ಮ ಮನೆಯವರು ಯಾವ ಕೆಲಸದ ಮೇಲಿದ್ದಾರೆ ? "

" ಪೋಲೀಸ ಖಾತೆಯಲ್ಲಿದ್ದಾರೆ.... "

" ಇಷ್ಟು ದೂರ ಬಂದುದು ಹೇಗೆ ? "

" ನಮ್ಮ ತಂದೆ ಎಂದೋ ನಮ್ಮ ದೇಶಬಿಟ್ಟು ಮುಂಬಯಿಯಲ್ಲಿ ಗಿರಣಿಯಲ್ಲಿ ಕೆಲಸಕ್ಕೆ ಇದ್ದಾರೆ. ಅವರು ನನ್ನನ್ನು ಇಲ್ಲಿಯವರಿಗೆ ಕೊಟ್ಟು ಬಿಟ್ಟರು ! ಇನ್ನೇನು, ನಮ್ಮ ನಾಡನ್ನು ತಿರುಗಿ ಕಾಣುವಂತಿಲ್ಲ ಏನಿಲ್ಲ. ದಿನಾ ಬೆಳಗಾದರೆ ಈ ಮರಾಠೀ ಮಾತನ್ನು ಕೇಳಿ ತಲೆಬೇಸರ ಹಿಡಿತದೆ.... "

" ಯಾರವರು ನೀವು ? " ಬ್ರಹ್ಮಚಾರಿಗಳು ನಡುವೇ ಬಾಯಿಹಾಕಿ ಕೇಳಿದರು.

" ಕಾಂಬಳೆ.... " ಎಂದಳಾಕೆ.

ಈ ಅಡ್ಡಹೆಸರನ್ನು ಕೇಳಿದ ಕೂಡಲೇ ಬ್ರಹ್ಮಚಾರಿಗಳು ಮೈ ಮುದುರಿಕೊಂಡು ಕುಳಿತರು. ಇಷ್ಟೇ ಅಲ್ಲ, ನಿಲ್ದಾಣದಲ್ಲಿ ಇಳಿದೊಡನೆಯೇ, ಅವಳು ತೋರಿಸಲಿರುವ ದಾರಿಯ ಗೊಡವೆಗೂ ಹೋಗದೆ ಪುನ್ನಡೆದರು ಹೊಲೆಯರ ಹುಡುಗಿಯಾದರೇನು ? ಕನ್ನಡ ಕುವರಿಯಲ್ಲವೇ? ಅವಳು ಯಾವ ಆತ್ಮೀಯತೆಯಿಂದ ನಮಗೆ ದಾರಿ ತೋರಿಸಲು ಸಿದ್ಧಳಾಗಿದ್ದಳೋ, ಅದೇ ಆತ್ಮೀಯತೆಯು ನಮ್ಮಲ್ಲಿಯೂ ಬೇಡವೆ ? ನನಗೂ ಬ್ರಹ್ಮಚಾರಿಗಳ ಮೇಲೆ ತುಂಬ ಸಿಟ್ಟು ಬಂತು. ಮಾತನಾಡದೆ ಅವರ ಬೆನ್ನು ಹತ್ತಿದೆ. ಅವರೇ ಹತ್ತು ಜನರ ಹತ್ತಿರ ಕೇಳಿ ಜಿನಮಂದಿರವನ್ನು ಕಂಡರು.

ಆಚಾರ್ಯರ ದರ್ಶನಕ್ಕೆ ಬಂದವರೆಂದು ನಮ್ಮನ್ನು ಅಲ್ಲಿಯ ಶ್ರಾವಕರು ಆದರದಿಂದ ಬರಮಾಡಿಕೊಂಡರು. ಕೈಕಾಲಿಗೆ ನೀರು ಕೊಟ್ಟರು. ಇರುಳು ಪ್ರೀಆಚಾರ್ಯ ಶಾಂತಿಸಾಗರ ಸ್ವಾಮಿಗಳ ದರ್ಶನವಾಗುವಂತಿರಲಿಲ್ಲ. ಜಿನೇಶ್ವರನ ದರ್ಶನ ಮಾತ್ರ ಆಯಿತು. ನೂರಿಪ್ಪತ್ತು ಕಂಬಗಳ ಭವ್ಯ ಬಸದಿಯಲ್ಲಿ ಅಂದು ವಸತಿ ಮಾಡಿದೆವು.

ಒಂದು ದಿವಸದ ತಾಯ್ತನ

ಶೀ. ಯಮ್ಮುಂಜ ರಾಮಚಂದ್ರ ಶಾಸ್ತ್ರಿ

★

ತಾಯ್ತನವಿಲ್ಲದ ಹೆಂಗುಸಿಗೆ ಜೀವನದುದ್ದಕ್ಕೂ ಕಳವಳ ತಪ್ಪದು. ಸಂಸಾರದಲ್ಲಿ ಏನಿದ್ದರೂ ಸವಿಯೆ ತೋರದು. ಒಮ್ಮೊಮ್ಮೆ ಅಂತಹ ಸಂತಾನಪ್ರೀತಿ, ಇನ್ನೊಬ್ಬರ ಮಕ್ಕಳನ್ನು ತಿರಸ್ಕರಿಸಲೂ ಹಚ್ಚುವುದು. ಆದರೆ ಆ ತಿರಸ್ಕಾರದ ಅರ್ಥವೇನು!

ಸುಭದ್ರಮ್ಮ ಅಂಗಳಕ್ಕಿಳಿದು, ಮನೆಯೆದುರು ವಿಶಾಲವಾಗಿ ಹರಡಿಕೊಂಡಿದ್ದ ಗದ್ದೆಯ ತುದಿಯತನಕ ಒಮ್ಮೆ ನೋಡಿದರು. ಸಂಜೆಯ ಬಿಸಿಲಿಗೆ ಪೈಯೊಡ್ಡಿ ಮೌನವಾಗಿ ನಿಂತಿದ್ದ ಭತ್ತದ ಬೆಳೆಯ ಹೊರತು ಮತ್ತೇನೂ ಅವರ ಕಣ್ಣಿಗೆ ಕಾಣಿಸಲಿಲ್ಲ. ಅಲ್ಲಿಂದ ಹಿಂದಿರುಗಿ, ಬೇಸರದಿಂದ ಕೈಕೊಡಹಿಕೊಳ್ಳುತ್ತ ಮನೆಯನ್ನು ಹೊಕ್ಕು, ಇಲ್ಲದ ಕೆಲಸಗಳನ್ನು ಹುಡುಕಿಕೊಂಡು ಮಾಡತೊಡಗಿದರು.

ಸುಭದ್ರಮ್ಮನವರ ಮಟ್ಟಿಗೆ ಈಗೆರಡು ದಿನಗಳಿಂದ ಮನೆಯಿಡೀ ಭಣಭಣವೆನಿಸುತ್ತದೆ. ಅವರ ಪತಿ ಶಂಕರಯ್ಯ, ತಮ್ಮ ದೂರದ ತಂಗಿಯ ಮನೆಗೆ ಹೋದವರು ಇನ್ನೂ ಬಂದಿರಲಿಲ್ಲ. ಇಡೀ ಮನೆಯಲ್ಲಿ ಸುಭದ್ರಮ್ಮನವರೊಬ್ಬರೇ. ಶಂಕರಯ್ಯನವರು ಮನೆಯಲ್ಲೇ ಇದ್ದರೂ ಹೆಚ್ಚಿನ ಉತ್ಸಾಹವೆಂಬುದೇನೂ ಇಲ್ಲ. ಅದಕ್ಕೆ ಕಾರಣ ಆ ಮನೆಯೇ ಎನ್ನಲೂ ಬಹುದು. ಸುಭದ್ರಮ್ಮನವರ ಹೇಳಿಕೆಯಂತೆ ಆ ಇಡೀ ಮನೆಯನ್ನು ಒಮ್ಮೆ ಸುತ್ತಲು ಒಂದು ಜೀವವು ಸಾಕಾಗುವುದಿಲ್ಲ; ಆದರೂ ಶಂಕರಯ್ಯ ಇದ್ದಾಗ, ಮನೆಯಲ್ಲಿ ಮನುಷ್ಯನ ಸುಳಿವು ಇದೆಯೆಂಬ ಒಂದೇ ಒಂದು ಸಮಾಧಾನವಾದರೂ ಇರುತ್ತಿತ್ತು. ಆಗಾಗ ಚುಟುಕಿನಲ್ಲಿಯೇ ಹೇಳಿ ಮುಗಿಸುವ "ಬೇಕು-ಬೇಡ"ವೆಂಬ ಶಂಕರಯ್ಯನವರ ಮಾತುಗಳನ್ನಾದರೂ ಕೇಳಬಹುದಿತ್ತು. ಆದರೆ ಈಗ ಎರಡು ದಿನಗಳಿಂದ ಅದೊಂದೂ ಇಲ್ಲ. ಸುಭದ್ರಮ್ಮ ಅತ್ತ ಇತ್ತ ನಡೆಯುವಾಗ, ಒಮ್ಮೆ ಎದ್ದು ತಿರುಗಿ ತಮ್ಮ ಸ್ಥಾನವನ್ನು ಸೇರುವ ನೊಣಗಳ "ಗುಂಯ್" ಎಂಬ ಸದ್ದೊಂದೇ ಆಗಾಗ ಕೇಳಿಸುತ್ತಿದ್ದುದು.

ಸುಭದ್ರಮ್ಮನವರಿಗೆ ಈಗ ಇದೊಂದೇ ಯೋಚನೆ: "ಇನ್ನೂ ಯಾಕೆ ಬರಲಿಲ್ಲ ಅವರು?" ಎಂದು. ಇದರೊಂದಿಗೆ ಅವರ ಮನಸ್ಸು, ಶಂಕರಯ್ಯನವರು ಹೋದ ಸಂದರ್ಭವನ್ನು ನೆನಸಿಕೊಳ್ಳುತ್ತಿತ್ತು. ಆ ದಿನ ಅವರು ಪೇಟೆಯಿಂದ ಬರುವಾಗಲೇ ತುಂಬ ಗಡಿಬಿಡಿಯಿಂದಿದ್ದರು. ಬಂದವರೇ, "ನಾನು ಒಂದೆರಡು ದಿನಕ್ಕೆ ಒಮ್ಮೆ ತಂಗಿಯ ಮನೆಗೆ ಹೋಗಿ ಬರುತ್ತೇನೆ?" ಎಂದು ಕೇಳಿದಾಗ, ಸುಭದ್ರಮ್ಮನವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಶಂಕರಯ್ಯನವರಿಗೆ ಒಬ್ಬಳು ತಂಗಿಯೂ ಇದ್ದಾಳೆ ಎಂಬುದನ್ನು ಸುಭದ್ರಮ್ಮ ಮದುವೆಯಾದನಂತರದ ಈ ಹದಿನೈದು ವರ್ಷದ ಬಾಳ್ವೆಯಲ್ಲಿ ಕೇಳಿದುದು ಇದೇ ಮೊದಲು. ಆದುದರಿಂದ ಅವರು "ಏನು?" ಎಂಬಂತೆ ಪ್ರಶ್ನಾರ್ಥಕ ದೃಷ್ಟಿಯಿಂದ ತಮ್ಮ ಪತಿಯ ಮುಖವನ್ನು ನೋಡಿದ್ದರು. ಆಗಲೇ ಶಂಕರಯ್ಯ ಅರ್ಧಮರ್ಧವಾಗಿ ಎಲ್ಲವನ್ನೂ ವಿವರಿಸಿದುದು.

ತಂಗಿಯೆಂದರೆ ಒಡಹುಟ್ಟಿದ ತಂಗಿಯಲ್ಲ. ಯಾವುದೋ ಬಾದರಾಯಣ ಸಂಬಂಧ ನ್ಯಕಾರ ತಂಗಿಯಾಗಬೇಕಂತೆ. ಅವಳೀಗ ಮರಣಶಯ್ಯೆಯಲ್ಲಿದ್ದಾಳೆ. ಒಂದು ವರ್ಷದ ಹಿಂದೆ ಅವಳಿಂದ ಅವಳ ಪತಿಯನ್ನು ಕಸಿದುಕೊಂಡ ವಿಧಿ, ಈಗ ಅವಳ ಒಂದುವರೆ ವರ್ಷದ ಮಗನನ್ನು ತಬ್ಬಲಿಯಾಗಿಸಿ, ಅವಳನ್ನು ಕಸಿದುಕೊಳ್ಳುವುದರಲ್ಲಿದೆಯಂತೆ. ಇಷ್ಟನ್ನು ಹೇಳಿದ ನಂತರ ಶಂಕರಯ್ಯನವರು, ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆದಿರಲಿಲ್ಲ. ಬೇಗ ಬೇಗನೆ ತೆಂಗಿನ ಮಡಲಿನ ಸೂಟೆಯೊಂದನ್ನು ಉರಿಸಿಕೊಂಡು, ರಾತ್ರೋ-ರಾತ್ರಿ ಹೊರಟೇಬಿಟ್ಟಿದ್ದರು.

ಶಂಕರಯ್ಯನವರು ಹೋಗಿ ಎರಡುದಿನ ಕಳೆದರೂ ಇನ್ನೂ ಅವರ ಸುಳಿವು ಕಾಣಿಸಲಿಲ್ಲ. ಈ ಎರಡು ದಿನವನ್ನೆಲ್ಲ ಸುಭದ್ರಮ್ಮ ಯೋಚನೆಯಲ್ಲೇ ಕಳೆದಿದ್ದರು. ತಮ್ಮ ಒಂಟೇ ಒಂದಾದ ಕರುಳಿನ ಮುಗುಳ್ನಗೆಯನ್ನು ತೊರೆದು ಹೋಗುತ್ತಿದ್ದ ಅತ್ತಿಗೆಯನ್ನು ಮನಸ್ಸಿನಲ್ಲೇ ಚಿತ್ರಿಸಿಕೊಳ್ಳುತ್ತಿದ್ದರು. ಒಮ್ಮೆ ನಕ್ಕು ಒಮ್ಮೆ ಅತ್ತು, ಅಂಬೆಗಾಲಿಡುತ್ತಿದ್ದ ಅವಳ ಮಗುವಿನ ಪುಟ್ಟ ಮುಖವನ್ನು ತಮ್ಮ ಅಭಿರುಚಿಗೆ ತಕ್ಕಂತೆ ಚಿತ್ರಿಸಿಕೊಂಡು, ಅದರಲ್ಲೇ ತಲ್ಲೀನರಾಗುತ್ತಿದ್ದರು. ಈ ರೀತಿಯಲ್ಲಿರುವಾಗ ಸುಭದ್ರಮ್ಮನವರ ಒಳಮನಸ್ಸೊಂದು, ಈ ವರೆಗೆ ಕಣ್ಣಿನಿಂದ ಕಾಣದ ಅತ್ತಿಗೆಯನ್ನು "ನೀನು ಪುಣ್ಯವಂತೆ" ಎನ್ನುತ್ತಿತ್ತು. ಯಾಕೋ ಏನೋ—ಈ ಸಮಾಧಿಯಿಂದ ಎಚ್ಚರವಾದಾಗ, ಸುಭದ್ರಮ್ಮನವರಿಗೆ ಒಂದು ರೀತಿಯ ನಾಚಿಕೆಯಾಗುತ್ತಿತ್ತು. ಅನಂತರ, ಯಾವುದೊಂದೂ ಚಟುವಟಿಕೆಯಲ್ಲದೆ, ಬಿಮ್ಮನೆ ಬಿದ್ದುಕೊಂಡಿದ್ದ ತಮ್ಮ ವಿಶಾಲ ಮನೆಯನ್ನು ನೆನಸುವಾಗ, ಅವರಿಗೆ ತಮ್ಮ ಬಗೆಗೇ ಬೇಸರು ಉಂಟಾಗುತ್ತಿತ್ತು. ಒಮ್ಮೊಮ್ಮೆ ಉದ್ವೇಗವು ಮಿತಿಮೀರಿದಾಗ, ನಿಜವಾಗಿ, "ಸತ್ತರೂ

ನಮ್ಮಲ್ಲಿ ದೊರೆಯುವ ಪುಸ್ತಕಗಳು

★

ಪ್ರೇಮಕಲಾ	೧—೮—೦
ಅನಂಗರಂಗ	೧—೮—೦
ಕಾಮಕುಂಜ	೧—೮—೦
ವಿಕೃತಕಾಮ	೧—೮—೦
ಕಾಮಶಾಸ್ತ್ರ	೧—೮—೦
(ವಾತ್ಸ್ಯಾಯನ ಸೂತ್ರಸಾರ)	
ದಾಂಪತ್ಯ ದರ್ಶನ	೧—೮—೦
ಬಾಳಿನ ಹವ	೧—೮—೦
ಸೌಂದರ್ಯವಿಚಾರ	೦—೪೦—

ಹಣ ಮುಂಗಡ ಕಳಿಸಬೇಕು.

ಶ್ರೀಕಾಂತ ಮತ್ತು ಕಂಪನಿ, ಧಾರವಾಡ.

ಎಷ್ಟು ಸುಖದಿಂದ ಸಾಯಬಹುದು! ಮಡಿಲಲ್ಲೇ ಕುಳಿತುಕೊಂಡ ಮಗನ ಬೆನ್ನನ್ನು ನೇವರಿಸುತ್ತ, ಅವನ ಮುಖದಲ್ಲೇ ಚಲಿಸದ ದೃಷ್ಟಿಯನ್ನಿಟ್ಟು, ಸಾಯಬೇಕಾದರೂ ಎಂಥ ಪುಣ್ಯವಂತೆಯಾಗಿರಬೇಕು!" ಎಂದುಕೊಳ್ಳುತ್ತಿದ್ದರು. ಆದರೆ ತಮ್ಮ ಸ್ಥಿತಿಯನ್ನು ನೆನಸಿ, "ಆದರೆ....ಯಾರಿಗೆ ಬೇಕು ಹೀಗೆ ಬದುಕುವುದು?" ಎಂದು ಅವರ ಮನಸ್ಸು ನೇದನೆಯಿಂದ ಕೇಳಿಕೊಂಡಾಗ, ಸುಭದ್ರಮ್ಮನವರಿಗೆ ಕರುಳನ್ನೆ ಕಮುಕಿದಂತಹ ನೋವಾಗುತ್ತಿತ್ತು. ಯಾವುದನ್ನೊ ಗಾಢವಾಗಿ ಯೋಚಿಸುತ್ತ, ಮೌನವಾಗಿ ಕಣ್ಣೀರು ಸುರಿಸುತ್ತಿದ್ದರು. ಎಚ್ಚರವಾದಾಗ, "ಯಾರೋ ಏನೊ! ಎಲ್ಲಿಯಾದರೂ ಹೋದರೆ....ಮೂರು ಮೂರು ದಿನ ಮನೆಯ ಮುಖ ಕಾಣುವುದಕ್ಕಿಲ್ಲ. ಇಲ್ಲಿ ಬಾಕಿದ್ದವರು ಬದುಕಿದ್ದಾರೋ ಸತ್ತಿದ್ದಾರೋ ಎನ್ನುವ ಯೋಚನೆಯೂ ಇಲ್ಲ...." ಎಂದುಕೊಂಡು, ಎಲ್ಲಾ ತಪ್ಪನ್ನೂ ಗಂಡನ ಮೇಲೆ ಹೊರಿಸಲು ಪ್ರಯತ್ನಿಸುತ್ತಿದ್ದರು.

ಮೆಲ್ಲಮೆಲ್ಲನೆ ಕತ್ತಲು ಕಾಲಿಡುತ್ತಿತ್ತು. ಸುಭದ್ರಮ್ಮ ದೀಪವನ್ನು ಉರಿಸಿ ಹೊರಗೆ ತಂದಿಟ್ಟು, ತಿರುಗಿ ಅಂಗಳಕ್ಕಿಳಿದರು. ಗಂಡನ ಬಗೆಗೆ ಯಾವುದೇ ಒಂದು ಹೊಸ ಉತ್ಸಾಹವನ್ನು ಅವರು ತಾಳದಿದ್ದರೂ, ತಮ್ಮ ಆ ಅತ್ತಿಗೆಯ ಬಗೆಗೆ ಒಂದು ರೀತಿಯ ಕುತೂಹಲ ಅವರಲ್ಲಿ ಉಂಟಾಗಿತ್ತು. ಆಲ್ಲಿಯ ಸುದ್ದಿ ತಿಳಿಯಲು ಅವರು ಆತುರರಾಗಿದ್ದರು. ಅದುದರಿಂದಲೇ, ಶಂಕರಯ್ಯನವರ ಅಕೃತಿ ಗದ್ದೆಯ ತುದಿಯಲ್ಲಿ ಕಾಣಿಸಿಕೊಂಡೊಡನೆಯೆ, ಅವರಿಗಾಗಿ ಸುಭದ್ರಮ್ಮನವರು ಬಳಿಗೆ ಹೋಗಿ, ಬೇಗಬೇಗನೆ ಮಜ್ಜಿಗೆ ನೀರಿನ ವ್ಯವಸ್ಥೆಯಲ್ಲಿ ತೊಡಗಿದರು. ಅವರು ಹೊರಗೆ ಬರುವುದರ ಮೊದಲೇ ಅಂಗಳದಿಂದ ಶಂಕರಯ್ಯನವರ ಧ್ವನಿ ಕೇಳಿಸಿತು. ಅ ನಿತ್ಯವೂ ಕೇಳಿಸುವ ಮಾತೇ, "ತಣ್ಣಗೆ ಏನಾದರೂ ಇದೆಯೇ? ಎಂದು. ಸುಭದ್ರಮ್ಮ ಮರುಮಾತಿಲ್ಲದೆ, ಮಜ್ಜಿಗೆನೀರಿನೊಂದಿಗೆ ಹೊರಗೆ ಬಂದರು.

"ಸ್ವಲ್ಪ ಹಸುವಿನ ಹಾಲು ತರುತ್ತೀಯಾ?" ಎಂದು ಶಂಕರಯ್ಯನವರು ಕೇಳಿದರು. ಇದೊಂದು ಹೊಸ ರೀತಿಯ ಪ್ರಶ್ನೆ. ಅದಕ್ಕಾಗಿಯೇ ಸುಭದ್ರಮ್ಮನವರು ಕಣ್ಣಗಲಿಸಿ ಪತಿಯೆಡೆಗೆ ನೋಡತೊಡಗಿದರು.

ಶಂಕರಯ್ಯನವರಿಗೂ ಇದು ಅರ್ಥವಾಯಿತು. ಅವರು ತಮ್ಮ ಹಿಂದೆ ಅವಿತುಕೊಂಡಿದ್ದ ಮಗುವನ್ನು ಕೈಹಿಡಿದು ಮುಂದಕ್ಕೆಳೆಯುತ್ತ, "ಇಗೋ ಇತ್ತ ಬಾರಪ್ಪ. ನೋಡು, ಸ್ವಲ್ಪ ಹಾಲು ಕುಡಿದುಕೋ. ಮಧ್ಯಾಹ್ನದನಂತರ ಏನೂ ಹೊಟ್ಟೆಗೆ ಹೋಗಿಲ್ಲ.." ಎನ್ನತೊಡಗಿದರು.

ಸುಭದ್ರಮ್ಮ ನೋಡಿದರು. ಪುಟ್ಟ ಮಗುವೊಂದು ದೀನವಾಗಿ ಶಂಕರಯ್ಯನವರು ಎಳೆದಂತೆ ಮುಂದೆ ಮುಂದೆ ಬರುತ್ತಿತ್ತು. ಸುಭದ್ರಮ್ಮನವರಿಗೆ ಯೋಚಿಸುವ ಅವಶ್ಯಕತೆಯೇ ಬೀಳಲಿಲ್ಲ. ಒಂದೇ ಕ್ಷಣದಲ್ಲಿ ಎಲ್ಲವೂ ಅವರಿಗೆ ಅರಿವಾಯಿತು. ಆ ಮಗು ತಾಯಿಯಿಲ್ಲದ ತಬ್ಬಲಿಯಾದೀತೆಂದು ಅವರು ಬಗೆದಿದ್ದರೇ ಹೊರತು, ಅದನ್ನು ಹೊರುವ ಹೊಣೆ ತಮ್ಮ ಮೇಲೆ ಬರಬಹುದೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಒಂದು ಕ್ಷಣ ದಿಕ್ಕುಗೆಟ್ಟವರಂತೆ ಅವರು ನಿಂತುಬಿಟ್ಟರು. ಈ ತನಕ ಜಡವಾಗಿ ಬಿದ್ದಿದ್ದ ಕೈಗಳು, ಯಾವುದೋ ಒಂದು ಹೊಸ ಆಶೆಗಾಗಿ ಲವಲವಿಕೆಯನ್ನು ತೋರಿಸಿದರೂ, ಸುಭದ್ರಮ್ಮನವರು, ತಮ್ಮ ದುರ್ಭಾಗ್ಯವನ್ನು ನೆನಸಿಕೊಂಡು, ಅವುಗಳನ್ನು ಪ್ರಯತ್ನಪೂರ್ವಕವಾಗಿ ತಡೆ ಹಿಡಿದರು. ಅನಂತರ ಮೌನವಾಗಿ ತಲೆ ತಗ್ಗಿಸಿ ನಿಂತರು.

"ನಿನ್ನೆ ರಾತ್ರಿಯೇ ತೀರಿಕೊಂಡಳು.... ಎಲ್ಲದಕ್ಕೂ ಒಂದು ವ್ಯವಸ್ಥೆ ಮಾಡಿ ಹೊರಡಬೇಕಾದರೆ ಮಧ್ಯಾಹ್ನವಾಯಿತು.... ನಂಟರು ಇಷ್ಟರು ಯಾರೂ ಇಲ್ಲ...ಇದ್ದ ಒಬ್ಬ ಮೈದುನ, ಬೇಕಾದರೆ ಮಗುವನ್ನು ಮನೆಯಲ್ಲಿಟ್ಟುಕೊಳ್ಳುತ್ತೇನೆ-ಎಂದ...." ಶಂಕರಯ್ಯನವರು ಒಂದೊಂದನ್ನೇ ಬಿಡಿಸಿ ಹೇಳುತ್ತಿದ್ದರು.

ಸುಭದ್ರಮ್ಮನವರ ಮನಸ್ಸಿನಲ್ಲಿ ಯಾವ ವಿಚಿತವೂ ಉಂಟಾಗಲಿಲ್ಲ. "ಅಯ್ಯೋ.... ಇನ್ನೇನು?" ಎಂಬ ಒಂದೇ ವಿಚಾರ ಅವರನ್ನು ದಿಕ್ಕುತಪ್ಪಿಸುತ್ತಿತ್ತು.

ಶಂಕರಯ್ಯ ತಿರುಗಿ ಹೇಳಿದರು.-"ಆದರೆ ಮೊದಲು ನನಗೆ ಏನು ಮಾಡುವುದೆಂದೂ ತೋರಲಿಲ್ಲ.... ಯೋಚಿಸಿ ಹೇಳುತ್ತೇನೆ—ಎಂದೆ...."

ಸುಭದ್ರಮ್ಮ ಒಮ್ಮೆ ನೀಳವಾಗಿ ಉಸಿರೆಳೆದುಕೊಂಡರು. ಅವರ ಮನಸ್ಸಿಗೆ ಒಂದು ವಿಚಿತ್ರ ಸಮಾಧಾನವಾಗುತ್ತಿತ್ತು. ಅದನ್ನೇ ಸರಿಯಾಗಿ ತಿಳಿದುಕೊಳ್ಳಲು, ಪತಿಯನ್ನು ಕೇಳಬೇಕೆನ್ನುವಷ್ಟರಲ್ಲೇ ಶಂಕರಯ್ಯನವರ ಮಾತು ಕೇಳಿಸತೊಡಗಿತು:

"ಹೋಗುತ್ತೀಯಾ ಮಗು? ಅಗೋ, ಹೋಗು. ಅಗೋ, ಅಮ್ಮ.....ಹಾಲು ಕುಡಿಯುವುದಿಲ್ಲವೇ? ಹುಂ, ಹುಂ, ಅಮ್ಮ ಇದ್ದಲ್ಲಿಗೆ ಹೋಗು...."

ಸುಭದ್ರಮ್ಮನ ಹೃದಯಕ್ಕೆ ಬರೆಯೆಳೆದಂತಾಯಿತು. ತಾವು ಕೇಳಬೇಕೆಂದಿದ್ದುದನ್ನು ಕೇಳಲಾಗಲಿಲ್ಲ, ಅವರಿಂದ. ಅನಂತರ ಒಂದು ಕ್ಷಣವೂ ಅವರು ಅಲ್ಲಿ ನಿಲ್ಲಲಿಲ್ಲ. ಬೇಗಬೇಗನೆ ಒಳಗೋಡಿ, ಗೋಡೆಗೊರಗಿಕೊಂಡು ನಿಶ್ಚಲವಾಗಿ ನಿಂತುಬಿಟ್ಟರು. ಅನಂತರ ಏನೋ ನೆನಪಾದಂತಾಗಿ, ತಟ್ಟೆಯಲ್ಲಿ ಸ್ವಲ್ಪಹಾಲು ಹಾಕಿಕೊಂಡು, ಮುಖ ತಗ್ಗಿಸಿಕೊಂಡೇ ಹೋಗಿ, ಶಂಕರಯ್ಯನವರ ಎದುರು ಇಟ್ಟರು. ತುಸು ತಡೆದು ಧೈರ್ಯದಿಂದ, "ತಿರುಗಿ ಯಾವಾಗ ಹೋಗುವುದು?" ಎಂದು ಕೇಳಿದರು.

ಶಂಕರಯ್ಯ ಬೆಪ್ಪಾಗಿ, "ಯಾಕೆ?" ಎಂದರು. ಸುಭದ್ರಮ್ಮ ಏನನ್ನೂ ಹೇಳಲಿಲ್ಲ. ಮೌನವಾಗಿ ಒಳಗೆ ಹೋದರು. ಶಂಕರಯ್ಯನವರು ಮಾತ್ರ, ಮಗುವಿಗೆ ಹಾಲು ಕುಡಿಸುವುದನ್ನೂ ಮರೆತು, ಮೇಲೆ ಕೆಳಗೆ ನೋಡುತ್ತಿದ್ದರು. ಅನಂತರ ಹೇಗೋ ಮೆಲ್ಲಗೆ ಹೇಳಿದರು: "ಯಾವಾಗ ಬೇಕಾದರೂ ಹೋಗಬಹುದು....ನಾಳೆ.... ನಾಡದು....ನಿನ್ನಿಷ್ಟ...." ಆದರೆ ಈ ಮಾತು ಸುಭದ್ರಮ್ಮನವರಿಗೆ ಕೇಳಿಸಿತೋ ಇಲ್ಲವೊ? ಅವರು, ತಮ್ಮನ್ನೆ ಮರೆತು, ಒಳಗೆ ಎಲ್ಲಿಯೋ ನಿಶ್ಚಲವಾಗಿ ಕುಳಿತಿದ್ದರು.

ಇರುಳೂ ಆಯಿತು. ಯಂತ್ರದಂತೆ ಸುಭದ್ರಮ್ಮನವರು ನಿತ್ಯದ ಕೆಲಸಗಳನ್ನು ಮುಗಿಸಿದರು. ಗಂಡನಿಗೆ, ಮಗುವಿಗೆ, ಬಡಿಸಿದರು. ಉಣ್ಣುವುದಕ್ಕೆರಿಯದೆ ಮಗು ಮೌನವಾಗಿ ಕುಳಿತಾಗ, ಶಂಕರಯ್ಯನವರೇ ಉಣಿಸಿದರು. ಊಟದ ನಂತರ ಮಗುವನ್ನು ತಮ್ಮ ಬಳಿಯಲ್ಲಿಯೇ ಮಲಗಿಸಿಕೊಂಡು, ನಿದ್ದೆ ಮಾಡಿಸಿದರು. ಸುಭದ್ರಮ್ಮನವರೊಡನೆ ಯಾವ ವಿಚಾರವನ್ನೂ ಅವರು ಕೇಳಲಿಲ್ಲ. ಸುಭದ್ರಮ್ಮನವರೂ ಮಾತನಾಡಲಿಲ್ಲ. ಮಗುವಿನಿಂದ ಅದಷ್ಟು ದೂರ—ಒಳಗೆ—ಅವರು ತಮ್ಮ ಹಾಸಿಗೆಯನ್ನು ಬಿಡಿಸಿ ಮಲಗಿಕೊಂಡರು. ಎಷ್ಟೋ ಹೊತ್ತಿನ ತನಕ ನಿದ್ದೆಯಿಲ್ಲದೆ ಮಗ್ಗಲು ಬದಲಾಯಿಸಿಕೊಳ್ಳುತ್ತ ನಿಟ್ಟುಸಿರು ಬಿಡುತ್ತಿದ್ದರು. ಶಂಕರಯ್ಯನವರ ಪರಿಸ್ಥಿತಿಯೂ ಹಾಗೆಯೇ—ಎಂಬುದನ್ನೂ ಅವರು ಯೋಚಿಸಲಿಲ್ಲ. ಮಗು ಮಾತ್ರ ಮುರುಟಿಕೊಂಡು, ಯಾವುದೋ ಕನಸನ್ನು ಕಾಣುತ್ತ ಮೌನವಾಗಿ ನಿದ್ರಿಸುತ್ತಿತ್ತು. ಅದೆಂತಹ ಕನಸೋ!

ಕೋಳಿಯ ಕೂಗನ್ನು ಕೇಳಿ, ಆಗ ತಾನೆ ನಿದ್ರಿಸತೊಡಗಿದ ಸುಭದ್ರಮ್ಮ ಎದ್ದು, ನಿತ್ಯದಂತೆ ಕಸಗುಡಿಸತೊಡಗಿದಳು. ಹೊರಗೆ ಬಂದಾಗ ಥಕ್ಕನೆ ಕಾಲನ್ನು ಹಿಂತೆಗೆದುಕೊಳ್ಳುವಂತಾಯಿತು. ಮಗು ಮಲಗಿದಲ್ಲಿಂದ ಎದ್ದು, ಅಳುತ್ತ, ಅಂಜಿಗಾಲಿಡುತ್ತ, ಅತ್ತಿತ್ತ ಹೋಗುತ್ತಿತ್ತು. ಸುಭದ್ರಮ್ಮನವರ ಮನಸ್ಸಿನ ಗಲಿಬಿಲಿ ಅವರನ್ನು ಒಳಗೆ ನೂಕುತ್ತಿತ್ತು. ಕೆಳಗೆ ನೋಡಿದಾಗ ಮಗು ಅವರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡು, ಅವರ ಮುಖವನ್ನೇ ನೋಡುತ್ತ ಅಳುತ್ತಿತ್ತು.

"ಜೋ....ಜೋ...." ಸುಭದ್ರಮ್ಮ, ನಿದ್ರಿಸುತ್ತಿದ್ದ ಪಂಚಮನನ್ನು ಗಾಬರಿಯಿಂದ ಆಗಾಗ ನೋಡಿಕೊಳ್ಳುತ್ತ, ಮಗುವಿನ ಕೈಯಿಂದ ಬಿಡಿಸಿಕೊಳ್ಳತೊಡಗಿದರು. ಆದರೆ ಇದರೊಂದಿಗೆ ಮಗುವಿನ ಅಳುವೂ ಹೆಚ್ಚತೊಡಗಿತು.

"ಉಹುಂ....ಇಲ್ಲ....ಬೇಡ ಬೇಡ...." ಸುಭದ್ರಮ್ಮ ಬೇಗ-ಬೇಗನೆ ಮಗುವನ್ನೆತ್ತಿಕೊಂಡು ಅದನ್ನು ಸಮಾಧಾನಪಡಿಸತೊಡಗಿದರು. ಆದರಿಂದಲೂ ಹೆಚ್ಚು ಅವರಿಗೆ ಗಾಬರಿಯಾಗುತ್ತಿತ್ತು, "ಎಲ್ಲಿ ಶಂಕರಯ್ಯನವರು ನೋಡಿ ಬಿಡುವರೋ?" ಎಂದು.

ಮಗು ಅಳುವನ್ನು ಮೆಲ್ಲನೆಮೆಲ್ಲನೆ ಕಡಿಮೆ ಮಾಡುತ್ತಿತ್ತು. ಒಲ್ಲದ ಮನಸ್ಸಿನಿಂದ ಅದನ್ನೆತ್ತಿಕೊಂಡು, ಸುಭದ್ರಮ್ಮ ಸಮಾಧಾನಪಡಿಸುತ್ತಿದ್ದರು. ಕೊನೆಗೊಮ್ಮೆ ಮಗು ಅಳು ನಿಲ್ಲಿಸಿತೆಂದಾಗ, ಮೆಲ್ಲನೆ ಅವನನ್ನು ಶಂಕರಯ್ಯನವರ ಬಳಿಯಲ್ಲಿ ಬಿಡಲು ಕೆಳಗಿಳಿಸಿದರು. ಆದರೆ ಮಗು ಅದನ್ನೂ ಒಪ್ಪಲಿಲ್ಲ. ಸುಭದ್ರಮ್ಮ ದಾರಿಕಾಣದೆ ಸುಮ್ಮನೆ ನಿಂತು ಬಿಟ್ಟರು. ಅಷ್ಟರಲ್ಲಿ "ಯಾರು?" ಎಂದೆನ್ನುತ್ತ ಶಂಕರಯ್ಯನವರು, ಮೆಲ್ಲನೆ, ನಿದ್ರಾಲೋಕದಿಂದ ಇಳಿಯತೊಡಗಿದರು. ಆವರೆ ಅವರು ಪೂರ್ಣವಾಗಿ ಕಣ್ಣು ಬಿಟ್ಟಾಗ, ಮಗುವಿನ ಹೊರತು ಬೇರೆ ಯಾರೂ ಅಲ್ಲಿರಲಿಲ್ಲ. ಮಗು ಶಂಕರಯ್ಯನವರ ಕೈಹಿಡಿದೇಳುತ್ತ ಅಳುತ್ತಿತ್ತು. ಆಗಾಗ ಒಳಕ್ಕೆ ಕೈತೋರಿಸುತ್ತ, "ಅಮ್ಮ....ಅಮ್ಮ...."ಎನ್ನುತ್ತಿತ್ತು. ಸುಭದ್ರಮ್ಮ ಒಳಗಿನಿಂದಲೇ ಎಷ್ಟು ಸಲ ಆ ಮಗುವನ್ನು ತಡೆಸಿದರೋ ಏನೋ!

ಬೇಗ ಬೇಗನೆ ತಮ್ಮ ಪ್ರಾತಃಕರ್ಮಗಳನ್ನು ತೀರಿಸಿಕೊಂಡು ಶಂಕರಯ್ಯನವರು, ತಮ್ಮ ಪತ್ನಿಯನ್ನು ಕೂಗಿ, "ನಾನೊಮ್ಮೆ

ನಕ್ಷತ್ರಗಾನ

ಡಿ. ಎಸ್. ಕರ್ಕಿ, ಎಮ್. ಎ., ಪಿ.ಎಚ್. ಡಿ.
ಇವರ
ಉತ್ಕೃಷ್ಟ ಕವನಗಳ ಸಂಗ್ರಹ!

ಶ್ರೀ. ಪ. ರಾ. ಬೇಂದ್ರೆ, ಪುಳುರ ಜೆನ್ನ, ವಿ. ಕೃ. ಗೋಕಾಕ, ಮುಗುಳಿ ಮುಂತಾದ ಕವಿಶ್ರೇಷ್ಠರು ಇದನ್ನು ಬಾಯಿಬಿಡುಂಬ ಹೊಗಳಿದ್ದಾರೆ:

ಬೆಲೆ: ೧—೮—೦.

ಪ್ರಕಾಶಕರು:—
ಕರ್ನಾಟಕ ಪುಸ್ತಕ ಮಂದಿರ,
ಬನಹಟ್ಟಿ, ಜಿಲ್ಲಾ: ಬಿಜಾಪುರ.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮುತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೪-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ಇವರಿಂದ :—

ಗಣೇಶ ರಾಮಚಂದ್ರ ಕರ್ಕಿ ಮುತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಪೇಟೆಗೆ ಹೋಗಿ ಬರುತ್ತೇನೆ....” ಎಂದು ಬೇರೇನನ್ನೊ ಹೇಳಲು ಹೋದವರು ತಡೆದು ನಿಂತರು. ತುಸು ತಡೆದು ಸಂಶಯದ ಸ್ವರದಲ್ಲಿ ಕೇಳಿದರು : “ಹುಡುಗನನ್ನು ಬಿಟ್ಟು ಬರಲು ನಾಳೆ ಬೆಳಿಗ್ಗೆ ಹೋಗುತ್ತೀನೆ!”

ಇಷ್ಟು ಜೋಳಿ, ತುಸುಹೊತ್ತು ಸುಭದ್ರಮ್ಮನವರ ಒಪ್ಪಿಗೆಗೆ ಕಾದು ನಿಂತರು. ಒಳಗಿದ್ದ ಸುಭದ್ರಮ್ಮ ಮಾತನಾಡಲಿಲ್ಲ ಒಂದು ಏಳಿ “ಹೂಂ” ಎಂದಿದ್ದರೂ ಅದು ಗಂಟಲಿನಲ್ಲಿಯೇ ಉಳಿದಿತ್ತು. ತಿರುಗಿ ಸುಭದ್ರಮ್ಮ ಹೊರಗೆ ಬಂದಾಗ, ಶಂಕರಯ್ಯ ಹೋಗಿದ್ದರು. ಅವರೊಡನೆಯೇ ಕಾಫಿ ಕುಡಿದುಕೊಂಡ ಮಗು ಮಾತ್ರ ಅಲ್ಲಿಯೇ ಒಂದು ಬದಿಯಲ್ಲಿ ಮಲಗಿಕೊಂಡಿತ್ತು. ಸುಭದ್ರಮ್ಮ ಮಾತನಾಡದೆ ತಮ್ಮ ಕೆಲಸಕ್ಕೆ ಹಿಂದಿರುಗಿದರು.

ಮಧ್ಯಾಹ್ನದ ಊಟಕ್ಕೆ ಎಲ್ಲವೂ ಬದ್ಧವಾಗಿದ್ದರೂ ಶಂಕರಯ್ಯನವರು ಇನ್ನೂ ಬಂದಿರಲಿಲ್ಲ. ನಿದ್ದೆಯಿಂದ ಎಚ್ಚರುಗೊಂಡ ಮಗು ಮೆಲ್ಲಮೆಲ್ಲನೆ ಅಳುತ್ತಿತ್ತು. ಅದರ ಅಳುವಿನ ಸ್ವರಕ್ಕೆ ಸರಿಯಾಗಿ ಸುಭದ್ರಮ್ಮನವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುತ್ತಿದ್ದರು. ಗಟ್ಟಿಯಾಗಿ ಅತ್ತಾಗ, ಕಳೆದುಕೊಂಡ ತಾಯಿಗಾಗಿ ಅಳುತ್ತಿರಬಹುದು— ಎಂದುಕೊಳ್ಳುತ್ತಿದ್ದರು. ಕ್ಷೀಣವಾಗಿ ಅಳತೊಡಗಿದಾಗ, ಹಸಿನೆಯಿರಬಹುದು—ಎಂದುಕೊಂಡರು.

ಆದರೆ ಎಷ್ಟು ಕಾದರೂ ಶಂಕರಯ್ಯನವರ ಸುಳಿವು ಕಾಣಿಸಲಿಲ್ಲ. ಮಗುವಿನ ಅಳುಮಾತ್ರ ಮೆಲ್ಲನೆ ಕೇಳಿಸುತ್ತಿತ್ತು. ಸುಭದ್ರಮ್ಮನವರು ಹೊಸಕೋಣೆಯ ವರೆಗೆ ಬಂದು ಮಗುವಿನ ಕಡೆಗೆ ಮೆಲ್ಲನೆ ಇಣಿಕಿದರು. ಮಗು ಬೆವರಿ ಒದ್ದೆಯಾಗಿ, ಅತ್ತಿತ್ತ ಹೊರಳುತ್ತ ಬಿಕ್ಕಳಿಸುತ್ತಿತ್ತು.

ಯಾವುದೋ ಒಂದು ಹೊಸ ಶಕ್ತಿ ಸುಭದ್ರಮ್ಮನವರನ್ನು ಹೊರಗೆ ತಳ್ಳಿತು. ಎಲ್ಲಿ, ಯಾರು ನೋಡುತ್ತಾರೋ ಎಂದು ಸುತ್ತಮುತ್ತ ನೋಡಿಕೊಳ್ಳುತ್ತ ಅವರು ಮಗುವಿನ ಸಮೀಪಕ್ಕೆ ನಡೆದರು. ಆದರೆ ಮಗು ಇದೊಂದನ್ನೂ ಗಮನಿಸದೆ, ಗೋಡೆಯ ಬದಿಗೆ ಮುಖ ಮಾಡಿಕೊಂಡು, ಆಗಾಗ ಕ್ಷೀಣವಾಗಿ ಅಳುತ್ತಿತ್ತು ನಡುಗುತ್ತಿದ್ದ ಕೈಯನ್ನು ಅದರ ಮೈಮೇಲೆ ಇರಿಸಿದವರೇ ಸುಭದ್ರಮ್ಮ ಬೆಚ್ಚಿಬಿದ್ದರು. ಅದರ ಮೈ ಅಷ್ಟು ಸುಡುತ್ತಿತ್ತು.

ಸುಭದ್ರಮ್ಮನವರ ಕಡೆಗೆ ಹೊರಳಿದ ಮಗು, ಯಾವ ಹೊಸ ತನವನ್ನೂ ತೋರಿಸಲಿಲ್ಲ. ದೈನ್ಯದಿಂದ ಅವರ ಮುಖವನ್ನೆ ನೋಡತೊಡಗಿತು. ಸುಭದ್ರಮ್ಮನವರಿಗೆ ಅದನ್ನು ಕಂಡ “ಅಯ್ಯೋ” ಎನಿಸಿತು. ಯಾವುದೋ ಯೋಚನೆಯಲ್ಲಿ ಮಗುವನ್ನೆತ್ತಿಕೊಂಡವರು, ಮತ್ತೇನನ್ನೋ ನೆನಸಿಕೊಂಡು, ಗಾಬರಿಯಿಂದ ಹಿಂದೆ ನೋಡಿಕೊಳ್ಳುತ್ತ, ತಿರುಗಿ ಅದನ್ನು ಕೆಳಗಿಳಿಸಲು ಪ್ರಯತ್ನಿಸಿದರು. ಆದರೆ ಮಗು ಇದನ್ನೊಪ್ಪಲಿಲ್ಲ. ಅಳುವಿನ ಧ್ವನಿಯನ್ನು ಏರಿಸುತ್ತ, ಸುಭದ್ರಮ್ಮನವರ ಕೊರಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಿತ್ತು ಇದನ್ನು ಕಂಡು ಅವರು, ಆದರ ಅಳುವನ್ನು ತಡೆಯಲು ಯತ್ನಿಸಿದರು ಅನಂತರ ಮೆಲ್ಲನೆ ಜಾವಡಿಯ ತುದಿಯ ತನಕ ಬಂದು, ಗದ್ದೆಯ ದೂರದ ಮೂಲೆಯಲ್ಲಿದ್ದ ದಾರಿಯನ್ನೊಮ್ಮೆ ನೋಡಿ, ಮಗುವನ್ನೆತ್ತಿಕೊಂಡೇ ಒಳಗೆ ನಡೆದರು.

ಮೊದಲು ಸುಭದ್ರಮ್ಮನವರಿಗೆ ಏನು ಮಾಡುವುದೂ ತೋರಲಿಲ್ಲ. ಅವರನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ ಮಗು, ಏನು ಮಾಡಿದರೂ ಕೆಳಗಿಳಿಯಲಿಲ್ಲ. ಕೊನೆಗೆ ಅದನ್ನೆತ್ತಿಕೊಂಡೇ, ಬಾಳೆಯೆಲೆಯ ತುಂಡಿನಲ್ಲಿ ಸ್ವಲ್ಪ ಅನ್ನವನ್ನು ತಂದುಹಾಕಿ, ಅದಕ್ಕೆ ಹಾಲು ಬೆರಸಿ, ನುಣ್ಣಗೆ ಅರೆದಿಟ್ಟರು. ಅದರೂ ಮಗು ಕೆಳಗಿಳಿಯಲಿಲ್ಲ. ಸುಭದ್ರಮ್ಮ ಅದನ್ನು ಹಿಡಿದುಕೊಂಡೇ ಕೆಳಗೆ ಕುಳಿತರು. ಒಂದು ತುತ್ತು ಅನ್ನವನ್ನು ಮಗುವಿನ ಬಾಯಲ್ಲಟ್ಟು, ಥಕ್ಕನೆ ಅದನ್ನು ಕೆಳಗೆ ಕೂರಿಸಿದರು. ಆದರೆ ಸುಭದ್ರಮ್ಮ ನೆನಸಿದಂತೆ, ಮಗುವೇನೂ ಆಕ್ಷೇಪವೆತ್ತಲಿಲ್ಲ. ಆದರ ಬದಲು, ಬಾಯಲ್ಲಿದ್ದುದನ್ನೆಲ್ಲ ಒಮ್ಮೆಲೆ ನುಂಗಿ, ತಿರುಗಿ ಸುಭದ್ರಮ್ಮನವರ ಕಡೆಗೆ ನೋಡತೊಡಗಿತು; ಆದರೆ ಅವರಿಗೆ ಈ ಕಡೆಗೆ ಲಕ್ಷವೇ ಇರಲಿಲ್ಲ. ಅವರು ನೆಟ್ಟ ದೃಷ್ಟಿಯಿಂದ ಮಗುವಿನ ಮುಖವನ್ನು ನೋಡುತ್ತಿದ್ದರು. ಅವರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದಕ್ಕಾಗಿ ಗಟ್ಟಿಯಾಗಿ “ಅಮ್ಮ....” ಎಂದು ಮಗು ಒತ್ತಿ ಕರೆಯಿತು. ಸುಭದ್ರಮ್ಮ ಬೆಚ್ಚಿಬಿದ್ದು “ಆಂ....?” ಎಂದು, ತಿರುಗಿ ಅದರ ಮುಖದಲ್ಲೇ ತಮ್ಮ ನೋಟವನ್ನು ನೆಟ್ಟರು.

“ಅಮ್ಮ....ಅ....” ಮಗು, ನೆಲದಲ್ಲಿದ್ದ ಸುಭದ್ರಮ್ಮನವರ ಕೈಬೆರಳನ್ನು ಹಿಡಿದೆಳೆಯ ತೊಡಗಿತು. ಆದರೂ ಸುಭದ್ರಮ್ಮನವರ ಲಕ್ಷ್ಯ ಅದರ ಕಡೆಗೆ ಹೋಗಲಿಲ್ಲ. ಇದರಿಂದ ಬೇಸರು ಹೊಂದಿದೆಯೋ ಎನೋ, ಮಗು, ಎದುರಿಗಿದ್ದ ಬಾಳೆಯೆಲೆಯನ್ನು ಅತ್ತ ಇತ್ತ ಎಳೆದಾಡ ತೊಡಗಿತು.

“ಹುಂ....ಬರುತ್ತೇನೆ....” ಎಂದುಕೊಂಡು ಸುಭದ್ರಮ್ಮನವರು ಬೇಗಬೇಗನೆ ಹೊರಗೆ ಬಂದು, ಒಮ್ಮೆ ಗದ್ದೆಯ ತುದಿಯ

ನೋಡಿ, ತಿರುಗಿ ಒಳಗೆ ಹೋದರು. ಅನಂತರ ಮಗುವನ್ನು ಯಿಂದ ಮಡಿಲಲ್ಲಿ ಕುಳ್ಳಿರಿಸಿಕೊಂಡರು.

ಉಂ.....ಏನು ? "

ದರೆ ಮಗು ಯಾವ ಉತ್ತರವನ್ನೂ ಕೊಡಲಿಲ್ಲ. ಅದರ ಬದಲು, ವನ್ನೆಲ್ಲ ಅತ್ತ ಇತ್ತ ಜಿಲ್ಲಾಡತೊಡಗಿತು. ಸುಭದ್ರಮ್ಮ ರ ಕೈಯನ್ನು ತಡೆದು, ಉಣಿಸತೊಡಗಿದರು. ತುಸು ತರ, ಎಡದ ಕೈಯಿಂದ ಮಗುವಿನ ಕೈಯನ್ನ ಲುಗಾಡಿಸಿ ತಿರುಗಿ ದರು:

" ಏನು ? "

ಇದಕ್ಕೂ ಮಗುವಿನ ಉತ್ತರವಿಲ್ಲ. ಮೌನವಾಗಿ, ತುಂಬಿದ ಬಾಯನ್ನು ಇನ್ನಷ್ಟು ಆಗಲಿಸಿ, ಇದ್ದ ನಾಲ್ಕು ಕಿರು-ಲುಗಳನ್ನು ತೋರಿಸಿತು. ಸುಭದ್ರಮ್ಮ ಅಕ್ಕರೆಯಿಂದ ಅದರ ಖವನ್ನು ತನ್ನಲ್ಲಿ ಅಡಗಿಸಿಕೊಂಡರು. ಹೀಗೆಯೇ ಮಗುವಿನ ಟ ಸಾಗಿತ್ತು. ನಾಲ್ಕು ತುತ್ತನ್ನು ಸರಿಯಾಗಿ ನುಂಗಿಕೊಳ್ಳಲು ಭದ್ರಮ್ಮ ಅವಕಾಶಕೊಡಲಿಲ್ಲ. ಅವರ ಮಾತಿನ ಗಡಿಬಿಡಿಯಲ್ಲಿ, ಗಾಗ ಬೈ ಅಲುಗಿಸುವುದರಲ್ಲಿ, ಮಗುವಿಗೆ ಅತ್ತಿತ್ತ ನೋಡು-ದೂ ಆಗುತ್ತಿರಲಿಲ್ಲ.

ಹೊರಗೆ ಯಾರೋ ಬಂದ ಸದ್ದು ಕೇಳಿಸಿತು. ಈಗ ಸುಭ-ದ್ರಮ್ಮ ಇಹಲೋಕಕ್ಕೆಳಿದರು. ಹಿಂಗದ ಆಶೆಯನ್ನು ತಡೆ-ಂಡಿದು, ಬೇಗ ಬೇಗನೆ ಮಗುವನ್ನು ಕೆಳಗೆ ಕುಳ್ಳಿರಿಸಿ, ದೂರ-ಂದಲೇ ಉಣಿಸತೊಡಗಿದರು. ಶಂಕರಯ್ಯ ಒಳಗೆ ಬಂದು ನೋಡಿದಾಗ ವಿಶೇಷವೇನೂ ಇದ್ದಂತೆ ಕಾಣಿಸಲಿಲ್ಲ. ಒಲ್ಲದ ಮನಸ್ಸಿನಿಂದ ಮಗುವಿಗೆ ಉಣಿಸುತ್ತಿರುವಂತೆ, ಸುಭದ್ರಮ್ಮನವ-ರಿದ್ದರು.

ಮತ್ತೆ ತಿರುಗಿ ಮೊದಲಿನಂತೆ. ಊಟ ಮುಗಿಸಿ, ಶಂಕರಯ್ಯ ನವರ ಬಳಿ ಬಿಟ್ಟು ಮಗುವಿನ ಕಡೆಗೆ, ಅನಂತರ ಸುಭದ್ರಮ್ಮ ಹಾಯಲಿಲ್ಲ. ಶಂಕರಯ್ಯ ಎಲ್ಲಾದರೂ ಹೊರಗೆ ಅತ್ತಿತ್ತ ಹೋದಾಗ, ಗಾಬರಿಯಿಂದ ತಿರುಗಿ ನೋಡಿಕೊಳ್ಳುತ್ತ, ಮಗುವಿನ ಗಲ್ಲವನ್ನೊಮ್ಮೆ ಹಿಡಿದಲುಗಿಸಿ ಹೋಗುತ್ತಿದ್ದರು. ಆದರೆ ಆದ-ರಿಂದ ದೂರದಲ್ಲಿದ್ದಾಗ ಅವರ ಮನಸ್ಸು ಬೇರೆಕಡೆಗೆ ಹಾರುತ್ತಿತ್ತು. ತನ್ನ ದುರ್ಭಾಗ್ಯಕ್ಕಾಗಿ ಮರುಗುತ್ತಿದ್ದ ಮನಸ್ಸಿನೆದುರು, ಆ ಮಗುವಿನ ರೂಪ ಬಂದು ನಿಂದಾಗ, ಅವರಿಗೆ ಎಲ್ಲಿಲ್ಲದ ವೇದನೆ ಯಾಗುತ್ತಿತ್ತು. " ಇವನನ್ನು ಇಲ್ಲಿಯ ವರೆಗೆ ತರದಿದ್ದರೆ ಏನು ನಷ್ಟವಾಗುತ್ತಿತ್ತು. ?..... " ಎಂದುಕೊಳ್ಳುತ್ತಿದ್ದರು. ಇಂತಹ ಮನಃಸ್ಥಿತಿಯಲ್ಲಿರುವಾಗಲೇ, ರಾತ್ರಿ, ಶಂಕರಯ್ಯನವರು ಉಣ್ಣುತ್ತ ಅವರೊಡನೆ ಕೇಳಿದರು: " ಹಾಗಾದರೆ ನಾಳೆ ಬೆಳಿಗೆ ಕರೆದುಕೊಂಡು ಹೋಗಿ, ಬಿಟ್ಟು ಬರಲೇ ? "

ಸುಭದ್ರಮ್ಮ ತಕ್ಷಣ " ಹುಂ " ಎಂದರು.

ಅನಂತರ ಇದನ್ನು ನೆನಸಿಕೊಂಡಾಗ, ಸುಭದ್ರಮ್ಮನವರಿಗೆ ಹೊರಗೊಮ್ಮೆ ಸಮಾಧಾನವೆನಿಸುತ್ತಿದ್ದರೂ, ಒಳಮನಸ್ಸೊಂದು ಅಸಹ್ಯವೇದನೆಯಿಂದ ಬಳಲುತ್ತಿತ್ತು. ಅದನ್ನು ಮುಚ್ಚಿಕೊಳ್ಳಲು ತಮ್ಮಿಂದಾದಷ್ಟು ಅವರು ಪ್ರಯತ್ನಿಸುತ್ತಿದ್ದರು. ಆದರೆ, ರಾತ್ರಿ, ಶಂಕರಯ್ಯನವರು ಮಗುವನ್ನು ಮಲಗಿಸಲು ಪ್ರಯತ್ನಿಸುತ್ತಿ-ದ್ದಾಗ, ಅವನು ತಿರುಗಿ ಅಳಲು ಮೊದಲು ಮಾಡಿದ. ಈಗ ಸುಭದ್ರಮ್ಮನವರ ಪ್ರಯತ್ನವೆಲ್ಲ ಒಮ್ಮೆಲೇ ವ್ಯರ್ಥವಾಯಿತು. ಅವರು ಕಟ್ಟಿದ ಒಡ್ಡುಗಳೆಲ್ಲ ಒಂದೊಂದಾಗಿ ಕದಲತೊಡಗಿ-ದುವು. ಕೊನೆಗೆ ತಡೆಯಲಾರದೆ ಶಂಕರಯ್ಯನವರೊಡನೆ, " ಅವನನ್ನು ಇತ್ತ ಕೊಡಿ, ಬೇಕಾದರೆ ಮಲಗಿಸಿಕೊಳ್ಳುತ್ತೇನೆ. " ಎಂದರು. ಕೊನೆಯ ಪ್ರಯತ್ನವೆಂದೋ ಏನೋ—" ಬೇಕಾದರೆ" ಎಂಬ ಪದ ಅವರ ಬಾಯಿಯಿಂದ ಹೊರಬಿದ್ದಿತು. ಆದರೂ ಅವರಿಗೆ, ತಮ್ಮ ಬಗೆಗೇ ಆಗುತ್ತಿದ್ದ ತಿರಸ್ಕಾರವನ್ನು ತಾಳು-ವುದಾಗಲಿಲ್ಲ. ಶಂಕರಯ್ಯನವರ ಹತ್ತಿರದಿಂದ ಮಗುವನ್ನೆತ್ತಿ-ಕೊಂಡು ಒಳಗೆ ಹೋಗುವಾಗ, ನೆಟ್ಟಗೆ ತಲೆಯೆತ್ತಿಕೊಳ್ಳುವ ಸ್ಥೈರ್ಯ ಅವರಲ್ಲಿರಲಿಲ್ಲ.

ಬಳಿಯಲ್ಲೇ ಮಲಗಿಕೊಂಡಿದ್ದ ಮಗು, ನಿನ್ನೆಯಂತೆ ಇಂದೂ ಜಡವಾಗಿ ಬಿದ್ದಿರಲಿಲ್ಲ. ಕಳೆದು ಹೋದ ತಾಯಿಯ ರೂಪವನ್ನು

ಈಗ ತಾನೆ ಪ್ರಕಟವಾಗಿವೆ!

ಶ್ರೀ. ಕೋ. ಚೆನ್ನಬಸಪ್ಪನವರ ಕಥಾಸಂಗ್ರಹ

ಗಡೀಪಾರು

ಶ್ರೀ- ಚೆನ್ನವೀರ ಕಣವಿಯವರ ಖಂಡಕಾವ್ಯ

ಭಾವಜೀವಿ

(ಆಚಾರ್ಯ ಗೋಕಾಕರ ಮುನ್ನುಡಿಯೊಡನೆ)

ಇಂದೇ ಚಂದಾದಾರರಾಗಿ ಪ್ರತಿಗಳನ್ನು ಪಡೆಯಿರಿ

ವಾ. ಚಂದಾ ರೂ. ೫. (ಅಂಚೇವೆಚ್ಚ ಸೇರಿ)

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ

ಔಷಧಿ!

ಡಾ. ವಾಮನ ಗೋಪಾಳ

ಇವರ

ಸಾರ್ವ ಪರಿಲ್ಲಾ

ಸುಭದ್ರಮ್ಮನವರ ಮುಖದಲ್ಲಿ ಕಂಡಿತೋ ಏನೋ! ಆಗಾಗ ಸುಭದ್ರಮ್ಮನವರ ಕೈಯನ್ನು ಹಿಡಿದೆಳೆಯುತ್ತಿತ್ತು. ಒಮ್ಮೊಮ್ಮೆ ಹುಂಬುದನಿಯಿಂದ "ಅನ್ಮಾ...." ಎಂದು ಒತ್ತಿ ಕರೆಯುತ್ತಿತ್ತು. ಆಗ ಸುಭದ್ರಮ್ಮ ಥಕ್ಕನೆ ಮಗುವಿನ ಬಾಯಮೇಲೆ ಕೈಯಿಟ್ಟು, ಬಾಗಿಲ ಕಡೆಗೆ ಕಳ್ಳ ನೋಟವನ್ನೆಸೆಯುತ್ತಿದ್ದರು. ಅನಂತರ ಎರಡೂ ಕೈಗಳಿಂದ ಅವನ ಮುಖವನ್ನು ಹಿಡಿದು ಅಲುಗಿಸುತ್ತ, ಪಿಸುದನಿಯಲ್ಲಿ, "ಹುಂ" ಎನ್ನುತ್ತಿದ್ದರು. ಆಗ ಅವರಿಗೆ ಹುದುಗಿಸಲಾರದ ಒಂದು ರೀತಿಯ ಅವ್ಯಕ್ತ ಆನಂದವಾಗುತ್ತಿತ್ತು. ಅದರ ಫಲವೋ ಏನೋ—ಆ ಮಗುವನ್ನು ಅವರು ಇನ್ನಷ್ಟು ತಮ್ಮ ಬಳಿಗೆ ಎಳೆದು ಕೊಳ್ಳುತ್ತಿದ್ದರು.

ಮಗು ನಿಧಾನವಾಗಿ ನಿದ್ದೆಯಲ್ಲಿ ಮುಳುಗಿತು. ಮಲಗಿದಿನದ ಕಾರ್ಯಕ್ರಮಗಳೇ ತಲೆಯಲ್ಲಿ ಸುತ್ತುತ್ತಿದ್ದ ಶಂಕರಯ್ಯನವರೂ ಮೆಲ್ಲನೆಮೆಲ್ಲನೆ ಗೊರಕೆ ಹೊಡೆಯತೊಡಗಿದರು. ಸುಭದ್ರಮ್ಮನವರೂ ಜಾಗೆಯೇ ತೂಕಡಿಸತೊಡಗಿದರು. ಆದರೂ ಮಗುವಿನ ಬೆನ್ನ ಮೇಲಾಡುತ್ತಿದ್ದ ಅವರ ಕೈ ಒಂದು ನಿಮಿಷವೂ ಸುಮ್ಮನಾಗಲಿಲ್ಲ. ಮಗುವನ್ನು ಬಿಗಿದು ಅಪ್ಪಿಕೊಂಡಿದ್ದ ಇನ್ನೊಂದು ಕೈ ಸ್ವಲ್ಪವೂ ಹಿಂದೆ ಚಲಿಸಲಿಲ್ಲ.

ಕೋಳಿಯ ಕೂಗನ್ನು ಕೇಳಿ, ನಿತ್ಯದಂತೆ ಸುಭದ್ರಮ್ಮ ಎಚ್ಚೆತ್ತರು. ಮುಂಜಾನೆಯ ಚಂದ್ರನ ಬೆಳಕು ಕಿಟಕಿಯಿಂದ ತೂರಿ ಬಂದು ಕೋಣೆಯ ಗೋಡೆಯ ಮೇಲೆ ಮಂದವಾಗಿ ಬಿದ್ದಿತ್ತು. ಇರುಳಿನ ಕಾಂತಿಯು ಆಳಿದು, ದಿನದ ಪುಟ್ಟಪುಟ್ಟ ಭಾಗಗಳು ತಮ್ಮ ತಮ್ಮ ಶುಭಕಾರ್ಯಕ್ಕೆ ನೊದಲು ಮಾಡಿದ್ದವು ತಂಗಾಳಿಯ ಮಂದಗಮನಕ್ಕೆ ಒಲೆದು ತಲೆದೂಗುವ ಭತ್ತದ ತೆನೆಗಳ "ಪಠೋ" ಎಂಬ ಸದ್ದು, ಇನ್ನೊಂದು ಹೊಸಲೋಕವನ್ನೇ ಸೃಷ್ಟಿಸುವ ಒಕ್ಕಲು ಮಕ್ಕಳ "ಓ....ಓ...."ದ ದೀರ್ಘ ಆಲಾಪನೆ, ಹಕ್ಕಿಗಳ ಚಿಲಿಪಿಲಿ ನಾದ, ಸಾವಿರ ದಿಕ್ಕುಗಳಿಂದ ಕೇಳಿಸುವ ಸಾವಿರ ಕೋಳಿಗಳ ಒಂದೇ ರೀತಿಯ ಕೆಲಸ, ಹಟ್ಟಿಯಿಂದ ಮೊರೆಯಿಡುವ ಸದ್ದು, ಎಲ್ಲವೂ ನಿತ್ಯದಂತೆ ಮೊಳಗಾಯಿತು. ಆದರೆ ಸುಭದ್ರಮ್ಮನವರು ಕಸಗುಡಿಸುವ "ಸರ್....ಸರ್...."ಸದ್ದು ಇನ್ನೂ ಕೇಳಿಸಲು ತೊಡಗಲಿಲ್ಲ. ಮಗುವಿನ ಮುದ್ದು ಮುದ್ದಾದ ಬೆನ್ನಿಯ ಮೇಲಾಡುತ್ತಿದ್ದ ತಮ್ಮ ಬೆರಳುಗಳನ್ನು ಹಿಂತೆಗೆದುಕೊಳ್ಳುವ ಮನಸ್ಸು ಅವರಿಗೆ ಆಗಲಿಲ್ಲ. ಇಷ್ಟರಲ್ಲಿಂತೆ ತಾವೂ ಈ ಮಧುರ ಜೀವನವನ್ನು ಎಂದಿನಿಂದಲೋ ಅನುಭವಿಸುತ್ತಿರುವಂತೆ ಅವರಿಗೆ ಎನಿಸುತ್ತಿತ್ತು.

ಅನತಿ ತಂಗಾಳಿಯು ಒಂದು ಸೆಳಕು ಸುಯ್ಯನೆ ಕೋಣೆಯೊಳಗೆ ಬೀಸಿ ಸುಭದ್ರಮ್ಮನವರ ಹೃದಯವನ್ನು ಅಲುಗಿಸಿತು. "ನಿನ್ನೆ ನೀನು ಹೇಳುತ್ತಿದ್ದ 'ನಾಳೆ' ಇಗೋ ಬಂದಿದೆ" ಎಂದು ಸಾ ಸಾರಿ ಹೇಳುತ್ತ, ಸುಭದ್ರಮ್ಮನವರ ಹೃದಯವನ್ನು ಅಲ್ಲೋ ಕಲ್ಲೋಲವಾಗಿಸಿತು. ಬೆಚ್ಚಿ ಬಿದ್ದ ಅವರು, ತಮ್ಮನ್ನೇ ಸಮಾಧಾನಪಡಿಸಿಕೊಳ್ಳುತ್ತ ಮಗುವನ್ನು ಇನ್ನಷ್ಟು ಪತ್ತಿರಕ್ಕೆಳೆದು ಕೊಂಡರು.

ಹೊರಗಿನಿಂದ ಶಂಕರಯ್ಯನವರು ಏಳುತ್ತಿದ್ದ ಸದ್ದನ್ನು ಕೇಳಿ ಸುಭದ್ರಮ್ಮನವರೂ ಏಳಲೇಬೇಕಾಯಿತು. ಏಳುವಾಗ ಅವರು ಎಲ್ಲಿಲ್ಲದ ವೇದನೆಯೆನಿಸುತ್ತಿತ್ತು. ಆದರೂ ಸಂಕೋಚದ ಪರದೆಯ ಹಿಂದೆ ಯಾವುದೋ ಒಂದು ಹೊಸ ಆಶೆ ಅವರಲ್ಲಿ ತಲೆ ನೋರಿತು. ಅದೇ ಅವರಿಗೆ, ತಮ್ಮ ಕೆಲಸಕ್ಕೆ ಹೋಗುವಷ್ಟು ಶಕ್ತಿಯನ್ನು ತುಂಬಿಕೊಟ್ಟಿತು.

ಬೇಗಬೇಗನೆ ಉಂಡುಕೊಂಡು, ಶಂಕರಯ್ಯನವರು ಹೊರಡುವ ಸನ್ನಾಹ ತೋರಿಸಿದಾಗ, ಸುಭದ್ರಮ್ಮನವರ ಹೃದಯ ಒಮ್ಮೆ "ಅಯ್ಯೋ...." ಎಂದಿತು. "ಏನು...ಏನು....ಅಯ್ಯೋ.....ಏನು ಮಾಡಲಿ?" ಎಂದು ಇನ್ನೊಮ್ಮೆ ಒಂದೇ ಸವನೆ ಚೀರಿಟ್ಟಿತು. ಏನನ್ನೋ ಹೇಳಬೇಕೆಂದು ಹೊರಕ್ಕೆ ತೇಲಿದ ಸುಭದ್ರಮ್ಮ ಮೌನವಾಗಿ, ಎಲ್ಲಿಯೋ ಕಣ್ಣನ್ನು ತೇಲಿಸಿ ನಿಂತೇ ಬಿಟ್ಟರು. ತುಸು ನಂತರ "ನಿಲ್ಲಿ, ಅವನಿಗೆ ಸ್ವಲ್ಪ ಏನಾದರೂ ಕೊಟ್ಟು ಬಿಡುತ್ತೇನೆ" ಎಂದು ತೊದಲಿ, ಮಗುವನ್ನೆತ್ತಿಕೊಂಡು ಬಿರಬಿರನೆ ಒಳಗೆ ನಡೆದರು.

ಶಂಕರಯ್ಯ, "ಇನ್ನೂ ಆಗಲಿಲ್ಲವೇ?" ಎಂದಾಗಲೂ ಸುಭದ್ರಮ್ಮನವರಿಗೆ ಎಚ್ಚರವಾಗಲಿಲ್ಲ. ಆ ಶನಕ ಮೌನವಾಗಿ ಮಗುವನ್ನು ಬಿಗಿದಪ್ಪಿಕೊಂಡು ಎಲ್ಲಿಯೋ ನೋಡುತ್ತಿದ್ದವರು, ಆಗ "ಹಾಂ" ಎಂದರು. ಯಾವುಯಾವುದೋ ಮಾತುಗಳನ್ನು ಮನಸ್ಸಿನಲ್ಲೇ ಗಟ್ಟಿಮಾಡಿಕೊಳ್ಳುತ್ತ ಮೆಲ್ಲನೆ ಹೊರಗೆ ಬಂದರು. ಶಂಕರಯ್ಯನವರು ಜೊಸಶಿಲ ಬಳಿಯಲ್ಲೇ ಮಗುವಿನ ಕಡೆಗೆ ಕೈ ನೀಡಿದರು. ನಿಜಸ್ಥಿತಿಯ ಅರಿವಾದಾಗ, ಸುಭದ್ರಮ್ಮನವರು ಗಟ್ಟಿಮಾಡಿಕೊಂಡಿದ್ದ ಮಾತುಗಳೆಲ್ಲ ಎಲ್ಲೆಲ್ಲೋ ಹಾರಿಹೋದುವು. ಅವರ ಮುಖ ಅನಂತವೇದನೆಯಿಂದ ಕೆಳಗೆ ಬಾಗಿತು. ಅವರಿಗರಿವಿಲ್ಲದಂತೆಯೇ ಮಗುವನ್ನೆತ್ತಿಕೊಂಡು ಹೋಗುತ್ತಿದ್ದ ಶಂಕರಯ್ಯನವರನ್ನು ನೋಡಿದರು. ಮತ್ತೂ ಮತ್ತೂ ಕಣ್ಣಗಲಿಸಿ ನೋಡಿದರು. ನೋಡುತ್ತಿದ್ದಂತೆಯೇ ಕಣ್ಣು ತುಂಬಿ ಬಂತು. ಆದರೂ ಅವರ ನಾಲಗೆ ತುಸುವೂ ಕದಲದೆ ಮೂಕವಾಗಿಬಿದ್ದಿತ್ತು. ಅದೇಕೆ ಹಾಗೆ?—ಎಂಬುದು ಅವರಿಗೂ ಅರಿವಾಗಲಿಲ್ಲ. ಅವರ ಹೃದಯ ಕೂಗಿಕೂಗಿ ಕೇಳುತ್ತಿತ್ತು: "ಅಯ್ಯೋ.... ಯಾಕೆ.... ಯಾಕೆ ಮಾತನಾಡಲಿಲ್ಲ....? ಯಾಕೆ ಹೇಳಲಿಲ್ಲ....?"

ಪಾಕಶಾಲೆ

ಶ್ರೀಮತಿ ಲಲಿತಾ ನಾಮಣ್ಣ, ಮುಂಬಯಿ *

★

ಆ ಪ್ರದೇಶಗಳಲ್ಲಿ ಬೆಳೆಯುವ ಪದಾರ್ಥಗಳಿಗೆ ಯಾಗಿ ಅಲ್ಲಲ್ಲಿಯ ತಿಂಡಿ-ತಿನಿಸುಗಳು ಬೇರೆ ಬೇರೆ ಶಿಷ್ಟ್ಯಗಳನ್ನು ಪಡೆದಿರುವವು. ಇಂದು ಬದಲಾಯಿಸುವ ಕಾಲದಲ್ಲಿ, ಎಲ್ಲ ಕಡೆಯಲ್ಲಿ ಎಲ್ಲ ಪ್ರದೇಶದ ನರೂ ಕೂಡಿ ಇರುವರು. ಆದುದರಿಂದ ಎಲ್ಲರಿಗೂ ರ ತಿಂಡಿ-ತಿನಿಸಿನ ನೈಶಿಷ್ಟ್ಯಗಳು ತಿಳಿದಿರಬೇಕಲ್ಲವೆ?

★

ನಮ್ಮ ದಿನಚರಿಯ ಕೃತ್ಯಗಳಲ್ಲಿ ಪಾಕಶಾಲೆ ಮತ್ತು ಅಲ್ಲಿಯ ಮಗ್ರಿಗಳನ್ನು ಅಂದವಾಗಿಯೂ, ಪರಿಶುದ್ಧವಾಗಿಯೂ ಇಡುವು ೊಂದು ಮುಖ್ಯವಾದ ಕರ್ತವ್ಯವಾಗಿದೆ. ಇದು ಹಿಂದಿನ ಕಾಲ-ಕ್ಕಿಂತಲೂ ಇತ್ತೀಚೆಗೆ ಬಹಳ ಪರಿವರ್ತನೆ ಹೊಂದುತ್ತಲಿದೆ. ಇದಕ್ಕೆ ಕಾರಣವಿಷ್ಟೆ: ಸಹಸ್ರಾರು ವರ್ಷಗಳ ಹಿಂದೆ ಪ್ರಪಂಚವು ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ಆಗಿನ ಜನರು ಗಡ್ಡೆ-ಗೆಣಸು ಗಳನ್ನು ತಿಂದು ಜೀವಿಸುತ್ತಿದ್ದರು. ಬರು-ಬಗುತ್ತ, ದುಷ್ಟ ಪ್ರಾಣಿ ಗಳನ್ನು ಕೊಂದು ಅದರ ಮಾಂಸದಿಂದ ಜೀವಿಸುವ ಪದ್ಧತಿ ಜನರಲ್ಲಿ ತಲೆದೋರಿತು. ಎಂದರೆ, ನಾಗರಿಕತೆ ಮುಂದುವರಿ ಸಂತೆಲ್ಲಾ ಈ ಆಹಾರದ ಬದಲಾವಣೆಯೂ ಹೆಚ್ಚತೊಡಗಿತು

"ಲೋಕೋಭಿನ್ನರುಚಿಃ" ಎಂಬ ಕಾಳಿದಾಸನ ಉಕ್ತಿಯಂತೆ, ಒಬ್ಬೊಬ್ಬರ ರುಚಿ ಒಂದೊಂದು ರೀತಿಯಲ್ಲಿರುತ್ತದೆ. ಒಬ್ಬನಿಗೆ ಅಮೃತವಾದದ್ದು ಮತ್ತೊಬ್ಬನಿಗೆ ವಿಷವಾಗಿ ತೋರಬಹುದು. ಆದರೆ ಹಿಂದಿನ ಕಾಲದವರು ಒಂದೇ ಊರಲ್ಲಿ ಹುಟ್ಟಿ, ಒಂದೇ ವಾತಾವರಣದಲ್ಲಿ ಬೆಳೆದು ಬಾಳು ಮಾಡಬೇಕಾಗಿತ್ತಾಗಿ, ತಮ್ಮ ಗ್ರಾಮದ ಸುತ್ತುಮುತ್ತಣ ಪ್ರದೇಶಗಳಲ್ಲಿ ಬೆಳೆವ ಆಹಾರ ಪದಾರ್ಥ ಗಳನ್ನು ಮಾತ್ರ ಉಪಯೋಗಿಸುತ್ತಿದ್ದರು. ಉತ್ತರ ಹಿಂದುಸ್ತಾನ ದಲ್ಲಿ ಗೋದಿಯು ಬೆಳೆಯೇ ಹೆಚ್ಚಾಗಿರುವುದರಿಂದ, ಅಲ್ಲಿಯವರು ತಮ್ಮ ಆಹಾರದಲ್ಲಿ ಗೋದಿಯ ಪದಾರ್ಥವನ್ನೇ ಬಳಕೆಗೆ ತಂದರು. ದಕ್ಷಿಣ ದೇಶದವರು ಅಕ್ಕಿ, ರಾಗಿ, ಜೋಳ, ಸಾವೆ, ನವಣೆ ಇಂತಹ ಧಾನ್ಯಗಳನ್ನು ಹೆಚ್ಚು ಉಪಯೋಗಿಸುತ್ತಿರುವರು. ಹಿಂದೂ-ಸ್ಥಾನದಂತಹ ವಿಸ್ತಾರವಾದ ದೇಶದಲ್ಲಿ, ಒಂದು ಭಾಗದ ಜನರು ಇನ್ನೊಂದು ಭಾಗದಲ್ಲಿ ನೆಲಸಿರುವ ಜನರೊಡನೆ ಸಂಪರ್ಕ ಬೆಳೆಸು-ವುದರಿಂದ ಹೊಸ ಹೊಸ ಆಹಾರವನ್ನು ತಯಾರಿಸುವ ವಿಧಾನ-ಗಳನ್ನು ಕಲಿಯಲು ಅನುಕೂಲವುಂಟು. ಉದಾಹರಣಾರ್ಥವಾಗಿ ನನಗೆ—ಎಂದರೆ ಮುಂಬಯಿಯಲ್ಲಿರುವ ಕನ್ನಡಿಗರಿಗೆ—ನಾನಾ ಭಾಷೆಗಳ ಜನರ ಸಂಪರ್ಕವಿರುವುದರಿಂದ, ಅವರ ಸ್ವಾದಿಷ್ಟವಾದ ಖಾದ್ಯ, ಪೇಯಗಳನ್ನು ಮಾಡುವುದನ್ನು ನಾವು ಕಲಿಯಬಹು-ದಾಗಿದೆ. ಪಂಜಾಬಿಯವರ ಭೋಜನದಲ್ಲಿ ಪ್ರಾಮುಖ್ಯವಾದ "ಫ್ಲವರ್ ಭಾತ್" (ಅಂದರೆ 'ಹೂವಿನ ಅನ್ನ'), ಮರಾಟಿಗರ ಸೀಮೆಯ ಅಕ್ಕಿ ಆಂಬೋಡೆ, ಮದರಾಸಿನವರ 'ಅವಿಯಲ್' ಗುಜರಾತಿಯವರ 'ಸಂಜರಸ್‌ನಿ ಸಾಗ್' ಮೆಚ್ಚತಕ್ಕವುಗಳಾಗಿವೆ. ಇವುಗಳಲ್ಲಿ ಒಂದೆರಡನ್ನು ಮಾಡುವ ವಿಧಾನ ಹೀಗಿದೆ:—

(೧) 'ಫ್ಲವರ್ ಭಾತ್'ಗೆ ಬೇಕಾಗುವ ಪದಾರ್ಥಗಳು

ಕಾಲಿಫ್ಲವರ್, ಹಸಿ ಬಟಾಣಿ ಕಾಳು, ಎಳೆ ಬದನೆಕಾಯಿ ಅಥವಾ ಹುರುಳಿ (ತಿಂಗಳವರಿ) ಕಾಯಿ, ಈರುಳ್ಳಿ, ತುಪ್ಪ, ಸ್ವಲ್ಪ ಗೋಡಂಬಿ, ಲವಂಗ, ದಾಲ್ಚಿನ್ನಿ, ಇತ್ಯಾದಿ.

ಕಾಯ್ದು ತುಪ್ಪದಲ್ಲಿ ಲವಂಗವನ್ನೂ, ದಾಲ್ಚಿನ್ನಿಯನ್ನೂ ಮತ್ತು ಗೋಡಂಬಿ (ಗೇರುಬೀಜ) ಯನ್ನೂ ಹುರಿದುಕೊಂಡು, ತೊಳೆದ ಅಕ್ಕಿಯನ್ನೂ, ಬಟಾಣಿ ಕಾಳು, ಸಣ್ಣಗೆ ಹೆಚ್ಚಿದ ಕಾಲಿಫ್ಲವರ್, ಬದನೆಕಾಯಿ ಹೋಳು—ಇವೆಲ್ಲವನ್ನೂ ಅದಕ್ಕೆ ತಕ್ಕಷ್ಟು ನೀರು, ಉಪ್ಪು ಸೇರಿಸಿ, ಸ್ವಲ್ಪ ಅರಿಸಿನವ ಪುಡಿ ಹಾಕಿ ಬೇಯಲು ಇಡಬೇಕು. ಅರ್ಧ ಬೆಂದ ನಂತರ, ಹಸಿ ಈರುಳ್ಳಿಯ ಚೂರನ್ನೂ ಗೋಡಂಬಿಯನ್ನೂ ಸ್ವಲ್ಪ ತುಪ್ಪವನ್ನೂ ಹಾಕಿ, ಸಣ್ಣ ಉರಿಯ ಮೇಲೆ ಮುಚ್ಚಿಡಬೇಕು. ಬಡಿಸುವಾಗ ಕಾಯಿತುರಿ, ಹಸಿಮೆಣ-ಸಿನಕಾಯಿ, ಕೊತ್ತಂಬರಿ ಸೊಪ್ಪು ಎಲ್ಲವನ್ನೂ ಹಾಕಿ ಕೈಯಾಡಿಸಿ, ನಿಂಬೇಹಣ್ಣಿನ ರಸ ಬೆರಸಿ ಬಡಿಸಬೇಕು. ಇದೇ ಪಂಜಾಬಿಯವ-ರಿಗೆ ಸ್ವಯವಾದ 'ಫ್ಲವರ್ ಭಾತ್' ಅಥವಾ 'ಹೂವಿನಅನ್ನ.'

(೨) ಅಂತೆಯೇ ಮರಾಟಿಗರಲ್ಲಿ ಉಪನಾಸಾದಿ ವ್ರತಗಳಿಗೆ ಎತ್ತಿದ ಕೈ ಎಂದರೆ, ಸಾಬೂವಾಣಿ ಅಥವಾ ಸೀಮೆ ಅಕ್ಕಿಯ ಆಂಬೊಡೆ. ಸೀಮೆ ಅಕ್ಕಿಯನ್ನೂ, ಕಡಲೆಕಾಯಿ ಬೀಜದ ಪುಡಿ-

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ನ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

* ದಿನಾಂಕ ೬-೧೨-೪೯ರಲ್ಲಿ ಮುಂಬಯಿ ಆಲ್ ಇಂಡಿಯಾ ರೇಡಿಯೋ ಸ್ಟೇಶ್ಬಂಧುಗಳ ಕಾರ್ಯಕ್ರಮದಿಂದ ಪ್ರಸಾರವಾಯಿತು. ಪ್ರಸಾರಾಧಿಕಾರಿ-ಗಳ ಅನುಮತಿ ಪಡೆದು ಪ್ರಕಟಿಸಲಾಗಿದೆ.



ಯನ್ನೂ ಬೆಂದ ಆಲೂಗಡ್ಡೆಯೊಡನೆ ಕಲಸಿ, ತಕ್ಕಷ್ಟು ಉಪ್ಪು ಖಾರ, ಇಂಗು, ಜೀರಿಗೆ ಮುಂತಾದ ಮಸಾಲೆ ಹಾಕಿ ಕಲಿಸಿ ಆಂಬೋಡೆಯ ಹಾಗೆ ತಟ್ಟಿ ತುಪ್ಪದಲ್ಲಿ ಕರಿದರೆ, ಬಹಳ ರುಚಿಯಾಗಿರುತ್ತದೆ ಹೀಗೆಯೇ ನೋಡಹೋದರೆ ಸಾವು ಎಷ್ಟೋ ಬಗೆಯ ಆಹಾರಪದಾರ್ಥಗಳನ್ನು ಹೊಸದಾಗಿ ಮಾಡಲು ಕಲಿಯಬಹುದು.

ನಮ್ಮ ಹಿರಿಯರು ರುಚಿಯಾದ ಅಡಿಗೆಯ ತಯಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರು. ಹಬ್ಬ-ಹರಿದಿನಗಳಲ್ಲೂ, ಮದುವೆ, ಮುಂಜಿ ಕಾಲಗಳಲ್ಲೂ ತಯಾರಿಸಿದ ಆಹಾರವು ರುಚಿ ಮತ್ತು ಆರೋಗ್ಯಕರವಾಗಿ ತೋರಿದರೆ, "ನಳಪಾಕದಂತಿದೆ!", "ಭೀಮ ಪಾಕ ಇಳಿಸಿದ್ದಾನೆ!" ಎಂಬುದಾಗಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಿದ್ದರು.

ಮನಶ್ಶಾಸ್ತ್ರ, ಅರ್ಥಶಾಸ್ತ್ರ, ಗಣಿತಶಾಸ್ತ್ರ ಎಂಬಿವೇ ಮೊದಲಾದ ಶಾಸ್ತ್ರಗಳಲ್ಲಿ ಪಾಕಶಾಸ್ತ್ರವೂ ಒಂದು. ಅದಾವ ಕಾರಣದಿಂದಲೋ, ನೀಲಿ ಹೇಳಿದ ಇತರ ಶಾಸ್ತ್ರಗಳಿಗೆ ನಮ್ಮವರು ಶಾಲೆ-ಕಾಲೇಜುಗಳಲ್ಲಿ ಕೊಟ್ಟಿರುವ ಪ್ರಾಮುಖ್ಯತೆಯಂತೆ, ಈ ಪಾಕಶಾಸ್ತ್ರಕ್ಕೂ ಒಂದು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಬಹುಶಃ ಗೃಹಿಣಿಯಾದವಳಿಗೆ ಈ ವಿದ್ಯೆಯು ದಿನಕ್ರಮೇಣ ತಾನಾಗಿಯೇ ಬರುತ್ತದೆ—ಎಂಬ ದೃಢನಂಬಿಕೆಯಿರಬಹುದು. ಈ ನಂಬಿಕೆಯು ಹಿಂದಿನ ಹೆಣ್ಣುಮಕ್ಕಳಿಗೆ ಅನ್ವಯಿಸುತ್ತದೆ. ಆಗಿನವರು ಈಗಿನವರಂತೆ ಶಾಲೆ-ಕಾಲೇಜುಗಳಲ್ಲಿ ಕಲಿಯದಿದ್ದರೂ, ಮನೆಯಲ್ಲಿ ಹಿರಿಯರು ಹೇಳಿಕೊಟ್ಟ ಅಡಿಗೆಯ ಕೆಲಸದಲ್ಲಿ ಜಾಣರಾಗಿರುತ್ತಿದ್ದರು. ಈಗೀಗ ಹೆಚ್ಚು ಹೆಚ್ಚು ಹೆಣ್ಣುಮಕ್ಕಳು ಪ್ರೌಢ ಶಿಕ್ಷಣಪಡೆಯ ತೊಡಗಿರುವರಿಂದ, ಅಡಿಗೆಮನೆಯ ಅಚ್ಚುಕಟ್ಟುತನ, ಅಡಿಗೆಯನ್ನು ಹದವಾಗಿಯೂ ರುಚಿಯಾಗಿಯೂ ತಯಾರಿಸುವ ಅನುಭವ, ನಮ್ಮ ಹೆಣ್ಣುಮಕ್ಕಳಿಗೆ ಸಾಲದೆಂದೇ ಹೇಳಬೇಕಾಗಿದೆ. ಈ ಕೊರತೆಯನ್ನು ಹೋಗಲಾಡಿಸುವ ಸಲುವಾಗಿಯೇ ಪಾಶ್ಚಾತ್ಯರ ಶಾಲೆ-ಕಾಲೇಜುಗಳಲ್ಲಿ ಈ ಶಾಸ್ತ್ರವನ್ನೂ ಒಂದು ಪ್ರಾಮುಖ್ಯವಾದ ವಿಷಯವಾಗಿ ಪರಿಗಣಿಸಲ್ಪಟ್ಟಿದೆ. ಮಾನವನು ಆರೋಗ್ಯದಿಂದ ದೃಢಕಾಯನಾಗಿರಬೇಕಾದರೆ, ಅವನು ಸೇವಿಸುವ ಆಹಾರವೂ ಮತ್ತು ಅದನ್ನಿಡುವ ಸ್ಥಳಗಳೂ ಅಚ್ಚುಕಟ್ಟಾಗಿಯೂ ಪರಿಶುದ್ಧವಾಗಿಯೂ ಇರಬೇಕಾಗುತ್ತದೆ. ವಿಜ್ಞಾನಶಾಸ್ತ್ರವು ಮುಂದುವರಿಯುತ್ತಿರುವ ಈಗಿನ ವಾತಾವರಣದಲ್ಲಿ, ಅನೇಕ ಪ್ರಯೋಗಗಳನ್ನು ಮಾಡಿ ಶಾಸ್ತ್ರಜ್ಞರು ಕಂಡುಹಿಡಿದಿರುವುದೇನೆಂದರೆ: ಆಹಾರ ಪದಾರ್ಥಗಳಲ್ಲಿ ಮುಖ್ಯವಾಗಿರುವ ಶಕ್ತಿವಾಹಿನಿ ಅಥವಾ ಜೀವನಶಕ್ತಿಯನ್ನು ಹೋಗಲಾಡಿಸದಂತೆ, ಆಹಾರ ಪದಾರ್ಥಗಳನ್ನು ಪಕ್ವಮಾಡಿ ಉಪಯೋಗಿಸುವುದು ಅತಿ ಮುಖ್ಯವಾದುದು. ಯುದ್ಧದ ಬೇನೆಯಿಂದ ಬಳಲಿ ಬೆಂಡಾಗಿ ಆಹಾರದ ಅಭಾವದಿಂದಿರುವ ಈಗಿನ ಕಾಲದಲ್ಲಿ, ಶಾಸ್ತ್ರಜ್ಞರು ಹೇಳುವಂತೆ ಮಿಶ್ರಾಹಾರವನ್ನು ತಕ್ಕಷ್ಟು ಪ್ರಮಾಣದಲ್ಲಿ ಜಾಣ್ಮೆಯಿಂದ ಉಪಯೋಗಿಸುವುದನ್ನು ಎಲ್ಲ ಮಹಿಳೆಯರೂ ಕಲಿಯಬೇಕು.

ಜಾಗತಿಕ ಬ್ಯಾಂಕು

ಶ್ರೀ. ಪಾ. ಭೀ. ಜೋರಾಪೂರ ಡಿ. ಎ. ವಿ. ಕಾಲೇಜ್
ಸೊಲ್ಲಾಪೂರ

★

ಇಂದು ಜಾಗತಿಕ ಶಾಂತಿಯ ತತ್ತ್ವವನ್ನೊಪ್ಪಿದ ಮಹಾ ಮಹಾ ರಾಷ್ಟ್ರಗಳು, ಆ ತತ್ತ್ವಕ್ಕೆ ಅನುಗುಣವಾಗಿ ಅನೇಕ ಚಟುವಟಿಕೆಗಳನ್ನು ಹೂಡಿರುವುವು. ಅವುಗಳಲ್ಲಿಯೆ ಈ ಜಾಗತಿಕ ಬ್ಯಾಂಕೂ ಒಂದು.

★

ಬ್ಯಾಂಕಿನ ಹುಟ್ಟು : ಜಾಗತಿಕ ೨ನೆಯ ಮಹಾಯುದ್ಧದಿಂದ, ಮಿತ್ರರಾಷ್ಟ್ರಗಳಿಗೂ ಶತ್ರುರಾಷ್ಟ್ರಗಳಿಗೂ ಅಪರಿಮಿತ ಜನ ಧನ ಹಾನಿಯಾಯಿತಷ್ಟೆ? ಎಷ್ಟೋ ರಾಷ್ಟ್ರಗಳ ಉದ್ಯೋಗಕ್ಕೆ ಒಕ್ಕಲುತನಕ್ಕೆ ಆಘಾತವಾಗಿ, ಹೊಟ್ಟೆ-ಬಟ್ಟೆಗೂ ಕಂಗಾಲಾಗಿ, ಇನ್ನೂ ಚೇತರಿಸಿಕೊಳ್ಳಲಸಮರ್ಥವಾಗಿವೆ. ಬಲಾಢ್ಯ ಬ್ರಿಟನ್ ಕೂಡ ತತ್ತರಿಸಿದೆ; "ಭಿಕ್ಷಾಂ ದೇಹಿ" ಎನ್ನುತ್ತಿದೆ. ಉಳಿದ ಸಣ್ಣ-ಪುಟ್ಟ ರಾಷ್ಟ್ರಗಳ ಪಾಡೇನು? ಈ ಮಹಾವಿಪತ್ತಿನಿಂದ ಪಾರಾಗುವ ಬಗೆ ಹೇಗೆ— ಎಂಬುದನ್ನು ಆಲೋಚಿಸಲು, ೧೯೪೪ ರಲ್ಲಿ ಬ್ರೆಟನ್ ವುಡ್ಸ್ ಸಮ್ಮೇಲನವು ಕೂಡಿತ್ತು. ಅದರ ಫಲವೇ ಈ ಜಾಗತಿಕ ಬ್ಯಾಂಕು. ೧. ಸಂತ್ರಸ್ತ ರಾಷ್ಟ್ರಗಳ ಹಾಗು ಹಿಂದುಳಿದ ರಾಷ್ಟ್ರಗಳ ಉದ್ಯೋಗ ಮತ್ತು ಒಕ್ಕಲುತನದ ಪುನರುಜ್ಜೀವನ, ೨. ವೈಯಕ್ತಿಕ ಹಣ ತೊಡಗಿಸುವವರಿಗೆ ಭರವಸೆ ಮತ್ತು ಉತ್ತೇಜನ, ೩. ಜಾಗತಿಕ ಬ್ಯಾಂಕಿನ ವ್ಯವಹಾರದಲ್ಲೂ ಉಪಯುಕ್ತತೆಯಲ್ಲೂ ವಿಶ್ವಾಸಹುಟ್ಟಿಸುವುದು— ಈ ಮುಖ್ಯ ಉದ್ದೇಶಗಳನ್ನಿಟ್ಟುಕೊಂಡು ಬ್ಯಾಂಕು ಪ್ರಾರಂಭವಾಯಿತು.

ಸಹಕಾರ ತತ್ತ್ವ : ಬ್ಯಾಂಕಿನ ವ್ಯವಹಾರವೆಲ್ಲ ಸಹಕಾರ ತತ್ತ್ವದ ಮೇಲೆಯೇ ನಡೆಯುತ್ತದೆ. ಸ್ವಾವಲಂಬನ, ಪರಸ್ಪರ ಸಹಕಾರ-ಸಹಾಯ ಇವೇ ಮೂಲತತ್ತ್ವಗಳು. ಬೇಕಾದ ರಾಷ್ಟ್ರವು, ನಿರ್ದಿಷ್ಟವಾದ— ತನ್ನ ಯೋಗ್ಯತೆಗನುಸರಿಸಿ— ವರ್ಗಣಿ ಕೊಟ್ಟು, ಇದರ ಸದಸ್ಯತ್ವ ಸ್ವೀಕರಿಸಬಹುದು. ಈಗ ಒಟ್ಟು ೫೦ ರಾಷ್ಟ್ರಗಳು ಸದಸ್ಯತ್ವ ಸ್ವೀಕರಿಸಿವೆ. ಭಾರತವು ಇವುಗಳಲ್ಲೊಂದು. ಈ ಬ್ಯಾಂಕಿನ ವೈಶಿಷ್ಟ್ಯಗಳು ಎರಡು: ೧. ವ್ಯವಹಾರವನ್ನು ಕೈಕೊಳ್ಳುವುದು ಲಾಭದಾಸೆಗಾಗಿಯಲ್ಲ. ಸದಸ್ಯ ರಾಷ್ಟ್ರಗಳಿಗೆ ಸಹಾಯಮಾಡಿ ಆರ್ಥಿಕಸ್ಥಿತಿಯನ್ನು ಸುಧಾರಿಸುವುದು ೨. ಸದಸ್ಯರಾಷ್ಟ್ರಗಳಿಗೆ ಮಾತ್ರ ಉಪಯುಕ್ತ ಯೋಜನೆಗಳಿಗಾ ಸಾಲ ಕೊಡುವುದು.

ಮೂಲಧನ: ಬ್ಯಾಂಕಿನ ಆಡಳಿತವನ್ನು ನಡೆಯಿಸಲ ಸದಸ್ಯರಾಷ್ಟ್ರಗಳು ಆರ್ಥಿಕಸಹಾಯಮಾಡುತ್ತವೆ. ತಮ್ಮ ಉತ್ಪನ್ನ ದಲ್ಲಿಯ ಕೆಲಭಾಗವನ್ನು ಕೊಡುತ್ತವೆ. ಬ್ಯಾಂಕು Bond Issues ಮುಖಾಂತರವಾಗಿಯೂ ಹಣವನ್ನು ಕೂಡಿಸುತ್ತದೆ. ಇದಲ್ಲದೆ ವೈಯಕ್ತಿಕವಾಗಿ ಜನರೂ ತಮ್ಮ ಹಣವನ್ನು ತೊಡಗಿಸಬಹುದು. ಜುಲೈ ೧೯೪೬ ರಲ್ಲಿ, ಅಮೇರಿಕೆಯ ಪ್ರಜೆಗಳಿಗೆ ಇದೇ ಬಗೆಯ ವಿನಂತಿಯನ್ನು ಮಾಡಿಕೊಳ್ಳಲಾಯಿತು. 'ಹಣ ಕೂಡಿಸುವಲ್ಲಿ ಯಶಸ್ವಿಯಾಯಿತೆಂದೇ ಹೇಳಬಹುದು. ತಾತ್ಪೂರ್ತಿಕವಾಗಿ, ಅಮೇರಿಕೆಯಲ್ಲಿ ಮಾತ್ರ ಇದು ಪ್ರಾರಂಭವಾಗಿದೆ. ಸದಸ್ಯ ರಾಷ್ಟ್ರಗಳ ವಿಶ್ವಾಸವೇ ಮುಖ್ಯ ಮೂಲಧನ.

ಸದಸ್ಯರಾಷ್ಟ್ರದ ರಾಜ್ಯಾಂಗವು ೨೦% 'ರೋಖ' ಹಣ ಕೊಡಬೇಕು. ೨% ಬಂಗಾರ ರೂಪದಲ್ಲಾಗಲಿ, ಇಲ್ಲವೆ ಅಮೇರಿಕೆಯ ಡಾಲರ್ ರೂಪದಲ್ಲಾಗಲಿ ಕೊಡಬೇಕು. ೧೮% ತಮ್ಮ ತಮ್ಮ ನಾಣ್ಯರೂಪದಲ್ಲಿಯೇ ಕೊಡಬಹುದು. ಉಳಿದ ೮೦% ಬ್ಯಾಂಕಿನ ವ್ಯವಹಾರ ಸುರಕ್ಷಿತತೆಗಾಗಿ.... ಸಾಲಕ್ಕಾಗಿ.

ಸಾಲಕೊಡುವ ಉದ್ದೇಶ ಮತ್ತು ರೀತಿ : ಯಾವುದೊಂದು ರಾಷ್ಟ್ರವು, ತನಗೆ ಸಾಲ ಅತ್ಯಗತ್ಯವೆನಿಸಿದರೆ, ಬ್ಯಾಂಕಿಗೆ ವಿನಂತಿ ಮಾಡಿಕೊಳ್ಳಬೇಕಾಗುವುದು. ಅನಂತರ ಬ್ಯಾಂಕು ವಿಚಾರಣಾ-ಸಮಿತಿಯನ್ನು ನಿಯಮಿಸುತ್ತದೆ. ಇದು, ಆ ದೇಶದ ಆರ್ಥಿಕ ಸ್ಥಿತಿಯನ್ನೂ, ಸಾಲದ ಅವಶ್ಯಕತೆಯನ್ನೂ ಮತ್ತು ಸಾಲಕೊಟ್ಟರೆ ಆಗುವ ಸದುಪಯೋಗವನ್ನೂ ಪರೀಕ್ಷಿಸಿ, "ಕಾರ್ಯನಿರ್ವಾಹಕ ಸಮಿತಿ" (Boarde of Executive Directors) ಗೆ, ತನ್ನ ವರದಿಯನ್ನು ಒಪ್ಪಿಸುತ್ತದೆ. "ದಾಮೋದರ ಯೋಜನೆ"ಯ ಸಾಲದ ಅವಶ್ಯಕತೆಯ ಪರೀಕ್ಷೆಗಾಗಿ, ಇಂಥದೊಂದು ಸಮಿತಿ, ಕೆಲವು ದಿನಗಳ ಹಿಂದೆ ಭಾರತಕ್ಕೆ ಬಂದಿತ್ತು ..... ಬ್ರೆಟನ್ ವುಡ್ಸ್‌ನಲ್ಲಿ ಸಿದ್ಧಗೊಳಿಸಿದ "Agreemnt of Articles" ನಲ್ಲಿ, ಸಾಲಪಡೆಯಲು ಬೇಕಾಗುವ ಅವಶ್ಯಕ ಅರ್ಹತೆಗಳನ್ನೂ ಸಾಲ ಕೊಡುವ ಉದ್ದೇಶವನ್ನೂ ತಿಳಿಸಲಾಗಿದೆ: ೧. ಹಿಂದುಳಿದ ಮತ್ತು ಸಂಕಟಕ್ಕೊಳಗಾದ ರಾಷ್ಟ್ರಗಳ ಆರ್ಥಿಕಸ್ಥಿತಿಯನ್ನು ಸುಧಾರಿಸುವುದು. ೨. ವೈಯಕ್ತಿಕವಾಗಿ ಹಣವನ್ನು ತೊಡಗಿ-(Invest) ಸಲು ಉತ್ತೇಜಿಸುವುದು. (ಇದರಿಂದ ವ್ಯರ್ಥವಾಗಿ ಕೂಡಿಬಿದ್ದ ಹಣದ ಉಪಯೋಗವಾಗುವುದು) ೩. ಅಂತರ ರಾಷ್ಟ್ರೀಯ ವ್ಯಾಪಾರವನ್ನೂ ಹುಟ್ಟುವಳಿಯನ್ನೂ ಜನತೆಯ ಜೀವನಮಟ್ಟವನ್ನೂ ಹೆಚ್ಚಿಸುವುದು, ಕೆಲಸಗಾರರ ಸ್ಥಿತಿಯನ್ನು ಸುಧಾರಿಸುವುದು.... ಸಾಲದ ಅತ್ಯಾವಶ್ಯಕತೆಯಿದ್ದರೆ ಮಾತ್ರ—

ಅದರಿಂದ ದೇಶದ ಹುಟ್ಟುವಳಿಗೆ ಸಹಾಯಕವಾಗುತ್ತದೆ ಎಂಬ ವಿಶ್ವಾಸವನ್ನಿಸಿದರೆ ಮಾತ್ರ— ಸಾಲವನ್ನು ಕೊಡಲಾಗುವುದು. ಆಯಾ ರಾಷ್ಟ್ರದ ರಾಜ್ಯಾಂಗವೇ ಸಾಲಪಡೆಯಬಹುದೆಂಬ ನಿರ್ಬಂಧವೇನೂ ಇಲ್ಲ. ವೈಯಕ್ತಿಕ ಉದ್ಯಮದಾರರು, ಸಂಸ್ಥೆಗಳು ಕೂಡ ಸಾಲಪಡೆಯಬಹುದು. ಆದರೆ ಆ ರಾಷ್ಟ್ರದ ರಾಜ್ಯಾಂಗವು ಈ ಸಾಲದ ಹೊಣೆ ಮಾತ್ರ ಹೊರಬೇಕಾಗುವದು. "Brazilian Light and Traction Co., Ltd" ನವರು ಈ ರೀತಿಯಿಂದ ಸಾಲಪಡೆದಿದ್ದಾರೆ. ಬಡ್ಡಿ ೩½% ಇಲ್ಲವೆ ೪%. ಸಾಲವನ್ನು ತಮಗೆ ಬೇಕಾದ ನಾಣ್ಯ (ರೂಪಾಯಿ, ಡಾಲರ್, ಪೌಂಡ್, ಮಾರ್ಕ್ ಇ) ರೂಪದಲ್ಲಿ ಪಡೆಯಬಹುದು. ಈ ವರೆಗೆ ಚಿಲಿ, ಮೆಕ್ಸಿಕೊ, ಬ್ರಾಝಿಲ್, ಭಾರತಗಳು ಸಾಲಪಡೆದಿವೆ.

ಭಾರತವು ಒಟ್ಟಿಗೆ ೬೬ ಮಿಲಿಯನ್ ಡಾಲರಿನ ಸಾಲವನ್ನು ಪಡೆದಿವೆ. ೧. ಆಗಸ್ಟಾಲ, ೧೯೪೯ನೆಯ ದಿನ, ವಿಮಾನ ಸಾರಿಗೆ-ರೇಲ್ವೆ ಸಾರಿಗೆಗಳಿಗಾಗಿ ೩೪ ಮಿಲಿಯನ್ ಡಾಲರ್ಸ್. ೨. ಸೆಪ್ಟೆಂಬರ್ ೨೯ನೆಯ ದಿನ, ಒಕ್ಕಲತನ ಸುಧಾರಣೆಗಾಗಿ ೧೦ ಮಿಲಿಯನ್ ಡಾಲರ್ಸ್. ೩. ಕೆಲ ದಿನಗಳ ಹಿಂದೆ, ಜಾಗತಿಕ ಬ್ಯಾಂಕಿನ ಅಧ್ಯಕ್ಷರಾದ Eugene Black ಇವರು, "ದಾಮೋದರ ಯೋಜನೆಗಾಗಿ" ಭಾರತಕ್ಕೆ ೨೫ ಮಿಲಿಯನ್ ಡಾಲರ್ಸ್ ಸಾಲವನ್ನು ಕೊಡಲಾಗಿದೆಯೆಂದು ಸಾರಿದರು.

ಕೊನೆಯ ಮಾತು: ಯುದ್ಧದಲ್ಲಿ ನುಗ್ಗಾದ ರಾಷ್ಟ್ರಗಳಿಗೆ ಸುತ್ತು ಉಪಯ-ಒಕ್ಕಲುತನಗಳಲ್ಲಿ ಹಿಂದುಳಿದ ರಾಷ್ಟ್ರಗಳಿಗೆ, ಎಲ್ಲ ಬಗೆಯ ಸಹಾಯ ಅತ್ಯವಶ್ಯವೆಂಬುದರಲ್ಲೇನೂ ಸಂಶಯವಿಲ್ಲ ಈ ಜಾಗತಿಕ ಬ್ಯಾಂಕು ಇದನ್ನು ಪೂರಯಿಸಬಹುದೆಂದು ತಾತ್ತ್ವಿಕವಾಗಿ ವಿಶ್ವಾಸವಿಟ್ಟರೆ ತಪ್ಪೇನೂ ಇಲ್ಲ. ನಿಜವಾಗಿ ಬೇಕೆಂದರೆ ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮುಂತ ಪಾಶ್ಚಾತ್ಯ ರಾಷ್ಟ್ರಗಳಿಗಿಂತಲೂ ಭಾರತ, ಬ್ರಹ್ಮದೇಶ, ಸಿಲೋ ಚೀನ, ಪಾಕಿಸ್ತಾನ, ಇಂಡೋನೇಶಿಯಾ, ಇಂಡೋಚೀನ ಮೆ ಲಾದ ಪೌರ್ವಾತ್ಯ ದೇಶಗಳಿಗೆ, ಇಂದು ಸಹಾಯದ ಅವಶ್ಯ ಬಹಳ ಇದೆ. ಪಾಶ್ಚಾತ್ಯ ರಾಷ್ಟ್ರಗಳಿಗೆ ಜಾಗತಿಕ ಬ್ಯಾಂ ನಿಂದೊಂದೇ ಅಲ್ಲದೆ, "ಮಾರ್ಶಲ್ ಸಹಾಯ ಯೋಜನೆ "ಅಟ್ಲಾಂಟಿಕ್ ಒಪ್ಪಂದ"ದ ಮುಖಾಂತರವೂ ಸಹಾಯ ಸಿ ಬಹುದು. ಆದರೆ ಪೌರ್ವಾತ್ಯ ರಾಷ್ಟ್ರಗಳಿಗೆ ಇದು ಸಾಧ್ಯವಿ ಮತ್ತು ಪಾಶ್ಚಾತ್ಯ ರಾಷ್ಟ್ರಗಳು ಪೌರ್ವಾತ್ಯ ರಾಷ್ಟ್ರಗಳಿಗಿಂತ ತಾ ತೌದ್ಯೋಗಿಕ ವಿಷಯ-ಒಕ್ಕಲುತನಗಳಲ್ಲಿ ಎಷ್ಟೋ ಮುಂದುವರಿದಿ ಪೌರ್ವಾತ್ಯ ರಾಷ್ಟ್ರಗಳಲ್ಲಿಯ ಜೀವನ ಮಟ್ಟ ಬಹಳ ಹೀನ ತರಗ ಗಿಳಿದಿದೆ. ಆದ್ದರಿಂದ ಪೌರ್ವಾತ್ಯ ರಾಷ್ಟ್ರಗಳಿಗೆ ಮೊದಲು ಸಾ ಕೊಡುವುದು ಸ್ತುತ್ಯ.

ಬ್ಯಾಂಕಿನ ಆಡಳಿತದ ಬಗ್ಗೆ ಹೇಳಬೇಕೆಂದರೆ: ತಾತ್ತ್ವಿಕವಾ ಮಾತ್ರ ಸಹಕಾರ ಪದ್ಧತಿಯಿಂದ, ಪ್ರಜಾಪ್ರಭುತ್ವದಿಂದ ಉಳಿದ ಸಾಲದು; ಕೃತಿಯಲ್ಲಿಯೂ ಆ ತತ್ತ್ವಗಳು ಬರಬೇಕು. ಅಮೆ ರಿಕೆಯಂಥ ಧನಾಢ್ಯ ರಾಷ್ಟ್ರದ ಕೈವಾಡವೊಂದೇ ನಡೆದರೆ, ತತ್ತ್ವವೂ ಮಣ್ಣುಪಾಲು, ಸದಸ್ಯ ರಾಷ್ಟ್ರಗಳೂ ಗತಿಗೇಡಿಗಳು. ಪ್ರತಿಯೊಂದು ರಾಷ್ಟ್ರವೂ ನಿಜವಾದ ಸಹಕಾರಬುದ್ಧಿಯಿಂದ ವರ್ತಿಸಿದರೆ ಮಾತ್ರ "ಬ್ಯಾಂಕಿ"ನ ಉಳಿಗಾಲ. U. N. O. ದ ಸ್ಥಿತಿಯೂ ಇದಕ್ಕೆ ಬರಲಿಕ್ಕಿಲ್ಲೆಂದು ಆಶಿಸಬಹುದೇ? *

*ಬಿ. ನರಪತಿಯವರ "Inter national Bank"ದ ಸಹಾಯದಿಂದ.

—ಹುಬ್ಬಳ್ಳಿಯಲ್ಲಿ ಹೊಸ ಮಾಸಪತ್ರಿಕೆ—

ಇದೇ ೧೯೫೦ನೆಯ ಜನೇವರಿ ೧ನೇ ತಾರೀಖಿಗೆ

'ಸುಧಾಕರ' ಎಂಬ ಮಾಸಪತ್ರಿಕೆಯು ಶ್ರೀ. ಕಲಮದಾನಿ ಗುರುರಾಯರ ಸಂಪಾದಕತ್ವದಲ್ಲಿ ಹೊರಡಲಿರುವದು. ಆರ್ಥಿಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಮಟ್ಟವನ್ನು ಮೇಲೆತ್ತಲು ಸಾಹಸಪಡುವದೇ ಇದರ ಗುರಿ. ಜಂದಾನಿವರ, ಜಾಹಿರಾತು ಏಜನ್ಸಿ ಮೊಲಾದವುಗಳಿಗಾಗಿ ಮೆಸರ್ಸ್ ಕಂಬಾಯಿಂಡ್ ನ್ಯೂಜ್ ಏಜನ್ಸಿ, ಟಿಳಕ ರೋಡ ಹುಬಳಿ ಇವರಿಗೆ ಬರೆಯಿರಿ.

ನಿರೀಕ್ಷಕ

(ಪಕ್ಷಾತೀತ ವಾರಪತ್ರಿಕೆ) ಧಾರವಾಡ

ಸಂಪಾದಕರು: ಮಳಯಿ ಗೋವರ್ಧನರಾಯರು

ವಾರ್ಷಿಕ ಚಂದಾ ೭ ರೂ. ಸ್ಥಳಿಕರಿಗೆ ೬-೪-೦

ಇಂದೇ ಚಂದಾದಾರರಾಗಿರಿ.

ನಕ್ಷತ್ರಗಾನ

(ಕವನ ಸಂಕಲನ)

ಕವಿಗಳು ಶ್ರೀ. ಡಿ. ಎಸ್. ಕರ್ಕಿ. ಪ್ರಕಾಶಕರು ಶ್ರೀ. ಜ. ಜ. ಅಬಕಾರಿ, ಕರ್ನಾಟಕ ಪುಸ್ತಕಮಂದಿರ, ರಬಕವಿ.

ಕನ್ನಡ ಕವಿತಾಪ್ರೇಮಿಗಳಿಗೆ, ಕವಿಗಳಾದ ಶ್ರೀ. ಡಿ. ಎಸ್. ಕರ್ಕಿಯವರು ಹೊಸಬರೇನೂ ಅಲ್ಲ. ಕನ್ನಡ ಮಾಸಪತ್ರಿಕೆಗಳಲ್ಲಿ, ವಾರಪತ್ರಿಕೆಗಳಲ್ಲಿ— ಇದುವರೆಗೆ— ಆಗಾಗ ಅವರ ಕವನಗಳು ಪ್ರಕಟವಾಗುತ್ತ ಬಂದಿವೆ. ಇಷ್ಟೇ ಅಲ್ಲ, ಅವುಗಳಲ್ಲಿಯ ಎಷ್ಟೋ ಕವನಗಳು ರಸಿಕ-ವಾಚಕರ ಹೃದಯವನ್ನೂ ಸೆಳೆದುಕೊಂಡಿರಬಹುದು.

ಇಂದು ಕನ್ನಡದಲ್ಲಿ ಪತ್ರಿಕೆಗಳು ಹೆಚ್ಚಿವೆ. ಅದಕ್ಕನುಸರಿಸಿ ಪತ್ರಿಕೆಗಳಲ್ಲಿ ಪ್ರಕಟವಾಗುವ ಪದ್ಯಗಳೂ ಹೆಚ್ಚಾಗಿವೆ. ಈ ಪದ್ಯಗಳಲ್ಲಿಯ ಬಹುಭಾಗವು ಪ್ರಥಮಪ್ರಯತ್ನದ ನೀರಸಮಾತಿನ ಮಾಲೆಯೆ ಆಗಿರುವುದರಿಂದ, ಅವುಗಳೊಂದಿಗೆ ಪ್ರಕಟವಾಗುತ್ತಿರುವ ಒಳ್ಳೆಯ ಕವನಗಳೂ ಪಾಚಕರಿಂದ ದುರ್ಲಕ್ಷಿತವಾಗಿಬಿಡುತ್ತಿರುತ್ತವೆ. ಅವನ್ನೇ ಒಂದು ಸಂಪುಟವಾಗಿ ಪ್ರಕಟಿಸಿ ಪ್ರತ್ಯೇಕವಾಗಿ ಕೊಟ್ಟರೆ, ಕವಿಯ ನಿಜವಾದ ಯೋಗ್ಯತೆಯನ್ನು ರಸಿಕರು ಕಂಡುಹಿಡಿಯಲಿಕ್ಕೆ ಅನುಕೂಲವಾಗುವುದೆಂಬುದು, ಈ ಸಂಕಲನದಿಂದ ವ್ಯಕ್ತವಾಗುವಂತಿದೆ.

ಮುನ್ನುಡಿಯಲ್ಲಿ ಶ್ರೀ. ಕರ್ಕಿಯವರೇ ಹೇಳಿದಂತೆ, ಈಗ ಹದಿನೈದು ವರ್ಷಗಳಿಂದಲೂ (೧೯೩೪) ಅವರು ಕವಿತೆ ಬರೆಯಲು ತೊಡಗಿದ್ದಾರೆ. ಆದರೆ ಅವರ ಕವಿತಾಗುಣದ ಸಂಪೂರ್ಣದರ್ಶನವಿಲ್ಲದುದರಿಂದಲೊ ಏನೋ; ಆಧುನಿಕ ತರುಣಕವಿಗಳ ಸಾಲಿನಲ್ಲಿ ಅವರಿಗೆ ಸಲ್ಲಬೇಕಾಗಿರುವ ಸ್ಥಾನವನ್ನು ಅವರಿನ್ನೂ ಪಡೆಯದಿರುವುದು ವಿಷಾದದ ಸಂಗತಿ! ಈಗ ರಬಕವಿಯ ಸ್ನೇಹಿತರು ಈ 'ನಕ್ಷತ್ರಗಾನ' ಎಂಬ ಸಂಕಲನವನ್ನು ಬೆಳಕಿಗೆ ತಂದು, ಕವಿಯ ನಿಜವಾದ ಯೋಗ್ಯತೆಯನ್ನು ಬೆಳಕಿಗೆ ಒಡ್ಡಿದುದು ಸಂತೋಷದ ಸಂಗತಿಯಾಗಿದೆ.

'೧೯೩೪ರಿಂದ ೧೯೪೯ರ ವರೆಗಿನ ಕಾಲಾವಧಿಯಲ್ಲಿ ಆಗಾಗ ರೂಪುಗೊಂಡ ಕವನಗಳಲ್ಲಿ ಸುಮಾರು ಅರ್ಧದಷ್ಟು ಈ ಸಂಗ್ರಹದಲ್ಲಿ ಸೇರಿವೆ. ಸಾಧ್ಯವಿದ್ದ ಮಟ್ಟಿಗೆ ಅವುಗಳನ್ನು ಅರಳಿದ ಕ್ರಮದಲ್ಲಿಯೆ ಹೆಣೆಯಲಾಗಿದೆ.' ಸಂಕಲಿಸಗೊಂಡ ಕವನಗಳ ಸಂಖ್ಯೆ ೬೨. ಕವಿಯ ಮನದ ಒಳತೋಟಿ, ಪ್ರಾರ್ಥನೆ, ಬಯಕೆ, ಜೀವನದ ಬಣ್ಣನೆ, ದಿವ್ಯವ್ಯಕ್ತಿತ್ವ, ದೇಶಭಕ್ತಿ, ಕನ್ನಡದ ಪ್ರೀತಿ, ಪ್ರಣಯ, ವಾತ್ಸಲ್ಯ ಇವೆಲ್ಲ ಇಲ್ಲಿಯ ಬೇರೆ ಬೇರೆ ಕವನಗಳಿಗೆ ವಸ್ತುಗಳಾಗಿವೆ. ಸುಖ-ದುಃಖ, ಸೌಂದರ್ಯ-ವಿರೂಪ, ಜೀವನ-ಮರಣ, ಮೈತ್ರಿ-ಕಲಹ ಮೊದಲಾದ ದ್ವಂದ್ವಗಳಿಂದ ತುಂಬಿರುವ ಜಗತ್ತಿನಲ್ಲಿ ಈ ಕವಿ ಕಾಣುವುದು ಸುಖ, ಸೌಂದರ್ಯ, ಜೀವನ, ಮೈತ್ರಿ ಮೊದಲಾದ ಸದ್ಭಾವಗಳನ್ನೆ. ಆದರ್ಶವಾದಿಯಾದ ಆಶಾಜೀವಿ, ಜಗತ್ತಿನೊಳಗಿನ ಕೆಡುಕನ್ನು ಗಣಿಸುವುದೇ ಇಲ್ಲ. ಒಳ್ಳೆಯದೆನಿಸುವುದನ್ನೇ ಸಂಗ್ರಹಿಸಿ, ತಾನೂ ನೋಡಿ, ಇನ್ನೊಬ್ಬರಿಗೂ ತೋರಿಸಿ, ಜಗತ್ತು ಒಳ್ಳೆಯದೇ ಇದೆ ಎಂದು ಸಿದ್ಧಪಡಿಸುತ್ತಿರುವನು. ಕರ್ಕಿಯವರದು ಇಂತಹ ಆದರ್ಶವಾದಿಯ ರೀತಿ. ಎಂತಲೆ ಅವರು ವಿಜ್ಞಾನಿಗಳಾಗಿ ವಿಶ್ಲೇಷಿಸಿ ನೋಡುವುದು ಕಡಿಮೆ. ಕಂಡ ಸಮನ್ವಸೌಂದರ್ಯವನ್ನು ಕಂಡು ಅನುಭವಿಸಿದಂತೆ ಮೂಡಿಸಿ ತೋರಿಸುತ್ತಿರುವರು. ಕವಿತಾಲೋಕದಲ್ಲಿಯೂ ಬುದ್ಧಿಯ ಮೇಲ್ಮೆಯನ್ನು ಬಯಸುವವರಿಗೆ ಇವರ ಕವನಗಳು, ಭಕ್ತನ ಹಾಡುಗಳಂತೆ ಕೇವಲ ಭಾವನಾಮಯವೆನಿಸಬಹುದು. ಕವಿತೆಗೆ ಜೀವನಸಂಥನದ ರಜೋಭಾವವೇ ಬೇಕೆಂದು ಇವರಿಗೆನಿಸದು. 'ಅಂತರಿಕ್ಷವನ್ನು ವ್ಯಾಪಿಸಿದ ಅಸಂಖ್ಯಾತ ನಕ್ಷತ್ರಗಳ ಕಿರಣಗಳೊಡನೆ ಎಲ್ಲೆಲ್ಲಿಯೂ ಯಾವಾಗಲೂ ಗಾನವು ಇಳಿದುಬರುತ್ತಲೇ ಇರುತ್ತದೆ. ಆ ಕಿರಣಗಳಲ್ಲಿ ಯಾವುವೊ, ಈ ಕವನಗಳ ಹಿಂದಿರುವ ನಾಡಿಗಳ ಮೇಲೆ ಒಂದಿನಿತು ಆಡಿ, ಅವುಗಳನ್ನು ಈ ರೀತಿಯಾಗಿ ನುಡಿಸಿರಬಹುದು!' ಎಂದು ಶ್ರೀ. ಕರ್ಕಿಯವರು ಭಾವಿಸಿರುವರು. ಎಂತಲೇ ತಮ್ಮ ಈ ಸಂಕಲನಕ್ಕೆ 'ನಕ್ಷತ್ರಗಾನ' ಎಂದು ಹೆಸರನ್ನು ಇರಿಸಿರುವರು. ತಮ್ಮ ಕವನದ ರೀತಿ-ನೀತಿಗಳನ್ನು ವಿಶದೀಕರಿಸುವಂತೆ ನಕ್ಷತ್ರಗಳಿಂದ:

"ಹಗಲೆನ್ನದೆ ಇರುಳೆನ್ನದೆ ಗಗನಾಂಗಣದಲ್ಲಿ
ಯಾವುದೊ ಭಾವದ ತಾಳಕೆ ಚರಣಂಗಳ ಚೆಲ್ಲಿ,
ದೂರದಿ ತೂರುವ ಕಿರಣಶ್ರೇಣಿಯ ತಾನದಲಿ
ಹೊಸಗಿವಿಗೈದುವ ಗಾನವ ಗೈವೆವು ಮೇಳದಲಿ.

* * * *

ಋತುಋತುಗಳು ತಳೆಯುವ ರತಿ ಇಳೆಯುವುದೆಮ್ಮಿಂದ;
ಮನಮನದಲಿ ಮೂಡುವ ಮತಿ ಸುಳಿಯುವುದೆಮ್ಮಿಂದ;
ಅನುರಾಗಕೆ ಅನುರಾಗವ ಮೇಳಿಪುದೆಮ್ಮಿಂದ—
ಇಂತೊಗೆಯುತಲಿವೆ ಸಂತತ ಆಂತರ್ಯದ ಛಂದ!"

ಎಂದು ಹಾಡಿಸಿರುವರು.

'ಸ್ವಾತಂತ್ರ್ಯಕ್ಕೆ ಸ್ವಾಗತ' 'ಪ್ರಭಾತಗೀತ' 'ಕಾರವಾರ' ಈ ಪ್ರಾರಂಭದ ಕವನಗಳು ಕರ್ಕಿಯವರ ಪ್ರಾರಂಭದ ಕವನಗಳೇ ಆಗಿರಬೇಕು. ಸ್ವಾತಂತ್ರ್ಯವನ್ನು ಸ್ವಾಗತಿಸುವ ಮಾತಿನಲ್ಲಿರ-

ಬೇಕಾದ ಉತ್ಸಾಹ-ಆವೇಗಗಳು ಈ ಕವಿತೆಯಲ್ಲಿ ಕಾಣುವುದಿಲ್ಲ. 'ಪ್ರಭಾತಗೀತ'ವು ಪದ್ಯರಚಿಸಬೇಕೆಂಬ ಹಂಬಲಕ್ಕೆ ಗುರುತಾಗಿದೆ ಮಾತ್ರ. 'ಕಾರವಾರ' ಕವಿತೆಯಲ್ಲಿ ಪ್ರಾರಂಭವಾದ ರೂಪಕವು ಕೊನೆಯವರೆಗೆ ಉಳಿಯದೆ, ಇಡಿ ಕವಿತೆಯ ಅರ್ಥಸ್ಪಷ್ಟತೆಗೆ ಭಂಗಬಂದಂತಾಗಿದೆ. ಹೀಗೆಯೆ 'ತಾಯಿ ಎಲ್ಲಿ?' ಎಂಬ ಕವನ ಭಾವಸೌಂದರ್ಯದಿಂದ ಬೆಳೆದಿರದೆ ನಾತಿನ ಬಳ್ಳಿಯಾಗಿದೆ. 'ಕುರುಡ ಹೊಗಾರ್ತಿ' ಎಂಬ ಕವನದಲ್ಲಿ ಕವಿ ಕಂಡ ದರ್ಶನ ಚೆನ್ನಾಗಿದೆಯಾದರೂ, ಬೆಳಸಿದ ಬಗೆ ಏನುರ್ಶಕರಿಗೆ ಅಸ್ವಾಭಾವಿಕ ವೆನಿಸದೆ ಹೋಗದು. ಇವಿಷ್ಟು ಕವನಗಳನ್ನು ಬಿಟ್ಟರೆ, ಮಿಕ್ಕ ಕವನಗಳೆಲ್ಲ ಹಣ್ಣುಗೊಂಡು ಮೊರಟಿವೆ. 'ತಾಳಲಯದಲಿ ಬಾಳ ನಡೆಸು ದೇವಾ' 'ಇಲ್ಲಿ ಎನ್ನೊಡಲಾಳದಲಿ ನಾಟ್ಯವಾಡು ಬಾ!' (ನಟರಾಜನಿಗೆ) ಎಂಬ ಕವಿಯ ಯೌಗಿಕ ಜೀವನದ ಬಯಕೆ ರಸವತ್ತಾಗಿದೆ. ಜಗತ್ತಿನ ದುಃಖಕ್ಕಾಗಿ ಕರ್ಕಿಯವರು ಜಗತ್ತನ್ನು ಬೈಯುವವರಲ್ಲ. ಅವರ ತಿರಿವ ಮುಮುಕಿ ಕೂಡ:

'ಹುಚ್ಚಿ ನಾನು! ನನ್ನ ಹಾದಿ
ನನಗೆ ಗತಿಯು, ಅದನು ದೂರಿ
ಸಡೆವುದೇನು? ಮರುಕ ತೋರಿ
ನಡೆಸುತಿರುವುದು.
ದುನದಿ ಮೇಲಿನವನ ಹೆಸರ
ನುಡಿಸುತಿರುವುದು.'

ಎಂಬ ನಿರ್ಣಯದಿಂದ ಕವಿಯು ಆಂತರ್ಯವನ್ನು ಹೊರಗೆ ಹಾಕಿರುವಳು.

'ಕವಿ ರವೀಂದ್ರ' 'ಅಕ್ಕಮಹಾದೇವಿ' 'ಕಸ್ತೂರಬಾ' 'ಕೊಡಲ ದನಿ ಎಲ್ಲಿ' (ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತು) 'ದಿವ್ಯಜ್ಯೋತಿ' (ಮಹಾತ್ಮಾಜಿಯವರನ್ನು ಕುರಿತು) ಕವನಗಳು ನರ್ದೇಶ ವ್ಯಕ್ತಿಯ ದೊಡ್ಡತಿಕೆಯನ್ನೂ ವೈಶಿಷ್ಟ್ಯವನ್ನೂ ಪರಿಣಾಮಕಾರಿಯಾಗುವಂತೆ ರೂಪಿಸಿ ತೋರಿಸಿರುವುವು.

ನಿಸರ್ಗದ ಜೀಲುವು ಕವಿಯ ಹೃದಯವನ್ನು ಎಷ್ಟೊಂದು ಸೆಳೆದಿವೆಯೆಂಬುದಕ್ಕೆ 'ಮಲ್ಲಿಗೆಗೆ' 'ಮೇಘೋಪಾಸನೆ' 'ಮೋಡಗಳ ಹಾಡು' 'ಬಂದ ಮಳೆ ನಿಂದ ಮೇಲೆ' 'ನೀಲ' 'ಕರೆವನೇ ಅವ!' 'ಜೀಲುವೆಗಲ್ಲ ಜೀಲುವಿಗೆ' ಇವು ಸುಂದರವಾದ ದೃಷ್ಟಾಂತಗಳು.

'ಒಂಬು ಹತ್ತಾದೇವು, ಹತ್ತು ಒಂದಾದೇವು;
ಬಯಸುರೂಪ ತಳೆದೇವು ತಳೆದೇವು!
ಬಯಲಿಗೆ ಬಣ್ಣವ ಬರಿದೇವು.
'ಒಮ್ಮೊಮ್ಮೆ ಹಗಲಲ್ಲಿ ಬೆಳಕನ್ನೆ ಕುಡಿದೇವು
ಒಡಲಲ್ಲಿ ಕಡೆದೇವು ಕಡೆದೇವು;
ಕಾಮನ ಬಿಲ್ಲನು ಹಡೆದೇವು.'

ಎಂದು ಅತ್ಮವಿಶ್ವಾಸದಿಂದ— ಸಾತ್ತ್ವಿಕ ಅಹಂಕಾರದಿಂದ— ಹಾಡುವ ಮೋಡದ ಹಾಡುಗಳು ಮನೋಹಾರಿಯಾಗಿವೆ.

ಹೊಸ ಆಚಾರ-ವಿಚಾರಗಳು ಬಂದು ಹಳೆಯ ಉತ್ತಮ ಆಚಾರ-ವಿಚಾರಗಳನ್ನೂ ಮೂಲೆಗೊತ್ತಿದ ಸಂಗತಿಯನ್ನು, 'ತಿರುಗದ ಬೀಸುಕಲ್ಲಿಗೆ' ಎಂಬ ಅನ್ಯೋಕ್ತಿಗೀತ ಪರಿಣಾಮಕಾರಿಯಾಗಿ ಹೊರಹೊಮ್ಮಿಸಿರುವುದು.

'ಮೂಡಿಬಂದುದೆ ಸೊಗಸು' ಮತ್ತು 'ಶಿಲೆ' ಎಂಬ ಕವನಗಳು ಅನುವಾದಿತವಾಗಿ ಬಂದಿದ್ದರೂ, ಅವುಗಳ ಅರ್ಥಪೂರ್ಣತೆ ಶ್ರೀ. ಕರ್ಕಿಯವರ ಸಹೃದಯತೆಯನ್ನೂ ಹೆಣಿಕೆಯ ನೈಪುಣ್ಯವನ್ನೂ ಹೊರಕ್ಕೆ ಹಾಕುವಂತಿವೆ. ಪ್ರೇಮ ಮತ್ತು ವಾತ್ಸಲ್ಯದ ಕವನಗಳು ಸಂಯಮವನ್ನು ಮೀರದ ಗಾಂಭೀರ್ಯಸರಸವನ್ನು ತುಂಬಿಕೊಂಡು, ಕವಿಯ ವ್ಯಕ್ತಿತ್ವವನ್ನು ಸ್ಫುಟಗೊಳಿಸುವಂತಿವೆ.

ಪರಿಶುದ್ಧವಾದ ಭಾಷೆ, ನಯವಾದ ಹೆಣಿಕೆ, ಭಾವೋಚಿತವಾದ ಛಂದೋಗತಿ ಇವೆಲ್ಲ ಇಲ್ಲಿಯ ಕವನಗಳ ವೈಶಿಷ್ಟ್ಯ. ಹಿರಿಯ ಕವಿಗಳು ಕೆಲವರು ಬಳಸಿದ ವ್ಯಕ್ತ-ಪ್ರಾಸಪದ್ಧತಿಗಳು ಕಂಡು, ಆವರ ಛಾಯೆಯ ಭಾಸನೆನಿಸುವುದಾದರೂ, ಕವನವನ್ನು ಪೂರ್ತಿಯಾಗಿ ಓದಿ ನೋಡಿದ ಮೇಲೆ, ಆ ಛಾಯೆಯಲ್ಲಿಯೂ ಕರ್ಕಿಯವರದೇ ಆದ ಕವನಪದ್ಧತಿ ನಮಗೆ ಕಾಣದಿರದು.

ಒಟ್ಟಿನಲ್ಲಿ ಹೇಳಬೇಕೆಂದರೆ, ಹೊಸತಾಗಿ ಪ್ರಕಟವಾಗುತ್ತಲಿರುವ ತರುಣಕವಿಗಳ ಕವನಸಂಕಲನಗಳಲ್ಲಿ 'ನಕ್ಷತ್ರಗಾನ' ಒಂದು ಒಳ್ಳೆಯ ಸಂಕಲನ. ಶ್ರೀ. ಕರ್ಕಿಯವರಿಂದ-ಕನ್ನಡ ರಸಿಕರು ಇನ್ನೂ ಒಳ್ಳೆಯ ಕೃತಿಗಳನ್ನು ನಿರೀಕ್ಷಿಸಲು ಹಚ್ಚುವಂತಿದೆ. ಶ್ರೀ. ಚ. ಚ. ಅಬಕಾರರವರು ಇದನ್ನು ಪ್ರಕಟಿಸಿ, ತರುಣಕವಿಯ ಸಮಗ್ರಪರಿಚಯವನ್ನು ಕರ್ನಾಟಕಕ್ಕೆ ಮಾಡಿಕೊಟ್ಟಿದು ಪ್ರಶಂಸನೀಯವಾದ ಕಾರ್ಯ. ಹೀಗೆಯೆ ಶ್ರೀಯುತರು ಉದಾರರಾಗಿ ವಾಕ್‌ಶ್ರೀಯುತರಿಗೆ ನೆರವು ನೀಡುತ್ತ ಬಂದರೆ, ಹೊಸಗನ್ನಡ ಸಾಹಿತ್ಯದ ಉದ್ಯಾನವೂ ನಳನಳಿಸಿ ಬೆಳೆದೀತು.

—ಬಿ. ಪಿ. ಎಸ್. ರಾವ್

ಆಶಾ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಲೇಖಕರು:—ರಾಜ. ಪ್ರಕಾಶಕರು:—ಗುರುರಾಜ ಹಬ್ಬು, ಹುಬ್ಬಳ್ಳಿ.

"ವಿಮರ್ಶಕನು ಸಹೃದಯಿಯಾಗಿ ನೋಡಿದರೆ ಈ ಕಾದಂಬರಿಯು ಒಂದು ಕಲಾಕೃತಿಯೆಂದೂ ಪ್ರಗತಿ ಪಥದಲ್ಲಿಯ ಹೆಜ್ಜೆ

ಯೆಂದೂ" ಶ್ರೀ. ಕಲಮದಾನಿ ಗುರುರಾಯರು ಧೈರ್ಯವಾಗಿ ಹೇಳಿದ್ದಾರೆ. ಈ ಕಾದಂಬರಿಯಲ್ಲಿಯ ಕಥಾವಸ್ತುವನ್ನು ಹೀಗೆ ಬಣ್ಣಿಸಬಹುದು. ರಾಜನೊಬ್ಬ ಬಡವನು. ಇವನು ಲೇಖಕನೂ ಆಹುದು. ನೆರೆಮನೆಯಲ್ಲಿ 'ಆಶಾ' ಎಂಬ ವೇಶ್ಯೆಯ ಕುವರಿಯು ಇರುವಳು. ಆವಳ ಮೇಲೆ ಇವನ ಪ್ರೇಮವಿರುವುದು. ಇವನು ಬಡವನಾದುದರಿಂದ ಆಶಾ ಇವನಿಗೆ ದೊರೆಯಲಿಲ್ಲ. ಅಷ್ಟೇ ಅಲ್ಲ, ಅವನ ಅವಮಾನವನ್ನಾದರೂ ಒಮ್ಮೆ ಮಾಡುವಳು. ರಾಜನಿಗೆ ಅವನ ಗೆಳೆಯನ ಮನೆಯಲ್ಲಿ ವಿಮಲೆಯೆಂಬ ವಿಧವೆಯ ಪರಿಚಯವಾಗುವುದು. ಇವನ ಲೇಖನ ಭಾಷಣಗಳಿಗೆ ಆಕೆ ಮೋಹಿತಳಾಗುವಳು. ಇವನಾದರೂ ಆವಳ ಭವಿತವ್ಯದ ಮೇಲೆ ಒಂದು ಕತೆಯನ್ನು ಬರೆದು ಅವಳಿಗೆ ಓದಲು ಕೊಡುವನು. ಮುಂದೆ ಅವರಿರ್ವರಲ್ಲಿ ಪ್ರೇಮ ಬೆಳೆದು ದಂಪತಿಗಳಾಗುವರು. ರಾಜನ ಬಡತನದಲ್ಲಿ ಅವನ ನೆರಳಿನಂತೆ ವಿಮಲೆ ಇರುವಳು. ಮುಂದೆ ರಾಜನಿಗೆ ಉದ್ಯೋಗದಲ್ಲಿ ಹೆಚ್ಚು ಹಣವು ಸಿಕ್ಕಹತ್ತುವುದು. ಅವನು ಒಂದು ದಿನ ತನ್ನ ಗೆಳೆಯನ ಕೂಡ ವೆಶ್ಯೆಯರ ಗಾಯನ ಕಾರ್ಯಕ್ರಮಕ್ಕೆ ಹೋಗುವನು. ಮುಂದೆ ಆದೇ ಬೆಳೆಯುತ್ತ ಹೋಗಿ, ವೇಶ್ಯೆಯಾದ 'ಆಶಾ'ಳಿಗೆ ಮನಸೋಲುವನು. ಅವಳು ಇವನಿಗೆ ಮದಿರಾದೇವಿಯ ಪರಿಚಯ ಮಾಡಿಕೊಡುವಳು. ಹೆಣ್ಣಿಗೆ ಮತ್ತು ಮದಿರೆಗೆ ಮನಸೋತ ರಾಜನು, ತನ್ನ ಹೆಂಡತಿಯನ್ನು ದಾಸಿಯಂತೆ ನಡೆಯಿಸಿಕೊಳ್ಳಹತ್ತುವನು. ಸ್ವಾಭಿಮಾನಿಯಾದ ವಿಮಲೆ, ತನ್ನ ಗಂಡನನ್ನು ತೊರೆದು ಪರಸ್ಥಳದಲ್ಲಿ ಹೋಗಿ ನೆಲಸುವಳು. ಅಲ್ಲಿ ಆಕೆ ಒಂದು ಕಂಪನಿಯ ಮ್ಯಾನೇಜರನ ಪ್ರಾಯವ್ವೇಟ ಸೆಕ್ರೆಟರಿಯಾಗಬೇಕಾಯಿತು. ಆತ ಇವಳ ಮೇಲೆ ಬಲಾತ್ಕಾರಮಾಡುವನು. ಅಸಹಾಯಳಾದ ವಿಮಲೆ ನಿರುಪಾಯಳಾದಳು. ಗರ್ಭವತಿಯೂ ಆದಳು. ಇತ್ತ ರಾಜನು 'ಆಶಾ' ಮತ್ತು "ಮದಿರೆ" ಇವರ ಆಧೀನನಾಗಿ ತನ್ನದೆಲ್ಲವನ್ನೂ ಹಾಳುಮಾಡಿಕೊಳ್ಳುವನು. ಒಂದು ಮೋಟಾರ್ ಅಪಘಾತದಲ್ಲಿ ಸಿಕ್ಕು ಆಸ್ಪತ್ರೆಯಲ್ಲಿ ಉಪಚಾರಕ್ಕಾಗಿ ಇರುವನು. ವಿಮಲೆಯು ಅಲ್ಲಿ ಛಿಟ್ಟಿಯಾಗುವಳು. ಅವನನ್ನು "ಆಶಾ"ಳ ಸ್ವಾಧೀನ ಪಡಿಸುವಳು. ಮುಂದೆ ಹತ್ತು ಸಾವಿರ ರೂಪಾಯಿಗಳು ರಾಜನಿಗೆ ಬೇಕಾಗುವವು. ಕೊಡಲು 'ಆಶಾ'ಗೆ ಕೇಳುವನು. ಅವಳು ಮೊದಲು ಡಂಭಾಚಾರವನ್ನು ತೋರಿಸಿ, ಅವನ ಮನೆಯನ್ನು ತನ್ನ ಹೆಸರಿನಲ್ಲಿ ಮಾಡಿಸಿಕೊಂಡು, ಅವನನ್ನು ಮನೆ ಬಿಟ್ಟು ಹೊರಗೆ ಹಾಕುವಳು. ಮುಂದೆ ಮೋಟಾರ್ ಅಪಘಾತದಲ್ಲಿ ಸಿಕ್ಕು ಹುಚ್ಚು ಹಿಡಿದು, ರಾಜನ ಮತ್ತು ವಿಮಲೆಯ ಜೀವನದ ಅಂತವಾಗುವುದು.

ಶ್ರೀಹರಿಜಾಳರು ಹೇಳುವಂತೆ 'ರಾಜ'ರು ಈ ಕಾದಂಬರಿಯನ್ನು ಹೊಸ ದಾರಿಯಲ್ಲಿ ಎಂದರೆ ಆಡ್ಡದಾರಿಯಲ್ಲಿ—ಸಾಂಪ್ರದಾಯವಂತರಿಗೆ ಸೇರದ ದಾರಿಯಲ್ಲಿ— ಬರೆದಿದ್ದಾರೆ. ಇದೊಂದು ಅಗ್ಗದ ಚಲಚ್ಚಿತ್ರಕಥೆಯ ಪರಿಣಾಮಫಲ. ಕಥನಕಲೆಯು ಅಷ್ಟೇನು ನೀಟವಾಗಿ ನಡೆದಿಲ್ಲ ಅಲ್ಲಲ್ಲಿ ಪುನರುಚ್ಚಾರವನ್ನು ಕಾಣಬಹುದು. ಈ ಕಾದಂಬರಿಯ ಕಡೆಯ ಪ್ರಕರಣದಲ್ಲಿ, ಈ ಕಾದಂಬರಿಯ ಕಥೆಯನ್ನು ಸಂಕ್ಷಿಪ್ತವಾಗಿ ಕಾಣಬಹುದು. ಅಲ್ಲಿ ಬರೆದ ಕಥಾಭಾಗವನ್ನೇ ನಾವು ಉಳಿದ ಪ್ರಕರಣಗಳಲ್ಲಿಯೂ ಕಾಣುವೆವು.

ವಾಸ್ತವತೆಯೆಂದರೇನೆಂಬುದನ್ನು ಇದರಲ್ಲಿ ನಾವು ಎಲ್ಲಿಯೂ ಕಾಣುವಂತಿಲ್ಲ. ಎಷ್ಟೊ ಕಡೆಗೆ ಹಿಡಿದ ವಿಷಯವನ್ನು ಅರ್ಧಕ್ಕೆ ಬಿಟ್ಟು ಮತ್ತೊಂದು ವಿಷಯದ ಕಡೆಗೆ ಲೇಖಕರು ಹೊರಟಿದ್ದಾರೆ. ಇದು ಲೇಖಕರ ಪ್ರಥಮ ಪ್ರಯತ್ನವಾದುದರಿಂದ, ಇಂತಹ ದೋಷಗಳನ್ನು ಕಾಣುವುದು ಅಸಂಭವವಲ್ಲವೆಂದು ಹೇಳಬಹುದಾದರೂ ಜನರ ಕೈಯಲ್ಲಿರಿಸಬೇಕಾದ ಕೃತಿಯು ದೋಷರಹಿತವಾಗಿರುವಂತೆ ನೋಡಿಕೊಳ್ಳುವ ಕರ್ತವ್ಯವನ್ನು ಪ್ರಕಾಶಕರಾದರೂ ನಿರ್ವಹಿಸಬೇಕಾಗಿದ್ದಿತು. ಜೀವವಿಲ್ಲದ ಕೂಸನ್ನೂ ತನ್ನದೆಂಬ ಅಭಿಮಾನದಿಂದ ಜನರ ಕೈಯಲ್ಲಿ ಮುದ್ದಿಸಲೆಂದು ಕೊಡುವುದಕ್ಕೆ ಏನೆಂದು ಹೇಳಬೇಕು? ಕನ್ನಡದಲ್ಲಿ ಬರೆಯಬೇಕೆಂಬ ಉತ್ಸಾಹವಿರುವ ಈ ಲೇಖಕರು, ಜೆನ್ನಾಗಿ ಅಭ್ಯಾಸಮಾಡಿ ಕೈಯನ್ನು ಪಳಗಿಸಿಕೊಂಡು, ಇನ್ನು ಮೇಲೆ ಕೊಡಲಿರುವ ಕೃತಿಗಳನ್ನು ನಿರ್ದೋಷವಾದುವುಗಳನ್ನಾಗಿಸಿ ಕೊಡಲೆಂದು ನಮ್ಮ ಹಾರೈಕೆ.

—ಜಿ. ಎಸ್. ಮಕರ

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಸುಮಾರು ೬೦೦ ಪುಟಗಳಲ್ಲಿ ೫೦೦ ಗ್ರಂಥಗಳು.

ವಾರ್ಷಿಕ ಚಂದಾ ೫-೦-೦ (ರಜಿಸ್ಟರ್) ಪೋ. ವೆಚ್ಚಕೇರಿ

ಸಂಪಾದಕರು— **ಕಲಮದಾನಿ ಗುರುರಾಯರು**

ಸಿನೆಯ ವರ್ಷದ ಎರಡನೆಯ ಗ್ರಂಥ

ಆಶಾ

[ಸಾಮಾಜಿಕ ಕಾದಂಬರಿ]

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಡಿಸೆಂಬರ್ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ '**ತಾಯ್ತನ**' ಎಂಬ ಕತೆಯನ್ನು ವಿಮರ್ಶಿಸಿ ಬರೆದ ಬರಹಗಳು ಬೇರೆ ಬೇರೆ ೧೧ ಜನರಿಂದ ಬಂದಿವೆ. ಅವರ ಅನುಕ್ರಮ ಹೀಗಿದೆ :

೧. ಶ್ರೀ. ಕೆ. ಶ್ರೀನಿವಾಸ ಶರ್ಮ 'ವಿದ್ವಾನ್' ಬಿ. ಇ. ಎಂ. ಹೈಸ್ಕೂಲ್, ಕಾಸರಗೋಡು. ೨. ಶ್ರೀ. ವಿರುಪಾಕ್ಷ ಎಸ್. ಸೆಟ್ಟಿ, ಭೋಜ. ೩. ಶ್ರೀ. ಎಸ್. ಆರ್. ಆದಿ, ಅಧ್ಯಾಪಕರು ರಟ್ಟೀಹಳ್ಳಿ. ೪. ಶ್ರೀ. ನರೇಂದ್ರ, ಸಾಧನಕೇರಿ, ಧಾರವಾಡ. ೫. ಶ್ರೀ. ವಾಜೇಂದ್ರ ಕುಲಕರ್ಣಿ ಬಿ. ಎ. ಹೈದರಾಬಾದ್. ೬. ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ. ೭. ಶ್ರೀ. ಎಚ್. ಟಿ. ನರಸಿಂಹಮೂರ್ತಿ, ಬೆಂಗಳೂರುನಗರ. ೮. ಕುಮಾರಿ ಗುಪ್ತಾದೇವಿ, ಬೈಲ ಹೊಂಗಲ. ೯. ಶ್ರೀ. ಅನಂತ ಬುರ್ಲಿ ಬಾಗಿಲುಕೋಟೆ. ೧೦. ಶ್ರೀ. ಬಾಳು ಬಿ. ಪಂಡಿತ, ಶಮನೇವಾಡಿ. ೧೧. ಶ್ರೀ. ಆರ್. ವಿಠ್ಠಲರಾವ್, ಧಾರವಾಡ.

ಈ ಸಲ ಬಂದ ವಿಮರ್ಶೆಗಳನ್ನು ಪರೀಕ್ಷಿಸಿ, ನಮ್ಮ ಸಂಪಾದಕ ಮಂಡಲಿಯೆ ನಿರ್ಣಯಕೊಟ್ಟಿದೆ. **ಶ್ರೀ. ಅನಂತ ಬುರ್ಲಿ, ಬಾಗಲಕೋಟೆ** ಇವರ ವಿಮರ್ಶೆ ನೊದಲನೆಯ ಸ್ಥಾನವನ್ನು ಪಡೆದಿದೆ **ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ** ಅವರ ವಿಮರ್ಶೆಯೂ ಕುಂಬ ಚೆನ್ನಾಗಿದೆ. ಶ್ರೀ. ಕೆ. ಶ್ರೀನಿವಾಸ ಶರ್ಮ, ಮತ್ತು ಶ್ರೀ. ವಿರೂಪಾಕ್ಷ ಸೆಟ್ಟಿ, ಭೋಜ ಮತ್ತು ಶ್ರೀ. ವಾಜೇಂದ್ರ ಕುಲಕರ್ಣಿ ಬಿ. ಎ. ಇವರ ವಿಮರ್ಶೆಗಳೂ ಚೆನ್ನಾಗಿವೆ. ಶ್ರೀ. ನರೇಂದ್ರ, ಸಾಧನಕೇರಿಯವರು ವಿಮರ್ಶೆ ಯೆಂದರೇನೆಂಬುವನ್ನು ಚೆನ್ನಾಗಿ ಅಭ್ಯಾಸನಾಡಿ ತಿಳಿದುಕೊಳ್ಳಬೇಕು. ಕೈಗೆ ಬಂದಂತೆ ಬರೆದರೆ ವಿಮರ್ಶೆಯೆನಿಸದು.

'ತಾಯ್ತನ' ಕತೆಯನ್ನು ಪೂರ್ಣವಾಗಿ ಮೆಚ್ಚಿ ಬರೆದವರು ಇಲ್ಲವೇ ಇಲ್ಲವೆಂದು ಹೇಳುವಂತಿದೆ. ಆದರೆ ಬಹುಜನ ವಿಮರ್ಶಕರು ಕತೆಯ ಉದ್ದೇಶವನ್ನು ಚೆನ್ನಾಗಿ ಆರ್ಥಮಾಡಿಕೊಂಡಿದ್ದಾರೆ. ಕತೆಯ ರಸಹೀನತೆ, ಕತೆ ಹೇಳುವವನ ಮಾತುಗಾರಿಕೆಯಲ್ಲಿಯ ಅನುಚಿತಿಗಳನ್ನು ಕುರಿತು ಬರೆವ ಕೆಲವು ವಿಮರ್ಶಕರ ಮಾತುಗಳು ಸಯುಕ್ತಿಕವಾಗಿವೆಯೆಂದು ಸಂಪಾದಕ ಸಮಿತಿ ಅಭಿಪ್ರಾಯಪಟ್ಟಿದೆ. ಇಂತಹ ತೊಡಕಿನ ಕತೆಯನ್ನೂ ವಿಮರ್ಶಿಸಿ ಸಾಕಷ್ಟು ಜನರು ಬರೆದುದು, ನಮ್ಮ ತರುಣರ ಸಾಹಿತ್ಯಜಾಗೃತಿಗೊಂದು ನಿದರ್ಶನ.

ಮುಂದಿನ ತಿಂಗಳಿಗಾಗಿ '**ರಾಮಿ**' ಎಂಬ ಕತೆಯನ್ನಾಗಲಿ, '**ಒಂದು ದಿನದ ತಾಯ್ತನ**' ಎಂಬ ಕತೆಯನ್ನಾಗಲಿ ವಿಮರ್ಶಿಸಿ ನೋಲಾಟಕ್ಕೆ ಕಳುಹಬೇಕು. ಎರಡೂ ಮನೋವಿಶ್ಲೇಷಣಾತ್ಮಕ ಕತೆಗಳು. ಎರಡೂ ಕತೆಗಳೂ ವಾಚಕರ ಮನಸ್ಸನ್ನು ಹೆಚ್ಚು ಬಿಡಿಯುಬಹುದು. ಅವುವರಿಂದ ಮುಂದಿನ ಸಲಕ್ಕೆ ಹೆಚ್ಚು ವಿಮರ್ಶೆಗಳು ಬರಬಹುದೆಂದ ನಿರೀಕ್ಷಿಸಲಾಗಿದೆ.

—**ಸಂಪಾದಕರು.**

ತಾ ಯ್ತ ನ

(ಕಥಾವಿಮರ್ಶೆ)

ಶ್ರೀ. ಅನಂತ ಬುರ್ಲಿ, ಬಾಗಿಲಕೋಟೆ

ಈಗಾಗಲೆ ಕೆಲವು, ಕತೆಗಳನ್ನು ಬರೆದು ಸುಪರಿಚಿತರಾದ ಐರಣಿ ಶ್ರೀನಿವಾಸರು, ಈ ಸಲ 'ತಾಯ್ತನ'ದ ಕರುಣಾಮಯ ಚಿತ್ರವನ್ನು ತೋರಲುಯತ್ನಿಸಿದ್ದಾರೆ. ಗಂಡಿನ ಕಾಮುಜೀವನದ ತಿರುಗಣಿಯಲ್ಲಿ ಸಿಲುಕಿ ತೊಳಲುವ ಹೆಣ್ಣಿನ ಪಾಡು ಯಾರಿಗೂ ಬೇಡ—ಎಂಬ ಉತ್ಕಟಭಾವನೆ ಕತೆಗಾರರಲ್ಲಿ ಉದಯಿಸಿದೆ ಅದನ್ನೇ ಇಲ್ಲಿ ಕಥಾರೂಪದಲ್ಲಿ, ಅಂದು-ಇಂದಿಗೂ ಹೆಣ್ಣಿನ ಆ ಸ್ಥಿತಿ ಹಿಂಗದೇ ಹಾಗೆಯೆ ಉಳಿದಿವೆ ಎಂಬುದನ್ನು ಕಾಣಿಸಿದ್ದಾರೆ.

ಕಥೆಯನ್ನು ಪೂರ್ಣ ಓದಿ ಮುಗಿಸಿದಾಗ, ತಲೆಬರಹದ ಔಚಿತ್ಯ ಓದುಗರಿಗೆ ಅನೇಕ ಬಗೆಯಾಗಿ ಕಂಡುಬರುವುದು—ಕತೆಗಾರರ ಚಾತುರ್ಯವೆಂದೇ ಹೇಳಬಹುದು. 'ತಾಯ್ತನ' ಇಲ್ಲವೆ ವರುಷ-ವರುಷವೂ ಮಕ್ಕಳನ್ನು ಪೆರುವ ಪುಣ್ಯಕಾರ್ಯದಿಂದ ಹೆಣ್ಣಿಗೆ ನಿವೃತ್ತಿಯೇ ಇಲ್ಲವೇ? ಅವಳಿಗೆ ಸಂಸಾರದಲ್ಲಿ ಸುಖ-ಸಂತೋಷ ಬೇಡವೇ? ಕೇವಲ ಹೆರಿಗೆಗಾಗಿ ಹೆಣ್ಣೇ?— ಎಂಬ ವಿಚಾರ ಇಲ್ಲಿ ಚಿತ್ರಿಸಲ್ಪಟ್ಟಿದೆ. ಹತ್ತು ಮಕ್ಕಳ ತಾಯಿಯಾಗಿಯೂ ಮುಂದಿನ ಉಪಯೋನ್ಮುಖ ಮಕ್ಕಳ ಬಗೆಗೆ ತಾತ್ಸಾರ ತಾಳದೆ, ಅಸಹ್ಯ-ಪಟ್ಟುಕೊಳ್ಳದೆ 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ-ಯೊಂದಿರಲಿ ಎಂದು ಎಲ್ಲವನ್ನೂ ಸಹಿಸಿಕೊಂಡು ಎಲ್ಲರ ಕಲ್ಯಾಣ-ಕ್ಕಾಗಿ ಹಾತೊರೆಯುವ 'ತಾಯ್ತನ'ದ ದಿವ್ಯದರ್ಶನ ಮೂಡಿಸಿ-

ಮಕ್ಕಳಿಗಾಗಿ ಹೆಂಬಲಿಸುವುದು ಸ್ತ್ರೀಯ ಸಹಜಸ್ವಭಾವ. ಹು ಬಣ್ಣದ ಬೀಸಣಿಕೆಯಾದ ಇಂದಿನ ಸುಶಿಕ್ಷಿತ ಸುಧಾರಕ ಗುಲ್ಲೂ, ತನ್ನ ಮಗ ಮಧು ತೀರಿಕೊಂಡಾಗ, ಅದೂ ತಾನು ಳಿಗಾಗಿ— ನರಳಿಕೆಗಾಗಿ – ಬೇಸತ್ತು ಶಸ್ತ್ರಚಿಕಿತ್ಸೆಮಾಡಿಸಿ-ಡಾಗ "ದೇವರು ಉಳಿದವರನ್ನು ಕಸಿದುಕೊಂಡರೆ? ಪೇಗೆ?"

ವಿಚಾರ ಅವಳಲ್ಲುಂಟಾಗಿ, ತಾಯಿ ಹೃದಯ ಕಲಕಿದ್ದರೆ ಯಲ್ಲ. ಇಲ್ಲಿ ನಾವು ಕಾಣುವುದು ಅಂದಿಗೂ ಇಂದಿಗೂ ಹೃದಯ ಒಂದೇ ಎಂಬುದನ್ನು.

ಂತು ಕತೆಗಾರರು ತಾವು ಹೇಳಬಯಸಿದುದನ್ನು ಕಥೆಯಲ್ಲಿ ಸಲು ಶಕ್ಯವಿದ್ದಷ್ಟು ಯತ್ನಿಸಿದ್ದಾರೆ. ಕೆಲಮಟ್ಟಿಗೆ ಯಶಸ್ವಿ-ಗಿದ್ದಾರೆ. ಆದರೆ ಕತೆಗಾರರು ಕೆಲವೆಡೆಯಲ್ಲಿ ಮಕ್ಕಳ ವನ್ನು ಗೃಹಿಸಿ ಚಿತ್ರಿಸುವಲ್ಲಿ ಮೊದಲಿನಿಂದಲೇ ಅಯಶಸ್ವಿ-ಗಿದ್ದಾರೆ. ಅಸ್ವಾಭಾವಿಕತೆಯನ್ನು ಎತ್ತಿ ತೋರಿದ್ದಾರೆ. ಶಾಲೆಗೆ ಹೋಗುವ, 'ದೇಖೋ, ಗಮ್ಮತ್' ದೇಖೋ'ದಲ್ಲಿ ವಿಶ್ವೇಶ್ವರ, ತಾಜಮಹಾಲುಗಳನ್ನು ಕಂಡು ಸಂತೋಷಪಡುವ ನುಗುವಿಗೆ, "ಹೊಸ ಪಾಪಾ ಬಂದೈತಿ" ಎಂದು ಆಳು ಕರೆಯು-ಾಗ, ತನಗೊಂದು ತಮ್ಮನೋ ತಂಗಿಯೋ ಹುಟ್ಟಿದೆ ಎಂದೂ ೋಷವಾಗುವ ಬದಲು "ಮಾಂಸದ ಮುದ್ದೆ ನನಗೇನೂ ಹ ಸಂತೋಷವನ್ನುಂಟುಮಾಡಲಿಲ್ಲ" ಎಂದು ಕತೆಗಾರರು , ಅಸಮಾಧಾನವಾಗಿದೆಯೆಂದು ಹೇಳಲು ಯತ್ನಿಸಿದ್ದಾರೆ. ದರೆ ಅಷ್ಟೊಂದು ಅಸಹ್ಯವಾದುದು, ಅಸಂತೋಷ ತಲೆದೋರಿ-ುದು ಇಂದಿನ ಸುಶಿಕ್ಷಿತ ಸುಧಾರಕ ಕತೆಗಾರರಿಗೋ, ಇಲ್ಲವೆ ಅಂದಿನ ಚಿಕ್ಕಮಗುವಿಗೋ ಎಂಬ ಸಂಶಯ ಬಾರದಿರದು. "ಅಂತೂ ಬಂದ ಸಲ.... .... ಇರುತ್ತದೆ" ಎಂದು ತಾಯಿಯೆದುರು ೂಂಕುಮಾತನಾಡುವ ಕಠೋರತೆಯನ್ನು, ಇಂಗ್ಲೀಷ ಶಾಲೆಯ ರ್ಗದಲ್ಲಿರುವ ಹುಡುಗನಲ್ಲಿ ಆರೋಪಿಸುವುದು ಸಂಭಾವ್ಯವೇ? ಸ್ವಾಭಾವಿಕವೇ?—ಎಂಬ ವಿಚಾರವೂ ಸುಳಿಯುವುದು. ತಾಯಿಯ ರಿಗೆ, ತಮ್ಮನಿರೊ ತಂಗಿಯರೊ ಜನಿಸುವುದು, ಅವನಿಗೆ ಷ್ಟೊಂದು ಬೇಸರದ್ದಾಗಿತ್ತೇ? ಕಾರಣ ಈ ಮಾತು ತುಂಬಾ ಸ್ವಾಭಾವಿಕ ಎನಿಸುತ್ತದೆ. ಓದುಗರಿಗೆ ಇಂತಹ ಅನೇಕ ಮಾತು-ಳಿಂದ ತಿಳಿಯುವುದು: ಕತೆಗಾರರು ಅಂದಿನ ಕತೆ ಹೇಳುತ್ತಿರುವಾಗ ಂದಿನವರಾಗಿ ಮಾತನಾಡುತ್ತಿದ್ದಾರೆ ಎಂಬುದು. "ನೀ ಇದರಿಂದ ಾಯತೀದಿ.... .... ತಗೊಂಡುಬಿಡು" ಎಂಬ ಮಾತನ್ನು ಮಗನ ಮುಖದಿಂದ ಅಡಿಸುವುದು ಅಷ್ಟೊಂದು ಸರಿಯೆನಿಸದು. ಮಾತಿನ ಂದೆ ತಾಯಿಗಾಗಿ ಮಗನ ಅಂತಃಕರಣ ಅವ್ಯಕ್ತವಾಗಿ ುದಿಯುತ್ತಿದೆ ಎಂಬುದು ತಿಳಿದರೂ, ಔಷಧ ತೆಗೆದುಕೊಳ್ಳಹೇಳುವ ಾಷ್ಟ್ರ್ಯ ಅಸ್ವಾಭಾವಿಕವೆಂದೇ ಎನಿಸದಿರದು. ಕಳವಳದ ತೀವ್ರತೆ ಮಾತ್ರ ಓದುಗರಿಗೆ ಚೆನ್ನಾಗಿ ವ್ಯಕ್ತವಾಗುವುದೆ ಈ ಮಾತಿನಿಂದ. ಇದೇ ಮಾತನ್ನು ಪಶ್ಚಾತ್ತಾಪದಿಂದ ಕೊರಗುವ ಪತಿಯಿಂದ ೇಳಿಸಿದ್ದರೆ, ಕಥೆಗೆ ಕಳೆಗಟ್ಟಬಹುದಿತ್ತೇನೋ! ಅಲ್ಲಲ್ಲಿ ಕತೆಗಾರರು ಎಲ್ಲೆದಾಟಿ ಮಾತನಾಡಿದುದನ್ನು ತಿಳಿದೋ ಏನೋ; ಅಷ್ಟಾರಲ್ಲಾದೂ ಸಮಾಧಾನದ ಮಾತುಗಳನ್ನು ಹೇಳುತ್ತಾರೆ.

ಕಥಾವಸ್ತು ತುಂಬಾ ಮನಮಿಡಿಯುವಂತಹದು. ಹೊಸದಲ್ಲ-ವಾದರೂ ಹಳೆಯದೆಂದಿಗೂ ಆಗದು. ಒಳ್ಳೆಯ ಪಳಗಿದ ಕತೆಗಾರರ ಕೈಯಲ್ಲಿ ಇಂತಹ ಕತೆ ಒಳ್ಳೇ ಆದರ್ಶಕತೆಯಾಗಿ ಹೊರಬರ-ಬಹುದಿತ್ತು. ಹೀಗೆಂದಲ್ಲಿ ಈ ಕತೆಗಾರರ ಉದ್ದೇಶ ವಿಫಲವಾಗಿದೆ-ಯೆಂತಲ್ಲ. ಆದರೆ ವಿಷಯಪ್ರತಿಪಾದನೆಗಾಗಿ ಕತೆ ಬೆಳಸಿದಂತಿದೆ-ಯಲ್ಲದೆ ಸಹಜ ಸ್ವಾಭಾವಿಕವಾದ ಹಿನ್ನೆಲೆಯಲ್ಲಿ ಬೆಳೆದು ಬಂದ ಕತೆಯಾಗಿಲ್ಲ. ತಾಯ್ತನದ ಚಿತ್ರ ಚಿತ್ರಿಸಲ್ಪಟ್ಟಿಲ್ಲ. ತಾಯ ಪಾತ್ರವನ್ನು ಬಹು ಹೃದಯಂಗಮವಾಗಿ ಚಿತ್ರಿಸಲು ಅವಕಾಶ ದೊರೆತಿದ್ದರೂ, ಕತೆಹೇಳುವ ರೀತಿ ಬೇರೆಯಾಗಿ, ಅದಕ್ಕೆ ಎಡೆ-ದೊರೆತಿಲ್ಲ. ಕೆಲವು ಮಾತುಗಳಲ್ಲಿ ತಾಯಿ ಹೃದಯ ತೋರಲು ಯತ್ನಿಸಿದ್ದರೂ, ಒಂದು ಅತ್ಯುತ್ತಮ ಪಾತ್ರ ಚಿತ್ರಿಸುವ ಸುಸಂಧಿ-ಯನ್ನು ಕಳೆದುಕೊಂಡಿದ್ದಾರೆ. ಅಲ್ಲದೆ ಎರಡು ತಲೆಮಾರುಗಳಲ್ಲಿ— ೬೦–೭೦ ವರುಷಗಳಲ್ಲಿ—ಸಾಗುವ ಘಟನೆಗಳನ್ನು ಬಿಡದೆ ಹೇಳುವ ರೀತಿ, ಸಣ್ಣಕಥಾತಂತ್ರಕ್ಕೆ ಒಪ್ಪದೆಂದು ಎನಿಸದೆ ಇರದು. ಅಂದಿನ—ಇಂದಿನ ತಾಯಂದಿರ ಚಿತ್ರವನ್ನೂ, ಅವರ ವಿಚಾರ ಸರಣಿಯನ್ನೂ, ಈ ನಡುವಣ ಅವಧಿಯಲ್ಲಿ ಆದ ವಿಚಾರಕ್ರಾಂತಿ ಯನ್ನೂ ಮನಮೆಚ್ಚುವಂತೆ ಹೇಳಿವ್ದಾರೆ. ಹಳೆ ಹೊಸ ವಿಚಾರಗಳ ತಿಕ್ಕಾಟದಲ್ಲಿ ಕತೆಗಾರರ ಮನಸ್ಸು ಮಾತ್ರ ಹೊಯ್ದಾಡುತ್ತಿದೆ. ತಾಯಿ ಹೆರುವ ಯಂತ್ರವಾಗಬಾರದೆಂದು ಪ್ರತಿಪಾದಿಸಿದರೂ, ಔಷಧಿ ಸೇವನೆ ಇಲ್ಲವೆ ಶಸ್ತ್ರಚಿಕಿತ್ಸೆಯ ಮೂಲಕ ಸೃಷ್ಟಿಯ ವಿರುದ್ಧ ಹೋರಾಡಲೂ ಬಾರದು ಎಂಬುದನ್ನು ತೋರಲು ಯತ್ನಿಸಿದ್ದಾರೆ. ಆತ್ಮಸಂಯಮ, ಇಂದ್ರಿಯನಿಗ್ರಹಗಳೇ ಈ ಸಮಸ್ಯೆಗೆ ಉತ್ತರಗಳಾಗಿವೆ ಎಂಬ ಸತ್ಯಮಾತು ಕತೆಗಾರರಿಗೆ ತೋಚಿದ್ದರೂ, ಆ ಮಾತನ್ನು ಇಲ್ಲಿ ಹೇಳಬಯಸುವ ಪ್ರಸಂಗ ಬಂದಿಲ್ಲ. ಕಥೆಯ ಕೊನೆಯಲ್ಲಿ ಬರುವ ಸರೋಜಳ ಪ್ರಣಯ-ಪ್ರಸಂಗ ಎಳೆದು ತಂದ ಹಾಗಿದೆ. ಇಂದಿನ ವಾತಾವರಣದಲ್ಲಿ, ಹುಚ್ಚುಕಲ್ಪನೆಗಳಲ್ಲಿ ಮೈಮರೆತ ಬಂಣದ 'ಬೀಸಣಿಕೆಗಳ' ಅವಹೇಳನ ಮಾಡಲೋಸುಗ ಹೇಳಿದಂತಿದೆ. ಇಂತು ಕತೆಯ ಕೊನೆ ಕೃತ್ರಿಮವೆಂದೆನಿಸಿದರೂ ಕೊನೆಯ ಮಾತು ಸನ್ನಿವೇಶಗಳು ತುಂಬಾ ಮನ ಮಿಡಿದು ಅಂತಃಕರಣಕ್ಕೆ ತಾಗುತ್ತವೆ.

ಒಟ್ಟಾರೆ 'ತಾಯ್ತನ' ಕಲಾತ್ಮಕನಾಗಿ ಸಣ್ಣ ಕತೆಯ ತಂತ್ರಕ್ಕೆ ಒಪ್ಪುವಂತೆ ಸೊಗಸಾದ ರೀತಿಯಲ್ಲಿ ಹೇಳಲ್ಪಟ್ಟಿಲ್ಲವೇನೋ ಎಂಬ ಸಂದೇಹ. ಆದರೂ ಒಳ್ಳೆಯ ಕಥೆಯಲ್ಲಿ ಕಾಣಬಹುದಾದ ಅನೇಕ ಒಳ್ಳೆಯ ಗುಣಗಳು ಇಲ್ಲಿ ಕಂಡುಬಾರದೆ ಇರವು.

"ವಿದ್ಯೆ ಇಲ್ಲದ ಮಗ ನನ್ನ ಪಾಲಿಗೆ ಮಗನಲ್ಲ," "ಕಲೆಕ್ಟರರ....ಅಪೇಕ್ಷೆಯೇನೋ?" 'ದುಡ್ಡು ಮಾತ್ರ ಬೇಕಾದಾಗ ಪತ್ರ ಬರೆಯುತ್ತಿದ್ದೆ,' "ನಮ್ಮ ತಂದೆಯವರಿಗೆ ವೈರಾಗ್ಯ

(ಉಂಟೆಯೆ ಪುಟ ನೋಡಿರಿ)

ನಗೇಗೆ ನೇವಿದ್ಯ

(೧)

ಹುಚ್ಚರ ಆಸ್ಪತ್ರೆಗೆ ಒಬ್ಬ ಗೃಹಸ್ಥರು ಸಂದರ್ಶನನಿತ್ತಾಗ ಅಲ್ಲಿಯ ಹುಚ್ಚನೊಬ್ಬ ಪತ್ರ ಬರೆಯುತ್ತ ಕುಳಿತಿದ್ದ.

ಗೃ :— ನೀವು ಏನು ಮಾಡುತ್ತಾ ಇದ್ದೀರಿ ?

ಹು :— ಪತ್ರ ಬರೆಯುತ್ತಾ ಇದ್ದೇನೆ.

ಗೃ :— ಯಾರಿಗೆ ?

ಹು :— ಬೇರೆ ಯಾರಿಗೂ ಇಲ್ಲ; ನನಗೇ.

ಗೃ :— ಅದರಲ್ಲಿ ಏನು ಬರೆದಿದ್ದೀರಿ ?

ಹು :— ಅವನ್ನು ಈಗಲೇ ಹೇಳುವದು ಹೇಗೆ ? ಈ ಪತ್ರ ನಾಳೆ ಪೋಸ್ಟಿನಿಂದ ಬರಲಿ, ಓದಿ ಹೇಳ್ತೀನೆ !

(೨)

ಮಗಳು ಸಂಗೀತಶಿಕ್ಷಕನ ಹತ್ತಿರ ಕಲಿಯುತ್ತಿರುವಾಗ, ತಾಯಿ ಅಲ್ಲಿಗೆ ಹೋದಳು.

'ಮಾಸ್ತರ್, ನಮ್ಮ ಉಷಾನ ಪ್ರಗತಿ ಎಷ್ಟಾಗಿದೆ ಈಗ ಸಂಗೀತದಲ್ಲಿ ?'

'ಈಗಲೆ ಹೇಳುವದಕ್ಕೆ ಬಾರದು.'

'ಯಾಕೆ ? ಆಕೆಗೆ ಒಳ್ಳೇ ಕಂಠ ಇದೆಯಲ್ಲ ?'

'ಅದಿನ್ನೂ ನನಗೆ ಕಂಡಿಲ್ಲ. ಆದರೆ ಬಾಯಿಮಾತ್ರ ಸಾಕಷ್ಟಿದೆ.'

(೩)

ಹೊಸತಾಗಿ ಮದುವೆಯಾದ ಗಂಡ-ಹೆಂಡತಿಯ ಒಂದು ಜೋಡಿ ಫಲಾಹಾರದ ಅಂಗಡಿಗೆ ಬಂದಿತು. ಫಲಾರ ಮುಗಿದ ಮೇಲೆ ಮಾಣಿ, ಐದು ರೂಪಾಯಿ ಎಳಾಣೆಯ ಬಿಲ್ ತಂದು ಕೊಟ್ಟನು. ಗಂಡನ ಹತ್ತಿರ ಅಷ್ಟು ಹಣವಿರಲಿಲ್ಲ. ಅವನು ಅಂಗಡಿಯ ಒಡೆಯನಿಗೆ ಇದ್ದ ಸಂಗತಿಯನ್ನು ಹೇಳಿದನು:

'ನಾನು ಮನೆಗೆ ಹೋಗಿ ಹಣ ತಂದು ಕೊಡುತ್ತೇನೆ. ಅದುವರೆಗೆ ನನ್ನ ಹೆಂಡತಿ ಇಲ್ಲಿಯೆ ಇರುತ್ತಾಳೆ.'

'ನಿಮ್ಮ ಹತ್ತಿರ ಉಂಗುರ, ಗಡಿಯಾರ ಇಂಥದೇನಾದರೂ ಇಲ್ಲವೇನು ?'

'ಯಾಕೆ ? ನನ್ನ ಹೆಂಡತಿ ನಿಮ್ಮ ಬಿಲ್ಲಿನ ಹಣದಷ್ಟು ಕೂಡ ಬೆಲೆಬಾಳುವ ದಿಲ್ಲವೆ ?'

'ಹಾಗಲ್ಲ ರಾಯರೆ ! ನನಗೆ ಹೆಂಡತಿ ಇದ್ದಾಳೆ. ಉಂಗುರ, ಗಡಿಯಾರ ಇರಲಿಲ್ಲ. ಅದಕ್ಕೇ ಕೇಳಿದೆ.'

ಪರ್ಲಿನ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂದಾಗಿಡುವದು. ಅಜೀರ್ಣವನ್ನು ಸರಿಪಡಿಸುವದು. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು. ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ.

ಪರ್ಲ್ ಎಂಡ್ ಕಂಪನಿ
ಮುಂಬಯಿ ೩೯

(೪)

ಒಬ್ಬ ಮರಗುಳಿ ಪ್ರೊಫೆಸರರು ರ ಸ್ನೇಹಿತರ ಮನೆಗೆ ಹೋದಾಗ ಬೇಳಹತ್ತಿದ್ದರಿಂದ, ಸ್ನೇಹಿತರು ಅಲ್ಲೇ ಮಲಗಲು ಹೇಳಿದರು. ಸ್ನೇಹಿ ಒಳಗೆ ಹೋಗಿ ಹೊರಗೆ ಬರುವುದರ ಗಾಗಿ ಪ್ರೊಫೆಸರರು ಕಾಣದಾಗಿದ್ದ ತುಸು ಹೊತ್ತಿನ ಮೇಲೆ ಪ್ರೊಫೆಸ ಮರಳಿ ಬಂದುದನ್ನು ನೋಡಿ, ಸ್ನೇಹಿ ಕೇಳಿದರು:— 'ಏನು ಎಲ್ಲಿ ಹೋಗಿದ್ದಿ

'ಮನೆಯವರಿಗೆ ಹೇಳಿ ಬಂದೆ; ರಾ ಬರುವದಿಲ್ಲಾ ಅಂತ.'

(೫)

ಒಂದು ಕಾಲೇಜಿನ ಸ್ನೇಹಸಮ್ಮೇಲನ ಕಾಲದಲ್ಲಿ ಒಬ್ಬ ಸಂಗೀತಕಾರರ ಸಂಗೀ ಕಾರ್ಯಕ್ರಮ ನಡೆಯಿತು. ಮಧ್ಯವಿರಾ (Interval) ದ ಹೊತ್ತಿಗೆ ಅಲ್ಲಿ ನೆ ವಿದ್ಯಾರ್ಥಿನಿಯರೆಲ್ಲ ಹೊರಟು ಹೋ ಬರಿ ಗಂಡುಹುಡುಗರಷ್ಟೇ ಉಳಿದರ ವಿರಾಮ ಮುಗಿದ ಮೇಲೆ ಕಾರ್ಯದ ಬಂದು ಸಂಗೀತಕಾರರಿಗೆ 'ಮಾಲಕಂಸ ರಾಗ ಹಾಡಬೇಕೆಂದು ಸೂಚಿಸಿದನ ವಿನೋದೀ ಸ್ವಭಾವದವರಾದ ಗವಾಯಿಗಳು ಉತ್ತರಿಸಿದರು :

'ಮಾಲಕಂಸ ರಾಗ ಹೇಳ್ರಿ ಎಂ ಆಗ್ರಹ ಮಾಡ್ತೀರಿ. 'ಮಾಲ' ಅನ್ನು ದೆಲ್ಲ ಹೋಗಿ ಬಿಟ್ಟಿತು. ಈಗ ಉಳಿದ ದೆಲ್ಲ ಬರಿ 'ಕಂಸ' ರಷ್ಟೇ. ಅವರ ಮು ಏನು ಹಾಡಲಿ'

(೬)

ಸಿಂಧ ಹೈದರಾಬಾದದಲ್ಲಿ ಬಿಬ್ಬೆಖಾನ್ ಎಂಬೊಬ್ಬ ಶ್ರೇಷ್ಠ ಸಂಗೀತಕಾರರಿದ್ದಾರೆ. ಅವರ ಬಗ್ಗೆ ಹೀಗೊಂದು ಕಥೆ ಹೇಳುತ್ತಾರೆ:

ಬಿಬ್ಬೆಖಾನರು ಯಾವಾಗಲೂ ಆಫೀಮಿನ ಗುಂಗಿನಲ್ಲಿರುತ್ತಾರೆ. ಹೀಗೆ ಗುಂಗಿನಲ್ಲಿ ಆವರು ಗಂಟೆಗಟ್ಟಲೆ ವಿಚಾರಮಗ್ನರಾಗಿ ಕೂಡುತ್ತಾರೆ. ಹೀಗೇ ಒಮ್ಮೆ ಒಳಶಾಗಿ ಆಫೀಮಿನ 'ಬಾರ್' ಮಾಡಿ, ಎರಡು ವರ್ಷದ ತಮ್ಮ ಮಗನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಅವರು ತಿರುಗಾಡಲು

ಪಟರು. ತುಸು ಹೊತ್ತಿನಲ್ಲಿಯೇ ಕೂಸು ಅವರ ಹೆಡಿಗೆಯಂಥ ಪೇಟಾದ ಲೆ ತಲೆಯಿಟ್ಟು ನಿದ್ದೆಹೋಯಿತು. ಮಿನ ಗುಂಗಿನಲ್ಲಿದ್ದ ಖಾನಸಾಹೇ ಮಗ ಹೆಗಲಮೇಲಿದ್ದುದನ್ನು ತೇಬಿಟ್ಟರು. ಅವನನ್ನು ಕೂಗಿ ದರು. ಗಾಢವಾದ ನಿದ್ರೆಯಲ್ಲಿದ್ದ ಹುಗ ಓ ಕೊಡಲಿಲ್ಲ. ತಾವು ಹೊರ. ಡುವಾಗ ತಮ್ಮ ಸಂಗಡ ಹುಡುಗ-ದ್ದು ಅವರಿಗೆ ಸ್ಮರಣೆಯಲ್ಲಿತ್ತು. ನೆಯಲ್ಲಿ ಹುಡುಗನಿಲ್ಲ, ಅವನು ತಮ್ಮ ತಿಗಿದ್ದ, ಈಗಿಲ್ಲ ಎಂದ ಮೇಲೆ ಅವನು ಲ್ಲಿಯೂ ಕಾಣೆಯಾದ—ಎಂದು ಅವರ ನಳಕೆಯಾಗಿ, ಗುರುತಿನ ಜನರನ್ನೆಲ್ಲ ಣ್ಣಲ್ಲಿ ನೀರು ತಂದು 'ಮಿಯಾ, ನನ್ನ ಮಗು ಎಲ್ಲಿಯೂ ಕಾಣದಾಗಿದ್ದಾನೆ. ನೀವೇನಾದರೂ ಅವನನ್ನು ನೋಡಿದಿರಾ' ಎಂದು ಕೇಳತೊಡಗಿದರು. ಅವರ ಹೆಗಲಮೇಲೆಯೇ ಮಗು ಇದೆ, ಒಂದು ಕೈಯಿಂದ ಕೂಸಿನ ಕಾಲನ್ನು ಹಿಡಿದಿದ್ದಾರೆ. ಆದರೂ ಮಗನೆಲ್ಲಿ ಎಂದು ಕೇಳುತ್ತಾರೆ ಎಂದ ಮೇಲೆ, ಖಾನಸಾಹೇಬರು ನಶೆಯಲ್ಲಿದ್ದಾರೆ. ತುಸು ಜೇಷ್ಟೆಮಾಡೋಣ ಎಂದೆನಿಸಿ ಅವರೆಲ್ಲರೂ 'ಇಲ್ಲ ನಾವು ನಿಮ್ಮ ಮಗನನ್ನು ನೋಡಲಿಲ್ಲ. ಅವನು ಕಣ್ಣಿಗೆ ಬಿದ್ದರೆ ತಿಳಿಸುತ್ತೇವೆ' ಎಂದು ಹೇಳತೊಡಗಿದರು. ಮಗನು ಕಳೆದು ಹೋದ ನಲ್ಲಾ ಎಂದು ಖಾನಸಾಹೇಬರು ಬಹು ಗಾಬರಿಯಾದರು; ದುಃಖ ಬಂದು ಕಣ್ಣಿನಿಂದ ನೀರು ಹೋಗತೊಡಗಿತು. ಸ್ನೇಹಿತನೊಬ್ಬನಿಗೆ ಇದನ್ನು ನೋಡಿ ಕನಿಕರ ಉಂಟಾಯಿತು. ಅವನೆಂದ— 'ನನಗೆ ಐದು ರೂಪಾಯಿಯ ಮಿಠಾಯಿ ಕೊಡಿಸುವಿರಾದರೆ ನಿಮ್ಮ ಮಗನನ್ನು ಹುಡುಕಿಕೊಡುತ್ತೇನೆ.' ಖಾನಸಾಹೇಬರು ಒಪ್ಪಿದರು. ಸ್ನೇಹಿತನೆಂದ— 'ಖಾನಸಾಹೇಬ್ರ, ನಿಮ್ಮ ಮಗ ನಿಮ್ಮ ಹೆಗಲಮೇಲೆಯೇ ಇದ್ದಾನೆ ನೋಡಿ.'

ಹರ್ಷಗೊಂಡು ಖಾನಸಾಹೇಬರು ಎನ್ನುತ್ತಾರೆ— 'ಅಲ್ಲೊ ಮಗನೆ, ನಿನ್ನನ್ನು ಅರಚುತ್ತಾ ನಾನು ಓಣಿಓಣಿ ತಿರುಗುತ್ತಾ ಇದ್ದೇನೆ. ನನ್ನ ಹೆಗಲ ಮೇಲೆಯೇ ಕುಳಿತು ನನಗೆ ನೀನು ಓ ಕೊಡವೊಲ್ಲೆ!'

(೪೦೫ ನೆಯ ಪುಟದಿಂದ ಮುಂದೆಸಾಗಿದುದು.)

ಂದಿಶ್ತು....ಯಾತರ ಚಿಂತೆ ಎನ್ನುತ್ತಿದ್ದರು,'' '' ಹಿಂಗಽ ನೆಟ್ಟ ಯಿತು '' ಇಂತು ಅನೇಕ ಮಾತುಗಳಲ್ಲಿ ತಂದೆಯ ಚಿತ್ರವನ್ನು ಂಬಾ ಸ್ವಾಭಾವಿಕವಾಗಿ ಚಿತ್ರಿಸಿದ್ದಾರೆ. '' ಕೊಟ್ಟು ಏಕೆ ಸಿದುಕೊಳ್ಳಬೇಕು ? '' '' ಮನೆ ಬಣಗುಟ್ಟುತ್ತಿದೆ, '' '' ಈ ಡಿಗೆ ಹುಟ್ಟಿದ ಗಳಿಗೆ ಚೆನ್ನಾಗಿದೆ, '' '' ಇಲ್ಲೆ ಧಾರವಾಡ ಂದರೆ....ಕಡಿಮೆಯಾಗಿದೆ, '' '' ನನ್ನ ಮಕ್ಕಳು ನನ್ನ ಮುಂದೆ ರಲಿ, '' '' ಇನ್ನೇನು ತಿರುಗಿ ಮಕ್ಕಳು....ದಿವಸ ಬಂದವು, '' ನನಗೆ ಎರಡೂ ಅಷ್ಟೇ '' ಮುಂತಾದ ಮಾತುಗಳಲ್ಲಿ ಸ್ತ್ರೀ ಭಾವವನ್ನೂ, ಅವಳ ತತ್ತ್ವಜ್ಞಾನವನ್ನೂ ಚೆನ್ನಾಗಿ ಎತ್ತಿತೋರಿದ್ದಾರೆ. '' ನಮಸ್ಕಾರ ಮಾಡಲು ಹೋದಾಗ ಕಣ್ಣಲ್ಲಿ ನೀರು ಂದಳು, '' '' ಈ ಮಾತಿಗೆ ಎಷ್ಟು ಬೇಗ ಅಕೆ ಕರಗಿ ಹೋದಳು '' ಂದು ಹೇಳುವಲ್ಲಿ ತಾಯ್ತನವನ್ನು ತುಂಬಾ ಅಂದವಾಗಿ ಕಾಣಿಸಿದ್ದಾರೆ. '' ಈಗ ನನ್ನ ಹಡೆಯೋಣದರಿಂದ....ಮಾಡಿಸಿಕೊಳ್ಳಕಾಯ್ತು '' ಎಂಬ ಮಾತಿನಲ್ಲಿ ಕಾಣುವ ತಾಯಿಯ ಹಂಬಲೂರಗುಗಳನ್ನು ನಾವು ಯಾವ ತಾಯಲ್ಲೂ ಕಾಣುತ್ತೇವೆ. "ಬೆಳೆದ ಮಕ್ಕಳ ಎದುರಿಗೆ ನಗ್ಗೇಡು ಮಾಡಲಿಕ್ಕಿಲ್ಲ"ಎಂಬ ತಾಯಿಯ ಮಾತಿನಲ್ಲಿ ಅದೆಷ್ಟು ಸಮರ್ಪಕವಾಗಿ ಸುಂದರವಾಗಿ ತಾಯಿ ಹೃದಯದಲ್ಲಾದ ಕಳವಳ ಉದ್ವೇಗಗಳನ್ನು ಚಿತ್ರಿಸಿರುವರೆಂಬುದನ್ನು ಕಾಣಬಹುದು.

" ಇದು ನಿನ್ನ ಓರಗೆಯದು.....ದೇವತೆಗೆ ಬಲಿಕೊಟ್ಟೆತು " ಎಂದು ಹೇಳುವಲ್ಲಿ ಹಳ್ಳಿಯ ಜೀವನದ ಸತ್ಯಚಿತ್ರವನ್ನು ನಮ್ಮ ಕಣ್ಣೆದುರು ನಿಲ್ಲಿಸುತ್ತಾರೆ. ಸೋದರಮಾವ, ತಂದೆ ಇವರಿಬ್ಬರ ನಡುವಣ ಸಂವಾದವೂ ತುಂಬಾ ಸ್ವಾರಸ್ಯಪೂರ್ಣವೂ, ವಿನೋದಪೂರ್ಣವೂ ಸ್ವಾಭಾವಿಕವೂ ಆಗಿದೆ. ಹೊಸದಾಗಿ ಹೆಂಡತಿ ಬಂದಾಗ, ಗಂಡ-ಹೆಂಡಿರ ನಡುವಿನ ಸಂಭಾಷಣೆ ರೂಪಿಸುವಾಗ, ಕಥೆಯ ಉದ್ದೇಶಕ್ಕೆ ಹಿನ್ನೆಲೆಯಾಗಿ ಮಾರ್ಪಡಿಸಿಕೊಳ್ಳುವಲ್ಲಿ ಕತೆಗಾರರು ತುಂಬಾ ಜಾಣ್ಮೆತೋರಿದ್ದಾರೆ. ಕೆಲವು ಸಲ ಕಥೆಯನ್ನು ಸಾಗಿಸಿಕೊಂಡು ಹೋಗುವಾಗ, ಕೆಲ ಮಾತುಗಳಲ್ಲಿಯೇ ಬೇಗ ಬೇಗ ಸಾಗಿಸಿಕೊಂಡೊಯ್ಯುವ ರೀತಿಯೂ ಒಳ್ಳೆಯದಿದೆ.

ಒಟ್ಟಿನಲ್ಲಿ 'ತಾಯ್ತನ' ದಲ್ಲಿ ಗುಣ-ದೋಷಗಳಿರಡೂ ಇವೆ. ಆದರೂ ಐರಣಿ ಶ್ರೀನಿವಾಸರಿಂದ ಉತ್ತಮ ಕಥೆಗಳನ್ನು ಪಡೆಯಬಹುದೆಂಬದಾಶೆಗೆ ಇಲ್ಲಿ ತುಂಬಾ ಎಡೆಯಿದೆ. ಅವರಿಂದ ಇನ್ನೂ ಉತ್ತಮ ಕಥೆಗಳು ಹೊರಬರಲಿ.

ಸಾದರ ಸ್ವೀಕಾರ

೯೯. **ಗಾಂಧೀಜಿಯವರ ದಕ್ಷಿಣಯಾತ್ರೆ** (ಪರಿಚಯಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಗೋರೂರು ರಾಮಸ್ವಾಮಯ್ಯಂಗಾರು. ಧಾರವಾಡದ 'ಮಿಂಚಿನಬಳ್ಳಿ'ಯ ೧೨ನೆಯ ವರ್ಷದ ಮೊದಲನೆಯ ಕುಡಿ. ಕ್ರೌ. ಅ. ೧೮೨ ಪುಟಗಳು. ಬೆಲೆ ೨-೪-೦.

೧೦೦. **ಕಲಾ** (ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಕೆ. ಪ್ರಭಾಕರ, 'ಕಲಾ' ಕಾರ್ಯಾಲಯ ಉಡುಪಿ (ದ. ಕ.). ಡೆ. ಅ. ೪೪ ಪುಟಗಳು. ವಾ. ಚಂ. ೩-೦-೦. ಬಿಡಿಸಂಚಿ. ಕೆಗೆ ೦-೪-೦.

೧೦೧. **ಗ್ರೀಕ್ ನಾಟಕ ಕಥೆಗಳು** (ಸಂಕಲನ). ಲೇಖಕರು ಶ್ರೀಮಾನ್ ಡಿ. ವಿ. ಶೇಷಗಿರಿರಾವ್, ಫರ್ಸ್ಟ್‌ಗ್ರೇಡ್ ಕಾಲೇಜ್, ತುಮಕೂರು. ಕ್ರೌ. ಅ. ೧೬೪ ಪುಟಗಳು. ಬೆಲೆ ೨-೦-೦.

೧೦೨. **ನಿಷ್ಕಾಮಯೋಗಿ** (ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ಎಸ್. ಬಿ. ವಸಂತರಾಜ, 'ಶಾಂತಿಮಂದಿರ' ಸಾಲಿಗ್ರಾಮ, ಮೈಸೂರು ಜಿಲ್ಲೆ. ಕ್ರೌ. ಅ. ೭೬ ಪುಟಗಳು. ಬೆಲೆ ೦-೧೨-೦.

೧೦೩. **ವಾಕ್ಚಿತ್ರ** (ದೀಪಾವಳಿ ವಿಶೇಷ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಮಾ. ನಾ. ಚೌಡಪ್ಪ ೧೨೧ ಸುಲ್ತಾನಪೇಟೆ, ಬೆಂಗಳೂರು ೨. ಕ್ರೌ. ೪೮ ಪುಟಗಳು. ಬೆಲೆ ?

ಚಲನಚಿತ್ರ ವಿಷಯಕವಾದ ಉಪಯುಕ್ತ ಲೇಖನಗಳಲ್ಲದೆ, ಕಥೆ-ವಿಕಾಂಕಗಳೂ ಬಂದಿವೆ. ಇದರಲ್ಲಿ ಪ್ರಕಟವಾದ ಹಿಂದೂ ಚಲಚ್ಚಿತ್ರ ವ್ಯವಸಾಯಿಗಳು ಪಾರಿಸ್ತಾನದಲ್ಲಿ ಕಳೆದುಕೊಂಡಿರುವ ಅಗಣಿತ ಆಸ್ತಿಯ ಕತೆಯನ್ನು ಕೇಳಿದರೆ, ಯಾವ ಭಾರತೀಯನ ಕರುಳೂ ಕುದಿಯುವಂತಿದೆ. ಆಕರ್ಷಕವಾದ ಬಣ್ಣದ ಚಿತ್ರದ ಮುಖಪತ್ರ. ಎಲ್ಲರ ಸಂಗ್ರಹದಲ್ಲಿಯೂ ಇರಬೇಕಾದ ಸಂಚಿಕೆ.

೧೦೪. **ಧನ್ವಂತರಿ** (ವೈದ್ಯಕ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಆದ್ಯ ಅನಂತಾಚಾರ್ಯರು ವಿಜಾಪುರ. ಡೆ. ಅ. ೩೬ ಪುಟಗಳು. ವಾ. ಚಂ. ೩-೪-೦.

ಪ್ರಕಟವಾಗುವ ವಿಷಯಗಳ ಮಹತ್ವದದೃಷ್ಟಿಯಿಂದ ನೋಡಿದರೆ, ಪತ್ರಿಕೆಯ


ಒಳ್ಳೆಯನ
ಕಾಟ
ಶಾಸ್ತ್ರೀಯ
ಉಪಾಯವೆದಿಂದಲೇ ಪಡಿಯೋದು
ಸೀಟಿಯಲ್ಲಿಯ ಔಷಧದಿಂದಲ್ಲ. ಅವು ಬರೇ ಕ್ಷಣಿಕ ಗುಣಮಾಡುವಂಥವು. ಸ್ವಲ್ಪ ತಡೆದಿಟ್ಟ ದನ್ನು ಹೆಚ್ಚಾಗುತ್ತ ಹೋಗುವುದು. ಆದರೆ ಪುರೋಹಿತ ಶ್ವಾಸಹಾರಿಯು ಅಂಥ ಔಷಧವಲ್ಲ. ಅದು ಜನ್ಮಾಗಾಗಿ ಶಾಸ್ತ್ರೀಯ ಉಪಾಯವೆಂದು ಎಲ್ಲ ಡಾಕ್ಟರರಿಗೂ ಎಷ್ಟೋ ವರ್ಷಗಳಿಂದ ಗೊತ್ತಿದ್ದ ಮಾತು.
ಪುರೋಹಿತ ಶ್ವಾಸಹಾರಿಯು ಮಾತ್ರ ಇಂಥ ಔಷಧವಿದೆ; ಅದನ್ನು ಕೆಗೆದು ಕೊಳ್ಳಲು ಹತ್ತಿದ ಕೂಡಲೇ ಕೆಮ್ಮು ಕಡಿಮೆ ಹೋಗಿ ತೇಕು ಕಡಿಮೆ ಆಗುವುದು. ಪಚನಕ್ರಿಯೆ ಪೆಚ್ಚುವುದು. ಶ್ವಾಸ ಗಟ್ಟಿಮುಟ್ಟಾಗಿ ದನ್ನು ಖಂಡಿತವಾಗಿ ಬಿಟ್ಟು ಹೋಗುವುದು.
೫-೮, ೬ ಮತ್ತು ೧೦ ರೂ. ಪ್ಯಾಕಿಂಗ ದಲ್ಲಿ ಎಲ್ಲ ಕಡೆಗೂ ಸಿಗುವುದು. ರಿಜಿಸ್ಟರ್ ಪಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ. ಇವರಿಂದ ತರಿಸಿಕೊಳ್ಳಬೇಕು.
ಪುರೋಹಿತ

ಕಾಗದ -ಮುದ್ರಣಗಳು ಒಳ್ಳೆಯವುದು ಅತ್ಯವಶ್ಯವೆಂದೆಯೆಂದು ಯಾ ಎನಿಸುವಂತಿದೆ.

೧೦೫. **ಹುಡುಗಾಟ** (ನಗೆಗಳ ಸಂಕಲನ). ಬರೆದವರು 'ಜಿಪ್ರಕಾಶಕರು: ಶಾರದಾ ಪ್ರಕಟನಾಲಯ-ಬಿ. ಆರಕೆಸೇಟೆ, ಬೆಂಗಳೂರು ಕ್ರೌ. ಅ. ೬೬ ಪುಟಗಳು. ಬೆಲೆ ೧-

೧೦೬. **ಇದು ಜೀವನ** (ಕತೆಗಳ ಸಂಕಲನ). ಬರೆದವರು ಎಲ್. ಎಸ್. ಶೇಷಗಿರಿರಾವ್, ಪ್ರಕಾಶಕರು: 'ವಸಂತಮಾಲಿಕೆ' ಪ್ರೇಮಾಮಂಡಲಿ, ನುಂಗಳೂರು. ಅ. ೧೨೦ ಪುಟಗಳು. ಬೆಲೆ ೧-೬-

೧೦೭. **ಮುಗಿಲ ಜೇನು** (ಸಂಕಲನ) ಶ್ರೀ. ಸಿಂಪಿ ಲಿಂಗಣ್ಣ ಅ ಕವಿಗಳು. ಹುಬ್ಬಳ್ಳಿಯ ಕಲ್ಪನಾಗ್ರಾ ಮಾಲೆಯ ೬ನೆಯ ಕುಸುಮ. ಕ್ರೌ. ೧೨೦ ಪುಟಗಳು. ಬೆಲೆ ೧-೬-೦.

೧೦೮. **ಭಾರತ** (ಹೊಸ ಮಾಸಪತ್ರಿಕೆ). ಸಂಪಾದಕರು: ಶ್ರೀಯುತರು ವಾಸುದೇವ ಭಟ್ಟರು ಮತ್ತು ಶ್ರೀ. ಮಂಜುನಾಥ. ಪ್ರಕಾಶಕರು: ಶ್ರೀಯುತ ಮಧುಸೂದನ ಕಿಲ್ಪಾಡಿ, 'ಭಾರತ' ೧೩೦೨ ಜಿ. ಟಿ. ರೋಡು, ಕುದ್ರೋಳಿ ಮಂಗಳೂರು. ಕ್ರೌ. ಅ. ೬೪ ಪುಟಗಳು. ವಾ. ಚಂ. ೪-೦-೦. ಬಿಡಿ ಸಂಚಿಕೆ ೦-೪-೦.

೧೦೯. **ಅಶೋಕ** (ಕೈಬರೆಹ ಮಾಸಪತ್ರಿಕೆಯ ಕೈಲಾಸಂ ವಿಶೇಷಾಂಕ ಸಚಿತ್ರ). ಸಂಪಾದಕರು: ಶ್ರೀಯುತರುಗಳಾದ ಕೆ. ವಿ. ಸುಬ್ಬಣ್ಣ, ಎಂ. ಸುಬ್ಬರಾವ್ ಮತ್ತು ಎಂ.ಎಸ್. ರಾಮಪ್ಪ ಅಶೋಕನಿಲಯ, ಹೆಗ್ಗಾಡು. ಪೂ. ಕ್ರೌ. ೧೨ ಪುಟಗಳು.

ಸಂಪಾದಕರಾಗಿರುವ ಮೂವರು ತರುಣರೂ ಸಾಹಿತ್ಯವನ್ನು ಸ್ತ್ರೀತಿಯಿಂದ ಅಭ್ಯಾಸಿಸುವವರು. ಅವರ ಅಭ್ಯಾಸ ಗುಣ ಈ ವಿಶೇಷ ಸಂಚಿಕೆಯಲ್ಲಿ ಒಡೆದ

ಕಾಣುವಂತಿದೆ. ಸೈಕ್ಲೋಸ್ಟೈಲ್ ಮೇಲೆ ಪ್ರತಿಗಳನ್ನು ತೆಗೆಯುತ್ತಿರುವುದರಿಂದ, ಈ ಸಂಚಿಕೆಗಳು ೨ ಆಣೆ ಬೆಲೆಗೆ ಮಾರಾಟಕ್ಕೂ ಹೊರೆಯುವುವು. ಮಲೆನಾಡಿನ ಒಂದು ಮೂಲೆಯಲ್ಲಿ ಕನ್ನಡತನವನ್ನು ಎಚ್ಚರಿಸುವ ಕೆಲಸ ಕೈಕೊಂಡಿರುವ ಈ ಪ್ರಯೋಕದ ಅಂಕುರ ಬೆಳೆದು ಮರವಾಗಲಿ. ಕನ್ನಡತಾಯ ತೋಟಕ್ಕೊಂದು ಪೋಭೆಯನ್ನು ತಂದುಕೊಡಲಿ.

೧೧೦. **ವಚನಾಂಜಲಿ** (ವಚನ ಸಂಕಲನ). ಬರೆದವರು: ಶ್ರೀಗಿರಿರಾಜ ಮಣಿಖಚಿತ ಕನಕಸೂರ್ಯ ಸಿಂಹಾಸನಾಧೀಶ ಶ್ರೀ. ಜ. ಪ. ಚೆನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳವರು. ಶ್ರೀನಿಡುಮಾಮಿಡಿ, ಶ್ರೀಶೈಲಸಂಸ್ಥಾನ ಗೂಳೂರು. ಪ್ರಕಾಶಕರು ಜ. ನಿ ಪ್ರಬೋಧಪುಸ್ತಕ ಮಾಲೆ, ಬೆಂಗಳೂರು. ಕ್ರಾ. ಆ. ೧೦೦ ಪುಟಗಳು. ಬೆಲೆ ೯-೮-೦.

೧೧೧. **ಕರ್ನಾಟಕದ ಗಡಿಗೆರೆಗಳು** (ಪ್ರದೇಶ ಪರಿಚಯಾತ್ಮಕ ಗ್ರಂಥದ ಪೂರ್ವಾರ್ಧ). ಬರೆದವರು ಶ್ರೀಯುತ 'ಶಿವಸುತ' ಪ್ರಕಾಶಕರು ಶ್ರೀಮಾನ್ ತಲ್ಲೂರ ರಾಯನಗೌಡರು, ಜನತಾಸೇವಕ ಸಮಾಜ, ಬೈಲಹೊಂಗಲ. ಕ್ರಾ ಆ. ೧೪೪ ಪುಟ. ಬೆಲೆ ೨-೦-೦

೧೧೨. **ವಿದ್ಯಾರ್ಥಿನೇಷದಲ್ಲಿ** (ನಾಲ್ಕು ಏಕಾಂಕ ನಾಟಕಗಳು) ಬರೆದವರು ಶ್ರೀ. ದೇಪದಾಸ. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ. ಸಮಾಜ ಪುಸ್ತಕಾಲಯ. ಧಾರವಾಡ. ಕ್ರಾ. ಆ. ೧೦೦ ಪುಟಗಳು. ಬೆಲೆ ೧-೦-೦.

೧೧೩. **ಸೇವಾ** (ಮಾಸಪತ್ರಿಕೆ) ಸಂಪಾದಕರು ಶ್ರೀ. ಮಶಾಲ್ಜಿ ಯವರು ಮತ್ತು ಶ್ರೀ. ಎನ್. ಟಿ. ಶಿರಸಿ. ಸೇವಾ ಕಾರ್ಯಾಲಯ ಶಿರಸಿ. ರೊ ಪ್ಲಿ ದ ೧೨ ಪುಟಗಳು. ವಾ ೪ಂ. ೩ ರೂ. ಬಿಡಿಸಂಚಿಕೆಗೆ ೦-೨-೦.

೧೧೪ **ಜನತೆಯ ಶತ್ರು** (ಭಾಷಾಂತರಿತ ನಾಟಕ) ಮೂಲ ನಾಟಕ, ಅಂತರರಾಷ್ಟ್ರೀಯ ಕೀರ್ತಿಶಾಲಿಗಳಾದ ದಿವಂಗತ ಹೆನ್ರಿಕ್ ಇಬ್ಸೆನ್ ಅವರದು. ಶ್ರೀ. ಎಂ. ಗೋಪಾಲಕೃಷ್ಣ ಅಡಿಗರು ಅನುವಾದಿಸಿದ್ದಾರೆ. ಮೈಸೂರಿನ ನಿಶ್ರಸಾಹಿತ್ಯ ಮಾಲೆಯ ೧೦ನೆಯ ಗ್ರಂಥ. ಕ್ರಾ. ಆ. ೧೬೦ ಪುಟಗಳು. ಬೆಲೆ ಸಾದಾ ೨-೦-೦ ; ಕ್ಯಾಲಿಕೊ ೩-೦-೦

೧೧೫ ಭಕ್ತಿಗೀತಾವಳಿ (ಹಾಡುಗಳ ಸಂಕಲನ). ಬರೆದವರು ಶ್ರೀಮಾನ್ ಎಂ. ಎನ್. ಮೂರ್ತಿ, ಅಧ್ಯಾಪಕ ದಂಡಿನ ಶಿವರ. ಮೈಸೂರು ಸಂಸ್ಥಾನ. ಕ್ರಾ. ಆ. ೧೪ ಪುಟಗಳು. ಬೆಲೆ ೧-೩-೦.

೧೧೬ **ಆದರ್ಶ ವಿದ್ಯಾರ್ಥಿನಿಲಯ** ಧಾರವಾಡ ಈ ಸಂಸ್ಥೆಯ ಎರಡು ವರ್ಷಗಳ ವರದಿ. ನಿಲಯಾಧಿಕಾರಿ ಅರ್ಜಣಗಿ ರಾಮಣ್ಣ. ಕ್ರಾ. ಆ. ೪ ಪುಟಗಳು.

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ನಗರಗಳಿಗೂ ಇಂತಹ ವಿದ್ಯಾರ್ಥಿನಿಲಯಗಳ ಅಗತ್ಯವಿದೆ. ದೇಶದಲ್ಲಿ ಒವಗಿರುವ ಆರ್ಥಿಕ ಅಪತ್ತಿಯ ಮೂಲಕ ಮಧ್ಯಮ ತರಗತಿಯವರೆಂದು ಕರೆಯಿಸಿಕೊಳ್ಳುತ್ತಿದ್ದ ಜನರೆಲ್ಲ ಇಂದು ಬಡವರಿಗಿಂತ ಬಡವರಾಗಿದ್ದಾರೆ. ಆದುದರಿಂದ ಬುದ್ಧಿವಂತರಾದ ಮಕ್ಕಳಿಗೂ ತಕ್ಕ ವಿದ್ಯಾಭ್ಯಾಸವನ್ನು ಮಾಡಿಸಲು ಅಸಮರ್ಥರಾಗಿದ್ದಾರೆ. ಇದು ನಾಡಿನ ಭವಿಷ್ಯದ ದೃಷ್ಟಿಯಿಂದ ತುಂಬ ಹಾನಿಕರವಾಮದು. ನಾಡಿನ ಸುಖಶಾಂತಿಯನ್ನು ಬಯಸುವವರು ಅವಶ್ಯವಾಗಿ ಇದರ ವಿಚಾರ ಮಾಡಬೇಕಾಗಿದೆ. ಸರಕಾರ ನಮ್ಮದೆ ಆದರೂ ಅದು ಮಧ್ಯಮ ವರ್ಗದವರನ್ನು ಕುರಿತು ವಿಚಾರವನ್ನೇ ಮಾಡುತ್ತಿಲ್ಲ. ಆದರಲ್ಲಿಯೂ ಮುಂದುವರಿದ ಜಾತಿಯಲ್ಲಿ ಹುಟ್ಟಿದವರನ್ನು ಕುರಿತಂತೂ ಕಣ್ಣೇ ಮುಚ್ಚಿಕೊಂಡಿರುವುದು. ಇಂತಹ ಸಮಯದಲ್ಲಿ, ಆ ಆ ಜಾತಿಯ ಮುಂದಾಳುಗಳು, ಬಡತನದಿಂದ ಬಳಲುತ್ತಿರುವ ತಮ್ಮ ಜನರನ್ನು ಕುರಿತು ವಿಚಾರ ಮಾಡಲೇಬೇಕಾಗುವುದು. ಈ ಆದರ್ಶ ವಿದ್ಯಾರ್ಥಿನಿಲಯ ಆದೇ ವಿಚಾರದಿಂದ ಹೊಡಟು ಕಾರ್ಯ ಮಾಡುತ್ತಲಿದೆ. ಇದನ್ನು ಪ್ರತ್ಯಕ್ಷ ನೋಡಿದ ಮಾನ್ಯ ದಿವಾಕರರು, ಶ್ರೀ. ದ. ರಾ. ಬೇಂದ್ರೆ, ಶ್ರೀ. ದತ್ತಾತ್ರಯ ಕರಮರಕರ್, ಶ್ರೀ. ಪೆಟಗೇರಿ ಕೃಷ್ಣಶರ್ಮ ಇವರೆಲ್ಲ ನಿಲಯದ ಕಾರ್ಯವನ್ನು ಮನವಾರೆ ಮೆಚ್ಚಿದ್ದಾರೆ. ಮುಂಬಯಿಯ ಸುಪ್ರಸಿದ್ಧ ಕನ್ನಡ ವ್ಯಾಪಾರಿಗಳಾದ ಶ್ಯಾಮರಾವ ಸಾಟೆಲ ಅವರು, ಈ ಸಂಸ್ಥೆಗೆ ಉದಾರ ದಾನ ಮಾಡಿ ಪ್ರೋತ್ಸಾಹಿಸುತ್ತಿದ್ದಾರೆ. ಅನುಕೂಲತೆಯುಳ್ಳ ಎಲ್ಲ ಕನ್ನಡಿಗರೂ ಈ ಸಂಸ್ಥೆಗೆ ಸಹಾಯ ಕೊಟ್ಟು ಈ ಸಂಸ್ಥೆಯ ಬೆಳೆವಣಿಗೆಗೆ ಸಹಕಾರಿಗಳಾಗಬೇಕು. ತಾ. ೨೯-೮-೪೬ರಿಂದ ತಾ. ೩೦-೪-೪೭ರ ವರೆಗಿನ ಅವಧಿಯಲ್ಲಿ, ಈ ಸಂಸ್ಥೆ ಸಾರ್ವಜನಿಕರಿಂದ ಜಮಳಿಸಿ ರೂ. ೯ ಆ. ೯ ಪೈಗಳನ್ನೂ ದೊರೆಕಿಸಿ, ಜಮಂಟ ರೂ. ೨ ಆ. ೬ ಪೈಗಳನ್ನು ವೆಚ್ಚಮಾಡಿದೆ. ಈ ಹಣವು ಅನೇಕ ಬಡ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಯಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

೧೧೭ **ಸ್ವಪ್ನಜೀವಿ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. 'ತ್ರಿವಿಕ್ರಮ'. ಧಾರವಾಡದ ಲಲಿತ ಗ್ರಂಥಮಾಲೆಯ ೫೬ನೆಯ ವರ್ಷದ ೭ನೆಯ ಕುಡಿ. ಕ್ರಾ. ಆ. ೧೧೦ ಪುಟಗಳು. ಬೆಲೆ ೧-೮-೦.



ನಮ್ಮ 'ಪಾನ್ ಮಸಾಲಾ'
ವನ್ನು ಉಪಯೋಗಿಸಿದರೆ ಅದು ಅತ್ಯಂತ ರುಚಿಕರವೂ ಹಿತಕರವೂ ಎನಿಸುತ್ತದೆ.
ಒಮ್ಮೆ ಉಪಯೋಗಿಸಿ ನೋಡಿ.
ನಮ್ಮ ಗದುಗಿನ ಏಜಂಟರು:
ಶ್ರೀನಿವಾಸ ಸ್ಟೋರ್ಸ್, ಗದಗ.



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar– 2134-49